ಪ್ರಥಮ ಕನ್ನಡ ನಾಟಕ - ಶಾಕುಂತಲ

ಚುರಮರಿ ಶೇಷಗಿರಿರಾಯರು

ಮತ್ತು

ನಾಟಕದ ಸಮಗ್ರ ಸಮೀಕ್ಷೆ

ಡಾ. ಭೀಮರಾವ ಚಿಟಗುಪ್ಪಿ



ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಪ್ರಥಮ ಕನ್ನಡ ನಾಟಕ - ಶಾಕುಂತಲ

ಚುರಮರಿ ಶೇಷಗಿರಿರಾವ

ಮತ್ತು

ನಾಟಕದ ಸಮಗ್ರ ಸಮೀಕ್ಷೆ

ಡಾ. ಭೀಮರಾವ ಚಿಟಗುಪ್ಪಿ

ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಭಾಗ್ಯಲಕ್ಷ್ಮೀ ಪ್ರಕಾಶನ
೮೭, ೩ನೇ ಕ್ರಾಸ್, ೪ನೇ ಬ್ಲಾಕ್,
ಬನಶಂಕರಿ ೩ನೇ ಸ್ಟೇಜ್, ೩ನೇ ಫೇಸ್,
ಬೆಂಗಳೂರು - ೫೬೦ ೦೮೫.

ದೂರವಾಣಿ: ೨೬೬೯೫೭೧೫

PRATHAMA KANNADA NATAKA-SHAKUNTHALA by Churamari Sheshagiri Rao and **A CRITICAL STUDY** by Dr. BheemaRao Chitaguppi, edited by Dr. Srinivas Havanur; Published by Bhagyalakshmi Prakashana, 87, 3rd cross, 4th Block, Banashankari 3rd Stage, 3rd Phase, Bangalore-560085. Phone : 26695715 Mobile : 94480 47735

Pages : xxxiv + 318

First Edition : 1869

Second Edition : 1882

Third Edition : 1894

Fourth Edition : 1934

Fifth Edition : 1989

Sixth Edition : 2007

Cover Design : JohnChandran, Mangalore

1/8th Demy
58 GSM White Paper

Price : **Rs. 160/-**

Co-operation : Karnataka Nataka Academy, Bangalore.

D.T.P. by : **PRASADHAN COMPUTERS,** Mangalore.

Printed at : **Sreeranga Printers Pvt. Ltd.,** 517, Samudra Gupta Maurya Road, Bhavani Nagar, Bangalore - 19; Phone : 2242 4757, 25983264

ಎರಡು ಮಾತು

(ಕರ್ನಾಟಕ ನಾಟಕ ಅಕಾಡಮಿಯ ಆವೃತ್ತಿಗೆ ಕೀರ್ತಿನಾಥ ಕುರ್ತಕೋಟಿಯವರು ಬರೆದದ್ದು)

ದಿ|| ಚುರಮರಿ ಶೇಷಗಿರಿರಾಯರ 'ಶಾಕುಂತಲ' ನಾಟಕ ಮೊದಲು 1869ರಲ್ಲಿ ಪ್ರಕಟವಾಗಿತ್ತು. ಮುಂಬಯಿಯ ಒಂದು ಮುದ್ರಣಾಲಯದಲ್ಲಿ ಅಚ್ಚಾಗಿದ್ದ ಈ ನಾಟಕವನ್ನು ಆಗ ರಸಿಕರು ಓದಿ ಮೆಚ್ಚಿರಬೇಕು. ಆನುಷಂಗಿಕವಾಗಿ ಇದು ಕನ್ನಡದ - ಹೊಸಗನ್ನಡದ - ಮೊದಲ ನಾಟಕ. ಸಿಂಗರಾರ್ಯನ 'ಮಿತ್ರವಿಂದಾಗೋವಿಂದ'ವು ನಾಟಕ ರೂಪದಲ್ಲಿ ಬರೆದ ಕಾವ್ಯವಾಗಿದ್ದರೆ ಚುರಮರಿಯವರದು ನಾಟಕ. ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ಅನುವಾದವಾಗಿದ್ದರೂ ಇದು ಕನ್ನಡ ರಂಗಭೂಮಿಗಾಗಿ ಬರೆದ ನಾಟಕವಾಗಿದೆ. ಚುರಮರಿಯವರ 'ಶಾಕುಂತಲ' ನಾಟಕ ಪ್ರಕಟವಾದ ಮೇಲೆ, ಈ ಶತಮಾನದ ಪ್ರಾರಂಭದಲ್ಲಿ ಅನೇಕ ಸಂಸ್ಕೃತ ನಾಟಕಗಳು ಅನುವಾದಗೊಂಡಿದ್ದರೂ ಅವುಗಳಲ್ಲಿ ರಂಗಭೂಮಿಯ ಸಂಭಾವ್ಯತೆಗಳು ಇಲ್ಲವೆಂದರೂ ನಡೆಯುತ್ತದೆ. ಅನುವಾದ ನಾವು ತಿಳಿದುಕೊಂಡಿರುವಷ್ಟು ಸುಲಭವಾದ ಕಲೆಯೇನಲ್ಲ. ಒಂದು ಭಾಷೆಯ ಅರ್ಥವನ್ನು ಇನ್ನೊಂದು ಭಾಷೆಗೆ ಎರಕ ಹೊಯ್ಯುವದು ಮಾತ್ರ ಅನುವಾದವಲ್ಲ. ಅದು ಒಂದು ದೃಷ್ಟಿಯಿಂದ ಸಾಂಸ್ಕೃತಿಕ ಪರಕಾಯ ಪ್ರವೇಶ.

ಆದರೆ ಸಂಸ್ಕೃತ ಮತ್ತು ಕನ್ನಡ ಈ ಎರಡು ಭಾಷೆಗಳ ಹೊಕ್ಕುಬಳಕೆ ನಿರಂತರವಾಗಿ ನಡೆದಿರುವದರಿಂದ ಅನುವಾದ ಕಾರ್ಯ ಇನ್ನಷ್ಟು ಗಡುಚಾಗುತ್ತದೆ. ಕನ್ನಡ ಅನುವಾದದಲ್ಲಿ ಸಂಸ್ಕೃತ ಮೂಲದಿಂದ ಶಬ್ದಗಳನ್ನು ಹಾಗೆಯೇ ಎತ್ತಿ ಇಟ್ಟರೆ ಕನ್ನಡದ ಅರ್ಥವ್ಯಕ್ತಿಗೆ ಬಾಧಕವಾಗುವುದಿಲ್ಲ. ಇದೇ ಒಂದು ಅಡಚಣೆಯಾಗುತ್ತದೆ. ಅನುವಾದವೆಂದರೆ ಇನ್ನೊಂದು ಭಾಷೆಯ ಮೂಲಕವಾಗಿ ಆಗುವ ಅರ್ಥಬೋಧವಲ್ಲ, ಅದು ಇನ್ನೊಂದು ಭಾಷೆಯ ಅವಯವಗಳಲ್ಲಿ ಬೆಳೆದುಬರುವ ಅರ್ಥನಿರ್ಮಾಣವೂ ಹೌದು. ಆದ್ದರಿಂದ ಅನುವಾದ ಕಾರ್ಯದಲ್ಲಿ ತತ್ಸಮವಾದರೂ ಭಿನ್ನವಾದ ಶಬ್ದಗಳ, ಪ್ರತಿಮೆಗಳ, ಅರ್ಥದ ಘಟಕಗಳ ಬಳಕೆ ಅವಶ್ಯವಾಗಿದೆ. ಕಾಳಿದಾಸನ 'ಮೇಘದೂತ' ಕಾವ್ಯವನ್ನು ಕನ್ನಡದಲ್ಲಿ ಅನೇಕ ಕವಿಗಳು ಭಾಷಾಂತರಿಸಿದ್ದಾರೆ. ಬೇಂದ್ರೆಯವರ ಭಾಷಾಂತರ ಅವುಗಳಲ್ಲಿ ಒಂದಾಗಿದೆ. 'ನೀತ್ವಾ ಮಾಸಾನ್ ಕನಕವಲಯಭ್ರಂಶರಿಕ್ತ ಪ್ರಕೋಷ್ಠಃ' ಎಂಬ ಒಂದು ಸಾಲು ಬೇಂದ್ರೆಯವರ ಅನುವಾದದಲ್ಲಿ 'ಕೆಲವೆ ತಿಂಗಳಲಿ ಚಿನ್ನಕಡಗ ಮೊಳಕೈಗೆ ಸರಿದುಬಂತು' ಎಂದು ಆಗಿದೆ. ಮೂಲದಲ್ಲಿ ' ಪ್ರಕೋಷ್ಠ' ಎಂಬ ಶಬ್ದವೊಂದೇ ಕನ್ನಡಕ್ಕೆ ಅಪರಿಚಿತವಾದದ್ದು. ಉಳಿದ ಪದಗಳನ್ನು ಬೇಂದ್ರೆಯವರು ಎತ್ತಿಕೊಂಡಿದ್ದರೆ ಯಾರೂ ಆಕ್ಷೇಪಿಸುತ್ತಿರಲಿಲ್ಲ. ಆದರೆ ಸಂಸ್ಕೃತದಲ್ಲಿಯ ಮುಂಗೈ ಕನ್ನಡದಲ್ಲಿ

ಮೊಳಕೈಯಾಗುವುದು ಮಹತ್ವದ ಬದಲಾವಣೆಯಾಗಿದೆ. ಕಾಳಿದಾಸನ ' ಕನಕವಲಯ' ಭ್ರಷ್ಟವಾಗಿ ಕೆಳಗೆ ಬಿದ್ದರೆ ಬೇಂದ್ರೆಯವರ 'ಚಿನ್ನ ಕಡಗ' ಮೊಳಕೈಗೆ ಸರಿದುಬರುತ್ತದೆ. ಎರಡರ ಕಾವ್ಯೋದ್ದೇಶ ಒಂದೇ. ವಿರಹದಿಂದ ಸೊರಗಿ ಹೋಗಿರುವ ಯಕ್ಷನನ್ನು ಚಿತ್ರಿಸುವದು. ಆದರೆ ಸೊರಗಿರುವ ಸಂಗತಿ ಎರಡು ಭಿನ್ನ ಪರಿಪ್ರೇಕ್ಷ್ಯಗಳಲ್ಲಿ ನಡೆಯುತ್ತದೆ. ಕಾಳಿದಾಸ ಕ್ಷತ್ರಿಯರ ವೈಭವದ ಆಭೂಷಣಗಳನ್ನು ವರ್ಣಿಸುತ್ತಿದ್ದರೆ ಬೇಂದ್ರೆಯವರು ಕನ್ನಡದ ಹಳ್ಳಿಗಾಡಿನ ಒಂದು ಪರಿವೇಷವನ್ನು ಚಿತ್ರಿಸಿದ್ದಾರೆ. ಭಾಷೆ ಬದಲಾದರೆ ಸಾಂಸ್ಕೃತಿಕ ಪರಿವೇಷ ಬದಲಾಗುವುದು ಅನಿವಾರ್ಯ ಎಂಬ ಅರಿವಿನಿಂದ ಹುಟ್ಟಿರುವ ಭಾಷಾಂತರ ಇದಾಗಿದೆ.

ಚುರಮರಿ ಶೇಷಗಿರಿರಾಯರ 'ಶಾಕುಂತಲ' ನಾಟಕದ ಅನುವಾದ ಕೂಡ ಈ ಬಗೆಯದೆಂದು ಅದಕ್ಕೆ ಮಹತ್ವ ತಾನಾಗಿ ಬಂದಿದೆ. ಚುರಮರಿಯವರ ಭಾಷೆಗೆ ಪರಿಷ್ಕಾರ ಕಡಿಮೆಯೆಂಬುದು ಎಂಥವರಿಗೂ ಸ್ಪಷ್ಟವಾಗಿ ಕಾಣುವ ಸತ್ಯವಾಗಿದೆ. ಅನುವಾದ ಯಶಸ್ವಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುವಾಗ ಈ ಪರಿಷ್ಕಾರದ ಅಭಾವ ಒಂದು ದೋಷವೆಂದು ಸ್ಪಷ್ಟವಾಗಿ ಹೇಳಿಬಿಡಬಹುದು. ಆದರೆ ಕಾಳಿದಾಸನ ವೃತ್ತಗಳನ್ನು ವೃತ್ತಗಳಲ್ಲಿಯೇ ಚುರಮರಿಯವರು ಭಾಷಾಂತರಿಸಿದಾಗ ಅವು ಹಾಸ್ಯಾಸ್ಪದವಾಗುತ್ತವೆ. ಉತ್ತರ ಕರ್ನಾಟಕದ ಗದ್ಯ ಇನ್ನೂ ಬೆಳೆಯಬೇಕೆನ್ನುತ್ತಿದ್ದಾಗ ಅವರ ಕೆಲವು ರೀತಿಯ ಗದ್ಯವಾಕ್ಯಗಳು ಕೂಡ ಅಷ್ಟೇ ಹಾಸ್ಯಾಸ್ಪದವಾಗಿವೆ. ಮೂಲ ನಾಟಕದಲ್ಲಿ ಬ್ರಾಹ್ಮಣ ವಿದೂಷಕನಾದ ಮಾಢವ್ಯ ಚುರಮರಿಯವರ ಅನುವಾದದಲ್ಲಿ ಜಾತಿ ಕೆಟ್ಟು ಹನುಮನಾಯಕನಾಗಿದ್ದಾನೆ. ಅವನಾಡುವ ಭಾಷೆ ಪ್ರಾಕೃತಕ್ಕೆ ತತ್ಸಮವಾದ ನಮ್ಮ ಗಡಿನಾಡಿನ ಹಳ್ಳಿಯ ಭಾಷೆ. ಶಕುಂತಲೆ ಪತಿಗೃಹಕ್ಕೆ ಹೋಗುವಾಗ ಕಣ್ವರನ್ನು ಕುರಿತು, 'ಮಲಯತಟದಿಂದ ಕಿತ್ತುತಂದ ಚಂದನಲತೆಯಂತೆ ನಾನು ಗೊತ್ತಿಲ್ಲದ ದೇಶದಲ್ಲಿ ಹೇಗೆ ಬಾಳಲಿ' ಎಂದು ಕೇಳುತ್ತಾಳೆ. ಚುರಮರಿಯವರ ಅನುವಾದದಲ್ಲಿ, ಕಾಳಿದಾಸನ ನಾಟಕದ ಅವಸ್ಥೆ ಕೂಡ ಹೀಗೆಯೇ ಆಗಿದೆಯೆಂದು ಕೆಲವು ವಿಮರ್ಶಕರಿಗೆ ಅನಿಸಿದ್ದರೆ ಆಶ್ಚರ್ಯವೇನಿಲ್ಲ.

ಆದರೆ ಚುರಮರಿಯವರ ಭಾಷಾಂತರ ಯಶಸ್ವಿಯಾದ ಅನುವಾದವಲ್ಲ, ಅದು ಒಂದು ಸೃಜನವ್ಯಾಪಾರ ಎಂದು ತಿಳಿದರೆ ಈ ಅನುವಾದದ ಮಹತ್ವ ಗೊತ್ತಾಗುತ್ತದೆ. ಕಾಳಿದಾಸನ ಸಂಸ್ಕೃತ ನಾಟಕ ಒಂದು ಸುಬದ್ಧವಾದ ಕೃತಿ. ಅದರ ಅದ್ಭುತ ಶಕ್ತಿಗೆ ಕಾರಣ ನಾಟಕಕಾರನ ಸಂಯಮ. ನಾಟಕದ ಮುಖ್ಯ ವಸ್ತು ಎಲ್ಲಿಯೂ ಚದರಿ ಹೋಗದಂತೆ, ಅಡ್ಡದಾರಿ ಹಿಡಿಯದಂತೆ ನಿಯಂತ್ರಿಸುವ ಸಂಯುತವಾದ ಅಭಿವ್ಯಕ್ತಿ ಅದಕ್ಕಿದೆ. ನಾಂದೀ ಪದ್ಯದ ಪ್ರತಿಮೆಗಳಲ್ಲಿ ಬೀಜರೂಪವಾಗಿರುವ ನಾಟಕದ ವಸ್ತು ದುಷ್ಯಂತ ಮತ್ತು ಶಕುಂತಲೆಯರ ಕಥೆಯ ದೈವ ಮತ್ತು ದುರ್ದೈವಗಳಲ್ಲಿ ಬೀಸಾಗಿ, ಆದರೂ ಸಂಯಮದಿಂದ ಬೆಳೆಯುತ್ತ ಕೊನೆಯ ಹಂತದಲ್ಲಿ ನಾಟಕಾರ್ಥದ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಶಾರದ್ವತ - ಶಾರ್ಙ್ಗರವ, ಅನಸೂಯೆ - ಪ್ರಿಯಂವದೆ, ಸೂಚಕ - ಜಾನುಕ, ಸಾನುಮತಿಯ ಇಬ್ಬರು ಸಖಿಯರು - ಹೀಗೆ ಜೋಡಿಪಾತ್ರಗಳಿಂದ ದುಷ್ಯಂತ ಶಕುಂತಲೆಯರ ದೈವದ ವಿಪಾಕ-ದುರ್ವಿಪಾಕಗಳು ಒಂದು

ಅರ್ಥಪೂರ್ಣವಾದ ರೂಪವನ್ನು ಪಡೆಯುತ್ತವೆ. ಆನೆ, ಚಿಗರೆ, ನವಿಲು, ಚಕ್ರವಾಕ, ಭೃಂಗ, ರಾಜಹಂಸ, ಸಿಂಹ ಮೊದಲಾದ ಪಶುಪಕ್ಷಿಗಳ ಪ್ರತಿಮೆಗಳು ಮನುಷ್ಯಜೀವನದ ರಹಸ್ಯಾರ್ಥವನ್ನು ಪ್ರಕಟಗೊಳಿಸುತ್ತವೆ. ಅರಣ್ಯಕ ಮತ್ತು ನಾಗರಿಕ ಸಂಸ್ಕೃತಿಗಳ ನಡುವಿನ ವಿರೋಧ, ನೆಲದ ಬಾಳಿನ ಸುಮ್ಮಾನ ಮತ್ತು ನೋವುಗಳನ್ನು ಪ್ರತಿಫಲಿಸುವ ತೇಜೋಮಂಡಲಗಳಿಂದ ಕೂಡಿದ ಆಕಾರ – ಹೀಗೆ ನಾಟಕದ ಸಾಂಕೇತಿಕತೆ ನಿಬಿಡವಾಗಿ ಕಟ್ಟಿಕೊಳ್ಳುತ್ತದೆ. ನಾಟಕದ ಬರವಣಿಗೆಯಲ್ಲಿ ಒಂದು ಶಬ್ದ ಕೂಡ ಅನವಶ್ಯಕವಾಗಿ ಬಾರದಂಥ ಅಭಿಜಾತತೆ ಈ ನಾಟಕಕ್ಕಿದೆ.

ಚುರಮರಿಯವರ ಭಾಷಾಂತರದಲ್ಲಿ ಈ ಗುಣಗಳು ಕಣ್ಣಿಗೆ ಬೀಳುವುದೇ ಇಲ್ಲ. ಈ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಭಾಷಾಂತರ ಕಾರ್ಯ ಶಿಥಿಲವಾಗಿದೆಯೆಂದೇ ಹೇಳಬೇಕು. ಆದರೆ ಈ ವೈಫಲ್ಯವೇ ಚುರಮರಿಯವರ ಅನುವಾದವನ್ನು ಬೇರೊಂದು ದೃಷ್ಟಿಯಿಂದ ನೋಡಲು ಪ್ರೇರಿಸುತ್ತದೆ. ಕಾಳಿದಾಸನ ನಾಟಕ, ಈ ಮೊದಲು ಸೂಚಿಸಿರುವಂತೆ, ಒಂದು 'ಸುಬದ್ಧ'ವಾದ ಕೃತಿ. ಬಹುಶಃ ಯಾವ ನಾಟಕವೂ ಒಂದು ರೀತಿಯಿಂದ ಬದ್ಧವಾದದ್ದು. ರಂಗಭೂಮಿಯ ದೇಶ ಕಾಲಗಳ ಪರಿಮಿತಿಯಲ್ಲಿ ಅದು ಮೂಡಿಬರಬೇಕಾದದ್ದು ಅನಿವಾರ್ಯವಾಗಿದೆ. ಚುರಮರಿಯವರ ನಾಟಕ ಜಾನಪದ ನಾಟಕದ ಮುಕ್ತತೆಯ ಕಡೆಗೆ ಒಲಿಯುತ್ತದೆ. ಸಂಸ್ಕೃತದಲ್ಲಿಯ ವೃತ್ತಗಳನ್ನು ಚುರಮರಿಯವರು ವೃತ್ತಗಳಲ್ಲಿ ಅನುವಾದಿಸಿದ್ದಾರೆ; ಗೀತಗಳಲ್ಲಿಯೂ ಅನುವಾದಿಸಿದ್ದಾರೆ. ಕನ್ನಡದಲ್ಲಿಯ ವೃತ್ತಗಳು ಅಯಶಸ್ವಿಯಾದ ಅನುವಾದವಾಗಿದ್ದರೆ, ಗೀತಗಳು ಮಾತ್ರ ಅಪೂರ್ವ ಮತ್ತು ಸ್ವತಂತ್ರವಾಗಿವೆ. 'ಮುನಿಗಳ ಮಗಳಲ್ಲ ತಿಳಿಯೋ' 'ಹೇಳಿ ಕಳುಹಿಸಯ್ಯ ತಾತಯ್ಯ ಸುದ್ದಿಯಾ', 'ಪೂಡಲಾರೆ ಬಾಣವ', 'ಇಳಿಯಲಿಲ್ಲವೋ| ರೂಪಾ| ಇಳಿಯಲಿಲ್ಲವೋ' 'ಯಾತಕ್ಕಗಲಿದಿ ಕೈಯಾ' ಇಂಥ ಗೀತಗಳಿಗೆ ಮೂಲವಾಗಿ ವೃತ್ತಗಳಿಲ್ಲ. ಅವುಗಳ ಮೂಲಸೆಲೆಯೆಂದರೆ ನಾಟಕದ ಸನ್ನಿವೇಶಗಳಲ್ಲಿಯ ಭಾವ ಪರಿವೇಷ. ಈ ಗೀತಗಳ ಸ್ವರೂಪ ಹೊಚ್ಚ ಹೊಸದಾಗಿದ್ದು ಅವು ನಾಟಕವನ್ನು ಬೇರೊಂದು ಪರಿಪ್ರೇಕ್ಷ್ಯದಲ್ಲಿ ಕಟ್ಟತೊಡಗುತ್ತವೆ. ಹಿಮಾಲಯದ ತಟದಲ್ಲಿ, ಮಾಲಿನಿಯ ತೀರದಲ್ಲಿಯ ಕಣ್ವಾಶ್ರಮದ ಅಭಿಜಾತ ವಾತಾವರಣ ಮಾಯವಾಗಿ ಕನ್ನಡ ನಾಡಿನ ವಾತಾವರಣ ತಾನೇ ತಾನಾಗುತ್ತದೆ. ಕನ್ನಡದ ಮಣ್ಣು, ನೀರು ಮತ್ತು ಗಾಳಿಗಳಿಂದ ಈ ಗೀತಗಳು ಹುಟ್ಟಿ ಬೆಳೆದುಬಂದಿವೆ.

ಚುರಮರಿಯವರ ಕನ್ನಡ 'ಶಾಕುಂತಲ' ರಂಗಭೂಮಿಗಾಗಿಯೇ ಬರೆದ ನಾಟಕ. ಧಾರವಾಡದ 'ಭರತ ಕಲೋತ್ತೇಜಕ ನಾಟಕ ಮಂಡಳಿ' ಯವರು ಅದನ್ನು ಪ್ರಯೋಗಿಸಿದ್ದರೆಂದು ಶ್ರೀ ಮುದುವಡೇಕರ ಕೃಷ್ಣರಾಯರು ಈ ನಾಟಕದ ಎರಡನೆಯ ಆವೃತ್ತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಆದರೆ ನಂತರ ಮಾತ್ರ ಈ ನಾಟಕದ ಅಸ್ತಿತ್ವ ರಂಗ ಪ್ರಯೋಜಕರಿಗೆ ಮರೆತುಹೋಯಿತು.

ಕನ್ನಡದಲ್ಲಿ ಮತ್ತೆ ಮತ್ತೆ ಪ್ರಯೋಗಗೊಂಡು ನಾಟ್ಯಾಭಿರುಚಿಯನ್ನು ಹುಟ್ಟಿಸಬೇಕಾದ ನಾಟಕಗಳು ಅನೇಕ ಇವೆ. ನಮ್ಮಲ್ಲಿ ಈಗ ರಂಗಕರ್ಮ ಹೊಸ ಉತ್ಸಾಹದಿಂದ ನಡೆಯುತ್ತಿದೆ. ಆದರೆ ನಿರ್ದೇಶಕರು ಹೊಸ ಹೊಸ ನಾಟಕಗಳನ್ನು ಬೇಡುತ್ತಿದ್ದಾರೆಯೇ ಹೊರತು ಹಳೆಯ ನಾಟಕಗಳನ್ನು ಹೊಸದಾಗಿ ಪ್ರಯೋಗಿಸಿ ಪ್ರೇಕ್ಷಕರ ಅಭಿರುಚಿಯನ್ನು ಹೊಸದಾಗಿಸುವುದಿಲ್ಲ. ಪ್ರಯೋಗಕ್ಷಮತೆಯುಳ್ಳ ಯಾವ ನಾಟಕವೂ ಹಳೆಯದಾಗುವದಿಲ್ಲ, ಆಗಬಾರದು. ಚುರಮರಿಯವರ 'ಶಾಕುಂತಲ' ನಾಟಕ ಅಂಥ ಕೃತಿಗಳಲ್ಲೊಂದಾಗಿದೆ. ನಾಟಕ ಪ್ರಯೋಗ ವ್ಯವಸಾಯವೂ ಅಲ್ಲ ಹವ್ಯಾಸವೂ ಅಲ್ಲ. ಅದು ಸಮಾಜದ ಸಾಂಸ್ಕೃತಿಕ ಆವಶ್ಯಕತೆಯನ್ನು ಪೂರೈಸುವ ಒಂದು ಮಹತ್ವದ ಕಲೆ ಎಂಬ ಅರಿವು ನಮ್ಮ ನಿರ್ದೇಶಕರಿಗಿರಬೇಕು, ಪ್ರೇಕ್ಷಕರಿಗೂ ಇರಬೇಕು. ಚುರುಮುರಿಯವರ ನಾಟಕ ಒಂದು ಹಳೆಯ ನೆನಪಾಗಬಾರದು, ಇತಿಹಾಸದ ಒಂದು ದಾಖಲೆಯಾಗಬಾರದು. ಚುರಮರಿಯವರು ಇರುತ್ತಿದ್ದ ಮನೆ ಧಾರವಾಡದ ದೇಸಾಯರ ಓಣಿಯಲ್ಲಿ ಇನ್ನೂ ಇದೆ. ಅವರ ಸಂಬಂಧಿಕರು ಅದೇ ಮನೆಯಲ್ಲಿ ಬದುಕು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಹಳೆಯ ಜೀವನ ಹೊಸದಾಗಿ ಮುಂದುವರಿಯುತ್ತಿದ್ದಂತೆಯೇ ಹೊರತು ಇತಿಹಾಸದ ದಾಖಲೆಯಾಗುವುದಿಲ್ಲ. ಚುರಮರಿಯವರು 'ಸುಂದರಾ' ಎಂಬ ಹೆಸರಿನ ಇನ್ನೊಂದು ಸಾಮಾಜಿಕ ನಾಟಕವನ್ನು ಬರೆದಿದ್ದರಂತೆ. ಅದನ್ನು ಹುಡುಕಿ ಮತ್ತೊಮ್ಮೆ ಅಚ್ಚು ಹಾಕಿಸುವ ಕೆಲಸವಾಗಬೇಕಾಗಿದೆ. ಶ್ರೀ ಮುದವಡೇಕರ ಕೃಷ್ಣರಾಯರು ಚುರಮರಿಯವರ ಬಗ್ಗೆ ತಮಗೆ ಗೊತ್ತಿದ್ದನ್ನೆಲ್ಲ ತಮ್ಮ ಮುನ್ನುಡಿಯಲ್ಲಿ ಬರೆದಿಟ್ಟಿದ್ದಾರೆ. ಆದರೆ ಅದಷ್ಟೇ ಸಾಲದು. 'ಶಾಕುಂತಲ' ನಾಟಕದ ಬಗ್ಗೆ ಇನ್ನೂ ಹೆಚ್ಚಿನ ಅಭ್ಯಾಸವಾಗಬೇಕು.

'ಶಾಕುಂತಲ' ನಾಟಕದ ಪ್ರತಿಗಳು ದೊರೆಯುತ್ತಿದ್ದಿಲ್ಲವೆಂದು ಈ ಎಲ್ಲ ಕೆಲಸ ಹಾಗೆಯೇ ಉಳಿದಿದೆ. ಕರ್ನಾಟಕ ನಾಟಕ ಅಕಾಡೆಮಿಯವರು ಈ ಮಹತ್ವದ ಕೆಲಸಕ್ಕಾಗಿ ಮುಂದೆ ಬಂದಿದ್ದಾರೆ. ಇದಕ್ಕಾಗಿ ನಾಡಿನ ಅಭಿನಂದನೆಗಳು ಅವರಿಗೆ ಸಲ್ಲಬೇಕು. ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ವಿ. ಬಿ. ವೈಕುಂಠರಾಜು ಇಂಥ ದೊಡ್ಡ ಕೆಲಸವನ್ನು ಉದಾರ ಚಿತ್ತದಿಂದ ಮಾಡಿಕೊಟ್ಟದ್ದಕ್ಕೆ ವೈಯಕ್ತಿಕವಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಈ ನಾಟಕ ರಂಗದಲ್ಲಿ ಆಸಕ್ತಿಯಿದ್ದವರಿಗೆಲ್ಲ ಪ್ರಿಯವಾಗುತ್ತದೆಂಬ ಹಾರೈಕೆ ನನ್ನದಾಗಿದೆ.

ಧಾರವಾಡ, ೧೯೮೯ **ಕೀರ್ತಿನಾಥ ಕುರ್ತಕೋಟಿ**

ಮುನ್ನುಡಿ

(೧೯೩೪ ರಲ್ಲಿ ಬರೆದದ್ದು)

- ಮುದವೀಡು ಕೃಷ್ಣರಾಯರು

ಹಿಂದೂಸ್ಥಾನದೊಳಗಿನ ಪ್ರತಿಯೊಂದು ದೇಶಭಾಷೆಯಲ್ಲಿ ಮಾತ್ರವಲ್ಲದೆ ಪಶ್ಚಿಮದ ಯುರೋಪಖಂಡದ ಪ್ರತಿಯೊಂದು ದೇಶದ ಪ್ರತಿಯೊಂದು ಭಾಷೆಯಲ್ಲಿಯೂ ಅನೇಕ ಭಾಷಾಂತರಗಳನ್ನು ಹೊಂದಿ ಪ್ರಸಿದ್ಧವಾದ ಕಾಲಿದಾಸನ ಶಾಕುಂತಲವು ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿಲ್ಲದಿರುವುದು ಹುಟ್ಟುಗನ್ನಡಿಗರಾದ ಚುರಮರೀ ಶೇಷಗಿರಿರಾಯರಿಗೆ ದೊಡ್ಡದೊಂದು ಕುಂದೆನಿಸಿ ತಮ್ಮ ನಾಡನುಡಿಯ ಈ ಕೊರತೆಯನ್ನು ಆದಷ್ಟು ಬೇಗ ದೂರ ಮಾಡಬೇಕೆಂಬ ಬಲವಾದ ಬಯಕೆಯಿಂದ ಅವರು ಇದನ್ನು ಕನ್ನಡಕ್ಕೆ ಪರಿವರ್ತಿಸಿದರು. (ಸೂಚನೆಯ ಪದ್ಯಗಳೊಳಗಿನ ೨ನೆಯದನ್ನು ನೋಡಿರಿ.) ಶಾಲಿವಾಹನ ಶಕೆ ೧೭೯೧ನೇ (ಕ್ರಿ.ಶ. ೧೮೬೯-೭೦) ಶುಕ್ಲ ಸಂವತ್ಸರದ ಪುಷ್ಯ ಬಹುಳ ಚತುರ್ಥಿ ಶುಕ್ರವಾರಕ್ಕೆ "ಈ ಕೃತಿ ಪೂರ್ಣವಾಯ್ತು" ಎಂದು ಪುಸ್ತಕದ ಕೊನೆಯಲ್ಲಿ ಮುದ್ರಿತವಾಗಿರುವ "ನೂರನಾಲ್ಕದರಷ್ಟರಿಂ ಗುಣಿಸು" ಎಂಬ ಶ್ಲೋಕದಲ್ಲಿ ಶೇಷಗಿರಿರಾಯರೇ ಹೇಳಿದ್ದಾರೆ. ಬರೆಯುವುದು ಮುಗಿದ ಒಂದೆರಡು ತಿಂಗಳುಗಳಲ್ಲಿಯೇ ಇದನ್ನು ಮುಂಬಯಿಯ ಎಜ್ಯುಕೇಶನ್ ಸೊಸಾಯಿಟೀ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿಯೂ ಬಿಟ್ಟರು. ಈ ಮೊದಲನೆಯ ಆವೃತ್ತಿಯ ಒಂದು ಪ್ರತಿಯು ಕ್ರಿ.ಶ. ೧೮೮೪ರ ಸುಮಾರಕ್ಕೆ ನಾನು ಕಾರವಾರದ ಹಾಯಸ್ಕೂಲಿನಲ್ಲಿ ಓದುತ್ತಿದ್ದಾಗ್ಗೆ ನನಗೆ ದೊರೆತದ್ದೂ ಆಗಿನ ನನ್ನ ವಯೋಮಾನಕ್ಕನುಸರಿಸಿ ಇದರೊಳಗಿನ ಕೊತವಾಲ ಮೀನುಗಾರರ ಪ್ರವೇಶವನ್ನೇ ನಾನು ತಿರುತಿರುಗಿ ಓದಿದ್ದೂ ಇನ್ನು ನನಗೆ ಪೂರಾ ನೆನಪಿನಲ್ಲಿದೆ. ಧಾರವಾಡ ಟ್ರೇನಿಂಗ್ ಕಾಲೇಜಿನ ಗ್ರಂಥ ಸಂಗ್ರಹದಲ್ಲಿ ಈ ಆವೃತ್ತಿಯದೊಂದು ಪ್ರತಿಯು ಇಂದಿಗೂ ನೋಡಲು ದೊರೆಯುತ್ತಿರುವದು ಕನ್ನಡಿಗರ ಭಾಗ್ಯವೇ ಸರಿ.

ಮೊದಲನೆಯ ಆವೃತ್ತಿಯು ಪ್ರಸಿದ್ಧವಾದ ಹನ್ನೆರಡು ವರ್ಷಗಳ ತರುವಾಯ ಕ್ರಿ.ಶ. ೧೮೮೨ರಲ್ಲಿ ಇದರ ೨ನೆಯ ಆವೃತ್ತಿಯು ಇಲ್ಲಿಯ ಜ್ಞಾನವರ್ಧಕ ಮುದ್ರಾಲಯದಲ್ಲಿ ಮುದ್ರಿತವಾಗಿ ಪ್ರಸಿದ್ಧಿಸಲ್ಪಟ್ಟಿತು. ಈ ಎರಡನೆಯ ಆವೃತ್ತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಇದರ ಮುದ್ರಣ ನಡೆದ ಕಾಲಕ್ಕೇ ಶೇಷಗಿರಿರಾಯರು ಆಕಸ್ಮಿಕವಾಗಿ ಮರಣಹೊಂದಿದ ಮೂಲಕ ಈ ಬದಲಾವಣೆಗಳನ್ನು ಅವರೇ ಮಾಡಿರಬಹುದೆಂದು ಊಹಿಸಲು ಅಡ್ಡಿ ಇಲ್ಲ. ಮುಂದೆ ಮತ್ತೆ ಹನ್ನೆರಡು ವರ್ಷಗಳ ನಂತರ ಅಂದರೆ ೧೮೯೪ರಲ್ಲಿ ಇದರ ಮೂರನೆಯ ಆವೃತ್ತಿಯು ಇಲ್ಲಿಯ ಕರ್ನಾಟಕ ಬುಕ್ಕಡಿಪೋ ಪ್ರೆಸ್ಸಿನ ಯಜಮಾನರಾಗಿದ್ದ ಶ್ರೀ ಅನಾಡ ಚನವೀರಪ್ಪನವರಿಂದ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು. ಇದು ೨ನೆಯ ಆವೃತ್ತಿಯ ಪುನರ್ಮುದ್ರಣವೇ ಆಗಿರುವದೆಂದು ಹೇಳಬಹುದು. ಆ ಬಳಿಕ

ನಾಲ್ವತ್ತು ವರ್ಷಗಳ ಸುದೀರ್ಘ ಕಾಲದ ನಂತರ ಈ ನಾಲ್ಕನೆಯ ಆವೃತ್ತಿಯನ್ನು ಪ್ರಕಟಿಸುವ ಸಾಹಸವನ್ನು ಕೈಕೊಂಡು ಹೊಸಗನ್ನಡನಾಡಿನ ಸರ್ವೋತ್ಕೃಷ್ಟ ಗ್ರಂಥಗಳೊಳಗಿನ ಹಳೆಯದೊಂದು ನಾಮಶೇಷವಾಗದಂತೆ ಅದನ್ನು ಉಳಿಸುವ ಮಹತ್ಕಾರ್ಯಕ್ಕೆ ಉದ್ಯುಕ್ತರಾದ ಬೆಳಗಾವಿಯ ಶ್ರೀ ವಿದ್ಯಾರಣ್ಯ ಗ್ರಂಥಪ್ರಕಾಶನ ಸಮಿತಿಯವರನ್ನು ನಾನು ಅಭಿನಂದಿಸದಿರಲಾರೆನು.

ಈ ಮೊದಲು ಪ್ರಸಿದ್ಧವಾಗಿರುವ ಮೂರೂ ಆವೃತ್ತಿಗಳಿಂದ ಸ್ವ-ಶೇಷಗಿರಿರಾಯರ ಕಾವ್ಯಪ್ರತಿಭೆಯ ಪರಿಚಯವು ಮಾತ್ರ ಇತ್ತಕಡೆಯ ಜನರಿಗೆ ತುಂಬಾ ಆಯಿತೆನ್ನಬಹುದಲ್ಲದೆ ಅವರ ಜೀವನಚರಿತ್ರೆಯ ಪರಿಚಯವು ಎಷ್ಟೂ ಆಗಿರುವುದಿಲ್ಲ. ಅವರೇ ಬರೆದಿರುವ ಸೂಚನೆಯ ಪದ್ಯಗಳೊಳಗಿನ ಕೊನೆಯದರಲ್ಲಿ 'ತುರಮರೀತ್ಯುಪನಾಮಕ ರಾಮಚಂದ್ರಜಂ ಜಡಮತಿ ಕಬ್ಬಿ ಶೇಷಗಿರಿಯಂಬವಂ ಬಡವರ ವಿದ್ಯೆಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ ಪಡುತಿಹ ಧೀರ ಚನ್ನಬಸವೇಶ್ವರ ದಿವ್ಯರ ಪಾದಭೂಷಣಂ ಕಡುಗುರು ಭಕ್ತಿಯಿಂದೀ ಕೃತಿಗೈದು ಮಾಡಿದಂ" ಎಂಬುದನ್ನಿಷ್ಟೇ ಹೇಳಿದ್ದಾರೆ. ತಮ್ಮ ಗುರುಗಳ ನಾಮನಿರ್ದೇಶನ ಪ್ರಸಂಗದಲ್ಲಿ ಅವರು ಉಪಯೋಗಿಸಿದ ವಿಶೇಷಣಗಳನ್ನು ನೋಡಿದರೆ ಇತ್ತ ಕಡೆಯ ಕನ್ನಡ ಜನಾಂಗಕ್ಕೆ ಒಂದು ಕಾಲಕ್ಕೆ ದುರ್ಲಭವಾಗಿದ್ದ ಕನ್ನಡ ವಿದ್ಯಾಧ್ಯಯನದ ಅನುಕೂಲತೆಯನ್ನು ಅತ್ಯಂತ ಸಾಹಸದಿಂದ ಒದಗಿಸುವುದಕ್ಕೆ ಕಾರಣಪುರುಷರಾದವರಲ್ಲಿ ಒಬ್ಬರಾಗಿದ್ದ ಧಾರವಾಡದ ಡೆಪ್ಯೂಟಿ ಚೆನ್ನಬಸಪ್ಪನವರೇ ಇವರ ಗುರುಗಳಾಗಿರಬೇಕೆಂದು ನಿಃಸಂದೇಹವಾಗಿ ಊಹಿಸಬಹುದು. ಶೇಷಗಿರಿರಾಯರು ಈ ಪದ್ಯದಲ್ಲಿ ಹೇಳಿದ ಅತ್ಯಲ್ಪ ಆತ್ಮವೃತ್ತವೂ "ಧೀರ ಚನ್ನಬಸವೇಶ್ವರ ದಿವ್ಯರ ಪಾದಭೂಷಣಂ" ಎಂಬುದಾಗಿ ತಮ್ಮ ಗುರುಗಳ ವಿಷಯವಾಗಿ ವ್ಯಕ್ತಪಡಿಸಿದ ವಿನಮ್ರಭಾವವೂ ಕರ್ನಾಟಕದ ಪ್ರಾಚೀನ ಕವಿಗಳ ಪರಂಪರೆಗೆ ಅನುರೂಪವಾದದ್ದೇ ಇರುವದು. ಆದರೆ ಶೇಷಗಿರಿರಾಯರು ಕೀರ್ತಿಶೇಷರಾದ ನಂತರ ಪ್ರಸಿದ್ಧವಾದ ಎರಡು ಆವೃತ್ತಿಗಳ ಪ್ರಕಾಶಕರು ಅವರ ಜೀವನ ವೃತ್ತಾಂತದ ಪರಿಚಯವನ್ನು ಕನ್ನಡನಾಡಿಗೆ ಮಾಡಿಕೊಡುವ ಪ್ರಯತ್ನ ಮಾಡದಿದ್ದುದು ವಿಷಾದದ ಮಾತೇ ಸರಿ. ಈ ಎರಡೂ ಆವೃತ್ತಿಗಳು ಪ್ರಸಿದ್ಧವಾದ ಕಾಲಕ್ಕೆ ಸ್ವ. ಶೇಷಗಿರಿರಾಯರನ್ನು ತುಂಬಾ ಬಲ್ಲವರೂ ಅವರ ಯೋಗ್ಯತೆಯನ್ನು ಚೆನ್ನಾಗಿ ತಿಳಿದವರೂ ಆದ ಸ್ವ. ವೆಂಕಟ ರಂಗೋಕಟ್ಟಿಯವರೇ ಮೊದಲಾದ ಕನ್ನಡ ಸಾಹಿತ್ಯ ಸೇವಾಧುರೀಣರನೇಕರು ಜೀವಿಸಿದ್ದುದರಿಂದ ಅವರೊಳಗಿನ ಯಾರಿಂದಲಾದರೂ ಶೇಷಗಿರಿರಾಯರ ಹಾಗೂ ಅವರ ಶಾಕುಂತಲದ ಪರಿಚಯವನ್ನು ಮಾಡಿಸಿಕೊಡುವದು ಅತ್ಯಂತ ಶ್ರೇಯಸ್ಕರವಾಗಬಹುದಾಗಿತ್ತು. ಆದರೆ ಕನ್ನಡಿಗರ ದುರ್ದೈವದಿಂದ ಹಾಗೆ ಆಗದೆ ಇದ್ದ ಮೂಲಕ ಶೇಷಗಿರಿರಾಯರ ಸಮಕಾಲೀನರೆಲ್ಲರೂ ದಿವಂಗತರಾದ ನಂತರ ಈಗ ಉಳಿದಿರುವ ಅವರ ಆಪ್ತೇಷ್ಟರಿಂದ ಹಲಕೆಲವು ಸಂಗತಿಗಳನ್ನು ಕೇಳಿ ತಿಳಿದುಕೊಂಡ ಅಲ್ಪಜ್ಞನಾದ ನಾನು ಈ ಕೆಲಸವನ್ನು ಮಾಡಬೇಕಾಗಿದೆ.

ಶೇಷಗಿರಿರಾಯರ ಮೂಲ ಮನೆತನವು ರಾಮದುರ್ಗದ್ದು. ಅಲ್ಲಿ ಈ ಮನೆತನಕ್ಕೆ ಮುದಕವಿಯವರೆಂದು ಕರೆಯುವರು. ಧಾರವಾಡ ಬೆಳಗಾವಿ ಜಿಲ್ಲೆಗಳಲ್ಲಿ ಒಳ್ಳೇ ನಿಸ್ಪೃಹ

ಮಾಮಲೇದಾರರೆಂದು ಪ್ರಸಿದ್ಧರಾಗಿದ್ದ ಸ್ವ. ಮುದಕವೀ ಶೇಷಗಿರಿ ರಾಯರೆಂಬವರು ಇದೇ ಮನೆತನಕ್ಕೆ ಸೇರಿದವರು. ರಾಮದುರ್ಗವನ್ನು ಬಿಟ್ಟು ಧಾರವಾಡಕ್ಕೆ ಈ ಮನೆತನದವರು ಎಂದು ಯಾಕೆ ಬಂದವರೆಂಬುವದು ತಿಳಿಯುವದಿಲ್ಲ. ಧಾರವಾಡಕ್ಕೆ ಬಂದನಂತರ ಚುರಮರಿಯುವರೆಂಬ ದೊಡ್ಡ ಲಿಂಗಾಯತ ವ್ಯಾಪಾರಸ್ಥರಲ್ಲಿ ಇವರ ಮೂಲ ಪುರುಷರು ಗುಮಾಸ್ತರಾಗಿ ನಿಂತು ಬಹುದಿವಸ ಅವರಲ್ಲಿ ಕೆಲಸ ಮಾಡಿದ್ದರಿಂದ ಇವರಿಗೂ ಚುರಮರಿಯವರೆಂದೇ ಅಡ್ಡ ಹೆಸರು ಬಿತ್ತು. ಧಾರವಾಡದ ಪೂರ್ವಕ್ಕೆ ಎರಡು ಹರದಾರಿ ದೂರ ಇರುವ ಗೋವನಕೊಪ್ಪ ಎಂಬ ಹಳ್ಳಿಯ ವತನದಾರ ಗೌಡಕೀ ಹಕ್ಕು ಈ ಮನೆತನಕ್ಕೆ ದೊರೆತಿತ್ತು. (ಹ್ಯಾಗೆಂಬುವುದು ಗೊತ್ತಾಗುವದಿಲ್ಲ.) ಶೇಷಗಿರಿರಾಯರ ತಂದೆಯವರಾದ ರಾಮಚಂದ್ರರಾಯರು ಪೋಲೀಸ ಖಾತೆಯಲ್ಲಿ ಕೆಲಸಕ್ಕೆ ಸೇರಿದ್ದರು. ಸ್ವತಃ ಬಂದು ಗೌಡಕೀ ಮಾಡಬೇಕೆಂದು ವರಿಷ್ಠಾಧಿಕಾರಿಗಳು ಹೇಳಿದ್ದರಿಂದ ಅದಕ್ಕೊಪ್ಪಿಕೊಳ್ಳದೆ ಆ ಹಕ್ಕನ್ನೇ ಬಿಟ್ಟುಕೊಟ್ಟರು. ಆಗಿನ ಕಲಾದಗೀ ಜಿಲ್ಹೆ (ಈಗಿನ ವಿಜಾಪುರ ಜಿಲ್ಹೆ)ಯ ಬಾಗಲಕೋಟೆಯಲ್ಲಿ ಫೌಜದಾರರಾಗಿದ್ದಾಗ ಪೋಲೀಸ ಸುಪರಿಂಟೆಂಡರಿಗೂ ಇವರಿಗೂ ಯಾವದೋ ಸಂದರ್ಭದಲ್ಲಿ ವಾಗ್ವಾದವಾಗಲು ಇವರು ಸುಪರಿಟೆಂಡಂಟರನ್ನು ಹೊಡೆದೇಬಿಟ್ಟರು. ಈ ಬಗ್ಗೆ ಪ್ರಕರಣ ನಡೆದು ರಾಮಚಂದ್ರರಾಯರಿಗೆ ಶಿಕ್ಷೆಯಾಯಿತು. ಆಗಿನ ನಿಯಮಗಳ ಪ್ರಕಾರ ಪ್ರತಿಷ್ಠಿತ ಮನೆತನದವರಾದ ಇವರನ್ನು ಕಲಾದಗಿಯ ಸಿವ್ಹಿಲ್ ಜೇಲಿನಲ್ಲಿಟ್ಟರು. ರಾಮಚಂದ್ರರಾಯರ ಅಣ್ಣಂದಿರಾದ ಕೃಷ್ಣರಾಯರು ಆಗಿನ ಪರಸಗಡ ತಾಲೂಕ ಸವದತ್ತಿಯಲ್ಲಿ ವಕೀಲರಾಗಿದ್ದರು. ಸಿವ್ಹಿಲ್ ಜೇಲಿನಲ್ಲಿದ್ದಾಗ ರಾಮಚಂದ್ರರಾಯರ ವೆಚ್ಚವನ್ನೆಲ್ಲ ಅವರೇ ಸಾಗಿಸುತ್ತಿದ್ದರು. ಸಿವ್ಹಿಲ್ ಜೇಲಿನಲ್ಲಿದ್ದಾಗ ರಾಮಚಂದ್ರರಾಯರು ಜೇಲಿನೊಳಗಿನ ತಮ್ಮ ಸಂಗಡಿಗರೆಲ್ಲ ತಮ್ಮ ವೆಚ್ಚದಿಂದಲೇ ಪ್ರತಿನಿತ್ಯ ಮಿಷ್ಟಾನ್ನ ಭೋಜನ ಮಾಡಿಸಿ ಭಾಗವತ ಪುರಾಣ ಹೇಳುತ್ತಿದ್ದರು. ಕೆಲವು ದಿನಗಳ ತರುವಾಯ ಹಾಯ ಕೋರ್ಟಿನ ಅಪ್ಪಣೆಯ ಮೇರೆಗೆ ಬಿಡುಗಡೆ ಹೊಂದಿ ಬಂದು ರಾಮಚಂದ್ರರಾಯರು ತಮ್ಮ ಅಣ್ಣಂದಿರ ಮನೆಯಲ್ಲಿಯೇ ಸವದತ್ತಿಯಲ್ಲಿ ಇರಹತ್ತಿದರು. ಭಾಗವತಪುರಾಣ ಹೇಳಲು ಸಮರ್ಥರಾದ ಇವರು ಒಳ್ಳೇ ರಸಿಕರೂ ಕವಿಗಳೂ ಆಗಿದ್ದರು. ನವರಾತ್ರಿಯ ಪೂಜಾಸಮಾರಂಭದಲ್ಲಿ ಪ್ರತಿವರ್ಷ ಪ್ರತಿದಿವಸ ಬೇರೆ ಬೇರೆ ಆರತೀ ಪದಗಳನ್ನು ಆಗಿಂದಾಗ ಕಟ್ಟಿ ಹಾಡುತ್ತಿದ್ದರೆಂದು ಹೇಳುತ್ತಾರೆ. ಈ ಪದಗಳಾವುವೂ ಉಪಲಬ್ಧವಿದ್ದಂತೆ ತೋರುವದಿಲ್ಲ. ಆದರೂ ರಾಮಚಂದ್ರರಾಯರು ಸ್ವಾನುಭವದಿಂದ ಮಾಡಿದ ಬೇರೊಂದು ಪದದ ಒಂದೇ ನುಡಿಯು ಗೊತ್ತಾಗಿದೆ. ಅಷ್ಟರಿಂದಲೂ ಇವರ ಕವಿತ್ವ ಸಾಮರ್ಥ್ಯದ ಕಲ್ಪನೆಯು ಬರಬಹುದಾದ ಮೂಲಕ ಅದನ್ನು ಇಲ್ಲಿ ಕೊಟ್ಟಿದೆ.

||ಪದ||

ಗಣಿಕೆಯರ ನೆರೆಮೋಹ ನಿಜವೆಂ |
ದಣಿಸಲಾಗದು ರಸಿಕರಾದವರ್ |
ಹಣವನಿತ್ತರೆ ಹಾಗಿರೆ ರಮಿಪರು ಗುಣವನೀಕ್ಷಿಸೆಂದಿಗಾದರು ||ಪಲ್ಲ||

ಮೊದಲಿಗೋರ್ವನೊಳ್ ರಮಿಸಿ ಕಳುಹಿಸಿ |
ಸದನಕೆ ಮತ್ತೋರ್ವನು ಬರೆ|
ಕದಲಿದಾ ನಿರೆಗಳನು ತಿದ್ದುತ ಸಂದತಿ ಕುಂಕುಮ ಪಣೆಗೆ ರೇಖಿಸಿ
ಹೃದಯದೊಲ್ಲಭ ತಡೆದೆಯಾತಕೊ|
ಮದನ ನಂಬಿಗೆ ತಾಳಲಾರೆನು |
ಮುದದಿ ರತಿಗೂಡೆನುತ ಸೊಪ್ಪಾದಧರ ಬಾಯೊಳಗಿಡುವರ ಟಾ ||೧ ||

ರಾಮಚಂದ್ರರಾಯರ ಮಕ್ಕಳಾದ ಶೇಷಗಿರಿರಾಯರಲ್ಲಿ ಹಿರಿಯರ ನ್ಯಾಯ ನಿಷ್ಠುರನಿಸ್ಪೃಹಸ್ವಭಾವವೂ, ಸಾಹಸ ಪ್ರವೃತ್ತಿಯೂ, ಕವಿತ್ವ ಸ್ಫೂರ್ತಿಯೂ ಆನುವಂಶಿಕವಾಗಿಯೇ ಇಳಿದುಬಂದಿದ್ದವೆಂದು ಹೇಳಬಹುದು. ಚಿಕ್ಕಂದಿನ ವಿದ್ಯಾಭ್ಯಾಸವು ತಕ್ಕಮಟ್ಟಿಗೆ ಆದ ಕೂಡಲೆ ಇವರು ನೆಟ್ಟಗೆ ಪುಣೆಗೆ ಹೋಗಿ ಅಲ್ಲಿಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಣ ಹೊಂದಿ ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನಲ್ಲಿ ಕೆಲಸಕ್ಕೆ ಸೇರಿದರು. ಮುಂಬಯಿಯಲ್ಲಿ ಸಮುದ್ರವನ್ನು ಹುಗಿದು ರೇವು ಕಟ್ಟುವ ಕೆಲಸ ನಡೆದಾಗ್ಗೆ ಇವರು ಅಲ್ಲಿ ಓವ್ಹರಸೀಯರಾಗಿ ಕೆಲಸ ಮಾಡುತ್ತಿದ್ದರು. ಮುಂಬಯಿಯಲ್ಲಿದ್ದಾಗಲೇ ಶಾಕುಂತಲದ ಭಾಷಾಂತರವನ್ನು ಮುಗಿಸಿ ಅದನ್ನು ಅಲ್ಲಿಯೇ ಎಜ್ಯುಕೇಶನ್ ಸೊಸಾಯಿಟೀ ಪ್ರೆಸ್ಸಿನಲ್ಲಿ ಮುದ್ರಿಸಿರಬೇಕೆಂದು ಊಹಿಸಲು ಅಡ್ಡಿಯಿಲ್ಲ.

ಶೇಷಗಿರಿರಾಯರ ಹೆಂಡತಿ ಭೀಮಾಬಾಯಿಯೆಂಬವರು ನರಗುಂದದ ಗಡಾದ ರಂಗಪ್ಪನವರ ಮಗಳು. ಇಬ್ಬರು ಹೆಣ್ಣು ಮಕ್ಕಳನ್ನು ಪಡೆದು ಇವರು ಮುಂಬಯಿಯಲ್ಲಿಯೇ ತೀರಿಕೊಂಡರು. ಮುಂದೆ ಶೇಷಗಿರಿರಾಯರಿಗೆ ಸಿಂಧ ಪ್ರಾಂತಕ್ಕೆ ವರ್ಗವಾದದರಿಂದ ತಮ್ಮ ಹೆಣ್ಣು ಮಕ್ಕಳನ್ನು ಕಕ್ಕಂದಿರಾದ ಕೃಷ್ಣರಾಯರ ಬಳಿಗೆ ಧಾರವಾಡಕ್ಕೆ ಕಳುಹಿಸಿ ತಾವು ಒಬ್ಬರೇ ಸಿಂಧಕ್ಕೆ ಹೋದರು. ಅಲ್ಲಿ ಕೆಲವು ವರ್ಷ ಇದ್ದನಂತರ ಧಾರವಾಡಕ್ಕೆ ವರ್ಗವಾಗಿ ಬಂದರು. ಕೋಡ ತಾಲೂಕಿನ ಮದಗ ಮಾಸೂರಿನ ಕೆರೆಯ ಜೀರ್ಣೋದ್ಧಾರದ ಕೆಲಸ ನಡೆದಾಗ್ಗೆ ಇವರು ಅಲ್ಲಿ ಓವ್ಹರಸೀಯರರಾಗಿ ಹೋದಂತೆ ತಿಳಿಯುತ್ತದೆ.

ಧಾರವಾಡಕ್ಕೆ ಬಂದ ನಂತರ ದೇಸಾಯರೋಣಿಯ ಮನೆಯಲ್ಲಿ ಒಂದು ಸ್ವತಂತ್ರ ಕೋಣೆಯೊಳಗೆ ಅಡಿಗೆಯುವನನ್ನಿಟ್ಟುಕೊಂಡು ಇವರು ಇರುತ್ತಿದ್ದರು. ಮನೆಯೊಳಗೆ ಮಿಕ್ಕವರೊಡನೆ ಕೂಡಿ ಬಳಿಕೆ ಮಾಡುತ್ತಿರಲಿಲ್ಲ. ಸಿಂಧವಲ್ಲಿದ್ದಾಗ್ಗೆ ಯಾವದೋ ಬೇನೆಯಿಂದ ಅಸ್ವಸ್ಥರಾಗಿ ಮಲಗಿರಲು ಅನ್ಯಜಾತಿಯವರು ತಮಗೆ ಅನ್ನ ನೀರು ಹಾಕಿ ಬದುಕಿಸಿದ ಮೂಲಕ ತಾವು ಜಾತಿ ಭ್ರಷ್ಟರಾದೆವೆಂಬ ತಿಳುವಳಿಕೆಯಿಂದ ಅವರು ಈ ಕ್ರಮವನ್ನಿಟ್ಟಿದ್ದರು. ಮದಗದ ಕೆರೆಯ ಕೆಲಸಕ್ಕೆ ಇವರು ಹೋದಾಗ್ಗೆ ಇತ್ತ ಮನೆಯವರು ಒಂದು ಹೆಣ್ಣುನೋಡಿ ಶೇಷಗಿರಿರಾಯರಿಗೆ ಮತ್ತೆ ಲಗ್ನ ಮಾಡುವ ಸಮಾರಂಭವನ್ನು ಹೂಡಿಕೊಂಡು ಕೂತಿದ್ದರು. ಮದಗದಿಂದ ತಿರಿಗಿ ಬಂದ ಇವರು ಮನೆಯ ಮುಂದೆ ಮದುವೆಯ ಹಂದರವನ್ನು ಕಂಡು ಇದೇನೆಂದು ಕೇಳಲು ನಿಮ್ಮದೇ ಮದುವೆ ಗೊತ್ತು ಮಾಡಿಟ್ಟಿದೆ ಎಂದು ಮನೆಯವರು ಹೇಳಿದರು.

ಆಗ ಕುಲಗೆಟ್ಟು ಭ್ರಷ್ಟರಾದ ತಮಗೆ ಮದುವೆಯೇಕೆಂದು ಹೇಳಿದವರೇ ಬಂಡಿಯನ್ನು ತಿರುಗಿಸಿಕೊಂಡು ಊರ ಹೊರಗೆ ಕೋರ್ಟಿನ ಹತ್ತಿರ ಇದ್ದ ಬಂಗ್ಲೆಗಳೊಳಗಿನ ಒಂದನ್ನು ಆಗಿಂದಾಗ ಬಾಡಿಗೆಗೆ ತೆಗೆದುಕೊಂಡು ಅಲ್ಲಿಯೇ ಇದ್ದುಬಿಟ್ಟರು. ಪ್ರಾಯಶ್ಚಿತ್ತ ಕೊಡಿಸಿ ಶುದ್ಧ ಮಾಡಿಸಿ ಮದುವೆ ಮಾಡುವೆವೆಂದು ಮನೆಯ ಹಿರಿಯರಾದವರು ಗತಿಗಾಲಬಟ್ಟು ಹೇಳಿದರೂ ಒಡಂಬಡಲಿಲ್ಲ, ಅಂದಿನಿಂದ ಕೊನೆಯವರೆಗೆ ಅವರು ಪುನಃ ತಮ್ಮ ಮನೆಗೆ ಬರಲೇ ಇಲ್ಲ.

ಶೇಷಗಿರಿರಾಯರ ಇಬ್ಬರೂ ಹೆಣ್ಣು ಮಕ್ಕಳ ಮದುವೆಯನ್ನು ಅವರ ಕಕ್ಕಂದಿರಾದ ಕೃಷ್ಣರಾಯರೇ ಮಾಡಿದರು. ಹಿರಿಯ ಮಗಳ ಮಕ್ಕಳಾದ ಕೊಣ್ಣೂರ ವೆಂಕಟರಾಯರು ಈಗ ಬೆಳಗಾವಿಯಲ್ಲಿ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಆಫ್ ಲ್ಯಾಂಡ ರೆಕಾರ್ಡ್ಸ್ ಆಗಿದ್ದಾರೆ. ಧಾರವಾಡದಲ್ಲಿರುವ ಅವಧಾನೀ ಗುರುರಾಜಾಚಾರ್ಯರು ಎರಡನೆಯ ಮಗಳ ಮಕ್ಕಳು.

ಶೇಷಗಿರಿರಾಯರಿಗೆ ಗಂಡು ಸಂತತಿಯಾಗಲಿಲ್ಲ. ಇಬ್ಬರು ಹೆಣ್ಣು ಮಕ್ಕಳಿದ್ದರೂ ಯಾವುದೋ ಕಾರಣದಿಂದ ಇಬ್ಬರ ವಿಷಯವಾಗಿಯೂ ಉದಾಸೀನಭಾವವುಳ್ಳವರಾಗಿ ಅವರು ತಮ್ಮ ಗಳಿಕೆಯನ್ನೆಲ್ಲ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸಕ್ಕೆ ಹೋಗುವ ಬ್ರಾಹ್ಮಣ ವಿದ್ಯಾರ್ಥಿಗೆ ಸ್ಕಾಲರಶಿಪ್ಪು ಕೊಡುವುದಕ್ಕಾಗಿ ವಿನಿಯೋಗಿಸಬೇಕೆಂದು ಮೃತ್ಯುಪತ್ರ ಮಾಡಿ ಅದನ್ನು ಕಲೆಕ್ಟರರ ವಶಕ್ಕೆ ಕೊಟ್ಟುಬಿಟ್ಟರು. 'ಚುರಮುರೀ ಸ್ಕಾಲರ್‌ಶಿಪ್' ಎಂಬ ಹೆಸರಿನಿಂದ ಇದು ಇನ್ನೂ ನಡೆದಿದೆ.

ಧಾರವಾಡದಲ್ಲಿ ಕೆಲವು ದಿವಸ ಕೆಲಸ ಮಾಡಿದ ನಂತರ ಶೇಷಗಿರಿರಾಯರು ಪೆನಶನ್ ಪಡೆದು ಸರಕಾರೀ ಸೇವೆಯಿಂದ ನಿವೃತ್ತರಾದರು. ಅಲ್ಲಿಂದ ಮುಂದೆ ಕೂಡ ಇವರ ವಾಙ್ಮಯಸೇವಾವ್ಯಾಸಂಗವು ತಕ್ಕಮಟ್ಟಿಗೆ ನಡೆದೇ ಇತ್ತೆಂದು ತೋರುತ್ತದೆ. ಕಾಲಿದಾಸನ ಶಾಕುಂತಲದಂತೆಯೇ ಶೂದ್ರಕನ ಮೃಚ್ಛಕಟಿಕ ನಾಟಕವನ್ನು ಇವರು ಸಂಪೂರ್ಣಗದ್ಯದಲ್ಲಿ ಭಾಷಾಂತರಿಸಿದ್ದಾರೆ. ಬೆಳಗಾವಿಯ ಬೆಳಗಾವ ಸಮಾಚಾರ ಮುದ್ರಣಾಲಯದಲ್ಲಿ ಇದು ಸಂಪೂರ್ಣವಾಗಿ ಮುದ್ರಿತವಾಗಿದೆ. ೧೯೨೯ನೇ ಇಸ್ವಿಯಲ್ಲಿ ಬೆಳಗಾವಿಯಲ್ಲಾದ ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಾಲಕ್ಕಾದ ಕನ್ನಡ ಗ್ರಂಥಗಳ ಪ್ರದರ್ಶನದಲ್ಲಿ ಕೋರೀ ಕಾಗದದ ವೇಷ್ಟನೆಯಿಂದ ಕೂಡಿಸಿ ಹೊಲಿದ ಇದರದೊಂದು ಸಮಗ್ರ ಪ್ರತಿಯು ನೋಡಲಿಕ್ಕೆ ದೊರೆಯಿತು. ಮುಖಪೃಷ್ಠದ ಮುದ್ರಣವಾಗುವ ಮೊದಲೇ ಶೇಷಗಿರಿರಾಯರು ಆಕಸ್ಮಿಕವಾಗಿ ಸ್ವರ್ಗಸ್ಥರಾದ ಮೂಲಕ ಅದು ಅಷ್ಟಕ್ಕೇ ಉಳಿದಿರಬೇಕೆಂದು ತೋರುತ್ತದೆ. ಇವರು ಬರೆದ ಇನ್ನೊಂದು ಚಿಕ್ಕ ಪುಸ್ತಕವನ್ನು ನಾನು ಓದಿದ್ದೂ ನನಗೆ ನೆನಪಿನಲ್ಲಿದೆ. ಧಾರವಾಡದ ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಯನ್ನನುಲಕ್ಷಿಸಿ ಬರೆದ 'ಸುಂದರಾ ನಾಟಕ' ವೆಂಬುದೊಂದು ಒಂದೇ 'ಅಂಕಿನ' ನಾಟಕವು ಇವರ ಪರಮ ಮಿತ್ರರಾದ ಸ್ವ. ಕೃಷ್ಣರಾವ ಪೀತಾಂಬರರಾವ ಜೋಶಿಯವರ ಹೆಸರಿನಿಂದ ಮುದ್ರಿತವಾಗಿ ಪ್ರಸಿದ್ಧವಾಗಿತ್ತು. ಈ ನಾಟಕವೂ ಗದ್ಯ ಪದ್ಯಾತ್ಮಕವಾಗಿತ್ತು. ಇದರೊಳಗಿನ ನನಗೆ ನೆನಪಿರುವ ಕೆಲವು ಪದಗಳ ಚುಟುಕೆಗಳನ್ನು ಇಲ್ಲಿ ಕೊಟ್ಟರೆ ಆ ಪುಸ್ತಕ ಸಂಶೋಧನಕ್ಕಾಗಲಿ,

ಪದಗಳ ಸಂಗ್ರಹಕ್ಕಾಗಲಿ ಬಲ್ಲವರು ಪ್ರಯತ್ನ ಮಾಡಲು ಅನುಕೂಲವಾಗುವುದರಿಂದ ಹಾಗೆ ಮಾಡಿದ್ದೇನೆ.

೧. ಇನ್ನೇನು ಗತಿಯೆ ಬಾಲೆ || ಗಾಯನಲೋಲೆ ||ಪಲ್ಲ ||
ಕನ್ನೆಗರತಿಯರು | ಹೊನ್ನು ಬೇಡದಲೆ ಪ್ರ- |
ಸನ್ನರಾಗುತೆ ವಿಟ |ರನ್ನು ಮೋಹಿಸಿದ ಮ್ಯಾಲಿನ್ನೇನು || ಅನುಪಲ್ಲ ||

೨. ಸಖಿ ಬಾಬಾ ಮಾರನ ಕಿರಿಬೆರಳರಗಿಳಿಯೇ ||
ಮದನ ಮನೋಹರಳೆ ||ಪಲ್ಲ||

೩. ಸಾಕಮ್ಮಾ ಶಹರದ ಸೊಗಸು ಶೃಂಗಾರಾ||
ಬೇಕಮ್ಮಾ ನಮಗ ಹಳ್ಳೂರ ವಿಚಾರಾ||

೪. ಮೇಘಾವಳಿಯನ್ನಾಗಸದೊಳು ಕಂ |ಡಾಗೇ ನವಿಲ್
ನಲಿನಲಿದು ಕೂಗುವದು ||

ಈ ಚಟುವಟಿಕೆಗಳಲ್ಲಿಯೂ ಸ್ವ. ಶೇಷಗಿರಿರಾಯರ ಕಾವ್ಯಪ್ರತಿಭೆಯು ಸೂಸಿ ಹರಿಯುತ್ತಿರುವದು ಮರ್ಮಜ್ಞರಾದ ವಾಚಕರಿಗೆ ಹೊಳೆಯದಿರಲಾರದು.

ಕನ್ನಡ ನುಡಿಯಲ್ಲಿ ಹೇಗೆಯೋ ಹಾಗೆಯೇ ಮರಾಠಿಯಲ್ಲಿಯೂ ಶೇಷಗಿರಿರಾಯರು ಪ್ರವೀಣರಾಗಿದ್ದರೆಂದು ಕೀರ್ತಿಯುಂಟು. ಅಂತೇ ತಮ್ಮ ಶಾಕುಂತಲದ ಸೂಚನೆಯ ಪದ್ಯಗಳಲ್ಲಿ 'ಕನ್ನಡ ಕಾಲಿದಾಸ'ನೆಂದು ಯಥಾರ್ಥವಾಗಿ ವರ್ಣಿಸಿದ (೭ನೆಯ ಪದ್ಯವನ್ನು ನೋಡಿರಿ) ಲಕ್ಷ್ಮೀಶ ಕವಿಯು ಜೈಮಿನಿ ಭಾರತದ ಪೀಠಿಕಾ ಸಂಧಿಯನ್ನು ಮರಾಠೀ ಭಾಷೆಯಲ್ಲಿ ಪದ್ಯರೂಪವಾಗಿ ಪರಿವರ್ತಿಸಿದ್ದು ಆಗಿನ ಕಾಲದಿಂದಲೂ ಮರಾಠೀ ಸಾಹಿತ್ಯದ ಶ್ರೇಷ್ಠ ಮಾಸಪತ್ರಿಕೆಯೆಂದು ಹೆಸರಾಗಿರುವ "ವಿವಿಧ ಜ್ಞಾನವಿಸ್ತಾರ" ವೆಂಬ ಮುಂಬಯಿಯ ಮಾಸಪತ್ರದಲ್ಲಿ ಪ್ರಸಿದ್ಧವಾದದ್ದುಂಟು. ಹುಟ್ಟಾ ರಸಿಕರೂ ಮಾರ್ಮಿಕ ವಾಙ್ಮಯ ಪ್ರೇಮಿಗಳೂ ಕಾವ್ಯ ಕಲಾವಿಚಕ್ಷಣರೂ ಆದ ಶೇಷಗಿರಿರಾಯರು ಪುಣೆಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಣ ಹೊಂದುತ್ತಿದ್ದಾಗಲೇ ಮರಾಠೀ ಭಾಷೆಯಲ್ಲಿ ಇಷ್ಟೊಂದು ಪ್ರಾವೀಣ್ಯವನ್ನು ಸಂಪಾದಿಸಿದ್ದರೆಂಬುದು ಆಶ್ಚರ್ಯದ ಮಾತಲ್ಲ. ಹುಟ್ಟುಗನ್ನಡಿಗರಾಗಿದ್ದ ಸ್ವ. ವೆಂಕಟರಂಗೋ ಕಟ್ಟಿಯವರು ಮೊದಲು ಪುಣೆಯ ಮರಾಠೀ ಟ್ರೈನಿಂಗ್ ಕಾಲೇಜಿನಲ್ಲಿಯೇ ಶಿಕ್ಷಕರಾಗಿದ್ದರು. ಬೆಳಗಾವಿಯಲ್ಲಿ ಕನ್ನಡ ನಾರ್ಮಲ್ ಸ್ಕೂಲು ಸ್ಥಾಪಿತವಾದೊಡನೆಯೇ ಅಲ್ಲಿಗೆ ಅಸಿಸ್ಟಂಟ ಮಾಸ್ತರರಾಗಿ ಬಂದರು. ಅದೇ ನಾರ್ಮಲ್‌ಸ್ಕೂಲು ಧಾರವಾಡದ ಟ್ರೇನಿಂಗ್ ಕಾಲೇಜ್ ಆಗಲು ಮೊದಲು ಕನ್ನಡ ಟ್ರಾನ್ಸ್‌ಲೇಟರರಾಗಿ, ನಂತರ ವ್ಹಾಯಿಸ ಪ್ರಿನ್ಸಿಪಾಲರಾಗಿ, ಕೊನೆಗೆ ಪ್ರಿನ್ಸಿಪಾಲರೂ ಆಗಿ ನಿವೃತ್ತರಾದರು. ಸ್ವ.ರಾ.ಸಾ. ವೆಂಕಟರಂಗೋ ಕಟ್ಟಿಯವರು ಕನ್ನಡ ಭಾಷಾಕೋವಿದರೂ ಸಾಹಿತ್ಯ ಸೇವಾ ಧುರೀಣರೂ ಇದ್ದಂತೆಯೇ ಮರಾಠೀ ಭಾಷೆಯಲ್ಲಿಯೂ

ಚೆನ್ನಾಗಿಯೇ ಪ್ರಭುತ್ವ ಪಡೆದವರಾಗಿದ್ದರೆಂಬುದು ಅವರ ಅನೇಕ ಕೃತಿಗಳ ಮೇಲಿಂದ ವ್ಯಕ್ತವಾಗುತ್ತದೆ. ಹೀಗೆ ಆಗಿನ ಕಾಲದ ಕನ್ನಡಿಗರು ಮರಾಠಿಯಲ್ಲಿಯೂ ಪ್ರಾವೀಣ್ಯವನ್ನು ಸಂಪಾದಿಸಿದವರಾಗಿರುತ್ತಿದ್ದರೂ ಅವರು ಮರಾಠಿಯ ಮೋಹದಿಂದ ಕನ್ನಡವನ್ನು ಕಾಲುಕಸ ಮಾಡಲಿಲ್ಲ; ಮರಾಠಿಯ ಪಾಂಡಿತ್ಯ ಪ್ರದರ್ಶನಕ್ಕಾಗಿ ಕನ್ನಡವನ್ನು ಮೂಲೆಗೊತ್ತಲಿಲ್ಲ; ಮರಾಠಿಯ ಪ್ರಾಬಲ್ಯವನ್ನು ಬೆಳೆಸಿ ಕನ್ನಡವನ್ನು ಹಿಂದೂಡಲಿಲ್ಲ. ಆದರೆ ಇದಕ್ಕೆ ವಿಪರೀತವಾಗಿ ಕನ್ನಡ ಗ್ರಂಥಗಳ ಸವಿಯನ್ನೂ ಕನ್ನಡಿಗರ ಸ್ವತಂತ್ರ ವಿಚಾರಸ್ಫೂರ್ತಿಯನ್ನೂ ಮರಾಠಿಗರಿಗೆ ಅವರ ಭಾಷೆಯಲ್ಲಿಯೇ ತಿಳಿಸುವ ಉಪಕ್ರಮ ಮಾಡಿ ಕನ್ನಡದ ಹಾಗೂ ಕರ್ನಾಟಕದ ವರ್ಚಸ್ಸವನ್ನೂ ಪ್ರತಿಷ್ಠೆಯನ್ನೂ ಬೆಳೆಸುವುದಕ್ಕೆ ಕಾರಣರಾಗುತ್ತಿದ್ದರೆಂಬುದು ನಿಃಸಂದೇಹವಾಗಿದೆ. ಹೀಗೆ ಕನ್ನಡದ ಉತ್ತಮೋತ್ತಮ ಗ್ರಂಥಗಳು ಮರಾಠಿಗೆ ಪರಿವರ್ತಿತವಾಗುವ ಸುದಿವಸಗಳು ಇನ್ನು ಮುಂದೆ ಎಂದಾದರೂ ಬರಬಹುದೆ?

ಶೇಷಗಿರಿರಾಯರು ಅತ್ಯಂತ ಉದ್ಯೋಗಶೀಲ ಸ್ವಭಾವದವರಾಗಿದ್ದರು. ಸುಮ್ಮನೆ ಕುಳಿತಾಗಲಿ, ಆಟನೋಟದ ವಿನೋದದಲ್ಲಾಗಲಿ, ಅವರು ಕಾಲಹರಣ ಮಾಡಿದ್ದನ್ನು ಯಾರೂ ಕಂಡು ಅರಿಯರು. ಸ್ಕಾಲರ್‌ಶಿಪ್ಪಿಗೆ ವಿನಿಯೋಗಿಸಲ್ಪಟ್ಟ ಅವರ ಆಸ್ತಿಯಲ್ಲಿ ಅವರ ಪುಸ್ತಕ ಭಂಡಾರದ ಅಗ್ಗದ ಬೆಲೆಯೇ ಮೂರು ಸಾವಿರ ರೂಪಾಯಿ ಬಂದಂತೆ ತಿಳಿಯುತ್ತದೆ. ಇದರ ಮೇಲಿಂದ ಅವರ ಗ್ರಂಥಸಂಗ್ರಹವು ಎಷ್ಟು ದೊಡ್ಡದಾಗಿತ್ತೆಂಬುದು ಕಂಡು ಬರುವದು. ವಾಙ್ಮಯ ಪ್ರಪಂಚದಲ್ಲಿ ಮಾತ್ರವಲ್ಲದೆ ಶೇಷಗಿರಿರಾಯರ ಕುಶಾಗ್ರಬುದ್ಧಿಯು ಅನೇಕ ಮುಖವಾಗಿ ಪ್ರವಹಿಸುತ್ತೆಂಬುದಕ್ಕೆ ಆಧಾರಗಳಿವೆ. ಪಬ್ಲಿಕ್‌ವರ್ಕ್ಸ್ ಡಿಪಾರ್ಟಮೆಂಟಿನಂಥ ರುಕ್ಷಖಾತೆಯ ನೀರಸ ಕೆಲಸದಲ್ಲಿ ತೊಡಗಿಕೊಂಡಿದ್ದಾಗ್ಯೂ ಅರ್ವಾಚೀನ ಕನ್ನಡ ವಾಙ್ಮಯದಲ್ಲಿ ಶ್ರೇಷ್ಠತರವಾದ ನಾಟಕವನ್ನು ಬರೆದರು. ತಮ್ಮ ಗ್ರಂಥಸಮಾಪ್ತಿಯ ಮಿತಿಯನ್ನು ಗಣಿತಶಾಸ್ತ್ರದ ಗೂಢವಾದ ಒಗಟು ಮಾಡಿ ಹೇಳಿದ್ದಾರೆ. ಕರ್ನಾಟಕ ಸಂಗೀತ ಶಾಸ್ತ್ರದಲ್ಲಿಯೂ ಕಲೆಯಲ್ಲಿಯೂ ಅವರಿಗಿದ್ದ ನಿಪುಣತೆಯು ಶಾಕುಂತಲದೊಳಗಿನ ಪದಗಳಿಗೆ ಅವರು ಕೊಟ್ಟಿರುವ ಸ್ವರಯೋಜನೆಗಳಿಂದಲೂ ಧಾಟಿಗಳಿಂದಲೂ ಚೆನ್ನಾಗಿ ವ್ಯಕ್ತವಾಗುತ್ತದೆ. ಬಡಿಗತನ ಕಮ್ಮಾರಿಕೆಗಳ ಸೂಕ್ಷ್ಮ ಕೆಲಸಗಳೂ ಅವರ ಕೈಯಿಂದ ಆದದ್ದನ್ನು ಕಂಡವರು ಒಬ್ಬಿಬ್ಬರು ಇನ್ನೂ ಬದುಕಿದ್ದಾರೆ. ಅರ್ವಾಚೀನ ರಸಾಯನ ಶಾಸ್ತ್ರದಲ್ಲಿಯೂ ಆ ಕಾಲಮಾನಕ್ಕನುಸರಿಸಿ ಒಳ್ಳೇ ನುರಿತವರಾಗಿ ಅನೇಕಾನೇಕ ಪ್ರಯೋಗಗಳನ್ನು ಮಾಡಿ ಎಷ್ಟೋ ಸಂದರ್ಭಗಳಲ್ಲಿ ಶ್ರೇಯಸ್ಸು ಪಡೆದದ್ದೂ ಉಂಟೆಂದು ಹೇಳುತ್ತಾರೆ. ಇದೇ ಮಾದರಿಯ ಪ್ರಯೋಗದಲ್ಲಿ ತೊಡಗಿದಾಗ್ಗೆ ಅಂದರೆ ಕಾಜು ಕರಗಿಸಿ ಮಸಿ ಕುಡಿಕೆಯನ್ನು ಮಾಡುವುದಕ್ಕೆ ಎರಕ ಹೊಯ್ಯುವ ಕೆಲಸ ನಡಿಸಿದಾಗ್ಗೆ ಮಸಿಯೊಳಗಿಂದ ಹೊರಟ ರಾಸಾಯನಿಕ ಹೊಗೆಯು ಹೊಟ್ಟೆಯೊಳಗೆ ಹೊಕ್ಕು ಅಕಸ್ಮಾತ್ತಾಗಿ ಅವರ ದೇಹಾವಸಾನವಾಯಿತು. ೧೮೮೨ರ ಸುಮಾರಕ್ಕೆ ಶೇಷಗಿರಿರಾಯರು ಹೀಗೆ ಅಕಲ್ಪಿತವಾಗಿ ಅಕಾಲದಲ್ಲಿ ಕಾಲನ ಬಾಯಿಗೆ ತುತ್ತಾಗಿ ಬಿದ್ದುದ್ದರಿಂದ ಕನ್ನಡ ನಾಡಿಗಾದ ಅನೇಕ ಬಗೆಯ ಹಾನಿಗಳನ್ನು ಬಣ್ಣಿಸುವುದೇ ಸಾಧ್ಯವಿಲ್ಲ. ಈ ಬಗೆಯ ವಿಧದ ಚಟುವಟಿಕೆಗಳಿಂದ ಆದರ್ಶಪ್ರಾಯವಾಗಿದ್ದ ಶೇಷಗಿರಿರಾಯರ ಚರಿತ್ರೆಯನ್ನು ನಾವು ಕನ್ನಡಿಗರು ಎಂದಾದರೂ ಮರೆಯಬಹುದೇ?

ಹೀಗೆ ಸ್ವ. ಶೇಷಗಿರಿರಾಯರ ವೈಯಕ್ತಿಕ ಪರಿಚಯವನ್ನು ನಾವು ಮಾಡಿಕೊಂಡ ನಂತರ ಅವರ ಆದರ್ಶಕೃತಿಯಾದ ಶಾಕುಂತಲದ ಬಗ್ಗೆ ನಾಲ್ಕು ಮಾತುಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

"ಕಾವ್ಯಸೃಷ್ಟಿಯಲ್ಲಿ ನಾಟಕವು ರಮ್ಯವಾದದ್ದು, ಅದರೊಳಗೆ ಶಾಕುಂತಲವು ಮೇಲು" ಎಂಬ ಉಕ್ತಿಯು ಸುಪ್ರಸಿದ್ಧವಾಗಿದೆ. ರಸಜ್ಞತೆಯಲ್ಲಿ ಪ್ರವೀಣರಾದ ಅನೇಕ ಜನ ಪಾಶ್ಚಿಮಾತ್ಯ ಪಂಡಿತರೂ ಶಾಕುಂತಲವನ್ನೋದಿ ಭಾವನಾಸಮುದ್ರದಲ್ಲಿ ಬೆರೆತು ಕಣ್ಣೀರು ಸುರಿಸಿ ಹುಚ್ಚೆದ್ದು ಕುಣಿಕುಣಿದಾಡಿದ ದೃಷ್ಟಾಂತಗಳೂ ಉಂಟು. ಇಂಥ ಶಾಕುಂತಲದ ಸವಿಯನ್ನು ಕನ್ನಡಿಗರಿಗೆ ಉಣಿಸಬಾರದೆಂಬ ಕುತೂಹಲದಿಂದ ಶೇಷಗಿರಿರಾಯರು ಇದನ್ನು ಕನ್ನಡಕ್ಕೆ ಪರಿವರ್ತಿಸಿದರು. ಕಾಳಿದಾಸನ ಮೂಲಭಾವಗಳನ್ನೆಲ್ಲ ಅಚ್ಚುಕಟ್ಟಾಗಿ ಆರಿಸಿಕೊಂಡು 'ಕವಿತೆಯ ಗಂಡುಮೆಟ್ಟು' ಎಂದು ಕೀರ್ತಿವೆತ್ತ ಕನ್ನಡನಾಡಿನ ಶ್ರೇಯಸ್ಸಿಗೆ ಅನುರೂಪವಾಗುವಂತೆ ಅವುಗಳನ್ನು ತಮ್ಮ 'ಸರಸೋಕ್ತಿ'ಗಳಿಂದ ಸಜ್ಜುಗೊಳಿಸಿ ರಸಿಕರಾದ ಕನ್ನಡಿಗರ ಮುಂದೆ ಮಂಡಿಸಿದರು. ಕಾವ್ಯ ನಾಟಕಗಳ ಜೀವಾಳವಾದ ರಸಭಾವಗಳ ಸವಿಕಟ್ಟಿನಲ್ಲಿ ತಮ್ಮ ಕೃತಿಯು ಶ್ರೇಷ್ಠವಾದದ್ದೆಂಬ ಅಂತಃಸ್ಫೂರ್ತಿಯ ಸಾತ್ವಿಕ ಪ್ರೇರಣೆಯಿಂದ "ಸವಿಯೊಳು ಹಚ್ಚಿ ನೋಡಲೊರೆ ಕನ್ನಡಿನೆನ್ನದು ಪೆಚ್ಚದಿರ್ದೊಡೆ ಕವಿತೆಯ ಗಂಡುಮೆಟ್ಟು, ಕರನಾಟಕ ಬಿಟ್ಟು, ತೆರಳ್ದು ಪೋಗುವೆಂ" ಎಂದು ಒಂದು ಬಗೆಯ ಕಠೋರವಾದ ಪ್ರತಿಜ್ಞೆಯನ್ನೇ ಸಾರಿದರು. ಈ ಅವರ ಆತ್ಮಪ್ರತ್ಯಯೋಕ್ತಿಯಲ್ಲಿ ಅವಿಹಿತವಾದದ್ದಾಗಲಿ ಅತಿಶಯೋಕ್ತಿಯಾಗಲಿ ಎಷ್ಟೂ ಇರುವದಿಲ್ಲವೆಂಬುದನ್ನು ಆ ಕಾಲದ ರಸಿಕವಿದ್ವಾಂಸರು ಓದಿ ಕೇಳಿ ಮನಗಂಡಿದ್ದರು. ಅಂತೇ ಆಗ ಸುಸಂಸ್ಕೃತರ ಮನೆಮನೆಗೂ ಚುರಮರಿಯವರ ಶಾಕುಂತಲದ ಪುಸ್ತಕಗಳು ನೋಡಲಿಕ್ಕೆ ದೊರೆಯುತ್ತಿದ್ದವು. ಗೌರಿಗಂಗೆಗಳ ಆರತಿಯ ಪದಗಳಂತೆ "ಪತಿಯ ಮಂದಿರಕೆ ನೀ ಪೋದವ್ವಾಲಿನಿತು ಪದ್ಧತಿಯಿಂದ ನಡೆಯಬೇಕಮ್ಮ ಕೇಳು" ಎಂಬುದಾಗಿ ಕಣ್ವ ಋಷಿಗಳು ಶಕುಂತಲೆಗೆ ಮಾಡಿದ ಉಪದೇಶದ ಪದ್ಯವು ಪ್ರೌಢ ಗೃಹಿಣಿಯರ ಬಾಯಿಯಿಂದ ಕೇಳಲು ದೊರೆಯುತ್ತಿತ್ತು.. ಸಿರಿವಂತರ ಉಲ್ಹಾಸಕೂಟಗಳಲ್ಲಿ, ಸಂಗೀತ ಸಮಾರಂಭಗಳಲ್ಲಿ ಶಾಕುಂತಲದ ಪದಗಳನ್ನು ಗಾಯಕರಿಂದ ಹೇಳಿಸಿ ಕೇಳಿ ಸಂತೋಷಬಟ್ಟು, ತಲೆದೂಗುವ ತರುಣ ಸವಿಗಾರರ ತಂಡಗಳು ಈ ಭಾಗದಲ್ಲೆಲ್ಲ ಕಡೆಗೆ ಕಣ್ಣಿಗೆ ಬೀಳುತ್ತಿದ್ದವು. ಮುಂಜಿಮದುವೆಗಳ ಮಂಗಲ ಪ್ರಸಂಗದಲ್ಲಾಗಲಿ ವಸಂತೋತ್ಸವದ ಹಂದರಗಳಲ್ಲಾಗಲಿ ನಡೆಯುತ್ತಿದ್ದ ಗಾಯನ ನರ್ತನ ಪ್ರಸಂಗಗಳಲ್ಲಿ "ಬಾ ಬಿಡಿಸೋ ಮೋಹನ್ನ" "ಆಯಾಸವನು ಪಡಬ್ಯಾಡೆ" "ಚುಂಬಿಸಲಿಲ್ಲ ಚೆಲ್ವಸಂಧಿಯೊಳು" ಮೊದಲಾದ ಪದಗಳನ್ನು ಸುಸ್ವರವಾಗಿ ಸಾಭಿನಯವಾಗಿ ಸರಸಾಗಿ "ಹಾಡುವ ಸರಸಿಜಾಕ್ಷಿಯರ"ನ್ನು ನೋಡಿ ರಸಭಾವಗಳನ್ನು ಕುಶಲತೆಯಿಂದ ವಿಶದಪಡಿಸುವ ಅವರ ಹಾಡುಗಾರಿಕೆಯನ್ನು ಕೇಳಿ ಬೆರಗಾಗಿ ಮೈ ಮರೆತು ಕುಳಿತಂಥ ಅನೇಕ ಪ್ರಸಂಗಗಳು ನನ್ನ ಸ್ವಂತ ಅನುಭವಕ್ಕೆ ಬಂದು ಹೋಗಿವೆ. ಜಯದೇವ ಕವಿಯ 'ಗೀತ ಗೋವಿಂದ'ದ ಒಂದೆರಡು ಅಷ್ಟಪದಿಗಳನ್ನೂ ಶಾಕುಂತಲದೊಳಗಿನ ಒಂದೆರಡು ಪದಗಳನ್ನೂ ಗಾಯಕ ಗಾಯಕಿಯರಿಂದ ಹೇಳಿಸಿ ಕೇಳದೆ ಯಾವ ಸಂಗೀತ ಸಮ್ಮೇಳನವೂ

ಬಹುಶಃ ಕೊನೆಗಾಣುತ್ತಿದ್ದಿಲ್ಲ. ಹೀಗೆ ಉತ್ತರ ಕರ್ನಾಟಕದಲ್ಲೆಲ್ಲ ಕಡೆಯಲ್ಲಿಯೂ ಶೇಷಗಿರಿರಾಯರ ಶಾಕುಂತಲದ ಕೀರ್ತಿಸೌರಭವು ಹರಡಿಕೊಂಡಿದ್ದರಿಂದಲೇ ಹುಟ್ಟುಕನ್ನಡಿಗರಾದ ಕೈ.ವಾ. ಅಣ್ಣಾ ಕಿರ್ಲೋಸ್ಕರರಂಥ ರಸಾಭಿಜ್ಞ ಮಧುಕರವು ಇದಕ್ಕೆ ಮನಸೋತು, ಇವರಲ್ಲಿ ಲುಬ್ಧವಾಗಿ, ಇವರೊಳಗಿನ ಮಧುವನ್ನೇ ಅತ್ಯಂತ ಕುಶಲತೆಯಿಂದ ಸಂಗ್ರಹಿಸಿ ಕಟ್ಟಿಟ್ಟ ಹುಟ್ಟಿನೊಳಗಿನ ಜೇನನ್ನು ಮಹಾರಾಷ್ಟ್ರ ಪ್ರಾಂತದ ರಸಿಕರು ಕಳೆದ ೫೦ ವರ್ಷಗಳಿಂದ ಸವಿಯುತ್ತ ಬಂದಿದ್ದರೂ ತೃಪ್ತರಾಗದೆ ಇಂದಿಗೂ ಅದರ ರುಚಿಗೆ ಮರುಳಾಗಿ ಮುಕುರುತ್ತಿದ್ದಾರೆ. ಆದರೆ ನಿರ್ಭಾಗ್ಯರಾದ ನಾವು ಕನ್ನಡಿಗರು ನಮ್ಮೀ ನಂದನವನದೊಳಗಿನ ಮಂದಾರಪಾರಿಜಾತಗಳ ಮಕರಂದಕ್ಕೆ ಮೂಗು ಮುರಿದು, ಮದ್ದುಗಣಿಕೆ ಮರೌಡಲು ಕಣಗಿಲು ತುಂಬಿ ಎಕ್ಕೆ ಲಕ್ಕಿ ಮೊದಲಾದ ನಿರ್ಗಂಧ ಕುಸುಮಗಳಿಗೆ ಮುಗಿಬೀಳುತ್ತಿದ್ದೇವೆ; ಅಥವಾ ಹೆರವರ ಬಾಯ್ದಂಬುಲಕ್ಕೆ ಕೈ ನೀಡಿ ಅದನ್ನೇ ಮಹಾಪ್ರಸಾದವೆಂದು ಮನ್ನಿಸುವ ಹೆಡ್ಡರಂತೆ ಮತಿಮಂದವಾಗಿ ಮಂದಿಯ ಮೂರು ಕಾಸಿನ ಕೃತಿಗಳಿಗೆ ಮರುಳಾಗಿ ಬಾಯಿಬಿಡುತ್ತಿದ್ದೇವೆ. ಇದೇನುಕಾಲಮಹಿಮೆಯೆಂದು ಸುಮ್ಮನೆ ಕೈ ಮುಚ್ಚಿಕೊಂಡು ಕೂಡೋಣವೇ ಅಥವಾ ಸಾತ್ವಿಕಾಭಿಮಾನದ ಸ್ಫೂರ್ತಿಯಿಂದ ಸೊಂಟಕಟ್ಟಿ ಎದ್ದು, ವಿಪರೀತ ಪರಿಸ್ಥಿತಿಯೊಡನೆ ಪೌರುಷದಿಂದ ಹೋರಾಡಿ, ನಮ್ಮ ಹಿರಿಯರು ನಮಗಾಗಿ ಕಾದಿಟ್ಟ ನಿಧಾನವನ್ನು ಪರಿಶೋಧಿಸಿ ತೆಗೆದು ಅದರ ಯೋಗ್ಯ ಉಪಭೋಗಕ್ಕೆ ಬಾಧ್ಯರಾಗುವ ಭಾಗ್ಯವಂತರಾಗೋಣವೆ?

ಕಾಲಿದಾಸನ 'ಶಾಕುಂತಲ'ವೆಂಬ ಕೋಹಿನೂರ ರತ್ನವನ್ನು ಕನ್ನಡದ ಚಿನ್ನದಲ್ಲಿ ಕೆತ್ತಿ ಕೂಡಿಸಿದ ಕೆಲಸದಲ್ಲಿ ಕಂಡುಬರುವ ಶೇಷಗಿರಿರಾಯರ ಕಾರ್ಯಕೌಶಲ್ಯವು ಸರ್ವಸಾಧಾರಣವಾದುದಲ್ಲ. ನೃಪತುಂಗನು ವರ್ಣಿಸಿದಂತೆ ಈ ಕನ್ನಡನಾಡಿನ ಹುಲ್ಲು ಮಾರುವ ಹೆಣ್ಣು ಮಕ್ಕಳಲ್ಲಿ ಕೂಡ ಕಾವ್ಯಗಳಲ್ಲಿಯ ಕವಿಕಲ್ಪನಾಚಮತ್ಕೃತಿಯನ್ನು ಕ್ಷಣಾರ್ಧದಲ್ಲಿ ಕಂಡುಹಿಡಿಯುವ ಪ್ರೌಢಿಮೆಯೂ ಪ್ರಗಲ್ಭತೆಯೂ ಪ್ರಬುದ್ಧತೆಯೂ ಕಾವ್ಯಪಠಣ - ಶ್ರವಣ-ಸಂಸ್ಕಾರಪರಂಪರೆಯಿಂದ ಪ್ರಸಾರಗೊಂಡು ಕನ್ನಡ ಜನಾಂಗದ ಜೀವನವೇ ಕಾವ್ಯಮಯವಾಗಿದ್ದ ಕಾಲದ ಮಾತು ಹಾಗಿರಲಿ. ಸುಮಾರು ಅರ್ಧ ಶತಮಾನದ ಹಿಂದೆ ಅಂದರೆ ನನ್ನ ಜೀವಮಾನದ ೨ನೇ ೩ನೇ ದಶಕಗಳಲ್ಲಿ ಕನ್ನಡ ಸಂಸ್ಕೃತಿಯ ಲವಮಾತ್ರ ಅವಶೇಷವು ನಮ್ಮಿತ್ತ ಕಡೆಯ ಪ್ರದೇಶದಲ್ಲಿ ಉಳಿದ ಕಾಲದಲ್ಲಿಯೂ ಶೇಷಗಿರಿರಾಯರ ಕಲಾಕೌಶಲ್ಯವನ್ನು ನಿರುಕಿಸಿ ಪರಿಕಿಸಿ ಹರುಷಬಡುವ ಪಾತ್ರತೆಯೂ ಪ್ರವೀಣತೆಯೂ ನಮ್ಮ ಜನಾಂಗದಲ್ಲಿದ್ದವು. ಅಂತೇ ಈ ಶಾಕುಂತಲದಂಥ ಕೃತಿಗಳು ಬಹುಜನಾದರಣೀಯವಾಗಿದ್ದವಲ್ಲದೆ ರಸಿಕರಾದ ವಿದ್ವಾಂಸರೂ ಇವುಗಳಿಗೆ ಮೆಚ್ಚಿ, ಹೆಚ್ಚಿನ ಮಮತ್ವದಿಂದ ಇವುಗಳನ್ನು ಎತ್ತಿ ಹಿಡಿದು ಜನರೊಳಗೆ ಇವುಗಳ ಪ್ರಸಾರವಾಗಿ ರಸಾಭಿಜ್ಞತೆಯೂ ಕಲಾಪ್ರೇಮವೂ ಸರ್ವಸಾಮಾನ್ಯವಾಗುವಂತೆ ವಿವಿಧ ಮಾರ್ಗಗಳಿಂದ ಪ್ರಯತ್ನ ಮಾಡುತ್ತಿದ್ದರು. ಅಂತೇ ಆ ಕಾಲಕ್ಕೆ ಶೇಷಗಿರಿರಾಯರ ಈ ಶಾಕುಂತಲವು ಈ ಉತ್ತರ ಕರ್ನಾಟಕದಲ್ಲಂತೂ ಅತ್ಯಂತ ಲೋಕಪ್ರಿಯವಾಗಿತ್ತು. ಈ ಪ್ರದೇಶವು ಕನ್ನಡನಾಡಿನ ಭಾಗವೆಂಬ ಅರಿವು ಕೂಡ ಇಲ್ಲಿಯ ಸಾಮಾನ್ಯ ಜನತೆಯಲ್ಲಿಲ್ಲದಾಗುವಂಥ ಪರಿಸ್ಥಿತಿಯು

ಇತ್ತ ಕಡೆಗೆಲ್ಲ ಹಬ್ಬಿ "ದಕ್ಷಿಣ ಮಹಾರಾಷ್ಟ್ರ" ವೆಂಬ ಅಸಂಬದ್ಧ ಹೆಸರಿನ ಹಣೆಪಟ್ಟಿಯು ಇದರ ಪಾಲಿಗೆ ಬಂದ ಹೀನಾವಸ್ಥೆಯಲ್ಲಿಯೂ ಹನ್ನೆರಡು ವರ್ಷಕ್ಕೊಂದಾವರ್ತಿಯಾದರೂ ಈ ಪುಸ್ತಕದ ಪುನರ್ಮುದ್ರಣಕ್ಕೆ ಅವಕಾಶ ದೊರೆಯುತ್ತ ಬಂದಿತ್ತು. ಆಗಿನ ಕಾಲದ ಕನ್ನಡಿಗರಲ್ಲಿ ಕನ್ನಡತನದ ಜೀವಾಳವು ಕಮರಿದ್ದಿಲ್ಲ. ಪರಭಾಷೆ ಪರಸಂಸ್ಕೃತಿಗಳ ಮೋಹಕ್ಕೆ ಅವರು ಬಲಿಬಿದ್ದು ಪರವಶರಾಗಿದ್ದಿಲ್ಲ. ನಡುವಿನ ಈ ೨೫-೩೦ ವರ್ಷಗಳ ಅಂದರೆ ಸಾಧಾರಣವಾಗಿ ೧೮೮೫ ರಿಂದ ೧೯೧೫ರವರೆಗಿನ ಕಾಲಾವಧಿಯಲ್ಲಿ ಇಲ್ಲಿಯ ಪರಿಸ್ಥಿತಿಯು ಬಹಳವಾಗಿ ಕೆಡುವದಕ್ಕೆ ಅವಕಾಶವುಂಟಾಯಿತು. ಉಗಿಬಂಡಿಯ ಪ್ರವಾಸದ ಅನುಕೂಲತೆಯೊದಗಿದ ಮೂಲಕ ಮುಂಬಯಿ ಇಲಾಖೆಯ ಅಧಿಕಾರದ ಕೇಂದ್ರವಾಗಿದ್ದ ಮಹಾರಾಷ್ಟ್ರದ ಕಡೆಯಿಂದ ಮರಾಠೀ ಭಾಷೆಯ ಅಧಿಕಾರಿಗಳೇ ಹೆಚ್ಚಾಗಿ ಬರಹತ್ತಿದರು. ಶಿಕ್ಷಣ ವಿಭಾಗವಂತೂ ಒಂದು ಬಗೆಯಾಗಿ ಅವರ ಪಾಲಿಗೇ ಗುತ್ತಿಗೆಯಾಗಿ ಹೋಯಿತು. ವಕೀಲಿಯೇ ಮೊದಲಾದ ಹೊಸ ವರ್ಚಸ್ವದ ಧನೋತ್ಪಾದಕ ವ್ಯವಸಾಯಿಗಳಿಗೆ ಇತ್ತ ಕಡೆಯ ಹೊಸ ಪ್ರದೇಶವು ಮರಾಠಿಗರಿಗೆ ತೆರೆದಿಟ್ಟಂತಾಯಿತು. ರೇಲ್ವೆಯ ಹೆಡ್ ಆಫೀಸುಗಳು ಇಲ್ಲಿಯೇ ಸ್ಥಿರಗೊಂಡದ್ದರಿಂದ ಸಾವಿರಾರು ಮರಾಠೀ ಕುಟುಂಬಗಳು ಚರಿತಾರ್ಥಕ್ಕಾಗಿ ಇಲ್ಲಿಗೆ ಬಂದು ಇಲ್ಲಿಯೇ ನೆಲೆಗೊಂಡವು. ವ್ಯಾಪಾರೋದ್ಯೋಗದ ಬೆನ್ನು ಹತ್ತಿದ ಅನೇಕ ಜನ ಮರಾಠರು ಇಲ್ಲಿ ಬಂದು ನೆಲೆಸಿದರು. ಮಹಾರಾಷ್ಟ್ರದಲ್ಲಿ ಒಳ್ಳೇ ಹೆಸರು ಹೊಂದಿದ ನಾಟಕ ಕಂಪನಿಗಳಿಗೆ ಇದೊಂದು ಹೊಸ ಕ್ಷೇತ್ರವೇ ಉಪಲಬ್ಧವಾಗಿ ಅವುಗಳ ಅಭಿಯೋಗಗಳು ತೆರಪಿಲ್ಲದೆ ಆಗಹತ್ತಿದವು. ಮಹಾರಾಷ್ಟ್ರದ ವ್ಯಾಖ್ಯಾನಕಾರರು, ಪುರಾಣಿಕರು, ಕೀರ್ತನಕಾರರು, ಗಾಯಕರು, ನರ್ತಕಿಯರು ಇವರೇ ಮೊದಲಾದ 'ಕಲಾವಂತ'ರು ಇಲ್ಲಿ ಬಂದು ಮುಗಿಬೀಳಹತ್ತಿದರು. ಇಂಥವರಿಗೆಲ್ಲ ಇಲ್ಲಿದ್ದ ಮರಾಠೀ ಅಧಿಕಾರಿಗಳಿಂದಲೂ ಇಲ್ಲಿ ನೆಲೆಗೊಂಡಿದ್ದ ಮರಾಠಿಗರಿಂದಲೂ ಚೆನ್ನಾಗಿ ಆಶ್ರಯ ದೊರೆತು ಮತ್ತೂ ಹೊಸಬರಿಗೆ ಇತ್ತ ಕಡೆಗೆ ದುಡ್ಡು ಗಳಿಸಲು ಬರುವದಕ್ಕೆ ಪ್ರೋತ್ಸಾಹ ದೊರೆಯಹತ್ತಿತು. ಇವೆಲ್ಲ ಕಾರಣಗಳ ಮೂಲಕ ಪಂಪ ರನ್ನ ಕುಮಾರವ್ಯಾಸ ವಾಲ್ಮೀಕಿಗಳ ತಿರುಳ್ಗನ್ನಡನಾಡಾದ ಈ ಸೀಮೆಯಲ್ಲಿ ಕನ್ನಡ ನುಡಿಯು ಹಿಂದೆ ಬಿದ್ದು ಮರಾಠೀ ಭಾಷೆಯು ಬೆಳೆಯಹತ್ತಿತು. ಸ್ವಾಭಿಮಾನದಲ್ಲಿ ಅತ್ಯಂತ ಮುಂದರಿದ ಮರಾಠಿಗರು ಇಲ್ಲಿಗೆ ಬಂದ ಮರಾಠೀ ಅಧಿಕಾರಿಗಳ ವರ್ಚಸ್ವದ ಉಪಯೋಗ ಮಾಡಿಕೊಂಡು ತಮ್ಮ ಮಕ್ಕಳು ಮರಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಮುನಸಿಪಾಲಿಟಿಗಳ ಮುಖಾಂತರ ಮರಾಠೀ ಶಾಲೆಗಳನ್ನು ಸ್ಥಾಪಿಸಿಕೊಂಡರು. ಮೇಲ್ತರಗತಿಯ ಶಿಕ್ಷಣಕ್ಕೆ ಪುಣೆ ಮುಂಬಯಿ ಕಡೆಗೆ ಹೋದಾಗ್ಗೆ ತಮ್ಮ ಮಕ್ಕಳಿಗೆ ಸಾಮಾನ್ಯ ವ್ಯವಹಾರಕ್ಕೆ ಅಡಚಣೆಯಾಗಬಾರದೆಂಬ ವಿಚಾರದಿಂದ, ಅತ್ತ ಕಡೆಯ ಹೆಣ್ಣು ಗಂಡಿನ ಸಂಬಂಧ ಬಂದಾಗ 'ಅರೇ' ಅರಿಯದವರೆಂಬ ಅಪಮಾನಕ್ಕೆ ತಾವು ಗುರಿಯಾಗಬಾರದೆಂಬ ವಿವೇಕಶೂನ್ಯ ಹಂಬಲದಿಂದ ತಮ್ಮ ಮಕ್ಕಳನ್ನು ಎಷ್ಟೋ ಜನ ಸುಸಂಸ್ಕೃತ ಕನ್ನಡಿಗರು ಮರಾಠೀ ಶಾಲೆಗಳಿಗೇ ಕಳಿಸಹತ್ತಿದರು. ಹೀಗೆ ಪುಣೆ ಮುಂಬಯಿ ಕಡೆಗೆ ಹೋಗಿ ಬಂದ 'ಸುಶಿಕ್ಷಿತ' ಕನ್ನಡಿಗರು ತಮ್ಮ ತಾಯಿನುಡಿಯಾದ ಕನ್ನಡವನ್ನೇ ಮರೆತು ಮರಾಠಿಯನ್ನೇ

ಮನೆಯ ಮಾತಾಗಿ ಮಾಡುವ ಮಹತ್ವಾಕಾಂಕ್ಷೆಯನ್ನು ಮುಂದೊಡಹತ್ತಿದರು. ಮೈಸೂರಿನತ್ತ ಕಡೆಯಿಂದ ಮನೆಗೆ ಬಂದ ಅಚ್ಚಗನ್ನಡ ಗೃಹಿಣಿಯರನ್ನು ಒಲುಮೆಯಿಂದ 'ಮರಾಠೀ' ಕಲಿಯಹಚ್ಚಿ ಅವರ ಅಬದ್ಧ ಸುಬದ್ಧ 'ಅರೇ'ದಿಂದಲಾದರೂ ಮನೆತನವನ್ನೇ ಮರಾಠೀಮಯ ಮಾಡುವ ಮೋಹಕ್ಕೊಳಗಾದ ಮಹಾಮಹಿಮರನೇಕರು ಅಹಮಹಮಿಕೆಯಿಂದ ಮುಂದೆ ಬಂದರು. ಹೀಗೆ ಒಂದೆರಡಲ್ಲದ ಅನೇಕ ಬಗೆಯ ಕಾರಣಪರಂಪರೆಗಳಿಂದ ಇತ್ತ ಕಡೆಯ ಕನ್ನಡಿಗರ ಸ್ವಾಭಿಮಾನ ಸ್ವಭಾಷಾಭಿಮಾನವು ಕುಗ್ಗುತ್ತ ನಡೆದು ಕನ್ನಡವು ಮುಗ್ಗರಿಸಿ ಬಿದ್ದು ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿ ಹಬ್ಬಿ ಅದರ ವರ್ಚಸ್ಸವೇ ಬೆಳೆಯಲಾರಂಭಿಸಿತು. 'ಓದಿದರೆ ಮರಾಠೀ ಪುಸ್ತಕಗಳನ್ನೇ ಓದಬೇಕು; ತರಿಸಿದರೆ ಮರಾಠೀ ವರ್ತಮಾನ ಪತ್ರ ಮಾಸಪತ್ರಿಕೆಗಳನ್ನೇ ತರಿಸಬೇಕು; ನೋಡಿದರೆ ಮರಾಠೀ ನಾಟಕಗಳನ್ನೇ ನೋಡಬೇಕು; ಕೇಳಿದರೆ ಮರಾಠೀ ಹಿಂದುಸ್ಥಾನೀ ಸಂಗೀತವನ್ನೇ ಕೇಳಬೇಕು' ಎಂಬ ಸೊಲ್ಲೇ ಎಲ್ಲೆಲ್ಲಿಯೂ ಹರಡಿಕೊಂಡ ವಿಪರೀತ ಪರಿಸ್ಥಿತಿಯಿಂದ ಈ ಕನ್ನಡನಾಡು ಜರ್ಜರಿತವಾಗಿ ಹೋಯಿತು. ಇಂಥ ಅವಸ್ಥೆಯಲ್ಲಿ ಶಾಲೋಪಯೋಗೀ ಪುಸ್ತಕಗಳ ಹೊರತು ಯಾವ ಗ್ರಂಥವಾದರೂ ಪುನರ್ಮುದ್ರಣವನ್ನು ಕಾಣದೇ ಕೊಳೆಯುತ್ತ ಬಿದ್ದಲ್ಲಿ ಯಾರಿಗೂ ಆಶ್ಚರ್ಯವಾಗುವ ಕಾರಣವಿಲ್ಲವಷ್ಟೆ? ಅಂತೇ ಈ ಸೀಮೆಯಲ್ಲಿ ಮುದ್ರಣಕಲೆಯ ಪ್ರವೇಶವಾಗುವ ಮೊದಲೇ ಮುಂಬಯಿಯಂಥ ಪರಪ್ರಾಂತದ ರಾಜಧಾನಿ ಪಟ್ಟಣಗಳಲ್ಲಿ ಮೊದಲನೆಯಾವೃತ್ತಿಯು ಮುದ್ರಿತವಾಗಿ ಮುಂದೆ ೨೫ ವರ್ಷಗಳಲ್ಲಿ ೨ನೇ ೩ನೇ ಆವೃತ್ತಿಗಳನ್ನು ಕಂಡ ಶಾಕುಂತಲವು ನಡುವಿನ ಈ ೪೦ ವರ್ಷ ವರ್ಷಗಳಲ್ಲಿ ಪುನಃ ಮುದ್ರಿತವಾಗದೆ ಮೂಲೆಗುಂಪಾಗಿ ಬೀಳುವ ಪ್ರಸಂಗ ಬಂದದ್ದೇನು ಸೋಜಿಗ ಬಡತಕ್ಕ ಸಂಗತಿಯಾಗಲಾರದು. ಈಗೀಗ ಸುದೈವದಿಂದ ಕನ್ನಡ ಜನಾಂಗವಲ್ಲೆಲ್ಲ ಆತ್ಮೀಯ ಜ್ಞಾನಜ್ಯೋತಿಯು ಬೆಳಗಿ ನವಜೀವನದ ಸಂಚಾರವಾಗುತ್ತ ನಡೆದಿದೆ. ಈ ನವಯುಗದಲ್ಲಿ ನಮ್ಮ ಪ್ರಾಚೀನ ಅರ್ವಾಚೀನ ಕಾವ್ಯಕುಸುಮದ ಮಕರಂದದ ಗುಟ್ಟೆಯನ್ನು ಹಾಕಿ ಕನ್ನಡ ಸಂಸ್ಕೃತಿಯ ಪುನರುದ್ಧಾರಕ್ಕೆ ಅವಶ್ಯಕವಾದ ಚೈತನ್ಯವನ್ನು ಹುಟ್ಟಿಸುವ ಕಾರ್ಯಕ್ಕೆ ಈಗ ಆರಂಭವಾಗಿ ಹೋಗಿದೆ. ಕುಮಾರವ್ಯಾಸನಿಂದಾರಂಭ ಮಾಡಿಕೊಂಡು ಅಂಬಿಕಾತನಯದತ್ತ, ಪುಟ್ಟಪ್ಪ, ಶ್ರೀರಂಗ ಮೊದಲಾದ ಕವಿಗಳ ಕಾವ್ಯಸೃಷ್ಟಿಯ ಪರಿಚಯವನ್ನು ಎಲ್ಲ ಕಡೆಯ ಕನ್ನಡಿಗರು ಯಥಾವತ್ತಾಗಿ ಯಥಾವಕಾಶವಾಗಿ ಹೊಂದುತ್ತ ನಡೆದಿದ್ದಾರೆ. ಅತ್ತ ನಿಜಾಮ ಕರ್ನಾಟದಿಂದ ದಕ್ಷಿಣ ಕನ್ನಡ ಜಿಲ್ಹೆಯ ತುದಿಯವರೆಗೆ ಇತ್ತ ಬೆಳಗಾವಿ ಜಿಲ್ಲೆಯಿಂದ ಅನಂತಪುರ ಸೇಲಂ ಕೋಯಿಮತ್ತೂರು ಜಿಲ್ಹೆಯವರೆಗೆ ವಿವಿಧ ರಾಜಕೀಯ ಆಡಳಿತಗಳಿಗೆ ಒಳಗಾಗಿದ್ದ ಕನ್ನಡಿಗರೆಲ್ಲರೂ ಒಂದೇ ವಿಶಿಷ್ಟ ಸಂಸ್ಕೃತಿಯಿಂದ ಬೆಳೆದುಬಂದವರೆಂಬ ವಿಚಾರವು ಎಲ್ಲೆಡೆಯಲ್ಲಿಯೂ ಬೇರುಬಿಡುತ್ತ ನಡೆದು ಕನ್ನಡ ಕವಿಗಳೆಲ್ಲಿ ಹುಟ್ಟಿದರೂ ತಮ್ಮವರೇ ಎಂಬ ಆತ್ಮೀಯ ಭಾವನೆಯು ಎಲ್ಲರಲ್ಲಿಯೂ ಒಡಮೂಡಹತ್ತಿದೆ. ಇಂಥ ಹದಗಾಲದಲ್ಲಿ ಸ್ವ. ಚುರಮುರೀ ಶೇಷಗಿರಿರಾಯರ ಶಾಕುಂತಲದ ಈ ಹೊಸ ಆವೃತ್ತಿಯು ಕನ್ನಡ ಜನಾಂಗಕ್ಕೆ ಉಪಲಬ್ಧವಾಗುತ್ತಿರುವ ಮೂಲಕ ನನ್ನ ಅಲ್ಪ ಬುದ್ಧಿಗೆ ಹೊಳೆದ ಮಟ್ಟಿಗೆ ಅವರ ಅಲ್ಪ ಪರಿಚಯವನ್ನು ಓದುಗರಿಗೆ ಮಾಡಿಕೊಡುವ

ಮಹತ್ಕಾರ್ಯ ಭಾರವನ್ನು ಹೊರಲು ನಾನು ಒಡಂಬಟ್ಟಿದ್ದೇನೆ.

ಮೊದಲು ಕನ್ನಡದಲ್ಲಿ ನಾಟಕರೂಪವಾಗಿ ಪರಿವರ್ತಿಸಲ್ಪಟ್ಟ ಶಾಕುಂತಲ ನಾಟಕವೆಂದರೆ ಸ್ವ. ಚುರಮುರಿ ಶೇಷಗಿರಿರಾಯರದೇ ಎಂಬುದಕ್ಕೆ ವಾದವೇ ಇಲ್ಲ ತರುವಾಯದಲ್ಲಿ ಹುಟ್ಟಿದ್ದು ಮೈಸೂರಿನ ಆಸ್ಥಾನ ವಿದ್ವಾನ್‌ರಾಗಿದ್ದ ಸ್ವ. ಬಸವಪ್ಪಶಾಸ್ತ್ರಿಗಳದು. ಮೈಸೂರಿನ ಮಹಾರಾಜರಾದ ಗತಿಸಿದ ಶ್ರೀ ಚಾಮರಾಜೇಂದ್ರ ಒಡೆಯರವರ ಪ್ರೇರಣೆಯಿಂದ ಶಾಸ್ತ್ರಿಗಳು ಇದನ್ನು ಬರೆದರೆಂದು ಪ್ರಸಿದ್ಧಿಯುಂಟು. ಶಾಸ್ತ್ರಿಗಳವರಾದರೋ ನಾಟಕದ ಕೊನೆಯಲ್ಲಿ 'ನುತಗುಣಯುತ ಚಾಮಕ್ಷಿತಿಪತಿಸನ್ನಿಧಿಸಚಿವವರ ನೃಸಿಂಹಾರ್ಯೋತ್ಸಾಹಿತ ಬಸವಶಾಸ್ತ್ರಿ ತಾಂ ಸಂಸ್ಕೃತ ಶಾಕುಂತಳಮನಿಂತು ಕನ್ನಡಿಸಿರ್ಪಂ' ಎಂದು ಹೇಳಿದ್ದಾರೆ. ರಾಜಾಶ್ರಯವಾಗಲಿ ರಾಜಪುರುಷಾಶ್ರಯವಾಗಲಿ ಯಾವುದಿದ್ದರೂ ಕೃತಿಯ ಹೆಚ್ಚಳದ ಸಂಬಂಧವಾಗಿ ಇವುಗಳೊಳಗೆ ವ್ಯತ್ಯಾಸವೆಣಿಸುವ ಕಾರಣವಿಲ್ಲ. ಇವರ ಭಾಷಾಂತರವು ಹೊಸಗನ್ನಡ ಗದ್ಯದಿಂದೊಡಗೂಡಿ ಪದ್ಯಗಳಲ್ಲಿ ಶಾಸ್ತ್ರಿಗಳವರ ಅಗಾಧ ಪಾಂಡಿತ್ಯಕ್ಕೆ ಅನುರೂಪವಾಗುವಂತೆ. 'ಪಳಗನ್ನಡ ನುಡಿದಾರಿಯನೊಳಗೊಂಡತಿ ಪಂಡಿತ ಪ್ರಬುದ್ಧ ಪ್ರಿಯ'ವಾಗಿ ಮೂಲದ ಪ್ರತ್ಯಕ್ಷ ಪ್ರತಿಬಿಂಬವೇ ಆಗಿರುವದೆನ್ನಲು ಅಡ್ಡಿ ಇಲ್ಲ. ಸ್ವ. ಬಸಪ್ಪಶಾಸ್ತ್ರಿಗಳು ಶಾಕುಂತಲವನ್ನು ಬರೆದನಂತರ ಸ್ಥಲಕಾಲ ಭೇದದಿಂದ ಇನ್ನೂ ಎರಡು ಮೂರು ಗದ್ಯಪದ್ಯಾತ್ಮಕ ಭಾಷಾಂತರಗಳಾದದ್ದೂ ಉಂಟೆಂದು ತಿಳಿಯುತ್ತದೆ. ಆದರೆ ಇವಾವವೂ ನನಗೆ ನೋಡಲು ದೊರೆತಿಲ್ಲ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರೊಫೆಸರರಾಗಿದ್ದ ಸ್ವ. ಬಿ. ಕೃಷ್ಣಪ್ಪ ಎಂ.ಎ. ಇವರು ಸಂಪೂರ್ಣ ಹೊಸಗನ್ನಡ ಗದ್ಯದಲ್ಲಿ ಶಾಕುಂತಲವನ್ನು ಭಾಷಾಂತರಿಸಿ ಕಾಲಿದಾಸ ಕೃತಿಯ ಯಥಾರ್ಥ ಭಾವವನ್ನು ಕನ್ನಡಿಗರಿಗೆ ಸುಲಭವಾಗಿ ತಿಳಿಸಿಕೊಡುವ ಅನುಗ್ರಹ ಮಾಡಿರುತ್ತಾರೆ. ಸ್ವ. ಬಸವಪ್ಪ ಶಾಸ್ತ್ರಿಗಳ ಹಾಗೂ ಸ್ವ. ಬಿ. ಕೃಷ್ಣಪ್ಪನವರ ಭಾಷಾಂತರಗಳಲ್ಲಿ ಮೂಲವನ್ನು ಪ್ರತಿಕೃತಿಯಲ್ಲಿ ಇದ್ದಕ್ಕಿದ್ದಂತೆಯೇ ಆದರೂ ಸೊಗಸಾಗಿ ಸುಂದರವಾಗಿ ಸುಮನೋಹರವಾಗಿ ಒಡಮೂಡಿಸಿ ಕೊಡಬಲ್ಲ ಛಾಯಾಚಿತ್ರಕಾರನ (Photographer) ಕಲಾಭಿಜ್ಞತೆಯೂ ನೈಪುಣ್ಯ ವಿಶೇಷವೂ ಕಂಡುಬರುತ್ತವೆ. ಸ್ವ ಚುರಮುರಿಯವರ ಭಾಷಾಂತರದ ಕ್ರಮವು ಇವುಗಳಿಂದ ಭಿನ್ನವಾಗಿದೆ. ಮೂಲ ಶಾಕುಂತಲದಲ್ಲಿರುವ ಅಗಾಧವಾದ ಕಲ್ಪನಾ ಚಮತ್ಕೃತಿ, ಅಸದೃಶವಾದ ವರ್ಣನ ಚಾತುರ್ಯ, ಅನನ್ಯ ಸಾಧಾರಣವಾದ ಅಲಂಕಾರ ನಿಯೋಜನೆ ಮೊದಲಾದ ಕಾಲಿದಾಸನ ಕಲಾ ವೈಶಿಷ್ಟ್ಯಗಳನ್ನು ಅಚ್ಚಗನ್ನಡತನದ ಮುಸಿಯಲ್ಲಿ ಎರಕ ಹೊಯ್ಯುವಾಗ ಸ್ವ. ಶೇಷಗಿರಿರಾಯರು ತಮಗೆ ನಿಸರ್ಗಸಿದ್ಧವಾದ ಕವಿತ್ವ ಪ್ರತಿಭೆಯ ಪ್ರಭಾವದಿಂದ ಚೆನ್ನಾಗಿ ವಿಕಾಸಗೊಳಿಸಿ ಮೂಲಕೃತಿಯ ಅಂದಚಂದಗಳಿಗೆ ಹೆಚ್ಚಿನ ಸಿಂಗರವನ್ನು ತಂದುಕೊಟ್ಟಿದ್ದಾರೆ. ಕಾಲಿದಾಸನ ಸೂತ್ರರೂಪವಾದ ಒಂದೆರಡು ಮಾತುಗಳನ್ನು ವಿಸ್ತಾರಗೊಳಿಸಿ ವಿಶದಪಡಿಸುವಾಗ ಕನ್ನಡ ಕವಿಕುಲದ ಕಲಾಭಿಸಂಧಾನಕ್ಕೆ ಒಪ್ಪುವ ತೆರನಾಗಿ ಭಾಷ್ಯಕಾರನ ಜಾಣ್ಮೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಇದು ಹೇಗೆಂಬುದನ್ನು ತೋರಿಸಿ ಕೊಡುವುದಕ್ಕಾಗಿ ಒಂದೆರಡು ಮಾದರಿಗಳನ್ನು ಇಲ್ಲಿ ಕೊಡುವದು ಅಪ್ರಸ್ತುತವಾಗಲಾರದು.

೧. ಮೊದಲನೆಯ ಅಂಕಿನ ಕೊನೆಗೆ ಪ್ರಥಮ ದರ್ಶನ ಪ್ರಸಂಗದಿಂದ ಶಕುಂತಲೆಯನ್ನು ಅಗಲುವಾಗ ಕಾಲಿದಾಸನ ದುಷ್ಯಂತನು ಹೀಗೆ ಹೇಳುತ್ತಾನೆ :

ಗಚ್ಛತಿ ಪುರಃ ಶರೀರಂ ಧಾವತಿ ಪಶ್ಚಾತ್ ಅಸಂಸ್ತುತಂ ಚೇತಃ
ಚೀನಾಂಶುಕಮಿವ ಕೇತೋಃ ಪ್ರತಿವಾತಂ ನೀಯಮಾನಸ್ಯ ||
ಇದನ್ನು ಸ್ವ. ಬಸಪ್ಪಶಾಸ್ತ್ರಿಗಳು
ಮುಂದಕೆ ಪೋಪುದು ತನುವಿದು|
ಪಿಂದೆಸೆಗೋಡುವದು ಬಳಕೆಗೈಯ್ಯದ ಮನವೇ||
ನೆಂದಪೆನೊ ಪವನನಿದಿರೊಳ್|
ತಂದಪತಾಕಿಕೆಯ ಚೀನವಸನಮಿದೆಂಬೊಲ್ ||

ಎಂಬುದಾಗಿ ಕನ್ನಡ ಕಂದಪದ್ಯದಲ್ಲಿ ಹೇಳಿದ್ದಾರೆ. ಸ್ವ. ಬಿ. ಕೃಷ್ಣಪ್ಪನವರು ಇದನ್ನೇ 'ಗಾಳಿಗೆ ಇದಿರಾಗಿ ಚಲಿಸುತ್ತಿರುವ ಧ್ವಜಸ್ತಂಭದ ಹಾಗೆಯೇ ನನ್ನ ಶರೀರವು ಮುಂದೆ ಮುಂದಕ್ಕೆ ಚಲಿಸುತ್ತಿರುವುದು; (ಧ್ವಜಸ್ಥವಾದ) ಚೀನಾಂಶುಕದಂತೆಯೇ (ನನ್ನ) ಮನಸ್ಸು ಅಸಂಸ್ತುತವಾಗಿ ಹಿಂದು ಹಿಂದಕ್ಕೇ ಓಡುತ್ತಿದೆ" ಎಂದು ಗದ್ಯದಲ್ಲಿ ಹೇಳಿದ್ದಾರೆ. ಸ್ವ. ಶೇಷಗಿರಿರಾಯರು ಇದೇ ಮಾತನ್ನು ಹೇಗೆ ಹೇಳಿದ್ದಾರೋ ನೋಡಬಹುದು.

|| ಪದ ||

ಬರಲಾರದೆನ್ನಮನ || ಎನ್ನೊಡನೆ ||ಪಲ್ಲ ||
ಜನುಮದ ಸ್ನೇಹದ| ತನುವಿನೊಳಿರೆ ಪರ||
ತನುವಿಯ ಕೋಮಲ| ತನುವ ಬಯಸಿ ತಾ |೧||
ಶರೀರ ಮುದಕೆ ಪೋಗು| ತಿರಲು ರಥದ ಕೇತು ||
ವಿರದೆ ಹಿಂದಕ್ಕೆ ಜಗ್ಗು| ಇತರುವಾ ತೆರದೊಳು |೨||
ಲಲಿತ ರೂಪದ ಸರ |ದೊಳು ನೇತ್ರನಳಿನ ||
ದಳದ ಮೋಹದ ಲತಾ | ವಲಯದಿ ಸಿಲುಕಿ |೩||

೨. ಎರಡನೆಯ ಅಂಕಿನಲ್ಲಿ ದುಷ್ಯಂತನು ಶಕುಂತಲೆಯ ಲಾವಣ್ಯ ಸರ್ವಸ್ವವನ್ನು ತನ್ನ ಮಿತ್ರ ಮುಂದೆ ವರ್ಣಿಸಿದ್ದು ಕಾಲಿದಾಸನ ಕೃತಿಯಲ್ಲಿ ಹೀಗಿದೆ:-

ಚಿತ್ರೇ ನಿವೇಶ್ಯ ಪರಿಕಲ್ಪಿತಸತ್ವಯೋಗಾ|
ರೂಪೋಚ್ಚಯೇನ ಮನಸಾ ವಿಧಿನಾ ಕೃತಾ ನು ||
ಸ್ತ್ರೀ ರತ್ನಸೃಷ್ಟಿರಪರಾ ಪ್ರತಿಭಾತಿ ಸಾ ಮೆ|
ಧಾತುರ್ವಿಭುತ್ವಮನುಚಿಂತ್ಯ ವಪುಶ್ಚ ತಸ್ಯಾಃ ||

ಸ್ವ. ಬಸಪ್ಪ ಶಾಸ್ತ್ರಿಗಳು ಇದನ್ನು ಈ ಬಗೆಯಾಗಿ ಹೇಳಿದ್ದಾರೆ:-

[illegible] ಬೊಯ್ದನೊ ಚಿತ್ರಿಸುತ್ತಮವಳಂ ಸೌಂದರ್ಯಸಾರಂಗಳಿಂ ||
[illegible] ನಿರ್ಮಿಸಿದನೋ ಮೇಣ್ ಚಿತ್ತದಿಂ ಗೆಯ್ದನೊ ||

ಜಾಣಂ ಬ್ರಹ್ಮನ ಮತ್ತುಮಾಕೆಯೊಡಲು ನೋಡಲ್ಕದೇ ನೆಂದೆಪೆಂ ||
ಕ್ಷೋಣೀ ಭಾಗದೆ ಬೇರೆತೋರ್ಕುಮೆನಗಾಸ್ತ್ರೀ ರತ್ನ ಸೃಷ್ಟಿಕ್ರಮಂ ||

ಸ್ವ. ಬಿ. ಕೃಷ್ಣಪ್ಪನವರು ಇದನ್ನು ಹೀಗೆ ಪರಿವರ್ತಿಸಿದ್ದಾರೆ :-

"ಬ್ರಹ್ಮನ ನಿರ್ಮಾಣ ಸಾಮರ್ಥ್ಯವನ್ನೂ ಆಕೆಯ (ಅನುಪಮ) ಶರೀರವನ್ನೂ ಪರಿಶೀಲಿಸಲು, ಬ್ರಹ್ಮನು ಮೊದಲು ಮನಸ್ಸಿನಲ್ಲೇ ಸೌಂದರ್ಯಸಾರಗಳಿಂದ ಒಂದು ಚಿತ್ರವನ್ನು ವಿರಚಿಸಿ ಅದಕ್ಕೆ ಪ್ರಾಣಸಾರವನ್ನು ಏನಾದರೂ ಹೊಯ್ದನೋ ಏನೋ! ನನಗಂತೂ ಆ ಸ್ತ್ರೀರತ್ನದ ಸೃಷ್ಟಿಕ್ರಮವು ಬೇರೆಯೆಂದೇ ತೋರುವುದು."

ಸ್ವ. ಶೇಷಗಿರಿರಾಯರ ಕೃತಿಯಲ್ಲಿ ಇಲ್ಲಿ ಈ ಪದವಿದೆ :-

||ಪದ ||

ಬಣ್ಣಿಸಲ್ಹ್ಯಾಂಗಿನ್ನು || ನುಡಿಯಲಿ ಲಾ -
ವಣ್ಯದ ಖಣಿಯನ್ನು ||ಪಲ್ಲ||

ಕಣ್ಣೊಳು ಕಟ್ಟಿದಾ ಹೆಣ್ಣಿನ ರೂಪವು |
ಎನ್ನೊಳನಂಗನ ಸನ್ನಿಧಿಯಂತಿರೆ ||ಅನುಪಲ್ಲ||

ಮೊದಲು ಮನಸುಗೊಟ್ಟು ||ವಿಧಿಯು ಚಿತ್ರ ||
ಮುದದಿಂದೆ ಬರೆದಿಟ್ಟು||
ಅದರ ಮೈಯೊಳು ಜೀವದ ಕಳೆಯನು ತುಂ- |
ಬಿದ ಮ್ಯಾಲಿಳೆಯೊಳಗುದುಭವಿಸಿದಳೇನೋ ||೧||
ಕೈ ನಡಗುವದೆಂದು || ವಿಧಾತನು |
ಧ್ಯಾನದೊಳಗೆ ತಂದು||
ಮೌನದಿಂದತಿಶಯ ಮೋಹದ ರೂಪವ |
ಧೇನಿಸಿ ಪಡೆದಿಹ ಮಾನಸ ಪುತ್ರಿಯೊ ||೨||

ಎಂದಿಗೆ ಬರಬೇಕೈ || ಬ್ರಹ್ಮನಿಗಿಂಥ |
ಸುಂದರ ಕೃತಿ ಸಾಕೈ ||
ಇಂದಿರಾ ರೂಪವ ಚೆಂದದಿ ಕಲಿತವ - |
ಳಂದದೊಳಿಳಿಸಿಹನಿಂದೀವರಾಕ್ಷಿಯ ||೩||

೩. ಮೂರನೆಯ ಅಂಕಿನಲ್ಲಿ ಶಕುಂತಲೆಯು ಪ್ರೇಮಪತ್ರವನ್ನು ಬರೆಯುವದಕ್ಕಾಗಿ ಪದ್ಯವನ್ನು ರಚಿಸುತ್ತಿರಲು ಅವಳ ಭಾವಭಂಗಿಗಳನ್ನು ಕಾಲಿದಾಸನ ದುಷ್ಯಂತನು ಹೀಗೆ ವರ್ಣಿಸಿದ್ದಾನೆ :-

ಉನ್ನಮಿತೈಕಭ್ರೂಲತಮಾನನಮಸ್ಯಾಃ ಪದಾನಿ ರಚಯಂತ್ಯಾಃ ||
ಕಂಟಕಿತೇನ ಪ್ರಥಯತಿ ಮಯ್ಯನುರಾಗಂ ಕಪೋಲೇನ ||

ಸ್ವ. ಬಸಪ್ಪ ಶಾಸ್ತ್ರಿಗಳ ಶಾಕುಂತಲದಲ್ಲಿ ಇಲ್ಲಿ ಈ ಕಂದ ಪದ್ಯವಿದೆ:-

ಮೃದುಪದ ಬಂಧವನೆಸಗುವ |
ಸಂದತಿಯ ನಿಮಿರ್ದೆತ್ತಿದೊಂದು ಪುರ್ವಿಂ ಮೆರೆವೀ ||
ವದನಂ ಪುಲಕಂಗೂಡಿದ |
ಕದಪಿಂ ಕನ್ನಡಿಪುದೆನ್ನೊಳಿರ್ಪಭಿರತಿಯಂ ||

ಸ್ವ. ಬಿ. ಕೃಷ್ಣಪ್ಪನವರು ಇದನ್ನು ಹೀಗೆ ಕನ್ನಡಿಸಿದ್ದಾರೆ:

"ಪದ್ಯವನ್ನು ರಚಿಸುತ್ತಿರುವ ಈಕೆಯ ಎತ್ತಿದ ಒಂದು ಭ್ರೂಲತೆಯುಳ್ಳ ಮುಖವು ಪುಲಕಿತವಾದ ಕಪೋಲಗಳ ಮೂಲಕ ನನ್ನಲ್ಲಿ(ನೆಲಸಿ)ರುವ ಅನುರಾಗವನ್ನು ಪ್ರಕಟಗೊಳಿಸುವದು."

ಸ್ವ. ಶೇಷಗಿರಿರಾಯರು ಈ ಸಂದರ್ಭವನ್ನು ಹೀಗೆ ಬಣ್ಣಿಸಿದ್ದಾರೆ.

(ಪದ)

ಪದವ ರಚಿಸುತಿಹಳು ಚಂದಿರವದನೆ ಮನದೊಳು ||ಪಲ್ಲ||
ಹೃದಯದಾಸೆದೋರಲು ಬಲು |ಹೆದರಿ| ಬೆದರಿ| ಚದುರಿ | ಮಧುರಿ
||ಅನುಪಲ್ಲ||

ಕರದಿ ಗಲ್ಲವಿರಿಸಿ ಒಂದೇ ಕಡೆಗೆ ನೋಡುತಾ |
ಬೆರಳಿನಿಂದೆ ಮೆಲ್ಲನೆ ಮೃದು ತಾಳ ಮೆಟ್ಟುತಾ||
ಸಿರಿವನೊಲಿಯೆಪಣೆಯೊಳು ಕರಿ- |
ಸುರುಳು ಗುರುಳು ಉರುಳುತಿರಲು ||೧||

ತವಕದಿಂದಲುಚಿತ ಸೂಚಿಸಿರಲು ಹಿಗ್ಗುತಾ ||
ಕವನರಸದಿ ಕೆನ್ನೆಯೊಳು ಮುಳ್ಳು ನಾಂಟುತಾ ||
ಕವಿಯೆ ಬಾಷ್ಪ ಕಣ್ಣೊಳುಕ್ಕು - |
ತಿವೆ ತನುವತಿ ನವತ ಯುವತಿ ||೨||

ಒಂದೆ ಭ್ರೂಲತೆಯ ಬಾಲೆ ಮ್ಯಾಲಕೆತ್ತುತಾ|
ಹೊಂದಿಬರಲು ರಚನೆ ಸಣ್ಣ ಸ್ವರದಿ ನುಡಿಯುತಾ ||
ಬಂಧನ ಸೌಂದರಿಯದಾ- |
ನಂದದಿಂದೆ ಮಿಂದು ಒಂದು ||೩||

ಇನ್ನು ಹೆಚ್ಚಾಗಿ ವಿಸ್ತಾರಗೊಳಿಸದೆ ಶಾಕುಂತಲದೊಳಗೂ ಶ್ರೇಷ್ಠತಮವೆಂದು ಜಗತ್ತೇ ಹೊಗಳುತ್ತಿರುವ ನಾಲ್ಕನೇ ಅಂಕಿನೊಳಗಿನ ನಾಲ್ಕು ಶ್ಲೋಕಗಳೊಳಗಿನ ಒಂದನ್ನು ಇಲ್ಲಿ ಉದಾಹರಿಸಿ ಮಿಕ್ಕದ್ದನ್ನೆಲ್ಲ ಸೂಜ್ಞವಾಚಕರ ಸೂಕ್ಷ್ಮಾವಲೋಕನಕ್ಕೆ ಬಿಟ್ಟು ಬಿಡುವವೇ ಲೇಸು.

೪. ಪತಿಯಾಲಯಕ್ಕೆ ಪೋಗಲು ಅತ್ಯಂತ ಉತ್ಕಂಠಿತೆಯಾದರೂ ತನ್ನನ್ನು ಬಹು ಕಾಲದ ವರೆಗೆ ಪಿತೃವಾತ್ಸಲ್ಯದಿಂದ ಲಾಲನ ಪಾಲನ ಮಾಡಿದ ಕಣ್ವತಾತನನ್ನಗಲಿ ದೇಶಾಂತರದಲ್ಲಿ ತಾನು ಹೇಗೆ ಜೀವಧಾರಣ ಮಾಡಿಕೊಂಡು ಬಾಳುವೆನೆಂಬ ಉದ್ವೇಗದಿಂದ ದುಃಖಿಸುವ ಶಕುಂತಲೆಯನ್ನು ಕಾಲಿದಾಸನ ಕಾಸ್ಯಪನು ಹೀಗೆ ಸಮಾಧಾನ ಪಡಿಸುತ್ತಾನೆ:-

ಅಭಿಜನವತೋ ಭರ್ತುಃಶ್ಲಾಘ್ಯೇ ಸ್ಥಿತಾ ಗೃಹಿಣೀಪದೇ||
ವಿಭವಗುರುಭಿಃ ಕೃತ್ಯೈಸ್ತಸ್ಯ ಪ್ರತಿಕ್ಷಣಮಾಕುಲಾ||
ತನಯಮಚಿರಾತ್ಪ್ರಾಚೀವಾರ್ಕಂ ಪ್ರಸೂಯ ಚ ಪಾವನಂ |
ಮಮವಿರಹಜಾಂ ನತ್ವಂ ವತ್ಸೇ ಶುಚಂ ಗಣಯಿಷ್ಯಸಿ ||

ಸ್ವ. ಬಸಪ್ಪ ಶಾಸ್ತ್ರಿಗಳ ಅನುವಾದವು ಹೀಗಿದೆ:-

ಕುವರಿ ಕುಲೀನನಾದ ಪತಿಗೊಪ್ಪುವ ಪಟ್ಟದ ರಾಣಿಯಾಗಿ ವೈ||
ಭವಗಳಿನೇಳ್ಗೆವೆತ್ತಿನನ ಕೃತ್ಯದೊಳಾಕುಲೆಯಾಗುತಾವಗಂ ||
ರವಿಯನಮರ್ತ್ಯನಾಥದಿಶೆ ತಾಂ ಪಡೆವಂತೆ ಸಗಾತ್ರ ಪುತ್ರನಂ |
ತವಕದೆ ಪೆತ್ತು ನೀನೆಣಿಸದಿರ್ಪೆ ಮದೀಯ ವಿಯೋಗದುಃಖವಂ ||

ಸ್ವ. ಬಿ. ಕೃಷ್ಣಪ್ಪನವರು ಇದನ್ನೇ ಹೀಗೆ ಭಾಷಾಂತರಿಸಿದ್ದಾರೆ:-

"ಕುಲೀನನಾದ ಪತಿಯಿಂದ ಶ್ಲಾಘ್ಯವಾದ ಗೃಹಿಣೀ ಪದವನ್ನು ಪಡೆದವಳಾಗಿ ಆತನ ವಿಭವೋಪೇತವಾದ ಮಹಾಕಾರ್ಯಗಳಲ್ಲಿ ಪ್ರತಿಕ್ಷಣವೂ ನಿರತಳಾಗಿರುತ್ತಾ ಪ್ರಾಚೀನವನಿತೆಯು ಆದಿತ್ಯನನ್ನು ಪ್ರಸವಿಸುವಂತೆ ನೀನು ಸ್ವಲ್ಪ ಕಾಲದಲ್ಲಿಯೇ ತನಯನನ್ನು ಪಡೆಯುವದರಿಂದ ನನ್ನ ವಿಯೋಗ ದುಃಖವನ್ನು ನೀನು ಅನುಭವಿಸದಂತಾಗುವದು."

ಸ್ವ. ಶೇಷಗಿರಿರಾಯರು ಇದೇ ಮಾತನ್ನು ಹೀಗೆ ಹೇಳಿಸಿದ್ದಾರೆ :-

(ಪದ)

ಆಗಲಿ ಪೋಗುವುದಕ್ಕೆ ದುಃಖವ್ಯಾಕೆ ||ಪಲ್ಲ||
ಮಗುವೆ ನಿನ್ನಯ ಪತಿಯು ಜಗದೊಡೆಯನಮ್ಮಾ| |ಅನುಪಲ್ಲ||
ಅತಿ ಕುಲೀನನೆ ನಿನ್ನ ಪತಿಯವನ ಮನೆಯೊಳಗೆ
ಸತಿಯಾಗಿ ಬಾಳ್ವುದೆ ಶ್ಲಾಘ್ಯ ನಿನಗೆ||
ಮತಿಯೆಲ್ಲ ಮುಳುಗಿ ಸಂತತ ನಿನ್ನ ಮನೆಯ ಬಹು|
ಕೃತಿಗಳೊಳು ತವರ್ಮನೆಯ ಸ್ಮೃತಿಯಾಗದಮ್ಮಾ ||೧||

ಇನನು ಪ್ರಾಚಿಯೊಳುದಯವನೆ ಗೈದ ತೆರನಂತೆ|
ತನಯ ನಿನ್ನೊಳು ಪುಟ್ಟಲಂಕದೊಳು||
ಅನುದಿನದೊಳಿಟ್ಟು ಮೋಹದಿ ಮುದ್ದಿಸಲು ಬಂಧು- |
ಜನವಿರಹದಿಂದಾದ ಕಷ್ಟವೆಲ್ಲಿಹುದು ||೨||

ಪರಿಪರಿಯ ವಿಭವದೊಳು ಪತಿಯೊಡನೆ ಹರುಷದೊಳು|
ಸರಸ ಸವಿಮಾತುಗಳ ಸೌಖ್ಯ ಬಹಳು||
ಮರಿಸಿಬಿಡುವದು ನಮ್ಮ ನರಗಳಿಗೆಯೊಳು ನೀ ತ- |
ವರ ಮನೆಯ ನೆನಿಸುವದು ಬಹು ದಿನದ ಕನಸು ||೩||

ಹೀಗೆ ನಾಂದಿಯಿಂದಾರಂಭ ಮಾಡಿಕೊಂಡು ಭರತವಾಕ್ಯದ ವರೆಗಿನ ಒಂದೊಂದು ಮೂಲ ಪದ್ಯವನ್ನು ವಿಮರ್ಶಿಸಿ ನೋಡಿದರೆ ಬಹುಶಃ ಎಲ್ಲವುಗಳಲ್ಲಿ ಸ್ವ. ಶೇಷಗಿರಿ ರಾಯರ ಪ್ರತಿಭೆಯು ಮೂಲಕೃತಿಯನ್ನು ಹೆಚ್ಚಾಗಿ ಅಂದಗೊಳಿಸಿ ಕನ್ನಡಿಗರ ಮುಂದೆ ಮಂಡಿಸುವ ಕಾರ್ಯದಲ್ಲಿ ಕಾಲಿದಾಸನ ಕೀರ್ತಿಯನ್ನು ಮತ್ತಿಷ್ಟು ಉಜ್ವಲವಾಗಿ ಬೆಳಗಿಸುವುದಕ್ಕೆ ಕಾರಣವಾಗಿರುವದೆಂದು ಯಾರಿಗಾದರೂ ತೋರದಿರದು. ಮೂಲ ಪದ್ಯಾನುವಾದದಲ್ಲಿ ಅಖಂಡವಾಗಿ ಪ್ರಸ್ಫುರಿತವಾಗಿ ಪ್ರವಾಹಗೊಂಡ ಸ್ವ. ಶೇಷಗಿರಿರಾಯರ ಕವಿತ್ವಸ್ಫೂರ್ತಿಯು ಮೂಲದಲ್ಲಿದ್ದ ಎಷ್ಟೋ ಗದ್ಯಗಳನ್ನೂ ಪದ್ಯರೂಪವಾಗಿ ಮಾರ್ಪಡಿಸಿರುವದು ನಿದರ್ಶನಕ್ಕೆ ಬರುತ್ತದೆ. ಈ ಬಗ್ಗೆ ಈ ಕೆಳಗೆ ಕಾಣಿಸಿರುವ ಪದ್ಯಗಳನ್ನು ನೋಡಬಹುದು.

ಅಂಕು	ಪದ	ಪುಟ
೧	ನೀರು ಚಿಮ್ಮಡಿಸುವ ಬನ್ನಿರೆ ಬನದೊಳು	೧೦
೩	ಹೆಣ್ಣಿನ ಗುಣಗಳಿವೆ	೭೧
೪	ನೋಡೆ ಚಿಂತೆಯೊಳಾರಗೊಡ ಮಾತನಾಡದವಳ	೮೪
೪	ಉದಯ ಕಾಲವಾಯಿತು ಜಗವೆಲ್ಲ ಸಮ್ಮುದವಾಗಲು ಮೆಲ್ಲನೆ	೮೬
೪	ಮೋಸಮಾಡಿಪೋದನಮ್ಮಾ	೮೭
೪	ಹೇಳಿ ಕಳುಹಿಸಯ್ಯ ತಾತಯ್ಯಾ ಸುದ್ದಿಯಾ	೯೯
೪	ಕಂದಾ ಇನ್ನ್ಯಾತಕೆ ಬರುವೀ ಬಳಿಯಲ್ಲಿ	೧೦೦
೪	ಕಮಲದಳಮೊರೆಯಾಗಲಿನಯನ	೧೦೧
೫	ನೀತೀ ಇದಲ್ಲೊ ಪೌರವರಾಯ	೧೨೪
೫	ರಾಯಾ ನಿನ್ನ ರೀತಿಯಲ್ಲೊ	೧೨೭
೬	ಅತಿಶಯಾತುರದಿ	೧೪೨
೭	ನಿನ್ನೊಳೇನುಂಟು ದೋಷವು	೧೮೬

ಇವೇ ಮೊದಲಾದ ಸ್ವತಂತ್ರ ಪದ್ಯಗಳಲ್ಲಿ ಕೂಡ ಸ್ವ. ಶೇಷಗಿರಿರಾಯರ ಪ್ರತಿಭೆಯು ಅವಿಚ್ಛಿನ್ನವಾಗಿ ಪ್ರಕಟವಾಗಿರುವುದು ವಾಚಕರ ನಿದರ್ಶನಕ್ಕೆ ಬಾರದಿರದು.

ಸ್ವ. ಶೇಷಗಿರಿರಾಯರ ಪರಿವರ್ತನ ಕ್ರಮದ ನಿರೀಕ್ಷಣವನ್ನು ಇಷ್ಟರಮಟ್ಟಿಗೆ ಮಾಡಿದ ಬಳಿಕ ಅವರಿಂದ ಉಪಯೋಗಿಸಲ್ಪಟ್ಟಿರುವ ಭಾಷೆಯ ವಿಷಯವಾಗಿಯೂ ಒಂದೆರಡು ಮಾತುಗಳನ್ನು ಹೇಳುವದು ಕ್ರಮ ಪ್ರಾಪ್ತವಾಗಿದೆ.

ನಾಟಕವು 'ದೃಶ್ಯಕಾವ್ಯ'ವಷ್ಟೆ? ಬೇರೆ ಬೇರೆ ಪಾತ್ರಗಳು ಅದನ್ನು ರಂಗಭೂಮಿಯ ಮೇಲೆ ಅಭಿನಯಿಸುವುದನ್ನು ಸಾಮಾನ್ಯವಾದ ಪ್ರೇಕ್ಷಕ ಗಣವು ಕೂಡ ನೋಡಿ, ಮಾತುಗಳನ್ನು ಕೇಳಿ, ಭಾವಗಳನ್ನು ಗ್ರಹಿಸಿ, ಮನರಂಜನೆಯನ್ನು ಹೊಂದಿ, ಸಂತೋಷದಿಂದ ತಲೆದೂಗಿ, ಅದರೊಳಗಿನ ಬೋಧದಿಂದ ಬುದ್ಧಿಗಲಿಯಬೇಕೆಂಬುದು ನಾಟ್ಯ ಸೃಷ್ಟಿಯ ಮೂಲ ಉದ್ದೇಶವಾಗಿದೆ. ಆದ್ದರಿಂದ ನಾಟಕದ ಭಾಷೆಯು ಎಷ್ಟು ಮಟ್ಟಿಗೂ ಕ್ಲಿಷ್ಟವಾಗಿರದೆ ಸಾಮಾನ್ಯವಾಗಿ ದೇಶದಲ್ಲಿ ಬಳಕೆಯಲ್ಲಿದ್ದ ಭಾಷೆಯೇ ಅದರಲ್ಲಿ ಉಪಯೋಗಿಸಲ್ಪಟ್ಟಿರಬೇಕೆಂಬುದು ಸ್ಪಷ್ಟವಾಗಿದೆ. ಈಗೀಗ ಹೊಸದಾಗಿ ಹುಟ್ಟುತ್ತಿರುವ ನಾಟಕಗಳಲ್ಲಂತೂ ಈ ಮಾರ್ಗವೇ ಗ್ರಂಥಕಾರರಿಂದ ಅನುಸರಿಸಲ್ಪಡುತ್ತಿರುವುದು ಕಂಡುಬರುತ್ತಿದೆ. ಸ್ವ. ಶೇಷಗಿರಿರಾಯರು ಇದೇ ತತ್ವವನ್ನು ಕಂಡು ಹಿಡಿದು ತಮ್ಮ ಕಾಲಕ್ಕೆ ಈ ಸೀಮೆಯಲ್ಲಿ ಪ್ರಚಾರದಲ್ಲಿದ್ದ ಸರಳವಾದ ಸುಲಭವಾದ ಆದರೂ ಪರಿಶುದ್ಧವಾದ ಭಾಷಾ ಶೈಲಿಯನ್ನೇ ಅನುಸರಿಸಿರುವದು ಕಂಡು ಬರುತ್ತದೆ. ವಿದೂಷಕ ಹಾಗೂ ಮೀನುಗಾರ ಇವೆರಡು ಪಾತ್ರಗಳನ್ನು ಬಿಟ್ಟು ಎಲ್ಲ ಪಾತ್ರಗಳ ಮಾತುಗಳು ಸುಸಂಸ್ಕೃತ ಸಮಾಜದಲ್ಲಿ ವಾಡಿಕೆಯಾಗಿ ಬಳಕೆಯಲ್ಲಿರುವ ಭಾಷಾಸರಣಿಯಲ್ಲಿಯೇ ಬರೆಯಲ್ಪಟ್ಟಿವೆ. ವಿದೂಷಕ ಮತ್ತು ಮೀನುಗಾರ ಇವರ ಬಾಯಿಯಲ್ಲಿ ಮಾತ್ರ ಇತ್ತ ಕಡೆಯ ಗ್ರಾಮ್ಯಭಾಷೆಯು ನಿಯೋಜಿತವಾಗಿದೆ. ಪದಗಳು ಕರ್ನಾಟಕ ದೇಶದಲ್ಲಿ ಪುರಾತನ ಕಾಲದಿಂದಲೂ ಜ್ಞಾನಭಕ್ತಿ ವೈರಾಗ್ಯಗಗಳ ಜೊತೆಯಲ್ಲಿಯೇ ನಯನೀತಿ ನಡಾವಳಿಗಳನ್ನು ಸಾಮಾನ್ಯವಾಗಿ ಜನಾಂಗಕ್ಕೆಲ್ಲ ಬೋಧಿಸುತ್ತ ಮನುಷ್ಯ ಪ್ರಪಂಚವನ್ನೇ ಪರಮಾರ್ಥಮಯವಾಗಿ ಮಾಡಿದ ಭಗವದ್‌ಭಕ್ತರ ದಿವ್ಯವಾಣಿಯ ಸಮುಚ್ಚಯವಾಗಿರುವ 'ದಾಸಕೂಟ ವಾಙ್ಮಯ'ದ ಲಲಿತ ಬಂಧ ಸರಣಿಯನ್ನನುಸರಿಸುತ್ತವೆ. ಕಂದ ವೃತ್ತಾದಿ ಪದ್ಯಗಳು ಕೂಡ ಬಹಳ ಮಟ್ಟಿಗೆ ಸುಲಭವೂ ಸರಳವೂ ಆದ ಶೈಲಿಯಲ್ಲಿಯೇ ಬರೆಯಲ್ಪಟ್ಟಿರುವವಾದರೂ ಹಲ ಕೆಲವು ಕಡೆಗೆ ಹಳೆಗನ್ನಡ ಪ್ರತ್ಯಯಗಳಿಂದ, ಅಲ್ಪಸ್ವಲ್ಪ ಹಳೆಗನ್ನಡ ಪ್ರಯೋಗಗಳಿಂದ ಕೊಂಚಮಟ್ಟಿಗೆ ಕಠಿಣವಾಗಿ ತೋರಬಹುದು. ಆದರೆ ಇಂಥ ಸಂದರ್ಭಗಳು ತೀರ ಕಡಿಮೆಯಾಗಿರುವವೆಂದು ಓದುಗರಿಗೆ ಮನದಟ್ಟಾಗದಿರದು. ಹೀಗೆ ಇಡೀ ನಾಟಕವು ಕರ್ನಾಟಕದ ಈ ಭಾಗದಲ್ಲಿ ಪ್ರಚಾರದಲ್ಲಿದ್ದ 'ನಾಡನುಡಿ' (Popular Language) ಅಂದರೆ ಎಲ್ಲರಿಗೂ ತಿಳಿಯುವ ಭಾಷೆಯಲ್ಲಿಯೇ ಬರೆಯಲ್ಪಟ್ಟಿರುವದೆಂಬುದು ಸ್ಪಷ್ಟವಾಗಿದೆ. ಅರವತ್ತೈದು ವರ್ಷಗಳಾಚೆಗೆ ಅಂದರೆ ಅಖಂಡ ಕರ್ನಾಟಕದ ಕನವರಿಕೆಯು ಕೂಡ ಕನಸು ಮನಸಿನಲ್ಲಿ ಹೊಳೆಯದೆ, ಒಂದು ಭಾಗದ ಕನ್ನಡಿಗರ ಪರಿಚಯವು ಬೇರೊಂದು ಭಾಗದವರಿಗಿಲ್ಲದೆ, ಎಲ್ಲರೂ ತಮ್ಮ ಪಕ್ಕಕ್ಕೆ ತಾವೇ ಎಂಬ ತಿಳವಳಿಕೆಯಲ್ಲಿ ಮುಳುಗಿದಾಗ್ಗೆ ಈ ನಾಟಕವು ಬರೆಯಲ್ಪಟ್ಟಿರುವುದನ್ನು

ಲಕ್ಷ್ಯಕ್ಕೆ ತಂದು ನೋಡಿದರೆ ಇದರ ಭಾಷೆಯೊಳಗಿನ 'ಪ್ರಾದೇಶಿಕ ವೈಲಕ್ಷಣ್ಯ' ವೆಂಬುದು ಅಪರಿಹಾರ್ಯವೆಂದು ಯಾರಿಗಾದರೂ ತೋರದಿರದು. ಇಂಥ 'ವೈಲಕ್ಷಣ್ಯ'ಗಳು ಯಾವ ಭಾಷೆಯಲ್ಲಾದರೂ ಯಾವ ಕಾಲದಲ್ಲಾದರೂ ಯಾವ ದೇಶದಲ್ಲಾದರೂ ಇರತಕ್ಕವೇ. "ಇಡೀ ಕನ್ನಡನಾಡು ಒಂದೇ ಪುರಾತನ ಸಂಸ್ಕೃತಿಯಿಂದ ನಿಬದ್ಧವಾದದ್ದು; ಇಡೀ ಕನ್ನಡ ಜನಾಂಗದ ಭಾಷೆಯು ಒಂದೇ; ಪುರಾತನ ಕನ್ನಡ ಗ್ರಂಥಕಾರರೆಲ್ಲರೂ ಕನ್ನಡಿಗರಾದ ನಮಗೆಲ್ಲರಿಗೂ ಪೂಜ್ಯರಾದ ಪೂರ್ವಜರು; ಅವರ ಗ್ರಂಥಗಳೆಲ್ಲ ಎಲ್ಲ ಭಾಗಗಳ ಕನ್ನಡಿಗರಿಗೆ ಅವರು ಕಾದಿಟ್ಟ ಬೆಲೆಯುಳ್ಳ ನಿಧಿ" ಎಂಬಿವೇ ಮೊದಲಾದ ಏಕತ್ವದ ವಿಚಾರಗಳು ಈಗ ೨೦ ವರ್ಷಗಳಿಂದಲೂ ಅಖಂಡವಾಗಿ ಅವಿರತವಾಗಿ ನಾಡಿನಲ್ಲೆಲ್ಲ ಪ್ರಸಾರ ಹೊಂದುತ್ತ ನಡೆದಿದ್ದರೂ ನಮ್ಮ ಉಡಿಗೆ ತೊಡಿಗೆ ನಡೆನುಡಿಗಳೊಳಗಿನ ಪ್ರಾದೇಶಿಕ ವೈಲಕ್ಷಣ್ಯಗಳು ಕಡಿಮೆಯಾಗಿರುವುದಿಲ್ಲ; ನೂರಾರು ವರ್ಷಗಳಾದರೂ ಕಡಿಮೆಯಾಗಲಾರವು. ವೈಯಕ್ತಿಕ ಹಾಗೂ ಪ್ರಾದೇಶಿಕ ವೈಲಕ್ಷಣ್ಯಗಳು ಎಲ್ಲಿಯಾದರೂ, ಎಲ್ಲಿ ನೋಡಿದರೂ ನಿಸರ್ಗಸಿದ್ಧವಾಗಿದೆ. ಪರಸ್ಪರ ಬಳಿಕೆಯು ಬೆಳೆದಂತೆ ಈ ವೈಲಕ್ಷಣಗಳು ಎಲ್ಲ ಕಡೆಗೆ ಮೈಯುಂಡು ಹೋಗುವದರಿಂದ ಮೊದಲು ಅವುಗಳಲ್ಲಿ ಕಂಡುಬರುತ್ತಿದ್ದ 'ವೈಚಿತ್ರ್ಯದೋಷ' ವೆಂಬ ತಿರಸ್ಕಾರವು ಕಡಿಮೆಯಾಗಿ ಒಂದು ಬಗೆಯ ಆತ್ಮೀಯ ಭಾವನೆಯು ಸೌಹಾರ್ದವೂ ಸಹಾನುಭೂತಿಯೂ ಪರಸ್ಪರರಲ್ಲಿ ಬೆಳೆಯುತ್ತ ಹೋಗುವುವು. ಅಂದರೆ ಈ ಪ್ರಾದೇಶಿಕ ವೈಲಕ್ಷಣ್ಯಗಳಲ್ಲಿ ಮೊದಮೊದಲು ಗೋಚರವಾಗುತ್ತಿದ್ದ 'ತೀವ್ರ'ತೆಯು ಮಾತ್ರ ಲೋಪವಾಗುವದಲ್ಲದೆ ' ವೈಲಕ್ಷಣ್ಯಗಳು' ಇಲ್ಲದಂತಾಗುವದೇ ಇಲ್ಲ. ಮುಂದೆ ಈ 'ವೈಲಕ್ಷಣ್ಯ' ಗಳ 'ಪೃಥಕ್ ಭಾವ' ಗಳೆಲ್ಲವೂ ನಮ್ಮ 'ನಾಡ ನುಡಿ'ಯಲ್ಲಿಯೇ 'ಏಕಸ್ಥ'ವಾಗಿರುವದೆಂಬ ಭಾವನೆಯು ಪ್ರಾದುರ್ಭಾವವಾದೊಡನೆಯೇ ಈ ವೈಲಕ್ಷಣ್ಯಗಳ ವಿಚಾರವೇ ಹಾರಿಹೋಗುತ್ತದೆ. "ಭೂತಗಳ ಪೃಥಕ್ ಭಾವದಲ್ಲಿ ಏಕತ್ವದ ನಿದರ್ಶನವಾದೊಡನೆಯೇ ಬ್ರಹ್ಮ ಪ್ರಾಪ್ತಿಯಾಗುವದು" ಎಂದು ಶ್ರೀ ಮದ್ಭಗವದ್ಗೀತೆಯ ೧೩ನೇ ಅಧ್ಯಾಯದ ೩೦ನೇ ಶ್ಲೋಕದಲ್ಲಿ ಹೇಳಿರುವ ವೇದಾಂತ ತತ್ವದ ರಹಸ್ಯವು ಇಲ್ಲಿಯೂ ಯಥಾರ್ಥವಾಗಿ ಅನ್ವಯಿಸುತ್ತದೆ. ಅನೇಕ ಬಗೆಯ ವಿವಿಧತ್ವಗಳಿಂದ ತುಂಬಿದ ಜನಾಂಗದಲ್ಲಿ ಅಥವಾ ರಾಷ್ಟ್ರದಲ್ಲಿ ಆ ಜನಾಂಗದ ಅಥವಾ ರಾಷ್ಟ್ರದ 'ಏಕತ್ವ' ಭಾವನೆಯು ಪ್ರಾದುರ್ಭಾವವಾದೊಡನೆಯೇ ಆ ವಿವಿಧತ್ವಗಳಿಂದುಟಾಗುವ 'ಪೃಥಕ್ತ್ವ'ದ ಕಲ್ಪನೆಯೇ ಅಳಿದು ಹೋಗುವಂತೆ ಏಕಭಾಷೆಯ ಏಕತ್ವದ ಮುಂದೆ ಈ ವೈಲಕ್ಷಣ್ಯಗಳ ವಿಚಾರವೇ ಇದ್ದೂ ಇಲ್ಲದಂತಾಗುತ್ತದೆಂಬುದು ಸಿದ್ಧಾಂತವಾದ ಮಾತು. ಆದುದರಿಂದ ಈ ಪ್ರಾದೇಶಿಕ ವೈಲಕ್ಷಣ್ಯಗಳ ವಿಚಾರಕ್ಕೆ ವಿಶೇಷ ಗಮನ ಕೊಡತಕ್ಕ ಕಾರಣವೇ ಇಲ್ಲ.

ಇದೆಲ್ಲ ತಾತ್ವಿಕ ವಿವೇಚನೆಯ ಮಟ್ಟಿಗೆ ಚಂದಕಾಣಿಸುವ ಮಾತು; ವ್ಯವಹಾರದಲ್ಲಿ ಇದು ಪ್ರಯೋಜನಕಾರಿಯಾಗಲಾರದೆಂದೂ ಆಕ್ಷೇಪಿಸುವಂತಿಲ್ಲ. ಪ್ರತ್ಯಕ್ಷ ಅನುಭವದಿಂದಲೂ ಈ ಮಾತು ಸಿದ್ಧವಾಗಿ ಹೋಗಿದೆ. ಮೈಸೂರಿನತ್ತ ಕಡೆಯವರೆಲ್ಲ ಧಾರವಾಡದ ಕಡೆಯ ಭಾಷೆಗೆ "ಏನೋ, ಸಾರ್, ನಮಗೆ ನಿಮ್ಮ ಹಿಡು ಭಾಷೇನೇ ತಿಳೀಯು" ಎಂದು ಸಾಮಾನ್ಯವಾಗಿ ಫಕ್ಕನೇ ಹೇಳಿಬಿಡುವದೂ ಉಂಟು; ಅದಕ್ಕೆ ನಾವು 'ಸರಿ' ಎಂದು ತಲೆದೂಗುವದೂ ಉಂಟು. ಆದರೆ

ಈ ಸಾಮಾನ್ಯ ತಿಳುವಳಿಕೆಗೆ ವಿರುದ್ಧವಾದ ಪ್ರತ್ಯಕ್ಷ ಅನುಭವವೇ ನನಗೆ ಬಂದಿದೆ. ೧೯೨೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆಯನ್ನು ಮೈಸೂರಿನ ಮಹಾರಾಜರೊಡನೆ ಚರ್ಚಿಸುವ ಉದ್ದೇಶದಿಂದ ವಿಜಾಪುರದ ಶ್ರೀ ಕೌಜಲಗಿ ಶ್ರೀನಿವಾಸರಾಯರೂ ಧಾರವಾಡದ ಶ್ರೀ. ಆಲೂರ ವೆಂಕಟರಾಯರೂ ಮೈಸೂರಿಗೆ ಹೋದಾಗ ನನಗೂ ಅವರ ಜೊತೆಗೆ ಹೋಗುವ ಸಂದರ್ಭ ಒದಗಿತು. ನಾವು ಹೋದಾಗ್ಗೆ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನಗಳು ನಡೆದಿದ್ದವು. ಈ ಸಭೆಯ ಪ್ರಮುಖರನೇಕರು ಕೂಡಿ ಮೈಸೂರಿನ ರಾಜ್ಯಾಂಗದ ದೊಡ್ಡ ದೊಡ್ಡ ಅಧಿಕಾರಿಗಳಿಗೂ ಬೇರೆ ಪ್ರತಿಷ್ಠಿತ ಜನರಿಗೂ ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು. ಅದಕ್ಕೆ ನಮ್ಮನ್ನೂ ಕರೆದಿದ್ದರು. ಸಂತೋಷ ಕೂಟದ ಮುಖ್ಯಾಂಗಗಳಾದ ಗಾನವಾದನ, ಗಂಧಾನುಲೇಪನ, ಕಾಫೀ ಪಾನಾದಿಗಳಾದ ಬಳಿಕ ತಾಂಬೂಲ ಸೇವನೆ ನಡೆದಾಗ್ಗೆ ನಮ್ಮ ಧಾರವಾಡದ ಕಡೆಯ ಒಂದೆರಡು ವಿನೋದ ನುಡಿಗಳನ್ನು ಕೇಳಿ ಉಲ್ಲಸಿತರಾಗಬೇಕೆಂದು ಅಲ್ಲಿ ಕೂಡಿದ ಕೆಲವರಿಗೆ ಅಂತಃಸ್ಫೂರ್ತಿಯಾಯಿತು. ಅವರು ಶ್ರೀ ಆಲೂರ ವೆಂಕಟರಾಯರಿಗೆ ಗಂಟು ಬಿದ್ದರು; ಅವರು ನನ್ನನ್ನು ಮುಂದೆ ಚಾಚಿ ತಾವು ಓರೆಗಾದರು. ಆ ಮಹಾಜನರಿಗೆಲ್ಲ ನಮ್ಮಿತ್ತ ಕಡೆಯ ವಿನೋದವನ್ನುಣಿಸಿ ತಣಿಸುವ ಭಾರವು ನನ್ನ ಮೇಲೆ ಬಿತ್ತು. ನಾನಾದರೂ ಪ್ರಸಂಗಕ್ಕೆ ತಕ್ಕ ನಾಲ್ಕು ಮಾತುಗಳನ್ನು ಮೊದಲು ಹೇಳಿ, ಇದೇ ಶಾಕುಂತಲದೊಳಗಿನ 'ಪವವ ರಚಿಸುತಿಹಳು'. 'ಎಲ್ಲಿ ಪೋಗಲಿ ನಾನಿನ್ನಾ' ಮತ್ತು 'ಆ ಮ್ಯಾಲೆ ಬಿಡುವ ಮನೋಹರ' ಈ ಮೂರು ಪದಗಳನ್ನು ಹ್ಯಾಗೋ ಅಂದು ತೋರಿಸಿ ಅವುಗಳೊಳಗಿನ ಭಾವಗಳನ್ನು ನನಗೆ ತಿಳಿದ ಮಟ್ಟಿಗೆ ವಿವರಿಸಿ, ಮೈಸೂರಿನ ಕನ್ನಡಕ್ಕೂ ಧಾರವಾಡದ ಕನ್ನಡಕ್ಕೂ ಇರುವ ವ್ಯತ್ಯಾಸವನ್ನು ತಾವೆಲ್ಲರೂ ಮನ್ನಿಸಬೇಕೆಂದು ಬಿನ್ನಯಿಸಿದೆನು. ಈ ಮೂರೂ ಪದಗಳಲ್ಲಿ ಕಂಡುಬರುವ ಕವಿತ್ವ ಪ್ರತಿಭೆಯಿಂದ, ಭಾವ ಪ್ರದರ್ಶನದಿಂದ, ಪದಲಾಲಿತ್ಯದಿಂದ, ಭಾಷಾಸೌಷ್ಟವದಿಂದ ಅವರೆಲ್ಲರೂ ಬೆರಗಾಗಿ ಬೊಟ್ಟು ಕಚ್ಚಿದರು. ನಮ್ಮ 'ಬಡಕವಿ'ಯನ್ನು ಬಹಳ ಪರಿಯಾಗಿ ಕೊಂಡಾಡಿದರು. ತುಂಗ ಭದ್ರೆಯ ಉತ್ತರಕ್ಕೆ ಕನ್ನಡ ಬಲ್ಲವರಿದ್ದಾರೆಯೋ ಎಂಬ ತಮ್ಮ ಸಂಶಯವು ನಿರರ್ಥಕವಾದದ್ದೂ ಅಹಂಭಾವ ದ್ಯೋತಕವಾದದ್ದೂ ಆಗಿರುವದೆಂದು ಒಡನುಡಿದರು. ಒಂದೇ ಭಾಷೆಯೊಳಗಿನ ಪ್ರಾಂತಿಕವೈಲಕ್ಷಣ್ಯಗಳೆಂಬ ಮಾತು ತಕ್ಕ ತಿಳುವಳಿಕೆಯುಂಟಾಗದ ಮೂಲಕ ಹುಟ್ಟಿದ ಬದನೇಕಾಯಿಯ ಭೂತವೆಂಬುದು ಇದರಿಂದ ಒಡೆದು ಕಾಣುವದಿಲ್ಲವೇ?

ಸ್ವ. ಶೇಷಗಿರಿರಾಯರ ಪದ್ಯಗಳಲ್ಲಿ ಛಂದಃಶಾಸ್ತ್ರದ ದೋಷಗಳಿರಬಹುದು. ಶಬ್ದಮಣಿದರ್ಪಣ ಶಬ್ದಾನುಶಾಸನ ಸೂತ್ರಗಳ ಒರೆಗಲ್ಲಿಗೆ ಹಚ್ಚಿದಲ್ಲಿ ವ್ಯಾಕರಣ ದೋಷಗಳೂ ಹಲ ಹಲವು ಹೊರಟರೂ ಹೊರಡಬಹುದು. ಸಾಹಿತಿಗಳೆಂಬ ಶಾಸ್ತ್ರಾಭ್ಯಾಸ ನಿಪುಣರಿಗೆ ಇಂಥವು ಸರಿ ಬರಲಾರವೆಂಬುದು ಕಟ್ಟಿಟ್ಟ ಮಾತೇ ಸರಿ. ಆದರೆ ಸ್ವ. ಶೇಷಗಿರಿರಾಯರು ಇದನ್ನು ಬರೆದ ಕಾಲ, ಅವರು ಬೆಳೆದ ಪರಿಸ್ಥಿತಿ, ಅವರು ಸಂಪಾದಿಸಿದ ಶಿಕ್ಷಣ, ಮೊದಲಾದ ಆನುಷಂಗಿಕ ಸಂಗತಿಗಳನ್ನೆಲ್ಲ ಮನಸ್ಸಿಗೆ ತಂದು ನೋಡಿದರೆ ಇಂಥ ದೋಷಗಳನ್ನೆಲ್ಲ 'ಆರ್ಷಪ್ರಯೋಗ'ವೆಂಬ ಕಾವ್ಯ ಲಕ್ಷಣದಲ್ಲಿ ಸೇರಿಸುವದೇ ಯೋಗ್ಯವಾಗುವದು. ಶೇಷಗಿರಿರಾಯರು ಪಂಡಿತರಿದ್ದಿದ್ದಿಲ್ಲ;

ಪದವೀಧರರಿದ್ದಿದ್ದಿಲ್ಲ; ಭಾಷಾಶಾಸ್ತ್ರದಲ್ಲಿ ಪ್ರಾವೀಣ್ಯ ಪಡೆದವರಿದ್ದಿದ್ದಿಲ್ಲ. ಲಕ್ಷಣ ಗ್ರಂಥಗಳನ್ನು ಮುಂದಿಟ್ಟುಕೊಂಡು ಅವುಗಳ ಅನುಸಂಧಾನದಿಂದ ನಾಟಕವನ್ನು ಬರೆಯಬೇಕೆಂಬ ಹವ್ಯಾಸಕ್ಕೆ ಬಿದ್ದವರಲ್ಲ. ಹುಟ್ಟು ಕವಿಗಳು; ಕಾವ್ಯದ ಮರ್ಮವನ್ನರಿತವರು, ರಸಿಕರು. ರಸಪರಿಪುಷ್ಟವಾದ ಕಾವ್ಯವು ಹೇಗಿರಬೇಕೆಂಬುದನ್ನು ಮನದಂದು ನಾಟಕ ಬರೆದವರು. ಈ ಬಗ್ಗೆ ಅವರ ಸ್ಪಷ್ಟ ಅಭಿಪ್ರಾಯಗಳು ಸೂಚನೆಯ ಪದ್ಯಗಳೊಳಗಿನ ೪ನೇ ೫ನೇ ಶ್ಲೋಕಗಳಿಂದ ಸ್ಪಷ್ಟವಾಗಿ ತಿಳಿಯುವಂತಿವೆ. ವಿದ್ವಾಂಸನಾದ ಕವಿಯ ಕೃತಿಗೂ ಸಾಮಾನ್ಯ ಕವಿ (Born Poet) ಯು ಕಟ್ಟಿದ ಕವನಕ್ಕೂ ಇರುವ ವ್ಯತ್ಯಾಸವನ್ನು ೬ನೇ ಪದ್ಯದಲ್ಲಿ ಸಲಕ್ಷಣವಾಗಿ ಹೇಳಿ ಮುಂದೆ ೯ನೇ ಪದ್ಯದಲ್ಲಿಯೇ 'ಬಡಕವಿಗೆ ಈ ಕುರೂಪ ಕೃತಿಗನ್ನಿಕೆ ಪುಟ್ಟಿದಳ್ ಜಾಣರೊಳ್ ಅಡಿಗಳ ದಾಸಿಯಾಗಿ ಬದುಕಲ್ ಕಳುಹಿರ್ಪೆನು" ಎಂದು ಅತೀವ ವಿನಯದಿಂದ ಬೇಡಿಕೊಂಡಿರುವುದಂತೂ ತಾವು ಪಾಂಡಿತ್ಯ ಪ್ರಭಾವದಿಂದ ಕವಿತ್ವಕ್ಕೆ ಒಗಿದ್ದವರೆಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಿದಂತೆಯೇ ಇದೆ. ೩ನೆಯ ಪದ್ಯದಲ್ಲಿಯೂ ಇದೇ ಭಾವವನ್ನು 'ಗೂಢವಾಗಿ' ಹೇಳುವ ತೆರದಿಂದ ' ಕವಿಜನರೆಲ್ಲ ಎನ್ನಯ ಕೃತ್ಯವನು ವಿವಿಧ ಜನರ್ಕಳಿಂ ವಿವಿಧ ಭಾಷೆಯೊಳಂತರಿಸಿರ್ಪವಂಗಳಂ ಸವಿಯೊಳು ಒರೆಹಚ್ಚಿ ನೋಡಬಹುದು" ಎಂದು ಹೇಳಿದ್ದಾರೆ. ಈ ಸೂಚನೆಯನ್ನನುಲಕ್ಷಿಸಿ ಈ ಕೃತಿಯನ್ನು ಪರೀಕ್ಷಿಸಿದರೆ ಸರಸ್ವತಿಯ ಸಂಸ್ಕೃತ ವಿಹಾರೋದ್ಯಾನದಲ್ಲಿ ನಿಸರ್ಗ ಮನೋಹರವಾಗಿ ಬೆಳೆದ ಕಾಳಿದಾಸನ ಶಾಕುಂತಲವೆಂಬ 'ಉಗುರೆಳೆ ಗೆಂಪುವಣ್ಣೊಡೆದ ದ್ರಾಕ್ಷದ ಗೊಂಚಲು'ಗಳಿಂದ ಪರಿಶುದ್ಧವಾದ ಅಭಿನವ ರಸವನ್ನು ತೆಗೆದು ಅದರೊಳಗೆ ತಮ್ಮ ಸವಿನುಡಿಯ ಸಕ್ಕರೆಯ ಮಸಾಲೆಯನ್ನು ಬೆರಿಸಿ ಅತ್ಯಂತ ಜಾಣ್ಮೆಯಿಂದ ಒಳ್ಳೇ ರುಚಿಕಟ್ಟಾದ ಪಾಕವನ್ನು ಮಾಡಿ ಕನ್ನಡ ಜನಾಂಗಕ್ಕೆ ಸ್ವ. ಶೇಷಗಿರಿರಾಯರು ಬಡಿಸಿರುವರೆಂದು ಹೇಳಲು ಯಾವ ಅಭ್ಯಂತರವೂ ಕಂಡುಬರುವುದಿಲ್ಲ.

ಸ್ವ. ಶೇಷಗಿರಿರಾಯರು ನಾಟಕವನ್ನು ಬರೆದರು; ಮುದ್ರಿಸಿದರು; ಕರ್ನಾಟಕದ ಕಾವ್ಯಕಲಾಭಿಜ್ಞ ಜನತೆಯಲ್ಲಿ ಅದಕ್ಕೆ ಗೌರವ ದೊರೆಯಿತು; ಅದನ್ನು ಓದಿ ಸಂತೋಷ ಪಟ್ಟರು. ಹತ್ತೆಂಟು ವರ್ಷಗಳ ನಂತರ ಕೈ. ಅಣ್ಣಾ ಕಿರ್ಲೋಸ್ಕರರು ಅದನ್ನೇ ಮುಂದಿಟ್ಟುಕೊಂಡು ಅದೇ ಪದ್ಧತಿಯಿಂದ ಮರಾಠಿಯಲ್ಲಿ ನಾಟಕವನ್ನು ಬರೆದು ಅದಕ್ಕೆ 'ಸಂಗೀತ ಶಾಕುಂತಲ'ವೆಂದು ಹೆಸರಿಟ್ಟರು. ವರ್ಷಾರು ತಿಂಗಳಲ್ಲಿಯೇ ಮಹಾರಾಷ್ಟ್ರದ ಸುಶಿಕ್ಷಿತರು ಅದರ ಪ್ರಯೋಗ ಮಾಡಿ ತೋರಿಸಿದರು. ಅದರ ಕೀರ್ತಿಯು ಹೆಚ್ಚಾಗಿ ಪ್ರಸಾರಗೊಂಡಿತು. 'ಕಿರ್ಲೋಸ್ಕರ ಸಂಗೀತನಾಟಕ ಮಂಡಳಿ'ಯು ಉದಯವಾಗಿ ಮಹಾರಾಷ್ಟ್ರದಲ್ಲಿ ಸಂಗೀತ ನಾಟಕಗಳ ಕೋಲಾಹಲವನ್ನೆಬ್ಬಿಸಿತು. ಪ್ರತಿಯೊಂದು ನಾಟಕ ಕಂಪನಿಯೂ ಶಾಕುಂತಲದ ಪ್ರಯೋಗ ಮಾಡಿ ತೋರಿಸಹತ್ತಿದ್ದರಿಂದ ಅದು ಮಹಾರಾಷ್ಟ್ರದಲ್ಲಿ ಅತ್ಯಂತ ಲೋಕಪ್ರಿಯವಾಗಿ ಹತ್ತಿಪ್ಪತ್ತು ಆವೃತ್ತಿಗಳು ಮುದ್ರಿತವಾಗಿ ಹೋದವು. ಇಂದಿಗೂ ಮಹಾರಾಷ್ಟ್ರದ ಪ್ರಸಿದ್ಧ ಕಂಪನಿಗಳು ನಡುನಡುವೆ ಶಾಕುಂತಲದ ಪ್ರಯೋಗವನ್ನು ಮಾಡೇ ಮಾಡುತ್ತವೆ; ಜನರು ನೋಡೇ ನೋಡುತ್ತಾರೆ. ಆದರ ಚುರಮುರಿಯವರ ಶಾಕುಂತಲವು ಹುಟ್ಟಿದ ೬೫ ವರ್ಷಗಳಲ್ಲಿ ಅದರ ಪ್ರಯೋಗವಾಗುವದಕ್ಕೆ

ಅನುಕೂಲವಾಗಲಿಲ್ಲ. ಆಗಿನ ಕಾಲಕ್ಕೆ ನಾಟಕ ಮಾಡುವದೆಂದರೆ ಅತ್ಯಂತ ಹೀನತರವಾದ ಕೆಲಸವೆಂಬ ತಿಳಿವಳಿಕೆಯು ಎಲ್ಲ ಕಡೆಗೂ ಹಬ್ಬಿಕೊಂಡಿದ್ದದ್ದೇ ಇದಕ್ಕೆ ಕಾರಣವಾಗಿರಬಹುದು. ೩೫ ವರ್ಷಗಳ ನಂತರ ಧಾರವಾಡದ ಕೆಲವು ಜನ ನಾಟ್ಯ ಕಲಾಪ್ರಿಯ ಕನ್ನಡ ಸುಶಿಕ್ಷಿತರು ಇಲ್ಲಿ ನಡೆದ ಮಹಾರಾಷ್ಟ್ರ ನಾಟಕಗಳ ಉತ್ಕರ್ಷವನ್ನೂ ಕನ್ನಡ ನಾಟಕಗಳು ಅಪಕರ್ಷವನ್ನೂ ಕಂಡು ಮನನೊಂದು ಮರಾಠಿ ಶಾಕುಂತಲಕ್ಕೆ ಮೂಲಭೂತವಾದ ಕನ್ನಡ ಶಾಕುಂತಲವು ಪ್ರಯೋಗಭಾಗ್ಯವನ್ನು ಕಾಣದಲ್ಲಾ ಎಂದು ಕನಿಕರಪಟ್ಟು 'ಭರತ ಕಲೋತ್ತೇಜಕ ಸಂಗೀತ ಸಮಾಜ' ವೆಂಬ ಅಮೇಚೂರ ನಾಟಕ ಸಂಘವನ್ನು ಸ್ಥಾಪಿಸಿಕೊಂಡು ಚುರಮುರಿಯವರ ಶಾಕುಂತಲವನ್ನೇ ಮೊದಲನೆಯ ಪ್ರಯೋಗವಾಗಿ ಆರಿಸಿ, ಅದನ್ನು ಅಭ್ಯಾಸ ಮಾಡಹತ್ತಿದರು. ಕೆಲವು ದಿವಸಗಳ ನಂತರ ಮೊದಲಿನ ನಾಲ್ಕು ಅಂಕುಗಳ ಅಭ್ಯಾಸವಾದ ಬಳಿಕ ಸ್ವ. ಶೇಷಗಿರಿರಾಯರ ಕಕ್ಕನ ಮಕ್ಕಳಾದ ಸ್ವ. ಚುರಮುರಿ ಗುಂಡೇರಾಯರು ಸಮಾಜದವರ ತಾಲೀಮು ನೋಡಲಿಕ್ಕೆ ಬಂದು ಬಹಳ ಸಂತೋಷಬಟ್ಟು, ಸ್ವ. ಶೇಷಗಿರಿರಾಯರ ಅಭಿಮಾನಿಗಳಾಗಿದ್ದ ಶ್ರೀ ರೊದ್ದ ಶ್ರೀನಿವಾಸರಾಯರೇ ಮೊದಲಾದ ಮಹನೀಯರನ್ನು ಮತ್ತೊಮ್ಮೆ ತಾಲೀಮು ನೋಡಲಿಕ್ಕೆ ಕರಕೊಂಡು ಬಂದರು. ಧಾರವಾಡದ ಈ ಪ್ರಮುಖ ಜನರ ಅನುಮತಿಯಿಂದ ೧೯೦೫ನೇ ಇಸ್ವಿಯ ಫೆಬ್ರುವರೀ ತಿಂಗಳಲ್ಲಿ ಈ ಶಾಕುಂತಲದ ಮೊದಲಿನ ನಾಲ್ಕು ಅಂಕುಗಳ ಪ್ರಯೋಗವನ್ನು ಇಲ್ಲಿಯ ವಿಕ್ಟೋರಿಯಾ ಥಿಯೇಟರಿನಲ್ಲಿ ಮಾಡಿ ತೋರಿಸಿದರು. ಧಾರವಾಡದ ಕನ್ನಡ ಪ್ರಮುಖರೊಳಗಿನ ಸ್ವ. ವೆಂಕಟರಂಗೋ ಕಟ್ಟೀಯವರೇ ಮೊದಲಾದ ಅನೇಕ ಜನ ಮಹನೀಯರು ಬಂದು ನಾಟಕವನ್ನು ನೋಡಿ ಸಂತೋಷಪಟ್ಟು ಸಮಾಜವನ್ನು ಹಾಡಿ ಹರಿಸಿದರು. ಗುಂಡೇರಾಯರಂತೂ ೨೦ ವರ್ಷಗಳ ಹಿಂದೆ ಸ್ವರ್ಗಸ್ಥರಾದ ತಮ್ಮ ಅಣ್ಣಂದಿರ ಕೃತಿಯನ್ನು ರಂಗಭೂಮಿಯ ಮೇಲೆ ತಂದು. ಭರತಕಲೋತ್ತೇಜಕ ಸಂಗೀತ ಸಮಾಜದವರು ತಮಗೆ ಅವರ ಪ್ರತ್ಯಕ್ಷ ದರ್ಶನವನ್ನೇ ಮಾಡಿಸಿದ ಹಾಗಾಯಿತೆಂದು ಸಾರ್ವಜನಿಕ ರೀತಿಯಿಂದ ಸಮಾಜವನ್ನಭಿನಂದಿಸಿ ಬಹುಮಾನವನ್ನೂ ಕೊಟ್ಟರು. ಇದೇ ಸಂದರ್ಭದಲ್ಲಿ ಶಾಕುಂತಲದ ಪುನರ್ಮುದ್ರಣದ ಮಾತು ಹೊರಟಾಗಲೇ ನನಗೆ ಈ 'ಪರಿಚಯ'ದ ಕೆಲಸವನ್ನು ಅವರು ಒಪ್ಪಿಸಿದ್ದು. ಮುಂದೆ ನಾಲ್ಕಾರು ತಿಂಗಳುಗಳಲ್ಲಿ ಮುಂದಿನ ಮೂರೂ ಅಂಕುಗಳ ಪ್ರಯೋಗವು ಮಾಡಲಾಯಿತು. ಇಡೀ ನಾಟಕವು ಬಹಳ ದೊಡ್ಡದೂ ಅನೇಕ ದೊಡ್ಡ ದೊಡ್ಡ ಪದ್ಯಗಳನ್ನುಳ್ಳದ್ದೂ ಆದ ಮೂಲಕ ಒಂದೇ ರಾತ್ರಿಯಲ್ಲಿ ಇದರ ಪ್ರಯೋಗವಾಗುವದು ಅಸಾಧ್ಯವೆಂದು ಸಮಾಜದವರು ಮನದಂದು ಮೊದಲಿನ ೪ ಅಂಕುಗಳನ್ನು ಒಂದು ರಾತ್ರಿ ಹಾಗೂ ೫ನೇ ಅಂಕಿನಿಂದ ಮುಂದಿನ ಭಾಗವನ್ನು ಮತ್ತೊಂದು ರಾತ್ರಿ, ಹೀಗೆ ಪ್ರಯೋಗ ಮಾಡಿ ಇದೇ ಸಂಪ್ರದಾಯವನ್ನೇ ಇಟ್ಟುಕೊಂಡಿದ್ದರು. ಈ ಇಡೀ ಪ್ರಯೋಗಗಳಿಗೆ ಧಾರವಾಡದ ಆಗಿನ ಸುಶಿಕ್ಷಿತ ಸಮಾಜದಿಂದ ಚೆನ್ನಾಗಿಯೇ ಪ್ರೋತ್ಸಾಹನ ದೊರೆಯಿತು. ಎಷ್ಟೋ ಜನ ಹೊಸ ಸುಶಿಕ್ಷಿತ ತರುಣರು ಮನೆಯ ಹಿರಿಯರ ಅನುಮತಿಯಿಂದ ಸಮಾಜವನ್ನು ಸೇರಿಕೊಂಡು ಅದರ ಕಾರ್ಯಕ್ಷೇತ್ರವನ್ನು ಬೆಳಿಸಿ ಹೊಸ ಹೊಸ ನಾಟಕಗಳನ್ನು ಬರಿಸಿ ಪ್ರಯೋಗ ಮಾಡಹತ್ತಿದರು. ಆದರೂ ಮೂಲ ಶಾಕುಂತಲವನ್ನು ಅವರು ಬಿಡಲಿಲ್ಲ.

ಈ ಸಮಾಜವಲ್ಲಿ ರೇಲ್ವೆ ಹೆಡ್ ಆಫೀಸಿನ ಕೆಲಸಗಾರರನೇಕರಿದ್ದರು. ೧೯೦೯ರಲ್ಲಿ ಈ ಹೆಡ್ಡಾಫೀಸುಗಳು ಮದ್ರಾಸಕ್ಕೆ ಹೋದುದರಿಂದ ಸಮಾಜದೊಳಗಿನ ನುರಿತ ನಟರನೇಕರು ಮದ್ರಾಸಕ್ಕೆ ಹೋಗಬೇಕಾಗಿ ಸಮಾಜವು ಮುರಕಳಿಗೆ ಬಂದಿತು. ಆದರೂ ಇಲ್ಲಿಯ ಶುಕ್ರವಾರ ಪೇಟೆಯ ಕೆಲವು ಜನ ನಾಟ್ಯಕಲಾಪ್ರಿಯ ಸುಶಿಕ್ಷಿತರು ಅದನ್ನು ಮುಂದೆ ಸಾಗಿಸುವ ಸಾಹಸವನ್ನು ಮಾಡಿದರು. ಅಂತೂ ೧೯೦೫ರಿಂದ ೧೯೧೩ರವರೆಗಿನ ೮ ವರ್ಷಗಳ ಅವಧಿಯಲ್ಲಿ ಈ ಶಾಕುಂತಲದ ಹತ್ತಿಪ್ಪತ್ತು ಪ್ರಯೋಗಗಳು ಇಲ್ಲಿ ಆದವು. ಕೆಲಸಗಾರರ ಅನುಕೂಲತೆ ನೋಡಿಕೊಂಡು ಹುಬ್ಬಳ್ಳಿ ಗದುಗಿನಲ್ಲಿಯೂ ಈ ಸಮಾಜದವರು ತಮ್ಮ ಪ್ರಯೋಗಗಳನ್ನು ಮಾಡಿದರು. ಆದರೆ ಹೆಡ್ ಆಫೀಸಿನಲ್ಲಿ ಕೆಲಸಕ್ಕೆ ತೊಡಗಿದವರ ತೊಂದರೆಯ ಮೂಲಕ ಕರ್ನಾಟಕದ ಬೇರೆ ಪಟ್ಟಣಗಳಿಗೆ ಹೋಗಲು ಸಮಾಜಕ್ಕೆ ಅವಕಾಶ ದೊರೆಯದೆ ಇತರ ಕಡೆಗೆ ಇದರ ಪ್ರಯೋಗಗಳು ಸಮಾಜದವರಿಂದಾಗಲಿಕ್ಕೆ ಅನುಕೂಲ ಒದಗಲಿಲ್ಲ. ಈ ಸಮಾಜದೊಳಗಿನ ಅನೇಕ ಜನ ಕಾರ್ಯಕರ್ತರು ಇನ್ನೂ ಬದುಕಿದ್ದಾರೆ. ಇಂಥವರಲ್ಲಿ ನಾನೂ ಒಬ್ಬನು.

ಧಾರವಾಡದಲ್ಲಿ ಈ ಭರತಕಲೋತ್ತೇಜಕ ಸಂಗೀತಸಮಾಜವು ಹುಟ್ಟುವ ನಾಲ್ಕಾರು ವರ್ಷ ಮೊದಲು ಬಾದಾಮಿಯ ಕೆಲವು ಜನ ಸಂಗೀತಜ್ಞರು ಅಲ್ಲಿ ವಕೀಲರಾಗಿದ್ದ ಶ್ರೀ ಮುಗಳೀ ಶ್ರೀನಿವಾಸರಾಯರೇ ಮೊದಲಾದವರ ಪ್ರೇರಣೆಯಿಂದ ಈ ಶಾಕುಂತಲವನ್ನು ಪ್ರಯೋಗಿಸಿದ್ದೂ ಉಂಟು. ಈ ನಾಟ್ಯ ಸಂಘದವರು ವಿಜಾಪುರ ಬಾಗಲಕೋಟೆಗಳಲ್ಲಿಯೂ ಇದರ ಪ್ರಯೋಗವನ್ನು ಮಾಡಿ ಲೋಕಾದರವನ್ನು ಸಂಪಾದಿಸಿದರು. ೧೮೯೯ರ ಸುಮಾರಕ್ಕೆ ನಾನು ಬಾಗಲಕೋಟೆಗೆ ಹೋದಾಗ ಈ ಸಂಘದವರ ಶಾಕುಂತಲದ ಪ್ರಯೋಗವನ್ನು ನೋಡುವ ಪ್ರಸಂಗ ಒದಗಿತು. ಧಾರವಾಡದ ಭರತಕಲೋತ್ತೇಜಕ ಸಂಗೀತ ಸಮಾಜವು ಹುಟ್ಟುವದಕ್ಕೆ ನಾನು ಈ ಪ್ರಯೋಗವನ್ನು ನೋಡಿದ್ದೇ ಕಾರಣವೆಂದೂ ಹೇಳಬಹುದು.

ಧಾರವಾಡ

೩೧-೮-೩೪ ಮುದವೀಡು ಕೃಷ್ಣರಾಯ

ಈ ಕೃತಿಯನ್ನು ಕುರಿತು....

ಐತಿಹಾಸಿಕವಾಗಿ ಹಲವು ದೃಷ್ಟಿಗಳಿಂದ ಚುರಮುರೀ ಶೇಷಗಿರಿರಾಯರ ಶಾಕುಂತಲ ಒಂದು ಗಮನಾರ್ಹ ಕೃತಿ. ಅನುವಾದವಾಗಿದ್ದರೂ ಇದು ಮೊದಲ ಕನ್ನಡ ನಾಟಕ. ಸಿಂಗರಾರ್ಯನ ಮಿತ್ರವಿಂದಾ ಗೋವಿಂದ ನಾಟಕವಾದರೂ ಅದು ಕಾವ್ಯರೂಪದಲ್ಲಿದೆ. ಬಸವಪ್ಪಶಾಸ್ತ್ರಿಗಳ ಶಕುಂತಲ ನಾಟಕದ ಅನುವಾದವಾದದ್ದು ಸುಮಾರು ೧೮೮೦ರಲ್ಲಿ. ಆದರೆ ಚುರಮುರೀ ಅವರ ಕೃತಿ ಪ್ರಕಟವಾದದ್ದು ೧೮೬೯ರಲ್ಲಿ. ಹೀಗಾಗಿ ಇದು ಕನ್ನಡದ ಮೊದಲ ನಾಟಕವೆಂದು ಹೇಳಬಹುದು.

ಕನ್ನಡ ಗದ್ಯ ಬೆಳವಣಿಗೆಯ ದೃಷ್ಟಿಯಿಂದಲೂ ಚುರಮುರೀ ಅವರ ಈ ಕೃತಿ ಅಧ್ಯಯನಯೋಗ್ಯವಾದುದು. ೧೨೦ ವರ್ಷಗಳ ಹಿಂದೆಯೇ ಚುರಮುರೀ ಅವರು ಉತ್ತರ ಕನ್ನಡ ಭಾಷೆಯನ್ನು ಬಳಸಿದ್ದಾರೆ. ಸಂಭಾಷಣೆಯನ್ನು ಸ್ವಲ್ಪ ಪರಿಷ್ಕರಿಸಿದರೆ ಈಗಲೂ ಈ ನಾಟಕವನ್ನು ರಂಗದ ಮೇಲೆ ಪ್ರಯೋಗಿಸಬಹುದು.

ಬೆಂಗಳೂರು — ಬಿ.ವಿ. ವೈಕುಂಠರಾಜು

27-4-1989 — ಅಧ್ಯಕ್ಷ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

ಸೂಚನೆ

(ಅಂದರೆ ಗ್ರಂಥಕರ್ತರ ಮುನ್ನುಡಿ)

ಕವಿಲೋಕಕ್ಕೆ ನರೇಶ್ವರಂ ನವರಸಂ ಸೂರಲ್ ಮಹಾಮೇಘ ಮಾ- |
ಧವ ಮೇಣ್ ಬಲ್ಲ ರಸಜ್ಞಭೃಂಗತತಿಗಾ ಗೀರ್ವಾಣಭಾಷಾವನಂ||
ತವೆ ಸೌಂದರ್ಯಕೆ ತಂದ ಚಂದ್ರಮ ಮನೋಭಾವ ಪ್ರಕಾಶಕ್ಕೆ ತಾಂ |
ರವಿ ಮುನ್ ಪೇಳ್ದನಿದನ್ನು ಸಂಸ್ಕೃತದೊಳಾ ಶ್ರೀಕಾಳಿದಾಸಾಖ್ಯನು ||೧||

ಇದಭಿಜ್ಞಾನ ಶಕುಂತಲಾಕೃತಿಯಂ ಭಾಷಾಂತರಂ ತಮ್ಮ ತ- |
ಮ್ಮದರೋಳ್ಮಾಡಿದರೆಲ್ಲ ನಾಡದ (ಡಿನ) ಜನರ್ ಕರ್ನಾಟಕದೋಳಿಲ್ಲೆಲೈ||
ಮುದಿವಂದಟ್ಟುವದಲ್ಲದೆನ್ನಮರಣಂ ಯಾವಾಗಲೋ ಎಂದು ಸಿ- |
ಕ್ಕಿದ ಶಬ್ದಂಗಳನಿಟ್ಟು ಶೀಘ್ರತರದಿಂದೀ ಕೃತ್ಯಮಂ ಗೈದೆ ನಾಂ ||೨||

ಕವಿಜನರೆಲ್ಲ ನೋಡಬಹುದೆನ್ನಯ ಕೃತ್ಯವನನ್ಯದೇಶದೋಳ್ |
ವಿವಿಧಜನರ್ಕಳಿಂ ವಿವಿಧಭಾಷೆಯೊಳಂತರಿಸಿರ್ಪವಂಗಳಂ||
ಸವಿಯೊಳು ಪಚ್ಚಿನೋಡಲೊರೆ ಕನ್ನಡಿಸೆನ್ನದು ಪಚ್ಚದಿರ್ದೊಡೆ|
ಕವಿತೆಯು ಗಂಡುಮೆಟ್ಟು ಕರನಾಟಕ ಬಿಟ್ಟು ತೆರಳ್ದು ಪೋಗುವಂ ||೩||

ಬಿಗಿಮುಡಿಯಿರ್ದು ತಕ್ಕ ಸೊಗಸಿಲ್ಲದಿರಲ್ಕದು ತಾಲವೃಕ್ಷದೋಳ್ |
ಮೊಗೆಯೊಳಗಿರ್ಪ ಮದ್ಯ ಮಧುರೋಕ್ತಿಯು ಕಾವ್ಯ ಸುಬೋಧಮಾಗಿರಲ್ ||
ಲ್ಕು (ಉ)ಗುರೆಳೆಗೆಂಪುವಣ್ಣೊಡೆದ ದ್ರಾಕ್ಷದ ಗೊಂಚಲು ಗೂಢಮಾಗಿ ಮೇಣ್|
ಮಿಗೆ ರಸಮುಂಬಿರಲ್ಕೆ ರಸದಾಳಿಯು ಕಬ್ಬದು ಕಬ ಮುತ್ತಮಂ ||೪||

ತಳಿರುಗಳಿಂದೆ ಮುಚ್ಚಿ, ತೆರೆಯಲ್ ತನಿಮಾವಿನ ಹಣ್ಣು ಚೋಲ್ವು ಒಲ್|
ತಿಳಿವಸನಕ್ಕೆ ಬಚ್ಚಿ, ಮಾಲೆಗಳ್ ಮರೆಯಾಗಿರೆ ತೋರುವಂತೆ ಮ್ಮ||
ಮೊಳಗಿಬಿಂಯುಂಗೆವಾಚಿ ನರಸಂಗದೊಳೊಪ್ಪಿಸದಿರ್ಪವ ವಕ್ಷ್ಯವಲ್|
ಬಲಿ ಬಿಗಿಯಲ್ಪಡದಿರದಲ್ಲದು ನೋಂಟಿನ ಕಾವ್ಯವೊಪ್ಪುಗುಂ ||೫||

ಪರಿಯಲ್ಪೋರ ತರಂಗಮೆನ್ನಲುಪಮಾದಿ ಪ್ರೌಢಲಂಕಾರಗಳ್|
ಹರಲೀಲಾಮೃತಸಾಗರೋ ನವರಸಂಗಳ್ ಮೌಕ್ತಿಕಾ ಪಂಕ್ತಿಯಂ ||
ಮರಿಸಲ್ ಕನ್ನಡಮಾತೆ ಸೊಂಪಿಸಲಿ ಮೂಗಿಂಗಿಟ್ಟ ನತ್ತೋ ಚಿಕಿ - |
ತ್ಸರ ಕಲ್‌ಬುದ್ಧಿಗೆ ವಜ್ರವೋ ಕೃತಿಯೊ ಮೇಣಾರಕ್ಕರಾರ್ಯರ್ಗಳಾ ||೬||

ಕವಿಸೇನಾಪತಿ ಕಾವ್ಯಶಾಸ್ತ್ರವನಸಿಂಹಂ ಭೀಮಸೇನಂ ಕಣಾ|
ನವಪಾಕ್ಕೆ ಗುರೋರ್ಗುರುಂ ರಸಿಕ ಮುಖ್ಯರ್ಗೀತನ್ನೆ ಮೇಣು ಮಾ_ ||
ನವರೋಳಿಪ್ಪ ಮನಸ್ಸಿನೆಲ್ಲ ಬಗೆದೋರಲ್ ದರ್ಪಣಂ ಸಾಮ್ಯರಾ_ |
ರಿವಗೀ ಕನ್ನಡ ಕಾಲಿದಾಸನಿಗತಿ ಪ್ರಖ್ಯಾತ ಲಕ್ಷ್ಮೀಶಗೆ ||೭||

ಕವಿ ವಿದ್ವಾಂಸನಿರಲ್ಕೆ ತತ್ಕೃತುಪಮಾಲಂಕಾರ ಮುಂತಾದರಿಂ |
ಸವಿಯಾಗಿರ್ಪ ಸುಗೂಢ ದಿವ್ಯ ಕೃತಿಯುಂ ಸಾಮಾನ್ಯನುಂ ಕಟ್ಟಿದ||
ಕವನಂ ನೋಡಲು ರತ್ನದೊಸ್ತದ ಕರಂಡಂ ಪಕ್ವದಾಡಿಂಬಮುಂ|
ರವಿಯಂ ಪೊಂಗಲಶಂ ಸುಧಾಕಿರಣನಂ ಚಲ್ವಾನನಂ ಪೋಲ್ಪವು ||೮||

ಬಡಕವಿಗೀ ಕುರೂಪ ಕೃತಿಗನ್ನಿಕೆ ಪುಟ್ಟಿದಳಿನ್ನು ಜಾಣರೊಳ್|
ಅಡಿಗಳ ದಾಸಿಯಾಗಿ ಬದುಕಲ್ ಕಳುಹಿರ್ಪನಿದಕ್ಕೆ ತಪ್ಪಿ ತಾಂ ||
ನಡೆದೊಡೆ ಡೊಂಬದಾಸರೊಳು ಸಾಯ್ ನಡೆ ಯೆಂದಿವಳನ್ನೆ ನೂಂಕಿರೆ- |
ನ್ನೆಡೆಯೊಳು ಬೇಡವರ್ಗೆ ಸಹ ಬೇಸರಿಡಲ್ಕೆಡಿಪರ್ಚಿಕಿತ್ಸರೆ ||೯||

ತನುವನಿದಿತ್ತು ಮಾತೃಪಿತೃಗಳ್ ಪೊರೆದನ್ನಿರಲನ್ಯ ನನ್ನದಾ_|
ತನವನ ಭಾಗ್ಯದಿಂದೆ ಬದುಕಲ್ ಮತಿಯಂ ಸತಿ ಮೇಣ್ ಸುತಂ ಹಿತಂ ||
ದಿನದಿನ ಚಿತ್ತಕಿತ್ತು ಪೊರೆಯಲ್ ಗುರುವಿಂದುರೆ ಕಲ್ತಿರಲ್ಕೆ ಹಿಂ |
ದಿನಘನಕಾವ್ಯ ಸೇವ್ಯಮಿರೆ ನಾನಿರೆನೋರ್ವನೆ ಕಾರ್ಯಕಾರಣಂ ||೧೦||

ಕಡುಗುರು ಭಕ್ತಿಯಿಂ ತುರಮುರೀತ್ಯುಪನಾಮಕ ರಾಮಚಂದ್ರಜಂ |
ಜಡಮತಿ ಕಬ್ಬಿ ಶೇಷಗಿರಿಯೆಂಬವನೀ ಕೃತಿಗೈದು ಮಾಡಿದಂ ||
ಬಡವರ ವಿದ್ಯೆಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ |
ಬಡುತಿಹ ಧೀರ ಚನ್ನಬಸವೇಶ್ವರ ದಿವ್ಯರ ಪಾದ ಭೂಷಣಂ ||೧೧||

ಪಾತ್ರ ಪರಿಚಯ

೧. ಕಣ್ವರು	ತಪಸ್ವಿಗಳು
೨. ದುಷ್ಯಂತ	ಪುರುವಂಶದರಸು
೩. ವಿದೂಷಕ	ಅರಸನ ಗೆಳೆಯ (ವಿನೋದಗಾರ)
೪. ಕಂಚುಕಿ	ಸೇವಕ
೫. ಪುರೋಹಿತ	ರಾಜಪುರೋಹಿತ
೬. ಬಾಲಕ	ಭರತ, ದುಷ್ಯಂತತನಯ
೭. ಶಕುಂತಲಾ	ಕಣ್ವರ ಸಾಕುಮಗಳು
೮. ಅನಸೂಯಾ ೯. ಪ್ರಿಯಂವದಾ	ಸಖಿಯರು
೧೦. ಚತುರಿಕೆ ೧೧. ವೇತ್ರವತಿಕೆ	ದಾಸಿಯರು
೧೨. ಗೌತಮಮ್ಮ	ಶಕುಂತಲೆಯ ಸಾಕುತಾಯಿ
೧೩. ಮಾತಲಿ	ಇಂದ್ರನ ಸಾರಥಿ

ಇದಲ್ಲದೆ ಸೇನಾಪತಿ, ಋಷಿಶಿಷ್ಯರು, ದಾಸಿಯರು, ದ್ವಾರ ರಕ್ಷಕರು, ಮೀನುಗಾರ, ಕೊತವಾಲ ಮೊದಲಾದವರು.

ಶಾಕುಂತಲ ನಾಟಕವು

೧ನೆ ಅಂಕವು

ಮಂಗಲಾಚರಣೆಯು

ಪದ ರಾಗ -ಕಲ್ಯಾಣಿ *

ತಳೆದಿಹ ಪರಾತ್ಪರನು ಹರಿ| ನಾಟ್ಯರೂಪಂ ||
ಜಲಮೆಲರುಮಿಳಿಯು | ತಿಳಿವು ಬೆಳಕು ಬಾಂ- ||
ದಳಂಗಳುಂ ತಾನೆಯಾಗಿ ||ಪಲ್ಲ||

ತಿಳಿಯ ತಿಳಿವ ಜಡಮಾದಾ| ಜೀವಮಾದಾ|
ಕಲಿವ ತಾ ಕಲಿಸುವನು | ತಾನೆ ಸೋಲುವ ಗೆಲ್ಲುವ |
ದೀನ - | ನು ತಾ | ಧನಿ ತಾ ಸತಿ ಪತಿ ತಾ |
ದುಃಖ | ಸುಖ | ಬಡುವ ಅಳಿದು ಉಳಿವ
ನಿರುತದೊಳಳುತಲಿ ನಗುತಲಿ ||೧||

ಇಂಥ ಪರಮೇಶ್ವರನು ನಿಮ್ಮನ್ನು ಸಂರಕ್ಷಣೆ ಮಾಡಲಿ.

(ಈ ಪ್ರಕಾರ ಮಂಗಲಾಚರಣೆಯಾದ ಮೇಲೆ ಸೂತ್ರಧಾರನು ಮುಂದಕ್ಕೆ ಬರುತ್ತಾನೆ.)

ಸೂತ್ರಧಾರ : (ಹಿಂದೆ ನೋಡುತ್ತ) ಆರ್ಯಳೆ, ವಸ್ತ್ರಾಭರಣಗಳನ್ನು ಇಟ್ಟುಕೊಂಡು ನೀನು ಸಿದ್ಧಳಾಗಿದ್ದರೆ ತೀವ್ರದಿಂದ ಹೊರಟು ಬಾ.

ನಟಿ : (ಬಂದು) ಆರ್ಯರೆ, ನನ್ನನ್ನು ಏನು ಕಾರಣ ಕರೆಯೋಣವಾಯಿತು? ಯಾವ ಕಾರ್ಯವನ್ನು ಮಾಡತಕ್ಕದು, ಆಜ್ಞಾಪಿಸಬೇಕು.

---

* ಈ ಪದಕ್ಕೆ ಸ್ವರ- ಗಮಪಧನಿಧಾ ಪಮಪಗಮ | ಪಾಮಗರಿಸಾ ||ಸರಿ ಸಗರಿ ಮಗರಿ | ಸಗರಿ ಸಸನಿಧ | ಸರೀರಿಗಾಪಮ | ಧಪಾಮ || ಪಲ್ಲ||

ನಿನಿಧಧ ಪಮಗರಿ | ಗಪಾಗಾಪಾ ಧಸಾ| ರಿಸನಿಧಾ | ಗರಿಸನಿಧ | ಸಾನಿಧಾಪಮ ಗಾರಿಸಾ | ಗಾಗಾ| ಪಾಪಾ | ಧನಿಪಾ | ಧನಿಸರಿಗಾ| ಗಾಗಾ| ಪಾಪಾ | ಧನಿಗಾ | ಧಪಮಗರಿಸಾ| ಸಾಸಾ ರಿರಿ ಗಗ ಮಮ ಪಧ ಪಮ || ೧||

ಸೂತ್ರ : ಆರ್ಯಳೆ, ರಸಜ್ಞತೆಯ ವಿಷಯದಲ್ಲಿ ಮಹಾ ವಿಖ್ಯಾತನಾದ ವಿಕ್ರಮಾದಿತ್ಯನ ಸಭಾಮಂಟಪವಿದು; ಇದರಲ್ಲಿ ಅನೇಕ ವಿದ್ವಜ್ಜನರು ವಿರಾಜಮಾನರಾಗಿದ್ದಾರೆ. ಅವರ ಮುಂದೆ ಈವತ್ತು ಕಾಲಿದಾಸಕವಿಯಿಂದ ರಚಿಸಲ್ಪಟ್ಟಂಥ ಅಭಿಜ್ಞಾನ ಶಾಕುಂತಲವೆಂಬ ನಾಟಕವನ್ನು ನಾವು ಪ್ರಯೋಗಿಸಿ ತೋರಿಸತಕ್ಕದ್ದಿರುತ್ತದೆ; ಕಾರಣ, ಎಲ್ಲ ಪಾತ್ರಗಳು ತಮ್ಮ ತಮ್ಮ ಕೃತಿಯಲ್ಲಿ ಬಹು ಜಾಗ್ರತರಾಗಿರಬೇಕು ಬಲ್ಲೆಯಾ?

ನಟಿ : ಪ್ರಯೋಗಿಸತಕ್ಕಂಥವರು ತಾವು ಮಹಾ ಪ್ರವೀಣರಾಗಿರಲಿಕ್ಕೆ ಯಾವ ಮಾತಿನಿಂದಲೂ ನ್ಯೂನತೆಯಾಗಲರಿಯದು.

ಸೂತ್ರ : (ನಕ್ಕು) ಆದರೂ ನಮ್ಮಷ್ಟಕ್ಕೆ ನಾವು ಪ್ರವೀಣರೆಂದು ತಿಳಿಯಲಿಕ್ಕೆ ಬಾರದು ಬಲ್ಲೆಯಾ?

(ಮಲ್ಲಿಕಾಮಾಲೆ)

ಕಾಂತೆ ಕೇಳೊರೆಯಂತೆ ಗಂತಿಸ ಗಂತದಂತವನಾಂತವರ್ |
ಕುಂತು ಕೇಳುತಲಂತರಂಗದಿ ಸಂತಸಂ ತಳೆದಿಂತು ಪ್ರ||
ತ್ಯಂತರಂ ಬರುವಂತಿಸಂ ತಲೆದೂಗುವಾ ಪರಿಯಂತರಂ |
ನಾಂ ತಳೆರ್ದಿಪೆ ಶಂಕೆ ಸದ್ಗುಣವಂತನಾಂ ತದನಂತರಂ ||

ನಟಿ : ಅಹುದು ಸ್ವಾಮಿ ವಿದ್ವಜ್ಜನರು ಆನಂದದೊಳಗೆ ಮುಳುಗಿ ತಲೆದೂಗದೆ ಹೋದರೆ, ನಮ್ಮಲ್ಲಿದ್ದ ಗುಣಗಳಿಂದ ಏನು ಪ್ರಯೋಜನ? ಒಳ್ಳೇದು, ಮುಂದೆ ನಾನು ಮಾಡತಕ್ಕ ಕಾರ್ಯವು ಯಾವದು?

ಸೂತ್ರ : ಈ ಸಭಾಜನರ ಕರ್ಣೇಂದ್ರಿಯವನ್ನು ಸಂತೋಷಪಡಿಸುವಂಥ ಸಂಗೀತವನ್ನು ಬಿಟ್ಟು ಮತ್ತೇನು ಮಾಡತಕ್ಕದ್ದಿದೆ.

ನಟಿ : ಒಳ್ಳೇದು ಸ್ವಾಮಿ, ಯಾವ ಋತುವನ್ನನುಸರಿಸಿ, ಗಾಯನವನ್ನು ಮಾಡತಕ್ಕದ್ದು?

ಸೂತ್ರ : ಆರ್ಯಳೆ, ವಿಷಯೋಪಭೋಗಕ್ಕೆ ಸರ್ವೋತ್ತಮವಾದಂಥ ಗ್ರೀಷ್ಮಕಾಲವು ಇದೇ ತಲೆದೋರುತ್ತದೆ; ಇದನ್ನೇ ಕುರಿತು ಗಾಯನ ಮಾಡು; ನೋಡಿದೆಯಾ, ಸಾಂಪ್ರತ ಕಾಲವೇನು ರಮಣೀಯವಾಗಿ ತೋರುತ್ತದೆ!

(ಶಾರ್ದೂಲ ವಿಕ್ರೀಡಿತ)

ತೋಯಂ ತುಂಬಿದ ತೋರ ದಿವ್ಯ ಸರಗಳ್ ಕ್ರೀಡಿಂಗೆ ಚೆಲ್ವಾಗಿರಲ್ |
ವಾಯುಂ ಪಾಟಲಪುಷ್ಪದಿಂದೆ ಮಕರಂದಂ ತಾಳ್ದು ಮಂದಾಗೆ ಮೇಣ್ ||
ಆಯಾ ಸೀತಲಮಾಗಿ ವನ್ಯತರಂಗಳ್ ನೀಡಲ್ಕೆ ನಿದ್ರಾಸುಖಂ |
ಸಾಯಂಕಾಲದಿ ಸೃಷ್ಟಿಯೆಷ್ಟು ಸೊಬಗಂ ತಾಂ ತೋರ್ಪುದೇ ಗ್ರಿಷ್ಮದೊಳ್ || ೩ ||

ನಟಿ : ಅಹುದು ಸ್ವಾಮಿ, ನಿಜವಾಗಿದೆ. (ಗಾಯನವನ್ನಾರಂಭಿಸುತ್ತಾಳೆ.)

(ಪದ)*

ದಾಟಿ : "ನಡಿ ಸಖಿ ಕುಂಜಬನದೊಳು ಪೋಗುವ ಮುರಲಿಯ ಕೇಳುವ" ಎಂಬ ಪದದಂತೆ.

ನಡಿಸಖಿ ಕುಂಜಬಲ |ದೊಳು ಪೋಗುವ | ವಿಶ್ರಮಗೂಡುವ ||ಪಲ್ಲ||
ಖರತರ ರವಿಕರ |ದುರಿಗೆ ದಣಿದೆ ಬಲು||
ನೆರಳೊಳು ಕ್ಷಣ ಶ್ರಮ | ಪರಿಹರಿಸುವ ನಡಿ||೧||
ಸುಂದರ ಸರೋವರ |ದಿಂದಲಿ ಬರುವ ಸು- ||
ಗಂಧ ಶೀತಲವಾದ | ಮಂದ ಎಲರಿನೊಳು ||೨||

ಅಲಿಕುಲ ಚುಂಬಿತ | ದಲರಿಲಿ ಬಾಲೆಯ- ||
ರೊಲಿದು ನಲಿದು ಮಾಲೆ|ಗಳನು ರಚಿಸುವಲ್ಲಿ ||೩||

ಸೂತ್ರ : ಆರ್ಯಳೆ, ಸರ್ವೋತ್ಕೃಷ್ಟವಾಗಿ ಗಾಯನ ಮಾಡಿದಿ. ಆಹಾಹಾ! ನಿನ್ನ ಮನೋರಮಾ ಸ್ವರಕಲ್ಪನೆಯಿಂದ ಜನರ ಚಿತ್ತವೃತ್ತಿಗಳೆಲ್ಲ ತಲ್ಲೀನವಾಗಿ ರಂಗಭೂಮಿಯು ಚಿತ್ರದಂತೆ ತಟಸ್ಥವಾಯಿತು ನೋಡಿದೆಯಾ? ಇನ್ನು ಯಾವ ನಾಟಕವನ್ನಾಡಿ ಇವರನ್ನು ತೃಪ್ತಿಪಡಿಸುವ?

ನಟಿ : ಮೊದಲೇ ತಾವು ಹೇಳಲಿಲ್ಲವೆ, ಅಭಿಜ್ಞಾನ ಶಾಕುಂತಲನಾಟಕವೆಂತ?

ಸೂತ್ರ : ಆರ್ಯಳೆ, ಒಳ್ಳೇ ನೆನಪು ಮಾಡಿದಿ. ಈ ಹೊತ್ತು ನಿಜವಾಗಿ ವಿಸ್ಮೃತಿಯಾಗಿತ್ತು ಬಲ್ಲೆಯಾ. ಕಾರಣವೇನಂದರೆ:-

(ಕಂದ)

ನುಡಿಯಿಂ ಪಿಡಿಯಲ್ಬಾರದ|
ಕಡು ಸವಿಗೊಡೆ ನಿನ್ನಯ ಗಾಯನಮೊಯ್ದಿ ವಂಸಂ||
ಪೊಡವಿಪ ದುಷ್ಯಂತನ ನೋ -|
ದಡವಿಗೆ ತಂದೀ ವೇಗದ ಸಾರಂಗದ ಓಲ್ ||೫||

(ಇಬ್ಬರೂ ಹೊರಟುಹೋಗುತ್ತಾರೆ.)

(ಇದು ಪ್ರಸ್ತಾವನೆ)

---

* ಪದದ ಸ್ವರ - ನಿ ಸ ರಿ ರಿ ಗಾ ಮ ಮ ಪಾ| ಮಪಮಗರಿಸ | ರೀಪ್ಪಾಮಪಮಗರಿಸ || ಪಲ್ಲ||
ಮಪ ಮಪ ನಿನಿ ಸಸ | ರೀ ಗ ರಿ ಸ ನೀ ನೀ ಧ ಪ | ಪಾ -ಪಾ -ಪಾ - ಸಾನಿ ಧಪ ಸಾನಿ ಧಪಮಗರಿಸ

ईषदीषच्चुम्बितानि भ्रमरैः सुकुमारकेसरशिखानि
अवतंसयन्ति दयमानाः प्रमदाः शिरीषकुसुमानि ।।४।।

(ಇಷ್ಟರಲ್ಲಿ ಮುಂದೆ ಚಿಗುರಿಯೊಡೆಯುತ್ತದೆ; ಹಿಂದೆ ರಥದಲ್ಲಿ ದುಷ್ಯಂತರಾಜನು ಚಾಪಕ್ಕೆ ಬಾಣವನ್ನು ಹೂಡಿ ಸಾರಥಿ ಸಮೇತನಾಗಿ ಬರುತ್ತಾನೆ.)

ಸಾರಥಿ : ಆರ್ಯನ್, ನೀನು ಈಗ ಹ್ಯಾಗೆ ಶೋಭಿಸುತ್ತಿಯೆಂದರೆ :-

(ಪುಷ್ಪಿತಾ)

ಚಿಗುರೆ ಮುಖಿವ ನೋಡಿ ನಿನ್ನ ನೋಡಲ್ |
ತೆಗೆದು ಬಿಡಲ್ ಕಣೆಗಳ್ಗುಣಕ್ಕೆ ಪೂಡಲ್ ||
ಮೃಗವನುಸರಿಪಂ ಪಿನಾಕಿಯೆಂಬೊಲ್ |
ಮೊಗಮೆಸೆದಿಹುದೆಂತು ಪೇಳ್ವೆ ನಿನ್ನೊಳ್ ||೬||

ಅರಸು : ಆಹಾಹಾ! ಸಾರಥೀ, ಅದು ನಮ್ಮನ್ನು ಹಿಂಬಾಗಿ ನೋಡುವಾಗ್ಗೆ ಏನು ರಮಣೀಯವಾಗಿ ತೋರುತ್ತದೆ, ನೋಡಿದೆಯಾ?

ತಿರುತಿರುಗಿ ಹಿಂನೋಡುತ್ತೋಡುತ್ತಲೆಮ್ಮಯ ತೇರನಂ |
ತುರುಕುತಿಹುದೈ ಪಶ್ಚಾರ್ದಂ ಪೂರ್ವಕಾಯದೊಳಳ್ಕಿ ತಾಂ ||
ಶಪತನಕಂಜುತ್ತೆಂಜಲ್ದರ್ಭೆಮರ್ಧವೆ ಕಚ್ಚಿ ಬಿ- |
ಟ್ಟಿರದೆ ನೆಲದೊಳ್ ಹಾರುತ್ತಾರಂತೆ ಬಾನಿನೋಳಿರ್ಪುದೈ ||೭||

ಎಲೋ ಸೂತಾ, ಈ ಸಾರಂಗವು ನಮ್ಮನ್ನು ಬಹು ದೂರ ತೆಗೆದುಕೊಂಡು ಬಂದಿದೆ; ಪತ್ತರಪತ್ತರವಾಗಿ ಬಂದ ಎರಳೆಯು ದೂರವಾಗಿ ಹೋಯಿತು; ನೋಡಿದೆಯಾ, ಈಗ ಕಾಣುವದಕ್ಕೆ ಸಹ ಪ್ರಯಾಸವಾಗಿದೆ.

ಸಾರಥಿ : ಆಯುಷ್ಮಾನ್, ಈ ಪ್ರದೇಶವು ಬಹು ತಗ್ಗುಮಿಟ್ಟೆಯಾದ ಕಾರಣ ರಶ್ಮಿಗಳನ್ನು ಒಗಿದು ಹಿಡಿದಿದ್ದೆ, ಆದ್ದರಿಂದ ವೇಗವು ಮಂದವಾಗಿ ಎರಳೆ ಬಹಳ ದೂರವಾಯಿತು. ಇನ್ನು ಮೇಲೆ ಸಮನೆಲ ಹತ್ತಿದೆ; ಅದನ್ನು ಸಮೀಪಿಸಲಿಕ್ಕೆ ಕಠಿಣವಿಲ್ಲ.

ಅರಸು : ಹಾಗಾದರೆ ರಶ್ಮಿಗಳನ್ನು ಸೈಲು ಬಿಡು!

ಸಾರಥಿ : ಮಹದಾಜ್ಞಾ (ರಥಕ್ಕೆ ವೇಗವನ್ನು ಕೊಟ್ಟು) ಆಯುಷ್ಮಾನ್, ಈಗ ನೋಡು, ರಶ್ಮಿಗಳನ್ನು ಸೈಲು ಬಿಟ್ಟ ಕ್ಷಣವೇ ಕುದುರೆಗಳು ಹ್ಯಾಗೆ ಓಡುತ್ತವೆ.

(ಅಶ್ವಧಾಟಿ)

ಸೈಲ್ಬಿಟ್ಟಿರಲ್ ರಶ್ಮಿಗಳ್ ಕರ್ಣಗಳ್ ನಿಟ್ಟೆಳಂಗೈದು ಪುಚ್ಛಂ
ನಿಗುರ್ಚುತ್ತೆ ಮೇಣ್|
ಜೋಲ್ಬಿದ್ದ ಗೋಣ್ಗೂದಲಂ ಗಾಳಿಗೇಳುತ್ತೆ ಬೀಳ್ವಂತಿರಲ್
ಮಾರುಪೇರ್ಜಾಪಿನಿಂ ||

ಕಾಲ್ಪಟ್ಟ ಹೆಗ್ಗುರಂಗಳ್ ಬೀಸಲಾ ಪೆಟ್ಟಿನಿಂದೇಳ್ವ ಧೂಳ್
ತಮ್ಮನಂ ಮುಟ್ಟದಂ - |
ತೋಲ್ಪಿದ್ದಿರಲ್ ಸಾಗರಂ ತಾಳ್ವವೇನೀರ್ಪ ಸಾರಂಗದೋಳೀ
ತುರಂಗಂಗಳಂ ||೮||

ಅರಸು : (ಹರುಷದಿಂದ) ಶಾಬಾಸ್, ಶಾಬಾಸ್! ಈ ಕುದುರೆಗಳು ಸೂರ್ಯನ ಕುದುರೆಗಳನ್ನೂ ಅತಿಕ್ರಮಿಸುವವು! ರಥದ ಅತಿಶಯವಾದ ವೇಗದಿಂದ ಏನು ಚಮತ್ಕಾರವಾಗುತ್ತದೆ ನೋಡಿದೆಯಾ?

(ಮದಿರಾ)*

ಚಕ್ಷುಗಳೀಕ್ಷಿಸದಿರ್ಪತಿಸೂಕ್ಷ್ಮತೆ ಬಿಟ್ಟು ತೊಟ್ಟುರೆ ವಿಶಾಲತೆಯನ್ನೊಂ-|
ದೀಕ್ಷಣದೊಳ್ ತ್ವರದಿಂ ಭರದಿಂದೆದಿರ್ಬರ್ಪುತಿರ್ಪ ಗಿಡಗಂಟೆಯ ನೋಡೆ-||
ಲ್ಲಾ ಕ್ಷಿತಿಯುಂ ಪರಿಯಲ್ ಕೆಲದೋಳಿಹ ವಕ್ರ ಚಕ್ರಗತಿಯಿಂ ಸರಳಾಗಲ್ |
ಪಕ್ಷಿಗೆ ಸಾಕ್ಷಿಯ ತೇರಿಗೆ ದೂರವದೇನು ಕಾಣಿಸದು ಸಾರಥಿಯೇ ಕೇಳ್ ||೯||

ಸಾರಥಿ : ನೋಡು ಈಗ ಕೈಪಾಡಿನಲ್ಲಿ ಬಂದಿದೆ.

ಅರಸು : (ಗುರಿ ಇಡುತ್ತಾನೆ.)

(ಇಷ್ಟರಲ್ಲಿ ಹಿಂದೆ ಶಬ್ದವಾಗುತ್ತದೆ.) ಹೇ ರಾಜನ್, ಹೇ ರಾಜನ್, ಆಶ್ರಮದೊಳಗಿನ ಚಿಗುರೆ ಕಂಡೆಯಾ? ಹೊಡೆಯತಕ್ಕದ್ದಲ್ಲ! ಹೊಡೆಯತಕ್ಕದ್ದಲ್ಲ!

ಸಾರಥಿ : (ಕಿವಿಗೊಟ್ಟು ಕೇಳಿ) ದೊರೆಯೇ, ನಮ್ಮ ಬಾಣದಳತೆಯಲ್ಲಿಯೆ ಚಿಗುರೆ ಬಂದಿದೆ; ಪರಂತು ನಡುವೆ ಮೂವರು ತಪಸ್ವಿಗಳು ಬಂದು ನಿಂತಿದ್ದಾರೆ.

ಅರಸು : (ಗಾಬರಿಗೊಂಡು)ಹಾಗಾದರೆ ರಥವನ್ನು ನಿಲ್ಲಿಸು. ಬೇಗ ನಿಲ್ಲಿಸು!

ಸಾರಥಿ : ಮಹದಾಜ್ಞಾ. (ರಥವನ್ನು ನಿಲ್ಲಿಸುತ್ತಾನೆ.)
(ಇಷ್ಟರಲ್ಲಿ ಮೂವರು ಋಷಿ ಶಿಷ್ಯರು ಬರುತ್ತಾರೆ.)

ಋಷಿ : ಹೇ ರಾಜನ್, ಆಶ್ರಮದೊಳಗಣ ಚಿಗುರೆ ಕಂಡೆಯಾ? ಹೊಡೆಯತಕ್ಕದ್ದಲ್ಲ. ನೋಡು:-

(ಮಾಲಿನೀ.)

ಅರಳುಗಳಲಿ ಕಿಚ್ಚಂ ಚುಚ್ಚಿದೊಲ್ ವಜ್ರಪೋಲ್ವ |
ಸರಳನೆಸೆಯ ಬೇಡ್ವೈ ಕೋಮಲಾಂಗಕ್ಕೆ ಚೆಲ್ವ||
ಎರಳೆಯ ಮೃದುಜೀವಕ್ಕಲ್ಲ ನಿನಸ್ತ್ರ ವ್ಯರ್ಥ |
ದುರುಳರಿನುರೆ ಪೀಡಾ ಪಟ್ಟರಂ ಪಾಲನಾರ್ಥ ||೧೦||

---

* ಮದಿರಾ ವೃತ್ತದ ಲಕ್ಷಣಕ್ಕೆ ಈ ವೃತ್ತದ ಲಕ್ಷಣವು ಸರಿ ಹೋಗುವುದಿಲ್ಲ.

ಅದ್ದರಿಂದ ಬಾಣವನ್ನು ಹಿಂದಕ್ಕೆ ತೆಗೆ ಕಂಡೆಯಾ. ನಿನ್ನಂಥ ಧರ್ಮಿಷ್ಠನಾದ ರಾಜನಿಗೆ ಇದು ಉಚಿತವಲ್ಲ.

ಅರಸು : ಇಕ್ಕೋ ನೋಡಿ, ಹಿಂದಕ್ಕೆ ತೆಗೆದಿದ್ದೇನೆ. (ಬಾಣವನ್ನು ತೆಗೆದು ಬತ್ತಳಿಕೆಯಲ್ಲಿ ಸೇರಿಸುತ್ತಾನೆ.)

ಋಷಿ : ಭಾಪುರೆ ರಾಜನ್. ಪುರವಂಶ ಪ್ರದೀಪನಾದಂಥ ಪುರುಷನಿಗೆ ಇದು ಯೋಗ್ಯವೇ ಸರಿ.

|ಕಂದ|| ಪುರವಂಶ ದೀಪಕನೆ ನಿನ – |
ಗಿರುತಿಹದುಚಿತಮಿದೇ ನಡತೆಯು ಕೇಳ್ಇನ್ನ ||
ಸರಿಗುಣತಾಳುವ ಸುಂದರ |
ತರಪುತ್ರಂ ಪುಟ್ಟಿ ಚಕ್ರವರ್ತಿಯೆನಿಸುವಂ |೧೧|| *

ಉಳಿದ
ಇಬ್ಬರು : (ಎರಡೂ ಕೈಗಳನ್ನು ಮುಂದಕ್ಕೆ ಚಾಚಿ) ಸರ್ವಥೈವ ಚಕ್ರವರ್ತಿ ಪುತ್ರನ ಪ್ರಾಪ್ತಿಯಾಗಲಿ.

ಅರಸು : ತಥಾಸ್ತು. ತಮ್ಮ ಆಶೀರ್ವಾದವನ್ನು ನಾನು ಶಿರಸ್ಸಿನಲ್ಲಿ ಧಾರಣ ಮಾಡಿದ್ದೇನೆ.

ಋಷಿ : ಹೇ ರಾಜನ್, ಇಲ್ಲಿಂದ ಸಮೀಪದಲ್ಲಿಯೇ ಮಾಲಿನೀತೀರದಲ್ಲಿ ಕಣ್ವ ಮಹಾಮುನಿಗಳಾಶ್ರಮವುಂಟು; ಎರಡನೆಯ ರಾಜಕಾರ್ಯಕ್ಕೆ ಪ್ರತಿಬಂಧವಾಗದಿದ್ದರೆ ತಾವು ಅಲ್ಲಿಗೆ ಹೋಗಿ ಅತಿಥಿಸತ್ಕಾರವನ್ನು ಸ್ವೀಕರಿಸಬಹುದು; ನಾವು ತಮ್ಮ ಸಂಗಡ ಬರುತಿದ್ದೆವು, ಆದರೆ ಗುರುಗಳ ಆಜ್ಞೆಯ ಮಟ್ಟಿಗೆ ಸಮಿಧಾ ತರುವ ನಿಮಿತ್ತ ಹೊರಟಿದ್ದೇವೆ, ಹೇ ಭೂಪತೇ, ಅಲ್ಲಿಗೆ ಹೋದಲ್ಲಿ ಇನ್ನೊಂದು ಮಾತು ತಮಗೆ ಕಂಡು ಬಂದೀತು.

(ವಸಂತತಿಲಕಾ)

ಸರ್ವಂ ತಪೋಧನರ ಕರ್ಮವದೈ ಸುಗಮ್ಯಂ |
ನಿರ್ವಿಘ್ನಮಾಗಿ ನಡೆದಿರ್ಪುದು ನೋಡು ರಮ್ಯಂ ||
ಮೌರ್ವೀಕಿಣಾಂಕ ಭುಜದಿಂ ತಿಳಿ ಇಂದು ನಿನ್ನಾ|
ಉರ್ವೀಪ್ರಜಂಗಳು ಸುರಕ್ಷಿತರೆಷ್ಟಿದನ್ನಾ |೧೨||

ಅರಸು : ಕುಲಗುರುಗಳಾದ ಕಣ್ವಮಹಾಮುನಿಗಳಾಶ್ರಮವಿಲ್ಲಿಂದ ಸಮೀಪವಿರುವದೋ?

ಋಷಿ : ಅಹುದು ಸಮೀಪದಲ್ಲಿಯೇ ಉಂಟು; ನೋಡು ಇಲ್ಲಿಂದ ಸಹ ಕಾಣಿಸುತ್ತದೆ.

---

* ||ಶ್ಲೋಕ|| ಜನ್ಮ ಯಸ್ಯ ಪುರೋರ್ವಂಶೇ | ಯುಕ್ತರೂಪಮಿದಂ ತವ |
ಪುತ್ರಮೇವಂ ಗುಣೋಪೇತಂ | ಚಕ್ರವರ್ತಿಯಸಮಾಪ್ನುಹಿ |೧೧||

ಅರಸು : ಆಶ್ರಮದಲ್ಲಿ ಮುನಿವರ್ಯರಿರುವರೋ ಈಗ?

ಋಷಿ : ಇದೇ ಅವರು ತಮ್ಮ ಮೋಹದ ಕನ್ನಿಕೆಯಾದ ಶಕುಂತಲೆಯನ್ನು ಅತಿಥಿ ಸತ್ಕಾರಾರ್ಥವಾಗಿ ಆಶ್ರಮದಲ್ಲಿಟ್ಟು ಅವಳ ದೈವವು ಪ್ರತಿಕೂಲವಾಗಿರುವ ಕಾರಣ ಶಾಂತಿಯನ್ನು ಮಾಡುವಗೋಸ್ಕರ ಸೋಮತೀರ್ಥಕ್ಕೆ ಹೊರಟು ಹೋಗಿದ್ದಾರೆ.

ಅರಸು : ಒಳ್ಳೇದು, ಅವಳ ದರ್ಶನವೆ ತೆಗೆದುಕೊಂಬುವ; ಅವಳು ನನ್ನ ಭಕ್ತಿಯನ್ನು ಕಂಡು ಮಹರ್ಷಿಗಳಿಗೆ ತಿಳಿಸ್ಯಾಳು.

ಋಷಿ : ಇನ್ನು ನಾವು ನಮ್ಮ ಕಾರ್ಯಕ್ಕೆ ಹೋಗುತ್ತೇವೆ. (ಎಂದು ಆ ಮೂವರು ಋಷಿಶಿಷ್ಯರು ಹೊರಟುಹೋಗುತ್ತಾರೆ.)

ಅರಸು : ಸಾರಥಿಯೆ, ರಥವನ್ನು ನಡಿಸು. ಪುಣ್ಯಾಶ್ರಮದರ್ಶನದಿಂದ ಆತ್ಮವನ್ನು ಪವಿತ್ರವಾಗಿ ಮಾಡುವ.

ಸಾರಥಿ : ಮಹದಾಜ್ಞಾ. (ಪುನಃ ರಥವನ್ನು ನಡಿಸುತ್ತಾನೆ.)

ಅರಸು : (ಸುತ್ತಲು ನೋಡಿ) ಎಲೋ ಸಾರಥಿಯೆ, ನೋಡಿದೆಯಾ, ಇವೆಲ್ಲಾ ಚಿಷ್ನೆಗಳನ್ನು; ತಪಸ್ವಿಗಳಾಶ್ರಮಸ್ಥಾನವೆಂದು ಹೇಳದೆಲೆ ತೋರಿಬರುತ್ತದೆ ಇಲ್ಲಿ.

ಸಾರಥಿ : ಅದು ಹ್ಯಾಗೆ?

ಅರಸು : ಇಕ್ಕೋ, ನಿನಗೆ ಕಾಣುವದಿಲ್ಲವೇ?

|| ಚಂಪಕಮಾಲಾ ||

ಗಿಳಿಗಳ ಗೂಡಿನಿಂ ಗಿಡದ ಬೊಡ್ಡೆಗಳೊಳ್ ಗಳಿತಾಗಿರಲ್ಕೆ ಕಾ- |
ಳ್ಗಳು ಬಲಿದಿಂಗುದಿಂಗಳನೆ ಜರ್ಜಿದ ಕಲ್ಗಳು ಕಪ್ಪುಗೊಂಡಿರ- ||
ಲ್ಕೆಳೆ ಎರಳೆಂಗಳಿಲ್ಲುಲಿವಿಗಂಜದೆ ಶಾಂತತೆಯಿಂದ ಪೋಗೆ ವ- |
ಲ್ಕಲೆಯೊಗೆತಂದು ದಾರಿ ಜಲಧಾರೆಗೊಳಲ್ ತಿಳಿವೆಂ ಮುನಿಸ್ಥಳಂ ||೧೩||

ಮತ್ತೂ ನೋಡಿದೆಯಾ:-

|| ಉತ್ಪಲಮಾಲಾ ||

ಸ್ವಚ್ಛತೆವೆತ್ತಲರ್ನಡೆಯಿ ಕಾಲಿವೆಗಳ್ ಪೊಳೆಯುತ್ತೆ ದಂಡೆಯೊಳ್ |
ಸಿಚ್ಚದಿ ವೃಕ್ಷಮೂಲಗಳನುಂ ತೊಳೆಯಲ್ಕೆಳೆ ಪಲ್ಲವಂಗಳಾ ||
ಪಚ್ಚನೆ ಬಣ್ಣ ಹೋಮಘೃತಧೂಮದಿ ಕೆಟ್ಟಿರೆ, ಕೊಯ್ಲು ದರ್ಭದೊಳ್ |
ಬೆಚ್ಚದೆ ಶಂಕೆಬಿಟ್ಟೆಳೆ ಮೃಗಂಗಳು ಮೇಯಲಿದಾಶ್ರಮಸ್ಥಳಂ ||೧೪||

ಸಾರಥಿ : ಸೈ ಸೈ!

ಅರಸು : (ಆಶ್ರಮದ ಹತ್ತರ ಹೋಗಿ) ಆಶ್ರಮವಾಸಿಗಳಾದ ಮುನಿಜನರುಗಳಿಗೆ ನಮ್ಮಿಂದ ಉಪದ್ರವವಾಗಬಾರದು ಬಲ್ಲೆಯಾ. ಇಲ್ಲಿಯೇ ರಥವನ್ನು ನಿಲ್ಲಿಸು; ನಾನು ಕೆಳಗೆ ಇಳಿಯುತ್ತೇನೆ.

ಸಾರಥಿ : (ರಥವನ್ನು ನಿಲ್ಲಿಸಿ) ಇಳಿಯಬೇಕು ಜೀಯಾ.

ಅರಸು : (ರಥವನ್ನು ನಿಲ್ಲಿಸಿ) ಇಳಿಯಬೇಕು ಜೀಯಾ.

ಅರಸು : (ರಥದಿಂದಿಳಿದು) ಸಾರಥಿಯೆ, ಈ ಸ್ಥಾನದಲ್ಲಿ ಒಣಜಂಭವು ಕೆಲಸದ್ದಲ್ಲ. ಋಷಿಗಳಾಶ್ರಮದಲ್ಲಿ ಸಾಧಾರಣವಾದ ವಸ್ತ್ರಾಲಂಕಾರಗಳಿಂದೇ ಹೋಗ ತಕ್ಕದ್ದು; ಕಾರಣ, ಇವನ್ನು ತೆಗೆದುಕೋ(ಎಂದು ಮೈ ಮೇಲಿನ ಆಭರಣಗಳನ್ನೂ ಧನುಷ್ಯ ಬಾಣಗಳನ್ನೂ ಸಾರಥಿಯ ಕೈಯಲ್ಲಿ ಕೊಡುತ್ತಾನೆ.) ಸಾರಥಿಯೇ, ಋಷಿಗಳ ದರ್ಶನವನ್ನು ನಾನು ತೆಗೆದುಕೊಂಡು ಬರುವ ತನಕ ಕುದುರೆಗಳಿಗೆ ನೀರು ಕುಡಿಸಿ ಚೆನ್ನಾಗಿ ಅವುಗಳ ಮೈಯನ್ನು ತೊಳೆದುಕೊಂಡು ಬಾ ಹೋಗು.

ಸಾರಥಿ : ಒಳ್ಳೇದು, (ಎಂದು ರಥವನ್ನು ತೆಗೆದುಕೊಂಡು ಹೋಗುತ್ತಾನೆ.)

ಅರಸು : (ಅತ್ತಿತ್ತ ತಿರುಗಿ ನೋಡುತ್ತ) ಆಶ್ರಮದಲ್ಲಿ ಸೇರಲಿಕ್ಕೆ ಇದೇ ದಾರಿಯೇ ಕಾಣುತ್ತದೆ; ಹೀಗೆ ಹೋಗುವ, (ಎಂದು ಆಶ್ರಮದಲ್ಲಿ ಹೋಗುತ್ತಾನೆ. ಅಷ್ಟರಲ್ಲಿ ಆತನ ಬಲ ಭುಜವು ಹಾರುತ್ತದೆ. ಅದನ್ನು ಕುರಿತು ಮಾತನಾಡುತ್ತಾನೆ.)

(ಕಂದ)

ಶಾಂತವಿದಾಶ್ರಮ ಪದವಿ – |
ನ್ನೆಂತುಂಟಲ್ಲಿ ಫಲಮೇನಿಹದು ಬಲದ ಭುಜಂ ||
ಇಂತ್ಯಾತಕೆ ಪಾರುವದಿ – |
ನ್ನೆಂತಲ್ಲಿಯಾದರುಂ ತಪ್ಪುವದೆ ಭವಿಷ್ಯಂ ||೧೫ ||

(ಇಷ್ಟರಲ್ಲಿ ಹಿಂದೆ ಶಬ್ದವಾಗುತ್ತದೆ.)

(ಗೆಳತಿಯರಾ, ಹೂವಿನ ಗಿಡಗಳಿಗೆ ನೀರು ಚಿಮ್ಮಡಿಸುವ ಬನ್ನಿರೆ.)

ಅರಸು : (ಆಲಿಸಿ) ಓಹೋ, ಈ ಉಪವನದ ದಕ್ಷಿಣ ದಿಕ್ಕಿನಲ್ಲಿ ಕೋಮಲವಾದ ಎಳೆ ಹೆಣ್ಣಿನ ಸ್ವರವು ಕೇಳಿಬರುತ್ತದೆ. ಅತ್ತಲೇ ಹೋಗುವ. (ಎಂದು ನಡೆಯಲಾರಂಭಿಸುತ್ತಾನೆ. ಇಷ್ಟರಲ್ಲಿ ಶಕುಂತಲಾ ಎಂಬವಳು ಇಬ್ಬರು ಸಖಿಯರಿಂದ ಕೂಡಿಕೊಂಡು ಕೆಳಗೆ ಬರೆದ ಪದವನ್ನು ಹಾಡುತ್ತ ಬರುತ್ತಾಳೆ.)

(ಪದ) *

ದಾಟಿ - "ಯಾಕೆ ತಡಾ ಸುಂದರಾಂಗಾ| ನ್ಯಾಕೆ ಕರೆತಾರೆ|| ಬೇಕಾದಂಥಾ ವಸ್ತ್ರಾನೀವೆ ಬ್ಯಾಗ ಪೋಗಿಬಾರೆ" || ಎಂಬ ಪದದಂತೆ.

ನೀರು ಚಿಮ್ಮಡಿಸುವಾ | ಬನ್ನಿರೆ ಬನದೊಳು ||ಪಲ್ಲ ||

ಸಾರಸಸಖಿಸುರೆ ಮೀರಿದ ಬಿಸಿಲೊಳು ||ಅನುಪಲ್ಲ ||

ಜುಳು ಜುಳು ಹರಿಯುವ | ಝರಿಗಳ ನಿರ್ಮಲ|
ಜಲಗಳು ಪೊಳೆವವು | ಕಲಶವ ತುಂಬಿ ಕೋ-|
ಮಲಕಿಸಲಯಗಳು | ನಳನಳಿಸುವ ಓಲು ||೧ ||
ಶಾವಂತಿಗೆ ಮೊಲ್ಲೆ| ಸಾಲಿಡಲೆಳೆಯೆಳೆ|
ಹೂವಿನ ಗಿಡಗಳು| ಹಾದಿಯ ಕೆಲದೊಳು|
ತೀವಿರೆ ಮೊಗ್ಗೆಗಳು| ತೆರೆದರಳುವ ಓಲು ||೨ ||
ತಳಿ ಹಾಕಿರೆ ಬನ - |ದೊಳು ಬಿಳಿಮಳಲಿನ|
ಥಳಥಳಿಸುವ ಪಥ- | ದೊಳು ಬಲು ದಣಿಯುತ |
ನೆಳಲೊಳತಿಥಿಗಳು| ಬರಲು ಸುಖಿಪ ಓಲು ||೩||

ಗೆಳತಿಯರಾ ಇಲ್ಲಿ ಬನ್ನಿರೇ, ಇಲ್ಲಿ ಬನ್ನಿ.

ಅರಸು : (ಸ್ವಲ್ಪ ಮುಂದಕ್ಕೆ ಹೋಗಿ) ಓಹೋ! ಇವರು ತಪಸ್ವಿಗಳ ಕನ್ನಿಕೆಯರು: ತಮ್ಮ ತಮ್ಮ ಶಕ್ತ್ಯಾನುಸಾರ ಸಣ್ಣ ಸಣ್ಣ ಕಲಶಗಳನ್ನು ತೆಗೆದುಕೊಂಡು ಹೂವಿನ ಗಿಡಗಳಿಗೆ ನೀರು ಚಿಮ್ಮಡಿಸುವೆವೆಂದು ಬರುತ್ತಾರೆ. (ಚೆನ್ನಾಗಿ ನೋಡಿ) ಆಹಾ! ಏನು ಮಧುರವಯ್ಯಾ ಇವರ ದರ್ಶನ!

(ಪ್ರಹರ್ಷಿಣೀ)

ಅಂತಸ್ತಂಗಳಲಿಹ ಚೆಲ್ವ ಪೆಣ್ಗಳಿಂಗೆ-|
ಲ್ಲಿಂತಾ ಕಾಂತಿಯು ಗುಣದಿಂದೆ ಗೆಲ್ದವಯ್ಯ||
ಕಾಂತಾರಂ ಪಡೆದಿಹ ಬಳ್ಳಿ ತೋಟದೊಳ್ ಬಲ್|
ಚಿಂತಾಕಷ್ಟದಿ ಬೆಳಸಿರ್ಪವನ್ನೆ ಸೈ ಸೈ ||೧೭||

ಒಳ್ಳೇದು, ಇಲ್ಲಿಯೇ ಈ ವೃಕ್ಷದ ನೆರಳಿನಲ್ಲಿ ಕುಳಿತು ಅವರು ಏನೇನು ಮಾತುಗಳಾಡುವರೊ ಕೇಳುವ. (ಎಂದು ಅವರನ್ನು ಒಂದೇ ದೃಷ್ಟಿಯಿಂದ ನೋಡಿಕೊಳ್ಳುತ್ತಿರುತ್ತಾನೆ.)

---

*ಈ ಪದ್ಯ ಸಂಸ್ಕೃತ ಮೂಲದಲ್ಲಿ ಇಲ್ಲ.

(ಆಮೇಲೆ ಶಕುಂತಲೆಯೂ ಸಖಿಯರೂ ಹೂವಿನ ಗಿಡಗಳಿಗೆ ನೀರು ಚಿಮ್ಮಡಿಸುತ್ತ ತಿರುಗಾಡುತ್ತಾರೆ.)

ಶಕುಂ : ಗೆಳತಿಯರಾ, ಇಲ್ಲಿ ಬನ್ನಿರೆ.

ಒಬ್ಬ
ಸಖಿಯು : ಸಖಿಯೇ ಶಕುಂತಲಾ, ಕಾಶ್ಯಪ* ತಾತನ ಮಮತೆ ನಿನ್ನಲ್ಲಿಗಿಂತಲೂ ತೋಟದ ಗಿಡಗಳಲ್ಲಿ ಹೆಚ್ಚಾಗಿ ತೋರುತ್ತದೆ.

ಶಕುಂ : ಅನಸೂಯಾ, ಅದು ಯಾವ ಮಾತಿನ ಮೇಲೆ?

ಅನ : ಮಲ್ಲಿಗೆ ಹೂವಿನಂತೆ ನಿನ್ನ ಕೋಮಲವಾದ ಕಾಯವಿರಲಿಕ್ಕೆ ನಿನ್ನನ್ನು ಈ ಗಿಡಗಳಿಗೆ ನೀರು ಹಾಕಲಿಕ್ಕೆ ಹಚ್ಚಿದ್ದಾನೆ.

ಶಕುಂ : ಅನಸೂಯಾ, ನಾನು ಕೇವಲ ತಾತನ ಹೇಳಿಕೆಯಿಂದ ಈ ಕೆಲಸವನ್ನು ಮಾಡುತ್ತೇನಂದಲ್ಲ. ಈ ಗಿಡಗಳು ನನ್ನ ಅಣ್ಣತಮ್ಮಂದಿರೆಂದು ತಿಳಿಯುತ್ತೇನೆ. (ಎಂದು ನೀರು ಚಿಮ್ಮಡಿಸುತ್ತ ಮುಂದಕ್ಕೆ ಬರುತ್ತಾಳೆ.)

ಇನ್ನೊಬ್ಬ
ಸಖಿಯು : ಸಖಿಯು ಶಕುಂತಲಾ, ಬೇಸಿಗೆಯಲ್ಲಿ ಹೂಗೊಡುವ ಗಿಡಗಳಿಗೆಲ್ಲಾ ನೀರಾಯಿತು; ಇನ್ನು ಮೇಲೆ ಇತ್ತಲಾಗಿನ ಗಿಡಗಳಿಗೆ ಯದ್ಯಪಿ ಹೂವಿನ ಭರ ತೀರಿದ್ದರೂ ನೀರು ಚಿಮ್ಮಡಿಸುವ: ಭೇದವಿಲ್ಲದೆ ಎಲ್ಲವಕ್ಕೂ ಸಮನಾಗಿ ನೀರು ಹಾಕುವದುಚಿತವಾಗಿದೆ.

ಶಕುಂ : ಹೌದವ್ವ (ಎಂದು ಪುನಃ ನೀರು ಚಿಮ್ಮಡಿಸಲಾರಂಭಿಸುತ್ತಾಳೆ.)

ಅರಸು : ಓಹೋ! ಕಣ್ವ ಋಷಿಗಳ ಕನ್ನಿಕೆ ಶಕುಂತಳಾ ಎಂಬವಳು ಇವಳೇ ಕಾಣುತ್ತಾಳೆ; ಅಯ್ಯೋ! ಕಣ್ವ ಋಷಿಗಳು ದೊಡ್ಡವರು ನಿಜ; ಆದರೂ ಅವರಿಗೆ ಯುಕ್ತಾಯುಕ್ತ ವಿಚಾರವಿಲ್ಲ; ಇಂಥ ಹೆಣ್ಣನ್ನು ಆಶ್ರಮ ಕಷ್ಟಕ್ಕೆ ಹಚ್ಚಬಹುದೆ!

(ವಂಶಸ್ಥ)

ಇದೈ ವಪುಂ ತಾಂ ಮೊದಲೇ ಮನೋಹರಂ |
ಇದಕ್ಕೆ ಮೇಣ್ ತಾಪಸಗಪ್ಪ ದುಸ್ತರಂ ||
ಅದೃಷ್ಟಿಯಿಂ ಕೊಯ್ವರೆ ಬನ್ನಿ ರುಕ್ಷಮಂ |
ಮೃದುತ್ವವೆತ್ತುತ್ಪಲಪತ್ರಧಾರದಿಂ ||೧೮||

ಈ ವೃಕ್ಷದ ಮರೆಗೆ ನಿಂತು ಇವಳನ್ನು ಚೆನ್ನಾಗಿ ನೋಡುವ. (ಗಿಡದ ಮರೆಗೆ ನಿಲ್ಲುತ್ತಾನೆ.)

---

* ಕಾಶ್ಯಪನೆಂದರೆ ಕಣ್ವ ಋಷಿಯು.

ಶಕುಂ : ಸಖಿಯೆ ಅನಸೂಯಾ, ನೋಡೆ, ಪ್ರಿಯಂವದಾ ನನ್ನ ಕುಪ್ಪುಸವನ್ನು ಎಷ್ಟು ಬಿಗಿದು ಕಟ್ಟಿದ್ದಾಳೆ! ನನ್ನ ಮೈಯೆಲ್ಲಾ ನೋಯುತ್ತದೆ; ಸ್ವಲ್ಪ ಸೈಲು ಮಾಡೆ.

ಅನಸೂಯಾ: ಹೌದೆ! ಎಷ್ಟು ಬಿಗಿತಾಗಿ ಕಟ್ಟಿದ್ದಾಳೆ! (ಎಂದು ಸೈಲು ಮಾಡುತ್ತಾಳೆ.)

ಪ್ರಿಯಂ : (ನಗುತ್ತ) ನಿನ್ನ ಪಯೋಧರಗಳು ವಿಸ್ತೃತವಾಗಲಿಕ್ಕೆ ಮೆಲ್ಲಮೆಲ್ಲನೆ ಹೆಚ್ಚಾಗುವ ನಿನ್ನ ತಾರುಣ್ಯವೇ ಕಾರಣವಾಗಿದೆ; ಅದರ ಮೇಲೆ ಕೋಪಿಸು, ನನ್ನ ಮೇಲೆ ಯಾಕೆ?

ಅರಸು : (ತನ್ನೊಳಗೆ) ಪ್ರಿಯಂವದೆ ನಿಜವಾಗಿ ನುಡಿಯುತ್ತಾಳೆ. ಇವಳ ವಸ್ತ್ರಾಭರಣಗಳು ಇಷ್ಟು ಬಡತನದವುಗಳಾಗಿದ್ದರೂ ನಿಜ ಸ್ವರೂಪವು ಮಾಜುವದಿಲ್ಲ.

*||ಪದ ||

ದಾಟಿ : "ಮದನ ಬಾಣಾಕ್ಷಿ ಮೋಹವಿರಲೆ ಮಂಜುಳ ಸುಳಿಗರುಳೆ" ಎಂಬ ಪದದಂತೆ.

ಮೋಹದ ವಸ್ತು ತಾ ಮಾಜಲರಿದು| ಮೋಹವೇ ಬಡಿಸುವದು ||ಪಲ್ಲ||
ಬಾಹು ಬಿಗಿಯೆ ಕೆಂ- |ದಾಹತವನು ತೊ- |
ಟ್ಟೀಹುಡಗಿಯೊಳ್ಮನ | ಸ್ನೇಹ ಬಯಸುವದು ||ಅನುಪಲ್ಲ||

ಎಳೆವೆಣ್ಣು ತಾಳ್ದಿರುವ ಬಡವಸನ | ಅಲ್ಲಿವಳಿಗೆ ಹದನ |
ತೊಳಗುವ ಚಿನ್ನದ ಮೈಬಣ್ಣ| ಅಡಗಿದೆ ಬಲು ತಿಣ್ಣ||
ಮೊಲೆಗಳ ಚೆಲ್ವಿಕೆ| ಮುಳುಗಲರಿದು ಪೂ- |
ಗಳ ಗುಂಚ್ಛದ ಮ್ಯಾ- | ಲೆಲೆಯನಿಕ್ಕಿದ ವೊಲು ||೧||

ಶರೀರದ ಸೊಂಪೀ ಚೈಲದಿ ಮುರಿಯೆ | ಫಣಿಕಿರಿಜೆವರೊಡೆಯೆ |
ಕರಮುಖಪಾದಗಳು ತೆರೆಯೆ| ಈ ಉಡುಗಿಯು ತಿಳಿಯೆ||
ಸರಸಿಯೊಳಗೆ ತವೆ | ಬಿರಿದ ಕಮಲ ಸು- |
ತ್ತಿರುವ ಶೈವಲದ | ಪರಿಯಲೊಪ್ಪಿಹುದೈ ||೨||

ತರುಣಿ ತಾನುಟ್ಟ ವಸ್ತ್ರವು ಮೈಯ| ದೊರಕಿಸುವದು ಸಿರಿಯ |
ಅರಳುಗಳಿಂ ದೇಂಟಿಗೆ ಸೌಂದರಿಯಾ|| ಬರುವದು | ನಿಶಿಪತಿಯ ||
ಕರಿಗುರುತವದೊ - | ಪ್ಪಿರುವದಲ್ಲದೆ ಕೆಡ-|
ಲರಿದು ಮೊದಲೆ ತಾ| ಸರಸವಿರಲು ನೆರೆ ||೩||

---

* सरसिजमनुविद्धं शैवलेनापि रम्यं ।
मलिनमपि हिमांशोर्लक्ष्म लक्ष्मीं तनोति।।
इयमधिकमनोज्ञा वल्कलेनापि तन्वी ।
किमिव हि मधुराणां मंडनं नाकृतीनाम् ।।

ಶಕುಂ : (ಎದುರಿನಲ್ಲಿ ನೋಡುತ್ತ) ಸಖಿಯೇ, ಈ ಕೇಸರೀವೃಕ್ಷದ ಪಲ್ಲವಗಳು ಸ್ವಲ್ಪ ಗಾಳಿಯಿಂದ ಮೆಲ್ಲಮೆಲ್ಲನಲ್ಲಾಡುತ್ತವಷ್ಟೆ; ಅದು ನನ್ನನ್ನು ಬಟ್ಟಿನಿಂದ ಸನ್ನೆ ಮಾಡಿ ತೀವ್ರದಿಂದ ಕರೆಯುತ್ತದೆಂಬಂತೆ ಕಾಣಿಸುತ್ತದೆ. ಅದರ ಬಳಿಯಲ್ಲಿ ನಾನು ಹೋಗುತ್ತೇನೆ. (ಎಂದು ಆ ವೃಕ್ಷದ ಹತ್ತರ ಹೋಗಿ ನಿಲ್ಲುತ್ತಾಳೆ.)

ಪ್ರಿಯಂ : ಸಖಿಯೇ, ಅಲ್ಲಿಯೇ ಒಂದು ಕ್ಷಣ ಹೊತ್ತು ನಿಲ್ಲು.

ಶಕುಂ : ಯಾತಕ್ಕೆ?

ಪ್ರಿಯಂ : ಆ ವೃಕ್ಷಕ್ಕೆ ನೀನೊಂದು ಬಳ್ಳಿಯೇ ಹಬ್ಬಿರುವಂತೆ ಕಾಣಿಸುತ್ತಿ; ಆದ್ದರಿಂದ ಅದು ಬಹು ರಮಣೀಯವಾಗಿ ತೋರುತ್ತದೆ.

ಶಕುಂ : ಪ್ರಿಯಂಪದಾ ಎಂಬ ಹೆಸರು ನಿನಗೆ ಒಪ್ಪುತ್ತದೆ; ನೀನು ಸವಿಮಾತನಾಡುವವಳು ನಿಜ.

ಅರಸು : (ತನ್ನೊಳಗೆ) ಪ್ರಿಯಂವದೆ ಯಥಾಸ್ಮಿತ ಮಾತನಾಡಿದಳು.

(ಪುಷ್ಪಿತಾಗ್ರಾ)*

ಕಿಸಲಯಗಳ ಪೋಲ್ವ ಕೆಂದುಂಟಿಗಳ್ |
ಪೊಸ ಎಳೆಬಳ್ಳಿಯ ಟೊಂಗೆಯಂತೆ ಕೈಗಳ್ ||
ಕುಸುಮಕೆ ಸಮ ಲೋಭಿಸಲ್ಕೆ ಯೋಗ್ಯಂ |
ಎಸೆಯುವದೀಕೆಯ ಯೌವನಂ ಸುಭೋಗ್ಯಂ ||

ಅನಸೂಯಾ: ಸಖಿಯೇ ಶಕುಂತಲಾ, ಕೇಸರೀವೃಕ್ಷಕ್ಕೆ ಸ್ವಯಂವರ ವಧುವಿನಂತೆ ಹಬ್ಬಿದಂತ ನವಮಲ್ಲಿಕಾಲತೆಯನ್ನು ನೀನು ವನಜ್ಯೋತ್ಸ್ನಾ ಎಂಬ ಹೆಸರಿಟ್ಟಿದ್ದೆ; ಅದನ್ನು ಮರೆತು ಬಿಟ್ಟೆಯಾ?

ಶಕುಂ : ಅದನ್ನು ಮರೆತರೆ ನನ್ನ ದೇಹವನ್ನು ಸಹ ಮರೆತೇನು! (ಎಂದು ಆ ಮಲ್ಲಿಕಾಲತೆಯ ಬಳಿಗೆ ಹೋಗಿ ನಿಂತು) ಅನಸೂಯಾ, ನೋಡಿದೆಯಾ, ಈ ಕೇಸರೀವೃಕ್ಷಕ್ಕೂ ಈ ನವಮಲ್ಲಿಕಾಲತೆಗೂ ಒಳ್ಳೇ ಸಮಯದಲ್ಲಿ ಸಂಯೋಗವಾಗಿದೆ; ಇದಕ್ಕೂ ಹೂವಿನ ಭರ ಬಂದಿದೆ; ಈ ವೃಕ್ಷಕ್ಕೂ ನೂತನಪಲ್ಲವಗಳು ಸುರಿದಿದ್ದಾವೆ. ಹೀಗೆ ಇವೆರಡೂ ಒಂದಕ್ಕೊಂದು ಉಪಭೋಗಕ್ಕೆ ಯೋಗ್ಯವಾಗಿ ಒತ್ತಟ್ಟಿಗಿರುವದರಿಂದ ಎಷ್ಟು ಪರಿ ರಮಣೀಯವಾಗಿ ತೋರುತ್ತವೆ ನೋಡೆ!(ಎಂದು ನೋಡುತ್ತಿರುತ್ತಾಳೆ.)

ಪ್ರಿಯಂ : ಅನಸೂಯಾ, ಶಕುಂತಲೆಯು ಆ ಮಲ್ಲಿಕಾಲತೆಯನ್ನು ಒಳ್ಳೇ ಧೇನಿಸಿ ನೋಡುತ್ತಾಳೆ! ಇವಳ ಮನಸ್ಸಿನೊಳಗಿನ ಭಾವ ನಿನಗೆ ತಿಳಿಯ ಬಂತೆ?

ಅನ : ನನಗೇನೂ ತಿಳಿಯಲಿಲ್ಲವ್ವ. ನೀ ಹೇಳು ನೋಡುವ!

---

* ಅರ್ಧ ಸಮವೃತ್ತ

ಪ್ರಿಯಂ : ನಾನು ಹೇಳಲಿಯಾ? ಇವಳ ಮನಸ್ಸಿನೊಳಗೆ ಆ ಮಲ್ಲಿಕಾಲತೆಗೆ ಹ್ಯಾಗೆ ಯೋಗ್ಯವಾದ ವೃಕ್ಷವು ಸಿಕ್ಕಿತೊ ಹಾಗೆ ತನಗೂ ತಕ್ಕ ಪುರುಷನು ದೊರೆಯಬೇಕು, ಎಂಬ ಅಭಿಪ್ರಾಯ.

ಶಕುಂ : ನಿನ್ನ ಮನಸ್ಸಿನಲ್ಲಿ ಮಾತ್ರ ಹೀಗೆ ಬಂದಿದ್ದೀತು. ನನ್ನ ಮೇಲೇಕೆ ಹಾಕುತ್ತಿ! (ಎಂದು ಸುಳ್ಳು ರೋಷದಿಂದ ಕಲಶವನ್ನು ಕೈಯಿಂದ ಬಿಟ್ಟುಬಿಡುತ್ತಾಳೆ.)

ಅರಸು : (ತನ್ನೊಳಗೆ) ಇವಳು ಋಷಿಕನ್ನಿಕೆಯಾದರೂ ಅನ್ಯಜಾತೀ ಸ್ತ್ರೀಯಿಂದ ಇವಳ ಉತ್ಪತ್ತಿಯಾಗಿರಬೇಕೆಂದು ಕಾಣಿಸುತ್ತದೆ! ಇದಕ್ಕೆ ಸಂದೇಹವಿಲ್ಲ.

(ವಸಂತ ತಿಲಕಾ.)

ಆಕಾರಮೀಕ್ಷಿಸಲು ಕ್ಷತ್ರಿಯನಿಂಗೆ ಪಾತ್ರಳ್|
ತಾ ಕಂಡಪಳ್ ತಳೆದೆ ನಾನಭಿಲಾಷೆಯಂ ಕಾ- ||
ರ್ಯಾಕಾರ್ಯವನ್ನರಿದವಂ ನೆರೆ ಬಲ್ಲವರ್ ಶಂ-|
ಕಾ ಕಂಡಿರಲ್ ಮನದ ವೃತ್ತಿಯೆ ನೈಜಮೆಂಬರ್||

ಶಕುಂ : (ಭಯಗೊಂಡು) ಅವ್ವಯ್ಯಾ! ಈ ಭ್ರಮರವ ನೋಡೆ! ಈ ಭ್ರಮರವ ನೋಡೆ! ನೀರು ಚಿಮ್ಮಡಿಸಿದಾಕ್ಷಣವೆ ಮಲ್ಲಿಕಾಲತೆಯಿಂದೆದ್ದು ನನ್ನ ಮೋರೇ ಸುತ್ತುರಿಯುತ್ತದೆ! (ಹಿಂದೆ ಹಿಂದಕ್ಕೆ ಸರಿದು ಭ್ರಮರವು ಬಾಧಿಸಿದಂತೆ ಭಾವಗಳನ್ನು ತೋರಿಸುತ್ತಾಳೆ.)

ಅರಸು : (ತನ್ನೊಳಗೆ) ಶಾಬಾಸ್, ಭ್ರಮರನೇ ಶಾಬಾಸ್! ಧನ್ಯನೋ ನೀನು!

(ಪದ) *

ದಾಟಿ : "ಬೆಳಗಾದ ಮ್ಯಾಲೆ ಬ್ಯಾಸರಿಸುವದೋಳಿತೆ ಸುಂದರಾ|| ಉಳಿಸೆನ್ನಮಾನ ವಂದಿಸುವೆ ಮೋಹಾಬ್ಧಿ ಚಂದಿರಾ"|| ಎಂಬಂತೆ.

ಸವಿ - ಗಾರ ಭ್ರಮರನಹುದೆಲೊ ನೀ ದೈವವಂತನೊ|
ನೀ ಹಾರಿದತ್ತ ತರುಣಿ ನೋಡುತಿಹಳು ಧನ್ಯನೋ ||ಪಲ್ಲ||
ಎಳೆ-ಹೆಣ್ಣು ನೀ ಬರಲಂಜಿ ಹಿಂದೆ ಹಿಂದೆ ಸರಿವಳೊ|
ಕುಡಿ-ಗಣ್ಣನೋಟ ನಡುಗಲು ನಿನ್ನೀಕ್ಷಿಸುವಳೊ ||೧||

---

* चलापाङ्गां दृष्टिं स्पृशसि बहुशो वेपथुमती
रहस्याख्यायीव स्वनसि मृदु कर्णान्तिकचरः
करं व्याधुन्वत्याः पिवसि रतिसर्वस्वमधरं
वयं तत्त्वान्वेषान्मधुकर हतास्त्वं खलु कृती।। ३ ।।

ಮಂ-ಜುಳ ರವದಿಂ ಭರದಿ ಕಿವಿಯ ಬಳಿಗೆ ಬರುವೆಯೊ|
ಬಲು-ಸಲುಗೆಯಿಂದಲವಳೊಳು ಏಕಾಂತವೇಳ್ವೆಯೊ ||೨||

ಕೈಯಿಂದ ನಿನ್ನ ನಿವಾರಿಸಲು ಸಥಿಯ ಮಾಳ್ಪೆಯೊ|
ಬಲುವಿಂಥಲಧರಮೃತವೀಂಟಿ ತೃಪ್ತನಪ್ಪೆಯೊ ||೩||

ಶಾಬಾಸ್, ಭ್ರಮರನೇ ಶಾಬಾಸ್! ನಮ್ಮಂಥ ದೈವಹೀನ ಜನರಿಗೆ ಹ್ಯಾಗೆ ಬಂದೀತಪ್ಪಾ ಇಂಥ ವೈಭವ!

ಶಕುಂ : ಎಲ್ಲಿ ಹೋದರೂ ಬಿಡಲೊಲ್ಲದಲ್ಲೆ! ನಾನು ಆಚೇ ಕಡೆಯಲ್ಲಿ ಹೋಗುತ್ತೇನೆ. (ನಾಲ್ಕು ಹೆಜ್ಜೆ ಹೋಗಿ) ನನ್ನ ಬೆನ್ನೇ ಹತ್ತಿದೆ. ಬಿಡಿಸಿಕೊಳ್ಳಿರೆ! ಬಿಡಿಸಿಕೊಳ್ಳಿರಿ! (ಎಂದು ಚೀರುತ್ತಾಳೆ.)

ಕಾಶೀ ಕಡೆಯ ಪ್ರತಿಯಲ್ಲಿ ಇವರ ಬದಲು ಶ್ಲೋಕಗಳುಂಟು: ಅವು ಕೆಳಗೆ ಕೊಡಲ್ಪಟ್ಟಿವೆ.

ಲೋಲಾಂ ದೃಷ್ಟಿಮಿತಸ್ತತೋ ವಿತನುತೇ ಸಭ್ರೂಲತಾವಿಭ್ರಮಾ|
ಮಾಭುಗ್ನೇನ ವಿವರ್ತಿತಾ ಬಲಿಮತಾ ಮಧ್ಯೇನ ಕಮ್ರಸ್ತನೀ||
ಹಸ್ತಾಗ್ರಂ ವಿಧುನೋತಿ ಪಲ್ಲವನಿಭಂ ಶೀತ್ಕಾರಭಿನ್ನಾಧರಾ|
ಜಾತೇಯಂ ಭ್ರಮರಾಭಿಲಂಘನಭಯಾ ವಾದ್ಯೈರ್ವಿನಾ ನರ್ತಕೀ||
ಯತೋಯತಃ ಷಟ್ಚರಣೋಭಿವರ್ತತೆ | ತತಸ್ತತಃ ಪ್ರೇರಿತ ವಾಮಲೋಚನಾ||
ವಿವರ್ತಿತಭ್ರೂರಿಯಮದ್ಯ ಶಿಕ್ಷತೇ|ಭಯಾದಕಾಮಾಪಿ ಹಿ ದೃಷ್ಟಿವಿಭ್ರಮಂ||

ಇಬ್ಬರೂ
ಸಖಿಯರು : (ವಿನೋದದಿಂದ) ನಾವು ಯಾರೇ ನಿನ್ನನ್ನು ಬಿಡಿಸಿಕೊಳ್ಳಲಿಕ್ಕೆ? ದುಷ್ಯಂತರಾಜನನ್ನು ಬೇಕಾದರೆ ಕರೆ. ಆತನೇ ಈ ತಪೋವನವನ್ನು ಸಂರಕ್ಷಣೆ ಮಾಡುತ್ತಾನೆ.

ಅರಸು : (ತನ್ನೊಳಗೆ) ಇವರ ದೃಷ್ಟಿಗೆ ಬೀಳಲಿಕ್ಕೆ ಇದೇ ಸಮಯ ಚೆನ್ನಾಗಿದೆ. (ದೊಡ್ಡ ಧ್ವನಿಯಿಂದ) ಅಂಜಬೇಡಿ. (ತನ್ನೊಳಗೆ) ನಾನು ಅರಸನೆಂದು ತಿಳಿದರೆ ಭೀತಿಗೊಂಡಾರು; ಕಾರಣ ಬೇರೊಂದು ಪರಿಯಿಂದ ಮಾತನಾಡುವ.

ಶಕುಂ : (ಹಿಂದಹಿಂದಕ್ಕೆ ಸರಿಯುತ್ತ ಭ್ರಮರವನ್ನು ನೋಡುತ್ತ) ನಾನು ಇಲ್ಲಿ ಬಂದರೆ ತಾನೂ ಇಲ್ಲಿಯೇ ಬರುತ್ತದೆ; ನನ್ನನ್ನು ಬಿಡುವದಿಲ್ಲೇನು ಇದು!

ಅರಸು : (ಶೀಘ್ರದಿಂದ ಮುಂದಕ್ಕೆ ಹೋಗಿ, ದೊಡ್ಡ ಧ್ವನಿಯಿಂದ) ಯಾರವನು -

(ಪ್ರಹರಣಕಲಿಕಾ.)

ಧರೆಗರಸಿರೆ ಪೌರವ ದೊರೆ ಖತಿಯಾ|
ದುರುಳರನುರೆ ಶಿಕ್ಷಿಸುತಿರೆ ಮುನಿಯಾ||
ಅರಿಯದ ಎಳೆ ಕನ್ನಿಕೆಗಳು ಬನದೊಳ್ |
ತಿರುಗುತಿರಲು ಕಾಡುವನೊದೆವೆನುಕೇಳ್ ||೨೨||

(ಅರಸನನ್ನು ನೋಡಿ ಮೂವರೂ ಭಯಪಡುತ್ತಾರೆ.)

ಇಬ್ಬರೂ
ಸಖಿಯರು : ಆರ್ಯರೇ, ಹೇಳುವಂಥಾದ್ದು ಏನೂ ಇಲ್ಲ. (ಶಕುಂತಲೆಯನ್ನು ಬೆಟ್ಟಿನಿಂದೇ ತೋರಿಸಿ.) ಇವಳು ಭ್ರಮರಕ್ಕೆ ಅಂಜಿದಳು ಇಷ್ಟೇ.

ಅರಸು : (ಶಕುಂತಲೆಯನ್ನು ನೋಡಿ) ಹೇ ಋಷಿಕನ್ನಿಕೆಯೇ, ಆಶ್ರಮದಲ್ಲಿ ಎಲ್ಲಾ ಕ್ಷೇಮವೋ?

ಶಕುಂ : (ಅಂಜಿಕೊಂಡದರಿಂದ ಮೋರೆ ಕೆಳಗೆ ಮಾಡಿ ಸುಮ್ಮನೆ ಇರುತ್ತಾಳೆ.)

ಅನ : ಆರ್ಯರ ಬರುವಿಕೆಯಿಂದ ಆಶ್ರಮದಲ್ಲಿ ಯಾವತ್ತೂ ಕುಶಲವಾಗಿದೆ; ಶಕುಂತಲಾ, ಈ ಸಮಯದಲ್ಲಿ ಶ್ರೇಷ್ಠರಾದಂಥ ಅತಿಥಿಗಳ ಲಾಭವಾಗಿದೆ; ಪರ್ಣಕುಟಿಯಲ್ಲಿ ಹೋಗಿ ಪುಷ್ಪಗಳನ್ನೂ ಫಲಗಳನ್ನೂ ತೆಗೆದುಕೊಂಡು ಬಾ ಹೋಗು. ಪಾದಪ್ರಕ್ಷಾಲನಕ್ಕೆ ನೀರು ಇಲ್ಲಿಯೇ ಉಂಟು.

ಅರಸು : ನಿಮ್ಮ ಮಧುರವಾದ ಭಾಷಣದಿಂದಲೆ ನಾವು ತೃಪ್ತರಾದೆವು. ಪೂಜಾ ಫಲದಿಂದೇನು ಪ್ರಯೋಜನ?

ಪ್ರಿಯಂ : ಆರ್ಯರೆ, ಈ ವೃಕ್ಷದ ಸೀತಲವಾದ ಛಾಯೆಯಲ್ಲಿ ಸ್ವಲ್ಪ ಹೊತ್ತು ಕುಳಿತು ವಿಶ್ರಮಿಸಬೇಕು.

ಅರಸು : ತಾವೂ ಈ ನಿತ್ಯಕರ್ಮಶ್ರಮದಿಂದ ದಣಿವಿದ್ದೀರಿ. ಸ್ವಲ್ಪ ಕುಳಿತುಕೊಳ್ಳಬೇಕು.

ಅನ : ಶಕುಂತಲಾ, ಅತಿಥಿ ಸತ್ಕಾರವನ್ನು ಮಾಡುವದು ನಮಗೆ ಉಚಿತವಾಗಿದೆ; ಬಾ ಇಲ್ಲಿ ಕುಳಿತುಕೊಂಬುವ.

ಶಕುಂ : (ತನ್ನೊಳಗೆ) ಈ ಪುರುಷನನ್ನು ನೋಡಿ ನನ್ನ ಮನಸ್ಸಿನಲ್ಲಿ ತಪೋವನಕ್ಕೆ ಅಯೋಗ್ಯವಾದ ವಿಕಾರಗಳೇನು ಕಾರಣ ಬರುತ್ತಿದ್ದಾವಾದೀತು?

ಅರಸು : (ಅವರನ್ನು ನೋಡಿ) ನೀವು ಮೂವರೂ ಒಂದೇ ವಯಸ್ಸಿನವರಿದ್ದು, ರೂಪವತಿಯರಿದ್ದು ಒಬ್ಬರಿಗೊಬ್ಬರು ಗೆಳತಿಯರಾಗಿದ್ದೀರೆಂಬುದನ್ನು ನೋಡಿ ಬಹು ಸಂತೋಷಾಶ್ಚರ್ಯವಾಗುತ್ತದೆ.

ಪ್ರಿಯಂ : (ಏಕಾಂತದಿಂದ) ಅನಸೂಯಾ, ಈ ಚಂದ್ರನಂತೆ ಕಾಂತಿಯುಳ್ಳ ಗಂಭೀರ ಸ್ವರೂಪಿಯಾದ ಚತುರ ಪುರುಷನು ಒಳ್ಳೇ ಪ್ರಿಯ ಮಧುರವಾದ ಮಾತುಗಳನ್ನಾಡುತ್ತಾನೆ. ದಾವಾತನೇ ಈತಾ?

ಅನ : ಸಖಿಯೆ, ನನಗೂ ಬಹು ಕೌತುಕವಾಗುತ್ತದೆ; ಅವರನ್ನು ಕೇಳುತ್ತೇನೆ ನಾನು.

ಪ್ರಿಯಂ : ಎಲ್ಲಾ ಚೆನ್ನಾಗಿ ಕೇಳಿಕೋ.

ಅನ : ಚೆನ್ನಾಗಿ ಹ್ಯಾಗೆ? ಕೇಳುವ ನಡತೆಯ ಪ್ರಕಾರ ಕೇಳತಕ್ಕದ್ದು. (ಅರಸನ ಕಡೆಗೆ ತಿರುಗಿ) ಆರ್ಯರೇ, ತಮ್ಮ ಮಧುರತರವಾದ ಮಾತಿನ ಮೇಲಿಂದ ವಿಶ್ವಾಸ ಹುಟ್ಟಿ ಯದ್ಯಪಿ ಏನಾದರೂ ಕೇಳಿದರೆ ತಮಗೆ ಸಿಟ್ಟು ಬರಲಿಕ್ಕಿಲ್ಲೆಂದು ತಿಳಿದು ಒಂದೆರಡು ಪ್ರಶ್ನೆಗಳನ್ನು ಮಾಡುತ್ತೇವೆ; ದಯಮಾಡಿ ಹೇಳಬೇಕು.

(ಪದ)

ದಾಟಿ : "ನಾಗವೇಣಿ ನಲ್ಲನ ಬಳಿಗೆ ಪೋಗಿ ಕರೆದು ತಾರೆ| ಪೂಗಣೆಯವ ನಾಗಮಿಸುವ ಬ್ಯಾಗ ಪೋಗಿ ಬಾರೆ" ಇದರಂತೆ ಇರುತ್ತದೆ.

ಆವ ರಾಜ ಕುಲದಿ ಜನಿಸಿ| ಅಲಂಕೃತ ಗೈದಿಹಿರೈ||
ಕೋವಿದರ ಸುವೃತ್ತಗಳನು | ಕೇಳ್ವ ಸುಖವ ನೀಡಿರೈ | |ಪಲ್ಲ||

ದೇವ ನಿಮ್ಮ ವಿಯೋಗದಿಂದ | ಆವ ದೇಶವಿಂದು||
ಜೀವನಿಲ್ಲದ ಮೀನುಗಳೋಲ್| ಜೀಯ ಬಳಲುತಿಹುದು |೧||

ಮುಂದೆ ದಾವ ದೇಶಕೆ ತಾ| ವಿಂದು ತೆರಳುತೀಹಿರೈ||
ಇಂದು ಉದಯಿಸಿದ ಪೊಲು ಆ |ನಂದವ ಬಡಿಸುವಿರೈ |೨||

ಈ ರಣ ರಣ ಬಿಸಿಲಿನೊಳ್ ಸುಕು| ಮಾರ ದೇಹವನ್ನು ||
ಘೋರಬಡಿಸುವದಕೆ ತಮಗೆ|ಕಾರಣಾವದಿನ್ನು |೩||

ಶಕುಂ : (ತನ್ನೊಳಗೆ) ಹೃದಯವೆ ಹಾತೊರೆಯಬೇಡ; ನಿನ್ನ ಮನಸ್ಸಿನಲ್ಲಿದ್ದದ್ದೇ ಅನಸೂಯಾ ಕೇಳುತ್ತಾಳೆ.

ಅರಸು : (ತನ್ನೊಳಗೆ) ಇನ್ನು ಮೇಲೆ ಹೆಸರು ಹೇಳಬೇಕು ಹ್ಯಾಗೆ? ಬಿಡಬೇಕು ಹ್ಯಾಗೆ? (ಒಂದು ಕ್ಷಣ ಧ್ಯಾನಿಸಿ) ಪೌರವ ರಾಜನು ನನ್ನನ್ನು ಧರ್ಮಾಧಿಕಾರದ ಮೇಲೆ ನೇಮಿಸಿದ್ದಾನೆ; ಆದ ಕಾರಣ ಋಷಿಗಳ ಕರ್ಮಗಳು ನಿರ್ವಿಘ್ನದಿಂದ ನಡೆಯುತ್ತವೋ ಇಲ್ಲವೋ ಎಂಬುದನ್ನು ನೋಡುವದರ ಉದ್ದೇಶ ದಿಂದ ಈ ಧರ್ಮಾರಣ್ಯಕ್ಕೆ ಬಂದಿದ್ದೇನೆ.

ಅನ : ಹಾಗಾದರೆ ಇವತ್ತು ಋಷಿಗಳಿಗೆ ಉದಯಕಾಲವೇ ಬಂದ ಹಾಗಾಯಿತು.

ಶಕುಂ : (ಶೃಂಗಾರ ಲಜ್ಜೆದೋರುತ್ತಾಳೆ.)

ಇಬ್ಬರೂ

ಸಖಿಯರು : (ಶಕುಂತಲೆಯ ಹಾಗೂ ಅರಸಿನ ಮನಸ್ಸಿನೊಳಗಿನ ಭಾವಗಳನ್ನು ತಿಳಿದು ಮೆಲ್ಲನೆ) ಸಖಿಯೇ ಶಕುಂತಲೆ, ಇವತ್ತು ಕಣ್ವ ತಾತನು ಮನೆಯಲ್ಲಿದ್ದರೆ - (ಇಷ್ಟೇ ಅರ್ಧ ಮಾತನಾಡಿ ಬಿಡುತ್ತಾರೆ.)

ಶಕುಂ : (ರೋಷದಿಂದ) ಇದ್ದರೇನು ಮಾಡಿರುವನು?

ಸಖಿಯರು : ತನ್ನ ಜೀವಕ್ಕೆ ಸಮಾನವಾದಂಥ ಧನವನ್ನು ಕೊಟ್ಟು ಈ ಅತಿಥಿಗಳನ್ನು ಕೃತಾರ್ಥರನ್ನು ಮಾಡಿರುವನು.

ಶಕುಂ : (ರೋಷದಿಂದ) ಹೋಗಿರೆ, ನೀವೇನೇನೋ ಇಲ್ಲದ್ದೊಂದು ಮಾತನಾಡುತ್ತೀರಿ; ನನಗೆ ನಿಮ್ಮ ಮಾತೂ ಒಂದೂ ಕೇಳಿಸುವದೇ ಇಲ್ಲ.

ಅರಸು : (ಸಖಿಯರಿಗೆ) ನಿಮ್ಮ ಗೆಳತಿಯ ವೃತ್ತಾಂತವನ್ನು ಸ್ವಲ್ಪ ಕೇಳಬೇಕೆಂದು ಮನಸಿನಲ್ಲಿ ಬಂದಿದೆ ಕೇಳಬಹುದೆ?

ಸಖಿಯರು : ತಾವು ಕೇಳತಕ್ಕಂಥಾದ್ದು ನಮ್ಮ ಮೇಲೆ ಅನುಗ್ರಹವೇ ಸರಿ. ಅವಶ್ಯವಾಗಿ ಕೇಳಬೇಕು.

ಅರಸು : ಭಗವಾನ್ ಕಣ್ವ ಋಷಿಗಳು ನಿರಂತರ ಬ್ರಹ್ಮಚರ್ಯ ವ್ರತವನ್ನು ಧಾರಣ ಮಾಡಿದ್ದಾರೆಂಬುವದು ಪ್ರಸಿದ್ಧವುಂಟು; ಹೀಗಿರಲಿಕ್ಕೆ ನಿಮ್ಮ ಗೆಳತಿಯು ಅವರ ಕನ್ನಿಕೆ, ಇದು ಹ್ಯಾಗೆ?

ಅನ : ಹೇಳುತ್ತೇನೆ ಕೇಳಿ. ಕೌಸಿಕವೆಂಬ ಗೋತ್ರದಲ್ಲಿ ಹುಟ್ಟಿದಂಥ ಒಬ್ಬ ಮಹಾಪ್ರತಾಪಿಯಾದ ಋಷಿಯುಂಟು.

ಅರಸು : ಹೌದು; ನಾನು ಕೇಳಿ ಬಲ್ಲೆ.

ಅನ : ಆತನು ನಮ್ಮ ಗೆಳತಿಯ ತಂದೆಯಾಗಬೇಕು; ಮುಂದೆ ಆತನು ತ್ಯಾಗ ಮಾಡಿದ ನಂತರ, ಪಾಲನ ಪೋಷಣ ಮಾಡಿದ್ದರಿಂದ ಕಣ್ವ ಋಷಿಗಳು ಇವಳ ತಂದೆಗಳಾಗಬೇಕು.

ಅರಸು : ತ್ಯಾಗವೆಂಬ ಶಬ್ದದಿಂದ ಕೌತುಕ ಉತ್ಪನ್ನವಾಗಿ ಮೊದಲಿನಿಂದ ಕೇಳಬೇಕೆಂದು ಇಚ್ಛೆಯಾಗಿದೆ.

ಅನ : ಹಾಗಾದರೆ ಕೇಳಬೇಕು. ಪೂರ್ವದಲ್ಲಿ ಗೌತಮೀತೀರದಲ್ಲಿ ಆ ಋಷಿಯು ಉಗ್ರವಾದ ತಪಸ್ಸು ನಡಿಸಿದ್ದನು; ಆಗ್ಗೆ ದೇವತೆಗಳು ಭಯಪಟ್ಟು, ಆತನ ತಪಶ್ಚರ್ಯವನ್ನು ಭಂಗ ಮಾಡುವ ಉದ್ದೇಶದಿಂದ ಮೇನಕಾ ನಾಮಕಳಾದಂಥ ಅಪ್ಸರಾಸ್ತ್ರೀಯನ್ನು ಕಳುಹಿಸಿದರು.

ಅರಸು : ಯಾರಾದರೂ ತಪಶ್ಚರ್ಯವನ್ನು ಮಾಡಲಾರಂಭಿಸಿದ ಕೂಡಲೆ ದೇವತೆಗಳು ಅಂಜಿಕೊಳ್ಳುತ್ತಾರೆ; ಇದು ಸಹಜಿಕವೆ. ಒಳ್ಳೇದು ಮುಂದೇನಾಯಿತು?

ಅನ : ಅಲ್ಲಿಂದ, ವಸಂತ ಋತುವಿನಾಗಮನದಿಂದ ದಿವಸಗಳು ಪರಮ ರಮಣೀಯವಾಗಿ ಕಾಣಿಸುವವಷ್ಟೇ. ಆ ಕಾಲದಲ್ಲಿ ಯಾವಾಗ್ಗೆ ಅಪ್ಸರಾ ಸ್ತ್ರೀಯು ಬಂದು ಎದುರಿನಲ್ಲಿ ನಿಂತಳೊ ಆಗ್ಗೆ ಆ ಉನ್ಮಾದಕಾರಕವಾದಂಥ ರೂಪವನ್ನು ನೋಡಿ....(ಮುಂದೆ ಹೇಳುವದಕ್ಕೆ ಲಜ್ಜಿತಳಾಗುತ್ತಾಳೆ.)

ಅರಸು : ಮುಂದೆ ಹೇಳುವದು ಅವಶ್ಯವಿಲ್ಲ; ಅಂತೂ ಅಪ್ಸರಾಸ್ತ್ರೀಯಿಂದ ಇವಳ ಉತ್ಪತ್ತಿ?

ಅನ : ಸ್ವಾಮೀ, ಇದರಲ್ಲಿ ಏನು ಸಂದೇಹ?

ಅರಸು : ಹಾಗಾದರೆ ಈಗ ಮಾತ್ರ ಎಲ್ಲಾ ಸರಿಯಾಗಿ ಹೊಂದಿತು.

(ಪ್ರಹರ್ಷಿಣಿಯಂತೆ)*

ಪುಟ್ಟುವದೇ ಮನುಜೆಯಳಿಂದಲಿಂತು ರೂಪಂ |
ಪೊಟ್ಟೆಯಲಿಂ ಪಡೆಯಳಿದೆಂಥ ಕಾಂತಿಯೋ ನಾ||
ದಿಟ್ಟಿಸಿ ನೋಡೆನು ಮುರೆಮಿಂಚಿನಿಂದಲಾದಾ|
ಘಟ್ಟಿಯದೆಂದಿಗೆ ಬರಬೇಕು ಪೃಥ್ವಿಯಿಂದಾ ||೨೪||

(ಶಕುಂತಲೆಯು ಲಜ್ಜೆಗೊಂಡು ಮೋರೆ ಕೆಳಗೆ ಮಾಡುತ್ತಾಳೆ.)

ಅರಸು : (ತನ್ನೊಳಗೆ) ಇನ್ನು ಮೇಲೆ ನನಗೆ ಮನೋರಥವನ್ನು ಮಾಡಲಿಕ್ಕೆ ಏನೂ ಚಿಂತೆ ಇಲ್ಲ; ಆದರೂ ಈ ಸಖಿಯರು ಅವಳ ಮನಸ್ಸಿನೊಳಗಿನ ಅಭಿಲಾಷೆಯನ್ನು ತಿಳಿದು ಪರಿಹಾಸ ಮಾಡಿದರು; ಆದ್ದರಿಂದ ನನ್ನ ಮನಸು ಭಯಪಡುತ್ತದೆ.

ಪ್ರಿಯಂ : (ಶಕುಂತಲೆಯನ್ನು ನೋಡಿ ನಕ್ಕು, ಅರಸನನ್ನು ಕುರಿತು ಮಾತನಾಡುತ್ತಾಳೆ.) ತಮ್ಮ ಮನಸಿನಲ್ಲಿ ಮತ್ತೇನಾದರೂ ಪ್ರಶ್ನೆ ಮಾಡತಕ್ಕದಿದ್ದೀತು?

ಶಕುಂ : (ಬಟ್ಟಿನಿಂದ ಆಕೆಯ ತೊಡೆ ಚುಚ್ಚಿ) ಇದೇನೇ ನಿನ್ನ ನಡತಿ? ಸುಮ್ಮನಿರು.

ಅರಸು : (ಪ್ರಿಯಂವದೆಯನ್ನು ಕುರಿತು) ನೀವು ನಮ್ಮ ಮನಸ್ಸಿನೊಳಗಿನ ಭಾವ ಚೆನ್ನಾಗಿ ತಿಳಿದಿರಿ; ಉತ್ತಮವಾದ ಚರಿತ್ರವನ್ನು ಕೇಳಬೇಕೆಂಬಾಶೆಯಿಂದ ಮತ್ತೂ ಪ್ರಶ್ನ ಮಾಡಬೇಕೆಂದು ಮನಸಿನಲ್ಲಿ ಬಂದಿದೆ.

ಪ್ರಿಯಂ : ತಪಸ್ವಿ ಜನರ ಹತ್ತರ ಏನು ಬೇಕಾದದ್ದು ಕೇಳಬಹುದು; ಅದಕ್ಕೇನೂ ಪ್ರತಿಬಂಧವಿಲ್ಲ.

ಅರಸು : ನಾನು ಇಷ್ಟೇ ಕೇಳುತ್ತೇನೆ.

(ಪದ)

---

* ಇದಕ್ಕೆ ಹೆಸರು ಛಂದಸ್ಸಿನಲ್ಲಿ ದೊರೆಯುವದಿಲ್ಲ. ಲಕ್ಷಣ - ಭ ಭ ಸ ಜ ಗ ಗ.

ದಾಟಿ : ("ಸಾಕೊ ಸಾಕೊ ನಿನ್ನ ಸೊಗಸೆಲ್ಲ ನಿನಗಿಂತ|ಬೇಕೋ ಎನ್ನ ಗಂಡ ಭವ್ಯ ರೂಪ" ಎಂಬ ಪದದಂತೆ.)

ಎಷ್ಟು ದಿವಸಗಳ ತನಕ ನಿಮ್ಮಯ ಸಖಿ|
ಕಷ್ಟವನನುಭವಿಸಲಿ ಬೇಕೆ? | ||ಪಲ್ಲ||
ಹೆಚ್ಚಿನ ತಾಪಸ ನೇಮದಿಂ ಬಯಕೆಗಳ್ |

ಮುಚ್ಚಿ ತನ್ನೊಳು ತಾನೇ ನೊಯ್ಯಬೇಕೆ? ||
ಇಚ್ಛೆಗಳೆಲ್ಲ ಈ ವ್ರತದಿಂ ಬಿಗಿದ ಗಂಟು|
ಬಿಚ್ಚಿ ತಾವೇ ಹೊರಬೀಳಬೇಕೆ? ||೧ ||
ಈ ತರುಣಿಯ ಪೋಲು ಕಣ್ಣುಗಳಿರುವಂಥ|

ಈ ತಪೋವನದೆರಳೆಗಳ ಕೂಡ||
ಸ್ವಾತಂತ್ರ್ಯವಿಲ್ಲದೆ ನಿತ್ಯ ನಿರಂತರ|
ತಾ ತೊಳಲುತಲಿರಬೇಕೇನಯ್ಯೊ| ||೨||

ಹೊನ್ನಿನ ಬಳ್ಳಿಯು ಹೊರಳುತಿಹದು ಕಾಮ - |
ನೆನ್ನುವ ರವಿಯ ತಾಪಕ್ಕೆ ಕೇಳು||
ಬಂನಬಡುವದಯ್ಯೊ ಮುನಿಕುಲವನದೊಳಿ - |
ದಂನೆ ಕಾಯಲು ವೃಕ್ಷವಿಲ್ಲವಲ್ಲೆ ||೩||

ಪ್ರಿಯಂ : ಆರ್ಯರೆ, ಇವಳು ಧರ್ಮಾಚರಣದಲ್ಲಿ ಕೂಡ ಪರಾಧೀನಳಾಗಿದ್ದಾಳೆ; ಆದರೂ ತಕ್ಕ ಪುರುಷನನ್ನು ನೋಡಿ ಇವಳನ್ನು ಲಗ್ನ ಮಾಡಿಕೊಡಬೇಕೆಂದು ಇವಳ ತಂದೆಯ ಸಂಕಲ್ಪ ಉಂಟು.

ಅರಸು : ಅವರ ಸಂಕಲ್ಪ ದುಃಸಾಧ್ಯವಲ್ಲ: (ತನ್ನೊಳಗೆಂದುಕೊಳ್ಳುತ್ತಾನೆ) ಇನ್ನೇನೂ ಭೀತಿ ಇಲ್ಲ. ನನ್ನ ಬಯಕೆಗನುವುದೋರಿತು.

(ಪದ)*

ದಾಟಿ : (ನಾಗವೇಣಿ ನಲ್ಲನ ಬಳಿಗೆ ಪೋಗಿ ಕರೆದು ತಾರೆ| ಪೂಗಣೆಯವ ನಾಗಮಿಸುವ ಬ್ಯಾಗ ಪೋಗಿಬಾರೆ" ಎಂಬ ಪದವಂತೆ.)

भव हृदय साभिलाषं संप्रति संदेहनिर्णयो जातः ।
आशङ्कसे यदग्निं तदिदं स्पर्शक्षमं रत्नम् ।। ३७।।

ಜಿವರಬ್ಯಾಡ ಮನವೆ ನಿನ್ನ | ಬಯಕೆಗನುವು ದೋರಿತು||
ಬದಿಗೆ ಬರಲು ಸಂಶಯ ಬಿಸಿ- |ಲ್ಗುದುರೆಯಂತೆ ಪೋಯಿತು |ಪಲ್ಲ||

ನೇಮನಿಷ್ಠೆಯೆಂಬ ವಿಷದ | ನಾಗವಲ್ಲ ಬಾಲೆಯು||
ಕೋಮಲೆಯು ವಸಂತನೃಪನ |ಕೊರಳ ದುಂಡ ಮಾಲೆಯು ||೧||

ಬ್ಯಾರೆ ಇಂದ್ರಿಯಗಳನು ಸುಡುವಂ | ಗಾರವಲ್ಲ ಕನ್ನೆಯು||
ಆರಸಿ ತಂದಿರಿಸಿದ ಶೃಂ- |ಗಾರ ರಾಗ ರನ್ನೆಯು ||೨||

ಪೊಳೆಯೆ ನಿಸ್ಪೃಹದಾಗಸದೊಳ್ | ನಿಲುಕದಿರುವ ಉಡುಪೆಯು||
ತಿಳಿಯದಿರಲ್ಲಿವಳು ಸ್ಮರನ| ಶಯನಮಂದಿರ ದೀಪೆಯು ||೩||

ಶಕುಂ : (ರೋಷದಿಂದ) ಅನಸೂಯಾ, ನಾನು ಹೋಗುತ್ತೇನವ್ವ ಇನ್ನ.

ಅನ : ಅದ್ಯಾಕೆ?

ಶಕುಂ : ನೋಡು, ಈ ಪ್ರಿಯಂವದಾ ಇಲ್ಲದ್ದೊಂದು ಮಾತನಾಡುತ್ತಾಳೆ; ನಾನು ಗೌತಮಮ್ಮನ ಮುಂದೆ ಹೋಗಿ ಹೇಳುತ್ತೇನೆ. (ಎದ್ದೇಳುತ್ತಾಳೆ.)

ಅನ : ಸಖಿಯೆ, ಬಂದಂಥ ಅತಿಥಿಗಳನ್ನು ಸತ್ಕಾರಗೊಳಿಸದೆ ಹೀಗೆ ಹೋಗುವದು ನಿನ್ನ ನಡತೆಯಲ್ಲ; ಬಾ ಸುಮ್ಮನೆ.

ಶಕುಂ : (ಮಾತಾಡದಲೆ ಹಾಗೇ ಹೋಗುತ್ತಾಳೆ.)

ಅರಸು : (ಗಾಬರಿಯಾಗಿ ಅವಳನ್ನು ಹಿಡಿಯಬೇಕೆಂದು ಇಚ್ಛಿಸುತ್ತಾನೆ; ಆದರೂ ವಿನಯದಿಂದ ಮನಸ್ಸಿನಲ್ಲಿಯೇ ಕುದಿಯುತ್ತ ಕುಳಿತುಕೊಳ್ಳುತ್ತಾನೆ.) ಏನಾಶ್ಚರ್ಯವಿದು? ಕಾಮೀಜನರ ಮನಸ್ಸಿನ ಸ್ವಭಾವವು ದೇಹದಿಂದ ಮಾಡುವಂಥ ಕೃತಿಗಳ ಪ್ರತಿಬಿಂಬದಂತೆ ಕಾಣಿಸುತ್ತದೆ!

(ಪ್ರಹರಣಕಲಿಕಾ)

ತನುವಿಯ ಪಿಡಿಯಲ್ಕಿದೆ ಹವಣಿಸಿ ಮೇ- |
ಣ್ವಿನಯದ ಭಯದಿಂ ಸ್ಥಿರತೆಯ ತಳೆಯ-||
ಲ್ಕಿನಿತರೊಳಗೆ ಪೋಗಿ ತಿರುಗಿ ಬರುವೊಲ್ |
ಮನದೊಳು ತಿಳಿವಾಯ್ತಿದರಿದರಿದು ಬಲ್ ||೨೭||

ಪ್ರಿಯಂ : (ಶಕುಂತಲೆಯನ್ನು ಹೋಗಿ ಹಿಡಿದು) ಸಖಿಯೇ, ಈ ವ್ಯಾಳ್ಯದಲ್ಲಿ ನೀನು ಹೋಗುವದುಚಿತವಲ್ಲ.

ಶಕುಂ : (ಹುಬ್ಬು ಗಂಟು ಹಾಕಿ) ಅದ್ಯಾಕೆ?

ಪ್ರಿಯಂ : ನನ್ನವೆರಡು ಗಿಡಗಳಿಗೆ ನೀನು ನೀರು ಹಾಕಬೇಕಷ್ಟೆ? ಆ ಸಾಲ ತೀರಿಸು; ಅಲ್ಲಿಂದ ನೀನು ಹೋಗು ಬೇಕಾದಲ್ಲಿ. (ಹೀಗೆಂದು ಅವಳನ್ನು ಬಲಾತ್ಕಾರದಿಂದ ಹಿಡಿದುಕೊಂಡು ಬರುತ್ತಾಳೆ.)

ಅರಸು : ಗಿಡಗಳಿಗೆ ನೀರು ಹಾಕಿಯೇ ಶ್ರಮಗೊಂಡಿದ್ದಾಳೆ. ಅವಳನ್ನು ಮತ್ತೂ ಕೆಲಸಕ್ಕೆ ಹಚ್ಚಬೇಡ ಕಂಡೆಯಾ!

(ಪದ)

ದಾಟಿ : ("ಕಾಡಬ್ಯಾಡವೊ | ಕರುಣದಿ ನೋಡೊ || ಬೇಡಿಕೊಂಬೆನೋ ನೀ ದಯಮಾಡೋ" ಈ ಪದದಂತೆ.)

ಹೇಳಬ್ಯಾಡವೆ ಹೆಚ್ಚಿನ ಕೆಲಸಾ |
ಬಾಲೆ ಬಲು ದಣಿದಿಹಳೆ ಸಹಸಾ | ||ಪಲ್ಲ||

ನೆತ್ತರಾದವೊಲ್ ಭಾರದ ಕೊಡವು |
ಎತ್ತಿಳುಹಿ ಕೈ ಕೆಂಪೇರಿಹವು ||
ನೆತ್ತಿ ಮ್ಯಾಲಿನ ಪೊಳೆವ ಕೇಶಗಳು |
ಸುತ್ತಿ ಉಂಗುರದೋಲ್ ಕಾಣಿಸುತಿಹವು ||೧||

ಮೋರೆ ಮ್ಯಾಲಿನ ಬೆವರಿನ ಸಾಲು |
ತೋರುತಲಿದೆ ಸಣ್ಣ ಜಾಲದವೋಲು ||
ಮೀರಿ ಬಂದಿಹ ಶ್ವಾಸವ ಬಿಡಲು |
ಹಾರುತಲಿದೆ ಮೆತ್ತಣೆದೆ ಶ್ರಮದೋಳು ||೨||

ಮುಡಿ ಬೆನ್ನಿನ ಮ್ಯಾಲೆ ಬಿದ್ದಿರಲು |
ಎಡಗೈಯೊಳು ತಾನಾವರಿಸಿಹಳು ||
ಕುಡಿಗಣ್ಣುಗಳರೆದೆರೆದಿಹಳು |
ಉಡುರಾಜನ ಪೋಲ್ವ ಮುಖ ಬಾಡಿರಲು ||೩||*

---

* ख्रस्तां सावतिमात्र लोहिततलौ बाहू लटोत्क्षेपणा
दद्यापि स्तनवेपथुं जनयति श्वासः प्रमाणाधिकः
वद्धं कर्णशिरीपरोधि वदने धर्माम्भसा जालकं
वन्धे स्रंसिनि चैकहस्तयमिताः पर्याकुला मूर्धजाः ।।३ ।।

ಆದರೆ ಇವಳ ಸಾಲವನ್ನು ನಾನು ತೀರಿಸುತ್ತೇನೆ. (ಎಂದು ಪ್ರಿಯಂವದೆಯ ಕೈಯಲ್ಲಿ ತನ್ನ ಉಂಗುರವನ್ನು ಕೊಡುತ್ತಾನೆ.)

(ಅನಸೂಯಾಪ್ರಿಯಂವದೆಯರು ಉಂಗುರದ ಮೇಲಿನ ಅಕ್ಷರಗಳನ್ನು ಓದಿ ಬೆರಗಾಗುತ್ತಾರೆ.)

ಅರಸು : ಮತ್ತೇನೂ ವಿಶೇಷ ತಿಳಿಯಲಿಕ್ಕೆ ಕಾರಣವಿಲ್ಲ; ರಾಜನು ನನಗೆ ಕೊಟ್ಟಿದ್ದಾನೆ; ನಾನು ಆತನ ಆಶ್ರಿತ ಪುರುಷನಾಗಿದ್ದೇನೆ.

ಪ್ರಿಯಂ : ಈ ಉಂಗುರವು ತಮ್ಮ ಬಟ್ಟಿನಲ್ಲಿಯೇ ಇರತಕ್ಕದ್ದು; ಆರ್ಯರ ಮಧುರವಾದ ಭಾಷಣದಿಂದಲೆ ಇವಳು ಸಾಲದಿಂದ ಮುಕ್ತಳಾದಳು.(ಸ್ವಲ್ಪ ನಕ್ಕು) ಸಖಿಯೆ, ಮಹಾರಾಯರು ನಿನ್ನನ್ನು ಸಾಲದಿಂದ ಮುಕ್ತಳನ್ನು ಮಾಡಿದರು. ಇನ್ನು ಹೋಗು ಬೇಕಾದರೆ.

ಶಕುಂ : (ತನ್ನೊಳಗೆ) ಹೌದು; ನನ್ನ ವಯಸ್ಸು ನನ್ನ ಮಾತು ಕೇಳಿದರಷ್ಟೆ! (ಕೇಳುವಂತೆ) ನೀನು ಯಾರೇ, ಇನ್ನು ಹೋಗು, ಬೇಡ ಎಂದು ಹೇಳಲಿಕ್ಕೆ? ನಾನು ಬೇಕಾದರೆ ಹೋದೇನು, ಹತ್ತಾದರೆ ಬಿಟ್ಟೇನು!

ಅರಸು : (ಶಕುಂತಲೆಯನ್ನು ನೋಡಿ ತನ್ನೊಳಗೆ) ನನ್ನ ಮನಸ್ಸು ಹ್ಯಾಗೆ ಇವಳಲ್ಲಿ ನಟ್ಟಿರುವದೊ ಅದೇ ಪ್ರಕಾರವೇ ಇವಳ ಮನಸ್ಸು ನನ್ನಲ್ಲಿ ನಟ್ಟಿದ್ದೀತೆ? ಇದಕ್ಕೆ ಸಂದೇಹವೇ ಬೇಡ; ನಿಜವಾಗಿ ಇವಳ ಮನಸ್ಸು ನನ್ನಲ್ಲಿ ಆಗಿದೆ. ಹ್ಯಾಗಂದರೆ:-

(ಪದ)*

ದಾಟಿ : ("ದಿಲ್ಕೀದಿಲ್ ಮಾರ್ಯೆ ಉಥಾಜಿ" ಎಂಬ ಹಿಂದುಸ್ಥಾನೀ ಪದದಂತೆ.)

ಮನಸಾನಿಟ್ಟಿಹಳು | ಎನ್ನೊಳು ||ಪಲ್ಲ||
ಗೆಳತಿಯರೊಳ್ ಮಾತಿ - | ನೊಳು ನಾನಿರಲು||
ತಿಳಿಸದೆ ಎನ್ನನು | ಬಲು ನೋಡುತಿಹಳು ||೧ ||
ಚೆಲುವ ಮುಖವ ನಾ ನೋ -| ಡಲು ನಾಚುತ ಮೋರೆ |
ಕೆಳಗೆ ತೆಗ್ಗಿಸುತಲೆ | ನೆಲವ ಗೀಚುವಳು ||೨||

---

* वाचं न मिश्रयति यद्यापि मद्वचोभिः
कर्ण ददात्यभिमुखं मयि भापमणे
कामं न तिष्ठति मदाननसंमुखीना
भूयिपृठमन्य विपया न तु दृपृटिरस्याः ।।३० ।।

ಬಾಲೆ ಎನ್ನಯ ಮಾತಿ -| ನೊಳು ತಾ ಬಾರಳು|
ಆಲಿಸಿ ಮೆಲ್ಲನೆ | ಎಲ್ಲ ಕೇಳುವಳು ||೮||

ಅನ್ಯ ಮಾತಿನ ನೆವ - | ದಿಂ ತನ್ನೊಳು ತಾನೆ ||
ರನ್ನೆ ಗಲ್ಲದಿ ನಗು - | ತೆನ್ನ ನೋಡಿದಳು ||೯||

(ಇಷ್ಟರಲ್ಲಿ ಹಿಂದೆ ಶಬ್ದವಾಗುತ್ತದೆ.)

ಎಲೋ ತಪಸ್ವಿ ಜನರುಗಳಿರಾ, ತಪೋವನದಲ್ಲಿಯ ಪ್ರಾಣಿಗಳನ್ನು ಕಾಯ್ದುಕೊಳ್ಳಿ! ಸಾರ್ವಭೌಮನಾದ ದುಷ್ಯಂತರಾಜನು ಮೃಗಯಾ ಆಡುವದಕ್ಕೋಸ್ಕರ ಸೈನ್ಯಸಹಿತನಾಗಿ ಈ ವನದಲ್ಲಿ ಆಶ್ರಮದ ಹತ್ತರವೇ ಪ್ರಾಪ್ತನಾಗಿದ್ದಾನೆ! ನೋಡಿದಿರಾ, ಈ ಹೊತ್ತಿನಲ್ಲಿ ಏನಾಗುತ್ತದೆ:- ಅತಿ ವೇಗದಿಂದ ಓಡುವ ಅಶ್ವಸಮುದಾಯದ ಖುರಪುಟಗಳಿಂದ ಏಳುವ ಕೆಂಧೂಳಿಯು ಶಲಭ ಸಮೂಹದಂತೆ ನಾಲ್ಕೂ ದಿಕ್ಕಿನಲ್ಲಿ ಆಕಾಶವನ್ನು ಮುಸುಕಿ ವೃಕ್ಷದ ಟೊಂಗೆಗಳಿಗೆ ಕಟ್ಟಿದ ಆರ್ದ್ರವಲ್ಕಲಗಳೆಲ್ಲಾ ಕೆಟ್ಟು ಹೋಗುತ್ತವೆ. ತೀವ್ರ ಬನ್ನಿ.

||ವೃತ್ತ||*

ದಂಡು ಕಂಡು ಬೆದರ್ದಾಶ್ರಮದೊಳ್ನೆರೆ
ಪುಂಡಗಂಡು ಗಜ ಬಂತಿದೊ ವಿಘ್ನಂ |
ಸೊಂಡೆಯುಂಡಿಗೊಳೆ ಕೋರೆಗೆ ವೃಕ್ಷದ
ಟೊಂಗೆ ಭಂಗಿಸಿ ತೊಡಂಗಿರೆ ಹಾಯಲ್||
ಕಂಡಕಂಡ ಕಡೆ ಪಾಶವೆನಲ್ಕುರೆ
ನಾಲ್ಕು ಕಾಲ್ಗಲಿಯೆ ಬಳ್ಳಿಗಳಿತ್ತಲ್|
ಹಿಂಡು ಹಿಂಡು ಚಿಗರಿಂಗಳು ಬಲ್ಭಯ
-ಗೊಂಡು ಚಂಡಿನ ತೆರಂ ಚಿಗಿದೋಡಲ್ ||೧೦||

(ಎಲ್ಲರು ಕಿವಿಗೊಟ್ಟು ಕೇಳಿ ವಿಸ್ಮಿತರಾಗುತ್ತಾರೆ.)

ಅರಸು : (ತನ್ನೊಳಗೆ) ಅಯ್ಯೊ! ನನ್ನನ್ನು ಶೋಧಿಸುತ್ತ ಸೈನ್ಯವೆಲ್ಲ ಇತ್ತ ಕಡೆಗೆ ಬಂದು ತಪೋವನಕ್ಕೆ ಉಪದ್ರವ ಕೊಡುತ್ತಾರೆ. ಇದು ಯೋಗ್ಯವಾಗಲಿಲ್ಲ; ನಾನು ಅತ್ತಕಡೆಯೆ ಹೋಗುವೆ.

ಗೆಳತಿಯರು: ಆರ್ಯರೆ, ಈ ಅರಣ್ಯ ವೃತ್ತಾಂತವನ್ನು ಕೇಳಿ ಭಯ ಬರುತ್ತದೆ: ನಮಗೆ ಪರ್ಣಕುಟಿಗೆ ಹೋಗಲಿಕ್ಕೆ ಆಜ್ಞೆ ಇರಬೇಕು.

---

* ಈ ವೃತ್ತಕ್ಕೆ ಛಂದಸ್ಸಿನಲ್ಲಿ ಹೆಸರು ದೊರೆಯುವದಿಲ್ಲ. ಲಕ್ಷಣ - ರ ನ ಭ ಭ ರ ನ ನ ಭ ಗಗ

ಅರಸು : (ತೀವ್ರದಿಂದ) ಅಹುದಹುದು ತಾವು ಹೋಗಬೇಕು. ತಾವೂ ಹೋಗಿ ಆಶ್ರಮಕ್ಕೆ ಉಪದ್ರವವಾಗದಂತೆ ಯತ್ನ ಮಾಡುತ್ತೇವೆ.

(ಎಲ್ಲರೂ ಏಳುತ್ತಾರೆ.)

ಗೆಳತಿಯರು : ಆರ್ಯರೆ, ತಮ್ಮ ಆದರ ಸತ್ಕಾರವು ಚೆನ್ನಾಗಿ ಆಗಲಿಲ್ಲಾದ್ದರಿಂದ ಪುನಃ ತಾವು ಇಲ್ಲಿಗೆ ಬರುವದಕ್ಕೋಸ್ಕರ ಹೇಳಿಕೊಂಬುವದಕ್ಕೆ ನಾಚಿಕೆ ಬರುತ್ತದೆ.

ಅರಸು : ಹಾಗೆ ತಿಳಿಯತಕ್ಕದ್ದಲ್ಲ; ನಿಮ್ಮ ದರ್ಶನವಾಯಿತು, ನಿಮ್ಮ ಸಂಗಡ ಮಾತುಗಳಾದವು. ಇದರಿಂದಲೇ ಸತ್ಕಾರವಾಯಿತು.

ಶಕುಂ : ಅನಸೂಯಾ, ಸ್ವಲ್ಪ ನಿಲ್ಲೆ, ಕಾಲಿನಲ್ಲಿ ದರ್ಭೆ ನಟ್ಟಿದೆ, ತೆಗೆಯುತ್ತೇನೆ. (ನಾಲ್ಕೆಂಟು ಹೆಜ್ಜೆ ಹೋಗಿ) ಸೆರಗು ಕೊಕ್ಕಿಗೆ ಸಿಕ್ಕಿತವ್ವ! ನಿಲ್ಲು; (ಈ ಪ್ರಕಾರ ನಿಲ್ಲಲಿಕ್ಕೆ ಮೇಲೆ ಮೇಲೆ ನಿಮಿತ್ತವನ್ನು ತೆಗೆದು ಅರಸನನ್ನು ನೋಡುತ್ತ ನೋಡುತ್ತ ಸಖಿಯರ ಸಹವರ್ತಮಾನ ಹೊರಟು ಹೋಗುತ್ತಾಳೆ.)

ಅರಸು : ತಪಸ್ವಿಗಳ ಕನ್ನಿಕೆಗಳಂತು ಹೋದರು; ಇನ್ನು ಯಾವಾಗ್ಗೆ ಕಣ್ಣಿಗೆ ಬೀಳುವರೋ ತಿಳಿಯದು. ನಗರಕ್ಕೆ ಹೋಗಲಿಕ್ಕೆ ನನ್ನ ಮನಸೇ ಆಗಲೊಲ್ಲದು.

॥ಪದ॥*

(ದಾಟಿ : "ದಿಲ್ಕೀದಿಲ್‌ಮಾರ್ರೆ ಉಧಾಜಿ" ಎಂಬ ಪದದಂತೆ.)

ಬರಲಾರದೆನ್ನ ಮನ । ಎನ್ನೊಡನೆ ॥ಪಲ್ಲ॥

ಜನುಮದ ಸ್ನೇಹದ । ತನುವಿನೊಳಿರೆ ಪರ ।
ತನುವಿಯ ಕೋಮಲ । ತನುವ ಬಯಸಿ ತಾ ॥೧॥

ಶರೀರ ಮುಂದಕೆ ಪೋಗು । ತಿರಲು ರಥದ ಕೇತು॥
ವಿರದೆ ಹಿಂದಕೆ ಜಗ್ಗು । ತಿರುವ ತೆರದೊಳು ॥೨॥

ಲಲಿತ ರೂಪದ ಸರ । ದೊಳು ನೇತ್ರ ನಳಿನ ।
ದಳದ ಮೋಹದ ಲತಾ । ವಲಯದಿ ಸಿಲುಕಿ ॥೩॥

ಆದ್ದರಿಂದ ಯಾವತ್ತೂ ಸೈನ್ಯಕ್ಕೆ ಇಲ್ಲಿಯೆ ಗುಡಾರಗಳನ್ನು ಹೊಯಿಸಲಿಕ್ಕೆ ಆಜ್ಞಾಪಿಸುವ. (ಎಂದು ಹೊರಟು ಹೋಗುತ್ತಾನೆ.)

(೧ನೆಯ ಅಂಕವು ಮುಗಿದುದು.)

गच्छति पुरः शरीरे धावति पश्चादसंस्तुतं चेतः
चीनांशुकमिव केतोः प्रतिवातं नीयमानस्य ।। ३३।।

೨ನೆಯ ಅಂಕವು

[ಆ ಮೇಲೆ ಬಹು ದಣಿದುಕೊಂಡಂಥ ವಿದೂಷಕನು * ಬರುತ್ತಾನೆ.]

ವಿದೂಷಕ : (ಶ್ವಾಸವಿಡುತ್ತ) ಏನ್ ನನ್ನ ಕರ್ಮಪ್ಪಾ! ಈ ಅರಸಿನ ಬ್ಯಾಟೀಕಾಲಾಗ ನಾನಸಕಾ ದಣದ ಹೋದ್ನಿ. ಕವವ ಚಿಗರಿ! ಕವವ ಕಾಡಂದಿ! ಕವನ ಹುಲಿ! ಅಂತ ವದರ್‍ಯಾಡಿಕೊಂತ ಚೀರ್‍ಯಾಡಿಕೊಂತ ಈ ಅಡವ್ಯಾಗಿಂದಾ ಅಡವಿ, ಆ ಅಡವ್ಯಾಗಿಂದೀ ಅಡವಿ, ಓಡಿ ಓಡಿ ಸಾಕಸಾಕಾತ್ಯೋ ನಮ್ಮಪ್ಪಾ! ಬಿಸಲಂತೀ ಆಸಾಡ ಮಾಸ ಕೇಳೂದೇನತಿ, ರಣ ರಣ ಕುಟ್ಟೇಕುಟ್ಟತತಿ; ಮದ್ಯಾಣದ್ಹೊತ್ತಿನಾಗ ಮಂದ ಜರಾ ಗಿಡದ ಬುಡಕ ಕುಂತೇನಂದರ ನೆಳ್ಳಾರ ಆತೆ? ಅದೂ ಇಲ್ಲ. ನೀರಡಸಾಣಾ ತೊಪ್ಪಲಬಿದ್ದ ಕೊಳತ ಹಳದಾನ ನೀರ ಕುಡ್ಯಾಣಾ, ಹಸುವಾಗಾಣಾ ಹೊತ್ತಲ್ಲದ್ಹೊತ್ತಿನಾಗ ಹಸೆ ಖಂಡಾ ತಿನ್ನಾಣಾ! ಇವನ ಕುದರೀ ಹಿಂದ ಓಡಿ ಓಡಿ ಕೈಕಾಲೆಲ್ಲಾ ಸಂದದಪ್ಪಿ ಹೋದವು. ರಾತರಿನಾಗ ಕಣ್ಣತುಂಬಾ ನಿದ್ದ್ಯಾರ ಆಕ್ಕತೆ? ಅದೂ ಇಲ್ಲ; ಒಂದ ಜರಾ ಜಂಪ ಹತ್ತತ್ಯೊ ಇಲ್ಲೊ ಅಟರಾಗ ಬ್ಯಾಟೀ ಆಡೊ ಮಮ್ಮಕ್ಕಳು ವದರಾಡಿಕೊಂತ ಬಂದಕ್ಯಾಸ ಎಬ್ಬಿಸಿದರ! ಎಲಾ ಇವರ ಮಂಜಾಳ ಹೋಗಲಿ!**

ಇಷ್ಟಾದರೂ ಆಗಲಿ, ಮತ್ತೂ ಕುರುವಿನ ಮ್ಯಾಗ ಹುಣ ಹುಟ್ಟಿದ್ಹಾಂಗ ನಿನ್ನೆ ಅಪನಾರು ಚಿಗರೀ ಬೆನ್ನತ್ತಿ ನಮ್ಮನ್ನ ಬಿಟ್ಟಕ್ಯಾಸ ಮುಂದ ನಡದ ನುಸಿಗೋಳ

ವನದಾಗ ಹೊಕ್ಕೊಂಡರ; ಅಲ್ಲಿ ಸಕುಂತರೆಂತ ವಂದ ಹುಡಿಗಿ ಇವನ ಕಣ್ಣಿಗೆ ಬಿತ್ತಂತ; ಇನ್ನೇನ ಬರತಾನಿವ ಊರಿಗೆ! ಯಾ ಶಿವನ! ನಮ್ಮ ಕಾಡೂ ಕಾಲತಿ ಬಾ, ನೀ ಏನ ಮಾಡಿ! ಇಲ್ಲೇ ಅಡಿವ್ಯಾಗ ನಮ್ಮ ದಾಕ್ಕತಿ. ಅವಗಂತೀ ನಿನ್ನೆ ರಾತರಿನ್ಯಾಗ ನಿದ್ದಿನ ಇಲ್ಲ. ಮನಸೆಲ್ಲಾ ಆ ಹುಡುಗೀ ಹಂತ್ಯಾಕ! ಎವ್ವಾ ಎತ್ತ ಮಾರ್ಯಾಗಿ ಕುಂತಿದ್ದಿ! (ಅತ್ತಿತ್ತ ತಿರುಗಿ ನೋಡುತ್ತ) ಹಾ ನನ್ನ ವಡ್ಯಾ ಇತ್ತೇ ಬರತಾನು; ಸಂಗಾಟ ಬ್ಯಾಡ್ರ ಹೆಂಗಸರ ಬ್ಯಾರೆ ಕೊಳ್ಳಾಗ ಮಾಲಿ ಹಾಕ್ಕೊಂಡಕ್ಯಾಸ ಬಿಲ್ಲ ಹಿಡ ಹಿಡ ಕೊಂಡ ಬರತಾರು. ಬರಲಿ; ನಾ ಒಂದ ಜರಾ ಮತ್ತಟ ದಣವಾದಾಂಗ ಮೋತಿ ಮಾಡಿಕೊಂಡಕ್ಯಾಸ ಇಲ್ಲೇ ನಿಲ್ತೇನ; ಅಂದರಾರ ನನ್ನ ಬಿಟ್ಟಾನಿವ. (ಎಂದು ಊರಗಟ್ಟಿಗೆಗೆ ಗದ್ದವನ್ನು ಹೊಂದಿಸಿ ನಿಲ್ಲುತ್ತಾನೆ. ಆ ಮೇಲೆ, ಮೇಲೆ ಹೇಳಿದ ಪ್ರಕಾರ ಅರಸು ಬ್ಯಾಡತಿಯರ ಕೂಡ ಬರತ್ತಾನೆ.)

ಅರಸು : [ಶಕುಂತಲೆಯ ಧ್ಯಾನದಲ್ಲಿ ಮುಳುಗಿ ತನಗೆ ಅಂದುಕೊಳುತ್ತಾನೆ.]

(ಪದ)*

ದಾಟಿ : ("ವಯ್ಯಾರೀ ಒಲಿಸೀದಳೇನೊ ||ಪಲ್ಲ|| ಅತಿಮೋಹವೆರಸಿ |ರತಿ ಸುಖ ಸುರಸಿ|| ಕೃತಿಮೆ ಎನ್ನನು ಮರಸಿದಳೇನೊ |೧|| ಎಂಬಂತೆ.")

ಮೋಹಾಬ್ಧಿಯೊಳ್ಮುಳುಗೀಹೆನಯ್ಯೊ | ||ಪಲ್ಲ||
ಯುವತಿಯ ಸಾಧನ | ಇರಲತಿ ಕಠಿಣ||
ಅವಳ ಭಾವಗಳೆಲ್ಲಾ ನೆನೆದು ನೆನೆದು ನಾ ||೧||
ಕನಸಿನೊಳ್ ಸುಖವನು | ಕಂಡು ಹಿಗ್ಗುವವೊಲು||
ಮನದಿಜಾಗೃತನಿರ - |ಲನುಭವಿಸುವೆ ನಾ ||೨||
ಮನಸಿಜನು ಕೃತಾ - |ರ್ಥನು ಆಗದ ಮುನ್ನ ||
ಮನಸಿರ್ವರವು ರತಿಕ್ರೀಡಿಸುತಿರೆ ನಾ ||೩||

(ಸ್ವಲ್ಪ ಸಕ್ಕು) ತಾನು ಒಬ್ಬರಲ್ಲಿ ಇಚ್ಛೆ ಮಾಡಲು ತನ್ನ ಮನಸ್ಸು ಹ್ಯಾಗೆ ಅವರಲ್ಲಿರುವುದೋ ಅದೇ ಪ್ರಕಾರವೇ ಅವರ ಮನಸ್ಸು ತನ್ನಲ್ಲಿರುವದೆಂದು ಕಾಮೀ ಪುರುಷನು ತರ್ಕ ಕಟ್ಟುತ್ತಾನೆ; ಇದರಿಂದ ಆತನು, ಉಪಹಾಸಕ್ಕೆ ಮಾತ್ರ ಪಾತ್ರನಾಗುತ್ತಾನೆ.

---

* कामं प्रिया न सुलभा मनस्तु तद्भावदर्शनाश्वासि
अकृतार्थेऽपि मनसिजे रतिमुभयप्रार्थना कुरुते ।।१।।

(ಪದ)*

ದಾಟಿ : ("ಹರಿಯೇ ಪೋಗುವೆ ನಾನು ಮು- | ನ್ನಿರುತಿರುವೊಬ್ಬನೆ ನೀನು|
ತಿರುಕನಾಗಿ ಇರುತಿರುವ ಭೂಸುರನು |ಭರದಲೊದ್ದ ತ |ನ್ನ ಹಿರಿಯತನೇನು")
ಇದರಂತೆ ಇರುತ್ತದೆ.

ಬರಿದೆ ಮೋಹಾನಂದದೊಳ್ ನಾ - |
ನಿರುವೇನಾಶ್ಚರ್ಯವಿದು ||
ತರುಣಿಯ ಭಾವಗ-! ಳಿರೆ ಸಹಜಿಕವು |
ಮರುಳಹನೆನ್ನಗೋ -| ಸ್ಕರವೆಂದರಿದು ||ಪಲ್ಲ||

ಫುಲ್ಲನೇತ್ರೆ ನಿತಂಬದ ಭಾರಕೆ|
ಮೆಲ್ಲಕೆ ಹೆಜ್ಜೆಗಳಿಡಲು ||
ಬಳ್ಳಿಲಿ ಸೆರಗನು | ಬಟ್ಟನ ಕುಚಯುಗ- |
ಳಲ್ಲಿ ಸರಿಸಿ ದೂರ- | ದಲ್ಲಿ ನಿಂದಿರಲು ||೧||

ತನ್ನೊಳು ತಾ ಧ್ಯಾನಿಸುತ ಮ- |
ತ್ತನ್ಯವಸ್ತುಗಳನ್ನು ||
ರನ್ನೆ ನೋಡಿ ನಗು- | ವನ್ನೆಗಸ್ಮಿಕ |
ವೆನ್ನನೀಕ್ಷಿಸಿ ಕ್ಷಣ | ಕಣ್ಣುದಪ್ಪಿಸಲು ||೨||
ಬಾಲೆ ತಾ ಪೋಗುವ ವ್ಯಾಳ್ಯದಿ |
ಕಾಲೊಳು ದರ್ಭವು ನಡಲು||

ಕೀಳಿ ತೆಗೆವ ನೆವ - | ಕಾಗಿ ತಾ ನಿಲಲು |
ತಾಳಿದಳ್ ಮಮತೆ ಎನ್ನೊಳೆಂದರಿದಂ ||೩||

ಸಾರಾಂಶ, ಅವಳೇನೇನು ಮಾಡಿದಳೋ ಅದೆಲ್ಲ ನನ್ನಗೋಸ್ಕರವೇ ಮಾಡಿದಳೆಂದು ನಾನು ತಿಳಿಯುತ್ತೇನೆ. ಕಾಮೀಜನರಿಗೆ ಎಲ್ಲವು ತಮ್ಮಂತೆ ಕಾಣಿಸುತ್ತದೆ.

ವಿದೂಷಕ : (ಹಾಗೆಯೆ ನಿಂತುಕೊಂಡು) ನನ್ನ ಪಪ್ಪಾ, ರಾ ರಾ ಮಾಡಾಕ ನನ್ನ ಕೈ ಎತ್ತಾಣೆಲ್ಲ.

---

* स्निग्धं वीक्षितमन्यतोऽपि नयने यत्प्रेरयन्त्या तया
यातं यच्च नितम्बयोर्गुरुतया मन्दं विलासादिव
मा गा इत्युपरुद्धया यदपि सा सासूयमुक्ता सखी
सर्वं तत्किल मत्परायणमहो कामी स्वतां पश्यति ।।३।।

ಬರೆ ಬಾಯಿಲೇನ ಅಂತೇನ.

ಅರಸು : ಏನೋ ಹನುಮನಾಯಕಾ, ಹೀಗ್ಯಾಕಾಯಿತು ನಿನ್ನವಸ್ಥೆ?

ವಿದೂ : ಹಃ ! ತಾನ ಬಡದಕ್ಕಾಸಿ, ಮತ್ತ ತಾನ ಅಳತಿ ಯಾಕಂತ ಕೇಳುತಾನು!

ಅರಸು : ನಿನ್ನ ಮಾತಿನ ಅಭಿಪ್ರಾಯ ನನಗೆ ತಿಳಿಯಬರಲಿಲ್ಲ. ಸ್ಪಷ್ಟವಾಗಿ ಹೇಳು.

ವಿದೂ : ನನ್ನ ವಪ್ಪಾ, ನದ್ಯಾಗ ಬೆಳದ ನಿಂತ ಹುಲ್ಲು ತನ್ನ ತಾನ ಬಾಗತತ್ತೋ? ಏನ್ ನದೀ ಸೆಳವಿಗೊ?

ಅರಸು : ನದೀ ಸೆಳವಿಗೆ.

ವಿದೂ : ಕ್ಹಾಂಗ ನೋಡ; ನಾ ಹೀಂಗಾಗೂ ಕಾಣ್ಣ ನೀನ.

ಅರಸು : ನಾನು ಹ್ಯಾಗೆ?

ವಿದೂ : ನೀ ನಿನ್ನ ಕಾರಬಾರನೆಲ್ಲಾ ಬಿಟ್ಟಕ್ಯಾಸಿ ಅಡವೀಚಂಚೇರ ಹಾಂಗ ಇಲ್ಲಿ ಬಂದ ಕುಂತಿ; ದಿನಾ ದಿನಾ ನನಗ ಮಿಕಾ ಹೊಡೆತಾ ಅಂತ ಹೇಳತಿ; ಗುಡದಾಗ ಓಡಿ ಓಡಿ ನನ್ನ ಕೈಕಾಲೆಲ್ಲಾ ಕೀಲದಪ್ಪಿ ಹೋಗಿದಾವು. ಅದೇನರ ಗೊಂತಂತೆ ನಿನಗ? ಮಂದಾರ ದಿನ ನನ್ನ ವೈಬ್ಯಾಡಪಾ ಗುಡದಾಗ. ನಿನ್ನ ಕಾಲಬೀಳತೇನು; ಅಂದರಾರ ಒಂದ ಜರಾ ದಣವಾರಿಸಿಕೊಂಡೇನು.

ಅರಸು : (ತನ್ನೊಳಗೆ) ಇವನು ಸಹ ಬೇಟೆಗೆ ಬೇಸತ್ತಿದ್ದಾನೆ ನನಗೂ ಕಣ್ವ ಮುನಿಗಳ ಕನ್ನಿಕೆಯನ್ನು ನೋಡಿದಾರಭ್ಯ ಮೃಗಯೆ ಆಡುವದರಲ್ಲಿ ಮನಸು ಹೋಗುವದಿಲ್ಲ.

(ಪದ)*

ದಾಟ : ಬಾರೊ ಬಾರೊ ಪ್ರಿಯನೆ ಬಾರೊ ಬಾರೊ| ಎನ್ನ ಮನೆಗೆ| ಎನ್ನ ಜೀವನಿಲ್ಲದು|| ಎಂಬ ಪದದಂತೆ.

ಪೂಡಲಾರೆ ಬಾಣವ || ಮೃಗಗಳನು||
ಕಾಡಲಾರೆ ಬಿಲ್ಲೊಳು ||ಪಲ್ಲ||
ಯುವತಿಯ ವನದೊಳಿ-| ರುವ ಮೃಗಗಳವಳ|
ತವರಮನೆಯವಾಗಬೇಕು || ನಾ ಪೂಡಲಾರೆ |೧||

---

* न नमीयतुमधिज्यमस्मि शक्तो
धनुरिदमाहितसायकं मृगेपु
सहवसतिमुपेत्य यैः प्रियायाः
कृत इव मुग्धविलोकितोपदेशः ।। ३।।

ಎಳೆ ಎರಳೆಗಳು ಪ್ರೀ-ಯಳಿಗೆ ಮಮತೆಯೊಳ್ಳಂ |
ಚಲನೋಟ ಕಲಿಸಿರಬೇಕು ||೨||
ಸುಂದರಿಯಾನೆಯ | ಮಂದಗತಿಯ ಬಾಲ್ಯ |
ದಿಂದೆ ತಾ ಕಲಿತಿರಬೇಕು ||೩||

ವಿದೂ : [ಅರಸನ ಮೋರೆ ನೋಡಿ] ಎಲಾ ಇವನ! ತನ್ನ ಮನಸಿನಾಗ ತಾ ಮಗನಾಗೀದಾನು! ನನ್ನ ಮಾತಿಗೆ ಉತ್ರಾನ ಇಲ್ಲ! ಏನಪಾ ಇಷ್ಟೊತ್ತನಕ ನಿನ್ನ ಮುಂದ ಹೇಳಿಕೊಂಡದ್ದೇನ ಅಡಿವ್ಯಾಗ ಕುಂತ ಅತ್ತ್ಹಾಂಗೇನ?

ಅರಸು : (ನಕ್ಕು) ಹನುಮನಾಯಕಾ, ಮನಸ್ಸಿನಲ್ಲಿ ಮತ್ತೇನೂ ಇಲ್ಲವೊ. ನಿನ್ನ ಮಾತು ಮೀರಬಾರದೆಂತ ಸುಮ್ಮನಿದ್ದೆ; ಇಷ್ಟೆ.

ವಿದೂ : ಬಲೆ ನಮ್ಮಪ್ಪ. ಹಂಗರ ರಾಂರಾಂ, ನನ್ನ ವಡ್ಯಾ ಹೊಕ್ಕನ [ಹೊರಡುತ್ತಾನೆ.]

ಅರಸು : ಹೋಗಬೇಡವೊ ಸ್ವಲ್ಪ ನಿಲ್ಲು. ನನ್ನ ಮಾತನಾದರೂ ಪೂರಾ ಕೇಳು,

ವಿದೂ : ಮತ್ತೇನ್ ನನ್ನ ವಡ್ಯಾ ಮಾತು?

ಅರಸು : ನೀನು ವಿಶ್ರಮಿಸಿಕೊಂಡ ಬಳಿಕ ನನ್ನದೊಂದು ಮಾತು ಅನಾಯಾಸದಿಂದಾಗತಕ್ಕದ್ದುಂಟು. ಕೇಳುವೆಯಾ?

ವಿದೂಷಕ : ಏನಪಾ ಅದು? ಶಾವಿಗೀ ಉಣ್ಣೂದೇನ?

ಅರಸು : ಅಡವಿಯೊಳಗೆಲ್ಲಿ ಶಾವಿಗಿಯೊ? ನಿಲ್ಲು ಹೇಳುತ್ತೇನೆ. (ಮುಂದಕ್ಕೆ ನೋಡಿ) ಯಾರವನು ಅಲ್ಲಿ?

ದ್ವಾರಪಾಲಕ : (ಮುಂದಕ್ಕೆ ಬಂದು) ಆಜ್ಞಾಪಿಸಬೇಕು ಜೀಯಾ.

ಅರಸು : ಎಲೋ ದ್ವಾರಪಾಲಕಾ, ಸೇನಾಪತಿಗೆ ಹೋಗಿ ನಾನು ಕರೆದಿದ್ದೇನೆಂದು ಹೇಳು.

ದ್ವಾರಪಾಲಕ : ಮಹದಾಜ್ಞೆ. (ಎಂದು ಹೋಗಿ ಸೇನಾಪತಿಯನ್ನು ಕರೆದುಕೊಂಡು ಬಂದು ಆತನಿಗೆ ಹೇಳುತ್ತಾನೆ.) ಮಹಾರಾಯರು ತಮ್ಮ ದಾರೀ ನೋಡುತ್ತ ಕುಳಿತುಕೊಂಡಿದ್ದಾರೆ. ಮುಂದಕ್ಕೆ ಹೋಗಬೇಕು, ದೇವರು.

ಸೇನಾಪತಿ : (ಅರಸನನ್ನು ನೋಡಿ ತನ್ನೊಳಗೆ) ಮೃಗಯೆ ಆಡುವದಕ್ಕೆ ಜನರು ದೂಷಿಸುತ್ತಾರೆ. ಪರಂತು ನಮ್ಮ ಮಹಾರಾಯರಿಗೆ ಅದು ಒಳ್ಳೇ ಗುಣಕಾರಿಯಾಗಿ ಕಂಡು ಬರುತ್ತದೆ.

(ಪದ)

ದಾಟಿ : ಇಸತನಧನಕೀ ಕೌನ ಬಢಾಯಿ| ದೇಖತ ನಯನೋಮೆ ಮಟ್ಟಿ ಮಿಲಾಯಿ||
ಎಂಬ ಪದದಂತೆ.

ಮಹಿದೇವಿ ರಮಣಗೀ| ಮೃಗಯದ ಶ್ರಮವು |
ಬಹುಪರಿಯಿಂ | ಹಿತಾ |ವಹವಾಗಿರುವದು || ಪಲ್ಲ ||
ಬಿಲ್ಲು ಹಗಲು ಎಲ್ಲ ಜಗ್ಗುತಲಿರಲು |
ಕಲ್ಲಿನೋಲ್ ಭುಜಗಳು ಕಠಿಣವಾಗಿಹವು || ೧ ||

ಕಡುಬಿಸಿಲೊಳು ಬೆಮರ್ವನು ಬ್ಯಾಸರನು |
ಬಡವಾಗಿರಲು ದೇಹ ಬಲದಿಂ ಹೆಚ್ಚಿಹನು || ೨ ||

ಕಾಂತಾರದೊಳು ಮೃಗಕುಲವ ಜಡಿದು ತಾ |
ಕುಂತುಕೊಂಡಿಹ ಸಿಂಗನಂತೆ ಶೋಭಿಪನು || ೩ || *

(ಮುಂದಕ್ಕೆ ಬಂದು) ವಿಜಯೋಸ್ತು ಜೀಯಾ, ಬೆಂಟೇಗೋಸ್ಕರವಾಗಿ ಯಾವತ್ತೂ ಸೈನ್ಯವು ಅರಣ್ಯವೆಲ್ಲಾ ಸುತ್ತುಗಟ್ಟಿದೆ. ಇನ್ನೇನು ಕಾರಣದಿಂದಾಲಸ್ಯ ಮಾಡೋಣವಾಗಿದೆ?

ಅರಸು : ಈ ಹನುಮನಾಯಕನು ಮೃಗಯೆಗೆ ದೂಷಣೆ ಹಚ್ಚಿ ನನ್ನ ಮನಸ್ಸಿನೊಳಗಿನ ಈರ್ಷೆಯೆಲ್ಲಾ ಕೆಡಿಸಿಬಿಟ್ಟಿದ್ದಾನೆ.

ಸೇನಾಪತಿ : (ವಿದೂಷಕನಿಗೆ) ಗೆಳೆಯಾ, ನೀನು ಒಳ್ಳೇ ಯೋಗ್ಯವಾದ ಕೆಲಸವನ್ನು ಮಾಡಿರುವಿ. ಆದರೆ ಇನ್ನು ಮೇಲೆ ನಿನ್ನ ಮತವು ಮಾತ್ರ ತಿರುಗಿಸಬೇಡ. ನಾನು ಒಂದು ಕ್ಷಣ ಅರಸಿನ ಮನಸಿನಂತೆ ಮಾತನಾಡುತ್ತೇನೆ. [ಎಂದು ಅರಸನ ಕಡೆಗೆ ಮೋರೆ ತಿರಿವಿ] ದೊರೆಯೆ, ಈ ಮೂರ್ಖನಿಗೆ ಏನು ಗೊತ್ತುಂಟು? ತನ್ನ ಮನಸಿಗೆ ಬಂದಂತೆ ಬೊಗಳುತ್ತಾನೆ. ರಾಯರ ಚಿತ್ತಕ್ಕೆ ಬಂದದ್ದೇ ಲೇಸು. ಮೃಗಯೇ ಆಡುವದರಿಂದ ಏನಾಗುತ್ತದೆಯೆಂದರೆ, ಹೇಳುತ್ತೇನೆ ಕೇಳಬೇಕು:-

(ಪದ)

ದಾಟಿ : ಯಾರಗೊಡವಿ ನಮಗೇನೆ ಮಾನಿನಿ| ಸೇರದ ಜನರೊಂದಾಡುವರೆ ||
ಎಂಬ ಪದದಂತೆ.

ಮೃಗಯದ ಮಾತಿಗೆ ಮರುಳರು ದೂಷಿಸಲ್ |
ಮಿಗಲಾದ ವಿಷಯಗಳ್ ಸರಿಬಹವೆ? |ಪಲ್ಲ ||

---

* अनवरतधनुर्ज्यास्फालनक्रूरपूर्वं
रविकिरणसहिष्णु क्लेशलेशैरभिन्नम्
अपचितमपि गात्रं व्यायतत्वादलक्ष्यं
गिरिचर इव नागाः प्राणसारं विभर्ति ।।४।।

ಭರದಿ ಬ್ಯಾಸರದೆ ಬಿಸಿಲ್ಗಾಳಿಯೊಳ್ತಿರ|
ತಿರಗುತಿರಲ್ ಹೊದರ್ ಹೊದರುಗಳೊಳ್ ||
ಕರಗಿ ಮಾಂದ್ಯ ಕೇಳ್ ಮೈ ಪುಟಚೆಂಡಿನ|
ಸರಿಯಾಗುವದು ಪೇಳ್ವೆನು ನಿನ್ನೊಳ್ ||೧||

ಕಡು ಭಯಂಕರ ಪುಲಿಕರಡೆಗಳ್ ಮೈಮ್ಯಾ|
ಲಡರಿ ಬರಲ್ ಖಡುಗದಲೆರಡು||
ಕಡಿದು ತುಂಡು ಮಾಡಲು ಭಯದೊಳು ಮನ|
ಜಡತೆಯ ಗಡ ಕಳೆವದು ನೋಡು ||೨||

ಹಾರುತ್ಹಾರುತಲೋಡುವ ಹರಿಣದ ಮ್ಯಾಲ್ |
ತೋರುವ ಬಿಳಿ ಚಿಕ್ಕೆಯ ಮ್ಯಾಲೆ||

ಪೂರಾ ಗುರಿಯನಿಟ್ಟದೆ ಹೊಡೆಯಲು ಧನು- |
ರ್ಧಾರಿಗೆ ಬಹುಮಾನವದಲ್ಲೆ ||೩||*

ವಿದೂ : [ಕ್ರೋಧಾವಿಷ್ಟನಾಗಿ] ಹೋಗಪಾ ಹೋಗು ಮತ್ತ ನೀ ಯಾವ ಕಡಿಂದ ಬಂದಿ ನಡಬರಕ! ಸುಳ್ಳ ಯಾಕ ವದರ್ಯಾಡಿಕೊಂತಿ? ನಿನ್ನ ಮಾತ ಅಪನಾರವಂದ ಕೇಳಾಕಿಲ್ಲ. ಹೋಗ ನೀ ಒಬ್ಬನ ಅಡಿವೆಡಿವಿ ತಿರಿಗಿಕೊಂತ ಬೇಕಾರ. ಯಾವಲ್ಲಾರ ಒಂದ ಕಡ್ಡಿ ಮನುಸೆರ ಮೂಗ ಹರದೇನಂತ ಕುಂತಿರತತಿ. ಕದರ ಬಾಯಾಗ ಹೋಗಿ ಬೀಳ ಅಮಾತ.

ಅರಸು : ಸೇನಾಪತಿ, ಈಗ ನಾವು ಮುನಿಗಳಾಶ್ರಮದಲ್ಲಿ ಬಂದಿದ್ದೇವೆ. ಕಾರಣ, ಇಲ್ಲಿ ಬೇಂಟೆಯಾಡುವದು ನನ್ನ ಮನಸಿಗೆ ಚೆನ್ನಾಗಿ ತೋರುವದಿಲ್ಲ.

(ಪದ)

ದಾಟಿ : ಹೇಗಿರಲೇ ನಾನು ಕಾಂತಾ ಎನಗೆ ಎರವಾದನೆ | ಪಲ್ಲ||
ಸಣ್ಣವಳೆಂದೆನ್ನ ಬಣ್ಣಿಸಿ ಕರೆದೊಯ್ದು | ಬಣ್ಣದ ಮಾತಾಡಿ ಪೋದನೆ ಎಂಬ ಪದದಂತೆ.

---

* मेदश्छेदकृशोदरं लघु भवत्युत्थानयोग्यं वपुः
सत्वानामपि लक्ष्यते विकृतिमच्चितं भयक्रोधयोः
इत्कर्पः स च धन्विनां यदिषवः सिध्यान्ति लक्ष्ये चले
मिथ्यैव व्यसनं वदन्ति मृगयामीदृग्विनोदः कुतः ।। ६।।

ಬ್ಯಾಂಟೆಯು ಬ್ಯಾಡವೀಗ |ಬಂದಿಹೆವಾಶ್ರಮದಾಗ ||ಪಲ್ಲ||
ಎರಳೆ ಹಿಂಡುಗಳೆಲ್ಲ | ನೆರಳೊಳ್ ನಿರ್ಭಯದಿಂದ
ನೆರೆದು ಮೆಲಕು ಹಾಕಿಕೊಳ್ಳಲಿ ||೧||

ಕಾಡು ಕೋಣಗಳೆಲ್ಲ ಕೆರೆಯೊಳು ಮನದಣಿ
ಕೋಡನಪ್ಪಳಿಸುತ ಕುಳ್ಳಲಿ ||೨||

ಹುದಲೊಳ್ ವರಾಹಗಳ್ಕೆದರಾಡಲೀ ಧನು |
ವೆದೆಯನುಚ್ಚಲು ಶ್ರಮದೂರಲಿ ||೩||

ಸೇನಾಪತಿ : ಪ್ರಭುಗಳ ಚಿತ್ತಕ್ಕೆ ಬಂದಂತೆ ಆಗಲಿ.

ಅರಸು : ಹಾಗಾದರೆ ಹೋಗಿ ಯಾವತ್ತೂ ಅರಣ್ಯವೆಲ್ಲಾ ಸುತ್ತುಗಟ್ಟಿದಂಥ ಸೈನ್ಯವನ್ನು ಕರೆ ಕಳುಹಿಸು, ಹಾಗೂ ಯಾರೂ ಈ ತಪೋವನಕ್ಕೆ ಉಪದ್ರವ ಕೊಡದಂತೆ ಶೀಘ್ರವಾಗಿ ವ್ಯವಸ್ಥೆ ಮಾಡು. ತಪಸ್ವಿಗಳಿಗೆ ತೊಂದರೆಯಾದರೆ ತತ್‌ಕ್ಷಣವೆ ಶಾಪವನ್ನು ಕೊಟ್ಟಾರು ಬಲ್ಲೆಯಾ.

||ಪದ ||

ದಾಟಿ : ಮನಸು ಬಾರದು ಮಂಚಾ|ಮೃದು ಆಸನಾ | ಮುನಿದನ್ಯಾಕೆನ್ನ ಕಾಂತಾ|| ಎಂಬ ಪದದಂತೆ.

ವನದೊಳಾಟವು ಸಾಕೈ | ಸೇನಾಪತೆ |
ಮುನಿಗಳು ಮುನಿವಾರೈ ||ಪಲ್ಲ||
ಮನಸಿನೊಳ್ ಪರಮಾತ್ಮನ ಧ್ಯಾನದಿ ಮೌನ |
ವನ ತಾಳ್ದಿರೆ ವಿಘ್ನವಾಗುವರೇನಯ್ಯ ||ಅನುಪಲ್ಲ||
ಶಾಂತರಾಗಿರುತಿಹರು | ಕಾಡಿದರೆ ಕೇ-
ಳಿಂತು ಸೇರರವರು||

ಸ್ವಂತ ತೇಜವ ಸೂರ್ಯ-ಕಾಂತ ಮಣಿಯು ಬಿಸಿ- |
ಲ್ಗಾಂತ ವ್ಯಾಳ್ಯದಿ ತೋರಿದಂತೆ ಕೋಪಿಸುವರು ||೧||

ಕೂಗಲು ವನದೊಳು ಅವರು ಧ್ಯಾನ - |
ದಾಗ ಕುಳ್ಳಿರೆ ಕೆಡಲು ||
ಮೇಘದಿಂದಿಳಿವಂಥ ಮಿಂಚಿನೊಲ್ ಶಾಪವ |
ತಾಗಿಸಿ ನಮ್ಮನು ಈಗಲೆ ಸುಡುವರು ||೨||

ಕಾಮಕ್ರೋಧಗಳನ್ನು | ತಪಸ್ವಿಗ - |
ಳ್ಕಡಿದು ಬಿಟ್ಟವರಿನ್ನು |
ಕೋಮಲ ಹೃದಯಕೆ ಕಠಿಣವು ತೋರಲು
ಭೂಮಿಪತಿಯ ಸಂಗ ಬ್ಯಾಡವೆಂಬುವರಯ್ಯ ||೩||*

ಸೇನಾಪತಿ : ಪ್ರಭುಗಳ ಆಜ್ಞೆಯ ಮೇರೆಗೆ ಎಲ್ಲಾ ವ್ಯವಸ್ಥೆ ಮಾಡುತ್ತೇನೆ. (ಎಂದು ಹೊರಟು ಹೋಗುತ್ತಾನೆ.)

ವಿದೂ : ಹೋಗೋ, ಮಂಗ ನನ ಮಗನ, ಹೋಗ. ದಣೇರ ನಿನ್ನ ಮಾತ ವಂದಸುದಾ ಕೇಳಲಿಲ್ಲ.

ಅರಸು : (ಸೇವಕ ಜನರನ್ನು ನೋಡಿ) ನಿಮ್ಮ ಬೇಂಟೇ ವೇಷವೆಲ್ಲಾ ತೆಗೆಯಿರಿ; ರೈವತಕಾ, ನೀನು ನಿನ್ನ ಕೆಲಸಕ್ಕೆ ಹೊರಟುಹೋಗು.

ಸೇವಕರು : ಒಳ್ಳೇದು ಜೀಯಾ (ಎಂದು ಹೊರಟುಹೋಗುತ್ತಾರೆ.)

ವಿದೂ : ಭಲೇ ನಮ್ಮಪ್ಪ. ಎಲ್ಲಾರನು ಕಳಸಿಕೊಟ್ಟಿ. ಇನ್ನ ಬಾ ಇಲ್ಲೆ; ನೋಡವ ಕೀಗಿಡಕ ಚಪ್ಪರದ್ಹಾಂಗ ಬಳ್ಳಿ ಹಬ್ಬೇತಿ, ಬುಡಕ ಚೌಕಾನ ಕಲ್ಲೂ ಹಾಸೇತಿ, ಇಲ್ಲೇ ಒಂದು ಜರಾ ಕುಂತಕ್ಯಾಸಿ ಆಸರಗಳೂನು.

ಅರಸು : ನಡಿ

(ಇಬ್ಬರೂ ಮುಂದಕ್ಕೆ ಹೋಗಿ ಕುಳಿತುಕೊಳ್ಳುತ್ತಾರೆ.)

ಅರಸು : ಹನುಮನಾಯಕಾ, ನಿನ್ನ ಕಣ್ಣುಗಳು ಸಾರ್ಥಕವಾಗಲಿಲ್ಲವೊ. ಯಾವತ್ತೂ ಪೃಥ್ವಿಯಲ್ಲಿ ನೋಡತಕ್ಕಂಥಾ ಸುಂದರ ಪದಾರ್ಥಗಳಲ್ಲಿ ಅತ್ಯುತ್ಕೃಷ್ಟ ವಾದಂಥಾದ್ದು ಇನ್ನೂವರೆಗೆ ನೀನು ನೋಡಲಿಲ್ಲ.

ವಿದೂ : ನನ್ನ ಒಡ್ಯಾ, ಕಾಮಾಣ್ಣ ಕುಂತ್ಹಾಂಗ ಇದರಿಗೆ ಕುಂತೀದಿ. ನಿನ್ನ ಕಿಂತಾ ಹೆಚ್ಚಿಂದದ್ಯಾವದತಿ.

ಅರಸು : ತಮ್ಮ ತಮ್ಮ ಪದಾರ್ಥಗಳು ಎಲ್ಲರಿಗೂ ಚೆನ್ನಾಗಿಯೆ ಕಾಣಿಸುತ್ತವೆ. ಆದರೂ ಈ ವನಕ್ಕೆ ಭೂಷಣಳಾಗಿರುವ ಶಕುಂತಲಾ ಎಂಬವಳನ್ನು ಅನುಲಕ್ಷಿಸಿ ನಾನು ಮಾತನಾಡಿದೆ.

---

* शमप्रधानेपु तपोधनेपु
गूढं हि दाहात्मकामस्ति तेजः ।
स्पर्शानुकूला इव सूर्यकान्ता-
स्तदन्यतेजोऽभिभवाद्धमान्ति।। ७।।

ವಿದೂ : ಹೋಗ್ಗೋ, ಮಂಗ ನನ ಮಗನ, ಹೋಗ. ದಣೇರ ನಿನ್ನ ಮಾತ ವಂದಸುದಾ ಕೇಳಲಿಲ್ಲ.

ಅರಸು : (ಸೇವಕ ಜನರನ್ನು ನೋಡಿ) ನಿಮ್ಮ ಬೇಂಟೇ ವೇಷವೆಲ್ಲಾ ತೆಗೆಯಿರಿ; ರೈವತಕಾ, ನೀನು ನಿನ್ನ ಕೆಲಸಕ್ಕೆ ಹೊರಟುಹೋಗು.

ಸೇವಕರು : ಒಳ್ಳೇದು ಜೀಯಾ (ಎಂದು ಹೊರಟುಹೋಗುತ್ತಾರೆ.)

ವಿದೂ : ಭಲೇ ನಮ್ಮಪ್ಪ. ಎಲ್ಲಾರನು ಕಳಿಸಿಕೊಟ್ಟಿ. ಇನ್ನ ಬಾ ಇಲ್ಲೆ; ನೋಡವ ಕೀಗಿಡಕ ಚಪ್ಪರದ್ಹಾಂಗ ಬಳ್ಳಿ ಹಬ್ಬೇತಿ, ಬುಡಕ ಚೌಕಾನ ಕಲ್ಲೂ ಹಾಸೇತಿ, ಇಲ್ಲೇ ಒಂದು ಜರಾ ಕುಂತಕ್ಯಾಸಿ ಆಸರಗಳೂನು.

ವಿದೂ : (ತನ್ನೊಳಗೆ) ಹಾ ಬಂದಿ ಬಾ ಸನ್ಯಾಕ. ನಾ ಇನ್ನಮ್ಯಾಗ ತಿರೆತಿರವಿ ಕೇಳತೇನೂ, ಮಾತ ಬೆಳೀತಾವು, ಅದೇನ ಪಾಡಲ್ಲ. (ಅರಸನಿಗೆ) ಏನಪಾ ನನ್ನ ವಡ್ಯಾ, ನುಸಿಗೋಳ ಮಗಳಾಕಿ; ಮತ್ತ ಆಕೀ ಹಂತ್ಯಾಕ ನೀ ಹೋಗಾಣೆಲ್ಲ ಮುಟ್ಯಾಣೆಲ್ಲ; ಬರೇ ಮನಸಿಟ್ಟೇನುಪೇಗಾ?

ಅರಸು : ಹನುಮನಾಯಕಾ, ಪುರುವಂಶದಲ್ಲಿ ಹುಟ್ಟಿದಂಥ ಜನರ ಮನಸ್ಸು ಯಾವ ಪದಾರ್ಥದಲ್ಲಿ ಅಭಿಲಾಶೆ ಮಾಡತಕ್ಕದ್ದೋ ಅದರಲ್ಲಿಯೇ ಹೋದೀತೆ ಹೊರ್ತು ಅನ್ಯ ಪದಾರ್ಥಗಳಲ್ಲಿ ಎಂದಿಗೂ ಹೋಗಲರಿಯದು.

(ಪದ)

ದಾಟಿ : ಬರಲಿಲ್ಲವ್ಯಾಕೆನ್ನ ಕಾಂತಾ| ನಿನ್ನ | ಬೆರೆತಕಾರಣದಿ ಬಾಹದಲಲ್ಲೆ ನಿಂತಾ|| ಎಂಬ ಪದದಂತೆ.

ಮುನಿಗಳ ಮಗಳಲ್ಲ ತಿಳಿಯೊ|| ದೇವಾಂ-
ಗನೆಯಿಂದ ಜನಿಸಿದ ಕನಕಪುತ್ಥಳಿಯೊ ||ಪಲ್ಲ||

ಚಲ್ವಗಂಗಳೆ ಚಾರುಲೀಲೆ | ಪೊಸ -
ಮಾಲ್ಲೆಕುಸುಮವೆಕ್ಕೆ ಗಿಡದೆಲೆಮ್ಯಾಲೆ||
ಚೆಲ್ಲಿದ ತೆರನಂತೆ ಬಾಲೆ | ವನ -
ದಲ್ಲಿ ಸಿಲ್ಕಿಹಳೊ ಮುನಿಯ ಕರದಲ್ಲೆ ||೧|| *

ಮಂಜುಳ ಮೃದು ನುಡಿಯವಳು | ದೇವ-
ನಂಜುಂಡ ನಡವಿಯೊಳ್ ಮದನನ ಶುಕಳು ||
ಪಂಜರವಗಲಿ ಬಂದಿಹಳು | ಬಹ -
ಳಂಜಿಕೊಂಡಿಹಳೊ ತಾಪಸಕಷ್ಟಕವಳು ||೨||

ಪೊಳೆಯ ಸೆಳವಿನೊಳ್ ಬಂದಿರುವ | ಸಣ್ಣ
ಮಳಲೊಳ್ ಸಿಲ್ಕಿಹ ರತ್ನದ್ಧರಳಂತೆ ಪೊಳೆವಾ ||
ಚೆಲುವ ಸುದತಿಯಳ ಇರವ | ನೋಡಿ
ಬಳಲುವೆ ಬಲ್ಲವನಿರೆ ಕೇಳ್ಭೃತ್ಯಯವಾ ||೩||

ವಿದೂ : (ನಕ್ಕು) ಮನ್ಯಾನ ಅವಗೋಳು ರತುಸಾಗಿದಾರ ಒಬ್ಬರಕಿಂತ ಒಬ್ಬರು. ಅವರನ್ನೆಲ್ಲಾ ಬಿಟ್ಟುಕ್ಯಾಸ ಕಿದ ಯಾವ ದೊಡ್ಡ ಸೊಬಗಿನ ಹೆಣ್ಣಂತ ನೀ ಗಂಟಬಿದ್ದಿ? ಛೀ ಬಿಡ, ಅಡವ್ಯಾನ ಮೂಳ, ಅದನ್ನೇನ ಮಾಡಿ! ಕಜ್ಜೂರ ತಿಂದ ತಿಂದ ಕಣಗೆಟ್ಟ, ಹುಣಸೀ ಹಣ್ಣ ತಿನ್ನವನ್ಹಾಂಗ ಮಾಡತೀ ನೀ.

ಅರಸು : ನೋಡಿಲ್ಲೋ ಇನ್ನೂ ನೀನು. ಅದಕ್ಕೆ ಹೀಗನ್ನುತ್ತಿ.

ವಿದೂ : ಹಾ ಹೀಗಂತಿ? ಇದ್ದೀತಪಾ? ನಿನ್ನಂತಾವ ಮನಸಿಟ್ಟಮ್ಯಾಗ ಮತ್ತವಳ ಹಾಂಗ ಹೀಂಗ ಇದ್ದಾಳ ಎಂದಾರ?

ಅರಸು : ಹನುಮನಾಯಕಾ, ನಾನು ಎಷ್ಟಂತ ಬಣ್ಣಿಸಲೆಪ್ಪಾ ಅವಳ ಚೆಲ್ವಿಕೆ.

(ಪದ)

ದಾಟಿ : ಮನಸು ಬಾರದು ಮಂಚಾ|| ಮೃದು ಆಸನ | ಮುನಿದನ್ಯಾಕೆನ್ನ ಕಾಂತಾ||
ಎಂಬ ಪದದಂತೆ.

ಬಣ್ಣಿಸಲ್ಹ್ಯಾಂಗಿನ್ನು|| ನುಡಿಯಲಿ ಲಾ-
ವಣ್ಯದ ಖಣಿಯನ್ನು ||ಪಲ್ಲ||
ಕಣ್ಣೊಳು ಕಟ್ಟಿದ ಹೆಣ್ಣಿನ ರೂಪವು

ಎನ್ನೊಳನಂಗನ ಸನ್ನಿಧಿಯಂತಿರೆ ||ಅನುಪಲ್ಲ ||
ಮೊದಲು ಮನಸುಗೊಟ್ಟು | ವಿಧಿಯು ಚಿತ್ರ |
ಮುದದಿಂದೆ ಬರೆದಿಟ್ಟು ||
ಅದರ ಮೈಯೊಳು ಜೀವದ ಕಳೆಯನು ತುಂ-
ಬಿದ ಮ್ಯಾಲಿಳೆಯೊಳಗುದುಭವಿಸಿದಳೇನೋ ||೧|| *

ಕೈ ನಡಗುವದೆಂದು | ವಿಧಾತನು |
ಧ್ಯಾನದೊಳಗೆ ತಂದು||
ಮೌನದಿಂದತಿಶಯ ಮೋಹದ ರೂಪವ
ಧೇನಿಸಿ ಪಡೆದಿಹ ಮಾನಸ ಪುತ್ರಿಯೊ ||೨||

---

* सुरयुवतिसंभवं किल मुनेरपत्यं तदुज्झिताधिगतम्
अर्कस्योपरि शिथिलं च्युतमिव नवमालिकाकुसुमम् ।।८।।

ಎಂದಿಗೆ ಬರಬೇಕ್ಕೆ | ಬ್ರಹ್ಮನಿಗಿಂಥ |
ಸುಂದರ ಕೃತಿ ಸಾಕ್ಕೆ ||
ಇಂದಿರಾ ರೂಪವ ಚೆಂದದಿ ಕಲಿತವ -
ಳಂದದೊಳಿಳಿಸಿಹ ನಿಂದೀವರಾಕ್ಷಿಯ || ೩ ||

ವಿದೂ : ಅಬಬ! ಇದೇನ ಕಾಣಾಪಟ್ಟಿ ಹೇಳತಿ ಬಿಡ. ಹೀಂಗಿದ್ದ ಮ್ಯಾಗ ಅವಳ ಸರಿ ಎಡ್ಡೆ ಹೆಣ್ಣೇ ಇರಾಕಿಲ್ಲ ಭೂಮೀಮ್ಯಾಗ.

ಅರಸು : ಅವಳ ಸರಿ ಹೆಣ್ಣು ಇರುವ ಮಾತು ಅಸಂಭವವೇ ಸರಿ. ಹನುಮನಾಯಕಾ, ಅವಳು ಮತ್ತೂ ಹ್ಯಾಗಿರುವಳೆಂದರೆ ಹೇಳುತ್ತೇನೆ ಕೇಳು :-

(ಪದ)

ದಾಟಿ : "ಅವನ ನೋಡಿದಂದು ಮೊದಲಾಸೆ ನಟ್ಟಿದೆ" ಎಂಬ ಚಿಕ್ಕದೇವನ ಪದದಂತೆ.
ಮೀಸಲು ದೇಹದ ಬಾಲೆ ಮೋಹಿಪ ಲೀಲೆ | ಅವಳು -
ಮಾಸುವಳೆಂದೆನ್ನ ಮನಸು ಮುಟ್ಟಿಹದಿಲ್ಲೆ || ಪಲ್ಲ ||

ಮಘಮಘಿಪಾ ಕುಸುಮವ್ಯಾರೂ ಮೂಸೀ ನೋಡಿಲ್ಲಾ || ಅವಳು |
ಉಗುರು ನಾಂಟಿಸದ ಎಳೆಯ ಚಿಗುರು ಕೇಳಯ್ಯ || ೧ ||

ಎಜ್ಜವಿನ್ನೂ ಮಾಡದಿಹ ಮುತ್ತು ಕಾಣಯ್ಯ ||ಎನ್ನ |
ಗುಜ್ಜಾರೆ ತಾನಚ್ಚ ಜೇನು ಯಾರೂ ಸವಿದಿಲ್ಲ || ೨ ||

ಈ ವಸುಧೆಯೊಳು ಇಂಥ ಪೂರ್ವಪುಣ್ಯದ ಧನ್ಯ |
ನ್ಯಾವನಿಹನೊ ಇವಳ ಪುರುಷ ವಿಧಿಯೆ ತಾ ಬಲ್ಲ || ೩ ||*

ವಿದೂ : ನನ್ನ ಒಡ್ಯಾ ನಿನ್ನ ಹೊರ್ತ ಅದಾನ್ಯಾವ ಭೂಮಿಮ್ಯಾಗ ಪುಣೆವಂತಾ? ಏನರ ಪಂಚಿಕಿ ಮಾಡಿ ಗಡಾ ನಿನ್ನ ಹಂತ್ಯಾಕ ಎಳಕೋ ನೋಡ. ಇಲ್ದಿರಕ ಜಡಿಗೆಲ್ಲಾ ಇಂಗಳೀ ಎಣ್ಣಿ ಬಡಕೊಂಡಕ್ಯಾಸ ತಲಿ ಮಾಸಿದ ನುಸಿ ಯಾವನಾರ ನೆಗವಿಕೊಂಡ ನಡದಾನ. ಹೇಳಿರತೇನ ಮತ್ತೀಗ!

---

* चिञ्चे निवेश्य परिकल्पितसत्त्वयोगा
रूपोच्चयेन मनसा विधिना कृता नु
स्त्रीरत्नसृष्टिरपरा प्रतिभाति सा मे
धातुर्विभुत्वमनुचिन्त्य वपुश्च तस्याः ।।

ಅರಸು : ಹನುಮನಾಯಕಾ ನೀನಂಬುವದು ನಿಜವ್ವೋ; ಆದರೂ ಈ ಮಾತು ಹ್ಯಾಗೆ ಘಟಿಸೀತು? ಅವಳು ಕೇವಲ ಪರಾಧೀನಳು; ಹಾಗೂ ಹಿರಿಯರು ಯಾರೂ ಸಮೀಪದಲ್ಲಿಲ್ಲ.

ವಿದೂ : ಒಳ್ಳೇದ; ನಿನ್ನ ಮ್ಯಾಗ ಆಕೀ ನದರ ಹ್ಯಾಂಗತಿ? ಕದ ಒಂದಿಟ ಹೇಳೆಲಿ.

ಅರಸು : ತಪಸ್ವಿಗಳ ಹೆಣ್ಣುಮಕ್ಕಳು ಬಹಳ ಅಂಜುಬುರುಕಿಯೇ ಇರುವರಷ್ಟೇ? ಆದರೂ ಅವಳು ಮನಸ್ಸಿನೊಳಗಿನ ಭಾವಾರ್ಥವನ್ನು ತಿಳುಹಿದಳು.

(ಶಾರ್ದೂಲ ವಿಕ್ರೀಡಿತ)

ಎನ್ನಂ ನೋಡಲು ಲಜ್ಜೆಯಿಂ ಬಳಿಗೆ ನಿಲ್ಲಳ್ ತಾಳ್ದಪಳ್ ಮೌನವಂ
ತನ್ನೊಳ್ ತಾನೆ ನಗುತ್ತಲನ್ಯನೆವದಿಂ ಕಳ್ಬಟ್ಟೆಯಿಂ ನೋಡ್ಪಪಳ್ ||
ಅಣ್ಣಂ ಕಾಮನು ಚೇಷ್ಟೆಯಂಗೊಳಿಸೆ ಮೈಯೊಳ್ ಭಾವಗಳ್ ಮೂಡೆ ಕೇಳ್ |
ಹೆಣ್ಣಂ ಮಾನದ ಹಣ್ಣು ಮಾತುರತೆಯಂ ಹತ್ತೊತ್ತಿಹಳ್ ತೋರಳ್ಕೆ||

ವಿದೂ : ಅವಳು ಮತ್ತಿನ್ನೇನ ಮಾಡಬೇಕಂತಿ? ಕಂಡಗಳಿಗ್ಗೆ ಬಂದಕ್ಯಾಸ ತೊಡಿಮ್ಯಾಗ ಕುಂತ ಕಸೀ ಬಿಚ್ಚಬೇಕೇನ?

ಅರಸು : ಮತ್ತು ಯಾವಾಗ್ಗೆ ನಾವು ಒಬ್ಬರಿಗೊಬ್ಬರು ಬಿಟ್ಟು ಹೋಗಲಾರಂಭಿಸಿದೆವೋ, ಆಗ್ಗೆ ಅವಳು ಮರ್ಯಾದಶೀಲತ್ವದಿಂದ ತನ್ನ ಮನಸ್ಸಿನೊಳಗಿನ ಭಾವಾರ್ಥವನ್ನು ಪ್ರಕಟ ಮಾಡಿದಳು.

(ಶಾರ್ದೂಲ ವಿಕ್ರೀಡಿತ)

ಬಾಲೇರಿಬ್ಬರ ಕೂಡಲೆನ್ನನು ಆಗಲ್ವಾರನ್ನೆ ಕೇಳ್ವೋಗಲು
ಕಾಲೋಳ್‌ದರ್ಭವು ನಟ್ಟಿತೆಂದು ಬರಿದೇ ಕೀಳುತ್ತ ತಾಂ ನಿಂದಳು||
ಪಿಳಿಂಟ್ಟೆಜ್ಜೆಯನಿಟ್ಟು ಕೊಕ್ಕೆಗೆ ಪದರ್ ತಾನೇ ತೊಡರ್ಸಿರ್ದಳು|
ಮೇಲೇ ಮೇಲೆ ನೆವಂ ತಳೆರ್ದು ತಿರುಗುತ್ತೆನ್ನನ್ನು ಬಲ್ ನೋಡ್ದಳು ||

ವಿದೂ : ಹೋಗೂನ ನಡಿ ಮತ್ತ ಅಲ್ಲಿನ್ನೇನತಿ? ಪಳಾರಗಿಳಾದ ಸಿದ್ಧಾಗಲಿ. ಬಲೆ ನಮ್ಮಪ್ಪಾ ಕುಂತಕುಂತಿರಲಾಕವಳೇ ಬ್ಯಾಟಾ ಮಾಡಿದೇಳ. ನುಸಿಗೋಳ ಆಸ್ರಮದಾಗ ಬಂದಕ್ಯಾಸ. ಅವರ ತಪಾ ಮಾಡೋ ವನವಾಗ ನೀ ಗಿಪಾಮಾಡ!

---

* अनाघ्रातं पुष्पं किसलयमलूनं कररूहै
रनाविद्धं रत्नं मधुनवमनास्वादितरसम्
अखण्डं पुण्यानां फलमिव च तद्रूपमनघं
न जाने भोक्तारं कमिह समुपस्थास्यति विधिः ।।३०।।

ಅರಸು : ಎನಿಕೆ ತಪಸ್ವಿಗಳಿಗೆ ನಾನಿಲ್ಲಿ ಬಂದದ್ದು ತಿಳಿದಿದೆ. ಆದರೆ ಯಾವ ಕಾರಣದಿಂದ ಇಲ್ಲೆ ನಿಲ್ಲೋಣ ಮಾಡಬೇಕು? ಇದಕ್ಕೇನಾದರೂ ಒಂದು ಯುಕ್ತಿ ತೆಗಿ.

ವಿದೂ : ನೀ ಅರಸಲ್ಲೇನಪಾ? ಇನ್ನಾವ ಯುಗತಿ ಬೇಕಾಗೇತಿ?

ಅರಸು : ಅರಸಾದರೇನಾಯಿತೋ? ಏನಾದರೂ ಒಂದು ಉದ್ದೇಶ ಬೇಕೋ ಬೇಡವೋ ಇಲ್ಲಿ ನಿಲ್ಲಲಿಕ್ಕೆ?

ವಿದೂ : ನುಸಿಗೋಳು ವನದಾಗೆಲ್ಲ ಕಾಳುಬಿತ್ತಿಕ್ಯಾಸ ಪುಗೆಸಟ್ಟೆ ಉಣತದಾರು. ಆರನೇ ಪಾಲ ಕಾಳ ಸರಕಾರಕ್ಕೊಪ್ಪಸಬೇಕಂತ ಕುಂತರಾತ.

ಅರಸು : ಎಂಥ ಹುಚ್ಚನೋ ನೀನು. ರತ್ನದ ರಾಶಿಗಿಂತಲೂ ಹೆಚ್ಚಾದ ದ್ರವ್ಯವನ್ನು ಋಷಿಗಳು ಅರ್ಪಿಸುತ್ತಿರಲಾಗಿ, ಅವರ ಬಳಿಯಿಂದ ಈ ಧ್ಯಾನವನ್ನು ತೆಗೆದುಕೊಂಡದ್ದರಿಂದ ನಮಗೆ ಏನಾಗತಕ್ಕದ್ದಿದೆ?

(ದ್ರುತವಿಲಂಬಿತ)

ಚತುರ ಜಾತಿಗಳೊಳ್ ಮುನಿಗಳ್ ಧನಂ |
ಇತರ ಮೂರರಕಿಂತಲು ಕೇಳ್ ಘನಂ|
ಸ್ವತಪವಿತ್ತಪರಾರರನೆ ಪಾಲನಂ |
ಅತಿಶಯಾದುದು ಹೊಂದದು ನಾಶನಂ ||

(ಹಿಂದೆ ಶಬ್ದವಾಗುತ್ತದೆ) ಆ ಹಾ ಹಾ! ನಾವು ಕೃತಾರ್ಥರಾದಿವಿ.

ಅರಸು : ಓಹೋ! ಶಾಂತ ಗಂಭೀರ ಸ್ವರವು ಕೇಳಿಬರುತ್ತದೆ. ಯಾರಾದರೂ ತಪಸ್ವಿಗಳು ಬಂದಿರಬಹುದು.

ದ್ವಾರಪಾಲಕ: ವಿಜಯೋಸ್ತು ಜೀಯಾ, ಇಬ್ಬರು ಋಷಿ ಕುಮಾರರು ಹೊರಗೆ ಬಂದು ನಿಂತಿದ್ದಾರೆ.

ಅರಸು : ತೀವ್ರದಿಂದ ಇತ್ತ ಕರೆದುಕೊಂಡು ಬಾ.

ದ್ವಾರಪಾಲಕ: ಮಹದಾಜ್ಞೆ. (ಎಂದು ಹೋಗಿ ಅವರನ್ನು ಕರೆದುಕೊಂಡು ಬರುತ್ತಾನೆ) ಮಹಾರಾಯರು ಇಲ್ಲಿ ಕೂತಿದ್ದಾರೆ ಹೋಗಬೇಕು.

(ಋಷಿಗಳು ಅರಸಿನನ್ನು ನೋಡಿ ತಮ್ಮೊಳಗೆ ಮಾತಾಡುತ್ತಾರೆ.)

ಒಬ್ಬ ಋಷಿ : ಏನಯ್ಯಾ, ಈತನ ಶರೀರವು ಇಂಥ ತೇಜಃಪುಂಜವಾಗಿರಲಾಗಿಯೂ ನೋಡುವದಕ್ಕೆ ಭೀತಿಯುತ್ಪನ್ನವಾಗುವುದಿಲ್ಲ. ಈತನು ರಾಜನಾಗಿದ್ದರೂ ಋಷಿಗಳ ಹಾಗೆ ಕಾಣುತ್ತಾನೆ

(ದ್ರುತವಿಲಂಬಿತ)

ಮುನಿಯವೊಲ್ ವನದೊಳ್ ಕುಳಿತಿರ್ಪನಂ |

ಮುನಿಯ ರಕ್ಷಣವಕ್ಷಯ ಮಾಳ್ಪನು ||
ಮುನಿಯ ಪುಣ್ಯದ ಪಾಲಿಗೆ ಪಾತ್ರನು |
ಮುನಿಯೊಲೀತನ ಲೀಲೆಯ ನೋಳ್ಪೆನು ||

ಅಥವಾ ಋಷಿಗಳಿಗಿಂತಲೂ ಹೆಚ್ಚಾಗಿ ಈತನ ಕೀರ್ತಿಯುಂಟು ಹ್ಯಾಗೆಂದರೆ:

(ವಸಂತ ತಿಲಕಾ)

ರಾಜೇಂದ್ರನೀತನ ಗುಣಂಗಳ ಮೆಚ್ಚಿದರ್ ಮೇಣ್|
ರಾಜರ್ಷಿಯೆಂದು ಸುರಲೋಕದಿ ಪಾಡುವರ್ ಕೇಳ್ ||
ರಾಜಾಖ್ಯ ಶಬ್ದವು ಋಷಿಂಗಳಿಗೆಲ್ಲಿ ಪೇಳ್ಕೈ|
ರಾಜಂ ಋಷಿಗಂಳನು ಗೆಲ್ದನು ಕೀರ್ತಿಯೋಳ್ಕೈ ||೯||

ಎರಡನೇ
ಋಷಿ : ಎಲೋ ಗೌತಮಾ, ಇಂದ್ರನ ಮಿತ್ರನಾದಂಥಾ ದುಷ್ಯಂತ ರಾಜನು ಈತನೇನೋ?

ಮೊದಲನೇ ಋಷಿ : ಹೌದು.

ಎರಡನೇ ಋಷಿ : ಅದಕ್ಕಂತಲೇ ಹೀಗೆ ಶೋಭಿಸುತ್ತಾನೆ.

(ಯೂಥಿಕಾ)

ದೀರ್ಘ ಮಾದಗಸೆ ಬಾಗಿಲ ಹಿಂದಿಹ |
ಅರ್ಗಳಾ, ಎನೆ ಕರಂಗಳ ತಾಳ್ದಿಹ ||
ಭರ್ಗನಂತಿವನ ಕೀರ್ತಿಯು ಪೃಥ್ವಿಗೆ|
ಸ್ವರ್ಗದೊಳಿವನ ಧೀರತೆ ವಜ್ರಿಗೆ ||

ಋಷಿಗಳು : (ಮುಂದಕ್ಕೆ ಹೋಗಿ) ವಿಜಯಸ್ವ ರಾಜನ್.

ಅರಸು : (ಆಸನದ ದೆಶೆಯಿಂದ ಎದ್ದು) ವಂದನೆ ಮಾಡುತ್ತೇನೆ. ಸಾಮಿಗಳಿರಾ.

ಇಬ್ಬರೂ
ಋಷಿಗಳು : ಕಲ್ಯಾಣಮಸ್ತು ರಾಜಾ (ಎಂದು ಹಣ್ಣುಗಳನ್ನರ್ಪಿಸುತ್ತಾರೆ.)

ಅರಸು : (ವಿನಯಪೂರ್ವಕವಾಗಿ ಗ್ರಹಣ ಮಾಡುತ್ತಾನೆ) ಬಂದಂಥ ಕಾರಣವನು ಆಜ್ಞಾಪಿಸಬೇಕು ಸ್ವಾಮಿಗಳೇ.

ಋಷಿಗಳು : ತಾವು ಇಲ್ಲಿ ಬಂದ ವರ್ತಮಾನವು ಋಷಿಗಳಿಗೆ ತಿಳಿದವರಿಂದ ಅವರು ತಮ್ಮನ್ನು ಕುರಿತು, ಒಂದು ಪ್ರಾರ್ಥನೆ ಮಾಡಿಕೊಂಡಿದ್ದಾರೆ.

ಅರಸು : ಅವರು ಯಾವ ಕಾರ್ಯದುದ್ದಿಶ್ಯ ಆಜ್ಞಾಪಿಸಿದ್ದಾರೆ?

ಋಷಿಗಳು : ಭಗವಾನ್ ಕಣ್ವ ಋಷಿಗಳು ಇಲ್ಲಿ ಇಲ್ಲದರಿಂದ ಯಜ್ಞಾದಿ ಕರ್ಮಗಳಿಗೆ ರಾಕ್ಷಸರು ವಿಘ್ನ ಮಾಡುತ್ತಾರೆ; ಕಾರಣ ಕೆಲವು ದಿವಸಗಳ ಪರಿಯಂತ ತಮ್ಮ ವಸ್ತಿಯ ಲಾಭವಾಗಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದಾರೆ.

ಅರಸು : ಇದು ನನ್ನ ಮೇಲೆ ಅನುಗ್ರಹವೇ ಸರಿ.

ವಿದೂಷಕ : (ಅರಸನಿಗೆ ಮೆಲ್ಲಕ್ಕೆ) ಈ ಮಾತ ನಿನಗ ಈ ಹೊತ್ತಿನ್ಯಾಗ ವಳೇ ಮನಸಿಗೆ ಬಂತ್ಯಾಕ?

ಅರಸು : (ಮುಗುಳು ನಗೆಯಿಂದ) ದ್ವಾರಪಾಲಕಾ, ರಥವನ್ನು ಸಿದ್ಧ ಮಾಡಿಕೊಂಡು ಧನುಷ್ಯ ಬಾಣಗಳಿಂದ ಸಹಿತನಾಗಿ ಸಾರಥಿಗೆ ಬರುವದಕ್ಕೆ ಹೇಳು.

ದ್ವಾರಪಾಲಕ: ಮಹದಾಜ್ಞೆ. (ಎಂದು ಹೊರಟುಹೋಗುತ್ತಾನೆ.)

ಋಷಿಗಳು : (ಹರುಷದಿಂದ)

(ಅಮೃತಧ್ವನೀ)

ಚಿಕ್ಕಯ್ಯ ಕೇಳ್ ನಿನಗೆ ತಕ್ಕದ್ದೆ ಕಾರ್ಯವು ಇದಕ್ಕಾಗಿ ನಿಮ್ಹಿರಿಯರು|
ಸೊಕ್ಕಿರ್ದ ರಕ್ಕಸರ ಕಕ್ಕೌಂಚಿ ಕೊಂದು ನೆಲಕಿಕ್ಕುತ್ತೆ ಬಂದರವರು||
ಕುಕ್ಕಿಂಗೆ ಬಚ್ಚಿಡುತಲಕ್ಕರ್ತೆಯಿಂ ಬಡವರು ಕಾಯ್ವುದೆಜ್ಞವಿದಕೆ|
ದಿಕ್ಕೇಯೇ ಪೌರವ ಕುಲಕ್ಕಿನ್ನದೇಂ ಬಹುದು ಮಿಕ್ಕಾದ ಭೂಪಜನಕೆ||

ಅರಸು : ತಾವು ಇನ್ನು ಆಶ್ರಮಕ್ಕೆ ಪ್ರಯಾಣ ಮಾಡತಕ್ಕದ್ದು. ನಾನು ಇದೇ ಬಂದೆನೆಂದು ತಿಳಿಯಿರಿ.

ಋಷಿಗಳು : ವಿಜಯಸ್ವ! (ಹೊರಟು ಹೋಗುತ್ತಾರೆ.)

ಅರಸು : ಹನುಮನಾಯಕಾ, ಶಕುಂತಲೆಯನ್ನು ನೋಡುವದು ನಿನ್ನ ಮನಸ್ಸಿನಲ್ಲುಂಟೋ?

ವಿದೂಷಕ : ಮದಲ ಮಾಸಾರ ಇತ್ತ ನನ್ನ ವಡ್ಯಾ; ಈ ರಕ್ಕಸರ ಮಾತ ತಗ್ಯಾಣಾ ಎಳ್ಳಾನರ್ದಾಸುದಾ ಉಳೀಲಿಲ್ಲ.

ಅರಸು : ಅಂಜಬೇಡ; ನಾನು ನಿನ್ನ ಸಮೀಪದಲ್ಲಿಯೇ ಇರುತ್ತೇನೆ.

ವಿದೂಷಕ : ಹಂಗರ ಅವರಪ್ಪಗಸುದಾ ಅಂಜಾಣಿಲ್ಲ.

ದ್ವಾರಪಾಲಕ: (ಬಂದು) ಸ್ವಾಮಿ, ರಥವು ಸಿದ್ಧವಾಗಿ ಮಹಾರಾಯರ ವಿಜಯ ಪ್ರಸ್ಥಾನದ ದಾರೀ ನೋಡುತ್ತದೆ; ಪರಂತು ನಗರದಿಂದ ಅಮ್ಮನವರ ಆಜ್ಞೆ ತಿಳಿಸುವದರಗೋಸ್ಕರ ಒಂಟೇ ಸವಾರನು ಬಂದಿದ್ದಾನೆ.

ಅರಸು : (ಸತ್ಕಾರಪೂರ್ವಕನಾಗಿ) ಅಮ್ಮನವರು ಕಳುಹಿಸಿದ್ದಾರೊ?

ದ್ವಾರಪಾಲಕ: ಹೌದು ಸ್ವಾಮಿ.

ಅರಸು : ಆತನಿಗೆ ಒಳಗೆ ಕರೆದುಕೊಂಡು ಬಾ.

ದ್ವಾರಪಾಲಕ: ಮಹದಾಜ್ಞೆ. (ಹೋಗಿ ಒಂಟೇ ಸವಾರನ್ನು ಕರೆದುಕೊಂಡು ಬರುತ್ತಾನೆ.) ಮಹಾರಾಯರ ಬಳಿಯಲ್ಲಿ ಹೋಗಬೇಕು.

ಸವಾರನು : ವಿಜಯೋಸ್ತು ಜೀಯಾ, ಈಪೌತ್ತಿನಿಂದ ನಾಲ್ಕನೇ ದಿನ ಪುತ್ರಪಿಂಡ ಪಾಲನವೆಂಬ ಉಪವಾಸವನ್ನು ಅಮ್ಮನವರು ಮಾಡುವವರಿದ್ದಾರೆ. ಕಾರಣ, ಆ ಸಮಯದಲ್ಲಿ ದೀರ್ಘಾಯುಷಿಗಳು ಅವಶ್ಯವಾಗಿ ಬಳಿಯಲ್ಲಿರಬೇಕೆಂದು ಹೇಳಿದ್ದಾರೆ.

ಅರಸು : ಇತ್ತ ಅಮ್ಮನವರಾಜ್ಞೆ, ಇತ್ತ ಋಷಿಗಳಾಜ್ಞೆ, ಎರಡೂ ಮೀರಲಿಕ್ಕಾಗದು, ಮುಂದೆ ಮಾಡತಕ್ಕ ಬಗೆ?

ವಿದೂಷಕ : ಉಪ್ಪಾರ ತಿಗಟೇಗುಂಡಿನ್ಹಾಂಗ ನಡಬರಕ ಜೋತಾಡ.

ಅರಸು : ನನ್ನ ಸುತ್ತ ಒಳ್ಳೇ ಪೀಕಲಾಟ ಬಂತು, ದಾರಿಯಲ್ಲಿ ಗುಡ್ಡವಿರಲಾಗಿ ನದಿಯು ಹ್ಯಾಗೆ ಎರಡು ಮಾರ್ಗದಿಂದ ಹರಿಯಲಾರಂಭಿಸುತ್ತದೋ ಹಾಗೆ ನನ್ನ ಮನಸು ಈಗ್ಗೆ ಒದಗಿದ ಎರಡು ಕಾರ್ಯಗಳಲ್ಲಿ ಹೋಗುತ್ತದೆ.*

(ಮನಸ್ಸಿನಲ್ಲಿ ಸ್ವಲ್ಪ ಹೊತ್ತು ಧ್ಯಾನಿಸಿ) ಹನುಮನಾಯಕಾ, ನಿನ್ನನ್ನು ಅಮ್ಮನವರು ಪುತ್ರನೆಂದು ತಿಳಿದಿದ್ದಾರೆ; ಆದಕಾರಣ ನೀನು ಮನೆಗೆ ಹೊರಟುಹೋಗು; ತಪಸ್ವಿಗಳ ಕಾರ್ಯಕ್ಕೋಸ್ಕರ ನನ್ನ ಮನಸ್ಸು ವ್ಯಗ್ರವಾಗಿದೆ ಎಂದು ತಿಳುಹಿಸಿ ಅಮ್ಮನವರಿಗೋಸ್ಕರ ಪುತ್ರ ಕೃತ್ಯವನ್ನು ಮಾಡತಕ್ಕಂಥದು ನೀನು ಮಾಡಿ ಕಾರ್ಯವನ್ನು ತೀರಿಸು; ಅಷ್ಟರಲ್ಲಿಯೇ ನಾನು ಬರುತ್ತೇನೆ.

ವಿದೂಷಕ : ರಕ್ಕಸರಿಗೆ ಅಂಜಿದೇನಂತ ನನ್ನ ಕಳಸತಿ ಏನ್ ನೀ?

ಅರಸು : (ನಕ್ಕು) ಛೆ! ನೀನು ಎಂದಾದರೂ ಅಂಜಿದವನೆ?

ವಿದೂ : ನಾ ಇಲ್ಲಿಂದ ಹೊಂಟ್ರ ಹುಡಗ ಅರಸನ ತಮ್ಮ ಹೊಂಟಾಂಗ ಹೊಂಡಾವ. ವಬ್ಬನ ಹೋದೇನ ಎಂದಾರ!

ಅರಸು : ಬಹಳುತ್ತಮ; ತಪೋವನಕ್ಕೆ ಉಪದ್ರವವಾಗಬಾರದೆಂದು ಯಾವತ್ತೂ ಸೈನ್ಯವನ್ನು ನಗರಕ್ಕೆ ಕಳುಹಿಸತಕ್ಕದ್ದೇ ಇದೆ; ಅದನ್ನು ನಿನ್ನ ಸಂಗಡ ಕೊಡುತ್ತೇನೆ.

ವಿದೂ : (ಮೀಸೆಯ ಮೇಲೆ ಕೈ ಹಾಕಿ) ಹಾ! ಹುಡುಗ ಯುವರಾಜದೊರಿ ಬರತಾನಂತಿರಬೇಕ ಊರಾಗೆಲ್ಲಾ.

ಅರಸು : (ತನ್ನೊಳಗೆ) ಈತನು ಬಹು ಧೂರ್ತನಾಗಿದ್ದಾನೆ. ನಾನು ಈತನ ಮುಂದೆ ಹೇಳಿದಂಥ ಕಾಮವಾಸನೆಯ ಮಾತು ಅಂತಃಪುರದ ಹೆಣ್ಣುಗಳಲ್ಲಿ ಒಡೆದಾನು. ಕಾರಣ, ಇವನ ಮುಂದೆ ಆಡಿದಂಥದು ತಿರುಗಿ ತೆಗೆದುಕೊಳ್ಳಬೇಕಾಗಿದೆ. (ವಿದೂಷಕನಿಗೆ) ಹನುಮನಾಯಕಾ, ಋಷಿಗಳ ಯೋಗ್ಯತೆ ದೊಡ್ಡದಾಗಿರುತ್ತದೆ. ಕಾರಣ, ಅವರ ಕಾರ್ಯಕ್ಕೋಸ್ಕರ ನಾನು ಹೋಗುತ್ತೇನೆ. ಆದರೆ ತಪಸ್ವಿಗಳ ಕನ್ನಿಕೆಯಾದ ಶಕುಂತಲೆಯನ್ನು ಕುರಿತು ನಿನ್ನ ಮುಂದೆ ಮಾತನಾಡಿದ್ದು ನಿಜವೆಂದು ತಿಳಿಯದಿರು ಕಂಡೆಯಾ.

(ದ್ರುತವಿಲಂಬಿತ)

ಚಿಗುರೆಯೋಳ್ ಬೆಳೆದಂಥವಳಂಗದೋಳ್ |
ಮುಗುಳುದೋರನು ಮನ್ಮಥನಿಂಥವಳ್ ||
ಮಗುದೆಯೆಲ್ಲಿಯೊ ನಾ ನೃಪನೆಲ್ಲಿ ಮೇಲ್ |
ನಗೆಯನಾಡಿದೆ ತಾತ್ವಿಕವಲ್ಲ ಕೇಳ್ ||

ವಿದೂ : ಹಿಂಗೇನ? ಒಳ್ಳೇದ ನನ್ನ ಪಪ್ಪಾ, ಮಂಜರಿ ಮಾಡತೇನ. ನೀ ಅತ್ತ ಹೋಗು; ನಾ ಇತ್ತ ಹೊಕ್ಕನ. (ಇಬ್ಬರೂ ಹೊರಟುಹೋಗುತ್ತಾರೆ.)

(೨ನೆಯ ಅಂಕವು ಮುಗಿದುದು.)

೩ನೆಯ ಅಂಕವು

(ಕೈಯಲ್ಲಿ ದರ್ಭವನ್ನು ಹಿಡಿದುಕೊಂಡು ಒಬ್ಬ ಋಷಿಶಿಷ್ಯನು ಬರುತ್ತಾನೆ.)

ಶಿಷ್ಯ : ಏನಯ್ಯಾ ದುಷ್ಯಂತ ರಾಜನ ಪರಾಕ್ರಮ! ಆಶ್ರಮದಲ್ಲಿ ಅರಸು ಬಂದ ಕೂಡಲೆ ನಮ್ಮ ಕೃತ್ಯಗಳೆಲ್ಲಾ ನಿರ್ವಿಘ್ನದಿಂದ ನಡೆಯಲಾರಂಭಿಸಿದವು. ಈತನು ಧನುಷ್ಯಕ್ಕೆ ಬಾಣವನ್ನು ಇರಿಸುವ ಪೂರ್ವದಲ್ಲಿಯೆ ಟಂಕಾರ ಧ್ವನಿಗೇ ವಿಘ್ನಗಳೆಲ್ಲಾ ಅಂಜಿ ಓಡಿ ಹೋದವು. ಒಳ್ಳೇದು, ನಾನು ಈ ದರ್ಭವನ್ನು ಯಜ್ಞವೇದಿಕೆಯ ಮೇಲೆ ಪಸರಿಸುವುದಕ್ಕೋಸ್ಕರ ಋತಿಜ್ವರ ಬಳಿಯಲ್ಲಿ ಒಯಿದು ಕೊಡುತ್ತೇನೆ. (ಸ್ವಲ್ಪ ಮುಂದಕ್ಕೆ ಹೋಗಿ ಆಕಾಶವನ್ನು ನೋಡುತ್ತ) ಏ ಪ್ರಿಯಂವದಾ, ಬಾಳದ ಬೇರಿನ ಅನುಲೇಪನವನ್ನೂ ದೇಟಿನಿಂದ ಸಹಿತವಾದಂಥಾ ಕಮಲ ಪುಷ್ಪಗಳನ್ನೂ ಯಾರಿಗೋಸ್ಕರ ಒಯ್ಯುತ್ತಿದ್ದೀಯೆ? (ಕಿವಿಗೊಟ್ಟು ಕೇಳಿ) ಏನಂತಿದ್ದಿ? ಬಿಸಿಲು ಜಳತಾಕಿ ಶಕುಂತಲೆಯು ಮೈಯಲ್ಲಿ ಸಮಾಧಾನವಿಲ್ಲದ ಕಾರಣ ಅವಳಂಗಕ್ಕೆ ಸೀತೋಪಚಾರದುದ್ದಿಶ್ಯ ಒಯ್ಯುತ್ತಿದ್ದಿಯೋ? ಒಳ್ಳೇದು ಪ್ರಿಯಂವದಾ, ಅವಳನ್ನು ಬಹು ಜತನದಿಂದುಪಚರಿಸು ಕೇಳಿದೆಯಾ; ಅವಳು ಗುರುಗಳ ಪಂಚಪ್ರಾಣಳಾಗಿದ್ದಾಳೆ. ನಾನೂ ಇಷ್ಟರಲ್ಲಿಯೆ ಅವಳಿಗೋಸ್ಕರವಾಗಿ ಯಜ್ಞಶಾಲೆಯಲ್ಲಿ ಹೋಗಿ ಶಾಂತುಯುದಕವನ್ನು ಗೌತಮಮ್ಮನ ಸಂಗಡ ಕಳುಹಿಸಿಕೊಡುತ್ತೇನೆ. (ಎಂದು ಹೊರಟು ಹೋಗುತ್ತಾನೆ.)

(ಇದು ವಿಷ್ಕಂಭವು, ಎನಲು ಮುಂದೆ ಬರುವ ವೃತ್ತಾಂತದ ಸೂಚನೆ.)

(ಆಮೇಲೆ ಕಾಮಪೀಡಿತನಾದಂಥ ಅರಸನು ಬರುತ್ತಾನೆ.)

ಅರಸು : [ಬಹು ಚಿಂತೆಯಿಂದ ಬೆಂದು ಶ್ವಾಸವಿಡುತ್ತ.]

(ಪದ)

ದಾಟಿ: ತಿರುಗಲಿಲ್ಲೆನ್ನ ಮನ ವನಿತೆಯ ಬಳಿಗ್ಹೋಗಿ | ಮರುಗಿ ಮರುಗಿ ಮರುಗಿ ದಣಿದೆ ನಾನಿದಕಾಗಿ | ಎಂಬ ಪದದಂತೆ.

ಬಯಲು ಬಯಕೆಯೊಳು ಬಳಲುವೆ ಬಹಳು
ಬಾಲೆಯ ಸಾಧ್ಯವು ಬಲು ಕಠಿಣವಿರಲು ||ಪಲ್ಲ||
ಕಳುವಿನಿಂದಾಶ್ರಮದೊಳು ಪೋಗಲವಳು |
ತಿಳಿವಳೊ ತಿಳಿಯಳೊ ಕಾಣಳೊ ಕಾಣಲು||
ಅಳುಕಿ ತಾ ಬಾರಳೊ ಬಲು ಪರಾಧೀನಳು ||೧||

ಮೊದಲಿನಂತಿನ್ನೊಮ್ಮೆ ಮುದದಿ ಸಖಿಯರೊಳು |
ಉದಯಿಸಿಯೆನ್ನೊಳು ಮಧುರ ನುಡಿಗಳು||
ಚದುರೆ ತಾ ನಾಡುತೆ ನೋಳ್ಪಳೆಂಬಾಶೆಯೊಳು ||೨||
ತೆಗ್ಗಿನೊಳ್ಬಿದ್ದ ನೀರು ತಿರುಗದಂತೆನ್ನ ಮನ |
ಕುಗ್ಗಿದೆ ಪಸುಳೆಯೊಳ್ ಋಷಿಗಳ ರೋಷನಾ |
ವೆಗ್ಗಳ ಬಲ್ಲವನಿರೆ ಬಿಡೆ ಕಾಮನಾ ||೩||*

ಹೇ ಭಗವನ್, ಕುಸುಮಾಯುಧಾ, ಮದನಾ, ನಮ್ಮ ಕಾಮೀಜನಕ್ಕೆ ವಿಶ್ವಾಸವೆಂಬುವದು ನಿನ್ನಿಂದಲೇ, ಚಂದ್ರಮನಿಂದಲೇ, ಹಾಗೂ ಮಂದ ಮಾರುತನಿಂದಲೇ; ಹೀಗಿರಲಾಗಿ ನೀವು ನಮ್ಮನ್ನು ಮೋಸ ಹೊಂದಿಸುತ್ತೀರಿ ಬಲ್ಲಿರಾ -

(ಪದ)

ದಾಟಿ : ಮರೆಯಲಾರೆ ನಾನು| ಮಾನಿನಿಯಾ ಮರೆಯಲಾರೆ ನಾನು ಮಾನಿನಿ ಮಾಡಿದ ಸುರತಾನಂದದ ಸುಖ ಪರಿಪರಿಯಾ|| ಎಂಬ ಪದದಂತೆ

ಮೋಸಗಾರರಯ್ಯಾ| ನೀವೆಲ್ಲಾ | |ಪಲ್ಲ||

ಪೂಶರ ನೀನು ಮ|ತ್ತಾ ಸಿತಕರನು|
ಗಾಸಿಮಾಡುವ ಮಂದ- | ಗಾಮೀ ಪವನನು ||ಅನುಪಲ್ಲ||
ಕಾವರಾಯನ ಬಾಣ | ಹೂವೆಂದು ಕೀರ್ತಿಯ |

ತೀವಿಸೀಗಲು ವಜ್ರ | ತಾಳಿದೆಯಲ್ಲಯ್ಯ |೧||

जाने तपसो वीर्यं सा बाला परवतीति मे विदितम् ।
अल्मस्मि ततो हृदयं तथापि नेदं निवर्तयितुम् ।।

ಚೆಲುವ ಚಂದಿರ ತನ್ನ | ಬೆಳದಿಂಗಳೊಳು ತಂಪು|
ತಿಳಿಸುವ ಕಿಡಿಗಳ | ಸುರಿವನಲ್ಲಯ್ಯ ||೨||

ಬಿರಿದ ಪುಷ್ಪದ ಗಂಧ | ಬೀರುತ ಮಾರುತ
ಬರುವಾತನುರ |ದುರಿ ಬೆಳಿಸುವನಯ್ಯ ||೩|| *

ಭಗವನ್ ಕಾಮದೇವನೆ, ನನ್ನ ಮೇಲೆ ದಯೆ ಹುಟ್ಟುವದಿಲ್ಲವೆ! (ಮದನ ಬಾಧೆಯನ್ನು ತೋರಿ) ನಿನ್ನ ಬಾಣಗಳು ಕುಸುಮಗಳೇ ಇರಲಾಗಿ ಏನು ಕಾರಣದಿಂದಿಷ್ಟು ಬಾಧೆಪಡಿಸುವಿ? ಸೈ ಸೈ ! ಹೌದು ನಾನು ತಿಳಿದೆ:-

(ಶಾರ್ದೂಲ ವಿಕ್ರೀಡಿತ)

ಇನ್ನುಂ ತಾಂ ಹರಕೋಪವಹ್ನಿ ನಿರುತಂ ಕಾಯ್ದಿರ್ಪುದೇಂ ನಿನ್ನೊಳ್ಳೆ|
ಬನ್ನಂ ಬಟ್ಟುದುದಲ್ಲೊ ಕಾಯ ದಹಿಸಲ್ ಭಸ್ಮಾವಶೇಷಾದೆಲ್ಯೆ||
ಎನ್ನಂ ಕೊಲ್ಲದು ಮೇಣು ತಾನುಳಿಸದೀ ರಕ್ಷಂ ಮನೋಜಾತನೇ |
ನಿನ್ನೋಳೆಂತಪರಾಧಮಂ ವಹಿಸಲ್ಯೆ ಪಾಪಕ್ಕೆ ನಾ ಸಿಲ್ಕೆನೆ ||೧||

ಅಥವಾ ನೀನು ನನ್ನ ಮೇಲೆ ಅನುಗ್ರಹವೇ ಮಾಡುತ್ತಿ ಬಲ್ಲೆಯಾ:-

(ಪದ)

ದಾಟಿ : ಜಾರ ಪುರುಷರ ಗುಣ ಬೇರೆ | ಪೂರ್ಣನೆಲೆ ತಿಳಿದವರಾರೆ| ಎಂಬ ಪದದಂತೆ
ಮಾರಾ ನಿನ್ನೊಳು ದಯ ಪೂರಾ|
ವೀರಾ ನೆನೆವೆ ನಿನ್ನುಪಕಾರಾ || ಪಲ್ಲ||

ಚೆಲುವೆಯೆನ್ನಧಿಪತಿ | ಯಳನು ಮಾಡುತ ಕಣೆ |
ಗಳನಿರಿಯಲು ಮಧುರಾ ||೧||

ಅವಳಿಗಾಗಿಯೆ ನಿತ್ಯ | ಬವಣೆ ಸಾಗೊಳುವಂತೆ |
ಹವಣ ನೀಡ್ಯೆ ಉದಾರಾ ||೨||

ಎಲ್ಲ ದೇವತೆಗಳು - | ತಲ್ಲ ನೀ ಬಲ್ಲೆನ್ನ |
ತಲ್ಲಣೆಯ ಪಾಲುಗಾರಾ ||೩||

---

* तव कुसुमशरत्वं शीतरश्मित्वमिन्दो - ।
द्वयमिदमयथार्थं दृश्यते मद्विधेषु ।।
विसृजति हिमगर्भैरग्निमिन्दुर्मयूखै ।
स्त्वमपि कुसुमबाणान्वज्रसारीकरोषि ।।

ಭಗವನ್, ಕಂದರ್ಪ, ಹೇ ಮಕರಧ್ವಜ. ಇಷ್ಟು ನಾನು ಹೇಳಿಕೊಳ್ಳಲಾಗಿಯೂ ಮನಸ್ಸು ಕರಗುವದಿಲ್ಲವೆ? ಅಯ್ಯೋ! ನಿಷ್ಕರುಣೆಯೆನಿಸುವದುಚಿತವಲ್ಲ ಕಂಡೆಯಾ!

(ವಿಭಾವರಿ)

ಅನುದಿನಂ ಬೆಳೆದು ಎನ್ನೊಳು ಸೌಖ್ಯವ ।
ಅನುಭವಂ ತೆಗೆದುಕೊಂಡುಪಕಾರವ ॥
ನೆನೆಯದೆ ಅನುಚಿತಂ ಸಲೆ ಮಾಳ್ಪುವೀ ।
ಕಣೆಗಳಂ ಕಿವಿವರಿಂಗೆಳೆದೆಚ್ಚುವೆ ॥

(ಖಿನ್ನತೆಯಿಂದ) ಋಷಿಗಳ ಕಾರ್ಯವಂತು ನಾನು ಚನ್ನಾಗಿ ವ್ಯವಸ್ಥೆಗೊಳಿಸಿದೆ, ಪ್ರಯಾಣಕ್ಕೆ ಸಹ ಅವರು ಅಪ್ಪಣೆ ಕೊಟ್ಟಿದ್ದಾರೆ; ಇನ್ನು ಯಾವಲ್ಲಿ ಹೋಗಿ ಅದಂಥ ಶ್ರಮವನ್ನು ಪರಿಹರಿಸುವ? (ಶ್ವಾಸವಿಡುತ್ತ) ಅವಳ ದರ್ಶನವೇ ಹೊರ್ತಾಗಿ ವಿಶ್ರಾಂತಿಯೆಲ್ಲಿ ಸಿಗುವದು? ಅವಳು ಯಾವಲ್ಲಿರುವಳೋ ನೋಡುವ. (ಸೂರ್ಯನನ್ನು ನೋಡಿ) ಪೂರ್ಣ ಮಧ್ಯಾಹ್ನವಾಗಿದೆ. ಈ ವೇಳೆಯಲ್ಲಿ ಶಕುಂತಲೆಯು ಬಿಸಲುಗಳೆಯುವದಕ್ಕೋಸ್ಕರ ಬಹಳಾಗಿ ತನ್ನ ಸಖಿಯರಿಂದ ಕೂಡಿಕೊಂಡು ಮಾಲಿನೀತೀರದ ಸಮೀಪಕ್ಕೆ ಲತಾಗೃಹದಲ್ಲಿ ಕುಳಿತಿರಬಹುದು. ಅತ್ತಲೇ ಹೋಗುವ, (ಮುಂದಕ್ಕೆ ಹೋಗಿ ನೋಡಿ) ಈ ಸಣ್ಣ ಸಣ್ಣ ಹೂವಿನ ಗಿಡಗಳ ನಡುವಿನ ದಾರಿಯಿಂದಲೇ ಸುಂದರಿಯು ಇದೆ ಹೋಗಿರಬಹುದೆಂಬಂತೆ ಕಾಣಿಸುತ್ತದೆ.

(ದ್ರುತವಿಲಂಬತ)

ಪಸುಳೆ ಹೋಗುವ ವ್ಯಾಳ್ಯದೊಳೆತ್ತಿಹಾ।
ಕುಸುಮ ಕೋಶಗಳುಂ ಮುಗುಳ್ದಿಲ್ಲ ಹಾ- ॥
ಲೊಸರಿ ಟೊಂಗೆಗಂಳಿದುದುರುತ್ತಿವೆ ।
ಕಿಸಲಯಂಗಳು ಕೊಯ್ಯಲು ಪಟ್ಟಿವೆ ॥

(ಸ್ಪರ್ಶ ಸುಖವನ್ನು ತೋರಿ) ಎನ್ನ ಪ್ರಿಯಳು ಇಲ್ಲಿಯೆ ಇರುವಳೆಂದು ತಿಳಿದ ಕ್ಷಣವೆ ಈ ಸೀತಲವಾದಂಥ ಮಂದಮಾರುತನು ಎಷ್ಟಂತೆ ಸುಖಿಪಡಿಸುತ್ತಾನೊ! ಆಹಾಹಾ! ಕಾಮಜ್ವರದಿಂದ ಸಂತಪ್ತವಾದವಯಯವಗಳಿಂದ ಆಲಿಂಗಿಸಲಿಕ್ಕೆ ಈ ವಾಯುವು ಬಹು ಯೋಗ್ಯನಾಗಿದ್ದಾನೆ.

ಇಂದಿಲ್ಲಿ ನಾಬರಲು ಹೊಂದಿದೆ ತನ್ವಿಗೆಂದು।
ಮುಂದಾನಿಲಂ ತಿಳಿದು ಮಾಲಿನಿ ದಾಂಟಿ ಬಂದು ॥
ಇಂದೀವರಂಗಳ ಸುಗಂಧವೆ ಕಾಣ್ಕೆಯೆಂದು ।
ತಂದಪ್ಪಿದೆನ್ನನು ಕಣಾ ಶರಣಾಗಿ ಬಂದು ॥

ಅವಳು ಇಲ್ಲಿಯೇ ಯಾವುದಾದರೂ ಲತಾಮಂಟಪದಲ್ಲಿರಬೇಕು. (ಸ್ವಲ್ಪ ಮುಂದಕ್ಕೆ ಹೋಗಿ ನೆಲ ನೋಡಿ) ಓಹೋ! ನಿಶ್ಚಯವಾಗಿ ಇಲ್ಲಿಯೇ ಇದ್ದಾಳೆ.

(ವಿಭಾವರಿ.)

ತಳಿತ ಮಂಟಪದ ಬಾಗಿಲ ದಾರಿಯೊಳ್ |
ಬಿಳಿಮಳಲ್ ಪರಪಿರಲ್ ಪೊಸ ಪಾದಗಳ್ ||
ನೆಲಕೆ ಮೂಡಿವೆ ನಿತಂಬದ ಗೌರದಿಂ |
ಕೆಳಗೆ ಹಿಮ್ಮಡಿಗಳೊತ್ತಿವೆ ಭಾರದಿಂ ||

ಒಳ್ಳೇದು ಈ ವೃಕ್ಷದ ಮರೆಗೆ ನಿಂತು ನೋಡುವ. (ಮುಂದಕ್ಕೆ ಹೋಗಿ ನೋಡಿ ಹರುಷದಿಂದ) ಆಹಾ! ನೇತ್ರಗಳ ಸಾಫಲ್ಯವಾಯಿತು. ನನ್ನ ಮನೋರಥ ಪ್ರಿಯತಮೆಯು ಶಿಲಾಪಟ್ಟದ ಮೇಲೆ ಹೂವಿನ ಹಾಸಿಕೆಯಲ್ಲಿ ಮಲಗಿಕೊಂಡಿದ್ದಾಳೆ; ಇಬ್ಬರೂ ಸಖಿಯರು ಬಳಿಯಲ್ಲಿ ಕುಳಿತಿದ್ದಾರೆ; ನಿಃಶಂಕೆಯಿಂದ ಇವರಲ್ಲಿ ಏನೇನು ಮಾತುಗಳು ನಡೆಯುತ್ತವೋ ಕೇಳುವ, (ಎಂದು ನೋಡುತ್ತ ನಿಲ್ಲುತ್ತಾನೆ.)

(ಇಷ್ಟರಲ್ಲಿ ಮೇಲೆ ಹೇಳಿದ ಸ್ಥಿತಿಯಿಂದ ಶಕುಂತಲೆಯು ಬರುತ್ತಾಳೆ.)

ಸಖಿಯರು : (ಗಾಳಿ ಬೀಸುತ್ತ ಸ್ನೇಹದಿಂದ) ಸಖಿಯೆ ಶಕುಂತಲಾ ಈ ಕಮಲಪತ್ರದ ಬೀಸಣಿಕೆಯಿಂದ ಏನಾದರೂ ಸಮಾಧಾನವಾಗುವದೇನೆ?

ಶಕುಂ : ಗೆಳತಿಯರಾ ಗಾಳಿ ಬೀಸುತ್ತೀರಾ?

ಸಖಿಯರು : (ವಿಷಾದಗೊಂಡು ಒಬ್ಬರಿಗೊಬ್ಬರು ನೋಡುತ್ತಾರೆ.) ನಾವು ಗಾಳಿ ಬೀಸುವದು ಇವಳ ಲಕ್ಷದಲ್ಲಿಯೆ ಇಲ್ಲ!

ಅರಸು : (ತನ್ನೊಳಗೆ) ಶಕುಂತಲೆಯ ಮೈಯಲ್ಲಿ ಸಮಾಧಾನವಿಲ್ಲೆಂದು ಕಾಣಿಸುತ್ತದೆ. (ಮನಸ್ಸಿನಲ್ಲಿ ವಿಚಾರ ಮಾಡಿ) ಬೇಸಿಗೆಯ ಬಿಸಿಲಿನಿಂದ ಹೀಗಾಗಿರುವದೋ ಅಥವಾ ನನ್ನ ಮನಸ್ಸಿನಲ್ಲಿದ್ದದ್ದೇ ಇವಳ ಮನಸ್ಸಿನಲ್ಲಿದ್ದು ಬಾಧೆ ಬಡಿಸುವದೋ? (ಅಭಿಲಾಷಪೂರ್ವಕವಾಗಿ ನೋಡಿ) ಹೌದು; ನನ್ನಲ್ಲಿ ಬಾಧೆ ಬಡಿಸುವದೇ ಇವಳಿಗೂ ಕಾರಣವಾಗಿದೆ. ಇದಕ್ಕೆ ಸಂದೇಹವಿಲ್ಲ.

(ಪದ)

ದಾಟಿ : ಮನಸು ನಿಲುಕದೆ ಅರಿಯದವನೊಳು ಮನಸಿಜಾಗಮದಂದವೇ |
ಕನಸಿನೊಳಗರಮನಿಮಿಷವಾದರು ಕಾಮತಂತ್ರವ ಬಲ್ಲನೊಳು ಸಾಕು | ಎಂಬ ಪದದಂತೆ
ತರುಣಿ ಪಾಪಕೆ ಬಳಲಿ ಬೆಂದಿಹ |
ಪರಿಯ ನೋಡಲು ಬಿಸಿಲು ಜಳ ತಾ- ||
ಕಿರುವ ಚಿಹ್ನಗಳಿಲ್ಲ ಮನುಮಥ - |
ನುರಿಯು ಹೃದಯದೊಳುದಿಸುತಿರುವದು ||ಪಲ್ಲ||

ಸಂಪಿಗೆಯ ಮೈಬಣ್ಣ ಬಿಳುಪಿನ |
ಛಾಯೆದೋರಿದೆ ಕೆಲದಿ ಸಖಿಯರು ||
ತುಂಪು ಗಾಳಿಯ ಬೀಸುತಿರಲುರೆ |
ತಾಳದಲೆ ತಳಮಳಿಸುತಿರುವಳು ||೧||

ಉರದಿ ಚಂದನ ಗಂಧದಂಟಣೆಯ |
ನೊರಸಿಹಳು ಎಳೆ ಕಮಲನಾಲದಾ -||
ಭರಣಗಳು ಬಿಚ್ಚಿಹವು ಈ ಪರಿ|
ಇರಲು ರಮಣೀಯವಾಗಿ ತೋರ್ಪಳು ||೨||

ರವಿಯ ತಾಪವು ಸ್ಮರನ ಕೋಪವು |
ಸವನೆ ಸರಿಯಾದರು ಯುವತಿಯರ |
ಅವಯವಗಳೊಳು ಚೆಲುವಿಕೆಯ ಹೆಚ್ಚಿ |
ಸುವ ಚೆಲುವ ತಪ್ಪುಗಾರ ಮಾರನೆ ||೩||*

ಪ್ರಿಯಂ : ಅನಸೂಯಾ, ಈ ರಾಜರ್ಷಿಯನ್ನು ಕಂಡತೊಟ್ಟು ಇವಳು ಹೀಗಾಗಿದ್ದಾಳೆ. ಅವನ ದೆಸೆಯಿಂದಲೇ ಇವಳಿಗೆ ಇಂಥಾ ಕಠಿಣಾವಸ್ಥೆಯಾಗಿದ್ದೀತೇನೆ?

ಅನ : ನನಗೂ ಹೀಗೇ ತೋರುತ್ತದವ್ವ! ಇವಳನ್ನು ನಾನು ಕೇಳಿ ನೋಡುತ್ತೇನೆ. (ಗಟ್ಟಿಯಾಗಿ) ಸಖಿಯೆ, ಶಕುಂತಲಾ, ಮಾತಾಡವ್ವಾ; ಏನಾಗುತ್ತದೆ ನಿನಗೆ?

ಶಕುಂ : ಕಟಕಟಿ ಮಾಡಬೇಡಿರೆ? ಯಾತಕ್ಕ ನನ್ನನ್ನು ಕಾಡುತ್ತೀರಿ; ನಾನೊಬ್ಬಳೇ ಬಿದ್ದುಕೊಳ್ಳುತ್ತೇನೆ; ಹೋಗಬಾರದೆ ಇಲ್ಲಿಂದ!

ಅನ : ಹೀಗ್ಯಾಕೆ ಮಾಡುತ್ತೀಯೆ ನಮ್ಮವ್ವಾ ಎಲ್ಲಾ ಮಾತಿಗೂ? ಹೀಗೆ ಮಾಡಿದರೆ ಹ್ಯಾಗೆ ನೋಡು? ನಿನ್ನ ಸಂತಾಪವಂತೂ ಅತಿಶಯವಾಗಿ ತೋರುತ್ತದೆ. ನಾವು ನೋಡಿ ಹ್ಯಾಗೆ ಸೈರಿಸಬೇಕು. ಎದ್ದು ಕೂತು ಛಂದಾಗಿ ಮನಸ್ಸಿನಾಗಿನ ಮಾತು ಹೇಳಬೇಕವ್ವ.

---

* स्तनन्यस्तोशीरं प्रशिथिलमृणालैकवल्यं ।
प्रियायाः साबाधं किमपि कमनीयं वपुरिदम् ।।
समस्तापः कामं मनसिजनिदाघप्रसरयो- ।
र्नतु ग्रीष्मस्यै सुभगमपराद्दं युवतिपु ।।

ಶಕುಂ : (ಹೂಹಾಸಿಗೆಯಿಂದ ತಲೆಯೆತ್ತಿ ಗಲ್ಲವನ್ನು ಅಂಗೈಯಲ್ಲೂರಿ) ಏನದು ಕೇಳುವದು?

ಅನ : ಶಕುಂತಲಾ, ಮದನಪ್ರಕರಣದಲ್ಲಿ ನಮಗೆ ವಿಶೇಷವಾಗಿ ಜ್ಞಾನವಿಲ್ಲ; ಆದರೂ ಪುರಾಣಗಳಲ್ಲಿಯೂ ಕಥೆಗಳಲ್ಲಿಯೂ ಕಾಮೀಜನರ ಅವಸ್ಥೆಯಾದದ್ದು ಕೇಳಿದ್ದೇವೆ. ಅದರಂತೆ ನಿನ್ನ ಅವಯವ ಲಕ್ಷಣಗಳು ತೋರುತ್ತವೆ. ಆದರೆ ಏನೂ ಮನಸ್ಸಿನಲ್ಲಿಡದೆ ಏನು ಕಾರಣ ನಿನಗೆ ಸಂತಾಪವಾಗುತ್ತದೆಂಬುದನ್ನು ಹೇಳು; ಕಾರಣವೇನೆಂದರೆ, ವಿಕಾರವಿದ್ದುದನ್ನು ಚೆನ್ನಾಗಿ ತಿಳಿಯದೆ ಚಿಕಿತ್ಸೆ ಮಾಡಲಿಕ್ಕೆ ಬರುವದಿಲ್ಲ.

ಅರಸು : (ತನ್ನೊಳಗೆ) ಅನಸೂಯಾ ಸಹ ನನ್ನ ಮನಸ್ಸಿನಲ್ಲಿದ್ದಂತೆಯೇ ತರ್ಕ ಮಾಡಿದಳು.

ಶಕುಂ : (ತನ್ನೊಳಗೆ) ನನಗಂತು ವಿಕಾರವತಿಶತಯವಾಗಿದೆ. ಆದರೂ ಇವರ ಮುಂದೆ ನಾನು ಹ್ಯಾಗೆ ಹೇಳಲಿ?

ಪ್ರಿಯಂ : ಸಖಿಯೇ ಶಕುಂತಲಾ, ಅವಳ ಮಾತಿಗೆ ಉತ್ತರವೇ ಇಲ್ಲೇನೇ? ಕೂಸಿನ ಹಾಗೆ ಮಾಡುತ್ತೀಯಲ್ಲೆ! ಪ್ರಾಯಕ್ಕೆ ಬಂದೆಮ್ಮಾ, ಇನ್ನು ಮೇಲೆ ನಿನ್ನ ಜೀವವನ್ನು ನೀನೇ ಕಾಯಬೇಕು; ನೋಡಿದೆಯಾ, ನಿನ್ನ ಅವಯವಗಳೆಲ್ಲಾ ಕೃಶವಾಗುತ್ತ ನಡೆದವು; ಒಂದು ಲಾವಣ್ಯ ಮಾತ್ರ ನಿನ್ನನ್ನು ಬಿಟ್ಟಿಲ್ಲ.

ಅರಸು : (ತನ್ನೊಳಗೆ) ಶಾಬಾಸ್ ಪ್ರಿಯಂವದಾ! ಯಥಾಸ್ಥಿತವಾದ ಮಾತನ್ನಾಡಿದೆ.

(ಪದ)

ರಾಗ - ಪೂರ್ವಿ, ಆಟತಾಳ

ದಾಟಿ : "ಕಣ್ಣೊಳು ಕಟ್ಟಿದವೊಲು ಕಾಣಿಸುತಿಹದೆ| ಬಣ್ಣದುಟಿಯ ಬಲ್ಮೊಲೆಯ ಭಾವೆ ಮೈದೋರಲಕಟಾ" ಎಂಬ ಚಿಕ್ಕದೇವನ ಪದದಂತೆ.
ಅಥವಾ "ಬಂದದ್ದೇನಿದು ಕುಂದು ಪ್ರೀಯನೆ ಮಂದಗಮನೆಗೆ ಮೆಚ್ಚಿ" ಎಂಬ ಪದದಂತೆ.

ಕನ್ನೆ ಮಾರನ ರನ್ನದುಂಗುರ |
ವೆನ್ನಲಂಗಗಳನ್ನು ಸೊರಗಿಸಿ||
ಬನ್ನಬಡಿಸಲನನ್ಯಜನು ಬಿಳಿ |
ಚಿನ್ನದೊಲು ಚೆಲುವನ್ನೆ ತಾಳ್ದಳು |ಪಲ್ಲ||

ಗಲ್ಲಗಳು ಬಾಡಿದವು ಕೆಳದುಟಿ |
ಪಲ್ಲವವು ಒಣಗಿದುದು ಮೊಗಸಿರಿ||

ಯಲ್ಲಿ ಬೇಸರದೋರಿದುದು ನುಡಿ ||
ಬೆಲ್ಲದಂಥವು ಮೆಲ್ಲಗಾದವು ||೧||

ಕಣ್ಣುಗಳುದಾಸ್ಯಂ ನೆಗಳ್ದವು |
ತಿಣ್ಣಮೊಲೆ ಕಾಠಿಣ್ಯಗಳೆದವು||
ಸಣ್ಣ ನಡುವಿನ ಹೆಣ್ಣು ನಿಜ ಲಾ- |
ವಣ್ಯ ಸಿರಿಸಂಪನ್ನೆ ಮೆರೆವಳು ||೨||

ಇಂತು ಮಾಧವಿ ಲತೆಯು ವನದಿ ವ - |
ಸಂತ ಮಾರುತನಿಂದೊಣಗಿ ಮೈ ||
ಕಾಂತಿಯನು ಕಳೆದಿರುಲು ಶೋಭಿಸಿ - |
ದಂತೆ ಕಾಣಿಸುತಿಹಳು ಪ್ರೀಯಳು ||೩|| *

ಶಕುಂ : ಗೆಳತಿಯರಾ ನಿಮ್ಮ ಮುಂದೆ ಹೇಳದಲೆ ಇನ್ನಾರ ಮುಂದೆ ಹೇಳತಕ್ಕದ್ದಿದೆ? ಆದರೆ ನಾನು ಹೇಳಿದ್ದರಿಂದ ನಿಮಗೆ ಕಷ್ಟ ಮಾತ್ರವಾದೀತು.

ಸಖಿಯರು : ಅದಕ್ಕಂತೇ ನಾವು ಆಗ್ರಹ ಮಾಡುತ್ತೇವೆ, ಸ್ನೇಹದವರೆಲ್ಲರೂ ಕಷ್ಟವನ್ನು ಹಂಚಿಕೊಂಡರೆ ವೇದನೆ ಕಡಿಮೆಯಾಗಿ ಸಹಿಸಲಿಕ್ಕೆ ಪ್ರಯಾಸವಾಗುವದಿಲ್ಲ.

ಅರಸು : (ತನ್ನೊಳಗೆ) ಇನ್ನು ಮೇಲೆ ಇವಳು ಏನು ಹೇಳುತ್ತಾಳೋ ಏನೋ!

(ಪದ)

ರಾಗ - ಶಂಕರಾಭರಣ, ಆಟತಾಳ

ದಾಟಿ : "ಸಕ್ಕರೆಯೊಳಗಿನ ಚೂರೆ ರುಕ್ಮಿಣಿ| ಸೀತಾಳತತರೆ ಸತ್ಯಭಾಮೀನೀ" ಎಂಬ ಪದದಂತೆ.

ಏನೆಂದು ದೇವಿ ನುಡಿವಳಯ್ಯೊ | ಕೇಳು-
ವಾನಂದ ವಲ್ಲದಂಜುವೆನಯ್ಯೊ ||ಪಲ್ಲ||
ಚಾಲುವರಿವರು ಬಳಿಯನಿಂತು | ಜೀವ -
ದೋಲುತಿಳಿವ ಗೆಳತಿಯರಿಂತು||
ಪೇಳದಿರಳು ಮನಸಿನ ಮಾತು | ಇನ್ನು
ಮೇಲೆನ್ನ ದೈವವು ತಿಳಿದೀತು ||೧||

---

* क्षामक्षामकपोलमाननमरः काठिन्यमुक्तस्तनं।
मध्याः क्लान्ततरः प्रकामविनतावसौ छविः पाण्डुरा ।।
शोच्या च प्रियदर्शना च मदनक्लिष्टेयमालक्ष्यते।
पत्राणामिव शोषणेन मरूता सृष्टा लता माधवी ।। ९ ।।

ಕಣ್ಣಿನಿಂದಲೆ ಮಮತೆಯ ದೋರಿ | ಭಾವ-
ವನ್ನೆ ಕಾಣಿಸಿಹಳೊ ಒಯ್ಯಾರಿ ||
ಇನ್ನೇನೆಂಬುವಳೊ ಲಜ್ಜೆಯ ಮೀರಿ |ಮನ-
ಸಿನ್ನೂ ಬಿಡದು ಸಂಶಯ ಭಾರಿ ||೨||

ಅಲರಂಬುಗಣೆಯ ಮೇಲಿಹೆ ನಿಂದು | ಎಡ-
ಬಲದೊಳು ದುಃಖ ಸುಖದ ಸಿಂಧು||
ತಿಳಿಯೆನಿವಳ ನುಡಿಗಳು ಬಂದು | ಎನ್ನ
ಎಲರಿನೋಲೆತ್ತ ನೂಕುವವಿಂದು ||೩||*

ಶಕುಂ : ತಪೋವನದ ರಕ್ಷಣೆ ಮಾಡುವಂಥ ಆ ರಾಜರ್ಷಿಯನ್ನು ನೋಡಿದಂದಿನಿಂದ (ಮುಂದೆ ಮಾತು ಮುಗಿಸುವದಕ್ಕೆ ಲಜ್ಜೆಗೊಳ್ಳುತ್ತಾ.)

ಸಖಿಯರು : ಪೂರಾ ಹೇಳು; ಇಷ್ಟೇ ಮಾತನಾಡಿದರೆ ನಾವು ಹ್ಯಾಗೆ ತಿಳಿಯಬೇಕು.

ಶಕುಂ : ಅಂದಿನಿಂದ ಅವನಲ್ಲಿ ಆಶೆ ನಟ್ಟು, ಈವೊತ್ತಿಗೆ ನನ್ನವಸ್ಥೆ ಹೀಗಾಗಿದೆ.

ಅರಸು : (ಹರುಷದಿಂದ) ಕೇಳತಕ್ಕದ್ದೇ ಕೇಳಿದೆ. ಮಧ್ಯಾಹ್ನ ಕಾಲದಲ್ಲಿ ಆಕಾಶವು ಮೇಘದಿಂದ ಆಚ್ಛಾದಿತವಾಗಿರಲು ದಾಹವನ್ನು ಪಡಿಸುವಂಥ ಭಾಸ್ಕರನು ಸಂಧ್ಯಾಕಾಲದಲ್ಲಿ ಪರ್ಜ್ಯನ್ಯದಿಂದ ದೇಹವನ್ನು ತಾನೇ ಶಾಂತಗೊಳಿಸುವವನಂತೆ ಈ ಬಾಧೆ ಬಡಿಸುವಂಥ ಮನ್ಮಥನು ಈಗ ತಾನೇ ದಯೆದೋರಿದನು.

ಶಕುಂ : ಆದರೆ ಆ ರಾಜರ್ಷಿಯು ನನ್ನ ಮೇಲೆ ದಯ ಮಾಡುವಂತೆ ಏನಾದರೂ ಹಂಚಿಕೆ ಮಾಡಿರಿ. ಇಲ್ಲದಿದ್ದರೆ ನನ್ನ ಹೆಸರಿನಿಂದ ನಿಶ್ಚಯವಾಗಿ ತಿಲೋದಕವನ್ನು ಬಿಟ್ಟುಬಿಡಿರಿ.

ಅರಸು : ಈ ಭಾಷಣದಿಂದಂತೂ ಸಂಶಯವೆಲ್ಲಾ ವಿಚ್ಛೇದನವಾಗಿ ಹೋಯಿತು.

ಪ್ರಿಯಂ : ಈ ಭಾಷಣದಿಂದಂತೂ ಸಂಶಯವೆಲ್ಲಾ ವಿಚ್ಛೇದನವಾಗಿ ಹೋಯಿತು.

ಪ್ರಿಯಂ : (ಮೆಲ್ಲಗೆ) ಅನಸೂಯಾ, ಇವಳ ಮನ್ಮಥ ವ್ಯಥೆಯು ಬಹು ದೂರ ಹೋಗಿದೆ. ಆದ್ದರಿಂದ ಕಾಲವಿಲಂಬವನ್ನು ಸಹ ಸಹಿಸಲಾರಳು, ಇನ್ನು ಮೇಲೆ ತೀವ್ರವಾಗಲಿಕ್ಕೇ ಬೇಕು ಬಲ್ಲಿಯಾ. ಯಾವಾತನ ಮೇಲೆ ಇವಳ ಪ್ರೀತಿ

---

* प्रष्टा जनेन समदुःखसुखेन बाला ।
नेयं न वक्ष्यति मनागतमाधिहेतुम् ।।
हष्टो विवृत्य बहुशोऽप्यनया सतृष्ण ।
सत्रान्तरे श्रवणकातरतां गतोऽस्मि ।। १० ।।

ನಟ್ಟಿದೆಯೋ ಆತನು ಪೌರವಕುಲಲಲಾಮನಾಗಿದ್ದಾನೆ. ಇವಳ ಅಭಿಲಾಷೆ ಸ್ತುತ್ಯವೆಂದು ತಿಳಿಯತಕ್ಕದ್ದು ಬಲ್ಲೆಯಾ.

ಅನ : ನೀನೆಂಬುವದು ನಿಜ.

ಪ್ರಿಯಂ : ಸಖಿಯೆ, ಇವಳ ಆಶೆ ಯೋಗ್ಯ ಪುರುಷನಲ್ಲಿ ನಟ್ಟಿದೆ. ಸಾಗರವನ್ನು ಬಿಟ್ಟು ಮಹಾನದಿಯೆಲ್ಲಿ ಹೋದೀತೆ? ಆಮ್ರವೃಕ್ಷದ ಹೊರ್ತು ಕಿಸಲಯಗಳಿಂದ ಶೋಭಾಯಮಾನವಾದಂಥಾ ನವಮಲ್ಲಿಕಾವಲ್ಲಿಯನ್ನಂಗೀಕರಿಸಲಿಕ್ಕೆ ಯಾವದು ಯೋಗ್ಯವಾಗಿದೆ?

ಅರಸು : (ತನ್ನೊಳಗೆ) ವಿಶಾಖಾ ನಕ್ಷತ್ರಗಳು ಶಶಾಂಕನನ್ನು ಅನುಲಕ್ಷಿಸಿಯೇ ನಡೆದರೆ ಅಲ್ಲಿ ಆಶ್ಚರ್ಯವೇನು!

ಅನ : ಸಖಿಯೆ, ಇವಳ ಮನೋರಥವು ವಿಲಂಬವಾಗದಲೆಯೂ ಯಾರಿಗೂ ತಿಳಿಯದಲೆಯೂ ಪೂರ್ಣವಾಗುವಂಥಾ ಉಪಾಯವಾವದನ್ನು ಯೋಚಿಸತಕ್ಕದ್ದು?

ಪ್ರಿಯಂ : ವಿಲಂಬವಾಗಬಾರದೆಂಬುವದು ಸುಲಭವಾದ ಮಾತು. ಯಾರಿಗೂ ತಿಳಿಯಬಾರದೆಂಬುವದು ಮಾತ್ರ ಕಠಿಣ.

ಅನ : ಅದು ಹ್ಯಾಗೆ?

ಪ್ರಿಯಂ : ಆ ರಾಜರ್ಷಿಯು ಒಳ್ಳೇ ಸ್ನೇಹಯುಕ್ತನಾಗಿ ಇವಳನ್ನು ನೋಡಿ ನೋಡಿ ತನ್ನ ಅಭಿಲಾಷೆಯನ್ನು ಪೂರ್ಣವಾಗಿ ಪ್ರಕಟಮಾಡಿದ್ದಾನೆ. ಇದಂತು ಬಿಡು, ಚಿಂತಾಜಾಗರಣೆಯಿಂದ ಆತನು ಕೃಶನಾಗಿ ಹೋಗಿದ್ದಾನೆ, ಇದನ್ನು ನಾವು ಪ್ರತ್ಯಕ್ಷ ನೋಡುತ್ತೇವೆ.

ಅರಸು : (ತನ್ನ ಶರೀರವನ್ನು ನೋಡಿಕೊಂಡು) ನಾನು ನಿಜವಾಗಿ ಕೃಶನಾಗಿದ್ದೇನೆ.

(ಶಾರ್ದೂಲವಿಕ್ರೀಡಿತ)

ತೊಂಗಲ್ ತುಂಗಕುಚಂಗಳಿಂ ಗತಿಯೊಳೊಂಗೊಂಬೀ ಕುರಂಗಾಕ್ಷಿಯಂ -|
ನ್ನಂಗೈ ಕಂಗಳಿಗಿಕ್ಕಿ ಧೇನಿಸಿ ನಿಸಿಂಗಳ್ಬಂಗಜಾಂಗಾರದಿಂ||
ಕೆಂಗಣ್ಣೀರತರಂಗಮಂಗರಿಯೆ ರಂಗುಂಗುಂದಿತೆನ್ನುಂಗುರಂ |
ಮುಂಗೈ ಪೊಂಗಡೆಯಂಗ ಕುಂಗಿರಲು ತಾಂ ಹಿಂಜಾರಿ ಮುಂಬರ್ಪುದು||

ಅನ : (ಪ್ರಿಯಂವದೆಗೆ) ಇದೆಲ್ಲಾ ನಿಜ ಮುಂದೆ ಮಾಡತಕ್ಕ ಉಪಾಯವೇನು?

ಪ್ರಿಯಂ : (ಸ್ವಲ್ಪ ಧೇನಿಸಿ) ಆತನಿಗೆ ಪ್ರೀತಿಯುಕ್ತವಾದ ಮದನ ಲೇಖವನ್ನು ಬರೆಯತಕ್ಕದ್ದು. ಅದನ್ನು ನಾನು ದೇವರ ನಿರ್ಮಾಲ್ಯವೆಂಬ ನಿಮಿತ್ತದಿಂದ ಹೂವಿನಲ್ಲಿ ಮುಚ್ಚಿ ಆತನಿಗೆ ತಲ್ಪಿಸುತ್ತೇನೆ.

ಅನ : ಈ ಉಪಾಯವು ಬಹು ಚನ್ನಾಗಿ ಕಾಣಿಸುತ್ತದೆ; ಇದರ ಮೇಲೆ ಶಕುಂತಲಾ ಏನೆಂಬುವಳೋ?

ಶಕುಂ : ಸಖಿಯರ ಯುಕ್ತಿಯಲ್ಲಿ ಮತ್ತೇನು ಸಂಶಯ ತೆಗೆಯತಕ್ಕದ್ದು?

ಪ್ರಿಯಂ : ಹಾಗಾದರೆ ನಿನ್ನ ಮನಸ್ಸಿನೊಳಗಿನ ಭಾವಗಳನ್ನೆಲ್ಲಾ ಸ್ವಲ್ಪದರಲ್ಲಿ ಕಾಣಿಸಿ ಒಂದು ಮನೋಹರವಾದಂಥಾ ಪದ್ಯವನ್ನು ರಚಿಸು.

ಶಕುಂ : ಹೌದು ನಾನು ರಚಿಸುತ್ತೇನೆ. ಆದರೆ, ಅತ್ತ ಕಡೆಯಿಂದ ಅನಾದರ ಬಂದೀತಲ್ಲಾ ಎಂದು ನನ್ನ ಹೃದಯ ಭಯಪಡುತ್ತದೆ.

ಅರಸು : (ಹರುಷದಿಂದ ತನ್ನೊಳಗೆ)

(ಪೃಥ್ವೀ ವೃತ್ತ)

ಅನಾದರದ ಭೀತಿ ಯಾತಕಲೆ ಮುಗ್ಧೆ ಕೇಳ್ ಸುಮ್ಮನೆ |
ಮನಂ ನಿರುತ ನಿನ್ನನೇ ನೆನೆಯೆ ಬಂದು ನಿಂದಿಪ್ಪೆನೆ||
ವಿನಂತಿಪಗೆ ಲಕ್ಷ್ಮೀ ಬಾರಳು ಬಹಳ್ ಮನಂ ಬಂದೊಡೆ |
ಮನುಷ್ಯನವಲಿಂಗೆ ದುರ್ಲಭನೆ ತಾನೆ ಮೆಚ್ಚಿರ್ದೊಡೆ ||

ಸಖಿಯರು : ನಿನ್ನ ಗುಣಕ್ಕೆ ನೀನೇ ಅಪಮಾನ ಮಾಡಿಕೊಳ್ಳುತ್ತಿಯವ್ವ. ಶರೀರವನ್ನು ಶಾಂತಗೊಳಿಸುವ ಶರತ್ಕಾಲದ ಬೆಳದಿಂಗಳು ಅನಾಯಾಸದಿಂದ ಮೈಮೇಲೆ ಬೀಳುತ್ತಿರಲಾಗಿ ಕೊಡೆಹಿಡಿದು ಮರೆಯಾಗುವರುಂಟೆ ಯಾರಾದರು?

ಶಕುಂ : (ಮುಗುಳುನಗೆಯಿಂದ) ಒಳ್ಳೇದು. ಹಾಗಾದರೆ ನಿಮ್ಮ ಹೇಳಿಕೆ ಪ್ರಕಾರ ಮಾಡುತ್ತೇನೆ. (ಮನಸ್ಸಿನಲ್ಲಿ ಪದ್ಯರಚನೆಯನ್ನು ಕುರಿತು ಧೇನಿಸುತ್ತಾಳೆ.)

ಅರಸು : ಪ್ರಿಯಳ ಮುಖವನ್ನು ನೋಡಲಾಗಿ ಕಣ್ಣೆವೆಗಳು ಸಹ ಮುಚ್ಚಲಿಕ್ಕೆ ಮರೆಯುತ್ತವೆ.

(ಪದ)

ರಾಗ – ಭೈರವಿ, ರೂಪಕ

ದಾಟಿ : "ಮೋರೆದೋರನು ಹರಿಯು ಪರಮ ಜಾರಾ" ಎಂಬ ಬದದಂತೆ.

ಪದವ ರಚಿಸುತ್ತಿಹಳು ಚಂದಿರವದನೆ ಮನದೊಳು |
ಹೃದಯದಾಸೆದೋರಲು ಬಲು| ಹೆದರಿ | ಬೆದರಿ |
ಚದುರಿ | ಮಧುರಿ |ಪಲ್ಲ||

ಕರದಿ ಗಲ್ಲವಿರಿಸಿ ಒಂದೆ ಕಡೆಗೆ ನೋಡುತಾ |
ಬೆರಳಿನಿಂದ ಮೆಲ್ಲನೆ ಮೃದು ತಾಳ ಮೆಟ್ಟುತಾ||
ಸಿರವನೊಲಿಯೆ ಫಣಿಯೊಳು ಕರಿ –
ಸುರುಳುಗುರುಳು ಉರುಳುತಿರಲು |೧||

ತವಕದಿಂದಲುಚಿತ ಸೂಚಿಸಿರಲು ಹಿಗ್ಗುತಾ |
ಕವನರಸದಿ ಕೆನ್ನೆಯೊಳು ಮುಳ್ಳು ನಾಟುತಾ||
ಕವಿಯೇ ಬಾಷ್ಪ ಕಣ್ಣೊಳುಕ್ಕು - |
ತಿವೆ ತನುವತಿ ನವತ ಯುವತಿ ||೨||

ಒಂದೆ ಭ್ರೂಲತೆಯ ಬಾಲೆ ಮೇಲಕೆತ್ತುತಾ |
ಹೊಂದಿ ಬರಲು ರಚನೆ ಸಣ್ಣ ಸ್ವರದಿ ನುಡಿಯುತಾ||
ಬಂಧನ ಸೌಂದರಿಯದಾ -
ನಂದದಿಂದ ಮಿಂದು ಒಂದು ||೩||*

ಇವೆಲ್ಲ ಲಕ್ಷಣಗಳು ನನ್ನ ಮೇಲೆ ಪೂರ್ಣವಾಗಿ ಅನುರಾಗವಿದ್ದಂತೆ ತೋರಿಸುತ್ತವೆ.

ಶಕುಂ : ಗೆಳತಿಯರಾ, ನಾನು ಒಂದು ಪದವನ್ನು ಮನಸ್ಸಿನಲ್ಲಿ ರಚಿಸಿದ್ದೇನೆ. ಆದರೆ ಅದನ್ನು ಬರೆಯತಕ್ಕ ಸಾಧನಗಳಿಲ್ಲಲ್ಲ!

ಪ್ರಿಯಂ : ಇಕ್ಕೋ ನೋಡು, ಗಿಳಿಯ ಹೊಟ್ಟೆಯ ಹಾಗೆ ಕಮಲಪತ್ರವಿಲ್ಲಿ ಬಿದ್ದಿದೆ. ಇದರ ಮೇಲೆ ಉಗುರಿನಿಂದ ಲೇಖಿಸು.

ಶಕುಂ : (ಬರೆಯಲಾರಂಭಿಸುತ್ತಾಳೆ) ಗೆಳತಿಯರಾ, ಕೇಳಿರೆ. ಇದರ ಅರ್ಥ ಸಂಗತಿಯು ಚನ್ನಾಗಿ ಕೂಡಿದೆಯೊ ಅಥವಾ ಇಲ್ಲವೋ ನೋಡಿ.

ಸಖಿಯರು : ಹಾ! ಓದು ನಾವು ಕೇಳುತ್ತೇವೆ.

(ಶಕುಂತಲೆ ಸ್ವಲ್ಪ ನಾಚುತ್ತಾಳೆ.)

ಸಖಿಯರು : ಸಾಕು; ಎಷ್ಟು ಮುಖಹೀನತನ! ಓದಬಾರದೆ?

ಶಕುಂ : (ಓದುತ್ತಾಳೆ.)

(ಪದ) *

ದಾಟಿ : "ಹೇಗಿರಲೆ ನಾನು ಕಾಂತಾ ಎನಗೆ ಎರವಾದನೆ" ಎಂಬ ಪದದಂತೆ.

ಬಾ ಬಿಡಿಸೊ ಮೋಹನ್ನಾ | ಅಂಗಜ ತಾಪದಿಂದೆನ್ನಾ |ಪಲ್ಲ||
ಮನಸು ನಿನ್ನದು ತಿಳಿಯದು ಹಗಲಿರಳೊಳು |
ಮನಸಿಜನುರಿ ತಾಳಲಾರೆನೊ ||೧||

---

* उन्नमितैकभ्रूलतमाननमस्याः पदानि रचयन्तयाः
कण्टकितेन प्रथयति मय्यनुरागं कपोलेन ।।

ಬಿನ್ನಹ ಮಾಡುವೆ ಮನುಮಥಗೆನೆ ಮನ |
ನಿನ್ನ ಪಾದಕ್ಕೆ ಸಿಲುಕಿ ಹೋಯಿತೊ ||೨||

ಚಿತ್ತ ನಿನ್ನೊಳು ಕಳೆದಿಹೆನೆಂದು ಚಿತ್ತಜ |
ನತ್ಯಂತ ಕೋಪವ ತಾಳ್ದನೋ ||೩||

ಅರಸು : (ಶೀಘ್ರದಿಂದ ಮುಂದಕ್ಕೆ ಹೋಗಿ)

(ಪದ) *

ಬಂದೆ ಕಾಮಿನಿ ಮಣಿಯೇ| ಕುಸುಮ ಬಾಣಕೆ ನೊಂದ ಜಾಣೆಯೆ ||ಪಲ್ಲ||
ಚದುರೆ ನಿನ್ನನುತಾಪ ಬಡಿಸುವ ನಿಷ್ಠುರ|
ಮದನನೆನ್ನನು ದಹಿಸುವನೆ ||೧||

ತಮೋಪಹನಂ ಚೆಲುವ ಕುಮುದಿನಿಗಿಂತ ಚಂ-
ದ್ರಮನ ಕೇಳ್ ಕಳೆಗುಂದಿಸುವನೆ ||೨||

ಸಮದುಃಖಿಗಳು ನಾವು ಸಖಿಯೆ ಕೂಡಿದೆವಿನ್ನು |
ಸುಮಶರನನು ಸೋಲಿಸುವೆವೆ ||೩||

ಸಖಿಯರು : (ಹರುಷದಿಂದ ಎದ್ದು ನಿಲ್ಲುತ್ತಾರೆ) ನಮ್ಮ ಸಖಿಯಳ ಮನೋರಥ ವಲ್ಲಿಯ ಫಲವು ತೀವ್ರದಿಂದಲೇ ಉಂಟಾಯಿತು.

ಶಕುಂ : (ಅರಸನನ್ನು ನೋಡಿ ಏಳಲಾರಂಭಿಸುತ್ತಾಳೆ.)

ಅರಸು : ಸಾಕು ಸಾಕು; ಏಳುವ ಶ್ರಮವ್ಯಾತಕ್ಕೆ?

(ಪದ)

ದಾಟಿ : "ಮಾತಾಡದಾ ಬಗೆಯೇನು ಏನು? | ನಿನ್ನ | ಪ್ರೀತಿಗೊಲಿದ ಪ್ರಾಣನಾಥನೊಡನೆ" ಎಂಬ ಪದದಂತೆ.

---

* तव न जाने हृदयं मम पुनः कामो दिवापि रात्रावपि।
निर्घुण तपति बलीयस्त्वयि वृत्तमनोरथान्यङ्गानि ।। ३६।।

* तपति तनुगात्रि मदनस्त्वामिनिशं मा पुनर्दहत्येव ।
गलपयति यथा शशाङ्क न तया हि कुमुद्वतीं दिवसः ।।

ಆಯಾಸವನು ಪಡಬ್ಯಾಡೆ ಬ್ಯಾಡೆ ||ಪಲ್ಲ|| ನಿನ್ನ -
ಕಾಯಸೇವಕನಿವ ಕೇಳು ಏಳುವಾಯಾಸ ||ಅನುಪಲ್ಲ||

ಮೈಯೊಳು ಸಂತಾಪ | ಬಹಳಿರೆ
ಮಾಡಿರಲನುಲೇಪ| ಸುಮನದ
ಶಯ್ಯೆಯೊಳ್ಮಲಗಿರಲೊಯ್ಯನೊಯ್ಯನಾಯಾಸ ||೧||

ಕುಸುಮದ ಸೌಗಂಧಾ|ತಾಳಿದ
ಮಿಸುನೆವಣ್ಣದ ಸ್ತರದ | ಭಾರಕೆ
ಕಿಸಲಯ ಕರಗಳನೂರಿ ಮೀರಿದಾಯಾಸ ||೨||

ಬಡನಡು ಬಳಕುತಿರೆ | ನಯದೊಳು
ಉಡುಗೆಯ ತಿದ್ದದಿರೆ | ನಾಬರೆ
ಒಡೆಯಳು ಎನಗೆಂದು ತಿಳಿವೆ ಚಲುವೆ ಆಯಾಸ ||೩||*

ಶಕುಂ : (ತನ್ನಷ್ಟಕ್ಕೆ) ಹೃದಯವೆ, ಇನ್ನು ಹ್ಯಾಗೆ ಮಾಡುತ್ತಿ? ಈವೊತ್ತಿನವರೆಗೂ ಕಷ್ಟವೆಂಬ ಕತ್ತಲೆಯಲ್ಲಿ ಇದ್ದ ನನ್ನ ಕಣ್ಣುಗಳು ಈಗ್ಗೆ ಪೌರವ ಕುಲದೀಪರನ್ನು ನೋಡಲಿಕ್ಕೆ ಅಂಜುತ್ತವೆ.

ಅನ : ಮಹಾರಾಯರೇ, ಅವಳು ಮಲಗಿರುವ ಮೃದು ಶೀಲಾತಲದ ಮೇಲೆ ತಾವು ಸ್ಥಿತರಾಗಬೇಕು.

ಶಕುಂ : (ಮಗ್ಗಿಲಾಗಿ ಸ್ವಲ್ಪ ಸರಿದು ಆತನಿಗೋಸ್ಕರ ಸ್ಥಳ ಮಾಡುತ್ತಾಳೆ.)

ಅರಸು : (ಅವಳ ಬಳಿಯಲ್ಲಿ ಕುಳಿತುಕೊಂಡು ಮುಖವನ್ನು ನೋಡುತ್ತ) ಮೈಯಲ್ಲಿ ಸ್ವಲ್ಪಾದರೂ ದಾಹಕ್ಕೆ ಉಪಶಮನವುಂಟೊ?

ಶಕುಂ : (ಲಜ್ಜಿತಳಾಗಿ ಕೈಗಳಿಂದ ಮುಖವನ್ನು ಮುಚ್ಚಿಕೊಳ್ಳುತ್ತಾಳೆ.)

ಪ್ರಿಯಂ : (ಮುಗುಳುನಗೆಯಿಂದ) ಮಹಾರಾಜರೆ, ತಾವು ಬಂದಿರೆಲ್ಲಾ ಇದೇ ಔಷಧ ತೆಗೆದುಕೊಂಡಿದ್ದಾಳೆ. ಇನ್ನು ಮೇಲೆ ಉಪಶಮನವಾದೀತು. ತಮ್ಮ ಉಭಯತರ ಪರಸ್ಪರ ಪ್ರೀತಿಯು ಮೇಲೆಯೇ ಕಂಡುಬರುತ್ತದೆ. ಆದರೂ ಸಖಿಯಳಲ್ಲಿದ್ದ ನನ್ನ ಸ್ನೇಹವು ಅವಳ ವಿಷಯದಲ್ಲಿ ಮಾತನಾಡದೆ ಬಿಡುವುದಿಲ್ಲ.

ಅರಸು : ಹೇ ಭದ್ರೆ ಆಡತಕ್ಕದ್ದನ್ನು ಆಡಿಬಿಡಬೇಕಲ್ಲದೆ ಮನಸ್ಸಿನಲ್ಲಿಡಬಾರದು. ಹೊತ್ತಿಗೆ ಹೇಳದಿದ್ದರೆ ಮುಂದೆ ಹಳಿಹಳಿಯಾಗುತ್ತದೆ.

---

* संदष्टकुमुमशयनान्याशुविमर्दित मृणालवलयानि।
गुरुपरितापानि न ते गात्राष्युपचारमर्हन्ति।।

ಪ್ರಿಯಂ : ಹಾಗಾದರೆ ನನ್ನ ಮಾತು ನಡಿಸುತ್ತೇವೆಂದು ತಾವು ನಮ್ಮ ಸಖಿಯಳಾಣೆ ಕೊಡಬೇಕು.

ಅರಸು : ಅವಳಾಣೆ ಯಾತಕ್ಕೆ? ನನ್ನ ಕೊರಳಾಣೆ ಎಂದರೂ ನಿಮ್ಮ ಮಾತು ನಡಿಸುತ್ತೇನೆ.

ಪ್ರಿಯಂ : ಒಳ್ಳೇದು. ಪ್ರಜೆಗಳ ದುಃಖವನ್ನು ಪರಿಹಾರ ಮಾಡುವದು ರಾಜರ ಧರ್ಮವಷ್ಟೆ.

ಅರಸು : ಅದಕ್ಕೆ ಸಮಾನವಾದ ಧರ್ಮವು ಇನ್ನು ಯಾವದೂ ಇಲ್ಲ.

ಪ್ರಿಯಂ : ಹಾಗಾದರೆ ನಮ್ಮ ಸಖಿಯು ತಮ್ಮ ಚರಣದಲ್ಲಿ ಪ್ರೀತಿ ಇಟ್ಟದ್ದರಿಂದ ಮದನನು ಅವಳನ್ನು ಈ ಅವಸ್ಥೆಗೆ ತಂದಿದ್ದಾನೆ. ಶರಣಾಗತಳನ್ನು ಸ್ವೀಕರಿಸಿ ಬದುಕಿಸಿಕೊಳ್ಳಬೇಕು.

ಅರಸು : ಉಭಯತರರಲ್ಲಿಯೂ ಇದೇ ಪ್ರಣಯವುಂಟು. ಆದರೂ ತಾವು ಈ ಮಾತಿಗೆ ಅನುಮತಿಯನ್ನು ಕೊಟ್ಟದ್ದು ನಮ್ಮ ಮೇಲೆ ಅನುಗ್ರಹವೇ ಸರಿ.

ಶಕುಂ : (ಪ್ರಿಯಂವದಯನ್ನು ನೋಡಿ) ಸಖಿಯೆ, ಅಂತಃಪುರದ ಹೆಣ್ಣುಗಳ ವಿರಹದಿಂದ ಪರ್ಯುತ್ಸುಕರಾದ ರಾಜರ್ಷಿಗಳನ್ನು ಅಡವಿಯಲ್ಲಿ ಯಾಕೆ ತಡೆಯುತ್ತಿ?

ಅರಸು : ಅಯ್ಯೊ?

(ಪದ)

ದಾಟಿ : "ಮುದ್ದು ಬಾಲೆ ಬಾರೆ ಬಾರೆ ಬಾ ||ಪಲ್ಲ|| ನಿನ್ನ ಮುಖದ ಲಾವಣ್ಯವನ್ನು ನೋಡಿ ಹುಣ್ಣಿವೆ ದೊರೆಯು ಸಣ್ಣನಾಗಿ ಶಿವನ ಸೇರಿದಾ" ಎಂಬ ಪದದಂತೆ.

ನುಡಿಯಿಂದ ನೋಯಿಸ ಬೇಡವೆ ||ಪಲ್ಲ||
ನಿನ್ನ ಸೇವೆಗಾಸೆಗೊಂಡು
ಯೆನ್ನ ನಗರವನ್ನು ಬಿಟ್ಟು
ವನ್ಯನಂತೆ ತೊಳಲುತಿಹೆನೆ ||೧||

ಇರುಳು ಹಗಲು ನಿನ್ನ ಧ್ಯಾನ
ಮರೆಸಿತೆಲ್ಲ ಕಾರ್ಯಗಳನು
ಎರಳೆಗಣ್ಣೆ ನಿನ್ನೊಳಾರ್ತನೆ ||೨||

ಸ್ಮರನು ತನ್ನ ಶರದಿ ಮೊದಲೆ |
ಮರುಗಿಸಲರೆಜೀವಿಯಾದೆ |
ಮರಳಿಯೆನ್ನ ಕೊರಳಗೊಯ್ವರೆ ||೩||*

---

* इदमनन्यपरायणमन्यथा हृदयसंनिहिते हृदयं मम
यदि समर्थयसे मदिरेक्षणे सदनबाणहतोऽस्मि हतः पुनः ।। ३७।।

ಅನ : ಮಹಾರಾಜರೆ, ಅರಸರಿಗೆ ಅನೇಕ ವಲ್ಲಭೆಯರಿರುವರೆಂದು ಕೇಳುತ್ತೇವೆ. ನಾವು ಅನುಮತಿಯನ್ನು ಕೊಟ್ಟುದರಿಂದ ಮುಂದೆ ನಮ್ಮ ಗೆಳತಿಯ ಹಿರಿಯರು ಅವಳವಸ್ಥೆಯನ್ನು ಕೇಳಿ ಮರುಗುವಂತೆ ಮಾತ್ರ ಮಾಡಬಾರದು.

ಅರಸು : ಹೇ ಭದ್ರೇ, ಬಹಳ ಮಾತುಗಳಿಂದ ಏನು ಪ್ರಯೋಜನ? ನಾನು ಇಷ್ಟೇ ಹೇಳುತ್ತೇನೆ ಕೇಳು.

(ಪದ)

ದಾಟಿ : "ಪರರೆಂದ ಮಾತು ಕೇಳಬ್ಯಾಡೆ ಪ್ರಾಣನಾಯಕಿ" ಎಂಬ ಪದದಂತೆ.

ಬಿಡು | ಚಿಂತೆ ಮನದ| ಭ್ರಾಂತಿಗಳೆದು | ಶಾಂತಳಾಗಿರೆ ||ಪಲ್ಲ||
ಬಹು| ಮಡದಿರಿರುವ | ಗೊಡಿವೆಯಾಕೆ
ಕಡಲು ಸೀರೆಯ |
ಈ | ಪೊಡವಿ ಮತ್ತೀ | ಹುಡುಗೆ ಮೂರನೆ |
ಒಡೆಯಳಿಲ್ಲವೆ ||೧||

ಅರ | ವಿಂದ ಮುಖಿಯ | ಮುಂದೆ ಹೇಳ
ದೊಂದು ಮಾಡೆನೆ
ಇವ | ಳೆಂದ ಮಾತು | ಹೊಂದಿಸಲಾ-
ನಂದ ಬಡುವೆನೆ ||೨||
ಕ| ಸ್ತುರಿಯನೊಯ್ದು | ಎರೆಯ ಮಣ್ಣೊಳು
ಬರಿಸುತಿರುವರೆ |
ಎವೆ| ಎರಡು ಕಣ್ಣಿನ | ಪೊರೆವ ತೆರದಿ
ನಿರುತ ಕಾಯುವೆ ||೩|| *

ಸಖಿಯರು : ಇನ್ನು ಮೇಲೆ ನಾವು ನಿಶ್ಚಿಂತರಾದೆವು.

ಶಕುಂ : (ಮನಸಿನೊಳಗಿನ ಆನಂದವನ್ನು ಮುಚ್ಚುವದಕ್ಕೆ ವ್ಯರ್ಥ ಪ್ರಯತ್ನ ಮಾಡುತ್ತಾಳೆ.)

ಪ್ರಿಯಂ : (ಅನಸೂಯೆಗೆ ಮೆಲ್ಲನೆ) ನೋಡಿದೆಯೇನೆ ನಮ್ಮ ಸಖಿಯನ್ನು? ಬೇಸಗೆಯ ಬಿಸಿಲಿನಿಂದ ಶ್ರಮಿಸಲ್ಪಟ್ಟ ಮಯೂರಿಯು ಮುಂಗಾರಿಯ ಮಳೆಯಿಂದ ಮೆಲ್ಲಮೆಲ್ಲನೆ ಅವಸಾವನ್ನು ಹೊಂದುವಂತೆ ಇವಳ ಮುಖದಲ್ಲಿ ಕಲೆಗಳು ಕ್ಷಣಕ್ಷಣಕ್ಕೆ ಹೆಚ್ಚಾಗುತ್ತವೆ!

---

* परिग्रहबहुत्वेऽपि द्वे प्रिष्टे कुलस्य मे
समुद्ररसना चोर्वी सखी च पुवयोरिपम्।।

ಶಕುಂ : ಗೆಳತಿಯರಾ, ನಾನು ನಿಮಗೆ ಏನಾದರೂ ಕೆಟ್ಟ ಮಾತನಾಡಿದ್ದು ಮನಸಿಗೆ ಮಾತ್ರ ಹಚ್ಚಿಕೊಳ್ಳಬೇಡಿರಮ್ಮ; ಕ್ಷಮಿಸಿರಿ. ಅತಿಸ್ನೇಹವಿರುವದರಿಂದ ಒಂದು ವೇಳೆ ಬಿರುಸು ಮಾತುಗಳು ಬರುತ್ತವೆ.

ಪ್ರಿಯಂ : ಯಾರಾದರೂ ತಪ್ಪು ಮಾಡಿದರೆ ಅರಸರೇ ಕ್ಷಮಿಸತಕ್ಕವರು. ಅವರಿಗೇ ಹೇಳಿಕೊಳ್ಳವ್ವ. ನಾವೆಷ್ಟರವರು?

ಶಕುಂ : ಕ್ಷಮಿಸುವರೆಂದು ನಾನು ನಂಬುತ್ತೇನೆ.

ಅರಸು : (ಮುಗುಳುನಗೆಯಿಂದ) ನಿನ್ನ ಅವಯವಗಳಿಂದ ಒತ್ತಲ್ಪಟ್ಟಂಥ ಪುಷ್ಪಶಯ್ಯೆಯಲ್ಲಿ ನಿನ್ನ ಸಖಿಯಂತೆ ನನ್ನನ್ನು ಕೂಡಗೊಟ್ಟರೆ ನಾನು ಕ್ಷಮಿಸುತ್ತೇನೆ.

ಪ್ರಿಯಂ : (ನಗುತ್ತ) ಚಂದಾಗಿ ಅವರನ್ನು ಕೂಡಿಸಿಕೊಳ್ಳಬಾರದೇನೆ? ಬಿಸಿಲಿನಲ್ಲಿ ದಣಿದು ಬಂದಿದ್ದಾರೆ. ದೇಹಕ್ಕೆ ಸ್ವಲ್ಪ ಶಾಂತಿಯಾಗಲಿ!

ಶಕುಂ : ಏನೇ ಕೆಟ್ಟ ಹುಡುಗೆ, ಹೋಗತ್ತ? ನನ್ನ ಮೈಯಲ್ಲಿ ನೆಟ್ಟಗಿಲ್ಲದಾಗ ಸಹ ಛೇಡಿಸುತ್ತಾಳೆ.

ಪ್ರಿಯಂ : (ಅನಸೂಯೆಗೆ ಕಣ್ಣು ಸನ್ನೆ ಮಾಡಿ) ಅನಸೂಯಾ, ಅಕ್ಕೋ ನೋಡಿದೆಯಾ, ಆ ಹರಿಣ ಬಾಲಕವು ತನ್ನ ಮಾತೆಯನ್ನು ಹುಡುಕುತ್ತದೆ. ಅದನ್ನು ಅದರ ಹತ್ತಿರ ಒಯ್ದು ಮುಟ್ಟಿಸುವ. (ಎದ್ದು ಹೋಗಲಾರಂಭಿಸುತ್ತಾಳೆ.)

ಅನ : ಒಬ್ಬಳಿಗೇ ಸಿಗಲಿಕ್ಕಿಲ್ಲವ್ವ, ನಾನೂ ಬರುತ್ತೇನೆ. (ಅವಳೂ ಏಳುತ್ತಾಳೆ.)

ಶಕುಂ : ಇಬ್ಬರೂ ಹೋಗುವಿರೇನೇ? ಒಬ್ಬರಾದರೂ ನನ್ನ ಬಳಿಯಲ್ಲಿ ಇರಬಾರದೆ?

ಸಖಿಯರು : ಪೃಥ್ವಿಯನ್ನೇ ಸಂರಕ್ಷಿಸುವಂಥ ಸಮರ್ಥರು ನಿನ್ನ ಬಳಿಯಲ್ಲಿ ಇರಲಿಕ್ಕೆ ಎರಡನೆಯವರಿಂದ ಏನು ಪ್ರಯೋಜನ? (ಹೊರಟು ಹೋಗುತ್ತಾರೆ)

ಶಕುಂ : ಎಂಥವರೇ ನಮ್ಮವ್ವಗಳಿರಾ! ನನ್ನೊಬ್ಬಳನ್ನೇ ಬಿಟ್ಟು ಹೋದೀರೇನೇ?

ಅರಸು : ಹೋಗಲಿ ಏನೂ ಚಿಂತೆಯಿಲ್ಲ. ಈ ಸೇವಕನು ಸೇವೆಗೋಸುಗ ಸಮೀಪದಲ್ಲಿಯೆ ಸಿದ್ಧನಾಗಿದ್ದಾನೆ.

(ಪದ)

ದಾಟಿ : "ಬೆದರಬ್ಯಾಡೋ ಮದನಸುಂದರಾ| ಆ ಸಖಿಯ ಭಯದಿ|| ಬೆದರ ಬ್ಯಾಡೋ ಪ್ರಿಯಾ | ಚದುರೆಯ ಕಡೆಯವರು ಎಸ| ಸದನದ ಕಡೆ ಸುಳಿಯುದಿಲ್ಲ | ಮದನ ಕದನದೊಳು ಮನದಿ"

ಎಂಬ ಪದದಂತೆ.

ಬೆದರಬ್ಯಾಡೆ ಮದಿರಲೋಚನೆ | ನಾ ಬಳಿಯಲಿರಲು ||ಪಲ್ಲ||
ಬೆದರಬ್ಯಾಡೆ ಕೇಳ್ ಸಖಿಯರ
ಬದಲು ಸೇವೆಗಾಸೆಗೊಂಡು
ಎದುರಿನೊಳ್ ಕೈ ಜೋಡಿಸಿ ನಾ |
ಬದಿಯಲಿ ನಿಲುತಲಿ, ಹಲುಬುವೆ ||ಅನುಪಲ್ಲ||

ಚೆಲುವೆ ನಿನ್ನ ಶರೀರ ತಾಪ|
ಗಳೆಯುವೆ ನಾ ತೊಡೆಯೊಳಿಟ್ಟು |
ನಳಿನದಳದ ತಾಲವೃಂತ |
ದೆಳೆ | ಸುಳಿ | ತಿಳಿ | ಚಳಿ |ಯೆಲ |ರಿಲಿ ||೧||

ಮನಕೆ ಬಂದರರುಣ ಪದುಮ
ಪೋಲ್ವ ಹಿಮ್ಮಡಿಗಳನು ಕೈಯೊ
ಳೆನಗೆ ನೀಡೆ ಮೆಲ್ಲನೊತ್ತುವೆ
ಮನ |ಸಿನ | ಘನ | ವಿನತಿ | ಗೆಣತಿ ||೨||

ನಯದಿ ಬೇಡಿಕೊಂಬೆ ಯೆನ್ನೊಳು
ದಯವ ಮಾಡೆ ಮೌನೆ ನಿನ್ನಯ
ಬಯಕೆಯಂತೆ ನಡೆವೆ ಹರಿಣ
ನಯ |ನೆ ಎ | ನ್ನಯ | ಬಯಲ್ | ಭಯವ್ಯಾಕೆ ||೩|| *

ಶಕುಂ : ನಾನು ಸನ್ಮಾನವನ್ನು ಕೊಡತಕ್ಕಂಥವರಿಗೆ ಅಪಮಾನವನ್ನು ಮಾಡಿ ಹ್ಯಾಗೆ ಅಪರಾಧಿಯಾಗಲಿ? (ಎದ್ದು ಮೆಲ್ಲನೆ ಶ್ರಮದಿಂದ ಹೋಗಲಾರಂಭಿಸುತ್ತಾಳೆ.)

ಅರಸು : ಹೇ ಸುಂದರಿ, ನೀನು ಈ ಅವಸ್ಥೆಯಲ್ಲಿ ಇಂಥ ಬಿಸಿಲಿನಲ್ಲಿ ಎಲ್ಲಿ ಹೋಗುತ್ತಿ?

(ಪದ)

"ರಾಗ-ಸಾರಂಗ"

ಸಖಿಯೇ ಪೋಗುವದೊಳಿತಲ್ಲಾ
ಬಲು ಬಿಸಿಲೊಳು ವಳಲು ಕಾಯ್ದಿರೆ ||ಪಲ್ಲ||
ತಳರ್ದ ಲತೆಯೊಳನೆಳಲನೆ
ನಳಿನ ದಳದ ತಾಲನೆ ||

---

* किं शीतलैः क्लमविनोदिभिरार्द्रवातान्सचारयामि नलिनीदलतालवृन्तैः
अङ्के निवाय रुरभोरू यथा सुखं ते संवाहयामि चरणावुत पद्माता ग्रौ।।

ಹಳಿದಲರಿನ ಶಯನದಿಂ -
ದಿಳಿದು ಬಲು ಜಳದೊಳು ಬಳುಕುತ||೧||
(ಹೀಗೆಂದು ಕೈ ಹಿಡಿದು ಹಿಂತಿರುಗಿಸುವನು.)

ಶಕುಂ : ಬಿಡಿರಿ ಬಿಡಿರಿ! ಇನ್ನೊಮ್ಮೆ ನನ್ನ ಸಖಿಯರನ್ನು ಕೇಳಿಬರುತ್ತೇನೆ. ನಾನು ಕಾಮಾಗ್ನಿಯಿಂದ ಸಂತಪ್ತಳಾಗಿದ್ದರೂ ಯಾವದಾದರೊಂದು ಕಾರ್ಯವನ್ನು ಮಾಡಲಿಕ್ಕೆ ಸ್ವತಂತ್ರಳಲ್ಲ.

ಅರಸು : (ತನ್ನೊಳಗೆ) ಇವಳ ಸಮ್ಮತಿಯಿಲ್ಲದೆ ಮನಸ್ಸು ಅಂಜುತ್ತದೆ.

ಶಕುಂ : (ಆತನಿಗೆ ಕೇಳಿಸುವ ಹಾಗೆ ತನ್ನಷ್ಟಕ್ಕೆ) ಇವರಂತೂ ನನ್ನನ್ನು ಬಿಡಲೊಲ್ಲರು. ಐ ನನ್ನ ದೈವವೆ! ಈ ವೇಳೆಯಲ್ಲಿ ಸಖಿಯರೂ ಬಳಿಯಲ್ಲಿರಬಾರದೆ?

ಅರಸು : ನಿನ್ನ ದೈವವು ಎದುರಿನಲ್ಲಿ ಕೈ ಮುಗಿದುಕೊಂಡು ನಿಂತಿರಲು ಅದಕ್ಕೇನು ಕಾರಣ ದೂಷವಿಡುತ್ತಿ?

ಶಕುಂ : ಈ ವೇಳೆಯಲ್ಲಿ ಅದು ನನ್ನನ್ನು ಸ್ವತಂತ್ರಳನ್ನು ಮಾಡಲಿಲ್ಲವೆ? ಅದಕ್ಕೆ ನಾನು ದೂಷಣವಿಡುತ್ತೇನೆ.

ಅರಸು : (ತನ್ನೊಳಗೆ)
(ಪದ)
ದಾಟಿ : "ಕದವನಿಕ್ಕಿದಳಿದಕೋ| ಗಯ್ಯಾಳಿ ಮೂಳಿ" ಎಂಬ ಪದವಂತೆ.

ಹೆಣ್ಣಿನ ಗುಣಗಳಿವೇ|| ಚಿಕ್ಕ ಪ್ರಾಯದ ||ಪಲ್ಲ||
ತನ್ನೊಳಗಾರ್ತಿಹ, ನನ್ನು ಕೂಡದೆ ಪ್ರೀತಿ|

ಯನ್ನೆದೋರುತ ವ್ಯಾಳ್ಯ| ವನ್ನೆಗಳೆವರಯ್ಯಾ ||೧||
ಕಣ್ಣಿನ ಪ್ರೇಮದಿಂ | ಹೊನ್ನು ಸೋಲಿಸುವ ಲಾ-

ವಣ್ಯದಾಶೆಯೊಳಾಂಕಿ | ಹಣ್ಣು ಮಾಡುವರಯ್ಯಾ ||೨||
ಕಮ್ಮಗೋಲನ ಬಾಧೆ| ತಮ್ಮೊಳು ಹೆಚ್ಚಲು |
ದಮ್ಮನೆದಣಿವರು | ಸುಮ್ಮನಿರುವರಯ್ಯಾ ||೩||

ಸುಮಶರನ ದಯದಿ | ಸಮೀಪಿಸಿದನುಕೂಲ |
ಸಮಯದೊಳಂಗಜ | ಸಮರಕಂಜುವರಯ್ಯ ||೪||

ಸಾಹಿತ್ಯ - ನೀ ಸ ರೀ ರೀ ಪ ಮ ರೀ ಸಾ | ರೀಸಾ | ನಿ ಸ ರಿ ನಿ ಸ ರಿ ನಿ ಸ ರಿ ಸಾ ನಿ ಪಾ ||ಪಲ್ಲ||
ರಿ ರಿ ಮ ರಿ ಮ ಪ ನಿ ಮ ಪ ನಿ ಸ | ರಿ ನಿ ಸ ರಿ ಮ ರಿ ಸ ರಿ ಸ| ರಿ ರಿ ಸಾ ಸಾ ನಿ
ನಿ ಪ ಮ ಪ ಸಾ ಸಾ ನಿ ನಿ ಪ ನಿ ಮ ಪ ಪ ಮ ರಿ ಮ ರಿ ಸ ||

ಶಕುಂ : (ಹೋಗಲಾರಂಭಿಸುತ್ತಾಳೆ.)

ಅರಸು : (ತನ್ನೊಳಗೆ) ಈ ಹೊತ್ತಿನಲ್ಲಿ ಇವಳನ್ನು ಬಿಡಬಾರದು. (ಬೆನ್ನು ಹತ್ತಿ ಹೋಗಿ ಸೆರಗು ಹಿಡಿಯುತ್ತಾನೆ.)

ಶಕುಂ : ಪೌರವರಾಯರೆ, ವಿನಯವಿರಲಿ; ಇದೇನು ಚಂದ? ತಪೋವನದ ನಾಲ್ಕೂ ದಿಕ್ಕಿನಲ್ಲಿ ಋಷಿಗಳು ಸಂಚರಿಸುತ್ತಾರೆ.

ಅರಸು : ಇಷ್ಟು ಯಾತಕ್ಕೆ ಅಂಜುವದು? ಹಿರಿಯರ ಭಯ ಸಾಕು ಇನ್ನು! ಋಷಿಗಳು ಈ ವಿಷಯದಲ್ಲಿ ನಿನಗೇನೂ ದೋಷವಿಡಲಾರರು. ಅವರು ಎಲ್ಲ ಧರ್ಮಗಳನ್ನು ಬಲ್ಲಂಥವರಿದ್ದಾರೆ.

(ಪದ)

ದಾಟಿ : ನಿನಗೇತಕನು ಮಾನಾ| ಜಾಣಾನೆ ||ಪಲ್ಲ||
ಮಾತಿಲಿ ಮಧುರಾ| ನೀತಿಲಿ ಚದುರಾ|
ಸೋತುಬಂದೇನೋ ಮನಪೂರಾ | ಧೀರಾ || ಎಂಬ ಪದದಂತೆ.
ನಿನಗ್ಯಾತಕೆ ಅನುಮಾನ | ಬಾ ಬಾರೆ ||ಪಲ್ಲ||
ಮುನಿತನುಜೆಯರೊಳ್| ಮನಕೆ ಬಂದವರ |
ನ್ನನುಸರಿಸಿ ಬಾಳ್ದವರಿಲ್ಲೇ | ಬಲ್ಲೆ ||೧||

ಗಾಂಧರ್ವವಿಧಿ | ಯಿಂದ ಕೂಡಿದರೆ
ಹಿಂದೆ ಕೋಪಿಸಿದರಾರು | ಭೀರು ||೨||

ಈ ಪರಿಯಲಿ ಸಂ|ತಾಪದೊಳಿರೆ ನಾ|
ನೀ ಪೋಗ ಪೇಳಲಿಬ್ಯಾಡೆ | ಕೂಡೆ ||೩||

ಆ ಕುಲಪತಿ ನಿ - | ನ್ನೀ ಕೆಲಸಕೆ ತಾ |
ನ್ಯಾಕುಲನಾಗಾಭಯವ್ಯಾಕೆ | ಸಾಕೆ ||೪||

(ದೈನ್ಯದಿಂದ) ಬಾರೆ, ಬರುವದಿಲ್ಲೆ?

ಶಕುಂ : ಇಲ್ಲ

ಅರಸು : ಹಾಗಾದರೆ ನಾನು ಹೋಗುತ್ತೇನೆ. (ನಾಲ್ಕು ಹೆಜ್ಜೆ ಹೋಗಿ ಹಿಂತಿರುಗಿ ನೋಡುತ್ತಾನೆ.)

ಶಕುಂ : (ತಾನೂ ನಾಲ್ಕೈದು ಹೆಜ್ಜೆ ಹೋಗಿ ಹಿಂದೆ ನೋಡುತ್ತಾಳೆ.) ನಾನು ತಮ್ಮ ಮಾತು ಕೇಳದಿದ್ದರೂ ಇಷ್ಟು ಮಾತಾಡಿದ ಸ್ನೇಹವನ್ನು ಮಾತ್ರ ಮರೆಯಬಾರದು.

ಅರಸು : ಪ್ರಿಯೆ, ನಾನು ಹ್ಯಾಗೆ ಮರೆಯಲಿ? ಸಂಧ್ಯಾಕಾಲದಲ್ಲಿ ವೃಕ್ಷದ ಛಾಯೆಯು ಎಷ್ಟು ದೂರದಲ್ಲಿ ಹೋದರೂ ಮೂಲವನ್ನು ಹೇಗೆ ಬಿಡುವುದಿಲ್ಲವೋ ಹಾಗೆ ನನ್ನಿಂದ ನೀನು ಎಷ್ಟು ದೂರ ಹೋದರೂ ಈ ಹೃದಯವನ್ನು ಬಿಡಲಾರೆ ಬಲ್ಲೆಯಾ?

ಶಕುಂ : (ತನ್ನೊಳಗೆ) ನನ್ನ ಹೆಜ್ಜೆಗಳೇ ಮುಂದಕ್ಕೆ ಸಾಗಲೊಲ್ಲವು. ಈ ಕುರುವಕ ವೃಕ್ಷದ ಹಿಂದೆ ಅಡಗಿಕೊಂಡು ಇವರು ವಿರಹದಿಂದ ಏನೇನು ಮಾತನಾಡುತ್ತಾರೋ ಕೇಳುವೆ. (ಅಡಗಿಕೊಳ್ಳುತ್ತಾಳೆ.)

ಅರಸು : (ತನ್ನೊಳಗೆ) ಶಕುಂತಲೆ, ಹೋದೆಯಾ! ಅನುರಾಗದಲ್ಲಿ ಏಕರಸನಾದಂಥವನನ್ನು ಬಿಟ್ಟು ನಿರಪೇಕ್ಷೆಯಿಂದ ಹೋದೆಯಾ! ಇದು ನಿನಗುಚಿತವೇ?

ಅಯ್ಯೊ! ಹೆಣ್ಣಿನ ರೂಪವು ಇಷ್ಟು ಮೃದುಲವಾಗಿದ್ದರೂ ಅವರ ನಿರ್ದಯ ಹೃದಯವು ಶಿರೀಷಕುಸುಮದ ದೇಂಟಿನಂತೆ ಕಠಿನವಾಗಿರುವುದಲ್ಲ! ಶಕುಂತಲಾ, ಹೋದೆಯಾ!

ಶಕುಂ : (ತನ್ನೊಳಗೆ) ಈ ಮಾತುಗಳನ್ನು ಕೇಳಿ ನಾನು ಹೇಗೆ ಹೋಗಲಿ!

ಅರಸು : (ತನ್ನೊಳಗೆ) ಪ್ರಿಯಳಿಂದ ರಹಿತವಾದ ಈ ಶೂನ್ಯಲತಾ ಮಂಡಪದಲ್ಲಿ ನಾನು ಏನು ಮಾಡತಕ್ಕದ್ದಿನ್ನು? (ಆನಂದದಿಂದ) ಇಕೋ, ಇಲ್ಲಿ ಅವಳ ಕೈಯ್ಯೊಳಗಿನ ಮೃಣಾಳವಲಯ ಬಿದ್ದಿದೆ. (ಅದನ್ನು ಬಹುಮಾನದಿಂದ ಎತ್ತಿಕೊಳ್ಳುತ್ತಾನೆ.)

ಶಕುಂ : (ಕೈ ನೋಡಿಕೊಳ್ಳುತ್ತ ತನ್ನೊಳಗೆ) ಅಯ್ಯ; ನನ್ನ ಕೈಯಲ್ಲಿಯ ಕಮಲ ನಾಲದ ಕಂಕಣವು ಬಿದ್ದು ಹೋಗಿದೆ!

ಅರಸು : (ಕಂಕಣವನ್ನು ತನ್ನ ಹೃದಯಕ್ಕೆ ಹಚ್ಚಿಕೊಂಡು ತನ್ನೊಳಗೆ) ಇದರ ಸ್ಪರ್ಶವಾದರೂ ಬಹು ಸಮಾಧಾನವನ್ನು ಕೊಡುತ್ತದೆ. ಪ್ರಿಯೆ, ನಿನ್ನ ಕೈಯ್ಯಲ್ಲಿಯ ನಿರ್ಜೀವಿಯಾದ ಲೀಲಾಭರಣವು ಸಹ ನನ್ನನ್ನು ಸಂತೋಷಪಡಿಸುತ್ತದೆ ಬಲ್ಲೆಯಾ?

ಶಕುಂ : (ತನ್ನೊಳಗೆ) ನಾನು ಇನ್ನು ಇದೇ ನೆವದಿಂದ ಅವರ ಮುಂದೆ ಹೋಗುವೆನು. (ಅಡಗಿದ್ದವಳು ಮೆಲ್ಲನೆ ಆತನ ಬಳಿಗೆ ಹೋಗುತ್ತಾಳೆ.)

ಅರಸು : (ನೋಡಿ ಆನಂದದಿಂದ) ಆಹಾ ನನ್ನ ಪ್ರಾಣದರಸಿಯು ತಿರುಗಿ ಬಂದಳು. ತೃಷೆಯಿಂದ ಗಂಟಲೊಣಗಿದ ಚಾತಕಪಕ್ಷಿಯ ಬಾಯಿಯಲ್ಲಿ ಮೇಘದಿಂದ ನೂತನವಾದ ಹನಿಗಳು ಬಿದ್ದಂತೆ ಇವಳಿಗಾಗಿ ಹಲಬುತಿರುವ ನನಗೆ ದೈವವು ಪುನಃ ದಯೆದೋರಿತು.

ಶಕುಂ : (ಪ್ರಕಾಶವಾಗಿ) ಆರ್ಯರೇ, ನಾನು ಪರ್ಣಕುಟಿಯ ಅರ್ಧ ದಾರಿಯವರೆಗೆ

ಹೋದ ಮೇಲೆ ನನ್ನ ಕೈಯಲ್ಲಿಯ ಮೃಣಾಲವಲಯವು ಉಚ್ಚಿಬಿದ್ದದ್ದು ಕಂಡೆ. ನೀವೇ ಅದನ್ನು ತೆಗೆದುಕೊಂಡಿರಬಹುದು ನನ್ನ ಮನಸ್ಸು ಹೇಳುತ್ತದೆ. ಅದನ್ನು ಮಾತ್ರ ದಯಮಾಡಿ ಕೊಡಬೇಕು. ಮುನಿಜನರಿಗೆ ತಿಳಿದರೆ ನನ್ನ ಮಾನ ಉಳಿಯಲಿಕ್ಕಿಲ್ಲ.

ಅರಸು : ನನ್ನದೊಂದು ಮಾತುಂಟು; ಅದನ್ನು ನಡಿಸಿದರೆ ಸೈ, ನಾನು ತಿರುಗಿ ಕೊಡುತ್ತೇನೆ.

ಶಕುಂ : ಅದು ಯಾವದು?

ಅರಸು : ನಾನೇ ಕೈಯಲ್ಲಿಡಿಸುವವನು.

ಶಕುಂ : ಯಾರು ಬ್ಯಾಡೆನ್ನುವರು? (ಮುಂದಕ್ಕೆ ಬರುತ್ತಾಳೆ.)

ಅರಸು : ಇದನ್ನು ಇಡಿಸಬೇಕಾದರೆ ನಾವು ಮೊದಲೆಲ್ಲಿ ಕುಳಿತಿದ್ದೆವೊ ಅಲ್ಲಿಯೇ ಹೋಗಬೇಕು.

ಶಕುಂ : ಈ ಹೊತ್ತಿನಲ್ಲಿ ನೀವು ಹ್ಯಾಗೆ ಹೇಳುತ್ತೀರಿ ಹಾಗೆ ಕೇಳಬೇಕು. ಉಪಾಯವೇನು? (ಇಬ್ಬರೂ ಲತಾಮಂಟಪದಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ.

ಅರಸು : (ಕೈಹಿಡಿದು) ಆಹಾ ಸ್ಪರ್ಶವೇ! ಹರಕೋಪಾಗ್ನಿಯಿಂದ ದಗ್ಧನಾದಂಥ ಮನ್ಮಥನನ್ನು ದೇವತೆಗಳು ಅಮೃತವಷ್ಟಿಗೈದು ಪುನಃ ಜೀವಿಸಿಕೊಂಡಂತೆ ಈ ಕಾಮಲತೆಯನ್ನು ಪೋಲುವ ಮುಂಗೈಯು ಶೋಭಿಸುತ್ತದೆ. ನೋಡಿದೆಯಾ ಸುಂದರಿ?

ಶಕುಂ : ಆರ್ಯಪುತ್ರರೆ, ತೀವ್ರದಿಂದ ಇಡಿಸಿರಿ; ಎಷ್ಟು ಹೊತ್ತು?

ಅರಸು : (ಆನಂದದಿಂದ ತನ್ನೊಳಗೆ) ಆರ್ಯಪುತ್ರನೆಂಬುವ ಸಂಬೋಧನೆಯಿಂದ ತಮ್ಮ ಪತಿಗೆ ಮಾತ್ರ ಕರೆಯುವದುಂಟು. (ಪ್ರಕಾಶವಾಗಿ) ಹೇ ಸುಂದರೀ, ಈ ಮೃಣಾಳವಲಯವು ನಿನ್ನ ಕೈಗೆ ಬಹಳ ಸಡಿಲಾಗುತ್ತದೆ. ಅದನ್ನು ಹಾಳತಾಗಿ ಮಾಡುತ್ತೇನೆ.

ಶಕುಂ : (ಮುಗುಳುನಗೆಯಿಂದ) ತಮ್ಮ ಮನಸಿಗೆ ಹ್ಯಾಗೆ ಬರತದೋ ಹಾಗೆ ಆಗಲಿ.

ಅರಸು : (ಕೈಯಲ್ಲಿಡಿಸಿ) ಹೇ ಸುಂದರಿ ನೋಡಿದೆಯಾ, ಈಗ ಈ ಮೃದುಲವಾದ ಮೃಣಾಳವಲಯವು, ಬಿದಿಗೆಯ ಚಂದ್ರನು ನಿನ್ನ ಸೌಂದರ್ಯಕ್ಕೆ ನಾಚಿ ಅಂಬರದಿಂದಿಳಿದು ನಿನ್ನ ಕರಭೂಷಣನಾಗಿದ್ದಾನೆಂಬಂತೆ ಕಾಣಿಸುತ್ತದೆ.

ಶಕುಂ : (ಕಣ್ಣು ತಿಕ್ಕುತ್ತ) ನನಗೆ ಕಾಣಿಸುವುದಿಲ್ಲ ಕಣ್ಣಲ್ಲಿ ಕಮಲದ ಎಸಳು ಬಿತ್ತು. ಹಾಯ್! ಉರಿಯುತ್ತದೆ.

ಅರಸು : (ಮುಗುಳುನಗೆಯಿಂದ) ನನಗೆ ಅಪ್ಪಣೆ ಕೊಟ್ಟರೆ ಮೆಲ್ಲನೆ ಊದಿ ತೆಗೆಯುತ್ತೇನೆ.

ಶಕುಂ : ನನ್ನ ಮೇಲೆ ದಯಮಾಡಿದಂತಾದೀತು. ಆದರೂ ತಮ್ಮ ವಿಶ್ವಾಸವಿಲ್ಲ.

ಅರಸು : ಅಂಜುವದೇತಕ್ಕೆ? ನೂತನ ಸೇವಕನು ತನ್ನ ಯಜಮಾನತಿಯ ಕೂಡ ಕಪಟ ಮಾಡಲಾರನು.

ಶಕುಂ : ಈ ಅತ್ಯಾದರವೇ ಅವಿಶ್ವಾಸವನ್ನು ತೋರಿಸುತ್ತದೆ.

ಅರಸು : (ತನ್ನೊಳಗೆ) ಈ ಹೊತ್ತಿನಲ್ಲಿ ಸಾಧಿಸದೆ ಬಿಡಬಾರದು. (ಮುಖವನ್ನು ಎತ್ತಿ ಚುಂಬಿಸಲಿಕ್ಕೆ ಪ್ರವೃತ್ತನಾಗುತ್ತಾನೆ. ಶಕುಂತಲೆಯು ಮೆಲ್ಲನೆ ಮುಖವನ್ನು ತಪ್ಪಿಸುತ್ತಾಳೆ.) ಹೇ ಮೃಗಾಕ್ಷಿ, ನನ್ನ ಅವಿನಯ ಶಂಕೆಯಿಂದ ಅಂಜಬೇಡ. (ಶಕುಂತಲೆ ಮುಖವನ್ನು ಒಮ್ಮೆ ಮೇಲೆ ಮಾಡುತ್ತಾಳೆ ಒಮ್ಮೆ ಕೆಳಗೆ ಮಾಡುತ್ತಾಳೆ; ಅರಸು ಮುಖವನ್ನು ನೋಡುತ್ತ) ಏನು ಅಧರವಣ್ಣಾ ಇದು!

ಶಕುಂ : ವಚನ ಕೊಟ್ಟದ್ದನ್ನು ಮುರಿಯುತ್ತೀರೆಂಬಂತೆ ಕಾಣಿಸುತ್ತದೆ.

ಅರಸು : ಹೇ ಸುಂದರಿ, ನಿನ್ನ ನೇತ್ರಗಳು ಉತ್ಪಲಪುಷ್ಪಗಳೆಂದು ನನಗೆ ಭ್ರಾಂತಿಯು ಉತ್ಪನ್ನವಾಗುತ್ತದೆ. (ಮೆಲ್ಲನೆ ಊದುತ್ತಾನೆ.)

ಶಕುಂ : ಹೋಯಿತು. ಈಗ ತಣ್ಣಗಾಯಿತು. ಆರ್ಯಪುತ್ರರು ತಮ್ಮ ವಚನವನ್ನು ಮುರಿಯದಲೆ ಶ್ರಮಪಟ್ಟದ್ದಕ್ಕೆ ಪ್ರತ್ಯುಪಕಾರವನ್ನು ಏನು ಮಾಡಬೇಕೆಂಬುವದು ತಿಳಿಯದೆ ನನಗೆ ನಾಚಿಕೆ ಬರುತ್ತದೆ. ಸಖಿಯರನ್ನು ಕೇಳಿ ಬರುತ್ತೇನೆ. ಬಿಡಬೇಕು.

ಅರಸು : ಆಮೇಲೆ ಬಿಡುತ್ತೇನೆ.

ಶಕುಂ : ಏನಾದ ಮೇಲೆ?

ಅರಸು :

(ಪದ)

ದಾಟಿ : "ರಾಜಕುಲ ತಾರಾ ಶಶಾಂಕ ಮನೋಜಾ ಸುಂದರ ನೋಡ್ಯೆ" ಎಂಬ ಪದದಂತೆ.

ಆಮ್ಯಾಲೆ ಬಿಡುವೆ | ಮನೋಹರ |
ಕೋಮಲತರ ತನುವೆ || ಪಲ್ಲ||
ಕಾಮಿನಿ ಕಡು ಎಳೆ | ರೋಮಗಳಿಹ ಮೃದು|
ಹೇಮಲತೆಯ ಚಿಗು- |ರೀ ಮಿಸಲು ದುಟಿ|
ಕಾಮಬಾಧೆಗತಿ| ಶಾಮಕೆಂದು ಸಂ-
ಪ್ರೇಮದಿ ಸವಿಯಲು | ನಾಮನವಣೆಯ ||ಅನುಪಲ್ಲ||

ಅರೆಬಿರಿದರವಿಂದದ| ಸರಿಗಂಧದ ಬಳ್ಳಿಯೆ | ಕನ್ನಡಿ -
ಸರಿ ಮಿರಿ ಮಿರಿ ಮಿಂಚುವ ಬಹು ಸೊಬಗಿನ ಗಲ್ಲಿಯೆ||
ಸ್ಫುರಿಸಿರೆ ಸರಿವ ಮುಟ್ಟಲ ಮುರಕಿಯವೊಲ್ ಮಳ್ಳಿಯೆ | ಫಣೆಯೊಳು|
ಕರಿಗುರುಳುರುಳುವ ಕಿರಿನಗೆ ಹೊಳಪಿನ ಪಲ್ಲಿಯೆ ||
ಎರಳೆಗಣ್ಣೆನೀ | ಕೊರಳತಿರುವ ಬ್ಯಾ-
ಡರುಣನಖದ ಕೈ| ಬೆರಳಿನಿಂದ ಮು-
ಚ್ಚಿರುವ ಗಲ್ಲಮಂ | ತೆರೆಯಲೊಮ್ಮೆ ಚ-
ಪ್ಪಿರಿದತಿ ಮದನಾ | ತುರು ತೃಷೆಗಳೆದು ||೧||

ಹೊಳೆಯೊಳು ಬೆಳೆದ ಪುಳಿನದೊಲು ಜಘನದ ಬಾಲೆಯೆ | ಎಳೆಯಕದಳಿ
ಸುಳಿ ತಿಳಿ ಪೊಟ್ಟೆಯನುಸ್ಹೊಡೆ ಒಳಬಾಳೆಯೆ ||
ನಳಿನಳಿಪೆಳೆ ನಳಿನದ ಮೊಗ್ಗೆಯ ಮೊಲೆಯಾಳಿಯೆ | ಮೃಣಾಲದ
ಬಳೆಗಳು ಥಳಥಳಿಸುವ ದುಂಡೊನಪಿನ ದೋಳಿಯೇ ||
ಎಳೆಯ ಕನ್ನೆ ನಿ | ನ್ನೊಳು ನೀ ಮುದುಡದಿ -
ರಲರ ಕಂಪನಂ |ತಳೆದ ಕುಚದ ಮೊನೆ -
ಗಳನು ಮೆಲ್ಲನೆದೆ|ಯೊಳಗೆ ಹೊಂದು ತೊ-
ತ್ತಲು ಮನಸಿಜನುರೆ | ಗಳೆಯುವೆ ಮುನ್ನ ||೨||

ವನಜನಯನೆ ಮಿಾರುವಳಲ್ಲೆನುತಲೆ ನಂಬುವೆ | ನೀನೀ
ಕ್ಷಣವನು ಅನುಕೂಲಾಗದೆ ಕೆಡಿಸದಿರೆಂಬುವೆ |
ಅನುದಿನ ನೆನೆದ ಬಗೆಯ ನಾನೀಗಲು ಕಾಂಬುವೆ | ಪರಿಪರಿ |
ಮನಸಿನ ಘನ ಬಯಕೆಯ ಹೊಂದಲು ಸುಖಿವುಂಬುವೆ ||
ತನುವ ತನುವಿನೊಳ್ | ಮನಸು ಮನಸಿನೊಳ್
ಅನಗು ಸುಖದ ಸಮ | ಕೊನರಿಪಂತಿರಸಿ |
ಎನಗೆ ನೀನರಸಿ | ನಿನಗೆ ನಾನರಸು |
ಎನಲನುನಯಕೀ | ದಿನ ಮೊದಲೆನಿಸಿ ||೩||*

(ಚುಂಬನಕ್ಕೆ ಪ್ರಯತ್ನ ಮಾಡುತ್ತಾನೆ. ಶಕುಂತಲೆಯು ಅನುಕೂಲಳಾಗುವುದಿಲ್ಲ.)

---

* अपरिक्षत कोमलस्य यावत्कुमुमस्येव नवम्य पट्पदेन
अधरस्य पिपासता मया ते सदयं सुन्दरि गृहाते रसोस्य।।

(ತೆರೆಯಲ್ಲಿ - ಹೇ ಚಕ್ರವಾಕ ಸ್ತ್ರೀಯೆ, ರಾತ್ರಿಯು ಸಮೀಪಿಸಿತು. ನಿನ್ನ ಕಾಂತನನ್ನು ತೀವ್ರದಿಂದ ಕರೆದು ಏಕಾಂತವಾಡುವುದನ್ನು ಶೀಘ್ರದಿಂದ ಮುಗಿಸು.)

ಶಕುಂ : (ಗಾಬರಿಯಿಂದ) ಆರ್ಯಪುತ್ರರೆ, ನನ್ನ ಶರೀರಪ್ರಕೃತಿಯ ಸಮಾಚಾರವನ್ನು ತೆಗೆದುಕೊಳ್ಳುವುದಕ್ಕಾಗಿ ಗೌತಮಮ್ಮನು ಇಲ್ಲಿಯೇ ಬರುತ್ತಾಳೆ; ಇದಕ್ಕೆ ಸಂದೇಹವಿಲ್ಲ. ಆದ್ದರಿಂದ ಆಚೆಯ ಕಡೆಯಲ್ಲಿರುವ ಲತಾಗೃಹದಲ್ಲಿ ಅಡಗಿಕೊಳ್ಳಬೇಕು.

ಅರಸು : ಒಳ್ಳೇದು, (ತೀವ್ರದಿಂದ ಹೋಗಿ ಅಡಗಿಕೊಳ್ಳುತ್ತಾನೆ.)

(ಇಷ್ಟರಲ್ಲಿ ಗೌತಮಮ್ಮನು ಒಂದು ಪಾತ್ರೆಯನ್ನು ಹಿಡಿದುಕೊಂಡು ಬರುತ್ತಾಳೆ.)

ಗೌತಮಮ್ಮ : (ಶಕುಂತಲೆಯ ಹತ್ತಿರ ಹೋಗಿ) ಮಗುವೆ, ಮೈಯ್ಯಲ್ಲಿಯ ಉರಿಯು ಸ್ವಲ್ಪವಾದರೂ ಶಾಂತವಾಯಿತೋ? ನೋಡು; ನಾನು ಕುಶೋದಕವನ್ನು ತಂದಿದ್ದೇನೆ. ಇದರಿಂದ ನಿನ್ನ ಶರೀರದ ಬಾಧೆಯೆಲ್ಲ ದೂರವಾಗುವದು. ನಿನ್ನ ಗೆಳತಿಯರು ನಿನ್ನನ್ನು ಈ ಅವಸ್ಥೆಯಲ್ಲಿ ಅದೃಶ್ಯವಾದ ದೇವತೆಗಳೇ ಸಂರಕ್ಷಣೆ ಮಾಡಲೆಂದು ಬಿಟ್ಟು ಹೋಗಿದ್ದಾರೋ? ಎಲ್ಲಿದ್ದಾರವರು?

ಶಕುಂ : ಅವರಿಬ್ಬರೂ ಕೂಡಿ ಇದೇ ಮಾಲಿನೀ ತೀರಕ್ಕೆ ಹೋಗಿದ್ದಾರೆ.

ಗೌತಮಮ್ಮ : (ಮಂತ್ರೋದಕವನ್ನು ಅವಳ ಮೇಲೆ ಚಿಮ್ಮಡಿಸಿ) ಮಗುವೆ, ಈಗ ಶಾಂತವಾಯಿತೊ? (ಕೈ ಹಿಡಿದು ನೋಡುತ್ತಾಳೆ.)

ಶಕುಂ : ಅಮ್ಮಯ್ಯಾ? ಸ್ವಲ್ಪ ಶಾಂತವಾಯಿತು.

ಗೌತಮಮ್ಮ : (ಮೈಮೇಲೆ ಕೈ ಎಳೆದು) ಉದಂಡಾಯುಷ್ಯವಂತೆಯಾಗು ನನ್ನವ್ವಾ! ಏಳು ಸಂಜೆಯಾಯಿತು ಪರ್ಣಕುಟಿಗೆ ಹೋಗುವ.

ಶಕುಂ : (ತನ್ನೊಳಗೆ) ಎಲೆ ಹೃದಯವೆ, ಮೊದಲು ನಿನ್ನ ಮನೋರಥದಂತೆ ಭಾಗ್ಯವು ನಿನ್ನ ಬಳಿಯಲ್ಲಿ ಕೈ ಮುಗಿದುಕೊಂಡು ನಿಂತಿತ್ತು. ಆಗ ನೀನು ನಿನ್ನ ಭೀರು ಸ್ವಭಾವದಿಂದ ಅದರ ಸ್ವಾದವನ್ನು ತೆಗೆದುಕೊಳ್ಳದೆ ಬಿಟ್ಟುಬಿಟ್ಟೆ. ಈಗ ಅದೇ ಸಿಟ್ಟಿನಿಂದ ಭಾಗ್ಯವು ನಿನಗೆ ಪ್ರತಿಕೂಲವಾಗಿ ಹೋಯಿತು ಬಲ್ಲೆಯಾ? ಇನ್ನು ಮೇಲೆ ಪಶ್ಚಾತ್ತಾಪದಿಂದ ಏನು ಫಲ? (ಸ್ವಲ್ಪ ಮುಂದಕ್ಕೆ ಹೋಗಿ ನಿಂತು ಪ್ರಕಾಶವಾಗಿ) ಲತಾಮಂಟಪಾ, ಸಂತಾಪಹಾರಕಾ, ಪುನಃ ನಿನ್ನ ಬಳಿಯಲ್ಲಿ ಸೌಖ್ಯಾನುಭವಕ್ಕಾಗಿ ತಿರುಗಿ ಬರುತ್ತೇನೆ ಕೇಳಿದೆಯಾ? (ಗೌತಮಮ್ಮನ ಹಿಂದಿನಿಂದ ಅತಿ ಪಶ್ಚಾತ್ತಾಪದಿಂದ ಹೊರಟು ಹೋಗುತ್ತಾಳೆ.)

ಅರಸು : (ಅಡಗಿದ ಸ್ಥಳದಿಂದ ಪೂರ್ವಸ್ಥಳಕ್ಕೆ ಬಂದು ನಿಟ್ಟುಸಿರು ಬಿಟ್ಟು) ಅಯ್ಯೊ! ಪಾವದಾದರೂ ಮನಸಿನ ವಾಂಛಿತಾರ್ಥವು ಸಿದ್ಧಿಗೆ ಹೋಗಬೇಕಾದರೆ ಎಷ್ಟು ವಿಘ್ನಗಳು ಮಧ್ಯದಲ್ಲಿ ಬರುತ್ತವಯ್ಯಾ?

(ಪದ)

ದಾಟಿ : ಒಲ್ಲದಿರುವ ಬಗೆಯೇನವ್ವಾ| ಎನ್ನ | ನಲ್ಲ ಈ ಬುದ್ಧಿಯ ನೆಲ್ಲೀಕಲಿತನಮ್ಮಾ" ಎಂಬ ಪದದಂತೆ.

ಚುಂಬಿಸಲಿಲ್ಲ | ಇಂಥ ವಾಳ್ಯದೊಳು | ನಾ
ಬಿಂಬಾಧರೆಯು ಪೋಗ| ಳೆಂಬ ನಂಬಿಕೆಯೊಳು ||ಪಲ್ಲ||
ಮೆಲ್ಲನೆ ನೀತಿ ನುಡಿಯಾಡುತಲಿ | ಮೃದು-
ಬಳ್ಳುಗಳಿಂದಧರ ಮುಚ್ಚತಲಿ | ರೀತಿ -
ಯಲ್ಲವೆನ್ನುತಾನನದಿರವುತಲಿ |
ನಲ್ಲೆ ಕಟಾಕ್ಷದಿ ನೋಡಿದ ಸಮಯದೊಳ್ ||೧||

ಬಳಿಯಲ್ಲಿ ಬಂದು ಹೊಂದಿ ಕುಳ್ಳಿರಲು | ಕೈ-
ಯೊಳು ನಾ ಚೆಲುವ ಮುಖ ಪಿಡಿದಿರಲು | ಅರ -
ಗೆಲಸಮಾಡಿದೆ ಪೂರಾ ನಾ ಮರುಳು |
ತಿಳಿಯೆ ನೀ ವಾಳ್ಯದೊಳೆಲ್ಲಿ ಪೋದಿತೊ ಮತಿ ||೨||

ತಿರುಗಿ ತರುಣಿಯು ತಾ ಬರಬಹುದು ನಾ-
ನರೆಕ್ಷಣ ಗೆಳೆಯೆನಾಗಲು ಮರೆದು | ಈ-
ಪರಿಯೆನ್ನ ಹೃದಯ ನಿಶ್ಚಯಿಸುವದು|
ತೆರಳಿರಲು ಪ್ರಸಂಗ ಮರುಗುತಿಹುದು ವ್ಯರ್ಥ ||೩||*

ಇನ್ನು ಮೇಲೆ ಎಲ್ಲಿಗೆ ಹೋಗಲಿ? ನನ್ನ ಪ್ರಾಣ ಪ್ರಿಯಳಿಂದ ಕೆಲಹೊತ್ತು ಉಪಭೋಗಿಸಲ್ಪಟ್ಟ ಈ ಲತಾಮಂಟಪದಲ್ಲಿ ಇರುವದೇ ಉತ್ತಮ.

(ಪದ)

ದಾಟಿ : "ಯಾಕೆ ಪ್ರಾಯವು ಬಂತಮ್ಮಾ ಚಿಕ್ಕವಳು ನಾ ಹ್ಯಾಗೆ ತಾಳಲೆ ಹೆತ್ತಮ್ಮಾ|| ಮದಗಜಗಮನೆಯುವರು ಮಲಗುವ ವೇಳೆ ಸದನಕ್ಕೆ ಕರೆದೊಯ್ಯುರು" ಎಂಬ ಪದದಂತೆ.

---

* मुहुरङ्गुलि संवृता घरोष्टं प्रतिपेधाक्षरविक्लवाभिरामम्
मुखमं सविवर्ति पक्ष्मलाक्ष्याः कथमप्युन्नमितं न चुम्बितंतु ||२४||

ಎಲ್ಲಿ ಪೋಗಲಿ ನಾನಿನ್ನಾ| ಲತಾಗ್ರಹ
ದೊಳ್ ಬಿಟ್ಟು ಪೋದಳೆನ್ನ ||ಪಲ್ಲ||

ಪುಲ್ಲನೇತ್ರೆಯು ಬಿಳಿಯ ಹಾಸಿಗೆ|
ಗಲ್ಲ ಮ್ಯಾಲ್ಪಸರಿಸಿದ ಮೃದುತರ |
ಪುಲ್ಲ ಸುಮಶಯ್ಯದಲಿ ಮಲಗಿದ |
ಳಿಲ್ಲೆ ದೃಷ್ಟಿಯನಿಟ್ಟುಕೊಳ್ಳಲೊ ||ಅನುಪಲ್ಲ ||

ಬಾಡಿದ ಕುಸುಮಗಳು | ಬಿದ್ದಿವೆ ಹೆಜ್ಜೆ
ಮೂಡಿವೆ ಮಳಲಿನೊಳು ||
ಕೂಡಿದ ಭ್ರಮರಗಳು | ಲತೆಯ ಪೊರ ||
ಗಾಡುತಿಹವು ಸುತ್ತಲು ||
ಗಾಡಿಕಾರ್ತಿಯು ಬೇಗನೆನ್ನನು |
ಕೂಡದಲೆ ಮನುಮಥನ ಮಾಯದ |
ಬೇಡಿಗೊಳಿಸೀ ಮಂಟಪವ ಸೆರೆ |
ಮಾಡಿಪೋದಳು ಕರುಳ ಹೀನಳು ||೧||

ನಳಿದೋಳಿನಾಭರಣ | ಮೃಣಾಲದಂ
ವಲಯವಿಲ್ಲಿಹುದರುಣ ||
ನಲಿನೀಪತ್ರದ ಮದನ | ಲೇಖವನುಗು-
ರಿಲಿ ಬರೆದಿಹಳಿದನ |
ಕೆಳಗೆ ನೋಡಲು ದೃಷ್ಟಿ ತೆಗೆಯೆನು |
ನಳಿನ ಶರನಗ್ನಿಯೊಳು ನಾನತಿ |
ಬಳಲುತಿರಲಿವಳೊಡನೆ ಸ್ನೇಹವು |
ತಿಳಿಯ ತೈಲದೊಳಾಯ್ತು ಬಳಿಕ ||೨||

ಇನ್ನೊಮ್ಮೆ ಬರುವಿಯೇನೆ | ಎನ್ನಯಪ್ರಾಣ -
ವನ್ನುಳುಹುವಿಯೇನೆ ||
ಅನ್ಯ ಪದಾರ್ಥವನ್ನೆ | ಹೆಸರುಗೊಂಡು -
ಸನ್ನೆ ಮಾಡಿದೆಯೆ ಜಾಣೆ ||
ನಿನ್ನ ಮಾತಿನ ಮೇಲೆ ಧೀರತೆ |

ಯನ್ನೀ ತಾಳ್ದೀ ಕುಸುಮಶಯನದಿ |
ಹೊನ್ನ ಕಲಶದ ಮೊಲೆಗಳೊತ್ತಿಹ |
ಚಿಹ್ನ ನೋಡುತ ವ್ಯಾಳ್ಯಗಳೆವೆ ||೩|| *

ತೆರೆಯಲ್ಲಿ : ರಾಜನ್

(ಶಾರ್ದೂಲವಿಕ್ರೀಡಿತ ವೃತ್ತ)

ಸಂಧ್ಯಾಕಾಲದೊಳಗ್ನಿಗಾಹುತಿಯಿಡಲ್ಯಾಕಾಶದೊಳ್ ಸುತ್ತಲುಂ |
ಬಂದಿರ್ದೀ ಪಿಶಿತಾಶನರ್ ಕೆಡಪಿದರ್ ಕೃಷ್ಣಾಭದ್ರೋಲಂಧ ಕಾ ||
ರಂ ದುಷ್ಟಾತ್ಮರ ಬಾಧೆಯಿಂ ಕಡುಭಯಂಗೊಂಡಿರ್ಪೆವ್ಮೆ ನಿನ್ನನೆ |
ಹೊಂದಿರ್ಪೆಮ್ಮನು ಕಾಯ್ದುದಯ್ಯ ದಯದಿಂ ದುಷ್ಯಂತ ಭೂಪಾಲನೇ ||

ಅರಸು : ಹಾ! ಬಂದೆ ಬಂದೆ ಅಂಜಬೇಡಿರಿ. (ಅವಸರದಿಂದ ಹೊರಟು ಹೋಗುತ್ತಾನೆ.)

(೩ನೆಯ ಅಂಕವು ಮುಗಿದುದು)

---

* तस्याः पुष्पमर्थी शरीरलुलिता शय्या शिलायामियं
क्लान्तो मन्मथलेख एप नलिनी पत्रे नखैरर्पितः
हस्ताद्त्रपृ मिदं बिसाभरणमित्यासज्य मानेक्षणो
निर्गन्तुं सहसा न वेत सगृहादीशोऽस्मि शून्यादपी।।

೪ನೆಯ ಅಂಕವು

(ತೋಟದಲ್ಲಿ ಹೂವುಗಳನ್ನು ಎತ್ತುತ್ತ ಸಖಿಯರು ಬರುತ್ತಾರೆ.)

ಅನ : ಸಖಿಯೆ ಪ್ರಿಯಂವದೆ, ಶಕುಂತಲೆಗೆ ಗಾಂಧರ್ವವಿವಾಹದಿಂದ ಅನುರೂಪನಾದ ಪತಿಯು ದೊರೆತದರಿಂದ ಅವಳು ಕಲ್ಯಾಣವನ್ನು ಹೊಂದಿದಳು. ಆದ್ದರಿಂದ ನನ್ನ ಮನಸ್ಸು ಸಮಾಧಾನ ಹೊಂದಿದ್ದರೂ ಒಂದು ಮಾತಿನ ವಿಷಯಕಕೆ ನನಗೆ ಬಹು ಚಿಂತೆಯುಂಟಾಗಿದೆ.

ಪ್ರಿಯಂ : ಯಾವ ಮಾತಿನ ಚಿಂತೆ?

ಅನ : ಇವತ್ತು ಇಷ್ಟಿಯು ಸಮಾಪ್ತವಾಯಿತು. ರಾಜರ್ಷಿಯು ಋಷಿಗಳ ಅಪ್ಪಣೆ ತೆಗೆದುಕೊಂಡು ನಗರಕ್ಕೆ ಹೊರಟುಹೋದನು. ಇನ್ನು ಆತನು ಅಂತಃಪುರದ ಹೆಣ್ಣುಗಳ ಕೂಡ ರಮಮಾಣನಾದ ಮೇಲೆ ಆ ಲೋಲಾಟದಲ್ಲಿ ಇತ್ತಕಡೆಯ ಸ್ಮರಣೆಯು ಇರುವದೋ ಅಥವಾ ಮರೆತುಬಿಡುವನೋ ಎಂಬುದಾಗಿ ನಾನಾ ಚಿಂತೆ ಮಾಡುತ್ತೇನೆ.

ಪ್ರಿಯಂ : ಈ ಮಾತಿನ ವಿಷಯಕ್ಕೆ ನೀನು ನಿಶ್ಚಿಂತಳಾಗಿರು. ಅಂಥ ಪುರುಷನಲ್ಲಿ ಈ ಸಂಶಯವನ್ನು ತೆಗೆದುಕೊಳ್ಳುವುದಕ್ಕೆ ಕಾರಣವಿಲ್ಲ. ನನಗೆ ಇನ್ನೊಂದು ಮಾತಿನ ಭಯವುಂಟು. ಇವಳ ತಂದೆಗೆ ಈ ಮಾತು ತಿಳಿದರೆ ಏನಾದೀತು?

ಅನ : ಅತ್ತಕಡೆಯಿಂದಲೂ ಭಯವಿಲ್ಲ. ಈ ಮಾತು ನಮಗೆ ಹ್ಯಾಗೋ ಹಾಗೆ ಆತನಿಗೂ ಅನುಮತವೇ ಆದೀತು.

ಪ್ರಿಯಂ : ಅದು ಹ್ಯಾಗೆ?

ಅನ : ಗುಣವಂತನಾದವನಿಗೆ ಮಗಳನ್ನು ಕೊಡಬೇಕೆಂದು ಆತನ ಸಂಕಲ್ಪ. ಇದು ತಾನೇ ದೈವವಶದಿಂದ ಸಿದ್ಧಿಯಾದ ಮೇಲೆ ಶ್ರಮವಿಲ್ಲದಲೆ ಕೃತಾರ್ಥನಾದೆನೆಂದು ಸಂತೋಷಪಡನೆ?

ಪ್ರಿಯಂ : (ಹೂವಿನ ಪಾತ್ರೆಯನ್ನು ನೋಡಿ) ಸಖಿಯೆ ಹೂವುಗಳು ಪೂಜೆಗೆ ಸಾಕಾಗುವಷ್ಟು ಆದವು; ನಡೆ ಇನ್ನು.

ಅನ : ಇವತ್ತು ಶಕುಂತಲೆಯ ಸೌಭಾಗ್ಯ ವೃದ್ಧ್ಯರ್ಥವಾಗಿ ಮಂಗಲಗೌರಿಯ ಪೂಜೆ ಮಾಡತಕ್ಕದ್ದಲ್ಲವೇನೆ? ಇನ್ನೊಂದಿಷ್ಟು ಬೇಕಾದಾವು.

ಪ್ರಿಯಂ : ಅಹುದಹುದು. (ಮತ್ತೂ ಕೊಯ್ಯಲಾರಂಭಿಸುತ್ತಾರೆ.)

(ತೆರೆಯಲ್ಲಿ : ಹಂ! ನಾನು ಬಂದಿದ್ದೇನೆ ಯಾರೂ ನೋಡುವದಿಲ್ಲವೆ?)

ಅನ : (ಕಿವಿಗೊಟ್ಟು) ಸಖಿಯೆ, ಯಾರೋ ಅತಿಥಿಗಳು ಬಂದ ಹಾಗೆ ಕಾಣುತ್ತದೆ.

ಪ್ರಿಯಂ : ಪರ್ಣಕುಟಿಯಲ್ಲಿ ಶಕುಂತಲೆಯು ಕೂತುಕೊಂಡಿದ್ದಾಳಷ್ಟೆ?

ಅನ : ಆದರೂ ಅವಳ ಚಿತ್ತವು ಅವಳ ಬಳಿಯಲ್ಲಿ ಎಲ್ಲಿದೆ? ಅದು ತನ್ನ ರಾಜರ್ಷಿಯ ಬಳಿಗೆ ಹೋಗಿದೆ. ಹೂವುಗಳು ಸಾಕು. ನಡೆ ಇನ್ನು ಹೋಗುವ,

(ತೆರೆಯಲ್ಲಿ : ಎಲೇ ಅತಿಥಿಗಳನ್ನು ಅನಾದರದಿಂದ ದುಃಖಪಡಿಸುವಳೆ, ನಾನು ಬಂದಿರಲಿಕ್ಕೆ ನೋಡುವುದಿಲ್ಲವೆ? ಓಡಿ ನನ್ನ ಶಾಪವಚನಗಳನ್ನು)

(ಶಾರ್ದೂಲವಿಕ್ರೀಡಿತ ವೃತ್ತ)

ಆತಿಥ್ಯಂಗೊಳಲೀ ತಪೋಧನನಿದಿರ್ನಿಂತಿರ್ದು ಪೊತ್ತಾಗಿರಲ್ |
ನಾಥನ್ನೇ ನೆನೆಯುತ್ತನಾದರದೊಳೆನ್ನಂನೋಡ್ದುದಿಲ್ಲಿನ್ನು ಕೇಳ್||
ಈ ತಪ್ಪಿಂಗುರೆ ಶಾಸನಂ ಮರೆವನಾತಂ ನಿನ್ನನೇಹಂ ಪೆರರ್ ||
ಮಾತಂ ನಂಬನು ಪೇಳ್ದೊಡೆಚ್ಚರಿಮದ್ಯಪ್ರಾಶನಂ ಗೈದನೋಲ್ ||

ಪ್ರಿಯಂ : ಅಯ್ಯೋ. ಅಯ್ಯೊ? ಕೇಡಾಯಿತೌ | ಶಕುಂತಲೆಯ ಚಿತ್ತವು ಸ್ಥಿರವಾಗಿಲ್ಲವಾದ್ದರಿಂದ ಪೂಜಾಸತ್ಕಾರಕ್ಕೆ ಯೋಗ್ಯನಾದ ಯಾವ ಮಹಾಪುರುಷನ ಅಪರಾಧವು ಅವಳಿಂದ ಘಟಿಸಿತೋ! (ಸ್ವಲ್ಪ ಮುಂದಕ್ಕೆ ಹೋಗಿ) ಅಕ್ಕೋ ನೋಡಿದೆಯಾ! ಇದು ಸಾಮಾನ್ಯ ಪುರುಷನ ಅನಾದರವಾಗಲಿಲ್ಲ ಕಂಡೆಯಾ! ಈತನು ಶೀಘ್ರಕೋಪಿಯಾದ ದೂರ್ವಾಸ ಋಷಿಯು; ಅತಿ ತೃಪ್ತನಾದ ವ್ಯಾಳ್ಯದಲ್ಲಿ ಶಾಪವನ್ನು ಕೊಟ್ಟು ಕಾಲುಗಳನ್ನಪ್ಪಳಿಸುತ್ತ ವೇಗದಿಂದ ಹಿಂತಿರುಗಿ ಹೋಗುತ್ತಿದ್ದಾನೆ. ಅಗ್ನಿಯ ಹೊರ್ತು ದಹಿಸಲಿಕ್ಕೆ ಯಾರು ಸಮರ್ಥರಾಗಿದ್ದಾರಮ್ಮಾ? ಇನ್ನು ಈತನ ಎದುರಿನಲ್ಲಿ ಹೋಗುವುದಕ್ಕೆ ಪ್ರಾಜ್ಞವುಳ್ಳವರು ಯಾರು?

ಅನ : ಹೋಗು ಹೋಗು; ಆತನ ಚರಣಗಳಿಗೆರಗಿ ಕ್ಷಮೆಯನ್ನು ಬೇಡಿ ಕರೆದುಕೊಂಡು ಬಾ. ಅಷ್ಟರಲ್ಲಿ ನಾನು ಅರ್ಘ್ಯೋದಕವನ್ನು ತೆಗೆದುಕೊಂಡು ಬರುತ್ತೇನೆ.

ಪ್ರಿಯಂ : ಒಳ್ಳೆಯದು. (ಅವಸರದಿಂದ ಹೋಗುವಳು.)

ಅನ : (ಎರಡು ಹೆಜ್ಜೆ ನಡೆದು ಕಾಲೆಡವಿ) ಅಪ್ಪಯ್ಯಾ! ಶೀಘ್ರದಿಂದ ಹೋಗುವಾಗ ಸೀರೆಯು ಕಾಲಿನಲ್ಲಿ ಸಿಲುಕಿ ಕೈಯೊಳಗಿನ ಹೂವಿನ ಬುಟ್ಟಿಯು ಕೆಳಗೆ ಬಿದ್ದು ಹೂವೆಲ್ಲ ಚೆಲ್ಲಿ ಹೋದವು. (ಹೂಗಳನ್ನು ಆರಿಸುತ್ತಾಳೆ.)

ಪ್ರಿಯಂ : (ಹಿಂತಿರುಗಿ ಬಂದು) ಆತನ ಸ್ವಭಾವವೇ ಕೆಟ್ಟದು. ಅನ್ಯರ ಮಾತು ಕೇಳುವವನೆ? ಆದರೂ ನಾನು ಆತನ ಮನಸಿನಲ್ಲಿ ಸ್ವಲ್ಪ ದ್ರವ ಹುಟ್ಟಿಸಿದೆ.

ಅನ : (ಸ್ವಲ್ಪ ಸಂತೋಷದಿಂದ) ಆತನಲ್ಲಿ ಇಷ್ಟು ಸಂಭವಿಸಿದ್ದೇ ಹೆಚ್ಚಿನದು. ಅವನಿಗೂ ನಿನಗೂ ಏನು ಮಾತುಗಳಾದವು ಹೇಳು ನೋಡೋಣ?

ಪ್ರಿಯಂ : ನಾನು ಎಷ್ಟು ಹೇಳಿಕೊಂಡರೂ ಬರದಾದ ಮೇಲೆ ಆತನ ಮುಂದೆ ಹೋಗಿ ಅಡ್ಡಬಿದ್ದು ಗಟ್ಟಿಯಾಗಿ ಕಾಲುಗಳನ್ನು ಹಿಡಿದು, "ಭಗವನ್ ಅವಳು ತಮ್ಮ ಹೊಟ್ಟೆಯ ಮಗಳಸರಿಯಾಗಿದ್ದಾಳೆ; ತಮ್ಮ ತಪಶ್ಚರ್ಯದ ಸಾಮರ್ಥ್ಯವನ್ನು ತಿಳಿದವಳಲ್ಲ; ಇದೇ ಮೊದಲು ತಪ್ಪು ಮಾಡಿದ್ದಾಳೆ. ಒಂದು ಸಾರೆ ಕ್ಷಮಿಸತಕ್ಕದ್ದು" ಎಂದು ಹೇಳಿಕೊಂಡೆನು.

ಅನ : ಮುಂದೆ?

ಪ್ರಿಯಂ : ಆಮೇಲೆ "ನನ್ನ ವಚನಗಳು ಎಂದಿಗೂ ಸುಳ್ಳಾಗವು. ಆದರೂ ಏನಾದರೂ ಗುರುತಿನ ಅಲಂಕಾರವನ್ನು ತೋರಿಸಿದಲ್ಲಿ ನನ್ನ ಶಾಪವು ನಿವೃತ್ತಿಯಾಗುವುದು" ಎಂದು ನುಡಿಯುತ್ತ ನುಡಿಯುತ್ತಲೇ ಕಾಲುಗಳನ್ನು ಕೊಸರಿಕೊಂಡು ಒಂದೆರಡು ಹೆಜ್ಜೆ ಹೋಗಿ ಅದೃಶ್ಯನಾದನು.

ಅನ : ಇಷ್ಟಾದರೂ ಆಯಿತೆ? ಇನ್ನು ಮೇಲೆ ಎಷ್ಟೋ ಧೈರ್ಯ. ಹ್ಯಾಗೂ ಈ ರಾಜರ್ಷಿಯು ಹೋಗುವ ಸಮಯದಲ್ಲಿ ತನ್ನ ಕೈಯೊಳಗಿನ ಉಂಗುರವನ್ನು ಶಕುಂತಲೆಗೆ ಕೊಟ್ಟು ಹೋಗಿದ್ದಾನೆ. ಈ ಉಪಾಯವು ಅವಳ ಸ್ವಾಧೀನದಲ್ಲಿದೆ.

ಪ್ರಿಯಂ : ಸಖಿಯೆ ನಡಿ ಇನ್ನು. ಮಂಗಳಗೌರಿಯ ಪೂಜೆ ಮಾಡುವದಕ್ಕೆ ಹೋಗೋಣ. (ಇಬ್ಬರೂ ಹೋಗಲಾರಂಭಿಸುತ್ತಾರೆ.)

ಪ್ರಿಯಂ : (ನೋಡುತ್ತ) ಅನಸೂಯೆ, ನೋಡಿದೆಯಾ: ನಮ್ಮ ಜೀವದ ಗೆಳತಿಯು ಹ್ಯಾಗೆ ಸುಮ್ಮನೆ ಕುಳಿತುಕೊಂಡಿದ್ದಾಳೆ.

(ಪದ)

ದಾಟಿ : "ಜಾಣೇ ನೀ ಕರೆಯೆ ಮುಖ್ಯ ಪ್ರಾಣನಾಥನಾಣೆಯನ್ನ" ಎಂಬ ಪದದಂತೆ.

ನೋಡೇ ಚಿಂತೆಯೊಳಾರ | ಗೂಡಮಾತನಾಡದವಳ ||ಪಲ್ಲ||

ಪಲ್ಲವಗೈಯ್ಯಲ್ಲಿ ಮಿದುವು|ಗಲ್ಲವಿರಿಸಿ ಫುಲ್ಲಶರನ
ಮಲ್ಲಯುದ್ಧದಲ್ಲಿ ಗೈದ|ನಲ್ಲನ ಕೃತಿಯೆಲ್ಲ ನೆನೆದು ||೧||

ಕೆಂಬಲ್ಲಿಲಿ ಬಿಂಬದುಟಿಯ| ನುಂಬುವನಿಂಗೆ ತುಂಬ ಮನದೊಳ್
ಇಂಬುಗೊಟ್ಟು, ಹಂಬೆಚಿತ್ರದ| ಗೊಂಬೆಯಂತೆ ಕಾಂಬುತಿಹಳ ||೨||

ಶರೀರವಿಲ್ಲಿ ಪರಣದಲ್ಲಿ|ಹೆರವರ ಪರಿವಿರುವದೆ? ಈ
ಪರಿಯಲಿರಲು ದುರುಳ ಋಷಿಯು|ತ್ವರದಿ ಶಾಪವ ನಿಂದನವ್ವಯ್ಯಾ||೩||

ಅನ : ಪ್ರಿಯಂವದೆ; ಅವಳಿಗೆ ಈ ವಾರ್ತೆಯನ್ನು ತಿಳಿಸಬಾರದು ಬಲ್ಲೆಯಾ| ಅವಳು ಬಹಳ ಕೋಮಲವಾದ ಅಂತಃಕರಣವುಳ್ಳವಳಿದ್ದಾಳೆ.

ಪ್ರಿಯಂ : ಮಲ್ಲಿಗೆಯ ಹೂವಿನ ಮೇಲೆ ಬಿಸಿನೀರು ಚಿಮ್ಮಡಿಸುವದುಂಟೆ?

(ಇಬ್ಬರೂ ಹೋಗುತ್ತಾರೆ.)

ಇತಿ ವಿಷ್ಕಂಭಕಃ

(ಒಬ್ಬ ಋಷಿಶಿಷ್ಯನು ಕಣ್ಣು ತಿಕ್ಕಿಕೊಳ್ಳುತ್ತ ಬರುತ್ತಾನೆ.)

ಶಿಷ್ಯ : ನಮ್ಮ ಗುರುಗಳಾದ ಕಣ್ವ ಮಹಾಮುನಿಗಳು ಪ್ರವಾಸದಿಂದ ನಿನ್ನಿನ ದಿವಸ ಬಂದರು. ರಾತ್ರಿಯು ಇನ್ನೂ ಎಷ್ಟಿದೆಯೋ ನೋಡೆಂದು ಹೇಳಿದ್ದಾರೆ. ಆ ಮೇರೆಗೆ ಹೋಗಿ ನೋಡುವಾ. (ಮುಂದಕ್ಕೆ ಹೋಗಿ ಮೇಲೆ ನೋಡುತ್ತ) ಓಹೋ! ಬೆಳ್ಳಗೆ ಬೆಳಗಾಗಿ ಹೋಗಿದೆ. ರಾತ್ರಿ ಎಲ್ಲುಂಟೀಗ? ಆಹಾ! ಪ್ರಾತಃ ಕಾಲವು ಏನು ರಮಣೀಯವಾಗಿ ತೋರುತ್ತದಯ್ಯ.

(ಪದ)

ದಾಟಿ : "ಬೆಳಗಾಗ ಬಂತು ಬಿಡೆನ್ನಾ| ನಾಳೆ ತಡೆಯದೆ ಬರುವೆನೂ ಕೇಳೊ ಮೋಹನ್ನಾ" ಎಂಬ ಪದದಂತೆ.

ಬೆಳಗಾಯಿತು ಮೂಡಲಲ್ಲಿ | ತಿಂ-
ಗಳನಸ್ತನಾದನು ಪಶ್ಚಿಮದಲ್ಲಿ ||ಪಲ್ಲ||
ತಾರಾಪತಿಯು ಮುಳಗಿರಲು | ಮೇಲ
ಕೇರುತ ಮೆಲ್ಲನೆ ದಿನಮಣಿ ಬರಲು ||
ಈ ರೀತಿ ಲಯ ಉದಯಗಳು | ಪ್ರಭೆ-

ಗಾರ ಜನರಿಗೂ ಉಂಟೆಂಬುವ ಓಲು ||೧||

ಅಕ್ಕರದಿಂ ಕಮಲಿನಿಗೆ | ಪೂರ್ವ -
ದಿಕ್ಕೆಂಬ ಅಂಗನೆ ಪತಿ ಬಂದಿಹ ಬಗೆ ||
ನಕ್ಕು ನಾಚಿಸಿ ಪೇಳ್ವ ಹಾಗೆ ಚೆಲ್ವ
ಚಿಕ್ಕಮೋಡದ ಕೆಂಪು ಎಸೆಯೆ ವಸುಧಿಗೆ ||೨||

ಸಿತಕಿರಣನು ಪೋದನೆಂದು|ಕುಮು -
ದ್ವತಿಯು ಬಾಡಿದಳಯ್ಯೋ ಮನದೊಳು ನೊಂದು ||
ಪತಿಗಳ ವಿರಹಿತವೊಂದು ಕ್ಷಣ -
ಸತಿಯರಿಗತಿಶಯ ದುಃಖದ ಸಂದು ||೩||*

(ಪದ)

ದಾಟಿ : "ಉದಯರಾಗ ಸಂಪದ ನೋಡಿದರೆನ್ನದೆ ಭುಗಿಲೊಂಬೋದೆ ಭಾಮಿನಿ" ಎಂಬ ಪದದಂತೆ.

ಉದಯಕಾಲವಾಯಿತು ಜಗವೆಲ್ಲ ಸಮ್ಮುದವಾಗಲು ಮೆಲ್ಲನೆ ||
ಕದಪಿಂಗೆ ಕದಪನಿಟ್ಟೊಂದಾಗಿ ಮಲಗುವ
ನಿದೆ ಹೊತ್ತಿಗಿಲ್ಲದ ಮದಯೌವನೆಯ ಬಿಟ್ಟು |ಪಲ್ಲ||

ಸತಿಪತಿಗಳ ತೆಕ್ಕೆ ಬಿಗಿವಂತೆ ಸೀತ ಮಾ -
ರುತನು ಮೊದಲು ಬಂದ್ಮು ಕದುಕಿಸಲು |
ಸಿತಕಿರಣನು ತನ್ನ ಸತಿಯೊಳ್ಬೆಳಗಿ ನಂಪ -
ರತಿ ಗೂಡುವಂತೆ ಕೆಳಗೆ ಬರಲು |
ಹಿತದಿಂದೆ ಗಲರವಗೈದು ನಲಿದು ಪಾರಾ -
ವತಗಳು ಬಿಡದೆ ಚುಂಬನವಾಡಲು |
ಮಿತಿಮೀರಿ ಮುದ್ದುಗಳಿಡಲು ಬ್ಯಾಸರದೆ ದಂ -
ಪತಿಗಳು ಮರಳಿ ಸುರತವಾಡುತಿರಲಾಗಿ ||೧||

---

* यात्येकतोऽस्तशिखरं पतिरोषधीना-
माविष्कृतोरुणपुरःसर एकतोऽर्कः
तेजोद्वयस्य युगपद्व्यसनोदयाभ्यां
लोको नियम्यत इवात्मदशान्तरेषु ।।

ಇರುಳು ಪೋಯಿತು ಪೋಗಿರೆಂದು ತಾರೆಗಳನ್ನು
ಕರುಣಿಸಿ ಕಳುಹುವ ವಿಧುವೆನಲು |
ತರುಣಿಯರೆಲ್ಲರು ತಮ್ಮ ತಮ್ಮ ಮನೆಯೊಳು
ಉರಿವದೀಪಗಳ ಸರಿಸುತಿರಲು |
ತರುವಿಂದೆ ತರುವಿಗೆ ಪಾರುತೆ ಪಕ್ಷಿಗಳ್
ಸರಸ ಮಂಜುಳ ರವಗಳ ನೀಯಲು |
ಸಿರಿಯ ಸಾವರಿಸಿ ಜೋಲ್ ಮುಡಿಯ ತಿದ್ದಂತೆ ಹಿಮ-
ಕರವದನೆಯರು ಬಾಗಿಲು ತೆರೆಯಲಾಗಿ ||೨||

ಪೃಥಿವಿದೇವಿಯು ದಿನಪತಿಗಾಗಿ ಮುತ್ತಿನಾ |
ರುತಿಯ ಹರುಷದಿಂದೆ ಪಿಡಿದವೋಲು |
ಅತಿ ರಮ್ಯವಾದ ಇಬ್ಬನಿಗಳು ವೃಕ್ಷದೊ |
ಳತಿಶಯವಾಗಿ ಶೋಭಿಸುತಿರಲು ||
ಲತೆಗೈಯಿಂ ಸಾರಿಸಿ ಲಲಿತಾಂಗಿಯರು ಮತ್ತೆ |
ಮಿತದಿಂ ರಂಗೋಲೆಯಕ್ಕಿಗಳಿಡಲು |
ಹಿತದಿಂ ರವಿಯು ಸೆರಗಿನೊಳಿಪ್ಪ ಕುಚಗಳ್ ಭ-
ಕುತರಾದ ಚಕ್ರವಾಕಗಳೆಂದು ಕರವಿಡಲುದಯ ||೩||*

ಅನ : (ಬಂದು) ನನಗಂತೂ ಪ್ರಪಂಚವಲ್ಲಿ ಏನೂ ಜ್ಞಾನವಿಲ್ಲ, ನಿಜ. ಆದರೂ ಆ ರಾಜರ್ಷಿಯು ನಮ್ಮ ಶಕುಂತಲೆಯನ್ನು ಮೋಸ ಮಾಡಿದ್ದು ನನಗೆ ತಿಳಿಯುತ್ತದೆ.

ಶಿಷ್ಯ : ಈಗ ಹೋಮದ ವೇಳೆಯಾಯಿತೆಂದು ಗುರುಗಳಿಗೆ ತಿಳಿಸುವೆನು. (ಹೋಗುತ್ತಾನೆ.)

ಅನ : ಒಳ್ಳೇದು ಮಾಡತಕ್ಕದ್ದೇನು?

---

* अनर्हिते शशिनि सैव कुमुद्वती मे
हष्टिं न नन्दयति संसारणीय शोभा
इष्टप्रवासजनितान्यत्रलजनस्य
दुःखानि नूनमतिभात्रसुदुःसंहानि ।।३।।

(ಪದ)

ದಾಟಿ : ಯಾಕೆ ತಡೆದಾನು ಪೇಳೆ|ಏ ಸಖಿಯೇ ಕೇಳವನ್ಯಾಕೆ ||ಪಲ್ಲ||
ಲೋಕದಲ್ಲಿ ನಾನು ಮಾಡಿದನೇಕ
ಅಪರಾಧವನ್ನು ನಾಕು ಮಂದಿ ನಿಂತು
ನಾಚಿಸಿ ಪೋಗೆಂದು ಪೇಳಮ್ಮ ||ಅನುಪಲ್ಲ||

ಎಂಬ ಪದದಂತೆ.

ಮೋಸಮಾಡಿ ಪೋದನಮ್ಮಾ | ಆ ರಾಜ ಋಷಿಯು
ಮೋಸಮಾಡಿ ಪೋದನಮ್ಮಾ|| ವನವಾಸಿ ನಮ್ಮ ||ಪಲ್ಲ||

ಈ ಸಖಿಯಳ ಮೆರೆವ ಭರದ
ಮೀಸಲು ಯೌವನವ ಕಂಡು|
ಆ ಸಮಯಕೆ ತನ್ನ ಕೆಲಸ
ತಾಸಾಧಿಸಿಕೊಂಡು ಎಮ್ಮೊಳು ||ಅನುಪಲ್ಲ||

ಅಂತು ತಿಳಿಯಲಿಲ್ಲವಾತನ | ಮಲ್ಲಿಗೆಯ ಹೂವಿ-
ನಂಥ ಜೀವದ ಗೆಳತಿಯನ್ನಾ | ಒಪ್ಪಿಸಿದೆ ಎನ್ನಾ||
ಚಿಂತೆಯೊಳಗೆ ಮೈಮರೆದಲೆ |
ಭ್ರಾಂತಳಾಗಿ ಕುಳಿತವಳ |
ನ್ನೆಂತು ನೋಡಲೆಮ್ಮ ಇವಳ |
ಕಾಂತನು ಕರೆಕಳುಹಲಿಲ್ಲ ||೧||

ಮನೆಯ ಕೆಲಸ ಮಾಡಲಾರೆಲೆನೆ | ಇವಳೊಳಗೆ ಪೊಕ್ಕು
ಮನಸಿಜನೀ ಕೃತಿಯಗೈದನೇ | ಇನ್ನಾರೆ ತಾನೆ ||
ಇನಿತು ಕೃತಕತನವಿಲ್ಲದೆ |
ತನುವ ನೀಡಿ ಕೂಡಿದವಳ |
ನೆನಹುದೋರುವಂತೆ ಅವನ |
ಮನದಿ ಜಾಗ್ರತನಾಗಲೆಮ್ಮ ||೨||

ಮರುಳ ಋಷಿಯು ಮೂಲಪಾಪನೆ | ಬ್ಯಾರಿಂತ ಪ್ರೌಢ
ಪುರುಷನಿವಳ ಮರೆಯಲಾಪನೆ | ಆತುರದಿ ತಾನೆ ||
ಸುರತಸಮಯದೊಳಗಿರಿಸಿದ |

ಬೆರಳುಂಗುರವನವನ ಬಳಿಗೆ |
ಹಿರಿಯರಿವರೆಂತ ಮೊದಲೆ |
ತಲ್ಪಿಸುವರಿನ್ನಾರು ||೩||

ಇನ್ನೇನು ಮಾಡತಕ್ಕದ್ದು? ಈ ಕೆಲಸದಲ್ಲಿ ಗೆಳತಿಯ ದೋಷವೆಂದು ಸುಮ್ಮನೆ ಇರಬೇಕೆ? ಅದು ಯೋಗ್ಯವಲ್ಲ. ಕಾಶ್ಯಪ ಋಷಿಗಳು ಪ್ರವಾಸದಿಂದ ಬಂದಿದ್ದಾರೆ. ಅವರ ಮುಂದೆ ದುಷ್ಯಂತ ರಾಜನೊಡನೆ ಗಾಂಧರ್ವ ವಿವಾಹದಿಂದ ಕೂಡಿ ಇವಳು ಗರ್ಭಿಣಿಯಾಗಿದ್ದಾಳೆಂದು ಹೇಳಬೇಕೇ? ಅದಕ್ಕೂ ಧೈರ್ಯ ಸಾಲುವುದಿಲ್ಲ. ಎಂಥ ಮಾತಾಯಿತು? ಹ್ಯಾಗೆ ಮಾಡಲಿನ್ನು?

ಪ್ರಿಯಂ : (ಬಂದು ಹರುಷದಿಂದ) ಸಖಿಯೇ ನಡೆ, ನಡೆ ಬೇಗ; ಶಕುಂತಲೆಯು ಇವತ್ತೇ ಹೊರಡುತ್ತಾಳೆ. ಪ್ರಸ್ಥಾನ ಸಮಾರಂಭವನ್ನು ನೋಡುವ.

ಅನ : ಅವ್ವಯ್ಯಾ! ಇದು ಏನು ಹೇಳಿದೆಯೇ! ಏನೇನಾಯಿತು ಹೇಳು ನೋಡೋಣ.

ಪ್ರಿಯಂ : ಇದೇ ನಾನು ಶಕುಂತಲೆಯ ಬಳಿಗೆ ನಿನ್ನೆ ರಾತ್ರಿ ನಿದ್ದೆ ಹತ್ತಿತ್ತೇ ಹ್ಯಾಗೆಂದು ಕೇಳುವದಕ್ಕೆ ಹೋಗಿದ್ದೆನು.

ಅನ : ಅಲ್ಲಿಂದ?

ಪ್ರಿಯಂ : ಅಷ್ಟರಲ್ಲಿಯೇ ಕಣ್ವ ತಾತನು ಬಂದದ್ದು ಕೇಳಿ ಶಕುಂತಲೆಯು ಅತಿ ಲಜ್ಜಿತಳಾಗಿ ಅಧೋಮುಖಿಯಾಗಿ ಕುಳಿತುಕೊಂಡಿದ್ದಳು. ಆತನು ಸಂತೋಷದಿಂದ ಶಕುಂತಲೆಯನ್ನು ಅಪ್ಪಿ, "ಮಗುವೇ, ಏನೂ ಚಿಂತೆ ಮಾಡಬೇಡ. ಯಾಜಕನ ನೇತ್ರಗಳು ಹೊಗೆಯಿಂದ ಮುಚ್ಚಿರಲಾಗಿಯೂ ಆತನ ಕೈಯೊಳಗಿನ ಆಹುತಿಯು ಹ್ಯಾಗೆ ಅಗ್ನಿಮುಖದಲ್ಲಿಯೇ ಬೀಳುತ್ತದೋ ಅದೇ ಪ್ರಕಾರ ಈ ಕಾರ್ಯವಾಗಿದೆ. ಹೇ ವತ್ಸೇ, ಈ ಮಾತಿನ ಸಿಟ್ಟು ನನಗೆ ತಿಲಮಾತ್ರವಿಲ್ಲ ಕಂಡೆಯಾ? ಉತ್ತಮನಾದ ಶಿಷ್ಯನಿಗೆ ವಿದ್ಯವನ್ನು ಕಲಿಸಿದ್ದರಿಂದ ಹ್ಯಾಗೆ ಖೇದವಾಗುವುದಿಲ್ಲವೊ ಅದರಂತೆ ಯೋಗ್ಯನಾದ ಪುರುಷನ ಕೂಡ ನಿನ್ನ ಯೋಗವಾದದ್ದರಿಂದ ನನಗೆ ಖೇದವಾಗುವುದಿಲ್ಲ. ಇವತ್ತೇ ನಾನು ನಿನ್ನನ್ನು ಪತಿಯ ಮಂದಿರಕ್ಕೆ ಕಳುಹಿಸಿಕೊಡುತ್ತೇನೆ. ಚಿಂತೆ ಮಾಡಬೇಡ" ಎಂದು ಹೇಳಿದನು.

ಅನ : (ಆಶ್ಚರ್ಯದಿಂದ) ಈ ಮಾತು ಕಣ್ವತಾತನ ಮುಂದೆ ಯಾರು ಹೇಳಿದರು?

ಪ್ರಿಯಂ : ಆತನು ಅಗ್ನಿಗೃಹಕ್ಕೆ ಹೋಗುವಾಗ ಛಂದೋಮಯೀ ಆಕಾಶವಾಣಿಯಾಯಿತು.

ಅನ : ಆಕಾಶವಾಣಿ ಏನೆಂದಾಯಿತು?

ಪ್ರಿಯಂ : ಹೇಳುತ್ತೇನೆ ಕೇಳು. "ಹೇ ಬ್ರಹ್ಮನ್

ಕಂದ || ಶಮಿಯೊಳಿಹ ಪವಿತ್ರಾಗ್ನಿಗೆ |
ಸಮದುಷ್ಯಂತನ ತೇಜಮಿಹದದನು ತಾಳ್ದಳ್ ||
ಭ್ರಮೆಗೊಳಲಾಗದು ನಿನ್ನ
ಮಮತೆಯು ಮಗಳೊಳಿದು ಜಗಕೆ ಕಲ್ಯಾಣಾರ್ಥಂ|| *

ಅನ : (ಪ್ರಿಯಂವದೆಯನ್ನು ಆಲಿಂಗಿಸಿ) ಸಖಿಯೆ ನನಗೆ ಬಹು ಆನಂದವಾಯಿತು. ಆದರೆ ಶಕುಂತಲೆಯು ಇವತ್ತೇ ಹೋಗುವಳೆಂದು ಹೇಳುತ್ತೀ. ಆದರಿಂದ ಆನಂದದಲ್ಲಿ ಸ್ವಲ್ಪ ದುಃಖವಾಗುತ್ತದೆ.

ಪ್ರಿಯಂ : ಸಖಿಯೆ, ನಮಗೆ ದುಃಖವಾದರೂ ಚಿಂತೆಯಿಲ್ಲ. ನಮ್ಮ ಸಖಿಯು ಸುಖಿಯಾಗಿದ್ದರೆ ಸಾಕು.

ಅನ : ನಡೆ ಬೇಗ, ಹಾಗಾದರೆ ತನ್ನ ಪತಿಯ ಮನೆಯಲ್ಲಿ ಚಿರಕಾಲ ಸುಖಿಯಾಗಿರುವದಕ್ಕೋಸ್ಕರ ಪ್ರಯಾಣ ಸಮಯದಲ್ಲಿ ಮಂಗಲಸಮಾರಂಭವನ್ನು ಮಾಡೋಣ ನಡೆ. ನಾನು ಅವಳಿಗೋಸ್ಕರ ನಾಗಕೇಸರದ ಮಾಲೆಯನ್ನು ಕಟ್ಟಿ ಆ ಮಾವಿನ ಗಿಡದ ಟೊಂಗೆಯ ಮೇಲೆ ನೀರು ಚಿಮ್ಮಡಿಸಿ ಎಲೆಯಲ್ಲಿ ಮುಚ್ಚಿಟ್ಟಿದ್ದೇನೆ. ಅದನ್ನು ತೆಗೆದುಕೊಂಡು ಬಾ. ಇಷ್ಟರಲ್ಲಿಯೇ ನಾನು ಮೃಗರೋಚನೆ, ತೀರ್ಥಮೃತ್ತಿಕೆ, ದೂರ್ವಾಂಕುರ ಮುಂತಾದವನ್ನು ತೆಗೆದುಕೊಂಡು ಬರುತ್ತೇನೆ.

ಪ್ರಿಯಂ : ಒಳ್ಳೇದು.

(ಅನಸೂಯೆ ಹೋಗುತ್ತಾಳೆ. ಪ್ರಿಯಂವದೆಯು ಆ ಮಾಲೆಯನ್ನು ತೆಗೆದುಕೊಂಡು ಕೈಯಲ್ಲಿ ಹಿಡಿದುಕೊಳ್ಳುತ್ತಾಳೆ. ಇಷ್ಟರಲ್ಲಿ ತೆರೆಯಲ್ಲಿ ಗೌತಮಮ್ಮಾ, ಹಸ್ತಿನಾಪುರಕ್ಕೆ ಶಕುಂತಲೆಯನ್ನು ಕರೆದುಕೊಂಡು ಹೋಗತಕ್ಕ ಶಾರ್ಙ್ಗರವ ಮೊದಲಾದ ಶಿಷ್ಯರಿಗೆ ತೀವ್ರದಿಂದ ಸಿದ್ಧರಾಗಿರೆಂದು ಹೇಳು.)

ಪ್ರಿಯಂ : (ಕಿವಿಗೊಟ್ಟು, ಕೇಳಿ) ಸಖಿಯೇ, ನಡೆಯವ್ವ ಬೇಗ: ಊರಿಗೆ ಹೋಗತಕ್ಕ ಶಿಷ್ಯರನ್ನು ಕರೆಯುತ್ತಾರೆ.

ಅನ : (ಕೈಯಲ್ಲಿ ಸುಗಂಧದ ಉಟಿಯಿಂದ ತುಂಬಿದ ಬಟ್ಟಲವನ್ನು ಹಿಡಿದುಕೊಂಡು ಬಂದು) ನಡೆ, ಶಕುಂತಲೆಯ ಬಳಿಗೆ ಹೋಗುವಾ.

(ಇಬ್ಬರೂ ಹೋಗಲಾರಂಭಿಸುತ್ತಾರೆ.)

---

* दुष्यन्तेनाहितं तेजो दधानां भूयतै भुवः।
अवेहि तनयां ब्रह्मन्नग्निगर्भां शमीमिव ।।

ಪ್ರಿಯಂ : (ಮುಂದೆ ನೋಡಿ) ಶಕುಂತಲೆಯು ಪ್ರಾತಃಕಾಲದಲ್ಲಿ ಮಂಗಲಸ್ನಾನ ಮಾಡಿಕೊಂಡು ಕುಳಿತುಕೊಂಡಿದ್ದಾಳೆ. ಋಷಿಪತ್ನಿಯರು ಕೈಯಲ್ಲಿ ಅಕ್ಷತೆಯನ್ನು ಹಿಡಿದುಕೊಂಡು ಮಂಗಲಗಾಯನವನ್ನಾರಂಭಿಸಿದ್ದಾರೆ. ನಡೆ, ನಾವೂ ಅತ್ತಕಡೆಗೆ ಹೋಗುವ.

(ಅನಂತರ ಮೇಲೆ ಹೇಳಿದ ರೀತಿಯಲ್ಲಿ ಶಕುಂತಲೆಯೂ ಋಷಿಪತ್ನಿಯರೂ ಪ್ರವೇಶಿಸುತ್ತಾರೆ.)

ಶಕುಂ : (ಋಷಿಪತ್ನಿಯರಿಗೆ) ತಾಯಿಗಳಿರಾ ನಮಸ್ಕಾರ ಮಾಡುತ್ತೇನೆ.

ಒಬ್ಬ

ಋಷಿಪತ್ನಿ : ಗಂಡನ ಕೃಪೆಯಿಂದ ಆತನ ಪಟ್ಟದ ರಾಣಿಯಾಗಮ್ಮ!

2ನೆಯವಳು : ವೀರಪುತ್ರನನ್ನು ಪಡೆಯಮ್ಮ!

3ನೆಯವಳು : ಪತಿಯ ಪ್ರೀತಿಯು ಪೂರ್ಣವಾಗಿ ನಿನ್ನ ಮೇಲೆ ಇರಲಮ್ಮ!

(ಈ ಪ್ರಕಾರ ಆಶೀರ್ವಾದ ಮಾಡಿ ಗೌತಮಮ್ಮನ ಹೊರ್ತು ಉಳಿದ ತಪಸ್ವಿನಿಗಳು ಹೊರಟು ಹೋಗುತ್ತಾರೆ.)

ಸಖಿಯರು : (ಮುಂದಕ್ಕೆ ಹೋಗಿ) ಸಖಿಯೇ ಇವತ್ತಿನ ಮಂಗಲ ಸಮಾರಂಭವು ನಿನಗೆ ಸುಖಪ್ರದವಾಗಲಿ.

ಶಕುಂ : ಬನ್ನಿರೆ, ಗೆಳತಿಯರಾ ಬನ್ನಿರಿ.

ಸಖಿಯರು : (ಮಂಗಲ ಪಾತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದು ಕುಳಿತುಕೊಂಡು) ಗೆಳತಿಯೆ, ಇತ್ತಿತ್ತ ಬಾ, ಮಂಗಲಾಭರಣಗಳನ್ನು ಇಡಿಸುತ್ತೇವೆ.

ಶಕುಂ : ಸಖಿಯರೇ, ಈ ಸಮಯದಲ್ಲಿ ಇದು ನನ್ನ ಭಾಗ್ಯವೇ ಸರಿ. ಇನ್ನು ಮೇಲೆ ಗೆಳತಿಯರ ಕೈಗಳಾಭರಣಗಳು ಎಲ್ಲಿ ಸಿಗುವುವು? (ಎಂದು ಕಣ್ಣು ತುಂಬ ನೀರು ತರುತ್ತಾಳೆ.)

ಸಖಿಯರು : ಮಂಗಲ ಸಮಯದಲ್ಲಿ ದುಃಖಿಸಬಾರದವ್ವ. (ಸೆರಗಿನಿಂದ ಕಣ್ಣೀರು ಒರಿಸಿ ಮುಂದೆ ಕುಳ್ಳಿರಿಸಿಕೊಂಡು ಹೆಳಲು ಹಾಕುತ್ತಾರೆ.)

ಪ್ರಿಯಂ : ರಾಜಗೃಹದಲ್ಲಿಯ ರತ್ನಖಚಿತವಾದ ಅಲಂಕಾರಗಳಿಗೆ ಯೋಗ್ಯವಾದ ಈ ರೂಪು ಮುನಿಜನರ ಆಶ್ರಮದಲ್ಲಿಯ ಹೂವಿನ ಆಭರಣಗಳಿಂದ ವಿಶೋಭಿತವಾಗಿ ಕಾಣುತ್ತದೆ.

(ಇಷ್ಟರಲ್ಲಿ ಇಬ್ಬರು ಋಷಿಕುಮಾರರು ಕೈಯಲ್ಲಿ ಆಭರಣಗಳ ಡಬ್ಬಿಗಳನ್ನೂ ವಸ್ತ್ರಗಳನ್ನೂ ಹಿಡಿದುಕೊಂಡು ಬರುತ್ತಾರೆ.)

ಋಷಿ

ಕುಮಾರರು : (ಸಖಿಯರಿಗೆ) ಇಕೊಳ್ಳಿ. ಈ ಅಲಂಕಾರಗಳನ್ನು ತೆಗೆದುಕೊಂಡು ಶಕುಂತಲೆಯ ಮೈಮೇಲೆ ಇಡಿಸಿರಿ.

(ಎಲ್ಲರೂ ಆ ಅಲಂಕಾರಗಳನ್ನು ನೋಡಿ ವಿಸ್ಮಿತರಾಗುತ್ತಾರೆ.)

ಗೌತಮಮ್ಮ : ತಮ್ಮ ಹಾರೀತಕಾ, ಇದನ್ನು ನಿನಗೆ ಯಾರು ಕೊಟ್ಟರಪ್ಪಯ್ಯಾ?

1ನೆಯವನು : ಅಮ್ಮಾ ಇವು ಕಣ್ವ ಮಹಾಮುನಿಗಳ ಪ್ರಭಾವದಿಂದ ಉಂಟಾದವು.

ಗೌತಮಮ್ಮ : ಅವರು ತಮ್ಮ ಮಾಯಾಸಿದ್ಧಿಯಿಂದ ಉಂಟು ಮಾಡಿದರೋ?

2ನೆಯವ : ಅಮ್ಮಾ ನಾನು ಹೇಳುತ್ತೇನೆ ಕೇಳಿ. ಶಕುಂತಲೆಗೋಸ್ಕರ ಹೂವುಗಳನ್ನು ತೆಗೆದುಕೊಂಡು ಬನ್ನಿರೆಂದು ಗುರುಗಳು ಆಜ್ಞಾಪಿಸಿದರು. ಆ ಮೇರೆಗೆ ನಾವು ಹೋಗಿ ಹೂವುಗಳನ್ನು ಕೊಯ್ಯುವಷ್ಟರಲ್ಲಿಯೆ ನಮ್ಮ ಕೈಗೆ ಈ ವಸ್ತ್ರಾಭರಣಗಳು ಬಂದವು. ಹ್ಯಾಗೆಂದರೆ,

(ಪದ)

ದಾಟಿ : ಕರೆಯ ಕಮಲಾಕ್ಷಿ ಕಾಂತನ ಕರೆಯೆ|| ಪಲ್ಲ|| ಕುಚಯುಗಳಲಿ ನಖ| ರಚಿಸಿ ಮುದದಿ ಎನ್ನ| ಕಚನಿಚಯದಿ ಪುಷ್ಪರಚಿಪರಸಿಕನಾ | ಎಂಬ ಪದದಂತೆ.

ಕೇಳಿಕೌತುಕವಮ್ಮಾ ನೀ ||ಪಲ್ಲ||
ಕುಸುಮಂಗಳಿಗೊಂದು |ಕುಜವನೇರಲದು
ಹಸನಿಹಲಾಕ್ಷಾರಸವ | ನೊಸರಿತಮ್ಮಾ ||೧||

ಫಲಗಳಗೊಂಚಲ | ಗಳು ಹರಿಯಲು ಮುಕ್ತಾ|
ಫಲದೊಸ್ತವೆಕರ |ತಳದೊಳಾದವಮ್ಮಾ ||೨||
ಬಾಳೆಯ ಸುಳಿಯೊಂದು | ಬೆಳೆಯುತ ಪೊಳೆಯುತ |
ಮೇಲಾದ ಬಿಳಿಯ ದು| ಕೂಲವಾಯಿತಮ್ಮಾ ||೩||

ಮಲ್ಲಿಗೆಪೂಗಳ |ನೆಲ್ಲಾ ಕೂಡಿಸಲೊಂದು
ಮೆಲ್ಲನೆ ಭರಜರಿ | ಸೆಲ್ಲೆಯಾಯಿತಮ್ಮಾ ||೪||
ಪೊಸದಳಿರೊಳುಗಿಳಿ | ಯೆನಲೋನದೇವಿಯು|
ಹಸುರು ಜರದ ಕು| ಪ್ಪುಸವ ನಿತ್ತಳಮ್ಮಾ || ೫||

ಪ್ರಿಯಂ : (ಶಕುಂತಲೆಯ ಮುಖವನ್ನು ನೋಡುತ್ತ) ಎಲೆ, ಪ್ರಿಯಸಖಿಯೆ ಈ ವನಸ್ಪತಿಗಳು ಇನ್ನು ಮೇಲೆ ನೀನು ರಾಜಲಕ್ಷ್ಮಿಯ ಉಪಭೋಗವನ್ನು ತೆಗೆಮುಕೊಳ್ಳುವೆಯೆಂದು ಸೂಚನೆ ಮಾಡಿಕೊಟ್ಟವು ಬಲ್ಲೆಯಾ?

(ಶಕುಂತಲೆಯು ಮುಗುಳುನಗೆಯಿಂದ ಮುಖವನ್ನು ಕೆಳಗೆ ಮಾಡುತ್ತಾಳೆ)

ಹಾರೀತಕ : ಎಲೋ ಗೌತಮನೆ, ನಡೆ; ಗುರು ಕಣ್ವ ಮಹಾಮುನಿಗಳು ಸ್ನಾನವನ್ನು ಮಾಡಿಕೊಂಡು ಬಂದಿರಬಹುದು. ಅವರಿಗೆ ವನಸ್ಪತಿಗಳೂ ವನದೇವತೆಗಳೂ ಮಾಡಿದಂಥ ಸೇವೆಯನ್ನು ತಿಳಿಸೋಣ.

ಗೌತಮ : ನಡೆ. (ಇಬ್ಬರೂ ಹೋಗುತ್ತಾರೆ.)

ಸಖಿಯರು : ಶಕುಂತಲೆ, ಆಭರಣಗಳನ್ನು ಹ್ಯಾಗೆ ಇಡಿಸಬೇಕೆಂಬುವದು ನಮಗೆ ಗೊತ್ತಿಲ್ಲ. ಆದರೂ ಚಿತ್ರದಲ್ಲಿ ಬರೆದದ್ದು ನೋಡಿದ್ದೇವೆ. ಅದರಂತೆ ಇಡಿಸುವೆವು.

ಶಕುಂ : ಗೆಳತಿಯರ ತಮ್ಮ ಕೌಶಲ್ಯವನ್ನು ನಾನರಿಯೆನೇ?

(ಸಖಿಯರು ಅಲಂಕಾರಗಳನ್ನಿಡಿಸುತ್ತಾರೆ. ಅಷ್ಟರಲ್ಲಿ ಸ್ನಾನ ಮಾಡಿಕೊಂಡು ಕಣ್ವರು ಬರುತ್ತಾರೆ.)

ಕಾಶ್ಯಪ –

(ಶ್ಲೋಕ)

ಬಿಗಿದುರ್ಬಿರ್ದುದು ಗಂಟಲಶ್ರು ತೆರೆಗಳ್ ನೇತ್ರಂಗಳೊಳ್ ತಪ್ಪವೀ
ಮಗಳೀವೊತ್ತಿಗೆ ಪೋಪಳೆಂಬ ಕಡುಚಿಂತಾ ಕಷ್ಟದುದ್ಗಾರದಿಂ ||
ಮಿಗೆ ಬಾಯಾರಿತು ನೊಂದೆ ಬೆಂದೆ ಮನದೊಳ್ ಮುಂಗಾಣೆ ನಿನ್ನಾ ಪ್ರಪಂ||
ಚಿಗಳೆಷ್ಟೆಂತೆ ಮರುಂಗುತಿರ್ಪರಕಟಾ ಕನ್ಯಾವಿಯೋಗಕ್ಕೆಲೈ ||

(ಎಂದು ಅತ್ತಿತ್ತ ತಿರುಗಾಡುತ್ತಾನೆ.)

ಸಖಿಯರು : ಎಲೆ ಶಕುಂತಲೆ, ಆಭರಣಗಳನ್ನಿಡಿಸುವದಾಯಿತು. ಇನ್ನು ಪೀತಾಂಬರವನ್ನುಟ್ಟುಕೊಂಡು ಸೆಲ್ಲೆಯನ್ನು ಹೊತ್ತುಕೋ.

ಶಕುಂ : (ಎದ್ದುನಿಂತು ಪೀತಾಂಬರವನ್ನುಟ್ಟುಕೊಂಡು ಸೆಲ್ಲೆವನ್ನು ಧರಿಸಿಕೊಳ್ಳುತ್ತಾಳೆ.)

ಗೌತಮಮ್ಮ : ಶಕುಂತಲಾ, ಇಲ್ಲಿ ಬಾ ಅಮ್ಮಾ. ನಿನ್ನ ತಂದೆಗಳು ಆನಂದಾಶ್ರುಗಳಿಂದ ತುಂಬಿದ ನೇತ್ರಗಳಿಂದ ನಿನ್ನನ್ನು ನೋಡುತ್ತಿದ್ದಾರೆ. ಹೋಗಿ ನಮಸ್ಕಾರ ಮಾಡು.

ಶಕುಂ : (ತಂದೆಯ ಚರಣಕ್ಕೆರಗುತ್ತ) ತಾತಾ, ವಂದನೆ ಮಾಡುತ್ತೇನೆ.

ಕಾಶ್ಯಪ : (ಅವಳ ಮಸ್ತಕದಲ್ಲಿ ಕೈಯಿಟ್ಟು) ವತ್ಸೇ,

||ಕಂದ|| ಯಯಾತಿರಾಯಂ ಶರ್ಮಿ |
ಷ್ಠೆಯೊಳತ್ಯಾದರದಿ ವರ್ತಿಸಿದವೊಲ್ ಪತಿಯು ||
ನಯಮಂ ತೋರಲ್ ನೀ ಪೊ
ಟ್ಟೆಯೊಲಿಂ ಪುರುವಿನ ಪೊರೆವಡೆ ಚಕ್ರವರ್ತಿ ಮಗನಾ || *

---

* ययातेखि शर्मिष्ठा भर्तृर्बहुमता भव।
मुतं त्वमपि सभ्राजं सेव पुरुमवाप्निहि।।

ಗೌತಮಮ್ಮ : ಹೇ ಭಗವನ್ ಇದು ಆಶೀರ್ವಾದವಲ್ಲ. ವರವನ್ನೇ ಕೊಟ್ಟ ಹಾಗೆ.

ಕಾಶ್ಯಪ : ಹೇ ವತ್ಸೇ, ಅಗ್ನಿಕುಂಡಕ್ಕೆ ಪ್ರದರ್ಶಣೆ ಹಾಕು. (ಎಲ್ಲರೂ ಅಗ್ನಿಕುಂಡದ ಸುತ್ತಲೂ ತಿರುಗುತ್ತಾರೆ. ಕಾಶ್ಯಪನು ತನ್ನ ಮಗಳಿಗೆ ಆಶೀರ್ವಾದ ಮಾಡುತ್ತಾನೆ.)

ವೃತ್ತ || ಝಳಝಳವಾದ ವೇದಿಯಲ್ಲಿ ವಿಸ್ತೃತವಾಗಿರೆ ಸುತ್ತಲ್ಮೆದೆ ನಿ-
ರ್ಮಳತರ ದರ್ಭಮಧ್ಯದೊಳು ತಾಣವಗೊಂಡಿಹ ಕುಂಡದಲ್ಲಿ ಪ್ರ-
ಜ್ವಳಿಸುವ ಹವ್ಯಗಂಧದಿಯೆ ಪಾತಕಮಂ ಸುಡುವಗ್ನಿದೇವ ತಾಂ
ಕೆಲದೊಳಗಿರ್ದು ನಿತ್ಯ ಬಿಡದೀಕ್ಷಿಸಿರಕ್ಷಿಸಲಮ್ಮ ನಿನ್ನನು || *

ನಡೆ ಇನ್ನು ಮುಂದೆ. (ಹಿಂದೆ ನೋಡಿ) ಶಾರ್ಙರವಾದಿ ಶಿಷ್ಯರು ಎಲ್ಲಿದ್ದಾರೆ?

ಶಿಷ್ಯರು : ಸ್ವಾಮೀ ಸಿದ್ಧರಾಗಿದ್ದೇವೆ.

ಕಾಶ್ಯಪ : ನಿಮ್ಮ ತಂಗಿಗೆ ಹಾದಿ ತೋರಿಸಿರಿ.

ಶಾರ್ಙರವ : ಅಮ್ಮಾ ದೇವೀ, ಇತ್ತ ಬನ್ನಿ (ಎಲ್ಲರು ಅವಳ ಹಿಂದೆ ಹೋಗುತ್ತಾರೆ.)

ಕಾಶ್ಯಪ : ಎಲೈ ತಪೋವನದ ವೃಕ್ಷಗಳಿರಾ.

(ಪದ)

ದಾಟಿ : "ನೆನೆನೆನೆದು ಎನ್ನಯ ಮನ ನೆರೆ ಮೋಹಿಸುತಿದೆ" ಎಂಬ ಪದವಂತೆ.
ಪತಿಯಾಲಯಕಿಂದು ಪೋಗುವ ನಿಮ್ಮ ಸಖಿಯೊಳನು-
ಮತವ ನೀಡಲಿಬೇಕಾಶ್ರಮ ತರುವರುಗಳಿರಾ ||ಪಲ್ಲ||

ಪ್ರತಿದಿನದೊಳು ನಿಮ್ಮನೆ ನೀರ್ಗುಡಿಸದೆ ತಾಪಾನಿಸಳು |
ಹಿತದೊಳ್ ನಿಮ್ಮಯ ಸೇವೆಯೊಳನುದಿನ ತತ್ಪರಳು ||೧||

ಚಲುವಾಭರಣಗಳೊಳತಿ ಮಮತೆಯುಳ್ಳವಳಿರಲು |
ಬಲುನೇಹದಿ ನಿಮ್ಮಯ ಚಿಗುರನೆ ಚಿವುಟದ ಮಗಳು ||೨||

ಪೊಸಕುಸುಮ ಪ್ರಸವನೆ ಕಂಡತಿ ಸಂತೋಷವ ತಾಳ್ವ ||
ಎಸಳುಗಂಗಳೆ ನಿಮ್ಮನೆ ನೋಡುತ ನಿಲ್ಲುವಳು ||೩||
(ಇಷ್ಟರಲ್ಲಿ ಕೋಕಿಲಸ್ವರವು ಕೇಳಿಬರುತ್ತದೆ.)

ಪ್ರಿಯಂ : (ಕೋಕಿಲ ಧ್ವನಿಯನ್ನು ಕೇಳಿ ಶಕುಂತಲೆಗೆ ಹೇಳುತ್ತಾಳೆ.)

अमी वेदिं परितः क्लृप्तधिष्ण्याः
समिद्वन्तः प्रान्तसंस्तीर्णदर्भाः।
अपघ्नन्तो दुरितं हव्यगन्धै -
र्वैतानास्त्वां वह्नयः पावयन्तु ।।

ವೃ || ಅರಳುಗಳೆಮ್ಮ ವಿನ್ನು ಭರದಿಂ ಸುರಿಯಲ್ಕಿವೆ ಮಾರನಂಬುಗಳ್ |
ಪರಿಪರಿಕಾಯ್ದುವಳ್ಗೆ ಮಿಗೆ ಕಾಡುವವಿಲ್ಲಿರೆ ಕಷ್ಟವೆಂದು ವೃ-||
ಕ್ಷರುಗಳೆ ಎಮ್ಮರಣ್ಯದೊಳಗಿಪ್ಪರು ಮಿತ್ರರು ಬಂದು ನಿಂದು-
ತ್ಕರುಣದ ಕೋಕಿಲಸ್ವನದಿ ಪೋಗೆನುತೀಗಲೆ ಪೇಳಿದರ್ಸಖೀ ||

(ಇಷ್ಟರಲ್ಲಿ ಆಕಾಶವಾಣಿಯಾಗುತ್ತದೆ.)

(ಪದ)

ದಾಟಿ : ರಾತಸಂಯಾ ಮೋರಿ ಝುಲನಿ ಹರಾನಿ || ಜಡಿತ ಜಡಾವಕಿ ಬಿಂದಿಯ ಹಮಾರಿ | ಲಾಖುರುಪಯ್ಯಾಕಿ ಝುಲನಿ ಹರಾನಿ || ಎಂಬ ಪದದಂತೆ.

ಮಾರ್ಗವಾಗಲಿ ಮಂಗಲಮಯವಮ್ಮಾ ||ಪಲ್ಲ||
ಕಮಲಪತ್ರಗಳಿಂದೆ ಮನೋಹರಮಾ -

ದಮಲಸರಂಗಳಿಂ ರಮಣೀಯವಮ್ಮಾ ||೧||
ತರುಗಳ ನೆರಳಿಂ ತರಣಿಯ ತಾಪವು

ತಾಕದೆ ಮಾರುತಂ ತಂಪಿಡವೆಮ್ಮಾ ||೨||
ಕುಸುಮದ ರಜಗಳ್ ಪಸರಿಸಿ ಧೂಳಿಯೊಳ್

ಮಿಸಳಿಸಿ ದಾರಿಯು ಮೃದುಗೊಳಲೆಮ್ಮಾ ||೩|| *

(ಎಲ್ಲರೂ ವಿಸ್ಮಯಗೊಂಡು ನೋಡುತ್ತಾರೆ.)

ಗೌತಮಮ್ಮ : ಎಲೆ ತಂಗಿಯೆ ನಮ್ಮ ಆಪ್ತೇಷ್ಟರಾದ ವನದೇವತೆಗಳು ನಿನಗೆ ಹೋಗುವದಕ್ಕೆ ಅನುಮೋದನ ಕೊಟ್ಟಿದ್ದಾರೆ. ಅವರಿಗೆ ವಂದನೆ ಮಾಡು.

ಶಕುಂ : (ವಂದನೆ ಮಾಡುತ್ತಾಳೆ.) ಎಲೆ ಸಖಿಯೆ ಪ್ರಿಯಂವದೆ, ಆರ್ಯಪುತ್ರನನ್ನು ನೋಡುವದಕ್ಕೆ ನಾನು ಇಷ್ಟು ಉತ್ಸುಕಳಾಗಿದ್ದರೂ ಆಶ್ರಮ ಬಿಟ್ಟು ಹೋಗಬೇಕಾದರೆ ಕಾಲುಗಳೇ ಮುಂದಕ್ಕೆ ಸಾಗಲೊಲ್ಲವು.

ಪ್ರಿಯಂ : ಸಖಿಯೇ, ತಪೋವನದ ವಿಯೋಗವಾಗುವದರಿಂದ ನಿನಗೊಬ್ಬಳಿಗೇ ದುಃಖವಾಗುತ್ತದೆಂದು ತಿಳಿಯಬೇಡ. ನಿನ್ನ ವಿಯೋಗವಾಗುವದೆಂದು ಎಲ್ಲಾ ಆಶ್ರಮಕ್ಕೇ ನಿನ್ನಂತೆ ದುಃಖವಾಗಿದೆ ನೋಡಿದೆಯಾ!

---

* एपापि प्रियेण विना गमयति रजनी विपाददीर्घतराम्
गुर्वपि विरहदुःखमशाबन्धः साहयति।।

(ಪದ)

ದಾಟಿ : "ಯಾತಕೆನ್ನನು ಎಬ್ಬಿಸಿ ತೆಕ್ಕೆಯೊಳಿರ್ದ ನಾಥನ್ನಗಲಿಸಿದಿರೆ" ಎಂಬ ಪದವಂತೆ.

ದುಃಖವಾಗಿಹುದಮ್ಮಯ್ಯಾ ||ಆಶ್ರಮವೃಕ್ಷ||
ಪಕ್ಷಿಪಶುಗಳಿಗೆಲ್ಲಾ ||ಪಲ್ಲ||
ಚಿಕ್ಕಂದಿನಿಂದಿಹ | ಸಕ್ಕರೆಯೊಲ್ ಸ್ನೇಹ-|
ದಕ್ಕನೀ ಪತಿಯಾಲ- |ಯಕ್ಕೆ ಪೋಗುವಿಯೆಂದು ||ಅನುಪಲ್ಲ||

ಪಾರಿಜಾತಾದಿಗಳು | ಕುಸುಮವೆಕ-
ಣ್ಣೀರಾಗಿ ಸುರಿಸುವವು ||
ತೋರತರುಗಳೆಲ್ಲ |ಸ್ತಬ್ಧವಾದವು ಕಳೆ-
ಬಳ್ಳಿಗಳು ಬಳಲಿ ಬಡವಾದವು ||೧||

ಗಿಳಿಗಳು ಫಲಗಳನು | ಅರ್ಧವೆ ಕಚ್ಚಿ
ನೆಲಕೆ ಬಿಸುಟುತಿಹವೆ ||
ಕಳವಳಿಸುತಲಿ ನ-| ವಿಲುಗಳು ವೃಕ್ಷಾಗ್ರ
ದೊಳಗೆ ನಿನ್ನೂರೆಷ್ಟು ದೂರೆಂದು ನೋಳ್ಪವು ||೨||

ಎಳೆಯ ದರ್ಭದೊಳು ನಿಂದು| ಮೇಯದೆ ಮೃಗ
ಗಳು ನಿನ್ನ ನೋಡುವವೆ ||
ಮೊಲೆಯನುಣ್ಣಲು ಬಂದ| ಎಳೆಯ ಗರುವನಾವು
ಗಳು ರೋಷದಿಂದ ಮುಂ | ದಲೆಯಿಂದಲಿರಿವವು ||೩||

ಶಕುಂ : ತಾತನೆ ನನ್ನ ಲತಾಭಗಿನಿಯಾದ ವನಜ್ಯೋತ್ಸ್ನೆಯ ಅನುಮೋದನವನ್ನು ತೆಗೆದುಕೊಂಡು ಬರುತ್ತೇನೆ.

ಕಾಶ್ಯಪ : ಆ ಬಳ್ಳಿಯಾ ನಿನ್ನಾ ಅಕ್ಕ ತಂಗಿಯರ ಮಾಯೆ ಉಂಟೆಂಬುದನ್ನು ನಾನು ಬಲ್ಲೆ. ಇಕೋ ನೋಡು ನಿನ್ನ ಬಲ ಭಾಗಕ್ಕೆ.

ಶಕುಂ : (ಲತೆಯ ಸಮೀಪಕ್ಕೆ ಹೋಗಿ) ಎಲೆ ವನಜ್ಯೋತ್ಸ್ನೆ, ನೀನು ಆಮ್ರವೃಕ್ಷವನ್ನು ಅಪ್ಪಿಕೊಂಡಿದ್ದರೂ ಇತ್ತ ಕಡೆಯಲ್ಲಿರುವ ಟೊಂಗೆಗಳಿಂದ ನನಗೆ ಆಲಿಂಗನವನ್ನು ನೀಡು. ಇಂದಿನಿಂದ ನಾನು ನಿನಗೆ ಬಹು ದೂರವಾಗಿ ಹೋಗುತ್ತೇನೆ. ತಾತನೆ, ಇಷ್ಟು ದಿವಸ ನನ್ನನ್ನು ಸಂರಕ್ಷಿಸಿದಂತೆ ಇನ್ನು ಮೇಲೆ ವನಜ್ಯೋತ್ಸ್ನೆಯನ್ನು ಕಾಪಾಡಬೇಕು ಬಲ್ಲೆಯಾ!

ಕಾಶ್ಯಪ : ನಿಮ್ಮಿಬ್ಬರ ವಿಷಯದಲ್ಲಿಯೂ ನಾನು ನಿಶ್ಚಿಂತನಾದೆ.

ವೃತ್ತ ||
ಕೊಡಬೇಕೆಂಬವನಿಂಗೆ ಕೂಡಿದೆಯೆಲೇ ನೀನಾಗಿ ಸತ್ಪುಣ್ಯದಿಂ |
ದೊಡೆಯಂತಕ್ಕವನಾದವಂ ದೊರೆತನೇ ಮೀನಾಕ್ಷಿ ಕೇಳ್ ಮಾವಿನ ||
ಗಿಡಮಂ ಪರ್ಬಿತು ಮಲ್ಲಿಕಾಲತೆಯುಮಿನ್ನಾಂ ಚಿಂತೆಯಂ ಬಿಟ್ಟೆ ಕೇಳ್
ನಡೆ ಮುನ್ನೋಡುತ ಸಾಗು ಮಾತುಗಳು ಇನ್ನೆಷ್ಟಾಡಲೇಂ ತೀರ್ಪವೆ ||

ಶಕುಂ : ಸಖಿಯರಾ, ಈ ವನಜ್ಯೋತ್ಸ್ನೆಯನ್ನು ನಿಮ್ಮಿಬ್ಬರ ಕೈಯಲ್ಲಿ ಕೊಟ್ಟಿದ್ದೇನೆ. ನೀವೇ ಸಂರಕ್ಷಣ ಮಾಡತಕ್ಕದ್ದು.

ಸಖಿಯರು : ಮತ್ತೆ ನಮ್ಮನ್ನು ಯಾರ ಕೈಯಲ್ಲಿ ಕೊಟ್ಟು ಹೋಗುತ್ತೀ? (ಕಣ್ಣು ತುಂಬ ನೀರು ತರುತ್ತಾರೆ.)

ಕಾಶ್ಯಪ : ಎಲೆ ಅನಸೂಯೆ, ಪ್ರಿಯಂವದೆ ಶಕುಂತಲೆಯ ಸಮಾಧಾನವನ್ನು ಮಾಡುವದು ಬಿಟ್ಟು ನೀವೇ ದುಃಖಿಸುತ್ತೀರಿ. ಇದು ಯೋಗ್ಯವಲ್ಲ.

(ಎಲ್ಲರೂ ಮುಂದೆ ನಡೆಯುತ್ತಾರೆ.)

ಶಕುಂ : ತಾತಾ ನಾನು ಇನ್ನೊಂದು ಬಿನ್ನಹ ಮಾಡಿಕೊಳ್ಳುತ್ತೇನೆ ಕೇಳು.

(ಪದ)

ದಾಟಿ : "ಕಾಮನ ಗಾಳಿ ಸೋಂಕಿತು ಪೇಮಲತಾಂಗಿಗೆ" ಎಂಬ ಪಾರಿಜಾತದೊಳಗಿನ ಪದದಂತೆ.

ಹೇಳಿ ಕಳುಹಿಸಯ್ಯಾ, ತಾತಯ್ಯ ಸುದ್ದಿಯ ||
ಮ್ಯಾಲೆ ಮ್ಯಾಲೆ ನಾನಲ್ಲೆ ಕೇಳಿ ಸುಖಿಸುವಂತೆ ||ಪಲ್ಲ||

ತಂದೆ ಕೇಳಯ್ಯ ಗರ್ಭ| ದಿಂದಲೆಶ್ರಮಿಸುತ
ಮಂದಮಂದವಾಗಿ ಮನೆ |ಹಿಂದೆ ತಿರುಗುತಿಹ
ದೊಂದೆರಳೆಯು ಕ್ಷೇಮ|ದಿಂದಲೀದವಾರ್ತೆಯ ||೧||

ಅಂಬೆಗಾಲಿಲಿ ಮನೆ | ತುಂಬ ಓಡಾಡುವ
ಅಂಬ ಋಷಿಯ ಕಂದಾ| ನುಂಬುವ ತನ್ನ ಕಯ್ಯ |
ಲೆಂಬುವದು ಮರೆಯದೆ | ಸಂಭ್ರಮದ ವಾರ್ತೆಯ ||೨||

ಶರೀರಕ್ಕೆ ಸಮರಾದ |ತರಳೆಯರೆನ್ನ ಸಖಿ |
ಯರು ಮದವೆಗಾದರು |ವರರ ನೋಡು ಸತ್ವರ|
ಕರೆಯ ಕಳುಹಿಸಯ್ಯಾ |ಕಾರ್ಯಕ್ಕೆ ಬರುವೆನು ||೩||

ಕಾಶ್ಯಪ : ಅಮ್ಮಾ, ನೀನು ಏನೂ ಚಿಂತೆ ಮಾಡಬೇಡ ಕಂಡೆಯಾ. ಹೋಗಬರುವವರ ಕೂಡ ಮೇಲಿಂದ ಮೇಲೆ ವರ್ತಮಾನವನ್ನು ಹೇಳಿ ಕಳುಹಿಸುತ್ತೇನೆ.

ಶಕುಂ : ಅವ್ವಯ್ಯಾ! ಕಾಲಿನಲ್ಲಿ ಏನು ಸುತ್ತಾಡುತ್ತದೆ ಇದು. (ಹಿಂದಿರುಗಿ ನೋಡುತ್ತಾಳೆ.)

ಕಾಶ್ಯಪ : ವತ್ಸೆ, ನೀನು ಮಗುವಿನಂತೆ ಜೋಕೆ ಮಾಡಿದ ಮೃಗವು ಕಂಡೆಯಾ ಇದು.

ವೃ || ತುದಿ ತುಟಿಯಲ್ಲಿ ಮುಳ್ಳ ಮೊನೆ ನೆಟ್ಟುದ ನೊಯ್ಯನೆ ಕೀಳ್ದು ನೊಯ್ಯದಿಂ
ಗುದಿಫಲದೆಣ್ಣೆಯಂ ತೊಡೆದು ಮಾಯಿಸಿ ಬಾಯೊಳು ಸಾವೆ ನೆಲ್ಲುಗಳ್
ಮೃದುಕರಪೆನ್ನೊಳಾಡಿಸುತ ಮುಷ್ಟಿಯಲಿಂ ತಿನಿಸಿರ್ದ ಮಾಯಮಿಂ |
ಏದು ಬಿಡದಮ್ಮ ನಿನ್ನ ಮಗನೊಲ್ ಮೃಗಮಂ ಬಿಗಿದಪ್ಪಿ ಮುದ್ದಿಸೆ ||

ಶಕುಂ : (ಅಗರ ಮೇಲೆ ಕೈಯಾಡಿಸಿ)

(ಪದ)

ದಾಟಿ : "ಮಗುವೇ ನೀ ಹೋಗಿ ಮಾಧವನ ಬಳಿಗಮ್ಮಾ | ಹರಣದ ಸುದ್ದಿ ತಂದರುಹಿದಲ್ಲಮ್ಮಾ || ಈ ಪಾರಿಜಾತದೊಳಗಿನ ಪದದಂತೆ.

ಕಂದಾ ಇನ್ಯಾತಕೆ ಬರುವೆ ಬಳಿಯಲ್ಲಿ | ನಾ -
ನಿಂದು ನಿನ್ನಗಲಿ ಪೋಗುವೆ ದೂರದಲ್ಲಿ ||ಪಲ್ಲ||
ಹೆತ್ತು ಪೋದಳು ನಿನ್ನ ತಾಯವ್ವ ಮುನ್ನ | ಆ-
ವೊತ್ತಿನಿಂದಲೆ ಕಾಪಾಡಿದೆನಲ್ಲೊ ನಿನ್ನ ||
ಪೊತ್ತು ಹೊತ್ತಿಗೆ ಪಾಲನಿಕ್ಕಿದೆ ಚಿನ್ನಾ | ಈ
ವೊತ್ತು ನಾನಿನಗಿಲ್ಲದಾದೆ ಪೋಗಿನ್ನು ||೧||

ಲೀಲೆಯ ನೋಡಿ ಆಲ್ಹಾದಿಸುತಿರ್ದೆ | ನಾ -
ಲೋಲನಯನ ನಿನ್ನ ಮಾತೆಯೊಲಾದೆ ||
ಬಾಲ ಇನ್ಯಾತಕ್ಕೆ ಸುಡು ಎನ್ನ ಹಾದೆ | ನಾ -
ಪಾಲಿಸುವ ಪುಣ್ಯವಿಂದಿಗೆ ತೀರಗೈದೆ ||೨||

ಯಾತರಿಂದಲೂ ನ್ಯೂನವಿಲ್ಲ ಕೇಳವ್ವಾ | ಈ -
ತಾತಯ್ಯನೆನ್ನೊಲು ನಿನ್ನ ಪಾಲಿಸುವ||
ನೀತಿಯ ಕರುವೆ ಬಿಡು ಎನ್ನ ಹಂಬಲವ | ನೀ -
ಪ್ರೀತಿಯ ಕಡೆಯು ಮುದ್ದಿಗೆ ನೀಡು ಮೊಗವ ||೩||
(ಎಂದು ದುಃಖಿಸುತ್ತಾ ನಿಲ್ಲುತ್ತಾಳೆ.)

ಕಾಶ್ಯಪ : (ಕುತ್ತಿಗೆ ಶಿರಗಳುಬ್ಬಿ ಬಂದು ಮಗಳನ್ನಪ್ಪಿಕೊಂಡು ಸಮಾಧಾನ ಮಾಡುತ್ತಾನೆ.)
ಬಳಬಳನಶ್ರು ಪೂರನಯನಂಗಳಲಿಂ ಸುರಿಸುತ್ತ ತಂದಿ ಕ-
ಣ್ಣಿಗಳ ತೆರದಿರ್ದು ಮುನ್ನಡಿಯ ಗಾಣದೆ ತಪ್ಪುವ ಹೆಜ್ಜೆ ದಾರಿಯೊಳ್ ||
ಇಳಿವರಿ ತಗ್ಗು ಮಿಟ್ಟೆಗಳ ನೋಡುತ ಸಾಗೆಲೆ ಕಷ್ಟದೋಳು ನೀಂ |
ತಳಮಳ ಗೊಳ್ಳಬೇಡ ಮನದೊಳ್ ಸ್ಥಿರಳಾಗೊರಿಸಮ್ಮ ನೇತ್ರವಾ ||
(ಎಂದು ಕಣ್ಣೊರಿಸುತ್ತಾನೆ.)

ಶಾರ್ಙ್ಗರವ : ಸ್ವಾಮೀ, ಆಪ್ತಜನರನ್ನು ಜಲಾಶಯದ ವರೆಗೆ ಕಳುಹಿಸ ಹೋಗಬೇಕೆಂದು ಶ್ರುತಿಯುಂಟು. ಅದರಿಂದ ಹೇಳತಕ್ಕದ್ದನ್ನು ಹೇಳಿ ತಾವು ಇದೇ ಸರೋವರದಿಂದ ಹಿಂದಿರುಗಬೇಕು.

ಕಾಶ್ಯಪ : ಒಳ್ಳೇದು, ಈ ಕ್ಷೀರವೃಕ್ಷದ ನೆರಳಿನಲ್ಲಿ ಸ್ವಲ್ಪ ಕುಳಿತುಕೊಳ್ಳೋಣ. (ಎಲ್ಲರೂ ಮರದ ಕೆಳಗೆ ಕುಳಿತುಕೊಳ್ಳುವರು.)

ಕಾಶ್ಯಪ : (ತನ್ನೊಳಗೆ) ದುಷ್ಯಂತರಾಜನಿಗೆ ಏನೆಂದು ಹೇಳಿ ಕಳುಹಿಸತಕ್ಕದ್ದು? (ಯೋಚಿಸುವನು.)

ಶಕುಂ : (ಅನಸೂಯೆಗೆ ಏಕಾಂತವಾಗಿ) ಸಖಿಯೆ ಅನಸೂಯೆ ಈ ಕೌತುಕವನ್ನು ನೋಡಿದೆಯಾ?

(ಪದ)

ದಾಟಿ : ಮನಸು ನಿಲುಕದಿ ಅರಿಯದವನೊಳು ಮನಸಿಜಾಗಮದಂದವೇ | ಕನಸಿನೊಳಗರನಿಮಿಷವಾದರು ಕಾಮತಂತ್ರವ ಬಲ್ಲನೊಳು ಸಾಕು|| ಎಂಬ ಪದದಂತೆ.

ಕಮಲದಳಮರೆಯಾಗಲಿನಯನಕಾಣದಲೆ ಗಾಬರಿಸಿ ನೋಡುತೆ
ಶ್ರಮವ ಬಡುತಿಹ ಚಕ್ರವಾಕಿಯ | ಅಮಮ ನೋಡಿ ನಾ ಸೈರಿಸಲಾರೆ ||ಪಲ್ಲ||
ಒಮ್ಮೆ ಮೇಲಕೆ ಜಿಗಿದು ಆಗಸ|| ವನ್ನೆ ಶೋಧಿಸಿ ಎಂಟು ದಿಕ್ಕಿನೊಳ್ |
ಸುಮ್ಮನೈದುತಲಲ್ಲಿಗಲ್ಲಿಗೆ | ಸಂಕಟದ ಸ್ವರದಿಂದೆ ಕರೆವದು ||೧||
ಬಂದು ತರುಗಳ ನೆರೆಸಮೂಹದೊ |ಳೊಂದೆ ಸಮನಾಲ್ಪರಿಯುತಲಿ ಬೇ-
ರೊಂದು ಶಾಖೆಯೊಳೀಕ್ಷಿಸುತ ಮನ | ಬೆಂದು ಸಂತಾಪದಲಿ ಬೇರ್ವದು ||೨||
ಮತ್ತೆ ಧೈರ್ಯವ ತಾಳ್ದು ಸರವನು| ಸುತ್ತಿ ನೆಲಸಮನಾಗಿ ತಿರುಗುತ
ಎತ್ತಲೆತ್ತಲು ಕಾಣದಲೆ ದೈನ್ಯ|ವೆತ್ತು ಬಿಡದಲೆ ತೊಳಲುತಿರುವದು ||೩||

ಅನ : ಸಖಿಯೇ, ಈ ಚಕ್ರವಾಕ ಸ್ತ್ರೀಯನ್ನು ನೋಡಿ ಖೇದಬಡಲಿಕ್ಕೆ ಕಾರಣವಿಲ್ಲ. ಯಾಕಂದರೆ ಹೇಳುತ್ತೇನೆ ಕೇಳು.

(ಪದ)

ದಾಟಿ : ಮೇಲಿನ ಪದದಂತೆ

ಕಾಂತನಗಲಿದ ಒಂದು ಕ್ಷಣವನು | ಇಂತು ಸೈರಿಸದಿರುವ ಪಕ್ಷಿಯಂ
ಚಿಂತೆಯೊಳು ಸಂತೋಷಿಸುತ ಯುಗ |ದಂಥ ರಾತ್ರಿಗಳನ್ನೆ ಕಳೆವದು ||
ಓಂದೆ ಕೂಡಿದ ಸಮಯದೊಳಗಿನಾ | ನಂದತರ ಕ್ರೀಡೆಗಳ ಮನದೊಳು
ತಂದು ತನ್ಮಯವಾಗಿ ಮೂರೊಳು | ಒಂದು ಪಾಲಿರುಳನ್ನೆ ಕಳೆವುದು ||೧||

ಮುಂದೆ ಕೂಡಿದ ಮೇಲೆ ವಿರಹದಿಂ | ನೊಂದ ಸುದ್ದಿಯನೆಲ್ಲ ನಲ್ಲನ
ಮುಂದೆ ಹೇಳುತೆ ಹೊಂದಿ ಸುಖಿಸುವೆ | ನೆಂದು ಸರುರಾತ್ರಿಯೊಳು ನೆನವುದು ||೨||

ಬೆಳಗು ಬರುವದು ಬರುವದೆನುತಲಿ | ಕಳೆಯನೇರುತ ಕಷ್ಟವೆಂಬ ಕ-
ತ್ತಲೆಯ ನಡಗಿಸಿ ಉಳಿದನಿಸಿಯನು | ಕಳೆವುದಾಶಾನಂದ ಪ್ರಭೆಯೊಳು ||೩||

ಕಾಶ್ಯಪ : ಎಲೈ ಶಾರ್ಙರವನೇ, ಶಕುಂತಲೆಯನ್ನು ಸಾರ್ವಭೌಮನ ಸ್ವಾಧೀನ ಮಾಡಿ ಆತನಿಗೆ ಇಷ್ಟು ಹೇಳು.

ಶಾರ್ಙರವ : ಸ್ವಾಮಿ, ಏನು ಹೇಳತಕ್ಕದ್ದು ಆಜ್ಞಾಪಿಸಬೇಕು.

ಕಾಶ್ಯಪ : ಆತನಿಗೆ ಇಷ್ಟೇ ಹೇಳತಕ್ಕದ್ದು -

ವೃ || ಮುನಿಜನ ಧರ್ಮಮಂ ತಿಳಿದು ನಿನ್ನಯ ತೋರ ಕೌಲಕ್ಕೆ ಲಕ್ಷ್ಯ
ವಿಟ್ಟಿನುಮತವಾಪ್ತರಿಷ್ಟರನು ಕೇಳದೆ ಗೈದಲೆ ನೇಹಮಿನ್ನು ನೀಂ ||
ನೆನೆದಿವಳನ್ನು ನಿನ್ನಿತರ ಪತ್ನಿಗಳಂತಿಡಬೇಕು ಮೇಲೆ ಬೊ||
ಮ್ಮನ ಬರಹಂ ನಿಜಂ ಬಿಡುವದೇ ಬಿಡುವದೇ ಬಿಡು ನಾವದ ನಾಡಬರ್ಪುದೆ ||

ಶಾರ್ಙರವ : ಒಳ್ಳೇದು ಸ್ವಾಮಿ ಇದರಂತೆ ತಿಳಿಸುತ್ತೇನೆ.

ಕಾಶ್ಯಪ : ಎಲೆ ವತ್ಸೆ, ಇನ್ನೊಂದು ಮಾತು ನಿನಗೆ ಹೇಳತಕ್ಕದಿದೆ. ನಾವು ಅರಣ್ಯದೊಳಗಿರುವವರಾದರೂ ಲೌಕಿಕವನ್ನು ಸ್ವಲ್ಪ ಬಲ್ಲೆವು.

ಶಾರ್ಙರವ : ತಮ್ಮಂಥ ಜ್ಞಾನಿಗಳಿಗೆ ಅಗೋಚರವಾದದ್ದು ಯಾವದುಂಟು?

ಕಾಶ್ಯಪ : ವತ್ಸೇ, ನಿನ್ನ ಮಂದಿರಕ್ಕೆ ಹೋದ ಮೇಲೆ ನೀನು ಈ ಪ್ರಕಾರ ನಡೆಯತಕ್ಕದ್ದು ಬಲ್ಲೆಯಾ:-

(ಪದ)

ದಾಟಿ : ತನ್ನ ಕಣ್ಣೊಳು ಒನಕೆಯನಿಟ್ಟು, ಅನ್ಯರ ಕಣ್ಣು ಕಸವನಾಯ್ವರಂತೆ ನಿನ್ನ ಆಚರಣೆಗೆ ನೀನೇ ಮೆಚ್ಚಿದ ಕೃಷ್ಣ, ಇನ್ನೊಬ್ಬರಹುದೆಂಬರಹುದೋ ಎಂಬ ಪದದಂತೆ.

ಪತಿಯ ಮಂದಿರಕೆ ನೀ ಪೋದ ಮೇಲಿನಿತು ಪ-
ದ್ಧತಿಯಿಂದೆ ನಡೆಯಬೇಕಮ್ಮ ಕೇಳು ||ಪಲ್ಲ||
ಹಿತದಿಂದೆಲ್ಲರಿಗು ನಮ್ರತೆಯದೋರುತ ಪ್ರೌಢ
ಮತಗಳಾಗಿರಲಿಬೇಕು ಜನದೊಳು ||ಅನುಪಲ್ಲ||

ಹಿರಿಯರ ಸೇವೆಯೊಳ್ ಪರಮ ತತ್ಪರಳಾಗು
ಕಿರಿಯರಿಗೆಲ್ಲ ಕರುಣವದೋರು |
ಸರಿಯ ಸವತಿಯರೊಳ್ ಸ್ನೇಹಗೂಡುವರು ಮ-
ತ್ಸರವ ಮಾಡಲು ಮನದೊಳು ತಾಳು ||೧||

ನಿನ್ನೊಳು ರಮಣನು ಅನ್ಯಾಯ ಮಾಡಲು |
ಕನ್ನೆ ಕೋಪಿಸಬ್ಯಾಡ ನಡತೆಯೊಳು ||
ಇನ್ನಿಷ್ಟು ಬಾಗಿ ಪ್ರಸನ್ನೀಕರಿಸು ಪತಿ-
ಯನ್ನೆ ಸೇವಕರೊಳು ದಯೆದೋರು ||೨||

ನಾನು ಸಾರುವುದೆಲ್ಲ ಲಕ್ಷ್ಯದೊಳಿಡು ಭಾಗ್ಯ-
ವಾನಳೆಂಬುವ ಗರುವಿಕೆ ದೂಡು ||
ಈ ನಡತೆಯ ಯುವತಿಯರೆಲ್ಲ ಜನರೊಳ್ಕು |
ಲೀನ ಸ್ತ್ರೀಯರೆಂದೆನಿಸುತಿಹರು ||೩||

ಹೇಗೆ? ಗೌತಮಮ್ಮಾ, ಇಷ್ಟೇಯೋ ಮತ್ತೇನಾದರೂ ಹೇಳತಕ್ಕದ್ದುಂಟೋ?

ಗೌತಮಮ್ಮ : ಹೆಣ್ಣು ಮಕ್ಕಳಿಗೆ ಹೇಳತಕ್ಕದ್ದು ಇಷ್ಟೇ ಸರಿ. ಹೇಳಿದ್ದೆಲ್ಲ ಧ್ಯಾನದಲ್ಲಿರಬೇಕಮ್ಮಾ ಶಕುಂತಲಾ!

ಕಾಶ್ಯಪ : ಹೇ ವತ್ಸೇ, ನನಗೂ ನಿನ್ನ ಸಖಿಯರಿಗೂ ಒಮ್ಮೆ ಆಲಿಂಗನವನ್ನು ನೀಡು.

ಶಕುಂ : (ತಂದೆಯನ್ನು ಆಲಿಂಗಿಸಿ) ತಾತಾ, ಪ್ರಿಯಂವದೆ ಮೊದಲಾದ ಸಖಿಯರು ಇಲ್ಲಿಂದಲೇ ತಿರುಗಿ ಹೋಗುವರೇ?

ಕಾಶ್ಯಪ : ವತ್ಸೆ, ಇವರ ಲಗ್ನವಾಗತಕ್ಕದ್ದದೆ. ಆದ್ದರಿಂದ ನಿನ್ನ ಕೂಡ ಬರಲಾರರು. ಗೌತಮಮ್ಮನು ಮಾತ್ರ ನಿನ್ನ ಸಂಗಡ ಬರುತ್ತಾಳೆ.

---

* शुश्रूषस्व गुरून्कुरु प्रियसखीवृत्तिं सपत्नीजने
भर्तृर्विप्रकृतापि रोषणतया मा स्म प्रतीपं गमः ।
भूयिष्ठं भव दक्षिणा परिजने भाग्येष्वनुत्सेकिनी
यान्त्येवं गृहिणीपदं युवतयो वामाः कुलस्याधयः ।।

ಶಕುಂ : (ತಂದೆಯನ್ನು ಆಲಿಂಗಿಸಿ) ತಾತಾ. ಮಲಯಗಿರಿಯಿಂದ ಚಂದನಲತೆಯು ಮೂಲ ಸಹಿತ ಕಿತ್ತು ಬೀಳುವಂತೆ ನಾನು ನಿನ್ನಂಕದಿಂದಿಳಿದು ದಿಗಂತರಕ್ಕೆ ಹೋದ ಮೇಲೆ ನನ್ನ ಪ್ರಾಣವು ಹ್ಯಾಗೆ ಉಳಿದೀತು?

ಕಾಶ್ಯಪ : ವತ್ಸೆ, ಈ ಮಾತು ಮನಸಿನಲ್ಲಿ ತಂದು ಯಾತಕ್ಕೆ ಭಯಪಡುತ್ತೀ? ನಿನ್ನ ಪತಿಯ ಮಂದಿರಕ್ಕೆ ಹೋದ ಮೇಲೆ ನಮ್ಮ ಸ್ಮರಣೆ ಮಾಡಲಿಕ್ಕೆ ಸಹ ನಿನಗೆ ಅವಕಾಶ ದೊರೆಯಲಿಕ್ಕಿಲ್ಲ ಬಲ್ಲೆಯಾ!

(ಪದ)

ದಾಟಿ : "ಅಹುದಾದರಹುದೆನ್ನಿ ಅಲ್ಲಾದರಲ್ಲೆನ್ನಿ" ಎಂಬ ಪುರಂದರದಾಸರ ಪದದಂತೆ.

ಆಗಲಿ ಪೋಗುವುದಕ್ಕೆ ದುಃಖವ್ಯಾಕೆ ||

ಮಗುವೆ ನಿನ್ನಯ ಪತಿಯು ಜಗದೊಡೆಯನಮ್ಮಾ ||ಪಲ್ಲ||
ಅತಿ ಕುಲೀನನೆ ನಿನ್ನ | ಪತಿಯವನ ಮನೆಯೊಳಗೆ
ಸತಿಯಾಗಿ ಬಾಳ್ವುದೆ ಶ್ಲಾಘ್ಯ ನಿನಗೆ ||
ಮತಿಯೆಲ್ಲ ಮುಳುಗಿ ಸಂ| ತತ ನಿನ್ನ ಮನೆಯ ಬಹು|
ಕೃತಿಗಳೊಳು ತವರ್ಮನೆಯ| ಸ್ಮೃತಿಯಾಗದಮ್ಮಾ ||೧||

ಇನನು ಪ್ರಾಚಿಯೊಳುದಯವನೆ ಗೈದ ತೆರನಂತೆ |
ತನಯ ನಿನ್ನೊಳು ಪುಟ್ಟಲಂಕದೊಳು ||
ಅನುದಿನದೊಳಿಟ್ಟು, ಮೋಹದಿ ಮುದ್ದಿಸಲು ಬಂಧು- |
ಜನವಿರಹದಿಂದಾದ ಕಷ್ಟವೆಲ್ಲಿಹುದು ||೨||

ಪರಿಪರಿಯ ವಿಭವದೊಳು | ಪತಿಯೊಡನೆ ಹರುಷದೊಳು |
ಸರಸ ಸವಿಮಾತುಗಳ ಸೌಖ್ಯ ಬಹಳು ||
ಮರೆಸಿಬಿಡುವದು ಎಮ್ಮ ನರಗಳಿಗೆಯೊಳು ನೀ ತ-
ವರ ಮನೆಯ ನೆನೆಸುವದು ಬಹುದಿನ ಕನಸು ||೩||

ಶಕುಂ : (ತಂದೆಯ ಚರಣದಲ್ಲಿ ಮಸ್ತಕವನ್ನಿಟ್ಟು) ತಾತಾ, ನಾನು ಹೋಗಿ ಬರಲಿಯಾ?

ಕಾಶ್ಯಪ : ನಿನ್ನ ಮನೋರಥ ಪೂರ್ಣವಾಗಲಿ.

ಶಕುಂ : (ಸಖಿಯರಿಗೆ) ಎಲೆ ಗೆಳತಿಯರಾ, ನೀವಿಬ್ಬರು ಏಕಕಾಲಕ್ಕೆ ನನಗೆ ಆಲಿಂಗನವನ್ನು ನೀಡಿರಿ. ಇನ್ನು ಮೇಲೆ ನಿಮ್ಮ ದರ್ಶನವು ನನಗೆ ದುರ್ಲಭವಾಗುವದು. ಈವೊತ್ತಿನವರೆಗೂ ಸ್ನೇಹಭಾವದಿಂದ ನಿಮ್ಮನ್ನು ಕಷ್ಟಪಡಿಸಿದ್ದನ್ನು ಕ್ಷಮಿಸಿ ನನ್ನಲ್ಲಿ ಲೋಭವಿಡಬೇಕು ನಾನು ದೂರ ಹೋದೆನೆಂದು ಬಿಡಬಾರದು ಬಲ್ಲಿರಾ!

ಸಖಿಯರು : (ಶಕುಂತಲೆಯನ್ನು ಆಲಿಂಗಿಸಿ) ಜೀವದ ಗೆಳತಿಯೆ, ನೀನು ಹೋದ ಮೇಲೆ ಆಶ್ರಮದಲ್ಲಿ ಒಂದೊಂದು ದಿವಸವು ಒಂದೊಂದು ಯುಗದ ಹಾಗೆ ತೋರೀತು ಬಲ್ಲೆಯಾ; ನಿನ್ನ ಸ್ಮರಣೆಯಾಗದೆ ಒಂದು ಕ್ಷಣ ಸಹ ಹೋಗಲಿಕ್ಕಿಲ್ಲ. ಸಖಿಯೆ ಇನ್ನೊಂದು ಮಾತು ಹೇಳುತ್ತೇವೆ ಕೇಳು. ನೀನು ರಾಜಗ್ರಹದಲ್ಲಿ ಹೋದಮೇಲೆ ಆತನಿಗೆ ಒಂದು ವೇಳೆ ವಿಸ್ಮೃತಿಯಾಗಿ ನಿನ್ನ ಗುರುತು ಹಿಡಿಯದಿದ್ದರೆ ಆತನು ಕೊಟ್ಟ ಮುದ್ರಿಕೆಯನ್ನು ತೋರಿಸು ಬಲ್ಲೆಯಾ.

ಶಕುಂ : ಅವ್ವಯ್ಯಾ! ಈ ಮಾತು ಕೇಳಿಯೇ ನನ್ನ ಮೈಯಲ್ಲಿ ನಡುಗು ಹುಟ್ಟುತ್ತಿದೆ. ಹೀಗಾದೀತೇನೆ?

ಸಖಿಯರು : ಹಾಗಲ್ಲವೆ, ಅತಿ ಸ್ನೇಹದಿಂದ ಕೆಟ್ಟ ಕಲ್ಪನೆಗಳು ಸಹ ಮನಸ್ಸಿನಲ್ಲಿ ಬರುತ್ತವೆ.

ಶಾರ್ಙರವ : (ತನ್ನೊಳಗೆ) ಎಷ್ಟು ಹೊತ್ತು ಹರಟೆ ಹಚ್ಚಿದ್ದಾರೋ? (ಪ್ರಕಾಶ) ಹೊತ್ತೇರಿತು. ಬೇಗ ಮುಗಿಸಿರೆಮ್ಮಾ ಇನ್ನು.

ಶಕುಂ : (ಆಶ್ರಮದ ಕಡೆಗೆ ನೋಡಿ) ತಾತಾ ನಾನು ಈ ತಪೋವನವನ್ನು ಎಂದಿಗೆ ಕಾಣಬೇಕು?

ಕಾಶ್ಯಪ : ಹೇಳುತ್ತೇನೆ ಕೇಳು.

ವೃ || ಚತುರ ಸಮುದ್ರ ಸೀಮೆ ಪೃಥಿವೆಮ್ಮನ ಕೂಡೆ ಸಪತ್ನಿಯಾಗಿ ದಂ-
ಪತಿಗಳು ದೀರ್ಘಕಾಲ ಪರಿಯಂತರ ಸೌಖ್ಯಮಸುಂಡು ಪುತ್ರನ-
ಪ್ರತಿಮ ಪರಾಕ್ರಮಂ ತಳೆವ ನಾತನಿಗೊಪ್ಪಿಸಿ ರಾಜ್ಯಭಾರಮಂ
ಪತಿಯನೆ ಕೂಡಿಕೊಂಡು ತಿರುಗೀ ಸ್ಥಳವಾಸಕೆ ಸಾಗಿಬಾಹುವೇ ||

ಗೌತಮಮ್ಮ : ಶಕುಂತಲೆ, ಬಿಸಿಲು ಬಹಳಾಯಿತು. ಇನ್ನು ಮೇಲೆ ನಿನ್ನ ತಾತನನ್ನು ತಿರುಗಿಸು. ನೀವೇ ಹಿಂತಿರುಗಬೇಕು. ಎಷ್ಟು ಹೊತ್ತಾದರೂ ಇವಳು ಹೀಗೆಯೇ ಮಾತಾಡುತ್ತ ನಿಂತಾಳು.

ಕಾಶ್ಯಪ : ವತ್ಸೆ, ನಮ್ಮ ತಪೋನುಷ್ಠಾನದ ಹೊತ್ತು ಮೀರುತ್ತದೆ.

ಶಕುಂ : (ಪಿತನನ್ನು ಮತ್ತೆ ಆಲಿಂಗಿಸಿ) ತಾತಾ ತಪಶ್ಚರ್ಯ ಕಷ್ಟದಿಂದಲೇ ಶರೀರವು ಕ್ಷೀಣವಾಗಿದೆ. ಇನ್ನು ನನ್ನ ಚಿಂತೆಯಿಂದ ಮತ್ತೂ ಜೀವಕ್ಕೆ ಕಷ್ಟಪಡಿಸಬಾರದು ಕಂಡಿರಾ.

---

* अभिजनवतो भर्तुः श्लाघ्ये स्थिता गृहिणीपदे
विभवगुरुभिः कृत्यैस्तस्य प्रतीक्षणमाकुला।
तनयमचिरात्प्राचीवार्कं प्रसूय च पावनं
मम विरहजां न त्वं वत्से शुचं गणयिष्यसि ।।

ಕಾಶ್ಯಪ : (ನಿಟ್ಟುಸಿರು ಬಿಟ್ಟು) ವತ್ಸೆ, ನನ್ನ ಕಷ್ಟವು ಹೇಗೆ ಶಮನವಾದೀತು!

ಸುತ್ತಲು ಮಾಶ್ರಮದೊಳ್ನೀಂ |
ಬಿತ್ತಿ ಬೆಳಸಿರಾ ನೀವಾರ ಧಾನ್ಯಮಂ ನೋ||
ಡುತ್ತಲಕಟ ಹೃದಯಂ ಬಿ-
ಚ್ಚುತ್ತಿಹುದೇಕೇಳ್ ಪೊಟ್ಟೆಯ ಕರುಳೇ ತರಳೇ ||

ಹೇ ವತ್ಸೆ, ಹೋಗಿ ಬಾ ಇನ್ನು; ನಿನ್ನ ಮಾರ್ಗವು ಕಲ್ಯಾಣಪ್ರದವಾಗಲಿ.

(ಶಕುಂತಲೆಯೂ ಸಂಗಡ ಹೋಗತಕ್ಕವರೂ ಹೋಗುತ್ತಾರೆ.)

ಸಖಿಯರು : (ಶಕುಂತಲೆಯನ್ನು ನೋಡುತ್ತ) ಶಕುಂತಲೆ ನಮ್ಮನ್ನು ಬಿಟ್ಟು ನಡೆದಳು. ಓಹೋ ಮರೆಯಾದಳು! ಕಾಣಿಸದಾದಳು!

ಕಾಶ್ಯಪ : (ನಿಟ್ಟುಸುರು ಬಿಟ್ಟು) ಅನಸೂಯೆ, ನಿಮ್ಮ ಸಖಿಯು ಹೋದಳಷ್ಟೇ. ಒಳ್ಳೇದು, ಶೋಕ ಮಾಡಲಿಕ್ಕೆ ಕಾರಣವಿಲ್ಲ. ನಡೆಯಿರಿ ಆಶ್ರಮಕ್ಕೆ ಹೋಗೋಣ.

ಸಖಿಯರು : ತಾತಾ, ಶಕುಂತಲೆಯು ಹೋದುದರಿಂದ ಆಶ್ರಮವು ಭಣಭಣ ಸುರಿಯುತ್ತದೆ. ಅಲ್ಲಿ ಹ್ಯಾಗೆ ಹೋಗಬೇಕು ಇನ್ನು?

ಕಾಶ್ಯಪ : ತಂಗಿಯರಾ, ಅತಿ ಸ್ನೇಹದಿಂದ ಹೀಗೆ ಕಾಣುತ್ತದೆ. (ಸ್ವಲ್ಪ ಹೊತ್ತು ವಿಚಾರ ಮಾಡಿ) ಅನಸೂಯೆ, ಶಕುಂತಲೆಯು ಹೋದದ್ದರಿಂದ ದುಃಖವಾದದ್ದಂತೂ ಸರಿಯೆ. ಆದರೂ ಅವಳನ್ನು ಪತಿಯ ಬಳಿಗೆ ಕಳುಹಿದ್ದರಿಂದ ನಾನು ನಿಶ್ಚಿಂತನಾದೆ ಕೇಳು.

ಕಂದ || ತಿಣ್ಣಾಗಿಹ ತಲೆ ಹೊರೆಯಿದು
ಹಣ್ಣಾಗಿಹ ಬಾಳೆಗೊನೆ ಗಿಡವ ಬಾಗಿಸುವಾ||
ಅನ್ಯರ ಧನವಿದು ಮನೆಯೊಳ್ |
ಹೆಣ್ಣಿರಬಾರದು ಬಹುದಿವಸ ತವರುಮನೆಯೊಳ್ ||

(ನಿಟ್ಟುಸಿರು ಬಿಟ್ಟು) ನಡೆಯಿರಿನ್ನು ಆಶ್ರಮಕ್ಕೆ ಹೋಗೋಣ.

(ಎಲ್ಲರೂ ಹೋಗುತ್ತಾರೆ.)

ನಾಲ್ಕನೆಯ ಅಂಕವು ಮುಗಿದುದು.

೫ನೆಯ ಅಂಕವು

ಕಂಚುಕಿಯು ಬರುತ್ತಾನೆ

ಕಂಚುಕಿ : ಅಯ್ಯೋ, ಏನು ನನ್ನ ಅವಸ್ಥೆ ಆಯಿತಪ್ಪಾ! ಅತಿವೃದ್ಧನಾಗಿ ಹೋದೆನಲ್ಲ ನಾನು!

ಚಂಪಕವೃತ್ತ|| ಪೊಡವಿಪರಲ್ಲಿ ಯಾಳುಗಳು ಕೈಯೊಳು ಮಾನದ ಚಿನ್ನವೆಂದು ಪೊಂ|
ಬಡಗೆಯನಂದದಿಂದ ಪಿಡಿದರ್‌ಮುದಿವಂದುದು ರಾಜಸೇವೆಯೊಳ್ ||
ನಡುನಡುಗುತ್ತಲೆನ್ನವಯವಂಗಳು ತಾಳವು ತಮ್ಮ ಧಾರವೆ-
ಮ್ಮೊಡೆಯನ ಪುಣ್ಯದಿಂದೆನಗಿದಾದುದು ಕೋಲಿ ನೊಲೂರ
ಲೀಗಲು ||೧||

ಈಗಲೇ ಹೋಗಿ ಈ ವರ್ತಮಾನವನ್ನು ಮಹಾರಾಯನಿಗೆ ಶ್ರುತಪಡಿಸುವೆನು. (ಮುಂದೆ ಹೋಗಿ) ನಾನು ಯಾವ ವರ್ತಮಾನವನ್ನು ಹೇಳತಕ್ಕದ್ದು? ಇಷ್ಟರಲ್ಲಿಯೆ ಮರೆತು ಬಿಟ್ಟೆನು! (ವಿಚಾರಿಸಿ) ಹಾ, ಹಾ! ಅಹುದಹುದು ನೆನಪಾಯಿತು. ಕಣ್ವ ಋಷಿಗಳ ಬಳಿಯಿಂದ ಶಿಷ್ಯರು ಬಂದಿದ್ದಾರೆಂಬುವದು. ಅಯ್ಯೋ, ವೃದ್ಧಾಪ್ಯಕಾಲದಲ್ಲಿ ಮನುಷ್ಯನ ಅವಸ್ಥೆ ಏನಾಗಿ ಹೋಗುತ್ತದಯ್ಯಾ! ಇದೇ ನಾನು ಕಣ್ವ ಶಿಷ್ಯರು ಬಂದಿದ್ದಾರೆಂಬ ವರ್ತಮಾನವನ್ನು ಹೇಳುವದಕ್ಕೆ ಬಂದೆ. ಇಷ್ಟರಲ್ಲಿಯೇ ದಾರಿಯಲ್ಲಿ ಮರೆತುಬಿಟ್ಟೆ. ಮತ್ತೆ ಈಗ ನೆನಪು ಮಾಡಿಕೊಂಡೆ. ಎಣ್ಣೆ ತೀರಿದ ದೀಪ ಹ್ಯಾಗೋ ಹಾಗೆ ವೃದ್ಧ ಮನುಷ್ಯನ ಚಿತ್ತವಾಗುತ್ತದೆ. (ಅತ್ತಿತ್ತ ತಿರುಗಾಡುತ್ತ) ಮಹಾದೊರೆಗಳವರು ಇದೇ ಧರ್ಮಾಸನದಿಂದ ಎದ್ದಿದ್ದಾರೆ. ನಾನು ಈಗಲೇ ಹೋಗಿ ಈ ವರ್ತಮಾನವನ್ನು ಹೇಳಿ ಶ್ರಮಪಡಿಸುವದು ಯೋಗ್ಯವಲ್ಲ. ಆದರೂ, ನ್ಯಾಯದ ಕೆಲಸದಲ್ಲಿ

ಆಲಸ್ಯ ಉಪಯೋಗದ್ದಲ್ಲ. ಪ್ರಜರುಗಳ ಸಂರಕ್ಷಣೆ ಮಾಡುವದೇ ಅರಸನ ಕಾರ್ಯವಾಗಿರುತ್ತದೆ. ಆತನಿಗೆ ವಿಶ್ರಾಂತಿಯೆಲ್ಲುಂಟು?

ಚಂ. ವೃ. : ರವಿ ರಥಕೊಮ್ಮೆ ಜೋಡಿಸಿದವಶ್ವಗಳಿನ್ನುವರಿಂಗೆ ನಿಲ್ಲವೀ
ಪವನನ್ನು ಗಂಧಮಂ ವಹಿಸಿಕೊಂಡಿರುಳೊಳ್ಪಗಲೋಳ್ತೊಳಲ್ದಿಹಂ
ಭುವನದ ಭಾರಮಂ ಪೆಡೆಯೊಳಿಟ್ಟಿಹ ಸಂತತ ಶೇಷರಾಜನಿಂ|
ನ್ನಿವರ ತೆರಂ ನೃಪಂಗೆ ಪ್ರಜರಂ ಪೊರೆವಂಗಿನಿತಿಲ್ಲ ವಿಶ್ರಮಂ ||೧||

ಆದರೆ ನನಗೆ ನೇಮಿಸಿದಂಥ ಕಾರ್ಯವನ್ನು ನಾನು ಮಾಡತಕ್ಕದ್ದೇ ಸರಿ. (ಮುಂದಕ್ಕೆ ಬಂದು) ಮಹಾದೊರೆಗಳವರು ಇಲ್ಲಿ ಕುಳಿತುಕೊಂಡಿದ್ದಾರೆ.

ಚಂ.ವೃ. ವನದೊಳು ತನ್ನ ಗೂಡ ಬಳಗಂಗಳ ನೆಲ್ಲವ ಕೊಂಡು ಮೆಯ್ಯ ಬಲ್ಲ|
ದಣಿದು ಗಜಂ ರವಿಪ್ರಖರ ತಾಪಕೆ ಸೀತ ಗುಹಕ್ಕೆ ಪೋಪವೊಲ್
ಅನುದಿನ ತನ್ನ ಮಕ್ಕಳೊಳು ಮಂದಿಯ ನ್ಯಾಯವ ತೀರಗೈದು ತಾಂ |
ಮನಸಿನ ವಿಶ್ರಮಂ ಕೊಡುವ ಕಾರ್ಯಕೆ ಬಂದಿಹನಿಲ್ಲಿ ಭೂವರಂ ||೧||

(ಇಷ್ಟರಲ್ಲಿ ಅರಸನೂ ವಿದೂಷಕನೂ ಸೇವಕ ಜನರೂ ಬರುತ್ತಾರೆ.)

ಅರಸು : (ರಾಜಾಧಿಕಾರ ಕಷ್ಟದಿಂದ) ತಾವು ಬಯಸಿದ ಪದಾರ್ಥವು ಪ್ರಾಪ್ತಿಯಾದ ಮೇಲೆ ಸರ್ವ ಪ್ರಾಣಿಮಾತ್ರರಿಗೆ ಸೌಖ್ಯವುಂಟಾಗುತ್ತದೆ. ಆದರೆ ಅರಸುಗಳಿಗೆ ಇಚ್ಛಿತಾರ್ಥವು ಸಿದ್ಧಿಯಾದ ಬಳಿಕ ವಿಶೇಷವಾಗಿ ಚಿಂತೆ ಬಾಧೆಪಡಿಸುತ್ತದೆ.

ಚಂ.ವೃ. ಮನದೊಳಗಿಪ್ಪ ದುತ್ಸುಕತೆ ಪೋಪುದು ಮುಂದಧಿಕಾರವಂದಮೇ |
ಅನುದಿನರೊಳರಸ್ನು ಪರಿಪಾಲನೆಗೈಯ್ಯುವ ಚಿಂತೆಯೋಳ್ಪುನ ||
ಶ್ಚನೊಯುವದೇ ಹೃದಂ ಬಿಡದು ರಾಜ್ಯದ ಭಾರವಿದೆಲ್ಲ ಹಸ್ತದಾ|
ಗಿನ ಕೊಡೆಯಂತೆ ದುಃಖಸುಖಗಳ್ಸರಿ ಯಾಗಿಯೇ ನೀಡುತಿರ್ಪುದು||

(ತೆರೆಯಲ್ಲಿ ವೈತಾಳಿಕರು ಹೊಗಳುತ್ತಾರೆ.)

ಒಬ್ಬನು:-

ಚಂ. ವೃ. ಪೃಥಿವಿಯ ಗಂಡ ನೀನಹುದಲಾ ಕ್ಷಮೆ ನಿನ್ನೊಳು ಪೂರ್ಣವಿಪ್ಪುದೈ |
ಪ್ರತಿದಿನದಲ್ಲಿ ನೀಂ ನಿರಭಿಲಾಷಿಯೆ ನಿನ್ನ ಸುಖಕ್ಕೆ ಮಂದಿಯಾ ||
ಹಿತಕನುಕೂಲವಾಗಿ ಶ್ರಮವಟ್ಟಪೆ ತಾಪವ ತಾಳ್ದು ತಾ ನಿಜಾ |
ಶ್ರಿತ ಜನರಿಂಗೆ ತಂಪು ನೆಳಲಂ ಮಿಗೆ ನೀಡುವ ವೃಕ್ಷದಂತೆವೊಲ್ ||

ಎರಡನೆಯ ಸ್ತುತಿಪಾಠಕನು :

ಚಂ. ವೃ. ಕೆಡಕುತನಕ್ಕೆ ಪೋಪ ಜನರನ್ನುರೆ ಶಿಕ್ಷಿಸಿ ಸಾಧುಮಾರ್ಗದೋ-
ಳಿಡಿಸುವೆ ಕಜ್ಜಮಂ ಮುರಿದು ಶಾಂತಿಯದೋರುವೆ ನೀ ಪ್ರಜಂಗಳೊಳ್
ಬಡವರು ಭಾಗ್ಯವಂತರು ಸಮಾನರು ನಿನ್ನಯ ರಾಜ್ಯದೊಳ್ಸುಖಂ
ಬಡುತಿಹರೆಲ್ಲರಿಂಗೆ ನಿಜಮಿತ್ರ ನಿಜಾಪ್ತನು ನೀನೆಭೂವರಾ ||

ಅರಸು : ಜನರ ಕಾರ್ಯಗಳನ್ನು ತೀರಗೈದು ದಣಿದ ನನ್ನ ಮನಸು ಈ ಸ್ತುತಿ ಪಾಠರ ನುಡಿಗಳನ್ನು ಕೇಳಿ ಪುನಃ ಉಲ್ಹಾಸಪೂರಿತವಾಯಿತು. (ಕುಳಿತುಕೊಳ್ಳುತ್ತಾರೆ.)

(ಇಷ್ಟರಲ್ಲಿ ಹಿಂದೆ ವೀಣಾನಾದವಾಗುತ್ತದೆ.)

ವಿದೂಷಕ : (ಕಿವಿಗೊಟ್ಟು ಕೇಳಿ) ನನ್ನ ಒಡ್ಯಾ, ಒಂದ ಜರ ಕೇಳವ ! ಸಂಗೀತ ಸಾಲ್ಯಾಗ ಯಾರೋ ತಾಳದ ಮ್ಯಾಗ ಒಳೇ ಸವಿಜಾತಿ ಹಾಡತಾರು. ಹಂಸ ಪದಿಕಾ ಎಂಬ ಪಾತರದಾಕಿ ಕುಯಿಗೂಡತಾಳ ಕಾಣತತಿ.

ಅರಸು : ಹಾಗಾದರೆ ಸ್ವಲ್ಪ ತಾಳು ಕೇಳುವಾ!

ಕಂಚುಕಿ : (ತನ್ನೊಳಗೆ) ಮಹಾದೊರೆಗಳವರ ಚಿತ್ತವು ಎರಡನೆಯ ಕಡೆಗೆ ಹೋಗಿದೆ. ಋಷಿಗಳು ಬಂದ ವರ್ತಮಾನವನ್ನು ಸ್ವಲ್ಪ ಹೊತ್ತು ನಿಂತು ಆಮೇಲೆ ಹೇಳುವ.

(ತೆರೆಯಲ್ಲಿ ಗಾಯನವಾರಂಭವಾಗುವುದು.)

(ಪದ)

ಡಾಟಿ : ಬತಾದೆಸನು ಪಂಜಾಬ ಕಿತಸಾ ದೂರ್ ||ಪಲ್ಲ|| ಪಂಜಾಬ ಕಿಜತಿಯಾ |
ಬಡೆಬಡೆ ಆಂಖಿಯಾ | ಮುಖಪರ ಬರ ಸತ ನೂರ್ ||೧||

ಮರೆವರೇನೊ ನೀ ಚೂತ ಮಂಜರಿಯಾ ||ಪಲ್ಲ||
ಕಮಲವಸತಿಯಿಂ | ಭ್ರಮರ ನೀ ಮದವೇ - |
ರಿ ಮನೋಹರ ತರಿಯಾ ||೧||
ನವಮಧುವನೆ ಕಂ|ಡವಿನಯತರದ ನೀ
ಸವಿದ ಸುದ್ದಿಯನರಿಯಾ ||೨||
ಕಾಡೊಳು ಕ್ಷುಧೆಬಲ್| ಪೀಡಿಸಲಮೃತವ
ನೀಡಿದವಳ ನೆನೆಯಾ ||೩||

ಅರಸು : ಈ ಗಾಯನದಲ್ಲಿ ಪ್ರೇಮರಸವು ತುಂಬಿ ಸೂಸುತ್ತದೆ.

ವಿದೂಷಕ : ಏನಪಾ, ಈ ಹಾಡಿನ ಅರತೇನ?

ಅರಸು : (ನಕ್ಕು) ಒಮ್ಮೆ ಸ್ನೇಹಗೂಡಿದವಳನ್ನು ತ್ಯಾಗ ಮಾಡಿದಂಥ ಪುರುಷನಿಗೆ

ಬೋಧಪರವಾದ ಅರ್ಥವಿದೆ. ನನ್ನ ರಾಣಿಯಾದ ವಸುಮತಿಗೋಸ್ಕರವಾಗಿ ನನ್ನ ನಿರ್ಭತ್ಸನೆ ನಡೆದಿದೆ; ಇದರಲ್ಲಿ ಸಂದೇಹವಿಲ್ಲ. ಹನುಮ ನಾಯಕಾ, ನೀನು ಹಂಸಪದಿಕೆಯ ಬಳಿಗೆ ಹೋಗಿ "ನನ್ನ ಉಪವಾಸವನ್ನು ಚೆನ್ನಾಗಿ ಮಾಡಿದೆ. ಇನ್ನು ಮೇಲೆ ದಯಮಾಡಿ ಸಾಕುಮಾಡು" ಎಂದು ಹೇಳಿ ಬಾ ಹೋಗು.

ವಿದೂಷಕ : ಒಳ್ಳೇದಪಾ ; ನೀ ಇಲ್ಲೇ ಕುಂತಕ್ಯಾಸಿ ನನಗ ಇಂತಾ ಕೆಲಸ ಹೇಳತ ಬಾ! ಒಳೆ ಶಾಣ್ಯಾ! ನಾ ಅಲ್ಲೆ ಹೋದಗಳಿಗ್ಗೆ ದುಪು ದುಪೂ ಹಾಕ್ಕೊಂಡ ಬಡದರ ನೀ ಬಿಡಸಾಕ ಬರತೀಯಾ?

ಅರಸು : ನೀನು ಹೋಗಿ ಸಾತ್ವಿಕ ರೀತಿಯಿಂದ ಹೇಳು. ಅಂದರೆ ನಿನ್ನನ್ನು ಯಾರೂ ಹೊಡೆಯುವುದಿಲ್ಲ.

ವಿದೂಷಕ : ಹಂಗರ ಹೋಗಬೇಕೇನ? ಪಕ್ಕನ ಬಡದರ ಅಲ್ಲಿಂದ ಒದರತೇನ್ನಾ! ನನ್ನ ದನಿ ಕೇಳಿದ ಗಳಿಗ್ಗೆ ನೀ ಓಡಿ ಬಾ. (ಹೋಗುತ್ತಾನೆ.)

ಅರಸು : (ತನ್ನೊಳಗೆ) ನಾನು ಒಂದು ಸಾರೆ ಸ್ನೇಹ ಮಾಡಿ ತ್ಯಾಗ ಮಾಡಿದ್ದು ನನ್ನ ಸ್ಮರಣೆಯಲ್ಲಿ ಎಲ್ಲಿಯೂ ಇಲ್ಲ. ಆದರೂ ಈ ಹಾಡನ್ನು ಕೇಳಿ ನನ್ನ ಮನಸ್ಸಿಗೆ ಏನು ಕಾರಣ ಅಸಮಾಧಾನವಾಗಿದ್ದೀತು?

(ಪದ)

ದಾಟಿ : ಛಲವ್ಯಾತಕೋ ನಲ್ಲಾ| ನಿನ್ನ ನಂಬಿದ| ಚದುರೆಯೊಳ್ ಥರವಲ್ಲಾ|| ಮಲಯ ಗಿರಿಭವ ಪವನನಟ್ಟುಳಿ! ಗಳುಕಿ ಕಡು ರೋಷದಲಿ ವಾನರ| ಕುಲವ ಪಳಿದೊಂದ ಮಲರಾಗವ| ತಿಳಿದು ಸ್ವರಗೈಯ್ಯುವ ಪ್ರವೀಣೆಯೊಳ್ || ಎಂಬ ಪದದಂತೆ.

ಎಂಥ ಸೋಜಿಗವಯ್ಯ ||ಎನ್ನಯ ಮನಸು||
ಇಂತು ನೋಯುವದ್ಯಾತಕೆ ||ಪಲ್ಲ||

ಪಿಂತೆ ಸ್ನೇಹದೊಮ್ಮೆ ಕೂಡಿದ ಕಾಂತೆಯರಸಗಲಿಲ್ಲವನ್ಯರಿ ||
ಗಿಂಥ ನುಡಿಗಳನಾಡಿದೊಡೆ ಎನ್ನಂತರಂಗದಿ ಕರಳುಗರಗುವವೆಂಥಾ ||ಅನುಪಲ್ಲ||

ಚಲುವ ಶಬ್ದವ ಕೇಳಲು || ಅತಿಶಯ ಮೋಹ || ಗೊಳಿಪ ವಸ್ತುವ ನೋಡಲು ||
ಬಳಿಕ ಸುಖಿವೃತ್ತಿಯುಸು ಜರೆಯುವ ತಳೆದು ಪರಿಯುತ್ಸುಕತೆಯನು ಮನ ||
ಸ್ಖಳವಳಿಸಿ ಸ್ಥಿರಗೊಂಡು ನಿಲ್ಲದೆ ತೊಳಲುತಲಿ ಚಿಂತೆಯೊಳು
ಮುಳುಗುವದೆಂಥ..... ||೧||

ಹಿಂದೆ ಮಾಡಿದ ಗೋಷ್ಠಿಯ ||ಮರೆತು ಪೋಗ-||
ಲೆಂದೊ ಕಂಡಿಹ ಸ್ವಪ್ನವು ||
ಎಂದು ಮನಸಿನೊಳೊಂದು ಪರಿಯದ |ರಂದದೊಲು ಮಾತುಗಳು ಕಣ್ಣಿನ |
ಮುಂದೆ ಬೀಳಲು ಮೃಗಜಲದವೊಲು | ಮಂದಸ್ಮೃತಿಯ
ತರಂಗದೋರುವದೆಂಥ.... ||೨||

ಅಲ್ಲ ಈಗಿನ ಮಾತಿದು || ಹಿಂದಿನ ಜನ್ಮ ||
ದಲ್ಲಿ ಮಾಡಿದ ಸ್ನೇಹವು |
ಎಲ್ಲ ಮರೆದಿರುವದು ಸಹಜವೀವ್ಯಾಳ್ಯದೊಳು ಸ್ಮರನಂಗದೊಲು ಸ್ಮೃತಿ ||
ಯಲ್ಲಿ ಬಂದಿರೆ ಮನಸು ಹಲಬುವದಲ್ಲದೆಲೆ ಬ್ಯಾರಿಲ್ಲ ತಿಳಿಯದು ||
ಎಂಥ.... ||೩|| *

ಕಂಚುಕಿ : ವಿಜಯೋಸ್ತು, ಜೀಯಾ; ಹಿಮವತ್ಪರ್ವತದ ಸಮೀಪದಲ್ಲಿರುವ ಅರಣ್ಯದಲ್ಲಿರವಂಥ ತಪಸ್ವೀ ಜನರು ಒಬ್ಬ ತರುಣ ಸ್ತ್ರೀಯಿಂದ ಸಹಿತರಾಗಿ ಕಣ್ವ ಮಹಾಮುನಿಗಳವರ ನಿರೋಪವನ್ನು ತೆಗೆದುಕೊಂಡು ಬಂದಿದ್ದಾರೆ. ವಿದಿತವಾಗಿ ಆಜ್ಞಾಪಿಸತಕ್ಕದ್ದು.

ಅರಸ : ಕುಲಗುರುಗಳಾದ ಕಣ್ವ ಮಹಾಮುನಿಗಳವರ ಬಳಿಯಿಂದ ತಪಸ್ವಿಗಳು ಬಂದಿದ್ದಾರೆಯೊ?

ಕಂಚುಕಿ : ಹೌದು ಜೀಯಾ!

ಅರಸು : ಹಾಗಾದರೆ ಹೋಗಿ ಸೋಮರಾತ ಪುರೋಹಿತರಿಗೆ ಈ ವರ್ತಮಾನವನ್ನು ತಿಳುಹಿಸಿ. 'ಅವರನ್ನು ವಿಧಿಪೂರ್ವಕವಾಗಿ ಆದರಸತ್ಕಾರಗೊಳಿಸಿ' ಇತ್ತ ಕಡೆಗೆ ಕರೆದುಕೊಡು ಬರಬೇಕೆಂದು ಹೇಳು. ಇಷ್ಟರಲ್ಲಿ ನಾನು ತಪಸ್ವೀ ಜನರ ದರ್ಶನವನ್ನು ತೆಗೆದುಕೊಳ್ಳುವ ಸ್ಥಳಕ್ಕೆ ಹೋಗಿ ದಾರೀ ನೋಡುತ್ತಿರುತ್ತೇನೆ.

ಕಂಚುಕಿ : ಮಹದಾಜ್ಞೆ. (ಹೋಗುತ್ತಾನೆ.)

ಅರಸು : (ಎದ್ದು) ಎಲೆ ವೇತ್ರವತಿಕೆ, ಹೋಮಶಾಲೆಗೆ ಹೋಗುವ ದಾರೀ ತೋರಿಸು.

ವೇತ್ರವತಿಕೆ : ಹೀಗೆ ಬನ್ನಿ ಸ್ವಾಮೀ.

(ಅರಸು ಮುಂದೆ ನಡೆಯುತ್ತಾನೆ.)

---

* रम्याणि वीक्ष्य मधुराश्र मधुराश्र निशम्य शब्दा-
न्पर्युत्सुकीभवति यत्सुखितोऽपि जन्तुः ।
तच्चेतसा स्मरति नूनमवोधपूर्वं
भावस्थिराणि जननान्तरसौहदानि ।।

ವೇತ್ರವತಿಕೆ : ಸ್ವಾಮೀ, ಇದು ಹೋಮಶಾಲೆಯ ಮಂಟಪವು. ಸಾರಿಸಿ ರಂಗೋಲೆ ಹಾಕಿದ್ದಾರೆ. ಇಲ್ಲಿ ಹೋಮಧೇನು ಕಟ್ಟಿದೆ. ಮೇಲಕ್ಕೆ ಏರಬೇಕು.

ಅರಸು : (ಮೇಲಕ್ಕೇರಿ ದಾಸಿಯ ಹೆಗಲ ಮೇಲೆ ಕೈಯಿಟ್ಟು) ಎಲೆ ವೇತ್ರವತೀ ಕಣ್ವ ಋಷಿಗಳ ಬಳಿಯಿಂದ ಏನು ಕಾರಣ ತಪಸ್ವಿಗಳು ಬಂದಿರಬಹುದು?

ಮತ್ತೆ ಭವಿಕ್ರೀಡಿತ

ವೃತ್ತ || ವನದೊಳ್ ದುಷ್ಟರು ವಿಘ್ನವಾದರೊ ತಪಶ್ಚರ್ಯಕ್ಕೆ
ಕಾಂತಾರದೊಳ್ |
ಮುನಿಗಳ್ ನೊಂದರೊ ಕಾಡಕ್ರೂರ ಮೃಗಗಳ್ಗಾಭೂರು
ಹಂಗಳ್ಗೆ ನಾ-
ನಯತ್ವಂ ತಳೆಯಲ್ ಫಲಂಬರವೊ ಮತ್ತೇನಾದುದೋ ರಾಷ್ಟ್ರದೊಳ್
ಮನಸುದ್ವಿಗ್ನತೆಯಿಂದ ಕಾಯ್ದುದು ಋಷಿಂಗಳ್ ಬಂದರೇ ಕಕ್ಕಟಾ ||೧||

ವೇತ್ರವತಿ : ಮಹಾರಾಜರ ಭುಜಪರಾಕ್ರಮದಿಂದ ಆಶ್ರಮಪದವು ನಿಷ್ಕಂಟಕವಾಗಿರಲು ಹೀಗೆ ಆಗಲಾರದು. ದೊರೆಗಳವರ ಸತ್ಕೃತ್ಯದಿಂದ ಸಂತುಷ್ಟರಾಗಿ ದರ್ಶನಾರ್ಥಿಗಳಾಗಿ ಬಂದಿರಬಹುದು.

(ಕಂಚುಕಿ, ಪುರೋಹಿತ, ಶಕುಂತಲೆ, ಗೌತಮಮ್ಮ, ತಪಸ್ವಿಗಳು ಬರುವರು.)

ಕಂಚುಕಿ
ಪುರೋಹಿತ : } ಸ್ವಾಮಿನ್ ಹೀಗೆ ಬನ್ನಿ.

ಶಾರ್ಙರವ : ಎಲೋ ಮಿತ್ರಾ ಶಾರದ್ವತಾ, ಈ ರಾಜನು ಮಹಾ ಭಾಗ್ಯಶಾಲಿಯಾದಂಥವನು ಬಲ್ಲೆಯಾ?

ವಿಭಾವರಿ ವೃ.

ನಯಜಲಂ ಪರಿವ ಪೇರ್ನದಿಯೆಂಬೊಲಿ |
ಲ್ಲಿಯ ಜನೌಘದ ಸುಸಂಗಮು ಮೊಪ್ಪೆ ಮೇಣ್ ||
ಜಯದ ಘೋಷವೆ ತರಂಗದ ನಾದಕೇಳ್ |
ದಯದ ಸಾಗರನಿಗಾಗರ ಮೀ ಪುರಂ ||

ಈ ನಗರದ ಸೌಂದರ್ಯವನ್ನು ನೋಡಿದೆಯಾ.

ದ್ರುತವಿಲಂಬಿತ ವೃತ್ತ ||
ಮನೆಗಳೇಂ ಮುಗಿಲಿಂದಿಳಿದಿರ್ಪವೊ|
ಜನರು ನಿರ್ಜರ ರಾಜನ ಮಕ್ಕಳೊ |
ಕನಕ ರತ್ನದರಣ್ಯವೊ ಪಟ್ಣವೊ||
ಕನಡಿಯೋ ನೃಪವೀಥಿಯೋ ಮಿತ್ರ ಪೇಳ್ ||

ಇಷ್ಟು ದೊಡ್ಡ ರಾಜಮಾರ್ಗವಿದ್ದು ನಮಗೆ ಹೋಗಲಿಕ್ಕೆ ದಾರಿಯೇ ಇಲ್ಲವಲ್ಲಯ್ಯಾ? ಎಷ್ಟು ಜನದಟ್ಟಣೆಯಿದು.

ವೃತ್ತ

ಮುತ್ತಿ ಮುತ್ತಿ ನಡೆವರ್ಜನರೋಣಿಯೊ |
ಳೆತ್ತಲೆತ್ತಳು ರಥಂಗಳು ಮಧ್ಯದೊಳ್ ||
ಹತ್ತಿ ಹತ್ತಿ ಬರುವಾನೆಯ ತಂಡದೊಳ್ ||
ಹತ್ತಿಹತ್ತಿ ಪೋಗುವರ್ತುರಂಗಂಗಳಂ ||

ಮಾಲತೀವೃತ್ತ

ಕರಿಗಳಿಂಗೆ ರಥಂ ರಥಗಳ್ಪರಲ್ |
ಹರಿಗಳಾ ಹರಿಯೈತರೆ ಮಂದಿ ಸ-|
ತ್ವರದಿ ಮಂದಿಗೆ ಪೆಣ್ಗಳವರ್ಗ್ಯೆತೀ |
ಶ್ವರರವರ್ಗೆ ಗಜಂ ಕೊಡಗುಂ ಪಥಂ ||

ಆದರೂ ಹೇ ಶಾರದ್ವತಾ ಕೇಳು.

ವೃತ್ತ

ಇಂತಿಲ್ಲೀಜನ ವಿಷಯೋಪಭೋಗದಾಶಾ
ಸಂತಾಪೋಷದಿ ಮುಳುಗಿರ್ಪುದನ್ನೆ ನೋಡಲ್ ||
ಕಾಂತಾರಸ್ಥ ನೆನಗಿದೆಲ್ಲ ಕಿಚ್ಚು ಹತ್ತಿ |
ರ್ದಂಥಾ ಮಂದಿರವೆನೆ ತೋರುತಿರ್ಪುದಯ್ಯಾ||

ಶಾರದ್ವತ : ಹೇ ಮಿತ್ರಾ, ನೀನು ಹೊಸದಾಗಿಯೇ ನಗರದಲ್ಲಿ ಬಂದಿಹೆ. ಆದದರಿಂದ ನಿನಗೆ ಹೀಗೆ ತೋರುತ್ತದೆ. ನನಗೂ ಏನೋ ಒಂದು ಚಮತ್ಕಾರವಾಗಿ ಕಂಡುಬರುತ್ತದೆ.

ಕಂದ || ಮುಕ್ತನಮುಕ್ತರನೆ ಶುಚಿ -
ವ್ಯಕ್ತನಶುಚಿಯಂ ಪ್ರಬುದ್ಧನಾ ಸುಪ್ತರನ |
ಭ್ಯಕ್ತನ ಮಲಿನನ ವಿಷಯಾ-
ಸಕ್ತರ ನಾವಿದೆನೋಳ್ಪುದು ಸರಿಯಾಗಿಹವೈ ||

ಶಕುಂತಲೆ : (ಅಪಶಕುನವನ್ನು ಸೂಚಿಸಿ) ಅಮ್ಮಯ್ಯಾ, ನನ್ನ ಬಲಗಣ್ಣು ಯಾತಕ್ಕೆ ಹಾರುತ್ತಿದ್ದೀತೇ?

ಗೌತಮಮ್ಮ: ಭರ್ತೃಕುಲದೇವತಾ ಪ್ರಸಾದದಿಂದ ಅಮಂಗಲವೆಲ್ಲ ನಾಶವಾಗಿ ಶುಭ ದೋರಲೆಮ್ಮಾ; ಏನೂ ಚಿಂತೆ ಮಾಡಬೇಡ. ಆಗುವುದು ಬೇರೆ ತಪ್ಪುವದಿಲ್ಲ. ಒಳ್ಳೇದು. (ಎಲ್ಲರೂ ಮುಂದೆ ನಡೆಯುವರು.)

ಪುರೋಹಿತ : (ಅರಸನನ್ನು ತೋರಿಸಿ) ಹೇ ತಪಸ್ವಿನ್ ವರ್ಣಾಶ್ರಮ ರಕ್ಷಕನಾದ ಮಹಾರಾಯನು ತಮ್ಮ ದರ್ಶನಾರ್ಥಿಯಾಗಿ ದಾರಿ ನೋಡುತ್ತ ಕುಳಿತು ಕೊಂಡಿದ್ದಾನೆ. ಹೋಗಬೇಕು.

ಶಾರ್ಙರವ : ಹೇ ಮಹಾಬ್ರಾಹ್ಮಣರೇ, ಮಹಾರಾಯನ ವೃತ್ತಿಯನ್ನು ಕಂಡು ಬಹು ಸಮಾಧಾನವಾಗುತ್ತದೆ. ಆದರೂ ಈ ಮಾತಿನ ಆಶ್ಚರ್ಯವು ನಮಗಾಗುವುದಿಲ್ಲ. ಹ್ಯಾಗೆಂದರೆ ಕೇಳಿರಿ!

ಭಾ. ಷ.

ತರುಕುಲಂ ಫಲಕಾಲದೊಳ್ಬಾ|
ಗಿರುವದಾಗಸ ಬಿಟ್ಟು ಧರಣಿಗೆ|
ಬರುವವು ಘನಂಗಳು ನವಾಂಬುಕಣಂ ಸಮೃದ್ಧಿಸಲು ||
ಕರುಣಿಪರು ಸಂಪತ್ತು ಬರೆ ಸ-
ತ್ಪುರುಷರೆಂಬವರಿನ್ನು ದಯೆದಿಂ-
ಪರರಿಗುಪಕೃತಿ ಗೈವದರೊಳ್ ಜನ್ಮಗುಣವಿಹುದ್ಯ|| *

ವೇತ್ರವತಿಕೆ : ಸ್ವಾಮಿನ್ ಋಷಿಗಳು ಪ್ರಸನ್ನಮುಖರಾಗಿ ಕಾಣುತ್ತಾರೆ. ಇವರಿಗೆ ಏನೂ ದುಃಖವಾಗಿಲ್ಲವೆಂಬಂತೆ ತೋರುತ್ತದೆ.

ಅರಸು : (ಶಕುಂತಲೆಯನ್ನು ನೋಡಿ) ಓಹೋ! ಇವಳು ಎಂಥ ತಪಸ್ವಿನಿ!

(ಪದ)

ದಾಟಿ : ಕಂಡಿರಾ || ರಂಗನಾ ಗುಣ ಕಂಡಿರಾ ||ಪಲ್ಲ|| ಕಂಡವಳನು ಕೂಡಿಕೊಂಡೆನ್ನ ಮೀರದ|| ಅನುಪಲ್ಲ|| ಪಾರಿಜಾತದೊಳಗಿನ ಈ ಪದದಂತೆ.

ಯಾರಯ್ಯಾ! | ಇಂಥವಳಿವಳ್ಯಾರಯ್ಯ ||ಪಲ್ಲ||

ಮೋರೆ ನೋಡಿ ಮೋಹಬೀರಿ ನಗುವಳಿವಳಾರಯ್ಯಾ ||ಅ.ಪ.||
ಜರದ ದುಕೂಲವನುಟ್ಟು || ಚಂದ್ರ-
ಕರದೊಲ್ ಶಲ್ಯದ ಮುಸುಕಿಟ್ಟು || ಅಹಾ-
ಕೊರಳ ಹಾರಗಳು ಬೊಗರೆ ಕುಚ ಮಧ್ಯದೊ||
ಳ್ಮೆರೆಯೆ ಮುನಿಗಳೊಳ್ ತಾ| ಮರೆಯಾಗಿ ನಿಲ್ಲುವಳಾರಯ್ಯ.... ||೧||

---

* भवन्ति नम्रास्तख फलागमे र्नवामइवभिर्द्दूर विलाम्मना धनाः
अनुद्धताः मत्युद्धाः सगृदेभिः सागव एचैष परोपकारिणाम।।

ಇವಳ್ಯಾವಳೊ ಸ್ವರ್ಗದವಳು | ನಿ-
ಟ್ಟಿಳವನಿಯಲ್ಲಿಲ್ಲ ದೊಸ್ತಗಳು | ಅಹಿ-
ಮವದಚಲದಿ ಸಣ್ಣ ಧವಳಗಂಗೆಯಂ ಪರಿ||
ಯುವತೆರನಿವರೊಳ್ ಪೊಳೆವ ಚಂದ್ರವದನೆಯಳಾರಯ್ಯ ||೨||

ಬಾಲೆ ನೋಡುವಳೆನ್ನ ಕದ್ದು| ಮೇಲೆ-
ಮೇಲೆ ಮುಗುಳುನಗೆ ಮುದ್ದು || ಇವ-
ರೊಳು ಪಾಂಡುಪತ್ರ| ದೊಳಿಹಕಿಸಲಯ|
ದೋಲಿಹ ಬಗೆಯನಾ | ಕೇಳಿ ನೋಡುವೆನಿವಳ್ಯಾರಯ್ಯ.... ||೩|| *

ವೇತ್ರವತಿಕೆ: ಸ್ವಾಮೀ, ಇವಳನ್ನು ನೋಡಿ ನನಗೂ ಕೌತುಕವಾಗುತ್ತದೆ. ಈ ವಿಷಯದಲ್ಲಿ ನನ್ನ ತರ್ಕವೂ ಸಾಗುವದಿಲ್ಲ. ಆದರೂ ಇವಳ ಸೌಂದರ್ಯವು ನೋಡತಕ್ಕದ್ದಾಗಿದೆ.

ಅರಸು : ಇರಲಿ; ಪರಸ್ತ್ರೀಯನ್ನು ನೋಡುವದು ಯೋಗ್ಯವಲ್ಲ.

ಶಕುಂ : (ಉರದಲ್ಲಿ ಕೈಗಳನ್ನಿಟ್ಟು ತನ್ನೊಳಗೆ) ಎಲೆ ಹೃದಯವೆ, ಇಷ್ಟರಿಂದಲೇ ಕಂಪಿತವಾಗಬೇಡ. ಆರ್ಯಪುತ್ರನ ಪ್ರೀತಿಯನ್ನು ಮನಸ್ಸಿನಲ್ಲಿ ತಂದು ಸ್ವಲ್ಪ ಸಮಾಧಾನ ಹೊಂದು.

ಪುರೋಹಿತ : (ಮುಂದಕ್ಕೆ ಬಂದು) ರಾಜನ್, ಶಾಸ್ತ್ರರೀತ್ಯಾ ಇವರ ಆದರಸತ್ಕಾರವಾಯಿತು. ಇನ್ನು ಮೇಲೆ ತಮ್ಮ ಗುರುಗಳಾದ ಕಣ್ವ ಮಹಾಮುನಿಗಳ ಆಜ್ಞೆಯನ್ನು ತಿಳಿಸುವದಕ್ಕೋಸ್ಕರ ಬಂದಿದ್ದಾರೆ. ಅದನ್ನು ಕೇಳಿಕೊಳ್ಳಬೇಕು.

ಅರಸು : ಹೇಳಬಹುದು. ನಾನು ಸಿದ್ಧನಾಗಿದ್ದೇನೆ.

ಋಷಿಗಳು : ವಿಜಯಸ್ವರಾಜನ್.

ಅರಸು : ಸರ್ವರಿಗೂ ಅಭಿವಂದನೆ ಮಾಡುತ್ತೇನೆ.

ಋಷಿಗಳು : ಇಷ್ಟ ಮನೋರಥ ಪ್ರಾಪ್ತಿರಸ್ತು.

ಅರಸು : ಹೇ ತಪಸ್ವಿನ್, ತಪಶ್ಚರ್ಯವು ನಿರ್ವಿಘ್ನದಿಂದ ನಡೆಯುತ್ತಿರುವುದಷ್ಟೆ?

ಋಷಿಗಳು : ಹೇ ಮಹಾರಾಜಾ ಕೇಳು.

---

* का स्विदवगुण्ठनवती नातिपरिस्फुटशरीरलावण्या
मध्ये तपोधनानां किसलयामिव पाण्डुपत्राणाम् ।।

ಕಂದ || ಸುಮನುಷ್ಯರ ರಕ್ಷಿಪನೀ |
ನೆಮಗಕ್ಷಯಮಿರೆ ವಿಘ್ನಬಂದಪುದೇನೈ ||
ತಮವಾವಿರ್ಭವಿಸುವಂದೆ- |
ತು ಮಹಿಗೆ ಘರ್ಮಾಂಶು ಬೀಸೆ ಬಿಸಿಕಿರಣಗಳು||

ಅರಸು : (ತನ್ನೊಳಗೆ) ಹಾಗಾದರೆ ರಾಜಶಬ್ದವು ನನಗೆ ಸಾರ್ಥಕವಾಗಿದೆ. (ಪ್ರಕಾಶವಾಗಿ) ಕಣ್ವ ಮಹಾಮುನಿಗಳು ಲೋಕಕಲ್ಯಾಣಾರ್ಥವಾಗಿ ಕುಶಲರಾಗಿದ್ದಾರಷ್ಟೇ?

ಋಷಿಗಳು : ತಮ್ಮ ಕೃಪೆಯಿಂದ ಸುರಕ್ಷಿತರಾಗಿದ್ದು ತಪಸ್ಸಿದ್ಧಿಯ ಅನುಭವವನ್ನು ತೆಗೆದುಕೊಳ್ಳುತ್ತ ಸೌಖ್ಯದಿಂದಿದ್ದಾರೆ. ತಮ್ಮ ಕುಶಲಪ್ರಶ್ನ ಪೂರ್ವಕವಾಗಿ ಒಂದು ವಿಜ್ಞಾಪನೆ ಮಾಡಿಕೊಂಡಿದ್ದಾರೆ.

ಅರಸು : ಭಗವಾನ್ ಕಣ್ವ ಋಷಿಗಳು ಏನೆಂದು ಆಜ್ಞಾಪಿಸಿದ್ದಾರೆ ಸ್ವಾಮಿ?

ಶಾರ್ಙರವ : ತಾವು ಅವರ ಕನ್ನೆಯಗೂಡ ಪರಸ್ಪರ ಸಂಕೇತದಿಂದ ಗಾಂಧರ್ವ ವಿವಾಹ ಹೊಂದಿ ಅವಳನ್ನು ಸ್ವೀಕರಿಸಿದ್ದು ಅವರ ಮನಸ್ಸಿಗೆ ಬಹು ಆನಂದಕರವಾಗಿ ಅವರು ಹೇಳಿದ್ದೇನೆಂದರೆ - ಕೇಳಿ:-

(ಪದ)

ದಾಟಿ : ಕೋಮಲಾಂಗ ನಿನಗೆ ತಕ್ಕ ಮೋಹನಾಂಗಿಯು | ಕಾಮ ಶಾಸ್ತ್ರ ಪ್ರೌಢೆ ಕಾಳಾಹಿ ವೇಣಿಯು ||ಪಲ್ಲ|| ಎಂಬ ಪದದಂತೆ.
ದೇವ ನಿನಗೆ ದೊರೆತಳಯ್ಯ ದಿವ್ಯ ಮೃದುತನು |
ದಾವನಜಗೆ ದೂಷಿಸುವನು ನ್ಯಾಯವಂತನು ||ಪಲ್ಲ||
ಸುಮನಪ್ರಿಯ ಸಂಪಿಗೆಯ ಸಮಾನ ತೇಜಳೋ|
ಸುಮನಶರನರೂಪ ನಿನಗೆ ರತಿಯೆ ಮಾಜಳೋ||
ಸುಮನಸಪತಿಸುಮನೆ ಇವಳಪ್ಸರೆಯ ತನುಜಳೋ||೧||
ಕುವಲಯವಾಹ್ಲಾದಿಸುವದು ನಿನ್ನ ಕೀರ್ತಿಯು|
ಕುವಲಯಾಕ್ಷಿ ನಿನ್ನೊಳು ಕೇಳ್ ಪ್ರೀತಿ ಪೂರ್ತಿಯು||
ಕುವರೆ ಎನ್ನ ಕರುಳೆ ಸತ್ಕೀರ್ತಿಯುದ ಮೂರ್ತಿಯು ||೨||
ಸದಯ ಹೃದಯ ನಿನಗೆ ತಕ್ಕ ಮೃದು ನಡತೆಯುಳ್ಳೋ||
ಸದನವ ಶೋಧಿಸುತ ಬಂದ ಯೋಗ್ಯ ಸತಿಯಳೋ|
ಸದೆಯುದಿಹದ ನೀತಿಯಿಂದೆ ಧೀರುಮತಿಯುಳ್ಳೋ||೩||

ಹೀಗೆಂದು ಹೇಳಿಕೊಂಡಿದ್ದಾರೆ. ಮಹಾರಾಯಾ, ಆದರೆ ನಿನ್ನ ಪತ್ನಿಯನ್ನು ನೀನು ಮನೆಯಲ್ಲಿ ಕರೆದುಕೊಂಡು ಧರ್ಮಾಚರಣವನ್ನು ಮಾಡತಕ್ಕದ್ದು. ಇವಳು ಗರ್ಭವತಿಯಾಗಿದ್ದಾಳೆ. ಕಾರಣ ಯಥಾ ಯೋಗ್ಯರಕ್ಷಣೆಯಾಗತಕ್ಕದ್ದು, ಸರಿ.

ಗೌತಮಮ್ಮ : ಆರ್ಯರೆ, ನಾನು ಏನಾದರೂ ಹೇಳಿಕೊಳ್ಳಬೇಕೆನ್ನುತ್ತೇನೆ. ಆದರೆ ಹೇಳಿಕೊಳ್ಳತಕ್ಕಂಥದು ಏನೂ ಉಳಿಯಲಿಲ್ಲ. ಇವಳು ತನ್ನ ಗುರುಜನರನ್ನು ಕೇಳಲಿಲ್ಲ. ತಾವೂ ಬಂಧು ಜನರ ಅನುಮತಿಯನ್ನು ತೆಗೆದುಕೊಳ್ಳಲಿಲ್ಲ. ಇಬ್ಬರೂ ಪರಸ್ಪರ ಪ್ರೀತಿಯಿಂದ ಆಚರಣವನ್ನು ಮಾಡಿರುತ್ತೀರಿ. ಇನ್ನು ಎರಡನೆಯವರು ಮತ್ತೂ ವಿಶೇಷವಾಗಿ ಪ್ರೀತಿ ಮಾಡಬೇಕೆಂಬುದು ಏನು ಹೇಳತಕ್ಕದ್ದು?

ಶಕುಂ : (ತನ್ನೊಳಗೆ) ಈ ಮಾತಿಗೆ ಪೌರವರಾಯನು ಏನು ಪ್ರತ್ಯುತ್ತರವನ್ನಾಡುತ್ತಾನೋ?

ಅರಸು : ಯಾವ ಜನ್ಮದಲ್ಲಿಯ ಮಾತಿದು!

ಶಕುಂ : (ತನ್ನೊಳಗೆ) ಅಪ್ಪಾ ಕೇಡಾಯಿತೆ! ಇವು ಮಾತುಗಳಲ್ಲ. ಬಾಯಿಯಿಂದ ಜ್ವಾಲೆಗಳೇ ಹೊರಟವು. (ಎದೆ ಒಡೆದು) ಇಷ್ಟು ಉಪಹಾಸ ಮಾಡಿದ್ದು ಸಾಲದೆ ಇನ್ನೂ ಆಗಬೇಕೆಂದಿದ್ದರೆ ಆಗಲಿ! ಅಂಥದೇನು ನಾನು ಮಾಡಿದ್ದು?

ಶಾರ್ಙರವ : ರಾಜನ್ ತಾವು ಲೋಕವ್ಯವಹಾರದಲ್ಲಿ ನಿಷ್ಣಾತರು. ಕುಳಿತುಕೊಂಡು ಬಾಯಿಯಿಂದ ಹೀಗೆ ಮಾತನಾಡುವುದು ಯೋಗ್ಯವಲ್ಲ.

(ಪದ)

ದಾಟಿ : ರಂಗಯ್ಯಾ ಬಾರನೇ ಸಖಿಯೇ||ಪಲ್ಲ|| ಮಾರಾ ಕ್ರೂರ ಘೋರ ತಾಪದಿಂದ| ತಾರಾಪತಿಗೆ ಶರಣುಹೋದೆ|| ಎಂಬ ಪದದಂತೆ.

ಇದಲ್ಲೋ ರಾಯ ನೀತಿಯು ||ಪಲ್ಲ||

ಮುನಿಧರ್ಮದೊಳಿಹ| ಕನಿಕೆಯ ವಿಭವದ
ಕೊನೆಗೇರಿಸೀಗ ನೂಂಕಿದೆಯೋ ||೧||

ಪ್ರೀತಿಯ ಮಗಳೋರ್ವ | ಳೀ ತರುಣಿಯು ವೃದ್ಧ|
ನಾತಾಪಸನಿಗತಿ ಕಷ್ಟೋ ||೨||

ತವರ ಮನೆಯೊಳಿರ | ಲವಳೊಳ್ ಜನರು ಸಂದೇ-
ಹವ ನೀಡುವುದು ಸಹಜಿಕವೊ ||೩||

ಅರಸು : ಇದು ಏನನ್ನು ಮಾತನಾಡುತ್ತಿದ್ದೀರಿ ಸ್ವಾಮಿ! ಇವಳ ನನ್ನ ವಿವಾಹವಾಗಿರುವದೋ ಎಂದಾದರು?

ಶಕುಂ : (ವಿಷಾದ ಹೊಂದಿ ತನ್ನೊಳಗೆ) ಹೃದಯವೆ, ನಿನ್ನ ಆ ಶಂಕೆ ತಪ್ಪಲಿಲ್ಲ. ನಿಜವಾಗಿ ಹೋಯಿತು.

ಶಾರ್ಙರವ : (ಸಿಟ್ಟಿನಿಂದ) ಇದು ಎಂಥ ಆಶ್ಚರ್ಯವಯ್ಯಾ?

ಕಂದ || ಮಾಡಿದ ಕೃತ್ಯಕೆ ಪಶ್ಚಾತ್
ಗೂಡಿರೆ ತಾಪವ ನೀತಿಯನೆ ಬಿಡುವರೇನೈ||

ಅರಸು : ಈ ಅಸತ್ಕಲ್ಪನೆ ಯಾರಿಂದಾಗುತ್ತದೆ ಸ್ವಾಮಿ?

ಶಾರ್ಙರವ : ಕೇಡಿಗಳೈಶ್ವರ್ಯ ಬರಲ್
ಕಾಡುವರೀಪರಿ ಮಂದಾಧರ್ರೈ ಬಡಜನರ ||೧||

ಅರಸು : ಇದು ಮತ್ತೂ ವಿಶೇಷಾಶ್ಚರ್ಯಕಾರಕವಾದ ದೂಷಣೆ.

ಗೌತಮಮ್ಮ : (ಶಕುಂತಲೆಗೆ) ಅವ್ವಾ, ನಾಚಿಕೆ ಸುಡು ಇಸ್ನು. ನಿನ್ನ ಗಂಡನು ಚೆನ್ನಾಗಿ ನಿನ್ನ ಮೋರೆ ನೋಡಲಿ; ಅಂದರಾದರೂ ಗುರುತವನ್ನು ಹಿಡಿದಾನು. (ತಲೆಯ ಮೇಲಿನ ಸೆರಗು ಹಿಂದೆ ಸರಿಸುತ್ತಾಳೆ.)

ಅರಸು : (ಶಕುಂತಲೆಯ ರೂಪವನ್ನು ನೋಡಿ-)

(ಪದ)

ದಾಟಿ : ಧಪಮಾ ಪಾಧಪಧಾಧಾಸಾ| ಸರಿ ಮರೀ| ಸರಿಸಧಸಪಾಧಮಾಪ ||ಪಲ್ಲ||
ಸಸರಿಮರಿಮಪಾ! ಧಧಪಮಪಾ! ಧಧಸಧಾ! ರಿಸಧಸಾ | ಧಪಮಪಾ ! ಧಾಧಾ! ಸಾಸಾ|
ರೀರಿ| ಮರಿಸರಿಸಧಸ | ಧಾರೀ| ಧಾಸಾ | ಪಾಧಮಾಪ || ಎಂಬಂತೆ.
ಎದಿರೊಳ್ ನಿಂದಿಹಳೈ ಬಂದೆನ್ನೆದಿರೊಳ್ | ಪಲ್ಲ||
ಎದೆಕರುಂಗಿಸಲಸಮ ಸುಂದರಾಂಗಿ || ಅನುಪಲ್ಲ||
ಜಘನ ಘನಕ್ಕೆ ಕಾಲ್ಗಳು ದಣಿಯಲ್ || ಕಿರಿಯುತೆಳ್ | ನಡುವಿನೊಳ್
ಕರವಿಡಲ್ ಪೀನ | ಸ್ತನ | ಕ್ಕೆ ಬಾಗಿಹಳು || ಕಚನಿಚಯಂ | ಮೇಲ್|
ಬರೆ ಮೇಣ್| ಮದನಧನುವೆ ||೧|| ಹಿಮವದಚಲದಲ್ಲಿಯ
ಬನದಿಂ || ಹರಿದುಮಂ | ದಿರದಿಬಂ | ದಿರಲುಮಂ || ದಗಾ | ಮೆಕುಂ |
ದಗಂ | ಧಿಯೆನಗಸುವಿನಪ್ರಿಯಳೆಂ || ದು ಎನಲು ಸುಳಿ ಎಲರೊಲು ||೨||
ಬಿಳಿವಸನವೆ ತಣ್ಣದಿರುರ ಭಾ|| ರವೆಚಕೋ |ರಗಳೆಕೋಮೆರುವಕೊ||
ರಳ್ಮುತ್ತಿನ ಹಾ| ರಗಳ್ | ಉಡುಗಣವು ಹರಿಣಾಂಕಂ || ನಲ್ಗಣ್ಮೋ
ರೆಯನೀರೆ ||೩||
ನಸುಕಿನೊಳಿರೆ ಕುಂದದಿಜಲಬಿಂದು ಮನದೊಳ್ | ಭ್ರಮರ ಸಂ|
ಭ್ರಮಿಸಿದೊಲ್ |
ಬೀಸೆ| ಮೌನೆ | ತಾನೆ | ಮನೆಗೆ ಬರೆ ಬಿಡಲಾರೆ | ಮೀರೆ ನೀತೆ
ಸೋತೆನಿದಿರೊಳ್ ||೪||

(ಈ ಪ್ರಕಾರ ಮನಸಿನಲ್ಲಿ ಧೇನಿಸುತ್ತ ಸುಮ್ಮನೆ ಕುಳಿತುಕೊಳ್ಳುತ್ತಾನೆ.)

ವೇತ್ರವತಿಕೆ : (ತನ್ನೊಳಗೆ) ಏನು ನಮ್ಮ ದೊರೆಗಳ ಧಾರ್ಮಿಕತ್ವ! ಅಹಹ! ಇಂಥ ಸ್ತ್ರೀರತ್ನವು ತಾನೇ ಮನೆಗೆ ಬಂದಿರಲಾಗಿ ಅವಳನ್ನು ಗ್ರಹಣ ಮಾಡತಕ್ಕದ್ದೊ ಬಿಡತಕ್ಕದ್ದೊ ಎಂಬ ವಿಷಯದಲ್ಲಿ ವಿಚಾರ ಮಾಡುವಂಥವನು ಯಾವ ನಮ್ಮಾ ಅನ್ಯಪುರುಷ!

ಶಾರ್ಙರವ : ಹೇ ರಾಜನ್, ಮೌನವೇನು ಕಾರಣ ಹಿಡಿದಿದ್ದೀರಿ?

ಅರಸು : ಹೇ ತಪಸ್ವಿ ಜನರುಗಳಿರಾ, ನಾನು ಬಹಳ ನೆನಪು ಮಾಡಿಕೊಳ್ಳುತ್ತೇನೆ. ಆದರೂ ಈ ಸ್ತ್ರೀಯನ್ನು ಸ್ವೀಕರಿಸಿದ್ದು ನನ್ನ ಸ್ಮರಣೆಗೆ ಬರಲೊಲ್ಲದು, ಇದಲ್ಲದೆ ಇವಳು ಈಗ ಗರ್ಭಿಣಿಯಾಗಿದಾಳೆಂದು ಹೇಳುತ್ತೀರಿ. ಹೀಗಿರಲಾಗಿ ನಾನು ಹ್ಯಾಗೆ ಗ್ರಹಣ ಮಾಡಲಿ?

ಶಕುಂ : (ತನ್ನೊಳಗೆ) ಆರ್ಯನಿಗೆ ಮೊದಲು ಪರಿಣಯವೇ ಆಗಿರುವುದೊ ಇಲ್ಲವೊ ಎಂಬ ಸಂದೇಹ. ಮುಂದಿನ ದುರಾಸೆಯಾತಕ್ಕೆ ಸುಡುತ್ತದೆ!

ಶಾರ್ಙರವ : ಅಯ್ಯಾ ಹಾಗಲ್ಲ; ನೀನು ಈ ಮಾತು ಸ್ವಲ್ಪ ಲಕ್ಷ್ಯದಲ್ಲಿ ತಂದು ನೋಡು.

ಚಂ. ವೃ. ಬಿಡು ಇವಳಂತು ನಿನ್ನೊಳವಿಚಾರದಿ ಕೂಡಿದಳಾ ಮುನೀಶ್ವರಂ ||
ಒಡಲೊಳು ಸಿಟ್ಟು ತಾಳದಲೆ ನಿನ್ನಯ ಕೃತ್ಯಕೆ ಶಾನೆ ಮಾನಮಂ ||
ಕೊಡುತಿರೆ ನೀನವಂಗೆ ತಿರುಗಿಂತವಮಾನವ ಮಾಳ್ಪೆ ಚೌರ್ಯದಿಂ -
ದೊಡವೆಯ ನೊಯ್ಕೆ ಬೇರೆ ಸೆರಗೊಡ್ಡುವ ನೊಯ್ವದಕಿತ್ತ ಲಕ್ಕಿಸೈ ||

ಶಾರದ್ವತ : ಎಲೋ ಶಾರ್ಙರವ, ನೀನು ಸುಮ್ಮನಿರಿನ್ನು. ಎಲೆ ಶಕುಂತಲೆ, ನಾವು ಹೇಳುವಷ್ಟೆಲ್ಲ ಹೇಳಿ ನೋಡಿದೆವು. ಈ ಆರ್ಯನಂತೂಹೀಗೆ ಮಾತನಾಡುತ್ತಾನೆ. ಇನ್ನು ಮೇಲೆ ನಿಮ್ಮಾ ಅವರಾ ಏನಾದರೂ ಗುರುತಿನ ಮಾತಿದ್ದರೆ ಹೇಳಿಕೊಂಡು ನೋಡು.

(ಎಂದು ಇಬ್ಬರೂ ಋಷಿಶಿಷ್ಯರು ದೂರ ಹೋಗಿ ನಿಲ್ಲುತ್ತಾರೆ.)

ಶಕುಂ : (ಮೋರೆವಿರುವಿ) ಮೊದಲಿನ ಅನುರಾಗವೇ ಈ ಮೆಟ್ಟಿಗೆ ಬಂತಂತೆ. ಇನ್ನು ಗುರುತಿನ ಮಾತಿನಿಂದ ಏನಾಗಬೇಕಾಗಿದೆ? ದುಃಖವೆಂಬ ಸಾಗರದಲ್ಲಿ ನಾನು ಬಿದ್ದಿನಿದು ನಿಶ್ಚಯ. ನನ್ನ ದೆಸೆಯಿಂದ ಬಂಧುಜನರು ಆಮರಣಪರ್ಯಂತರ ದುಃಖವನ್ನೇ ಅನುಭವಿಸುವಂತೆ ಆಗಿಹೋಯಿತು. (ಅರಸನಿಗೆ) ಆರ್ಯ ಪುತ್ರನೆ, (ತನ್ನೊಳಗೆ) ಲಗ್ನದ ಮಾತಿಗೆ ಸಂಶಯಿತನಾದಂಥವನಿಗೆ ಆರ್ಯಪುತ್ರನೆಂಬ ಸಂಬೋಧನೆ ಯಾಕೆ? (ಅರಸನಿಗೆ)

(ಪದ)

ದಾಟಿ : ದಯಮಾಡಲೊಲ್ಲ್ಯಾ | ದಯಾನಿಧೆ|| ದಯಮಾಡಲೊಲ್ಲ್ಯಾನಿ-| ನ್ನಯ ಸೇವೆ
ಜನರ ಸ- | ವಾಲ್ಗಯಿಸಿ ನಿ - | ರ್ಭಯದಿ ಚರಿಸುವಂತೆ ||ಪಲ್ಲ||

ಎಂಬ ಪದದಂತೆ.

ನೀತಿಯಿದಲ್ಲೊ || ಪೌರವರಾಯಾ | ನೀ ಕರುಣಿಪುದೋ ||ಪಲ್ಲ||
ಪ್ರೀತಿಯಿಂದಲಿ ರಂಬಿ | ಸೀ ತನುಮನಗೊಂಬಿ |
ನಾ ತಿಳಿಯದೆ ಸಂಬಿ - | ದಾತಪ್ಪುನುಣ್ಣೆಂಬಿ ||ಅನುಪಲ್ಲ||

ಕಳ್ಳತನದಲಿ || ಮನೆಯೊಳಯ್ಯ | ನಿಲ್ಲದ್ದು ಕೇಳಿ ||
ಮೆಲ್ಲನೆ ವನದೊಳು | ಬಳ್ಳಿಯೊಳಳ್ಪೆಳೆದಂಥ |
ಮೆಳ್ಳು ಎನ್ನನು ಮೋಹ | ಗೊಳ್ಳಿಸಿ ಬಿಡುವದು ||೧||
ತೆರಳುವ ಸಮಯ || ದೊಳಳುತನಾ | ಕರುಣೆಯಿಂದಿನಿಯ ||
ಕರೆಯ ಕಳುಹು ತೀವ್ರ|| ತರದಿಂದೆನ್ನಲು ಎನ್ನ |
ಕೊರಳಮುಟ್ಟಿದ ಮಾತು | ಮರೆದಿಹೆನೆಂಬುದು ||೨||

ಮುನಿಜನರಿನ್ನಾ || ಏನೆಂಬುವ | ರೆನಗೆಸಂಪನ್ನಾ ||
ಜನನಿಯೆಲ್ಲಿಹಳೊ ಎನ್ನನು ಬಂಧಿಗಳು ಯಾರೊ |
ಜನರೊಳೀಕ್ಷಿಸಬ್ಯಾಡೊ | ಮನಸುನಿನ್ನೊಳು ನೋಡೋ ||೩||

ಅರಸು : (ಕಿವಿಯ ಮೇಲೆ ಕೈಯಿಟ್ಟು) ಶಿವ ಶಿವ ಶಿವ! ಹೇ ಸ್ತ್ರೀಯೆ, ಇದು ಎಂಥ ಪಾಪವಚನಗಳನ್ನಾಡುತ್ತಿದ್ದೀ?

|| ಪೃಥ್ವೀ ವೃತ್ತ||

ಎಲೇ ಮುನಿಯಕನ್ಯೆ ವನ್ಯೆ ವಯ ಸಣ್ಣದಾಗಿರ್ದು ಎ |
ನ್ನೊಳಿಂತುಕುಲಕಂಟಕತ್ವ ಮಿರಿಸಲ್ಸಹಾಸಕ್ಕೆ ಪು||
ಷ್ಕಳಾಶ್ಚರಿಯವಾಯ್ತು ನಿನ್ನ ಬಲೆಗಾಂ ಸಿಗೆಂ ಕೇಳು ಮ|
ತ್ಕುಲಂ ಕೆಡಿಸಬೇಡ ಸೂಸುನದಿ ವೃಕ್ಷಮಂ ಕೀಳ್ವವೋಲ್ ||೧||

ಶಕುಂ : ಒಳ್ಳೇದು; ನಾನು ಪರಸ್ತ್ರೀಯೆಂದು ತಮ್ಮ ಮನಸು ಸ್ಮರಣೆದಪ್ಪಿ ಭ್ರಾಂತಿಗೊಂಡಿದ್ದರೆ ನಾನು ಏನಾದರೂ ಗುರುತವನ್ನು ತೋರಿಸಿ ನೆನಪು ಮಾಡಿಸುತ್ತೇನೆ.

ಅರಸು : ಇದಕ್ಕೆ ಯಾರಲ್ಲೆಂದಾರು?

ಶಕುಂ : (ಅನಾಮಿಕೆಯಲ್ಲಿ ಆತನು ಕೊಟ್ಟ ಉಂಗುರವನ್ನು ನೋಡುತ್ತಾಳೆ, ಅದು ಬಿದ್ದು ಹೋಗಿರುತ್ತದೆ.) ಅಪ್ಪಾ! ಎಲ್ಲಿ ಹೋಯಿತೆ ಉಂಗುರ! (ಹೌಹಾರಿ ಗೌತುಮಮ್ಮನನ್ನು ನೋಡುತ್ತಾಳೆ.

ಗೌತ : ನಮ್ಮವ್ವಾ, ಎಲ್ಲಿ ಕಳೆದುಕೊಂಡಿಯೆ? (ಗಾಬರಿಗೊಂಡು) ಶಕ್ರಾವತಾರ ಕ್ಷೇತ್ರದಲ್ಲಿ ಶಚೀತೀರ್ಥಕ್ಕೆ ಸ್ನಾನಕ್ಕೆ ಹೋದಾಗ ಬಿದ್ದು ಹೋಯಿತು ಕಾಣಿಸುತ್ತದೆ. ಇನ್ನು ಹ್ಯಾಗೆ ಮಾಡುವಿಯೇ ನಮ್ಮವ್ವಾ?

ಅರಸು : (ನಕ್ಕು) ಸ್ತ್ರೀಯರ ಚರಿತ್ರವು ಹ್ಯಾಗಿರುವದೆಂಬುದು ಈಗ ಪ್ರತ್ಯಕ್ಷವಾಗಿ ಕಾಣಿಸುತ್ತದೆ; ನೋಡಿ.

ಶಕುಂ : ಇಲ್ಲಿ ನನ್ನ ಅದೃಷ್ಟವೇ ತನ್ನ ಪರಾಕ್ರಮವನ್ನು ತೋರಿಸಿತು; ಅದಕ್ಕೆ ಉಪಾಯವೇನು? ಚಿಂತೆಯಿಲ್ಲ; ನಾನು ಆ ವ್ಯಾಳ್ಯದ ಗುರುತುಗಳನ್ನು ಹೇಳುತ್ತೇನೆ.

ಅರಸು : (ತುಚ್ಛದರ್ಶಕವಾದ ಹಾಸ್ಯದಿಂದ) ಪ್ರತ್ಯಕ್ಷ ಕಣ್ಣಿನಿಂದ ನೋಡುವದು ಹೋಗಿ ಕಿವಿಯಿಂದ ಕೇಳುವದಾಯಿತೆ? ಒಳ್ಳೇದು ಆಗಲಿ.

ಶಕುಂ : ಒಂದು ದಿನ ನವಮಲ್ಲಿಕಾ ಮಂಟಪದಲ್ಲಿ ತಾವು ಕುಳಿತುಕೊಂಡು ಉದಕದಿಂದ ತುಂಬಿದ ಕಮಲದಪಾತ್ರೆಯನ್ನು ಹಿಡಿದುಕೊಂಡಿದ್ದೀರಿ; ಅದು ನೆನಪುಂಟೆ?

ಅರಸು : ಒಳ್ಳೇದು ಮುಂದೆ?

ಶಕುಂ : ಆಗ್ಗೆ ನಾನು ಮಗುವಿನಂತೆ ಜೋಕೆ ಮಾಡಿದ ದೀರ್ಘಾಪಾಂಗವೆಂಬ ಎರಳೆ ಕರುವು ನೀರಡಿಸಿ ಸಮೀಪದಲ್ಲಿ ಬಂದು ನೋಡಲಾರಂಭಿಸಿತು. ಆಗ ನೀವು ದಯದಿಂದ ಇದೇ ಮೊದಲು ಕುಡಿಯಬಾರದೇಕೆಂದು ಮುಂದೆ ಕೈ ಮಾಡಿದಿರಿ. ಅದು ಪರಿಚಯವಿಲ್ಲದ್ದರಿಂದ ಕುಡಿಯಲಿಲ್ಲ. ಅದೇ ಪಾತ್ರೆಯನ್ನು ನಾನು ಕೈಯಲ್ಲಿ ತೆಗೆದುಕೊಂಡೆ. ಆಗ್ಗೆ ನಿರ್ಭಯದಿಂದ ಉದಕ ಪ್ರಾಶನ ಮಾಡಲಾರಂಭಿಸಿತು. ಅದಕ್ಕೆ ತಾವು ಸಾನಂದಾಶ್ಚರ್ಯಪಟ್ಟು, ಯಾವ ಪ್ರಾಣಿಯಾದರೂ ಸ್ವಜಾತಿಯ ಜನರಲ್ಲಿ ವಿಶ್ವಾಸವಿಡುತ್ತದೆ; ನೀನು ಅದರ ಜಾತಿಯವಳೇ; ವನದಲ್ಲಿರುವವಳು; ಅಂತ ಮಾತನಾಡಲಿಲ್ಲವೆ?

ಅರಸು : ಇಂಥ ಸ್ವಕಾರ್ಯಸಾಧಕವಾದ ಮಧುರಭಾಷಣಕ್ಕೆ ವಿಷಯಲಂಪಟರಾದಂಥವರು ಪಾಶದಲ್ಲಿ ಬೀಳುತ್ತಾರೆ; ನಾನು ಇಂಥ ಕಪಟಕ್ಕೆ ವಶನಾಗುವವನಲ್ಲ.

ಗೌತಮಮ್ಮ : ಅಪ್ಪ, ಮಹಾರಾಯ! ದೊರೆಯೇ ! ಅವಳಲ್ಲಿ ಕಪಟವೆಲ್ಲಿರುವದೊ! ಜನ್ಮದಾರಭ್ಯ ತಪೋವನದಲ್ಲಿ ಬೆಳೆದಂಥವಳು. ಕಪಟವೆಂಬ ಶಬ್ದಾರ್ಥ ಮೊದಲಾಗಿ ಗೊತ್ತಿಲ್ಲ ಕಂಡೆಯಾ! ಪರದೇಶಿ ಕೂಸನ್ನು ಹೀಗೆ ನೀನು ಕುಳಿತುಕೊಂಡು ಕಷ್ಟಪಡಿಸುವುದು ಯೋಗ್ಯವಲ್ಲ.

ಅರಸು : ಹೇ ವೃದ್ಧ ತಾಪಸಿ, ಕಪಟದಿಂದ ಪುರುಷರನ್ನು ಠಕ್ಕಿಸುವುದು ಸ್ತ್ರೀಯರ ಜಾತಿಸ್ವಭಾವವಾಗಿರುತ್ತದೆ.

ತರುಣಿಯರಲ್ಲಿ ಧೂರ್ತಗುಣವಿಪ್ಪುದು ಸಾಹಜಿಕಂ ಸ್ವಕಾರ್ಯ ತ-
ತ್ಪರತರರಾಗಿಪರ್ ಮರಳುಗೊಂಬರು ಕೋಮಲ ಯುಕ್ತಿಗಾಗಿ ಮೂ-
ರ್ಖರೆ! ಗುರುವ್ಯಾರು ಕೋಕಿಲೆಗೆ ಬೋಧಿಸಲೀ ಬಗೆ ರಕ್ಷಣಾರ್ಥ ಪೇಳ್ |
ಮರಿಗಳನನ್ನ ಪಕ್ಷಿಗಳ ಗೂಡಿನೊಳಿಕ್ಕಿ ನಭಕ್ಕೆ ಪೋಪುದಂ ||

ಶಕುಂ : (ಕೋಪಪವಿಷ್ಟಳಾಗಿ) ಹೇ ನೀಚಾ ನಿನ್ನ ನಡತೆಯಂತೆ ಅನ್ಯರ ನಡತೆ ಎಂದು ತಿಳಿಯಬೇಡ. ತೃಣದಿಂದ ಆಚ್ಛಾದಿತವಾದಂಥ ಕೂಪದಂತೆ ಮೇಲೆ ಮೇಲೆ ಮಾತ್ರ ಧಾರ್ಮಿಕತನವನ್ನು ತೋರಿ ನನ್ನನ್ನು ಮೋಸ ಹೊಂದಿಸಿದಲ್ಲವೇ? ಒಳ್ಳೇದು. ನನ್ನ ಹೊರತು ಅನ್ಯರಾರು ನಿನ್ನಲ್ಲಿ ವಿಶ್ವಾಸವಿಡುವವರಿದ್ದಾರೆ?

(ಪದ)

ದಾಟಿ : ಸಾಥ ನಿನ್ನ ನಡತೆನೆಲ್ಲ | ನಾ ಬಲ್ಲೆನೇಳೋ|| ದೂತೆಯ ನೆರೆದೆನ್ನೊಳು |
ಧೂರ್ತತನವೆ ಕೇಳೊ| ಎಂಬಂತೆ.
ರಾಯ ನಿನ್ನ ರೀತಿಯಲ್ಲೋ | ನ್ಯಾಯನೇತ್ರದಿಂದೆ ನೋಡೊ||
ಕಾಯವರ್ಪಿಸಿದ ಮ್ಯಾಲೆ | ಕೊರಳಗೊಯ್ಯುವರೇನೊ ||ಪಲ್ಲ||
ಅಂದು ನೀನಾಶ್ರಮದೊಳು | ಬಂದು ಆಕಸ್ಮಿಕವೆನ್ನ
ಮುಂದೆ ಮಿಂಚಿನಂತೆ ಪೊಳೆದು | ಮಂದಹಾಸದೊಳು ಸ್ನೇಹ ||
ದಿಂದೆ ಕುಶಲವಾರ್ತೆಯ| ನಂದೆದಿ ಕುಳಿತು ಕೇಳಿ -
ಬಂಧಿಸಿ ಮೆಲ್ಲನೆ ಮೋಹ | ದಿಂದನೆನ್ನ ಮನೆಯೊಳು ||
ಎಂದು ಬಾರದ ಬಗೆಯಗಾಣಿಸಿ | ದೆಂದು ಮನದೊಳು ಪೇಳ ಪೋಗಲು||
ಮಂದಮತಿಯೆನ್ನನು ಬಲು ಕಪಟ | ದಿಂದೆ ತಿರುಗಿಸಿ ಮೋಸ ಮಾಡಿದೆ ||೧||
ಅಂದು ಮೊದಲು ನಿನ್ನಯ | ಕಂದರ್ಪ ರೂಪವೆನ್ನೊಳು ||
ನಿಂದು ಜರ್ಜರಿತಳಾಗ| ಲೊಂದು ದಿನ ನದೀತಟ ||
ಪೊಂದಿರ್ಪ ಬಳ್ಳಿ ಮನೆಯೋಳ್ | ಚಂದನ ಶೀತೋಪಚಾರ |
ದಿಂದೆ ತಾಪಗಳೆಯಲು | ಬಂದೆಯೊ ಪಾಳತಿಯೊಳು ||
ಬಂಧುಜನರನುಮತಿಯ ಕೇಳುವೆ | ನೆಂದುನಾನಾಲ್ಪರಿದೆನೊಲ್ಲೊ -
ಲ್ಲೆಂದೆ ನೀ ಬಿಡಲಿಲ್ಲ ಶಕ್ತಿಗಳಿಂದೆ ತನುಮನಗೊಂಡೆಯಲ್ಲದೆ ||೨||
ಮುನಿಗಳಾಶ್ರಮದೊಳು | ವನದೊಳ್ಬೆಳೆದು ನಾ ಹ-
ರಿಣ ಬಾಲಕರಗೂಡ | ಮನೆಯ ಮುಂದಾಡುತಿರ್ದೆ||
ನಿನಗೆ ನಾನಪರಾಧ| ವನು ಮಾಡಿದ್ದೇನೊ ಬಡ-
ಕನ್ನಿಕೆಯಗೂಡ ನೀ ಭು| ವನನಾಥನಾಗಿಲಜ್ಜೆ ||

ಇನಿತು ಇಲ್ಲದೆ ಭಾಷೆ ನೀಡುತ | ಮನಸು ಮರಳಿಸಲೀಗ ನಿನ್ನಯ
ಮನೆಗೆ ಬರೆ ನಾನೋಧರಿಯೆನೆಂ | ಬಿನಿತು ಕೀರ್ತಿಯ ಮಾಡಿದೆಲ್ಲದೆ ||೩||

ಹೀಗೆ ವಿಶ್ವಾಸದಿಂದ ತೊಡೆಯ ಮೇಲೆ ಮಲಗಿಸಿಕೊಂಡು ಕುತ್ತಿಗೆ ಕೊಯ್ಯಬೇಕೇ?

ಅರಸು : (ತನ್ನೊಳಗೆ) ಇವಳ ಸಿಟ್ಟಿನಲ್ಲಿ ಏನೂ ಕಪಟವೆಂಬುವದು ತೋರಬರುವದಿಲ್ಲ. ಆದ್ದರಿಂದ ನನಗೆ ಸಂದೇಹವುತ್ಪನ್ನವಾಗುತ್ತದೆ.

(ಪದ - ಸಾಕಿ)

ಸ್ಮರಣೆ ಸಾಲದೆನ್ನುರವತಿ ಕಠಿಣಾಗಿಹುದೀ ಮೋಹದ ಬೊಂಬೆ||
ಪರಿಪರಿ ರತಿರಸ ಪ್ರೇಮವೃತ್ತಮಂ ಪೇಳ್ವುದರೊಳ್ ನಾನಂಬೆ ||
ಮರಮರ ಮರಗಂತ ಕಣ್ಮೊಗಗಳು ಕೆಂಪಾಗಿರೆ ಭ್ರೂಯುಗ ಬಿಂಬಾ||
ಧರೆ ವಕ್ರಿಸಿದಳ್ ಕಡುರೋಷದಿ ಬಿಲ್ಮುರಿದನೇನೊ ಪೂವಂಬಾ ||೧||

(ಶಕುಂತಲೆಗೆ) ಹೇ ಭದ್ರೆ, ದುಷ್ಯಂತರಾಜನ ಚರಿತ್ರವನ್ನು ಯಾವತ್ತರೂಬಲ್ಲರು ಆದರೆ ನೀನೆಂಬುವದು ಇದುವರೆಗೆ ಯಾರೂ ನೋಡಲಿಲ್ಲ.

ಶಕುಂ : ಒಳ್ಳೇದು, ಈ ವ್ಯಾಳ್ಯದಲ್ಲಿ ನಾನು ಜಾರಿಣಿಯಂತೆ ಸ್ವಚ್ಛಂದಾಚರಣೆ ಯಾದೆನಷ್ಟೆ? ಪುರುವಂಶಕ್ಕೆ ಲಕ್ಷಕೊಟ್ಟು ಈತನಲ್ಲಿ ವಿಶ್ವಾಸವಿಟ್ಟದ್ದಕ್ಕೆ ಮುಖದಲ್ಲಿ ಅಮೃತವೂ ಹೃದಯದಲ್ಲಿ ವಿಷವೂ ತುಂಬಿಕೊಂಡಿರುವ ಪುರುಷನ ಕೈಯಲ್ಲಿ ಸಿಲ್ಕಿದೆನಲ್ಲ! ಅಕಟಕಟಾ! ಇನ್ನು ಯಾವ ಮಾತಾಡಿ ಏನು ಫಲ! (ಎಂದು ಮೋರೆಗೆ ಸೆರಗಿಕ್ಕಿ ದುಃಖಿಸಲಾರಂಭಿಸುತ್ತಾಳೆ.)

(ಶಾರ್ಙರವನೂ ಶಾರದ್ವತನೂ ದೂರದಲ್ಲಿ ನಿಂತವರು ಸಮೀಪದಲ್ಲಿ ಬರುತ್ತಾರೆ.)

ಶಾರ್ಙರವ : ಹೇ ಪತ್ನೆ, ಮೊದಲಿಗೇ ನೀನು ತಪ್ಪಿದೆ. ಇನ್ನು ಮೇಲೆ ದುಃಖಮಾಡಿ ಫಲವೇನು? ಹಿರಿಯರನ್ನು ಕೇಳದಲೆ ತನ್ನ ಮನಸಿಗೆ ಬಂದಂತೆ ಯಾವದಾದರೂ ಕಾರ್ಯವನ್ನು ಮಾಡಿದರೆ ಅದು ಕಡೆಗೆ ಹೀಗೇ ಪರಿಣಾಮ ದೋರುತ್ತದೆ.

(ಪದ) *

(ಸಾಹಿತ್ಯ) *

ಮನದಳತೆ ಮೊದಲ್ ತಾಂ ತಿಳಿಯಬೇಕು ||ಪಲ್ಲ||
ತಿಳಿಯದೆ ತರುಣರತಿ || ಸವಿ ಸವಿ ಸವಿ ಮಾತಾಡಿದಕ್ಕೆ ಸಂ ||
ಸಾರಾ | ಪಾರಾ | ವಾರಾ | ಪಾರಾ ಗಾಣಿಸುವನಿಹನೋ
ಇಲ್ಲೋ || ನೋಡದೆ ನಂಬಲಾಗದು ಪುರುಷರ || ಅನುಪಲ್ಲ ||

ತನುವಿನೊಳಿಹ ಸೀತಕೆ ಪರರ || ಮನೆಸುಡುವರು
ಖಳ ಮನುಜರು ತಮ್ಮೊಳ್ || ಹೊಂದಿ ಮೇಲ್ | ಮುಂದವಳ್ |
ನೊಂದರೇನ್| ಬೆಂದರೇ| ನೆಂಬುವರ್ ||೧||

ಅರಸು : ಶಾಬಾಸ! ಅಂತೂ ಈ ಸ್ತ್ರೀಯಳ ಮಾತಿನ ಮೇಲಿಂದೇ ತಾವು ದೂಷಣ ವಿಡುತ್ತಿರೋ ನನ್ನಲ್ಲಿ?

ಶಾರದ್ವತ : (ಕ್ರೋಧಯುಕ್ತನಾಗಿ) ಹ್ಯಾಗೆ ಶಾರ್ಙ್ಗರವ, ಗೌತಮಮ್ಮ, ಹ್ಯಾಗೆ ಕೇಳಿದಿರಾ ಈ ಅರಸನ ಹೀನೋತ್ತರವನ್ನು? ಶಕುಂತಲೆಯ ಮಾತು ಕಪಟದ್ದು, ಇವನ ಮಾತು ಮಾತ್ರ ಸತ್ಯ!

ವೃತ್ತ | ಜನುಮದೊಳೆಂತದೇಂ ಕಪಟವೆಂಬುದನನ್ನರಿದಿಲ್ಲದಾ ಸರಳ್ |
ಮನಸಿನ ವಸ್ಯೆಯಾಡ್ಡ ನುಡಿ ನಂಬಲಿಬಾರದು ಬಾಲ್ಯದಿಂದೆವಂ ||
ಚನೆಗೊಳಿಸಲ್ಕೆ ತಮ್ಮ ಕುಲವಿದ್ಯೆ ಯದೆಂದುರೆಗಲ್ತರಾಡ್ಡಭಾ|
ಷಣ ನಿಜವೆಂದು ನಾವ್ ತಿಳಿಯಬೇಕಿದು ಈತನ ಯುಕ್ತಿ ಕೇಳಿರೈ ||

ಅರಸು : ಹೇ ಸತ್ಯವಾದಿನ್, ತಾವೆಂಬುವದು ನಿಜ ನಾವು ಅಂಥವರೇ ಅಹುದು. ಆದರೂ ಇವಳನ್ನು ವಂಚನೆಗೊಳಿಸಿದಲ್ಲಿ ನಮಗೇನು ಪ್ರಾಪ್ತಿಯಾಗಬೇಕಾಗಿದೆ?

ಶಾರ್ಙ್ಗರವ : ಅಧಃಪಾತವೇ! ಮತ್ತೇನಾಗಬೇಕಾಗಿದೆ?

ಅರಸು : ಪೌರವರಿಗೆ ಅಧಃಪಾತವಾದೀತೆಂಬುವದು ಮಿಥ್ಯ.

ಶಾರದ್ವತ : ಎಲೊ ಶಾರ್ಙ್ಗರವ, ಇಂಥ ಒಣಮಾತುಗಳಿಂದ ಏನು ಪ್ರಯೋಜನ?

ಧಾಟಿ : ತಾನಾನಾದರದರದೋಮ್ | ತನನತದರದಾನಿ |
ತರದಿನೀತದರದಾನಿ | ತನನನನನನನನನಾತನನನಾ|
ತಾನಾ | ತಾನಾ | ತಾನಾ | ತಾನಾನಾರೆನಾದರದರದಾನಿ |
ತೋಮ್‌ದರದಾನೀ | ತದರದಾನಿತನನನನನ ||ಪಲ್ಲ||
ಸರಿಗಾಸರಿಗಾಗರಿಮಾಗಾ | ಗರಿಗಗಮಮಪಪ|
ನಿಧಪಮ ಗರಿಸಾ| ಧಿರಕಿಟತಾ | ಧಿರಕಿಟತಾ | ಧಿರಕಿಟತಾ|
ಧಿತ್ತಿಲಾನ್ ಧಿತ್ತಿಲಾನ್ ||೧||

ಗುರುಗಳಾಜ್ಞೆಯೆಷ್ಟೋ ಅಷ್ಟು ನಾವು ಮಾಡಿದೆವು. ಇವಳು ಹೆಂಡತಿ, ಆತನು ಗಂಡನು; ಇಬ್ಬರ ದರ್ಶನವಾಯಿತು. ನಡೆ ಇನ್ನು ನಾವು ತಿರುಗುವ. ಇವರು ಬೇಕಾದದ್ದು ಮಾಡಿಕೊಳ್ಳಲಿ. ಹೇ ರಾಜನ್, ನಾನು ಇನ್ನೊಂದೇ ಮಾತು ಹೇಳುತ್ತೇನೆ ಕೇಳು.

ಕಂದ || ಈಕೆಯು ನಿನ್ನಯ ಕಾಂತೆಯು |
ಬೇಕಾದರೆ ಸಾಕು ನೂಕು ಸಾಕಾದರೆ ನಾ-||
ವ್ಯಾಕಿದರೋಳ್ಪೊಗುವೆವು ಮ |
ತ್ತೇಕ ಪ್ರಭುತ್ವಮಲ್ಲವೇ ಸತಿಯೊಳ್ ಪತಿಯ ||

ಗೌತಮಮ್ಮ : ನಡೆ ಇನ್ನು. (ಎಲ್ಲರೂ ಹೋಗಲಾರಂಭಿಸುತ್ತಾರೆ.)

ಶಕುಂ : ಈ ಮೋಸಗಾರನಂತೂ ನನ್ನನ್ನು ಠಕ್ಕಿಸಿದನು. ಇನ್ನು ನೀವೂ ನನ್ನನ್ನು ಬಿಟ್ಟು ಪೋಗುತ್ತೀರಾ? (ಎಂದು ಅಳುತ್ತ ಬೆನ್ನು ಹತ್ತುತ್ತಾಳೆ.)

ಗೌತಮಮ್ಮ : (ಹಿಂದಿರುಗಿ) ವತ್ಸ ಶಾರ್ಙರವ ನೋಡಿದೆಯಾ. ಶಕುಂತಲೆಯು ಕರುಣ ಸ್ವರದಿಂದ ದುಃಖಿಸುತ್ತ ನಮ್ಮ ಹಿಂದೆ ಬರುತ್ತಾಳೆ. ಅಯ್ಯೋ! ಇವಳ ಪತಿಯು ಪಾಷಾಣಹೃದಯನಾದನಲ್ಲ! ಇನ್ನೇನು ಮಾಡೀತು ನನ್ನ ಕಂದಮ್ಮ!

ಶಾರ್ಙರವ : (ಸಿಟ್ಟಿನಿಂದ) ಏನೇ ಗಯ್ಯಾಳಿ, ಮನಸಿಗೆ ಬಂದಂತೆ ಆಚರಣೆ ಮಾಡ ಲಾರಂಭಿಸಿದೆಯಾ? ತಿರುಗು ಹಿಂದಕ್ಕೆ! ತಿರುಗು ಹಿಂದಕ್ಕೆ.

ಶಕುಂ . (ಅಂಜಿ ಗದಗದ ನಡುಗುತ್ತಾಳೆ.) ನೀವು ಹ್ಯಾಗೆ ಹೇಳುತ್ತೀರಿ ಹಾಗೆ ಕೇಳುತ್ತೇನೆ.

ಶಾರ್ಙರವ : ಅಮ್ಮಾ, ಹಾಗಲ್ಲ ಕೇಳು.

|| ದ್ರುತವಿಲಂಬಿತ ವೃತ್ತ ||

ನೃಪತಿಯಾಡ್ಡದು ನೈಜಮಿರಲ್ಕೆ ನೀಂ |
ಕುಪಿತನಾಗನೆ ಬಂದೊಡೆ ತಾತನು - |
ತ್ತಪರ ದೃಷ್ಟಿಗೆ ಹೇಸದೆ ಪೇಳ್ದವೋಲ್ |
ಸ್ವಪತಿಯಾದೊಡೆ ಇಲ್ಲಿರುದಾಸಿಯೊಲ್ ||೧||
ಇತರ ಯೋಚನೆ ಬೇಡವೆ ನೀ ಶುಚಿ |
ವ್ರತಗಳನ್ನರಿದಂಜುವದೇಕೆ ಮೇಣ್ ||
ಮತಿಯು ಶುದ್ಧಮಿರಲ್ ಮನೆಯಾಳಿಯೋಲ್ |
ಪತಿಯ ಬಾಗಿಲದೋಳಿಹುದುತ್ತಮಂ ||೨||

ಆದಕಾರಣ ನೀನು ಇಲ್ಲಿರು. ನಾವು ಹೋಗುತ್ತೇವೆ.

ಅರಸು : ಹೇ ತಪಸ್ವಿಗಳೇ, ಅವಳನ್ನು ಬರಿದೆ ಆಶೆಗೆ ಹಚ್ಚಿ ಯಾತಕ್ಕೆ ಬಿಟ್ಟು ಹೋಗುತ್ತೀರಿ? ನೀವು ಬಿಟ್ಟು ಹೋದರೆ ನಾನು ಅವಳನ್ನು ಸ್ವೀಕರಿಸೇನೆಂದು ತಿಳಿದಿರುವಿರೋ? ಹಾಗೆಂದಿಗೂ ಆಗದು.

ಕಂದ : ಕುಮುದವ ತಿಳಿಯೆ ಶಶಾಂಕಂ |
ಕಮಲವ ಸವಿತನರಳಿಸುವದುಂಟಿಳೆಯೊಳ್ ಬ||
ಲ್ಲಮನುಜರಿವರೊಲ್ ಮನಮಂ |
ದಮನಸಿಹರ್ಪರ ಕಾಮನಿಗೆ ಪರಾಙ್ಮುಖರ್ರೈ ||

ಶಾರ್ಙ್ಗರವ : ಮೊದಲು ಮಾಡಿದಂಥ ನಿನ್ನ ಕೃತಿಯನ್ನು ನೀನೇ ಈಗ ಅನ್ಯ ಸಂಗತಿಯಿಂದ ಮರೆತುಬಿಟ್ಟೆ. ಇಂಥವನಿಗೆ ಅಧರ್ಮಕ್ಕೆ ಹೆದರುವವನೆಂದು ಹ್ಯಾಗೆನ್ನಬೇಕು?

ಅರಸು : (ಪುರೋಹಿತರಿಗೆ) ಸ್ವಾಮಿನ್, ತಮ್ಮ ಮತ ಹ್ಯಾಗೆ ಇದಕ್ಕೆ?

||ಕಂದ||

ನಾನೇ ಮೂಢನೊ ಅಥವಾ
ಮೀನಾಕ್ಷಿಯ ಮಾತು ಮಿಥ್ಯವೋ ಸಂದೆಗ ವಿಹಿ ||
ತೋ ನಿಜದಾರ ತ್ಯಾಗಂ |
ಏನೀ ಪರವೆಣ್ಮುಟ್ಟುವ ತಮವೋ ಪೇಳ್ವೈ ||೧||

ಪುರೋಹಿತ : (ಧ್ಯಾನಿಸಿಕೊಂಡು) ಹಾಗಾದರೆ ಹೀಗೆ ಮಾಡತಕ್ಕದ್ದು.

ಅರಸು : ಹ್ಯಾಗೆ ಮಾಡತಕ್ಕದ್ದು? ಅಜ್ಞಾಪಿಸಬೇಕು.

ಪುರೋಹಿತ : ಈ ಸ್ತ್ರೀಯು ಪ್ರಸೂತಳಾಗುವ ಪರ್ಯಂತ ನಮ್ಮ ಮನೆಯಲ್ಲಿರಬೇಕು. ಯಾಕೆಂದರೆ ಪೂರ್ವದಲ್ಲಿ ತಮಗೆ ಭಗವದ್ಭಕ್ತರು ಚಕ್ರವರ್ತಿ ಪುತ್ರನ ಪ್ರಾಪ್ತಿಯಾಗಲೆಂದು ಆಶೀರ್ವಚನವನ್ನು ಕೊಟ್ಟಿರುತ್ತಾರೆ. ಇವಳಿಗೆ ಅಂಥ ಲಕ್ಷಣವುಳ್ಳ ಪುತ್ರನಾದನಂತೆ ತಾವು ಅಂತಃಪುರದಲ್ಲಿ ಇವಳನ್ನು ಇಟ್ಟುಕೊಳ್ಳತಕ್ಕದ್ದೇ ಸರಿ; ಮತ್ತೆ ಅಂಥ ಲಕ್ಷಣವುಳ್ಳ ಮಗನನ್ನು ಪಡೆಯದೆ ಹೋದಳಂತೆ ಆ ಪಕ್ಷದಲ್ಲಿ ಅವಳು ತನ್ನ ಋಷಿಗಳಾಶ್ರಮಕ್ಕೆ ತಿರುಗಿ ಹೋಗುವದೇ ಯೋಗ್ಯ.

ಅರಸು : ತಮ್ಮ ಚಿತ್ತಕ್ಕೆ ಹ್ಯಾಗೆ ಬರುತ್ತದೊ ಹಾಗೆ ಆಗಿಕೊಳ್ಳಲಿ.

ಪುರೋಹಿತ : (ಶಕುಂತಲೆಗೆ) ಅಮ್ಮ, ನನ್ನ ಸಂಗಡ ಬನ್ನಿ.

ಶಕುಂ : ಹೇ ಮಾತೇ! ಭಘವತಿ.! ವಸುಂಧರೆ! ನನ್ನನ್ನು ಹೊಟ್ಟೆಯಲ್ಲಿ ತೆಗೆದು ಕೊಳ್ಳಬಾರದೆ? (ಎಂದು ರೋಧನವನ್ನು ಮಾಡುತ್ತ ಪುರೋಹಿತನ ಸಂಗಡ ಹೋಗಲಾರಂಭಿಸುತ್ತಾಳೆ. ತಪಸ್ವಿಗಳೂ ಹೊರಟು ಹೋಗುತ್ತಾರೆ.)

ಅರಸು : (ಬ್ರಾಹ್ಮಶಾಪದಿಂದ ಸ್ಮೃತಿಯು ಆಚ್ಛಾದಿತವಾದುದರಿಂದ ಶಕುಂತಲೆಯ ವಿಷಯವಾಗಿ ಚಿಂತಿಸುತ್ತಿರುತ್ತಾನೆ.) (ತೆರೆಯಲ್ಲಿ) ಶಬ್ದವಾಗುತ್ತದೆ. ಏನಾಶ್ಚರ್ಯವಯ್ಯಾ! ಏನಾಶ್ಚರ್ಯವಿದು!

ಅರಸು : ಏನದು?

(ಪುರೋಹಿತನು ಬರುತ್ತಾನೆ.)

ಪುರೋಹಿತ : (ವಿಸ್ಮಯದಿಂದ) ಮಹಾರಾಯಾ, ಮಹಾ ಅದ್ಭುತವಾದ ಮಾತಾಯಿತು!

ಅರಸು : ಏನು ಸ್ವಾಮೀ ಅದು?

ಪುರೋಹಿತ : ಆ ಕಣ್ವ ಋಷಿ ಶಿಷ್ಯರು ಹೊರಟು ಹೋದ ಕ್ಷಣವೆ ಆ ಸ್ತ್ರೀಯು ಬಹು ಆಕಾಂತವನ್ನು ಮಾಡಿಬಿಟ್ಟಳು.

ಕಂದ || ಮುತ್ತಿನ ಸರ ಕಿತ್ತೊಗೆದಳ್ |
ಮೆತ್ತಣವೆಣ್ ಕಣ್ಮುತ್ತು ಸುರಿಸುತ್ತತ್ತಳ್ ಮುಂ|
ಗುತ್ತಿಗೆಯೊತ್ತಿ ಬರಲ್ ನಿ - |
ನ್ನುತ್ತಮ ನಾಮವನೊತ್ತಿ ಒದರಿ ಮೂರ್ಛಿಸಿದಳ್ ||೧||

ಅರಸು : ಮುಂದೇನಾಯಿತು ಸ್ವಾಮಿ?

ಪುರೋಹಿತ :

ಕಂದ || ಆಗಲು ಕಾರ್ಮಿಂಚಿನವೋ-|
ಲಾಗಸದಿಂದೋರ್ವಳ್ ಬಂದೆತ್ತಿದವಳವಳಂ ||
ಬೇಗದಿ ಬಿಗಿದಳ್ ಮೇಲತಿ |
ವೇಗದಿನಪ್ಸರೆಯರ ತೀರ್ಥದಿ ಮುಳುಗಿದಳೈ ||೧||

(ಕೇಳಿ ಎಲ್ಲರೂ ಆಶ್ಚರ್ಯ ಹೊಂದುತ್ತಾರೆ.)

ಅರಸು : ಭಗವನ್, ಮೊದಲೇ ಈ ಮಾತಿನ ನಿರಾಕರಣೆಯನ್ನು ನಾವು ಮಾಡಿ ಬಿಟ್ಟಿದ್ದೇವೆ. ಇನ್ನು ಮೇಲೆ ಆ ಮಾತು ಯಾತಕ್ಕೆ? ಬಿಟ್ಟುಬಿಡಿ.

ಪುರೋಹಿತ : ಒಳ್ಳೇದು; ಹಾಗಾದರೆ. ನಾವು ಮನೆಗೆ ಪ್ರಯಾಣ ಮಾಡುತ್ತೇವೆ.

ಅರಸು : ಒಳ್ಳೇದು.

ಪುರೋಹಿತ : ವಿಜಯಸ್ವ (ಹೊರಟು ಹೋಗುತ್ತಾನೆ.)

ಅರಸು : ಎಲೆ ವೇತ್ರವತಿ, ಬಹುಶ್ರಮವಾಗಿದೆ. ಶಯ್ಯಾಮಂದಿರಕ್ಕೆ ಹೋಗುವ ದಾರೀ ತೋರು.

ವೇತ್ರವತಿಕೆ : ಹೀಗೆ ಬನ್ನಿರಿ (ನಡೆಯಲಾರಂಭಿಸುತ್ತಾಳೆ.)

ಅರಸು : (ನಡೆಯುತ್ತ ತನ್ನೊಳಗೆ)

ಕಂದ || ಮುನಿತನಯಳ ಕೂಡೆನ್ನಯ ||
ಕನಸಿಲಿ ಸಹ ಮದುವೆಯಾದುದಂ ನಾಂ ಸ್ಮರಿಸೆಂ ||
ಮನಸುರೆ ಹಳಹಳಿಸುವದಿಂ |
ತನುಭವಿತ ಮಾತಿಗೆ ಸಾಕ್ಷಿಯ ನುಡಿವುದೇನ್ಕೆ||

(ಹೊರಟು ಹೋಗುತ್ತಾನೆ.)

ಐದನೆ ಅಂಕವು ಮುಗಿದುದು.

೬ನೆಯ ಅಂಕವು

ಪ್ರವೇಶಕವು

(ಶಹರದ ಕೊತವಾಲನೂ, ಹೆಡಮುರಿಗೆ ಬಿಗಿಯಲ್ಪಟ್ಟ ಒಬ್ಬ ಮೀನಗುಲಿಯನ್ನು ತೆಗೆದುಕೊಂಡು ಇಬ್ಬರು ಸಿಪಾಯರೂ ಬರುತ್ತಾರೆ.)

ಸಿಪಾಯಿ : (ಮೀನಗುಲಿಗೆ ತಾಡನವನ್ನು ಮಾಡಿ) ತುಡುಗ ಬಡ್ಡೀ ಮಗನೆ, ಬೊಗಳು ಬೇಗ; ಈ ರತ್ನಖಚಿತವಾದ ರಾಜಮುದ್ರಿಕೆಯು ನಿನ್ನ ಹತ್ತರ ಹ್ಯಾಗೆ ಬಂತು?

ಮೀನಗುಲಿ · (ಭಯಪಟ್ಟು) ಓ, ಬಡೀ ಬ್ಯಾಡವ!

ಸಿಪಾಯಿ : (ಮತ್ತೂ ನಾಲ್ಕೈದು ಪೆಟ್ಟು ಗುದ್ದುತ್ತಾನೆ.)

ಮೀನಗುಲಿ : ಎಲಿ ಇವನ! ಸುಮನ ನನ್ಯಾಕ ಬಡೂತೀಯೋ ನಿನ ಮಂಜಾಳ ಹೋಗಲಿ!

ಸಿಪಾಯಿ : (ಮತ್ತೂ ಗುದ್ದಿ) ಬಡ್ಡೀ ಮಗನೇ, ಈ ಉಂಗುರ ನಿನ್ನ ಹತ್ತರ ಹ್ಯಾಗೆ ಬಂತು; ಕಿವಿ ಕೇಳುವದಿಲ್ಲವೇ?

ಮೀನಗುಲಿ : ಆಗ ಹೇಳಾಕಿಲ್ಲೇನಪಾ; ಸುಮ್ಮನ ದುಪುದುಪು ದನ ಬಡಧಾಂಗ ಬಡದರ ಯಾತಕ ಬಂತಾ|

ಸಿಪಾಯಿ : (ಮತ್ತೂ ಗುದ್ದಿ) ತುಡುಗ ಸೂಳೇ ಮಗನೇ, ಮತ್ತೂ ಹಾಳು ರಗಳೆ ಹಚ್ಚಿದ್ದಾನೆ, ಬೊಗಳು ಬೇಗ.

ಮೀನಗುಲಿ : ಅಪ್ಪೋ, ನಾ ತುಡುಗ ಮಾಡಿಲ್ಲ ಕಾಣಪ ! ಯರ್ತ ಬಡಿಬ್ಯಾಡ.

ಸಿಪಾಯಿ : ಕಳ್ಳ ತಾಯಿಗಂಡ; ನೀನು ದೊಡ್ಡ ಬ್ರಾಹ್ಮಣನೆಂದು ದೊರೆಗಳವರು ದಾನ ಮಾಡಿದ್ದಾರೋ? (ಮತ್ತೂ ಬಡಿಯುತ್ತಾನೆ.)

ಮೀನಗುಲಿ : ನಿಂತಾರ ನಿಲ್ಲೋ ನಿನ್ನ ಮಂಜಾಳ ಹೋಗಲಿ! ಕವವ! ಮತ್ತು ಬಡೂತಾನು! ಅಪ್ಪೋ, ಶಕರಾವತಾರ ಛೇತ್ರದ ಮೀನಗುಲಿ ಅದೇನ ಕಾಣವ, ನಾ ಯಾಕ ತುಡುಗ ಆಗಲಿ?

ಎರಡನೆಯ

ಸಿಪಾಯಿ : (ಒಂದೇಟು ಗುದ್ದಿ) ಬಡ್ಡೀ ಮಗನೆ, ನಿನ್ನ ಜಾತಿ ಕುಲಾಚಾರ ಕೇಳುತ್ತೇವೇ ನಾವು?

ಕೊತವಾಲ : ಎಲೋ ಜಾನುಕಾ, ಸೂಚಕಾ, ಆತನು ಹೇಳುವದೆಲ್ಲ ಚೆನ್ನಾಗಿ ಕೇಳಿ ಕೊಳ್ಳಿ. ಮೊದಲು.

ಸಿಪಾಯಿ : ಮಹದಾಜ್ಞೆ. ನಾವು ಮಾತೇ ಆಡುವದಿಲ್ಲ. ಆತನು ಯಾವತ್ತು ವೃತ್ತಾಂತವನ್ನು ನಿಜವಾಗಿ ಮಾತ್ರ ಹೇಳಬೇಕು.

ಕೊತವಾಲ : (ಮೀನಗುಲಿಗೆ) ಒಳ್ಳೇಯದು, ಮುಂದೆ.

ಮೀನಗುಲಿ : ನಾ ದೇವರು, ದಿನಾ ಬೆಳಗಿಲೆ ಎದ್ದಕ್ಯಾಸ ಜಾಳಗಿ ತಗೊಂಡ ಶಕರಾವತಾರ ಚೇತರದಾಗ ಮೀನಾ ಹಿಡದ ಹೆಂಡರ ಮಕ್ಕಳ ಹೊಟ್ಟೆಗೆ ಹಾಕತಿರತೇನ್ರಿ.

ಕೊತವಾಲ : (ನಗುತ್ತ) ಒಳ್ಳೇ ಪವಿತ್ರವಾದ ವ್ಯವಹಾರವನ್ನು ಮಾಡುತ್ತಿ.

ಮೀನಗುಲಿ : ಡ್ಯಾವರು, ನನಗ ನಗಬಾರದರಿ ಬುದ್ಧೀ; ಅಜ್ಜ ಆರತೆಲಿ ಮುತ್ಯಾಮೂರತೆಲಿ ಇದೇ ವ್ಯಾರೇವ ಮಾಡತ ಬಂದೀವರಿ; ಆದ ಹ್ಯಾಂಗ ಬಿಡಾಕ ಬರತೈತ್ರಿ? ಜೀವಾ ಕೊಲ್ಲವಗೇನ ಅಂತಕ್ಕಣ್ಣಾ ಇರಾಣೆಲ್ರೇ? ಕಾಣಾಪಟ್ಟಿ ಹಾರೂರು ಯಗ್ನಾ ಮಾಡುವಾಗ ಕುರಿ ಕೊಲ್ಲಾಣೆಲ್ರೇ ಗುದ್ದಿ ಗುದ್ದಿ ಕ್ಯಾಸಿ? ಹಾಂಗ ನಮ್ಮ ಹ್ಯಾರೆವತಿರಿ, ನನ್ನ ಒಡ್ಯಾ.

ಕೊತವಾಲ : ಒಳ್ಳೇದು ಮುಂದೆ.

ಮೀನಗುಲಿ : ಒಂದು ದಿನ, ನನ್ನ ಒಡ್ಯಾ, ಆ ಹೊಳ್ಯಾಗ ರೋಹಿತ ಜಾತೀ ಮೀನ ಸಿಕ್ಕಿತರಿ. ಸಿಗಾಣಾ ಅದನ್ನ ಮನೀಗೆ ತಂದಕ್ಯಾಸಿ ಕೊಯ್ಯೋ ಹೊತ್ತಿನಾಗ ಕದರ ಹೊಟ್ಯಾಗ ಈ ಉಂಗರ ಹೊಂಟಿತರಿ ನನ್ನ ಒಡ್ಯಾ, ಹಾಂಗ ನಾ ಇದನ್ನ ಮಾರಬೇಕಂತ ಪ್ಯಾಟ್ಯಾಗ ಹೋಗತಿದ್ನ್ಯ; ದಾರ್‍ಯಾಗ ಈ ಅಪಗೋಳ ಗಂಟಬಿದ್ದ ನನ್ನ ದನ ಬಡವಹಾಂಗ ಬಡದ ನಿಮ್ಮ ಪಾದಕ ತಂದೂ ದಾರ, ನನ್ನ ಒಡ್ಯಾ. ಇದ್ದದ್ದ ನಾ ಕರೇ ಹೇಳತೀನ್ರಿ. ಇದರಮ್ಯಾಗ ದಣೀರ ನದರಿಗೆ ಹ್ಯಾಂಗ ಬರತಿತಿ ಹಾಂಗ ಮಾಡಬೇಕರಿ.

ಕೊತವಾಲ : ಎಲೋ ಜಾನುಕಾ, ಗೋಧಾದಿ ಮತ್ಸ್ಯ ಜಾತಿಗಳ ಹೊಟ್ಟೆಯಲ್ಲಿ ಇಂಥ ವಸ್ತುಗಳು ಸಿಗುವದುಂಟು. ಹಾಗೂ ಈ ಉಂಗುರಕ್ಕೆ ಮೀನದ ವಾಸನೆ ಬರುತ್ತದೆ. ಈ ಮನುಷ್ಯನು ಮೀನುಗಾರನಾಗಿದ್ದಾನೆ. ಆದರೆ ಈ ಮಾತಿನ ವಿಚಾರಣೆ ಚೆನ್ನಾಗಿ ಆಗಬೇಕಾಗಿರುತ್ತದೆ. ಕಾರಣ ದೊರೆಗಳವರ ಓಲಗಕ್ಕೆ ಈತನನ್ನು ತೆಗೆದುಕೊಂಡು ಹೋಗುವ.

ಜಾನುಕ : ಒಳ್ಳೇದು ನಡಿಯೊ ಕಳ್ಳ ಸೂಳೇಮಗನೆ.

(ಎಲ್ಲರೂ ಮುಂದಕ್ಕೆ ನಡೆಯುತ್ತಾರೆ.)

ಕೊತವಾಲ : ಎಲೋ ಸೂಚಕಾ, ಎಲೋ ಜಾನುಕಾ, ನೀವು ಇಲ್ಲಿಯೇ ಮಹಾದ್ವಾರದಲ್ಲಿ ಈತನನ್ನು ಹಿಡಿದುಕೊಂಡು ನಿಲ್ಲಿರಿ. ನಾನು ದರಬಾರಿನಲ್ಲಿ ಹೋಗಿ ಈ ಎಲ್ಲ ಸಂಗತಿಯನ್ನು ಮಹಾರಾಯರ ಮುಂದೆ ವಿಜ್ಞಾಪಿಸಿ ಏನೆಂಬುದನ್ನು ಆಜ್ಞೆ ತೆಗೆದುಕೊಂಡು ಬರುತ್ತೇನೆ.

ಸಿಪಾಯಿಗಳು: ಒಳ್ಳೇದು ತಾವು ಹೋಗಬೇಕು, ದೇವರು. ಇನಾಮು ದೊರಕಿಸಲಿಕ್ಕೆ ನಾವು ಈತನನ್ನು ಹಿಡಿದುಕೊಂಡು ನಿಲ್ಲುತ್ತೇವೆ. (ಕೊತವಾಲನು ಆ ಮುದ್ರಿಕೆಯನ್ನು ತೆಗೆದುಕೊಂಡು ಒಳಗೆ ಹೋಗುತ್ತಾನೆ.)

ಸೂಚಕ : ಎಲೋ ಜಾನುಕಾ, ಕೊತವಾಲ ಸಾಹೇಬರು ಹೋಗಿ ಬಹಳ ಹೊತ್ತಾಯಿತು. ಇನ್ನೂ ಏನು ಕಾರಣ ಬರಲಿಲ್ಲ?

ಜಾನುಕ : ಅವಕಾಶ ನೋಡಿಕೊಂಡು ಅರಸರ ಕಿವಿಯ ಮೇಲೆ ವರ್ತಮಾನ ಹಾಕಬೇಕಾಗುತ್ತದೆ. ರಾಜರಿಗೆ ಇದು ಒಂದೇ ಕಾರ್ಯವೆ? ಅನೇಕ ಕಾರ್ಯಗಳಿರುತ್ತವೆ ಪ್ರತಿನಿತ್ಯದಲ್ಲಿ.

ಸೂಚಕ : ಜಾನುಕಾ, ಈತನ ಕೊರಳಲ್ಲಿ ಕಣಗಿಲ ಮಾಲೆ ಹಾಕಬೇಕೆಂದು ನನ್ನ ಕೈಗಳು ಹಾತೊರೆಯುತ್ತವೊ; ಇವನಿಗೆ ಸೂಲಕ್ಕೆ ಹಾಕಿದರೆ ನೆಟ್ಟಗಾದೀತು.

ಮೀನಗುಲಿ : ಸಿಪಾಯಪ್ಪಾ, ಅನ್ಯಾವ ಇಲ್ಲ ನನ್ನ ಕೊಲ್ಲಬ್ಯಾಡವ ನಾ ನಿನಗೇನ ಮಾಡಿದೇನಂತ ಡಾವೀ ಸಾರತಿ?

ಜಾನುಕ : ಕೊತವಾಲ ಸಾಹೇಬರು ಬರುತ್ತಾರೆ. ಕೈಯಲ್ಲಿ ರಾಜಾಜ್ಞೆಯ ಕಾಗದವು ಕಾಣಿಸುತ್ತದೆ. (ಮೀನಗುಲಿಗೆ) ನೀನು ಹದ್ದು ಕಾಗೆಗಳ ಆಹಾರವಾಗುತ್ತೀಯೊ ಅಥವಾ ನರಿನಾಯಿಗಳ ಬಾಯಲ್ಲಿ ಬೀಳುತ್ತೀಯೊ ಹೇಳು ನೋಡುವ.

(ಕೊತವಾಲನು ಬರುತ್ತಾನೆ.)

ಕೊತವಾಲ : ಸೂಚಕಾ, ಹೋಗಲಿ ಬಿಟ್ಟುಬಿಡು ಆತನನ್ನು, ವಿಚಾರಿಸಲಾಗಿ ಆ ಉಂಗುರವು ಇವನ ಕೈಯಲ್ಲಿ ಹ್ಯಾಗೆ ಬಂತೆಂಬುದು ಇವನು ಹೇಳುವಂತೆ ನಿಜವಾಯಿತು.

ಸೂಚಕ : ಧನಿಯರಾಜ್ಞೆ, ನಮಗೇನು!

ಜಾನುಕ : ಈ ಮುಂಡೇ ಮಗನು ಯಮನ ತಲೆಬಾಗಿಲದಲ್ಲಿ ಕಾಲಿಟ್ಟು ಮತ್ತೆ ಹಿಂತಿರುಗಿ ಬಂದು ಬಿಟ್ಟನು. (ಮೀನಗುಲಿಯ ಹೆಡೆಮುರಿಗೆ ಬಿಚ್ಚಿಬಿಡುತ್ತಾರೆ.)

ಮೀನಗುಲಿ : (ಕೊತವಾಲನಿಗೆ ಮುಜರೆ ಮಾಡಿ) ಹ್ಯಾಂಗ ನನ್ನ ಒಡ್ಯಾ; ನನ್ನ ಹ್ವಾರೇವ ಹ್ಯಾಂಗಸತಿರಿ?

ಕೊತವಾಲ : ಮಗನೆ, ಕೇಳುತ್ತಿಯೇನು! ಮೇಲಾಗಿ ದೊರೆಗಳವರು ಉಂಗುರದ ಬೆಲೆಯ ದ್ರವ್ಯವನ್ನು ನಿನಗೆ ಕೊಟ್ಟಿದ್ದಾರೆ ತೆಗೆದುಕೋ (ಎಂದು ಆತನ ಪದರಿನಲ್ಲಿ ದ್ರವ್ಯವನ್ನು ಸುರುವುತ್ತಾನೆ.)

ಮೀನಗುಲಿ : (ಮುಜರೆ ಮಾಡಿ ದ್ರವ್ಯವನ್ನು ತೆಗೆದುಕೊಳ್ಳುತ್ತಾನೆ.) ದೊರೆಗೋಳು ಬಾಳ ಬಾಳದಯ ಮಾಡಿದಿರಿ ಬಡವನ ಮ್ಯಾಗ.

ಸೂಚಕ : ದಯಮಾಡುವದೆಂದರೆ ಇದಕ್ಕೆ ಅನ್ನತಕ್ಕದ್ದು. ಸೂಲದ ಮೇಲಿಂದ ತೆಗೆದು ಆನೆಯ ಅಂಬಾರಿಯಲ್ಲಿ ಕುಳ್ಳಿರಿಸಿದರು.

ಜಾನುಕ : ದೇವರು, ಈ ಮೀನುಗಲಿಗೆ ಇಷ್ಟು ದ್ರವ್ಯವನ್ನು ಒಮ್ಮೆಲೆ ಇನಾಮು ಕೊಡಬೇಕಾದರೆ ಮಹರಾಯರಿಗೆ ಈ ಉಂಗುರವು ಒಳ್ಳೇ ಚೆನ್ನಾಗಿ ಕಂಡಿರಬಹುದು.

ಕೊತವಾಲ : ಉಂಗುರದ ಬೆಲೆ ಬಹಳೆಂದು ಈತನಿಗೆ ಇಷ್ಟು ದ್ರವ್ಯ ಕೊಟ್ಟಂತೆ ಕಾಣುವದಿಲ್ಲ. ಅದನ್ನು ನೋಡಿ ಅವರಿಗೆ ಅತಿ ಪ್ರಿತ್ಯಾಸ್ಪದರಾದಂಥವರ ಸ್ಮರಣೆಯಾಗಿರ ಬಹುದೆಂದು ಕಾಣಿಸುತ್ತದೆ. ಮಹಾರಾಯರು ಒಳ್ಳೇ ಗಂಭೀರವಾದ ಮನಸ್ಸು ಳ್ಳವರು. ಅವರ ಮನಸ್ಸಿನಲ್ಲಿ ಈ ಹೊತ್ತಿನಲ್ಲಿ ಓೀಗೆಯೇ ಬಂದಿದೆ ಎಂದು ಯಾರಿಗೂ ತಿಳಿಯಗೊಟ್ಟವರಲ್ಲ. ಆದಾಗ್ಯೂ ಮುದ್ರಿಕೆಯನ್ನು ನೋಡಿದ ಕ್ಷಣವೇ ಒಂದು ಗಳಿಗೆ ಪರ್ಯಂತ ಸುಮ್ಮನೆ ಚಿಂತೆಯಲ್ಲಿ ಮಗ್ನರಾಗಿ ಕೂತುಕೊಂಡಿದ್ದರು.

ಸೂಚಕ : ಹಾಗಾದರೆ, ದೇವರು, ತಾವು ಈವೊತ್ತು ಒಂದು ಮಹದ್ರಾಜಕಾರ್ಯವನ್ನೇ ಸಾಧಿಸಿದ ಹಾಗಾಯಿತು.

ಜಾನುಕ : ರಾಜಕಾರ್ಯಕ್ಕಿಂತಲೂ ಈ ಮೀನಗುಲಿ ಮಗನ ಕಾರ್ಯವನ್ನು ಸಾಧಿಸಿದ ಹಾಗಾಯಿತು. (ಎಂದು ಮಾತ್ಸರ್ಯಯುಕ್ತನಾಗಿ ವಕ್ರದೃಷ್ಟಿಯಿಂದ ನೋಡಿ ಗೋಣು ಹಾಕುತ್ತಾನೆ.)

ಮೀನಗುಲಿ : ನನ್ನ ತಂದಿಗೋಳಿರ್ರ್ಯಾ, ಇದರಾನ ಅರ್ಧಾ ನಿಮ್ಮದತಿ. ದಯಮಾಡಿ ತೊಗೊಂಡಕ್ಯಾಸಿ ನನ್ನ ಬಿಡಬೇಕರಿ.

ಜಾನುಕ : ಈ ಮಾತು ಸರಿಯಾದದ್ದೆ.

ಕೊತವಾಲ : ಎಲೋ ಮೀನಗುಲಿ, ನೀನು ಒಳ್ಳೇ ದೊಡ್ಡ ಮನುಷ್ಯನಾಗಿ ಕಾಣಬರುತ್ತೀ. ಕಾರಣ ಈಪೊತ್ತಿನಿಂದ ನೀನು ನಮ್ಮ ಗೆಳೆಯನಾದೆ. ಆದರೆ ಆಕಾಶಗಂಗೆಯ ಸಾಕ್ಷಿಯಿಂದ ಈ ಮೈತ್ರಿಯು ನಿಜವಾಗಬೇಕಾಗಿರುತ್ತದೆ. ಕಾರಣ ಗಡಂಗಕ್ಕೆ ಹೋಗೋಣ ನಡಿ.

ಎಲ್ಲರು : ನಡೆಯಿರಿ ಹಾಗಾದರೆ. (ಎಂದು ಎಲ್ಲರೂ ಹೊರಟು ಹೋಗುತ್ತಾರೆ.)

(ಇದು ಪ್ರವೇಶಕವು.)

(ಆಮೇಲೆ ಸಾನುಮತಿ ನಾಮಕಳಾದ ಅಪ್ಸರಸ್ತ್ರೀಯು ಬರುತ್ತಾಳೆ.)

ಸಾನುಮತಿ : ಅಪ್ಸರಸ್ ತೀರ್ಥದಲ್ಲಿ ಸಾಧು ಜನರ ಸ್ನಾನವಾಗುವ ಪರ್ಯಂತ ಅಲ್ಲಿರತಕ್ಕದ್ದು ಇಪತ್ತಿನ ಬಾರಿ ನನ್ನದಿತ್ತು. ಆ ಕೆಲಸವಂತೂ ನಾನು ತೀರಿಸಿದೆ. ಇನ್ನು ಮೇಲೆ ಈ ರಾಜರ್ಷಿಯ ವೃತ್ತಾಂತವೇನೆಂಬುದನ್ನು ನೋಡುವ. ಮೇನಕೆಯ ಸಂಬಂಧದಿಂದ ನೋಡಲಾಗಿ ಶಕುಂತಲೆಯು ನನ್ನ ಶರೀರಾಂಶಳಾಗಿರುತ್ತಾಳೆ. ಮೇಲಾಗಿ ಮೇನಕೆ ತನ್ನ ಮಗಳ ವಿಷಯವಾಗಿ ಈ ಕಾರ್ಯವನ್ನು ಮಾಡಹೇಳಿದ್ದಾಳೆ. (ಸುತ್ತಲು ನೋಡಿ) ವಸಂತ ಋತುವು ಪ್ರಾಪ್ತವಾಗಿ ಹೋಯಿತು. ಇನ್ನೂವರೆಗೂ ಉತ್ಸವಚಿಹ್ನಗಳು ರಾಜಮಂದಿರದಲ್ಲಿ ಕಾಣುವದೇ ಇಲ್ಲ! ಇದೆಲ್ಲ ವೃತ್ತಾಂತವು ಅಂತರ್ಜ್ಞಾನದಿಂದೇ ನನಗೆ ತಿಳಿಯತಕ್ಕ ಸಾಮರ್ಥ ಉಂಟಾದರೂ ಸಖಿಯು ಆದರದಿಂದ ಹೇಳಿದ್ದಕ್ಕೆ ಮಾನವನ್ನು ಕೊಡಬೇಕಾಗಿದೆ. ಒಳ್ಳೆಯದು; ಇವರಿಬ್ಬರು ತರುಣ ಸ್ತ್ರೀಯರು ಈ ತೋಟದಲ್ಲಿ ಏನು ಮಾಡುತ್ತಿದ್ದಾರೆ ನೋಡುವ. ಇವರ ಹತ್ತರ ಹೋಗಿ ತಿರಸ್ಕರಣೀ ವಿದ್ಯೆಯಿಂದ ಅದೃಶ್ಯರೂಪಿಣಿಯಾಗಿ ನಿಲ್ಲುತ್ತೇನೆ. (ಕುಣಿಯುತ್ತ ಕುಣಿಯುತ್ತ ಹೋಗಿ ಅವರ ಬಳಿಯಲ್ಲಿ ನಿಲ್ಲುತ್ತಾಳೆ.)

(ಇಷ್ಟರಲ್ಲಿ ಒಬ್ಬ ದಾಸಿಯು ಬಂದು ಚೂತವೃಕ್ಷದ ಪಲ್ಲವಗಳನ್ನು ನೋಡುತ್ತ ನಿಲ್ಲುತ್ತಾಳೆ. ಮತ್ತೊಬ್ಬ ದಾಸಿಯು ಅವಳ ಹಿಂದೆ ಬರುತ್ತಾಳೆ.)

ಮೊದಲನೆಯ ದಾಸಿ : (ಆಮ್ರವೃಕ್ಷದ ಮಂಜರಿಗಳನ್ನು ನೋಡಿ)

ಲಾವಣಿ

(ದಾಟಿ: ಛನನನನನನನ ಘುಂಗುರು|| ವಾಜಜಾತಿ ಮಾಝ್ಯೀಚರಣೀಗ|| ಟಾಕೀತೇ ಜಪುನಿ ಪದಧರಣೀಗ || ರಜನೀ ನಿಜಿಪ ಕಾಳುಂಯೀ ವಾಟತ ಭಯಸೇ ಕಾಯಕರೂ ||ಪಲ್ಲ|| ತೂ ಅಲೀಸ ಮಜಮೋಲಾವೂಗ|| ಹರಿ ಜವಳ ಕಸಿಗ ಮೀ ಜಾವುಗ || ಘರಿ ಧಾಕ ಸಾಸುದೀರ ಭಾವೂಗ | ಕುಠವರ ಮೀ ಠೇವುಗ ಜೀವ ಸಾಸುರವಾಸೀ ಜಾಈಲ ಅಬರು|| ಎಂಬ ಆರೇ ಮಾತಿನ ಲಾವಣಿಯಂತೆ.)

ಥಳಳಳಳಳಳಳಳ ಹೊಳೆವಾ ||
ಮಾವಿನ ಚೆಲುವ ಕೆಂದಳಿರೊಳ್
ತೀವಿರಲು ಮೊಗ್ಗೆ ಮಂಜರಿಗಳ್ || ವನದೊಳ್ ||
ದೇವ ವಸಂತನು ಕಾವನ ಸಖಿನೋಲ್ ಶೋಭಿಸುವಾ ||ಪಲ್ಲ||

ಗಿಳಿವಿಂಡುಗುದುರೆ ದಂಡುಗಳೊಳ್ ||
ಅಳಿಕುಲದ ನಾದವಾದ್ಯಗಳೊಳ್ ||
ಕಳರವದಿ ಪೊಗಳೆ ಕೋಗಿಲೆಗಳ್ ||ಸ್ಮರನೀ||
ಗೆಳೆಯ ವಸಂತನ ಘಳಿಲನೆದಿರು ಬಂದಪ್ಪಿರುವ ||೧||

ಅಂಬುಜಾಸ್ತ್ರಯ್ಯ ಸಂಗರದೊಳ್ ||
ಶಂಭುವಿನ ಗೆಲುವೆನೀದಿನದೊಳ್ ||
ಎಂಬಿನಿತು ಪೆರ್ಚಿನಾರ್ಭಟದೋಳ್ ||ಬನದೊಳ್||
ತುಂಬುವನಲರ ತುಬಾಕಿಯು ಪೊಗೆ ಮಂದಾನಿಲವ ||೨||

ಸ್ಮರರಾಯ ಭೂಪನೀ ತೆರದೊಳ್ ||
ಕರಕೊಂಡು ವಸಂತನ ಬಳಿಯೊಳ್ |
ಪರನೊಳು ಕಾದಲೀಸ್ಥಳದೊಳ್ || ಎಮ್ಮೊಲ್||
ಕಿರಿಹರೆಯಬಲೆಯರು ಬರುವದು ಕೇಳ್ ದುಸ್ತರವ ||೩||

ಎರಡನೆಯ
ದಾಸಿ : ಏನೇ ಕೋಕಿಲಾ, ಚೂತವೃಕ್ಷದ ಹತ್ತರ ಒಬ್ಬಳೆ ನಿಂತುಕೊಂಡು ಏನನ್ನು ಮಾತನಾಡುತ್ತಿದ್ದಿಯೇ?

ಮೊದಲನೆಯ
ದಾಸಿ : ಅಮ್ರಮಂಜರಿಯನ್ನು ನೋಡಿ ಕೋಕಿಲೆಗೆ ಮದವೇರುವ್ರದಿಲ್ಲವೇನೇ? ನನ್ನ ಪೆಸರು ಕೋಕಿಲೆ. ಇಷ್ಟು ತಿಳಿಯುವದಿಲ್ಲವೆ?

ಎರಡನೆಯ
ದಾಸಿ : (ತೀವ್ರದಿಂದ ಬಳಿಯಲ್ಲಿ ಬಂದು) ಕೋಕಿಲಾ, ವಸಂತಕಾಲವು ಪ್ರಾಪ್ತವಾಯಿತೇನೇ?

ಮೊದಲನೆಯ
ದಾಸಿ : ಎಲೆ ಮಧುರೆ, ನಾವು ಗಾಯನ, ನರ್ತನ, ವೀಣಾವಾದ್ಯ, ಮಧುಪಾನ ಇತ್ಯಾದಿಗಳಿಂದ ಯಥೇಚ್ಛವಾಗಿ ಆನಂದಬಡುವ ದಿವಸಗಳು ಇವೇ ಬಲ್ಲೆಯಾ?

ಎರಡನೆಯ
ದಾಸಿ : ಸಖಿಯೇ ಕೋಕಿಲಾ, ನನ್ನ ಕೈ ಹಿಡಿದು ನಿಲ್ಲು. ಈ ಕಲ್ಲ ಮೇಲೆ ಹತ್ತಿ ಆ ಮಾವಿನ ಹೂವನ್ನು ಕೊಯ್ಯುತ್ತೇನೆ. ಮನ್ಮಥನ ಪೂಜೆ ಮಾಡುವ.

ಮೊದಲನೆಯ
ದಾಸಿ : ಪೂಜಾಫಲದಲ್ಲಿ ಅರ್ಧವನ್ನು ನನಗೆ ಕೊಟ್ಟರೆ ಸೈ.

ಎರಡನೆಯ
ದಾಸಿ : ಸಖಿಯೇ ಇದೇನು ಹೇಳತಕ್ಕದ್ದು! ನಾನು ಬೇರೆ ನೀನು ಬೇರೆಯೆ! ದೇಹ ಮಾತ್ರ ಎರಡು ಹೊರ್ತಾಗಿ ಜೀವವೆಲ್ಲ ಒಂದೇ ಬಲ್ಲೆಯಾ! (ಎಂದು ಕಲ್ಲ ಮೇಲೆ ನಿಂತು ಗೆಳತಿಯ ಕೈಗೆ ಕೈ ಊರಿ ಮಾವಿನ ಹೂವನ್ನು ಕೊಯ್ಯುತ್ತಾಳೆ.) ಸಖಿಯೆ, ಈ ಆಮ್ರಮಂಜರಿಯು ಚೆನ್ನಾಗಿ ಪ್ರಫುಲ್ಲಿತವಾಗದಿದ್ದರೂ ದೇಟಿನ ಹತ್ತರ ಚಿವುಟಿದ್ದರಿಂದ ಬಹುಮಧುರವಾದ ವಾಸನೆ ಬರುತ್ತದೆ. (ಮಾವಿನ ಹೂವನ್ನು ಮೇಲಕ್ಕೆ ತೂರಿ ಕೈ ಮುಗಿದು ಧ್ಯಾನ ಮಾಡುತ್ತಾಳೆ.) ಹೇ ಪುಷ್ಪಧನ್ವಾ, ಹೇ ಮನ್ಮಥಸ್ವಾಮಿ, ನಾನು ಅರ್ಪಣೆ ಮಾಡಿದಂಥ ಆಮ್ರಮಂಜರಿಯನ್ನು ನಿನ್ನ ಪಂಚಶರದಲ್ಲಿ ಕೂಡಿಸಿ ಪಾಂಥಸ್ಥರಾದ ತರುಣ ಸ್ತ್ರೀಯರ ಮೇಲೆ ಬಿಡಬಹುದು ಬಲ್ಲೆಯಾ? (ಸಖಿಯಳಿಗೆ) ಇನ್ನು ಮೇಲೆ ಕೋಕಿಲೆ, ನಾನು ಕಮಲಪುಷ್ಪವೆಂಬ ಸ್ತಬಕದಲ್ಲಿ ಸಂಪಿಗೆ ಹೂವಿನ ದೀಪಗಳನ್ನು ಹಚ್ಚಿ ಆಲಿಟ್ಟಿದ್ದೇನೆ. ತೆಗೆದುಕೊಂಡು ಬಾ; ಆರತಿ ಬೆಳಗುವ.

ಮೊದಲನೆಯ
ದಾಸಿ : (ತೆಗೆದುಕೊಂಡು ಬರುವಳು.)

(ಇಬ್ಬರೂ ಪದವನ್ನು ಹಾಡುತ್ತ ಆರತಿ ಬೆಳಗುತ್ತಾರೆ.)

ಆರತಿ ಪದ

(ದಾಟಿ: ಸುರರು ನೆರೆದು ಬಂದು ಶರಧಿಯ ಶಯನಗೆ | ಮೊರೆಯಿಡಲಾಗ ಸುರರಿಗೆ ವರವ ನಿತ್ತು ಧರೆಯ ಭಾರವನಪಹರಿಸಲು ನರರೂಪ| ಧರಿಸಿ ದೇವಕಿಯುದರದಿ ಜನಿಸಿದ ಲಕ್ಷ್ಮೀರಮಣ ಗಾರುತಿಯ ಬೆಳಗಿರೆ ಸೋಬಾನೆ || ಎಂಬ ಪದದಂತೆ ||)

ಅತಿಶಯಾತುರದಿ | ರತಿಯು ಬಂದು ಬಿಸ-
ಟುತಿರೆ ಮುಸುಕುನೆರೆ | ಹಿತದಿ ತೋಳ್ಗಳಿಂ ||
ಸತಿಯನಪ್ಪಿ ಸನು| ಮತದೊಳು ವಸನರ
ಹಿತನಾಗಿ ಬಹುಬಗೆ | ರತಿಯರಚಿಪ ಮನು-
ಮಥನಿಗಾರತಿಯ ಬೆಳಗಿರೆ ಸೋಬಾನೆ ||೧||

ಮುನಿವರೆಲ್ಲ ಭು- |ವನದಿ ಸೌಖ್ಯ ವಿ|
ಲ್ಲೆನುತ ಮರುಳು ಹಿಡಿ | ದನುದಿನ ವನದೊಳು ||
ತನು ಕಷ್ಟಿಸಲು | ವನಿತೆಯರೆಳೆ ಕ-
ಣ್ಣಿನ ಗುಟುಕಲಿ ಮೆ- |ಲ್ಲ ನೆ ತಿಳಿಸುವ ಸಿರಿ-
ತನಯ ಗಾರುತಿಯ ಬೆಳಗಿರೆ ಸೋ- ||೨||
ಗಿಳಿಯನೇರಿ ಮಾಂ- | ದಳಿರ ವಸನ ಥಳ-
ಥಳಿಸೆ ಚಂದ್ರ ಕರ|ದೆಳೆಯ ಶಲ್ಯ ಹೊ- |
ತ್ತಳಿಯ ಸಿಂಜಿನಿಯ | ನೆಳೆದು ಕುಸುಮ ಶರ
ಗಳಲ್ಲಿ ತ್ರಿಲೋಕವ | ಗೆಲುವ ವಸಂತನ
ಗೆಳೆಯಗಾರುತಿಯ ಬೆಳಗಿರೆ ಸೋ - ||೩||

(ಮತ್ತೊಂದು ಮಾವಿನ ಚಿಗುರನ್ನು ಕೊಯಿದು ಮೇಲಕ್ಕೆ ತೂರಿ ಇಬ್ಬರೂ ಧ್ಯಾನವನ್ನು ಮಾಡಿ ಕೈ ಮುಗಿಯುತ್ತಾರೆ.)

[ಇಷ್ಟರಲ್ಲಿ ಕಂಚುಕಿಯು ಬರುತ್ತಾನೆ.]

ಕಂಚುಕಿ : (ಕೋಪಿಷ್ಟನಾಗಿ) ಖಬರದಾರ್, ಬುದ್ಧಿ ಎಲ್ಲಿಟ್ಟಿದ್ದೀರಿ! ದೊರೆಗಳವರು ವಸಂತೋತ್ಸವ ಮಾಡಬಾರದೆಂದು ಡಂಗುರವನ್ನು ಸಾರಿಸಿ ಬಿಟ್ಟಿದ್ದಾರೆ; ಗೊತ್ತಿಲ್ಲವೆ ನಿಮಗೆ? ಹುಚ್ಚೇರ್‍ಯಾ, ಹಳೆ ಹುಚ್ಚೇರ್‍ಯಾ ತೋಟದಲ್ಲಿ ಯಾರೂ ಇಲ್ಲದ ವ್ಯಾಳ್ಯದಲ್ಲಿ ಬಂದು ಮನ್ಮಥನ ಪೂಜೆ ಮಾಡುತ್ತಾರೆ, ನಾಚಿಕೆ ಬರುವದಿಲ್ಲವೆ?

ಇಬ್ಬರೂ : (ಅಂಜಿ) ಅಪ್ಪಯ್ಯನೆ ನಮಗೆ ಇದು ಗೊತ್ತಿಲ್ಲವೊ, ಸಿಟ್ಟು ಮಾಡಬೇಡ.

ಕಂಚುಕಿ : ನಿಮಗೆ ಗೊತ್ತಿಲ್ಲವೆ? ಬಹು ಆಶ್ಚರ್ಯ! ವಸಂತಕಾಲದಲ್ಲಿ ಪುಷ್ಪಗಳನ್ನು ಕೊಡುವ ವೃಕ್ಷಗಳು ಮತ್ತು ಅವುಗಳ ಮೇಲಿರುವ ಪಕ್ಷಿಗಳು ಸಹ ಮಹಾರಾಜರ ಆಜ್ಞೆ ಮೀರುವುದಿಲ್ಲ. ನೋಡಿ -

ಚಂಪಕಮಾಲಾ ವೃ||

ಅರೆಬಿರಿದಾಮ್ರಮಂಜರಿಗಳಿಂದೆ ಪರಾಗ ನೆಲಕ್ಕೆ ಬೀಳ್ವುದಿ |
ಲ್ಲರಳುವದಿಲ್ಲ ಸಂಪಿಗೆಯ ಮೊಗ್ಗೆಗಳನ್ನುವರೆಗೆ ಬಾಯ್ಗಳಿಂ ||
ಪೊರಡುವದಿಲ್ಲ ಕೋಕಿಲದ ಗಾಯನ ಮಾರನು ಮೀರಲಾರನೆ |
ಮ್ಮರಸಿನ ಶಾಸನಂಗಳನು ತಾಂಬಿಡ ಪೂಡಿದ ಪುಷ್ಪಬಾಣವ ||

ಸಾನುಮತಿ : ಸತ್ಯ ಸತ್ಯ; ಇದರಲ್ಲಿ ಸಂಶಯವಿಲ್ಲ. ನಮ್ಮ ಮಹಾರಾಯರ ಯೋಗ್ಯತೆಯೇ ದೊಡ್ಡದು.

ಮೊದಲನೆಯ
ದಾಸಿ : ಅಣ್ಣಯ್ಯ ಕೇಳು, ದೊರೆಸಾನಿಯವರ ತಮ್ಮನಾದ ಮಿತ್ರಾವಸುವೆಂಬ ನಗರಪಾಲಕನು ದೊರೆಗಳವರ ಸೇವಾರ್ಥವಾಗಿ ನಮ್ಮನ್ನು ಕಳುಹಿಸಿ ಸ್ವಲ್ಪ ದಿವಸಗಳಾದವು; ಈ ಪ್ರಮದ ವನದಲ್ಲಿ ಮೊನ್ನಿನಿಂದ ಕಾವಲಿಗೆ ಇಟ್ಟಿದ್ದಾರೆ. ಆದ್ದರಿಂದ ಈ ಮಾತು ನಮಗೆ ತಿಳಿಯಲಿಲ್ಲ.

ಕಂಚುಕಿ : ಒಳ್ಳೇದು, ಚಿಂತೆಯಿಲ್ಲ; ಇನ್ನು ಮೇಲೆ ಮಾತ್ರ ಹೀಗೆ ಮಾಡಬೇಡಿ.

ಇಬ್ಬರೂ
ದಾಸಿಯರು : ಅಣ್ಣಯ್ಯನೆ, ಈ ಮಾತು ಚನ್ನಾಗಿ ಕೇಳಬೇಕೆಂದು ಆಶೆ ಹುಟ್ಟಿದೆ. ಹೇಳಲಿಕ್ಕೆ ಯಾವ ಮಾತಿನಿಂದಲೂ ಪ್ರತಿಬಂಧವಿಲ್ಲದಿದ್ದರೆ ದೊರೆಗಳು ವಸಂತೋತ್ಸವವನ್ನು ಏನು ಕಾರಣ ನಿಲ್ಲಿಸಿದ್ದಾರೆಂಬುದನ್ನು ಹೇಳಬೇಕು.

ಸಾನುಮತಿ : ಮಾನವರಿಗೆ ಉತ್ಸವಾಪೇಕ್ಷೆ ಬಹಳ. ಹೀಗಿರಲು ಅರಸನಿಂದ ಈ ಮಾತು ಆದದ್ದರ ಕಾರಣವು ಏನಾದರೂ ದೊಡ್ಡದಿರಬೇಕು.

ಕಂಚುಕಿ : (ತನ್ನೊಳಗೆ) ಯಾವತ್ತರಿಗೂ ತಿಳಿದಂಥ ಮಾತು ಹೇಳಲಿಕ್ಕೆ ಅನುಮಾನವ್ಯಾಕೆ? (ದಾಸಿಯರಿಗೆ) ಶಕುಂತಲೆಯನ್ನು ಹಿಂತಿರಿಗಿ ಕಳುಹಿದ ಮಾತು ನಿಮ್ಮ ಕಿವಿಯವರೆಗೆ ಬಂದಿಲ್ಲವೆ?

ದಾಸಿಯರು: ಅಹುದು, ಉಂಗುರವು ಸಿಕ್ಕತನಕ ವರ್ತಮಾನವನ್ನು ದೊರೆಸಾನಿಯವರ ತಮ್ಮಂದಿರಾದ ನಗರಪಾಲಕರ ಬಾಯಿಯಿಂದ ಕೇಳಿದ್ದೇವೆ.

ಕಂಚುಕಿ : ಹಾಗಾದರೆ ಮುಂದೆ ಹೇಳುವದು ಸ್ವಲ್ಪವೇ ಉಳಿದಿದೆ. ಆ ಮುದ್ರಿಕೆಯನ್ನು ನೋಡಿದ ಕ್ಷಣವೆ ಶಕುಂತಲೆಯ ಕೂಡ ಏಕಾಂತದಲ್ಲಿ ಗಾಂಧರ್ವ ವಿವಾಹ

ಹೊಂದಿದ ಮಾತು ಮಹಾರಾಯರ ಸ್ಮರಣೆಯಲ್ಲಿ ಬಂದು ಅವಳನ್ನು ಹಿಂತಿರುಗಿ ಕಳುಹಿದೆನಲ್ಲ, ಎಂದು ಆವೃತ್ತಿನಿಂದ ಪಶ್ಚಾತ್ತಾಪದಿಂದ ಬಹು ನೊಂದುಕೊಂಡಿದ್ದಾರೆ ಆದ್ದರಿಂದ ವಸಂತೋತ್ಸವದ ಪ್ರತಿಬಂಧವಾಗಿದೆ. ದೊರೆಗಳವರ ಅವಸ್ಥೆ ಈಗ ಏನಾಗಿದೆಯೆಂದರೆ -

(ಪದ)

(ದಾಟಿ : ಬಾಯೆಂದಿರುವಾ ವನದಿ ಕ್ರೀಡಿಪ ಬಗೆ ಸಾಧಿಸು ಕೇಶವ ನರಹರಿಯೆ ||ಪಲ್ಲ||
ಟಕಮಕ ನೋಡುತ ಮುರಲಿಯ ನೂದುತ ನಡೆ ನಡೆ ನಡೆ ನಡೆ ನಡೆರಂಗಯ್ಯ ||೧||
ಎಂಬ ಪದದಂತೆ.)

ಬ್ಯಾಸರದಿರುವ ||
ಬದುಕನು ಸಖಿಯನು ಭೋಗಿಸಿ ಜರಿದಕೆ |
ಒಳಲಿ ಬೆಂದಿರುವ ||ಪಲ್ಲ||

ಮನೋಹರ ವಸ್ತುಗ| ಳನು ತಾ ಜರಿವ ||
ತನುವಿನ ಸೇವಕ | ರನು ಬ್ಯಾಡೆನುವ ||೧||

ಇರುಳೆಲ್ಲನು ಜಾ-| ಗರದೊಳು ಕಳೆವ ||
ಪರಿಯಂಕದಿ ಬಲ್|| ಹೊರಳುತಲಿರುವ ||೨||

ಬಲು ಎಚ್ಚರದಿಂ | ದಲಿ ಮಾತಾಡುವ |
ಲಲನೆಯರನು ಶಕುಂ-| ತಲೆಯೆಂದು ಕರೆವ ||೩||

ಮೊಗಮುಚ್ಚಿ ಅಳುವ | ಬಿಗಿದ ವಸ್ತ್ರವ ||
ನಗಲು ಸಖಿಯರು ನಾ- | ಚಿಗೆಯೊಳು ಬರುವ ||೪||

ಸಾನುಮತಿ : ಇದು ನನಗೆ ಪ್ರಿಯಕರವಾದ ಮಾತಾಯಿತು.

ಕಂಚುಕಿ : ಈ ಪ್ರಕಾರ ಮಹಾರಾಯರಿಗೆ ಬಹು ಖೇದವಾದದರಿಂದ ವಸಂತೋತ್ಸವಕ್ಕೆ ಪ್ರತಿಬಂಧ ಮಾಡಿದ್ದಾರೆ. ತಿಳಿಯಿತೆ?

ದಾಸಿಯರು : ಸರಿ ಸರಿ; ಯೋಗ್ಯ.

(ತೆರೆಯಲ್ಲಿ - ಬರಬಹುದು ಜೀಯ.)

ಕಂಚುಕಿ : (ಕಿವಿಗೊಟ್ಟು) ಓಹೋ! ಮಹಾರಾಯರು ಇತ್ತ ಕಡೆಗೇ ಬರುತ್ತಾರೆ. ನಿಮ್ಮ ನಿಮ್ಮ ಕಾರ್ಯಕ್ಕೆ ಹೊರಟುಹೋಗಿರಿ. (ಇಷ್ಟರಲ್ಲಿ ಪಶ್ಚಾತ್ತಾಪವನ್ನು ತೋರುವ ಸಾಧಾರಣ ವಸ್ತ್ರಾಲಂಕಾರಗಳಿಂದ ಅರಸು ಬರುತ್ತಾನೆ. ಅವನ ಹಿಂದೆ ವಿದೂಷಕನೂ ದ್ವಾರಪಾಲಿಕೆಯೂ ಬರುತ್ತಾರೆ.)

ಕಂಚುಕಿ : (ಅರಸನನ್ನು ನೋಡಿ) ಜಾತ್ಯಾ ಮನೋಹರವಾದ ಸ್ವರೂಪವು ಯಾವ ಸ್ಥಿತಿಯಲ್ಲಿದ್ದರೂ ರಮಣೀಯವಾಗಿಯೇ ಕಾಣಿಸುತ್ತದೆ.

(ಪದ)

(ದಾಟಿ : ರಂಗಾ ತಾರೋ ಸುಮ್ಮನೆ | ಎಮ್ಮಯ ಸೀರೆ ಸೆಳೆವರೇನೊ|| ಎಂಬ ಪದದಂತೆ.)

ನಮ್ಮ ದೊರೆಯು ಬರುವನೆ | ಪ್ರಮದವನಕೆ ಮೆಲ್ಲನೆ ||ಪಲ್ಲ||
ಶರೀರದ ಭೂಷಣಗಳ ಬ್ಯಾ | ಸರಿದು ಬಲು ಉದಾಸನಾಗಿ |
ತೊರೆದಿರೆ ನೋಳ್ಪವರ ಕಣ್ಗೆ | ಮರಳು ಗೊಳಿಪನೆ ||೧||
ಅಂಗಕೆ ಸಾಧಾರಣ ವಸ- | ನಂಗಳು ಎಡಗೈಯೊಳೊಂದೆ |
ಹೊಂಗಡಗ ವಿರಲು ಮೆರೆವನ - | ನಂಗರೂಪನೇ ||೨||
ಕೆಂದುಟಿಗಳು ಶ್ವಾಸದಿಂದೆ | ಕಂದಿರೆಕಣ್ಗಳು ಜಾಗರ-|
ದಿಂದೆ ಕೆಂಪುದೋರೆ ಮೆರೆವ | ನಿಂದು ವದನನೆ ||೩||
ಇಂತು ತನ್ನ ಕಾಂತೆಯು ಬಲು | ಚಿಂತೆಯಿಂದೆ ಸವೆಯೆ ಬಿಡದೆ
ಸ್ವಂತತೇಜ ತೆಯಿದ ರತ್ನ | ದಂತೆ ಪೊಳೆವನೆ ||೪||

ದಾಸಿಯರು : ಅಣ್ಣಯ್ಯನೆ, ನಾವು ನಮ್ಮ ಕೆಲಸಕ್ಕೆ ಹೋಗುತ್ತೇವೆ. (ಎಂದು ಹೊರಟು ಹೋಗುತ್ತಾರೆ.)

ಸಾನುಮತಿ : (ಅರಸನ ಸೌಂದರ್ಯವನ್ನು ನೋಡಿ) ಶಕುಂತಲೆಯನ್ನು ಅಪಮಾನ ಹೊಂದಿಸಿ ಓಂಕಿರುಗಿಸಿ ಕಳುಹಿಸಿದಾಗ್ಯೂ ಅವಳು ಈತನ ಚಿಂತನೆಯಲ್ಲಿಯೇ ಇರುತ್ತಾಳೆಂಬ ಮಾತು ಆಶ್ಚರ್ಯವಲ್ಲ.

ಅರಸು : (ಶಕುಂತಲೆಯನ್ನೇ ಧ್ಯಾನಿಸುತ್ತ ಅತ್ತಿತ್ತ ತಿರುಗುತ್ತಾನೆ.)

(ಪದ)

(ದಾಟಿ : ಅಖೀಜೋಲಗಗಯಿವೆ | ನಾದನ ಮೋರಾರೆ ||ಪಲ್ಲ|| ಕಿನಸೋತನ ಮಾರಿ|| ಅಖೀ ಜೊಲಗಗಯಿವೆ | ಜಿಯರಾಮೆ ಬಾಸಗಯಿವೆ-ನಾದನ || ಎಂಬ ಹಿಂದುಸ್ಥಾನೀ ಪದದಂತೆ.)

ಮನಸು ಮರುಗುವದು || ಮದವ ತೊರೆದು ||ಪಲ್ಲ||
ಪರಿ ಪರಿ ಬೋಧಿಸುವ | ಹರಿಣನಯನೆಯನು ||
ಜರಿದೀಗಲೆಚ್ಚರಿದು ಮದವಾ - ||೧||
ಕಂಬನಿಗಳಿಂದೆ ಬಲ್ | ಹಂಬಲಿಪಳ ಸ್ನೇಹ |
ವೆಂಬುವದೆ ಕಡಿದು ||೨||
ಕರುಣವಿಲ್ಲದಲೆ ಬಲ್ | ಕಠಿನೋಕ್ತಿಗಳಿಂ
ತರುಣಿಯಳಿಗಿರಿದು - ||೩||

ಸಾನುಮತಿ : (ತನ್ನೊಳಗೆ) ಅವಳ ದೈವದಲ್ಲಿಯೆ ಹೀಗಾಗಬೇಕೆಂದು ಬರೆದಿದೆ. ಅದಕ್ಕೆ ಯಾರ ಉಪಾಯವೇನು?

ವಿದೂಷಕ : (ಮೋರೆದಿರುವಿ ಮರೆಯಲ್ಲಿ) ಸಕುಂತರೀ ಚಿಂತೀ ಬ್ಯಾನಿ ಮತ್ತ ಅಮರಿತು ಕಾಣತತಿ ಸಮ್ಮರಸಗ. ಇದಕ ಯಾವ ವೈದ್ಯ ಗಂಟ ಬೀಳತಾನೋ!

ಕಂಚುಕಿ : (ಬಳಿಯಲ್ಲಿ ಹೋಗಿ) ಜಯತು ಜಯತು ಜೀಯಾ! ಈ ಪ್ರಮುದವನ ಪ್ರದೇಶದಲ್ಲಿ ಯಾವತ್ತು ವ್ಯವಸ್ಥೆ ಚೆನ್ನಾಗಿದೆ. ಈ ವಿನೋದ ಸ್ಥಾನದಲ್ಲಿ ಇಚ್ಛೆ ಬಂದಲ್ಲಿ ವಿಶ್ರಾಂತಿಗೊಳ್ಳತಕ್ಕದ್ದು. ಜೀಯಾ!

ಅರಸು : (ದ್ವಾರಪಾಲಿಕೆಗೆ) ವೇತ್ರವತಿಕೆ, "ನಮಗೆ ನಿನ್ನೆ ರಾತ್ರಿ ಜಾಗರಣೆ ಬಹಳ ಆಗಿದೆ. ಆದ್ದರಿಂದ ಓಲಗಕ್ಕೆ ಬರುವದಾಗುವದಿಲ್ಲ. ನೀವು ಪ್ರಜರುಗಳ ನ್ಯಾಯವನ್ನು ತೀರಿಸಿದ್ದು ಸಾಯಂಕಾಲಕ್ಕೆ ಬಂದು ನಮಗೆ ತಿಳಿಸಬೇಕು" ಎಂದು ರಾಯರು ಹೇಳಿದ್ದಾರೆಂದು ಅಮಾತ್ಯರಿಗೆ ತಿಳುಹಿಸು, ಹೋಗು.

ಪ್ರತಿಹಾರಿ : ಮಹದಾಜ್ಞೆ (ಹೊರಟು ಹೋಗುತ್ತಾಳೆ.)

ಅರಸು : ವಾತಾಯನಾ, ನಿನ್ನ ಕೆಲಸಕ್ಕೆ ನೀನು ಹೊರಟು ಹೋಗು.

ಕಂಚುಕಿ : ಜೀಯಾ (ಎಂದು ಹೊರಟು ಹೋಗುತ್ತಾನೆ.)

ವಿದೂಷಕ : ಎಲ್ಲಾರನೂ ಕಳವಿದಿ: ಒಂದು ನೊಣಾ ಸುದ್ದಾ ಬಿಡಲಿಲ್ಲ. ಒಂದೆಷ್ಟತಾಸ ಇಲ್ಲೇ ಕುಂದರೂನ ನನ ಒಡ್ಯಾ ತೋಟದಾಗ ಕಮಾಗ ಹೂವಿನ ಮಕರಂದ ಇಡಗೇತಿ.

ಅರಸು : ಹೇ ಮಾಧವ್ಯಾ, "ರಂಧ್ರೋಪಪಾತಿ ನೋನರ್ಥಾಃ" ಎಂಬುವ ಗಾದೆ ಸುಳ್ಳಲ್ಲ ಕಂಡೆಯಾ! ಕಾಡುವ ಕಾಲದಲ್ಲಿ ಒಂದರಹಿಂದೊಂದು ಕಷ್ಟಗಳು ಬರುತ್ತಲೇ ಇರುತ್ತವೆ. ಈ ವ್ಯಾಳ್ಯದಲ್ಲಿ ಕುತ್ಸಿತವಾದ ಕಾರಣವೇ ಕಷ್ಟವಾಗಲಿಕ್ಕೆ ಸಾಕಾಗುತ್ತದೆ. ನೋಡಿದೆಯಾ.

(ಪದ)

(ದಾಟಿ : ಸರಸೀಜಾಕ್ಷೀ ಬಾ ಸರಸಾನಾ ತಂದು ತೋರೆ ನೀರೆ ||ಪಲ್ಲ||
ಮರುಳ ಮಾರನು ತನ್ನ | ಸರಳುಗಳಿಂದೆನ್ನ | ಉರವನು ಭೇದಿಪ ನೀರೆ!
ತಾಳಲಾರೆ ನೀರೆ || ಎಂಬ ಪದದಂತೆ)

ಚೂತಾಂಕುರ ಬಾ | ಣಕ್ಕೆನಾ ಗುರಿಯಾದೆ ನವ ||ಪಲ್ಲ||
ಮೃದುಸುಡಿಗಳಿಂದೆನ್ನ | ಹೃದಯವೆಚ್ಚರಿಪಳ ||
ಸದನದೊಳ್ಳರೆಯಲಿಲ್ಲ | ಮದವೇರಿ ನವ ||೧||

ಕತ್ತಲೋಳೆನ್ನ ಮನ | ಸುತ್ತಿಕೊಂಡರಿಯದ -
ಲಿತ್ತುದೈವದಿಂ - ದೀಗಲು ಬೆಳಗಾಗಲುರೆ ||೨||

ಮಷ್ಟುಕೆನ್ನಯಮನ | ಮದವ ತಿಳಿದಿರಲು
ನಿಷ್ಟುರ ಮದನನ ಕೈಯ | ಹಸನಾದನವ ||೩||

ವಿದೂಷಕ : ನಿಲ್ಲವ, ಕೀ ಬಡಿಗೀಲೆ ನಿನ್ನ ಕಾಮನ ಬಾಣಾ ಎಲ್ಲಾ ಚಿಂದಾಟ ಮಾಡಿ ಬಿಡತೇನ ಒಂದು ಗಳಿಗ್ಯಾಗ. (ಎಂದು ಬಡಿಗೆಯಿಂದ ಮಾವಿನ ಹೂವುಗಳನ್ನು ಬಡಿಯುತ್ತಾನೆ.)

ಅರಸು : (ಸ್ವಲ್ಪ ನಕ್ಕು) ಹಾ ಹಾ! ಸಾಕು ಸಾಕು ಬಿಡು, ಇನ್ನು ತಿಳಿದ ಹಾಗಾಯಿತು ನಿನ್ನ ಶೌರ್ಯ; ಸುಮ್ಮನಿರು. ಇನ್ನು ನನ್ನ ಸಖಿಯಂತೆ ಕಾಣಿಸುವಂಥ ಈ ಎಳೆ ಎಳೆ ಬಳ್ಳಿಗಳನ್ನು ನೋಡುತ್ತ ಸ್ವಲ್ಪ ಚಿತ್ತಸಮಾಧಾನ ಪಡಿಸುತ್ತೇನೆ.

ವಿದೂಷಕ : ಇಲ್ಲೇ ಕುಂದರಲಿ? ಆಗಲೆ ನೀ ಚತುರಿಕಾ ಎಂಬಾಕಿ ಆಳಿ ಅದಾಳಲ್ಲ, ಆಕೀಗೆ ಏನಂತ ಹೇಳಿದ್ದಿ? ನೆನಪಿಲ್ಲ? ನೀ ಸಕುಂತರೀ ಚಿತ್ತರಾ ಬರದ ಇಟ್ಟಿದ್ದಿ ಅದನ್ನ ಈ ಹೊತ್ತಿನ್ಯಾಗ ಮಾಧವೀ ಮಂಟಪದಾಗ ಕುಂದರತೇವು ಅಲ್ಲೇ ತೊಗೊಂಡಕ್ಯಾಸಿ ಬಾ ಅಂತ ಹೇಳಿಲ್ಲ?

ಅರಸು : ಓಹೋ ಅಹುದಹುದು. ಆ ಸ್ಥಾನವು ಹೊತ್ತುಗಳೆಯಲಿಕ್ಕೆ ಚೆನ್ನಾಗಿದೆ; ಸರಿ ನಡೆ ಹಾಗಾದರೆ.

ವಿದೂಷಕ : ಹೀಗ ಬಾ ನನ್ನ ಒಡ್ಯಾ.

(ಇಬ್ಬರೂ ಮುಂದೆ ನಡೆಯುತ್ತಾರೆ. ಸಾನುಮತಿಯೂ ಅವರ ಬೆನ್ನ ಹಿಂದೆ ತಿಳಿಯಗೊಡದೆ ಹೋಗುತ್ತಾಳೆ.)

ವಿದೂಷಕ : ಇದ ಮಾಧವೀಮಂಟಪ; ನಡಬರಕ ಚೌಕಾನ ಬಿಳೇಕಲ್ಲ ಹಾಸೇತಿ. ಏನಪಾ! ಇವರ ಮ್ಯಾಗೆಲ್ಲಾ ರತುನಗೋಳ ಹ್ಯಾಂಗ ಸಿಗಸಿದಾರು! ಎಲೆ ಇದರ, ಏನ ತಕಾಪಕಾ ಹೊಳುತತೆಪಾ! ನೋಡಗೊಡಾಣಿಲ್ಲ! ಮನಾರ ಹೂಗೋಳೇನ ಹಾಸಿದಾವು; ಕಮಾಗ ಮಕರಂದ ಇಡಿಗೇತಿ; ಈ ಪಳಾರ ನೋಡುವ, ನಮ್ಮನ್ನ ಕರುತತಿ, ಹಸುವಾಗೇತಿ ನನ್ನ ಒಡ್ಯಾ, ಕುಂದ್ರಗಡಾ.

(ಇಬ್ಬರೂ ವಿಶ್ರಮಿಸುತ್ತಾರೆ.)

ಸಾನುಮತಿ : ಈ ಬಳ್ಳಿಯನ್ನು ಹೊಂದಿ, ನನ್ನ ಸಖಿಯಳಾದ ಶಕುಂತಲೆಯ ಚಿತ್ರವನ್ನು ನೋಡಿ, ಅವಳ ಪತಿಯ ಪ್ರೀತಿ ಎಷ್ಟೆಂತಿರುವದೋ ನೋಡಿ ಅವಳಿಗೆ ತಿಳಿಸುವೆ. (ಎಂದು ಹಿಂದೆ ಹೋಗಿ ಬಳ್ಳಿಗೆ ಆತುಕೊಂಡು ನಿಲ್ಲುತ್ತಾಳೆ.)

ಅರಸು : ಹನುಮನಾಯಕಾ, ಶಕುಂತಲೆಯ ಯಾವತ್ತು ವೃತ್ತಾಂತವು ಕಣ್ಣೆದುರಿಗೆ ಕಟ್ಟಿದೆ ಬಲ್ಲೆಯಾ; ನಾನು ನಿನ್ನ ಕೂಡ ಒಂದು ಸಾರೆ ಈ ವಿಷಯವನ್ನು ಕುರಿತು ಮಾತಾಡಿದ್ದೆ. ನಾನು ಅವಳನ್ನು ಧಿಕ್ಕರಿಸಿ ಹಿಂದಕ್ಕೆ ಕಳುಹಿಸಿದಾಗ ಯದ್ಯಪಿ ನೀನು ಬಳಿಯಲ್ಲಿ ಇಲ್ಲದಿದ್ದರೂ ಮುಂಚಿತವಾಗಿ ಒಂದು ಸಾರೆಯಾದರೂ ಈ ವಿಷಯವನ್ನು ಕುರಿತು ನನ್ನೆದುರಿಗೆ ಮಾತನಾಡಬಾರದಿತ್ತೆ? ಅಯ್ಯೋ! ನನ್ನಂತೆ ನಿನಗೂ ವಿಸ್ಮೃತಿಯಾಗಿ ಹೋಯಿತೋ ಏನೋ!

ವಿದೂಷಕ : ಆಗ ಹೇಳಾಕಿಲ್ಲೇನಪಾ? ಏನ ಗಾತಾ ಮಾಡಿದಿ! ಎಲ್ಲಾ ನನ್ನ ಮುಂದ ಸುದ್ದೀ ಹೇಳಿ ಹಿಂದಗಡೆ "ನಗಿಚಾರಕಿ ಮಾತ ಅಂತಿ ಕರೆ ತಿಳಕೊಂಡಗಿಂಡಿ" ಅಂತ ನನಗೆ ತಾಕೀದೀ ಮಾಡಲಿಲ್ಲ ನೀ? ನಾ ಏನ ಬಲ್ಲ್ಯ ಹುಚ್ಚ ಮನಸ್ಯಾ, ಅಂದಾಕಾರಾ; ನಿನ್ನ ಮಾತಿನಮ್ಯಾಗ ಬರೋಸಾ ಇಟ್ಟೆ. ಅಗೋ ದಾಕ್ಕತಿ ಬಿಡ; ಅದ ಬ್ಯಾರೆ ತಪ್ಪಾಣೆಲ್ಲ!

ಸಾನುಮತಿ : ಇದಂತೂ ಸರಿಯೆ. ಭವಿಷ್ಯಕ್ಕೆ ಅನುಸರಿಸಿಯೇ ಬುದ್ಧಿಯಾಗುತ್ತದೆ.

ಅರಸು : ಹನುಮನಾಯಕಾ, ಹ್ಯಾಗಾದರೂ ಮಾಡಿ ಈ ವ್ಯಥೆಯಿಂದ ನನ್ನನ್ನು ಬಿಡಿಸು ಕಾಣೊ! (ಎಂದು ಭ್ರಮೆಗೊಳ್ಳುತ್ತಾನೆ)

ವಿದೂಷಕ : ನೀ ಕುಂತ ಹೀಂಗ ಮಾಡಬೇಕ ನನ್ನ ಒಡ್ಯಾ? ಇದ ನಿನಗ ಒಪ್ಪಾಣೆಲ್ಲ ಬಿಡ. ದೊಡ್ಡ ಮನಿಸ್ಯಾ ನೀನು, ಕಷ್ಟಕ ಮನಸ ಒಪ್ಪಸಬಾರದಪಾ; ಸೊಂಟರಗಾಳಿಗೆ ಗುಡ್ಡ ಎಂದಾರ ಆದರತತೆ?

ಅರಸು : ಮಿತ್ರಾ ಹನುಮನಾಯಕಾ, ಕೇಳಪ್ಪಾ; ನಾನು ಅವಳನ್ನು ಅಪ್ರತಿಷ್ಠೆ ಮಾಡಿದ ಕ್ಷಣವೇ ಅವಳ ಮುಖಚಂದ್ರವು ಝುರ್ ಎಂದು ಇಳಿದು ಕಲಾಹೀನವಾಯಿತು ಬಲ್ಲೆಯಾ; ಆ ವೇಳೆಯಲ್ಲಿ ಏನಾಯಿತೆಂದರೆ -

(ಪದ)

ದಾಟಿ : ಹರಹರಾ ಆದರಿಸದಾದೆ|| ಸ್ತ್ರೀಸಮೂಹದೊಳೆನ್ನ ಕಾಣುತ | ಸರಿದಳೆತ್ತಲೊ ದ್ರೋಪದಿ || ಪಲ್ಲ|| ಎಂಬ ಹೇಮಾದ್ರೀಶನ ಕನ್ನಡ ಅಷ್ಟಪದಿಯೊಳಗಿನ ಪದದಂತೆ.

ಹರಹರಾ | ಆದರಿಸದಾದೆ ||ಪಲ್ಲ||
ಖೇದಗೊಂಡಾ ಮುಖವ ನೆನೆಯಲು
ಭೇದಿಸುವದೆನ್ನ ಹೃದಯವು ||ಅನುಪಲ್ಲ||

ಮಂದಮತಿನಾ ಮನೆಯ ಸತಿಯನು
ಮಂದಿಯೊಳು ಹೊರ ನೂಂಕಿದೆ ||
ಚಂದವಲ್ಲೆಂದವಳು ಬೋಧಿಸೆ |
ಕುಂದು ನುಡಿಗಳನಾಡಿದೆ ||೧||

ಅಂದು ಮುನಿಶಿಷ್ಯರು ಸರೋಷದಿಂ |
ಮುಂದೆ ಸಾಗಿದರವರೊಳು ||
ಹಿಂದೆ ಸಖಿಯಳು ಪೋಗೆ ಕ್ರೋಧದಿಂ |
ಹಿಂದಿರುಗಿ ಬೆದರಿಸಿದರು ||೨||

ಅಂದು ಎನ್ನಯ ಪ್ರಿಯಳು ಶಿಷ್ಯರು
ತಂದೆ ಸಮನೆಂದರಿದಳು ||
ಒಂದು ಮಾತಾಡದಲೆ ಥರಥರ -
ನೆಂದು ನಡುಗುತ ನಿಂದಳು ||೩||

ಇತ್ತನಾ ಮನೆಯಲ್ಲಿ ಬರಗೊಡೆ-
ನತ್ತವರು ಕರಕೊಳ್ಳರು ||
ಕುತ್ತಿಗೆಯ ಬಿಗಿದವಳು ದೂರದಿಂ |
ಮತ್ತೆ ಎನ್ನನು ನೋಡ್ದಳು ||೪||

ತುಂಬಿ ತುಳುಕುವ ನೀರುಗಣ್ಣಿನ |
ಹಂಬು ಮೈಯಳ ನೋಟವು ||
ಅಂಬಿನಂಚಿಗೆ ತೊಡೆದ ವಿಷವಿಂ -
ತೆಂಬವೊಲು ವ್ಯಥೆಗೊಳಿಪುದು ||೫||

ಸಾನುಮತಿ : ಅಪ್ಪಯ್ಯಾ, ಈತನ ವ್ಯಥೆ ನೋಡಲಾಗಿ ನನಗೆ ಸಹ ದುಃಖವಾಗುತ್ತದೆ.

ವಿದೂಷಕ : ಏನಪಾ, ಅವಳನ್ನ ಮುಗಲ ಮ್ಯಾಗ ಯಾರ ಒದರು? ದೆವ್ವೇನ?

ಅರಸು : ಛೆ! ಅಂಥ ಪತಿವ್ರತಾ ಸ್ತ್ರೀಯನ್ನು ಅನ್ಯರ‍್ಯಾರು ಮುಟ್ಟುವರು? ಮೇನಕಾ ನಾಮಕಳಾದ ಅಪ್ಸರಾಸ್ತ್ರೀಯು ಅವಳ ಮಾತೆಯೆಂದು ಕೇಳಿದ್ದೇನೆ. ಆ ಮೇನಕೆಯ ಸಖಿಯರ‍್ಯಾರಾದರೂ ಒಯ್ದಿರಬಹುದು ಕಾಣಿಸುತ್ತದೆ.

ಸಾನುಮತಿ : ಅಪ್ಪಯ್ಯ! ಇಂಥಾತನಿಗೆ ಸ್ಮರಣೆ ಹ್ಯಾಗೆ ತಪ್ಪಿದ್ದೀತೆ? ಈತನು ಪುನಃ ಎಚ್ಚರದಲ್ಲಿ ಬಂದದ್ದು ಆಶ್ಚರ್ಯವಲ್ಲ.

ವಿದೂಷಕ : ಹೀಂಗ ಇದ್ದವ್ಯಾಗ ಎಂದಾರ ಅವಳ ಬೆಟ್ಟಿ ಆದೀತೇಳ; ಚಿಂತೆ ಮಾಡಬ್ಯಾಡ.

ಅರಸು : ಅದು ಹ್ಯಾಗೆ?

ವಿದೂಷಕ : ತಾಯಿತಂದಿಗೋಳಿಗೆ ಮಸ್ಯಾಗ ಆತಗೊಂತ ಕುಂಡ್ರೂ ಮಗಳ್ನ ದಿನಾ ಬೆಳಗಿಲೆ ನೋಡೋದಾಗಾಣೆಲ್ಲ ನನ್ನ ಒಡ್ಯಾ.

ಅರಸು : ಮಿತ್ರಾ, ನೀನೆಂಬುವದು ನಿಜವೊ. ಆದರೂ ಇನ್ನು ಮೇಲೆ ಪುನಃ ಘಟನೆ ಬಿದ್ದೀತೆಂಬುವ ಮಾತು ನನಗೆ ಹ್ಯಾಗೋ ಕಾಣುತ್ತದೆ.

(ಪದ)

ದಾಟಿ : ನಲ್ಲಾ ನಿನ್ನವಳೊ| ನಿನಗತಿಪ್ರಿಯಳೊ || ಪಲ್ಲ|| ಕಾಂತನೆ ನಿನ್ನ ಗುಣ | ಕಂಜದೊಳೆನ್ನಮನ | ಭೃಂಗವ ಮಾಡಿದವಳೊ ||೧|| ಎಂಬ ಪದದಂತೆ.

ಪ್ರಿಯಳೆಲ್ಲಿಹಳೋ | ಮರಳಿ ತಾ ಬಾರಳೊ || ಪಲ್ಲ||
ಮನಸಿನೊಳ್ ಕಲ್ಪಿಸಿದಾ | ಮೋಹಿನೀ ರೂಪೆ ಎನ್ನಾ|
ಕನಸಿನೊಳಗೆ ಬಂದಳೊ ||೧||
ಇಂದ್ರಜಾಲದಿಂದೆನ್ನ | ಇಂದಿರಾರೂಪೆನಯ -
ನೇಂದ್ರಿಯಕೆಭಾಸಾದಳೊ ||೨||
ಇಲ್ಲದೆ ಮನಸಿನ ಹೊಳ್ಳುಭ್ರಾಂತಿಯೊಳು ತಾ |
ಸುಳ್ಳು ಹೆಣ್ಣಾಗಿ ತೋರ್ದಳೊ ||೩||
ಅರಿಯೆ ನೀ ಮಾಯಾಬಲು | ಅರಿದು ಎನ್ನೊಳು ಪುಣ್ಯ
ವಿರುವತನಕ ಕಂಡಳೊ ||೪||
ಕಠಿಣ ವಿನ್ನಾಶೆಗಳು | ತಟದಿಂದುರುಳಿದವು |
ಕುಟಿಲ ಕುಂತಳೆ ಪೋದಳೊ ||೫||

ವಿದೂಷಕ : ಹಾಂಗ್ಯಾಕ ಅಂತಿ? ಉಂಗುರ ಹೋದಂಥಾವ ಸಿಗಲಿಲ್ಲ ಈಗ? ಇವರ ಮ್ಯಾಗಿಂದ ನೋಡ, ಅವಳೂ ಸಿಕ್ಕಾಳೊ ಸಿಗಾಕಿಲ್ಲೊ?

ಅರಸು : (ಮುದ್ರಿಕೆಯನ್ನು ನೋಡಿ) ಈ ಮುದ್ರಿಕೆಗೆ ಅಂಥ ದುರ್ಲಭ ಸ್ಥಾನವು ದೊರೆತಿರಲಾಗಿ ಅದನ್ನು ಅಗಲಿ ಬಂತು. ಅಂದಮೇಲೆ ಇದು ಸಹ ನನ್ನಂತೆ ಶೋಕಪಾತ್ರವಾಗಿದೆ.

ವೃ || ಪೊಳೆವ ಕೆಂದುಗುರಿಂದೆ ಮನೋಜ್ಞ ಮಾ-
ದೆಳೆಯ ಪಲ್ಲವಗಳ್ ಗೆಲುವಾ ಬೆರಳ್ ||
ತಳದಿ ಸಿಲ್ಕಿರಲೆನ್ನೊಲಗಲ್ದು ತೀ -
ರ್ಗಳೆದೆ ಮುದ್ರಿಕೆ ನಿನ್ನಯ ಪುಣ್ಯವಾ ||

ಸಾನುಮತಿ : ಈ ಮುದ್ರಿಕೆಯು ಮೂರನೆಯವರ ಕೈಗೆ ಬಿದ್ದು ಹೋಗಿದ್ದರೆ ಮಾತ್ರ ಶೋಕ ಪಾತ್ರವಾಗುತ್ತಿತ್ತು. ಶಕುಂತಲಾ, ನೀನು ಈ ಹೊತ್ತಿನಲ್ಲಿ ಇಲ್ಲಿಲ್ಲವಲ್ಲೆ! ನಾನೊಬ್ಬಳೇ ಕರ್ಣಸುಖವನ್ನನುಭವಿಸುತ್ತೇನೆ.

ವಿದೂಷಕ : ಏನಪಾ, ಈ ಉಂಗರಾ ಆಕಿ ಕೈಯ್ಯಾಗ ಯಾಕ ಕೊಟ್ಟಿದ್ದಿ?

ಸಾನುಮತಿ : ಈತನು ನನ್ನ ಮನಸಿನಲ್ಲಿದ್ದ ಪ್ರಶ್ನವನ್ನೆ ಮಾಡಿದನು.

ಅರಸು : ಹನುಮನಾಯಕಾ ಕೇಳು; ನಾನು ತಪೋವನವನ್ನು ಬಿಟ್ಟು ಬರುವ ವ್ಯಾಳ್ಯದಲ್ಲಿ ಅವಳು ಕಣ್ಣಿನಲ್ಲಿ ದುಃಖಾಶ್ರುಗಳನ್ನು ತಂದು ಎಷ್ಟು ದಿವಸದ ಮೇಲೆ ಆರ್ಯಪುತ್ರರಿಗೆ ನನ್ನ ಸ್ಮರಣೆ ಆದೀತೆಂದು ಕೇಳಿದಳು.

ವಿದೂಷಕ : ಅನ್ನಾಣಾ ನೀ ಏನ ಹೇಳಿದಿ?

ಅರಸು : ಅಂಬೋಣ ನಾನು ಈ ಮುದ್ರಿಕೆಯನ್ನು ತೆಗೆದು ಅವಳ ಬೆರಳಿನಲ್ಲಿಡಿಸಿ ಇಷ್ಟು ದಿವಸಗಳಲ್ಲಿ ನಾನು ಕರೆ ಕಳುಹಿಸುತ್ತೇನೆ; ಏನೂ ಚಿಂತೆ ಮಾಡಬೇಡೆಂತ ಹೇಳಿದೆ. ಆದರೆ

(ಪದ)

ದಾಟಿ : "ಪರರಂದ ಮಾತು ಕೇಳಬ್ಯಾಡೆ ಪ್ರಾಣನಾಯಕ" ಎಂಬ ಪದದಂತೆ.

ನಾನಾಡಿದಂತೆ ಮಾಡಲಿಲ್ಲೊ ಕಾಡುಹೃದಯನೊ || ಪಲ್ಲ||
ಅಕ್ಕರದೊಳಪ್ಪಿ ಸೆರಗಿಲಿ ಕಣ್ಣೊರಸಿನೋಡಿದೆ|
ನಾ ಕರೆಕಳುಹುವೆ ಬ್ಯಾಗನೆಂದು ವಚನವಾಡಿದೆ ||೧||
ಮೃದುಬೆರಳಿಗೆನ್ನ ಮುದ್ರಿಕೆಯುಂಗುರನಿರಿಸಿದೆ |
ಸುಂದರಿಗಿದರೊಳು ನಾಮವೆನ್ನದಿರುವದರಿಸಿದೆ ||೨||
ಪ್ರತಿದಿನದೊಳೆಂದು ಪೆಸರಿನಕ್ಷರವೆಣಿಸಹೇಳಿದೆ |
ಕಡೆದಿನಕೆ ಬರುವರಾಳುಗಳೆಂದನೃತವಾಡಿದೆ ||೩||

ವಿದೂಷಕ : ಆಹಾ! ಈಗ ಬೇಕಾರ ಎಲ್ಲಾ ಹೊಂತ್ಯು.

ಸಾನುಮತಿ : ವಾಸ್ತವಿಕ; ಅದಕ್ಕಂತೆ ಈತನಿಗೆ ಲಗ್ನವಾದದ್ದರ ಸಂಶಯ ಹುಟ್ಟಿ ಸಾಧ್ವಿಯಾದ ನನ್ನ ಸಖಿಯನ್ನು ಗ್ರಹಣ ಮಾಡಲಿಲ್ಲ. ಅರಸು ಬಹು ಅಧರ್ಮಭೀರು. ಪಾಪಕ್ಕೆ ಬಹಳ ಹೇಸುವಂಥವನು. ಆದರೂ ಇಂಥ ಪ್ರೀತಿಗೆ ಮುದ್ರಿಕೆಯ ಗುರುತು ಯಾತಕ್ಕೆ ಬೇಕಾಗಿದ್ದೀತು?

ಅರಸು : ಇದೆಲ್ಲ ಕಷ್ಟವು ಈ ಮುದ್ರಿಕೆಯಿಂದಲೇ! ಇದಕ್ಕೇ ನಿಂದೆ ಮಾಡತಕ್ಕದ್ದು! ಎಲಾ ಸೂಳೇಮಗಂದ!

ವಿದೂಷಕ : (ತನ್ನೊಳಗೆ) ಯಾ ಇವನ! ಉಂಗರಕ ಬೇವುತಾನು! ಹುಚ್ಚಗಿಚ್ಚ ಹಿಡೀತೇನಿವಗ! (ನಕ್ಕು) ನಾನೂ ನನ್ನ ಬಡಿಗೀಮ್ಯಾಗ ಗುಲ್ಲು ಮಾಡತೇನ. ಸೂಳೇಮಗನ, ನಾ ಹ್ಯಾಂಗ ನೇಟಾಗ ಅದೇನು, ನೀಯಾಕ ಡೊಂಕಾಡುಸಕಾ ಅದಿ?

ಅರಸು : (ಅತ್ತಕಡೆಗೆ ಲಕ್ಷ ಕೊಡದೆ.)

(ಪದ)

ದಾಟಿ : "ಏದುಃಖಮೇರಾ ಹರೋರೇ| ಭೋಲಾನಾಥ ದಿಗಂಬರ" ಎಂಬ ಹಿಂದೂಸ್ಥಾನೀ ಪದದಂತೆ.

ಯಾತಕ್ಕಗಲಿದೆಕೈಯಾ || ಮುದ್ರಿಕೆಯೆ ನೀ -
ನೆನ್ನ ರಮಣಿಯಾ ||ಪಲ್ಲ||
ಆರಕ್ತ ಹಸ್ತ ಸೌಂದರ್ಯಕ್ಕೆ ಸೋಲ್ದು ನೀ ||
ನೀರೊಳು ಮುಳುಗಿದೆಯಾ || ನಾಚಿದಿಯಾ || ನೀರಜಮುಖಿಯಾ ||೧||
ಕೋಮಲಾಂಗುಲಿಯೊಳ್ ಕಠಿಣತೆ ಇಲ್ಲೆಂದು ||
ಸಾಮಾನ್ಯಗುಣದೆನ್ನಯಾ || ಈ ಹೃದಯಾ || ನೀ ಮರೆವಿರೆಯಾ ||೨||
ನಿನ್ನ ದೂಷಿಸಿ ಮತ್ತೆಮೂರ್ಖನಾಗಲೆಯಾ || ನಿರ್ಜೀವಿ
ನೀನಪ್ಪಯ್ಯಾ || ಸಜೀವಿಯಾ || ದೆನ್ನ ನೋಡಿದಿಯಾ ||೩||

ವಿದೂಷಕ : ನೀ ಅಳಕೊಂತ ಕುಂತರ ನಾವಿಕಡೆ ಹಸದ ಸಾಯಬೇಕ ಕಾಣತತಿ ?

ಅರಸು : (ಅದನ್ನು ಕೇಳದಲೆ) ಹೇ ಪ್ರಿಯೆ, ನಿನ್ನನ್ನು ಕಾರಣವಿಲ್ಲದೆ ಪರಿತ್ಯಾಗ ಮಾಡಿದೆನಲ್ಲ! ಆದಾಗ್ಯೂ ಈ ಹೊತ್ತಿನಲ್ಲಿ ಅತಿ ಪಶ್ಚಾತ್ತಾಪದಿಂದ ನನ್ನ ಹೃದಯವು ಸುಟ್ಟುಹೋಗುತ್ತದೆ. ಒಂದು ಸಾರೆಯಾದರೂ ಈ ಸೇವಕನ ಮೇಲೆ ದಯೆಮಾಡಿ ಪುನಃ ದೃಷ್ಟಿಗೆ ಬೀಳಬಾರದೆ?

ವಿದೂಷಕ : ಬಂದಳವ!

(ಇಷ್ಟರಲ್ಲಿ ಚತುರಿಕೆಯೆಂಬ ದಾಸಿಯು ಅರಸನಿಂದ ತೆಗೆಯಲ್ಪಟ್ಟ ಶಕುಂತಲೆಯ ಚಿತ್ರವನ್ನು ತೆಗೆದುಕೊಂಡು ಬರುತ್ತಾಳೆ.)

ಚತುರಿಕೆ : ಸ್ವಾಮಿ, ಇಕ್ಕೊಳ್ಳಿ; ಚಿಕ್ಕದೊರೆಸಾನಿಯವರ ಚಿತ್ರ. (ಪಟವನ್ನು ಮುಂದೆ ಚಾಚುತ್ತಾಳೆ.)

ವಿದೂಷಕ : ಏನ್ ತಗ್ಯಾಗಾ ತಗದ್ಧಿ, ನನ್ನ ಒಡ್ಯಾ ಚಿತ್ರಾನಾ! ನೋಡಕೊಂತ ಕುಂದರಬೇಕೆ ನಸತತ್ಯೋ? ಎಪಾ! ಏನ್ ಚತುರಾಯಿಕೆಪ್ಪಾ, ನಿಂದು! ಏನಪಾ, ಕಾಬಗಾರ

ತಿಳವ ಅಽತಿ, ಗೋಣ ಹಿಂದಕ ಹೋಗೇತಿ, ಮಾರಿಮುಂದಕ ಹಾದಽತಿ; ಇದೇನ್ ಚೋಜಿಗಾ! (ಲಕ್ಷ್ಯಗೊಟ್ಟು ನೋಡುತ್ತ) ಅಲ್ಲೇನೂ ಉಳಿದಿಲ್ಲ ಬಿಡ, ಬಾಯಿ ಬಿಚ್ಚಿ ಮಾತಾಡೂದ ಒಂದ ಉಳದತಿ.

ಸಾನುಮತಿ : ಅಹಹಾ! ಅರಸನ ಕೌಶಲ್ಯವೆಂಥದು! ನನ್ನ ಸಖಿಯಳಾದ ಶಕುಂತಲೆಯೆ ಎದುರಿನಲ್ಲಿ ನಿಂತುಕೊಂಡಿದ್ದಾಳೆಂಬುವಂತೆ ಕಾಣಿಸುತ್ತದೆ.

ಅರಸು : ಈ ಚಿತ್ರವನ್ನು ನಾನು ತೆಗೆದಿದ್ದೇನೆ. ಇದರಲ್ಲಿ ಏನೇನೂ ನ್ಯೂನವಾಗಿದೆಯೋ ಅದನ್ನು ಮೇಲೆ ಮೇಲೆ ತಿದ್ದುತ್ತೇನೆ. ಆದರೂ:-

(ಪದ)

ದಾಟಿ : ಮರೆಯಲಾರೆನೆ | ಮಮತೆ | ಮರಯಲಾರೆನೆ || ಮರೆಯಲಾರೆ ಮದುವೆಯೊಳಗೆ| ನೆರೆದವರೊಳು ಸರಿದು ಬಂದು | ಬೆರಳುಂಗುರದಲಿರಿದು ಮುಸುಕು ಮರೆಯಲಿ ಮುಖದಿರುಹಿದವಳ ||ಪಲ್ಲ|| ಎಂಬ ಪದದಂತೆ.

ಇಳಿಯಲಿಲ್ಲವೋ ರೂಪ | ವಿಳಿಯಲಿಲ್ಲವೊ ||
ಇಳಿಯಲಿಲ್ಲ ನಳಿನಮುಖಿಯ
ನಳನಳಿಸುವ ಕಳೆಯು ಕೆಲಸ
ದೊಳಗೆ ದಣಿದು ಕಂದಿರೆ ಕಂ- |
ಗಳಲಿ ಮೆರುವ ಸ್ನೇಹಭಾವವಿಳಿಯ ||ಪಲ್ಲ||

ಮಿರುಪ ಫಣೆಗೆ ಜೋಲ್ದ ಸುರುಳು -
ಗುರುಳು ಬರೆದೆ ಮಿಸುನಿ ಬಣ್ಣ
ದೆರಡು ಗಲ್ಲದೊಳು ಕಾಣ-
ದಿರುವ ಸೂಕ್ಷ್ಮ ರೋಮಭಾವ ವಿಳಿಯ ||೧||

ಸುಳಿವಳ್ಳಿಯ ಮೈಯೊಳು ನಾ
ನೆಳೆಹರೆಯದ ಹೊಳಪು ತೋರ್ದೆ
ತಿಳಿವಸನದೊಳಡಗಿದ ಮೊಲೆ-
ಗಳಲಿ ಕಿರಿ ಬೆವರಿನ ಭಾವವಿಳಿಯ ||೨||

ನೀತಿ ವಿನಯ ಭೀತಿ ಲಜ್ಜೆ
ಪ್ರೀತಿನೇಹವೀಗುಣಗಳ
ನಾತು ಶ್ರಮದೊಳಾಂತು ನಿಂದು
ಮಾತನಾಡುವಂತೆ ಭಾವವಿಳಿಯ ||೩||

ಸಾನುಮತಿ : ಪಶ್ಚಾತ್ತಾಪದಿಂದ ಈತನ ಸ್ನೇಹವು ಹೆಚ್ಚಾಗಿದೆ. ಹಾಗೂ ಈತನಿಗೆ ತನ್ನ ಗುಣಗಳ ವಿಷಯವಾಗಿ ಅಭಿಮಾನವಿಲ್ಲ. ಆದ್ದರಿಂದ ಹೀಗೆ ನಿಗರ್ವದಿಂದ ಮಾತನಾಡುತ್ತಾನೆ.

ವಿದೂಷಕ : (ಚಿತ್ರವನ್ನು ನೋಡುತ್ತ) ಏನಪಾ, ಮೂರು ಮಂದಿ ಹೆಣ್ಣು ಮಕ್ಕಳು ಒಬ್ಬರಕ್ಕಿಂತ ಒಬ್ಬರು ಚಲವರ ಕಾಣತಾರು; ಇವರೊಳಗ ಸಕುಂತರಿ ಯಾವಳು?

ಸಾನುಮತಿ : ಅಯ್ಯೋ ಎಂಥಾ ಮೂಢನೀತಾ! ಲಾವಣ್ಯ ಪರೀಕ್ಷೆ ಇಲ್ಲ ಈತನಿಗೆ.

ಅರಸು : ಇವರಲ್ಲಿ ನಿನಗೆ ಶಕುಂತಲೆ ಯಾವಳೆಂದು ತೋರುತ್ತಾಳೆ?

ವಿದೂಷಕ : (ನೆಟ್ಟಗೆ ನೋಡಿ) ಹೇಳತೇನ ನೋಡವ. ಈ ಚಿಗರ ಮಿಂಚೂ ಮಾವಿನಗಿಡಾ ಅತೆಲ್ಲಾ, ಕಿದರ ಬುಡಕ ದಣದಕ್ಯಾಸಿ ಸೋಲಗ್ಯೆ ಇಳಿಬಿಟ್ಟು ಕೊಂಡ ನಂಬಿ ನಿಂತದಾಳು, ನೆತ್ತೀ ಮ್ಯಾಗಿನ ಕೂದಲಾ ತುಸಾ ತುಸಾ ಉಂಗರಗಟ್ಟೀದಾವು, ತುರಬ ಸೈಲಾಗೇತಿ, ಅದರ ಮ್ಯಾಗಿನ ದುಂಡಮಲ್ಲಿಗೀ ಮಾಲಿ ಬಾಡಿ ಹೋಗೇತೀ, ಹಣೇ ಮ್ಯಾಗ ಬೆವತಾಳು, ಗಲ್ಲ ಕೆಂಪಾಗ ಕಾಣತಾವು, ಕಿವಳ ಸಕುಂತರಿ ಅಲ್ಲ? ಈಚಿಕಡೆ ನಿಂತವರಿಬ್ಬರೂ ಆಕೀ ಗೆಳತೇರ ಆದಾರು; ಅಬಬ! ಈಟ ತಿಳ್ಯಾಣೆಲ್ಲೇನ್ರೀ ನಮಗ!

ಅರಸು : ಹನುಮನಾಯಕಾ, ನೀನೊಳ್ಳೇ ನಿಪುಣನಾಗಿದ್ದೀಯೋ. (ಕಣ್ಣೊರಸಿಕೊಂಡು) ಚತುರಿಕೆ, ಹೊತ್ತು ಹೋಗಲಿಕ್ಕೆ ಸಾಧನವಾದಂಥ ಈ ಚಿತ್ರವು ಇನ್ನೂ ಪೂರ್ಣವಾಗಿಲ್ಲ. ಅದರಿಂದ ಚಿತ್ರದ ಸಾಮಗ್ರಿಗಳನ್ನು ಇಲ್ಲಿ ತೆಗೆದುಕೊಂಡು ಬಾ; ಮೊದಲು ನಾನು ನನ್ನ ಸಖಿಯಳ ಕಣ್ಣಿನಿಂದ ದುಃಖಾಶ್ರುವಿನಂತೆ ಬಣ್ಣದ ನೀರು ಇಳಿಯುತ್ತದೆ. ಅದನ್ನು ತಿದ್ದಬೇಕಾಗಿದೆ ತೀವ್ರ ಹೋಗು.

ಶ್ಲೋಕ || ಕದಪುಗನ್ನಡಿಯೋಳ್ ಗುಡಿಗಣ್ಣಿನಿಂ |
ದುದರಿ ಜಾರುವ ಬಣ್ಣದ ಬಿಂದುವೀ ||
ಹೃದಯದೋಳ್ ಕರುಣಾರಸಮುಕ್ಕಿಬೀ|
ಳ್ವದರದೇ ಪ್ರತಿಬಿಂಬವದಣ್ಣ ಕೇಳ್ ||೧||

ಚತುರಿಕೆ : ಹಿಡಿಯಪ್ಪಾ ಹನುಮಪ್ಪಾ ಈ ಚಿತ್ರಪಟವನ್ನು, ನಾನು ಹೋಗುತ್ತೇನೆ.

ಅರಸು : ಇಲ್ಲಿ ತಾ ನನ್ನ ಕೈಯಲ್ಲಿ.
(ಚತುರಿಕೆಯು ಅರಸನ ಕೈಯಲ್ಲಿ ಚಿತ್ರವನ್ನು ಕೊಟ್ಟು ಹೋಗುತ್ತಾಳೆ.)

ಅರಸು : ಈಗ ಏನು ಚಮತ್ಕಾರವಾಯಿತು ನೋಡಿದೆಯಾ?

ವಿದೂಷಕ : ಏನಪಾ ಅದು?

ಅರಸು : ಹೇಳುತ್ತೇನೆ ಕೇಳು.

(ಪದ)

ದಾಟಿ : ಗುಮಾನಿಥೊ, ಲಾವೇ | ನಾಜಿಯೋಜೀಪರದೇಸ್ || ಕಬಕಿ ಮೈಠಾಡಿ ತುಮ್ ಸೇಕೀ | ಅಜಿ ಅರಜಕರೂಭೂರೆ | ಇತನಿ ಅರಜಮೇರಿಮಾನೂರೇ|| ಎಂಬ ಹಿಂದೂಸ್ಥಾನೀ ಠುಮರಿಯಂತೆ.

ಚಿತ್ರದ ರೂಪಕ್ಕೆ | ನಾ ಮರುಳಾದೆನಯ್ಯಾ || ಪಲ್ಲ ||
ಅಸಮರೂಪ ಸಂಪನ್ನೆ | ಎಸೆದಿದಿರೊಳೆನ್ನೋಳ್ ಪ್ರಾ-
ರ್ಥಿಸುತನಿಂದಿರೆ ಮೋರೆ ನೋಡದೆ ||೧||

ನದಿಯದಾಂಟಿ ಮುಂದಕ್ಕೆ | ಮದನ ನಟವಿಯೋಳ್ ಬಂದೆ |
ಮೃಗಜಲಕಾಶೆ ನೆರೆ ಮಾಡಿದೆ ||೨||

ಹೆಣ್ಣಿನ ಗೋಳಿಗ್ಹೇಸದೆ | ಕಣ್ಣೀರನೊರಿಸದೆ ||
ಬಣ್ಣದಶ್ರುಗಳಳಿಸ ಹೋದೆ ||೩||

ವಿದೂಷಕ : (ತನ್ನೊಳಗೆ) ಕರೇವಂದರೂ ಹೊಳೀ ದಾಟಿ. ಬಿಸಲುಗುದುರಿಗೆ ಆಸೆ ಮಾಡಿದ ನನ ಒಡ್ಯಾ. (ಅರಸಗೆ) ಮತ್ತೇನರ ಬರೂದsತೆ ಏನಪಾ ಚಿತ್ತರದಾಗ?

ಸಾನುಮತಿ : ಸಖಿಯಳಿಗೆ ಪ್ರೀತ್ಯಾಸ್ಪದವಾದಂಥ ಸ್ಥಾನವನ್ನು ಬರೆಯತಕ್ಕದ್ದಿರಬಹುದು.

ಅರಸು : ಅಹುದು.

(ಪದ)

ದಾಟಿ : ಹೇಗೆ ನಿನ್ನ ಬಿಟ್ಟು ಇರಲೊ| ಎಂತು ಕಳುಹಿ ಸೈರಿಸಲಿ || ಎಂಬ ಪದದಂತೆ.

ತೋರಿಸಬೇಕಯ್ಯಾ ಎನ್ನ | ತರುಣಿಯಳಿಹ ಸ್ಥಾನ || ಪಲ್ಲ ||
ಮಹಾನದೀ ಮಾಲಿನಿಯಾ | ಮಳಲುವೆಟ್ಟದ ಮೇಲೆ
ಮೋಹಿಸಿ ಬಂದಿಹ ಹಂಸ | ಮಿಥುನ ಕ್ರೀಡೆಯ ಭಾವ ||೧||

ಪಾರ್ವತಿಪಿತನ ಚೆಲ್ವ | ಪಾದದೊಳಿಹ ಪರ್ವತ
ಪಾವನತರಗಳು ಮ್ಯಾಲ್ | ಪವಡಿಸಿದಾವುಗಳ ||೨||

ಹಲವು ವೃಕ್ಷಗಳು ಮೇಲ್ | ಹಬ್ಬಿರುವ ಬಳ್ಳಿಗಳು |
ಎಲರಿನಿಂದ ಧೌತವ -| ಲ್ಕಲಗಳ್ಹಾರಾಡುವ ಭಾವ ||೩||

ನೆರಳೊಳು ಕುಳಿತ ಗಂ-| ಡೆರಳೆಯ ನೇತ್ರವನ್ನು
ನೆರೆನೇಹದಿಂ ಕೋಡಿನಿಂ | ತುರಿಚುವ ಹರಣಿಯ ||೪||

ವಿದೂಷಕ : (ತನ್ನೊಳಗೆ) ಹೀಂಗೇನ? ಮಳ ಮಳ ಉದ್ದ ಗಡ್ಡದ ಸುಸಿಗೊಳನ ತಗದಕ್ಕಾಸಿ ಕಾಜಗಾನೆಲ್ಲಾ ತುಂಬಿ ಬಿಡತಾನಂತ ಮಾಡಿದ್ನಿ.

ಅರಸು : ಮಿತ್ರಾ ಶಕುಂತಲೆಯ ಆಭರಣಗಳನ್ನು ತೆಗೆಯತಕ್ಕದ್ದಿರುತ್ತದೆ. ಅವನ್ನೆಲ್ಲಾ ನಾನು ಮರತು ಬಿಟ್ಟೆನಲ್ಲೊ.

ವಿದೂಷಕ : ಅವೆಂತಾವಪ್ಪಾ?

ಸಾನುಮತಿ : ವನವಲ್ಲಿ ವಾಸ ಮಾಡಿದ್ದಕ್ಕೂ ಅವಳ ಸೌಕುಮಾರ್ಯಕ್ಕೂ ಶೋಭಿಸುವಂಥವೇ ಆಭರಣಗಳಿರಬಹುದು.

ಅರಸು : ಹೇಳುತ್ತೇನೆ ಕೇಳು.

(ಪದ)

ದಾಟಿ : " ಓರೆ ಓರೆ ನೋಡಿದರೇನು ಫಲ ಎರಳೆ ಲೋಚನೆ" ಎಂಬ ಪದದಂತೆ.

ಆಭರಣಗಳಿಡಲಿಲ್ಲ ಸಖಿಯ | ಬಳ್ಳಿ ಮೆಯ್ಯೋಳು || ಪಲ್ಲ||

ಕರ್ಣದಲ್ಲಿ ಮೆರೆವ ಶಿರಿಷಸುಮದ ಕೇಸರಾ |
ಕೆನ್ನೆಯೊಳು ಜೋಲ್ದು ಶೋಭಿಸುವತಿಸುಂದರಾ ||೧||

ಮೊಲ್ಲೆ ಮೊಗ್ಗೆ ಮಾಲೆಗಳುರದಲ್ಲಿ ಹೊರಳುವಾ |
ಸಲ್ಲಲಿತ ಲವಂಗ ಸುಮದ ಗೊಂಡೆ ಜೋಲುವಾ ||೨||

ಕಮಲತಂತುವೆಣೆದ ಹಲವು ಕರದಕಂಕಣಾ |
ಕಚನಿಚಯದಿಕೇತಕಿಎಳೆ | ಕಿಸಲಯುವಕಣಾ ||೩||

ವಿದೂಷಕ : ಏನಪಾ, ಈ ನಿನ್ನ ಗೆಳತಿ ಕಮಲದಂಥಾ ಅಂಗ್ಮೆಲೆ ವಾರಿ ಯಾಕ ಮುಚಿಗೊಳತಾಳು? (ಲಕ್ಷಗೊಟ್ಟು ನೋಡಿ) ಹಾ ಹಾ ತಿಳಿತ! ಈ ಮಂಗ ನಿನ್ನ ಮಗಂದು ಗುಂಗೀಮುಳಾ ಹೂವಂತ ಮಾಡಿ ರಸಾ ಉಣ್ಣಾಕ ಬರತತಿ ಕಾಣವ.

ಅರಸು : ಹೊಡೆ ಹೊಡೆ ಸೂಳೆಮಗಂದನ್ನ!

ವಿದೂಷಕ : ನಾ ಹೊಡೀಲೀ? ಬಂಡಾಟ ಮಾಡವರ ಪಾರಪತ್ತಿ ಮಾಡವರು ನೀವಲ್ರೆ? ಅದನ್ನ ನೀವ ಹೊಡೀಬೇಕರಿ.

ಅರಸು : ಎಲೋ ಮಧುಕರಾ, ಪುಷ್ಪಗಳಿಂದ ತುಂಬಿಕೊಂಡಂಥ ಲತಾವೃಕ್ಷಗಳು ನಿನ್ನನ್ನು ಆದರ ಸತ್ಕಾರಗೋಳಿಸತಕ್ಕದ್ದು. ಹೀಗಿರಲಾಗಿ ನನ್ನ ಪ್ರಾಣಪ್ರಿಯಳ ಮುಖಕ್ಕೆ ಹಾತೊರೆದು ಏನು ಕಾರಣ ಬರುತ್ತಿ? ವ್ಯರ್ಥ ಶ್ರಮ ತೆಗೆದುಕೊಳ್ಳಬೇಡ ಕಂಡೆಯಾ. ಅತ್ತ ಕಡೆಗೆ ತಿರುಗಿ ನೋಡು.

(ಪದ)

ದಾಟಿ : ಶ್ರೀರಾಧಾ ಪ್ಯಾರಿ ಹೋ| ದೇಡಾರೊ ಚಾಂಸಿ ಹಮಾರಿ ಶ್ರೀರಾಧಾ|| ವಿಚಾಂಸಿಮೇಮೇರಾಪ್ರಾನ ಬಸತಹ್ಯ | ಸೋ ಚಾಂಸಿಗಯಿ ಚೋರೀರೇ ಎಂಬ ಪದದಂತೆ.

ಎನ್ನಯೇ ಸಖಿಯೊ | ಭ್ರಮರಾ ನೀ ಕಾಡಬ್ಯಾಡವೋ ||ಪಲ್ಲ||
ಕಮಲವೆನುತ ನೀ | ಭ್ರಮಿಸಿ ಮುಖಿಕೆ ಸಂ-
ಭ್ರಮದೊಳ್ ಸುತ್ತರಿಯ ಬ್ಯಾಡೊ ||೧||

ಹಸಿದು ನಿನ್ನನೆ ಈಕ್ಷಿಸುತ ಭ್ರಮರಿ ಮಧು |
ರಸವೀಂಟಳವಳ ನೋಡೋ ||೨||

ಆರಡಿಯನೆ ನೀ | ನರಳಿನತಿಥಿಯೋ
ಭೀರುವ ಅಂಜಿಸಲಿ ಬ್ಯಾಡೊ ||೩||

ಸಾನುಮತಿ : ಅಯ್ಯೊ! ಈತನು ಕೇವಲ ನಿಜವೆಂದು ತಿಳಿದು ಭ್ರಮರವನ್ನು ನಿವಾರಣ ಮಾಡುತ್ತಾನೆ.

ವಿದೂಷಕ : ಅದ್ಯಾಕ ಹೋದೀತ ಬಿಡ, ಅಂದಾಕಾರಾ ಯಡವಟ್ಟಿ ಜಾತಿ.

ಅರಸು : ಓೀಗೋ, ಹೋಗುವದಿಲ್ಲವೆ? ಹಾಗಾದರೆ ನಾನು ಏನು ಮಾಡುವೆನೆಂದರೆ ಹೇಳುತ್ತೇನೆ ಕೇಳು.

(ಪದ)

ದಾಟಿ : ಬದಲಗಯಿ ನೈನಹೊ | ಭೇನತನಾಹಿ ||ಪಲ್ಲ|| ತಂಖಾ ಹೋಯತೋ ತೋಡಿಯೇರೇ|| ಪ್ರೀತನ ತೋಡಿಯೇ ಜಾಯ| ಕಾಗದ ಹೋತೋ ಬಾಚೇತೀರೆ| ಕರಮನ ಬಾಚೇ ಜಾಯ||೧|| ಎಂಬಂತೆ.

ಸಖಿಯ ಬಿಡೋ ನೀ ಕೇಳೊ | ಶಿಕ್ಷಿಸುವೆನೊ ||ಪಲ್ಲ||

ನಲ್ಲೆಯ ಕೋಮಲಾಧರಾ | ದಲ್ಲಿ ರೋಲಂಬನೇ ನೀ
ಮುಳ್ಳುಗಾಲಿಡಲಿಬ್ಯಾಡೊ | ಒಳ್ಳೆ ಮಾತಿಲಿ ನೀ ||೧||
ತೊಂಡೆವಣ್ಣೊಂಪಿನಧರಾ | ಕಂಡುರೆನಾರತಿಯೊಳ್
ಉಂಡೆನಲ್ಲೋ ಜತನದೊಳ್ || ದಂಡಿಸುವೆನೆನ್ನಯ ||೨||

ಇಂದು ಎನ್ನ ಸುಂದರಿಯ | ಚೆಂದಟಿ ಮುಟ್ಟಿದರೆ
ಇಂದೀವರೋದರದೊಳು | ಬಂಧಿಸುವೆನೆನ್ನಯ ||೩||

ವಿದೂಷಕ : ಅಬಬ, ಏನ ಉಗ್ರ ದಂಡಪಾ ಇದು! ಕಮಲದ ಹೊಟ್ಟೀ ಬಂದೀಕಾನ್ಯಾಗ ಹಾಕತೇನ ಅಂದಮ್ಯಾಗ ಅವಳ ನಿಂತಾಳ ಎಂದಾರ? (ನಕ್ಕು ತನ್ನೊಳಗೆ) ಇವಗಂತೀ ತೀರಾ ಹುಚ್ಚ ಹಿಡೀತ; ನಾನೂ ಇವನ ಸಂಗಾತ ಹುಚ್ಚ ಆದ್ನಿ. (ಪ್ರಕಾಶವಾಗಿ) ಏನಪಾ, ಮೈಮ್ಯಾಗ ಎಚ್ಚರ ಆಽತೆ? ಇದ ಚಿತ್ತರದಾಗಿನ ಗೊಂಬಿಕಾಣವ! ನಿನ್ನ ಗೆಣತಿ ಅಲ್ಲ.

ಅರಸು : ಏನು? ಚಿತ್ರವೆ? ನನ್ನ ಪ್ರಾಣಸಖಿಯಳಲ್ಲವೆ?

ಸಾನುಮತಿ : ನನಗೂ ಕೂಡ ಭ್ರಾಂತಿಯುತ್ಪನ್ನವಾಗುತ್ತದೆ. ಈತನಿಗಾಗುವದೇಸಾಶ್ಚರ್ಯ.

ಅರಸು : ಗೆಳೆಯ, ಎಂಥ ಘಾತುಕತನ ಮಾಡಿದೆಯೊ!

(ಪದ)

ದಾಟಿ : ರಂಗಯ್ಯಾ ಬಾರನೆ ಸಖಿಯೇ| ಪಲ್ಲ| ಮಾರಾ | ಕ್ರೂರಾ | ಘೋರ ತಾಪದಿಂದ ತಾರಾಪತಿಗೆ ಶರಣ್ಹೋದೆ||೧|| ಎಂಬ ಪದದಂತೆ.

ಎಚ್ಚರವ್ಯಾಕೆ ಮಾಡಿದ್ಯೆ| ಎನ್ನನು ||ಪಲ್ಲ||

ಚಿತ್ತರವೆ ಎನ್ನ ಪ್ರತ್ಯಕ್ಷ ಸಖಿಯೆಂದು |
ಅತ್ಯಂತ ಹರುಷದೊಳಿದ್ದೆ ||೧||

ಅಕಟ ಸೈರಿಸೆನೆನ್ನ | ಸಖಿಯ ಸಂದರುಶನ
ಸುಖದೊಳು ನಾಮುಳುಗಿದ್ದೆ ||೨||

ಪ್ರಾಣಸಖಿಯಳಿನ್ನು | ಪುನರಪಿ ಚಿತ್ರದೊಳ್ |
ಕಾಣಿಸುವಂತೆ ಮಾಡಿದೆಲ್ಲೆ ||೩||

(ಕಣ್ಣೀರು ಸುರಿಸುತ್ತಾನೆ.)

ಸಾನುಮತಿ : ಪೂರ್ವಾಪರ ವಿರೋಧಿಯಾದ ಈ ವಿರಹದುಃಖ ಮಾರ್ಗವು ಅಪೂರ್ವವಾಗಿ ತೋರುತ್ತದೆ.

ಅರಸು : ಮಿತ್ರಾ, ಪ್ರಿಯಾ ವಿರಹದ ಈ ಅಖಂಡವಾದ ದುಃಖವನ್ನು ನಾನು ಹ್ಯಾಗೆ ಸೈರಿಸಲಿ? ಒಂದು ಕ್ಷಣಮಾತ್ರವಾದರೂ ವಿಶ್ರಾಂತಿಯಿಲ್ಲ!

(ಪದ)

ದಾಟಿ : ಖೀ ಅಜೋಲಗ ಗಯಿವೆ| ಸಾದನ ಮೋರಾರೇ||ಪಲ್ಲ|| ಕಿನೇಸೋತನ ಮಾರೀ| ಅಖೀ ಜೋಲಗ ಗಯಿವೆ| ಜಿಯರಾಮೇ ಬಾಸ ಗಯಿವೇ| ಸಾದನ ಮೋರಾರೇ|| ಎಂಬ ಪದದಂತೆ.

ಕಂಜಾಕ್ಷಿಯಳೆಲ್ಲೊ | ಕಾಂಬುವದೆಂತೊ ||ಪಲ್ಲ||
ಹಗಲು ರಾತ್ರಿಯಲಿ ನಾ- | ನಗಲ್ದಿರುವ ದುಃಖ ||

ಮಿಗಿಲ್ಹ್ಯಾಗೆ ಸೈರಿಸಲೊ || ಕಾಂಬವಾ ||೧||

ಸುಂದರಾಂಗಿಯ ಕನ | ಕನಸಿನಲ್ಲೀಕ್ಷಿಸುವೆ-
ನೆಂದರೆ ನಿದ್ರೆ ಬಾರದೊ || ಕಾಂಬುವ ||೨||

ಚಿತ್ರದೊಳ್ ಚೆಲುವಿಕೆಯ ಚೆನ್ನಾಗಿ ನೋಡುವೆನೆ |
ನೇತ್ರದೊಳ್ ಬಾಷ್ಪಗಳೊ || ಕಾಂಬವದೆಂತೋ ||೩||

ಸಾನುಮತಿ : (ತನ್ನೊಳಗೆ) ಎಲೋ ಭೂಪತಿಯೇ, ಧನ್ಯನೋ ನೀನು! ಹಿಂದಿರುಗಿ ಕಳುಹಿಸಿದಂಥ ಶಕುಂತಲೆಯ ದುಃಖವನ್ನು ಅವಳ ಸಖಿಯಳಾದ ನನ್ನೆದುರಿಗೆ ಪೂರ್ಣವಾಗಿ ಪರಿಮಾರ್ಜನ ಮಾಡಿಬಿಟ್ಟೆ.

(ಇಷ್ಟರಲ್ಲಿ ಚತುರಿಕೆಯೆಂಬ ದಾಸಿಯು ಬರುತ್ತಾಳೆ.)

ಚತುರಿಕೆ : ಜಯತು ಜಯತು ಭರ್ತಾ!

ಅರಸು : ಯಾರು? ಚತುರಿಕೆ! ಚಿತ್ರಸಾಮಗ್ರಿಯನ್ನು ತಂದೆಯಾ?

ಚತುರಿಕೆ : ಚಿತ್ರಸಾಮಗ್ರಿಯ ಕರಡಿಗೆಯನ್ನು ಇತ್ತ ಕಡೆಗೆ ತೆಗೆದುಕೊಂಡು ಬರತ್ತಿದ್ದೆ.

ಅರಸು : ಅಷ್ಟರಲ್ಲೇನಾಯಿತು?

ಚತುರಿಕೆ : ಅಷ್ಟರಲ್ಲಿ ತರಲಿಕೆಯನ್ನು ಕೂಡಿಕೊಂಡು ಬರುತ್ತಿದ್ದ ವಸುಮತಿ ದೊರೆ ಸಾನಿಯುವರು ಬಂದು ನನ್ನ ಕೈಯಲ್ಲಿಯ ಕರಡಿಗೆಯನ್ನು ನೋಡಿ, ತಾವೆ ಆರ್ಯಪುತ್ರರಿಗೆ ಕೊಡುತ್ತೇವೆಂದು ಬಲಾತ್ಕಾರದಿಂದ ಕಸಿದುಕೊಂಡರು.

ವಿದೂಷಕ : ನೀ ಅವಳ ಕೈಯಾಗ ಸಿಗದ ಬಂದದ್ದು ಬಲ ಹೆಚ್ಚಿನ ಮಾತ ಬಿಡ.

ಚತುರಿಕೆ : ದೇವಿಯ ಸೆರಗು ಗಿಡಕ್ಕೆ ತಗಲಿಕೊಂಡಿತ್ತು. ಅದನ್ನು ತರಲಿಕೆಯು ಬಿಡಿಸುತ್ತ ನಿಂತಳು. ಅಷ್ಟರಲ್ಲಿ ನಾನು ಬಿಡಿಸಿಕೊಂಡು ಓಡಿ ಬಂದೆ.

ಅರಸು : ಮಿತ್ರನೆ ಕೇಳು, ಇತ್ತ ಕಡೆಗೆ ದೇವಿಯು ಬರುತ್ತಾಳೆ. ತನ್ನ ಬಹುಮಾನ ವಿಡಬೇಕೆಂದು ಅವಳಿಗೆ ಬಹು ಗರ್ವವುಂಟು. ಈ ಚಿತ್ರವನ್ನು ಅವಳು ನೋಡಿದರೆ ಅನರ್ಥ ಕಲಹ ಮಾಡುವಳು. ಕಾರಣ ಇದನ್ನು ತೆಗೆದುಕೊಂಡು ನೀನು ಇಲ್ಲಿಂದ ಹೋಗು. ಚಿತ್ರ ಮಾತ್ರ ಜೋಕೆ.

ವಿದೂಷಕ : ಚಿತ್ತುರವೂ ನಾನೂ ಇಬ್ಬರೂ ಜೋಕೀಲೆ ಇರತೇವು. ಚಿಂತೀ ಮಾಡಬ್ಯಾಡ. ನಾ ಮೇಘಡಂಬರೀ ಗೋಪುರದಾಗ ಅಡಗಿಕೊಂಡಿರತೇನು. ಈ ಅಂತಪ್ಪುರದ ಅರಿಷ್ಟ, ಇನ್ನ ಬಿಟ್ಟ, ಹೋದಮ್ಯಾಗ ನನ್ನ ಕರಿ; ಆಂ! (ಎಂದು ತೀವ್ರದಿಂದ ಹೊರಟು ಹೋಗುತ್ತಾನೆ.)

ಸಾನುಮತಿ : (ತನ್ನೊಳಗೆ) ಅನ್ಯ ಸ್ತ್ರೀಯು ಈತನ ಮನಸ್ಸನ್ನು ವ್ಯಾಪಿಸಿರಲಾಗಿಯೂ ಮೊದಲಿನ ಸ್ನೇಹ ತೋರುವದನ್ನು ಈತನು ಬಿಡುವದಿಲ್ಲವಲ್ಲ! ಈತನ ಸ್ನೇಹ ಇವಳಲ್ಲಿ ಸಿಥಿಲವಾಗಿ ಬರೇ ವಿನಯದ ರೂಪವನ್ನು ತಾಳಿದಂತೆ ತೋರುತ್ತದೆ.

(ಇಷ್ಟರಲ್ಲಿ ಪ್ರತೀಹಾರಿಯು ಕೈಯಲ್ಲಿ ಪತ್ರವನ್ನು ಹಿಡಿದುಕೊಂಡು ಬರುತ್ತಾಳೆ.)

ಪ್ರತೀಹಾರಿ : ಜಯತು ಜಯತು ದೇವಃ.

ಅರಸು : ಹೇ ವೇತ್ರವತೀ, ದಾರಿಯಲ್ಲಿ ನೀನು ದೇವಿಯನ್ನು ಕಾಣಲಿಲ್ಲವೆ?

ಪ್ರತೀಹಾರಿ : ಸ್ವಾಮಿ, ನಾನು ಕಂಡೆ. ನನ್ನ ಕೈಯಲ್ಲಿ ಪತ್ರವಿದ್ದುದನ್ನು ನೋಡಿ ತಿರುಗಿ ಹೋದರು.

ಅರಸು : ಅವಳು ತಿಳಿದವಳಿದ್ದಾಳೆ. ರಾಜಕಾರ್ಯದಲ್ಲಿ ವಿಘ್ನವಾಗಬಾರದೆಂದು ತಿರುಗಿ ಹೋದಳು.

ಪ್ರತೀಹಾರಿ : ಸ್ವಾಮಿ, ಅಮಾತ್ಯರು ವಿಜ್ಞಾಪನೆ ಮಾಡಿಕೊಂಡಿದ್ದಾರೆ. ಅದೇನೆಂದರೆ, ಈಪೊತ್ತು ದ್ರವ್ಯವೆಣಿಸುವುದು ಬಹಳಿದ್ದದರಿಂದ ಅವಕಾಶಾನುರೂಪವಾಗಿ ಪೌರಜನರ ಒಂದೇ ಕಾರ್ಯವನ್ನು ನೋಡಿರುತ್ತೇವೆ. ಅದನ್ನು ಪತ್ರದಲ್ಲಿ ಕಾಣಿಸಿದ್ದೇವೆ. ಮಹಾರಾಯರ ಅವಲೋಕನದಲ್ಲಿ ಬರಬಹುದೆಂದು ಹೇಳಿದ್ದಾರೆ.

ಅರಸು : ಪತ್ರಿಕೆಯನ್ನು ನೋಡುವ.

ಪ್ರತೀಹಾರಿ : (ಪತ್ರಿಕೆಯನ್ನು ಮುಂದೆ ಚಾಚುತ್ತಾಳೆ.)

ಅರಸು : (ಅದನ್ನು ತೆಗೆದುಕೊಂಡು) ಏನೆಂದು ಬರೆದಿದ್ದಾನೆ ಅಮಾತ್ಯನು? "ಸಮುದ್ರ ವ್ಯವಹಾರಿಯಾದ ಧನಮಿತ್ರಸೆಟ್ಟಿ ಸಾವಕಾರನು ಹಡಗಮುಳುಗಿ ಸಮುದ್ರದಲ್ಲಿ ಮರಣಹೊಂದಿದನು. ಆತನ ಹೊಟ್ಟೆಯಲ್ಲಿ ಸಂತಾನವಿಲ್ಲ. ಆದ್ದರಿಂದ ಆತನ ದ್ರವ್ಯಸಂಚಯವೆಲ್ಲ ರಾಜಭಂಡಾರಕ್ಕೆ ಬರತಕ್ಕದ್ದು. ಅರಿಕೆಯಾಗಬೇಕು. ಇತಿ ವಿಜ್ಞಾಪನೆ" (ದುಃಖದಿಂದ) ಹೊಟ್ಟೆಯಲ್ಲಿ ಸಂತಾನವಿಲ್ಲದಿರುವದು ಬಹು ಕಷ್ಟ. ಹೇ ವೇತ್ರವತಿಕೆ ಆ ಸಾವುಕಾರನು ಬಹು ಸಂಪನ್ನನಾಗಿದ್ದನು. ಆತನಿಗೆ ಬಹುಮಂದಿ ಹೆಂಡರಿರಬಹುದು. ಅವರಲ್ಲಿ ಯಾವಳಾದರೂ ಗರ್ಭಿಣಿಯಾಗಿ ರಬಹುದು, ಶೋಧ ಮಾಡಿಸು.

ಪ್ರತೀಹಾರಿ : ಸ್ವಾಮಿ, ಸಾಕೇತಪುರದ ಸೆಟ್ಟಿಯ ಮಗಳನ್ನು ಆತನಿಗೆ ಕೊಟ್ಟಿದೆ. ಅವಳ ಬಯಕೇ ಭೋಜನಸಮಾರಂಭವಾಯಿತೆಂದು ಸುದ್ದಿ ಕೇಳುತ್ತೇವೆ.

ಅರಸು : ಹಾಗಾದರೆ ಪಿತೃಧನವು ಗರ್ಭವಿದ್ದ ಕಡೆಗೆ ಹೋದೀತೆಂದು ಅಮಾತ್ಯರಿಗೆ ಶ್ರುತಪಡಿಸು ಹೋಗು.

ಪ್ರತೀಹಾರಿ : ಮಹದಾಜ್ಞ (ಹೋಗಲಾರಂಭಿಸುತ್ತಾಳೆ)

ಅರಸು : ಸ್ವಲ್ಪ ನಿಲ್ಲು.

ಪ್ರತೀಹಾರಿ : ಜೀಯಾ, ಮತ್ತೇನು?

ಅರಸು : ಆ ಸಾವುಕಾರನಿಗೆ ಸಂತತಿ ಇರಲಿ ಅಥವಾ ಇಲ್ಲದಿರಲಿ, ಆತನ ದ್ರವ್ಯವು ರಾಜಭಂಡಾರಕ್ಕೆ ಬರಲಾರದೆಂದು ಹೇಳು. ಮತ್ತು -

ಕಂದ || ದುಷ್ಕರ ಹೊರ್ತನ್ಯರೊಳಾ -
ಪ್ತೇಷ್ಟರ್ಮಡಿಯಲವರ ಬಳಿಯೊಳ್ ದುಷ್ಯಂತಂ
ಸೃಷ್ಟಿಯೊಳಿಹ ವರೆಗಿಹ ತಾಂ
ಕಷ್ಟಂ ಬಡಲಾಗದೆಂದು ಡಂಗುರ ಹೊಡಿಸ್ಯೆ ||೧||

ಹೀಗೆಂದು ಆಜ್ಞಾಪಿಸಿದ್ದಾರೆಂದು ಹೇಳಿ ಬಾ, ಹೋಗು

ಪ್ರತೀಹಾರಿ : ಅಹುದು ಜೀಯಾ, ಹೇಳುತ್ತೇನೆ (ಹೋಗಿ ತಿರುಗಿ ಬರುತ್ತಾನೆ.) ಮಹಾರಾಜರ ಆಜ್ಞೆ. ಅಮಾತ್ಯರಿಗೆ ಶ್ರುತವಾಗಿ ಯೋಗ್ಯ ಕಾಲದಲ್ಲಿ ಮೇಘವೃಷ್ಟಿಯಾದಂತೆ ಆನಂದಕರವಾಯಿತೆಂದು ಹೇಳಿದರು.

ಅರಸು : (ದೀರ್ಘೋಷ್ಣಶ್ವಾಸ ಬಿಟ್ಟು) ಹರಹರಾ! ಸಂತತಿಯು ನಿಂತು ಹೋದದರಿಂದ ವಂಶವು ಈ ಪ್ರಕಾರ ನಿರಾಧಾರಿಯಾಗುವದಲ್ಲ! ಕಟ್ಟಕಡೆಯ ಬೊಡ್ಡೇ ಮನೆಯಂತಿರುವ ದೇಹಾವಸಾನವಾದ ಮೇಲೆ ಆತನ ಸಂಪತ್ತು ಅನ್ಯರ ಸೇವೆಗೆ ಹೋಗುವದಲ್ಲ! ಹರಹರಾ! ನನ್ನ ಅಂತ್ಯಕಾಲಕ್ಕೂ ಇದೇ ಅವಸ್ಥೆಯಲ್ಲವೇ! ಅಕಾಲದಲ್ಲಿ ಬಿತ್ತಿದ ಭೂಮಿಯಂತೆ ಪುರುವಂಶವೂ ನಿಷ್ಫಲವಾಗಿ ಹೋಗುವದು!

ಪ್ರತೀಹಾರಿ : ಸಾಕು ಸಾಕು; ನೀವು ಇಂಥ ಕೆಟ್ಟ ಮಾತು ಯಾಕೆ ಆಡುವದು?

ಅರಸು : ಹೇ ಪ್ರತೀಹಾರಿ, ಮನೆಯನ್ನು ಶೋಧಿಸುತ್ತ ಲಕ್ಷ್ಮಿಯು ಬಂದಿದ್ದಳು. ನನ್ನ ಭಾಗ್ಯವು ಕಾಲಿಗೆರಗಿ ಬೇಡಿಕೊಳ್ಳುತ್ತಿತ್ತು. ಮೂರ್ಖನಾದ ನಾನು ಅವಮಾನವನ್ನು ಮಾಡಿದೆ. ನನಗೆ ಧಿಕ್ಕಾರವಿರಲಿ! ನಾನು ಎಂಥ ಹತಭಾಗ್ಯನೊ?

ಸಾನುಮತಿ : (ತನ್ನೊಳಗೆ) ಈತನು ನನ್ನ ಸಖಿಯಳಾದ ಶಕುಂತಲೆಯನ್ನು ಮನದಲ್ಲಿ ತಂದು ತನ್ನನ್ನು ಧಿಕ್ಕರಿಸಿಕೊಂಡನು.

ಅರಸು : ಹರಹರಾ, ಏನಾಯಿತು?

||ಭಾಮಿನಿ ಷಟ್ಪದಿ||

ಹರಗಿ ಬೀಜಂ ಬಿತ್ತಿ ಕೃಷಿಗನು |
ಧರಣಿಯನು ಫಲಗಾಣದಲೆಯಂ |
ತರಿಸಿದಲಾಯ್ತೆನ್ನ ಬಗೆ ಕೇಳ್ ಧರ್ಮಪತ್ನಿಯನು ||
ಪುರುಕುಲಕೆ ಭೂಷಣೆಯಳೆನ್ನಂ -
ಕುರವ ಪಾಲಿವ ಭೂಮಿಯನ್ನಾ-
ದರಿಸಲಿಲ್ಲ ತಿಭಾಗ್ಯಹೀನನೊಲಾದೆನಕಟಕಟ ||

ಸಾನುಮತಿ : (ತನ್ನೊಳಗೆ) ನಿನ್ನ ಸಂತತಿಯು ಅವಿಚ್ಛಿನ್ನವಾಗಿದೆ, ಏನೂ ಚಿಂತೆ ಮಾಡಬೇಡ.

ಚತುರಿಕೆ : (ತನ್ನೊಳಗೆ) ಎಂಥ ಪತ್ರವದು! ಆ ಸಾವುಕಾರನ ಸುದ್ದಿ ಕೇಳಿಯೇ ಮಹಾರಾಯರಿಗೆ ಅತಿ ದುಃಖವುಂಟಾಯಿತು. (ಪ್ರತೀಹಾರಿಗೆ) ಈ ವ್ಯಾಳ್ಯದಲ್ಲಿ ಇವರನ್ನು ಸಮಾಧಾನಪಡಿಸಲಿಕ್ಕೆ ಮಾಧವ್ಯನನ್ನಾದರೂ ಮೇಘಡಂಬರಿಯಲ್ಲಿ ಹೋಗಿ ಕರೆದುಕೊಂಡು ಬಾ ಹೋಗು.

ಪ್ರತೀಹಾರಿ : ಅಹುದವ್ವಾ. (ಹೋಗುತ್ತಾಳೆ.)

ಅರಸು :

ಭಾ ||ಷ ||

ಅಂತು ಮಾಡಿದೆನೆಮ್ಮ ಕುಲ ದು|
ಷ್ಯಂತನೀತನ ಹಿಂದೆ ನಾವಿ
ನ್ನೆಂತು ಕಾಂಬೆವು ಶ್ರುತಿಸಮುಕ್ತಿಯ ತರ್ಪಣಾದಿಗಳ ||
ಇಂತು ಶಂಕೆಯೊಳಿರ್ದು ಪಿತರಾ
ಸಂತತಿಗಳಿಲ್ಲೆಂಬ ಕಷ್ಟದಿ
ಸಂತತದೊಳಶ್ರುಗಳ ಸುರಿಸಲವನ್ನೆ ಗುಟುಕಿಪರು ||೧||
(ಮೂರ್ಛೆ ಹೊಂದುತ್ತಾನೆ.)

ಚತುರಿಕೆ : (ಗಾಬರಿಗೊಂಡು) ಹೇ ನಾಥ, ತಮ್ಮಂಥವರು ದುಃಖಕ್ಕೆ ವಶರಾಗುವದುಂಟೆ! ಹೀಗೆ ಮಾಡಬಾರದು. ಸ್ವಾಮಿ, ಎಚ್ಚರಿಕೆಯಬೇಕು!

ಸಾನುಮತಿ : (ತನ್ನೊಳಗೆ) ಅಯ್ಯೋ ಈ ರಾಜರ್ಷಿಯು ಪ್ರತ್ಯಕ್ಷ ದೀಪವಿರಲಾಗಿ ವ್ಯವಧಾನದಿಂದ ಅಂಧಕಾರ ದೋಷವನ್ನು ಅನುಭವಿಸುತ್ತಾನೆ. ಈಗಲೇ ಈತನನ್ನು ಕಷ್ಟದಿಂದ ಬಿಡಿಸಲ್ಯಾ? ಬೇಡ. ಮಹೇಂದ್ರನ ತಾಯಿಯಾದ ಅದಿತಿಯು ಶಕುಂತಲೆಯು ಸಮಾಧಾನ ಮಾಡುತ್ತಿರುವಾಗ ಅವಳ ಮುಖದಿಂದ "ದೇವತೆಗಳಿಗೆ ಯಜ್ಞಭಾಗವನ್ನು ಗ್ರಹಣ ಮಾಡುವ ಇಚ್ಛೆ ಉಂಟಾಗಿದೆ. ಕಾರಣ ಅವರೇ ಧರ್ಮಪತ್ನಿಯಾದ ನಿನ್ನನ್ನು ನಿನ್ನ ಪತಿಯು ಸ್ವೀಕರಿಸುವ ಹಾಗೆ

ಯುಕ್ತಿಯನ್ನು ತೆಗೆಯತಕ್ಕವರಿದ್ದಾರೆ." ಎಂದು ಹೇಳಿದ ಮಾತನ್ನು ಕೇಳಿದ್ದೇನೆ. ತಸ್ಮಾತ ಈಗಲೆ ಅವಸರವು ಕೆಲಸದ್ದಲ್ಲ. ಮಾತ್ರ ಶಕುಂತಲೆಗೆ ಈ ಸುದ್ದಿಯನ್ನು ತಿಳಿಪಿಸಿ ಅವಳನ್ನು ಸಮಾಧಾನಪಡಿಸುವೆನು. ಉಡ್ಡಾಣಮಾಡಿ ಅಂತರೀಕ್ಷ ಮಾರ್ಗದಿಂದ ಹೊರಟು ಹೋಗುತ್ತಾಳೆ.)

(ತೆರೆಯಲ್ಲಿ ಶಬ್ದವಾಗುತ್ತದೆ : - ಬದುಕಿಸು! ಬದುಕಿಸು!!)

ಅರಸು : (ಎಚ್ಚೆತ್ತು) ಹೋ ಹೋ! ಮಾಧವ್ಯನ ಆರ್ತಸ್ವರವು ಕೇಳಬರುತ್ತದೆ. ಯಾರವರಲ್ಲಿ?

ಚತುರಿಕೆ : ಸ್ವಾಮಿ, ಚಿತ್ರದ ಪಟವನ್ನು ಕೈಯಲ್ಲಿ ಹಿಡಿದುಕೊಂಡು ಮಾಧವ್ಯನು ಹೋಗುವಾಗ ತರಲಿಕೆಬಿರಲಿಕೆ ಯಾರಾದರೂ ಆತನನ್ನು ಬಡಿಸುತ್ತಿರಬೇಕು ಕಾಣಿಸುತ್ತದೆ.

ಅರಸು : ಚತುರಿಕೆ, ನೀನು ಹೋಗಿ ಆಳು ಜನರನ್ನು ಕಾಡುವದು ಒಳ್ಳೇದಲ್ಲವೆಂದು ದೇವಿಗೆ ಹೇಳಿ ಬಾ ಹೋಗು.

(ಚತುರಿಕೆ ಹೋಗುತ್ತಾಳೆ.)

(ಹಿಂದೆ ಪುನಃ ಶಬ್ದವಾಗುತ್ತದೆ.)

ಅರಸು : ಪ್ರಾಣ ಸಂಕಟದಲ್ಲಿ ಸಿಕ್ಕಂತೆ ಮಾಧವ್ಯನ ಶಬ್ದವು ಕೇಳಬರುತ್ತದೆ. ಯಾರವರು ಅಲ್ಲಿ?

ಪ್ರತೀಹಾರಿ : (ಶೀಘ್ರದಿಂದ ಬಂದು), ತಮ್ಮ ಮಿತ್ರನ ಮೇಲೆ ಮಹತಂಕಟವು ಪ್ರಾಪ್ತವಾಗಿದೆ ಸ್ವಾಮಿ; ಆತನನ್ನು ರಕ್ಷಿಸಬೇಕು.

ಅರಸು : ನನ್ನ ಮಿತ್ರನಾದ ಮಾಧವ್ಯನಿಗೆ ಯಾರೇನು ಮಾಡುತ್ತಾರೆ?

ಪ್ರತೀಹಾರಿ : ಮೇಘಡಂಬರಿಯ ಗೋಪುರದಲ್ಲಿ ಆತನು ಅಡಗಿಕೊಂಡಿದ್ದನು ಸ್ವಾಮಿ; ಯಾವದ ಅದೃಶ್ಯರೂಪಿಯಾದ ಪಿಶಾಚವು ಆತನನ್ನು ಎಲ್ಲಿಯೋ ತೆಗೆದುಕೊಂಡು ಹೋಗಿದೆ. ಚೀರಾಟ ಮಾತ್ರ ಕೇಳಿಬರುತ್ತದೆ.

ಅರಸು : (ಎದ್ದು) ನನ್ನ ಮನೆಯಲ್ಲಿ ಸಹ ಭೂತಗಳು ಸಂಚರಿಸಲಾರಂಭಿಸಿವೆ? ಇಂಥ ಪಾಪವು ನನ್ನ ರಾಷ್ಟ್ರದಲ್ಲಿ ಯಾರಿಂದಾಯಿತು? ಅಥವಾ ಆಗಿರಬಹುದು -

ಭಾಮಿನಿ|| ಗಳಿಗಳಿಗೆಯೋಳ್ ಪಾಪವೆಮ್ಮಿಂ
ತಿಳಿಯದೆಷ್ಟಾದಪವೊ ರಾಸಿಗ-
ಳುಳಿದ ಪೃಥ್ವಿಯ ಜನವಪರಿಮಿತವದರಪಾಪಗಳ ||

ಬಳಿಕರಿವದೆಂತಿವನು ಸಜ್ಜನ
ವಿಳೆಯೊಳವನಿಹ ಪಾಪಿಯೆಂದಾರ್
ತಿಳಿಯಬಲ್ಲವರಕಟ ನೆರೆ ಪಾಪಿಷ್ಠನಾನಹೆನು ||೧||

(ತೆರೆಯಲ್ಲಿ - ಎಪ್ಪಾ, ಈ ದೆವ್ವಿನ ಕೈಯಾಗಿಂದ ನನ್ನ ಬಿಡಿಸಿಕೊ ಕಾಣೊ! ನನ್ನ ಜೀವ ಹೋಗಾಕ ಹತ್ತೇತಿ.)

ಅರಸು : (ಮುಂದಕ್ಕೆ ಧಾವಿಸಿ) ಎಲೋ ಮಿತ್ರನೆ, ಅಂಜಬೇಡ, ಅಂಜಬೇಡ.

(ತೆರೆಯಲ್ಲಿ - ಎಪ್ಪಾ, ಅದ ಹ್ಯಾಂಗ ಅಂಜಬ್ಯಾಡಾ? ಇದಯಾವದೊ ದೆವ್ವ ಕಬ್ಬಿನ ಹಾಂಗ ನನ್ನ ಹಿಂದಬಾಗಿಸಿ ಮೂರೂತತಿ ಕಾಣೊ! ಅಯ್ಯಯ್ಯೊ, ಸಾವತೇನ್ರೋ ಎಪ್ಪಾ ಬಿಡಿಸಿಕೊಳ್ರೋ! ಬಿಡಿಸಿಕೊಳ್ರಿ.)

ಅರಸು : (ಅತ್ತಿತ್ತ ನೋಡಿ) ಎಲೋ, ನನ್ನ ಧನುಷ್ಯವೆಲ್ಲಿದೆ? ಹೇಳು ಬೇಗ. (ಇಷ್ಟರಲ್ಲಿ ಧನುಷ್ಯ ಬಾಣಗಳನ್ನು ಹಿಡಿದುಕೊಂಡು ಯವನಿಕಾ ಎಂಬವಳು ಬರುತ್ತಾಳೆ.)

ಅರಸು : (ಧನುಷ್ಯವನ್ನು ತೆಗೆದುಕೊಳ್ಳುತ್ತಾನೆ.)

ತೆರೆಯಲ್ಲಿ -

ಭಾಮಿನಿ || ಎತ್ತಿನನು ಪುಲಿವಿಡಿದು ಗೋಣಿನ
ನೆತ್ತರವ ಪೀರ್ವಂತೆ ನಿನ್ನಯ
ಕುತ್ತಿಗೆಯ ಕಚ್ಚುತ್ತೆ ರಕ್ತವ ಪೀರ್ದಪೆಂನಿನ್ನ |
ಹೊತ್ತಿಗಾಪೀಡಿತರ ರಕ್ಷಿಸ
ವೊತ್ತಬಿರುದಿನ ಪೌರವಾಧಿಪ
ನೆತ್ತಪೋದನು ಬರಲಿ ಕರೆಯಲೆ ಬಿಡಿಸಿ ಕೊಳವುದಕೆ||

ಅರಸ : (ಕ್ರೋದಾವಿಷ್ಟನಾಗಿ) ಅಯ್ಯೋ, ನನ್ನನ್ನೇ ಉದ್ದೇಶಿಸಿ ಮಾತನಾಡುತ್ತಾನೆ. ಎಲೋ ದುಷ್ಟ, ರಾಕ್ಷಸನೆ, ಒಂದು ಕ್ಷಣದಲ್ಲಿ ನೀನಿಲ್ಲದಂತೆ ಮಾಡುತ್ತೇನೆ. ಚಿಂತೆ ಮಾಡಬೇಡ. (ಪ್ರತೀಹಾರಿಗೆ) ಸೋಪಾನ ಮಾರ್ಗವೆಲ್ಲಿ?

ಪ್ರತೀಹಾರಿ : ಹೀಗೆ ಬನ್ನಿ.

(ಎಲ್ಲರೂ ತೀವ್ರದಿಂದ ನಡೆಯುತ್ತಾರೆ.)

ಅರಸು : (ಸುತ್ತಲೆ ನೋಡಿ) ಇಲ್ಲಿ ಯಾರೂ ಕಾಣುವದಿಲ್ಲ.

(ತೆರೆಯಲ್ಲಿ : ನನ್ನ ಎಪ್ಪಾ ನೀ ನನಗ ಕಾಣತಿ; ನಾ ನಿನಗ ಕಾಣೂದಿಲ್ಲ? ಬೆಕ್ಕಿನ ಬಾಯಾಗ ಇಲಿ ಸಿಕ್ಕ್ಯಾಂಗಾಗೇತ್ಯೋ ಎಪ್ಪಾ! ಸಾವುತೇನ್ರೋ ಬಿಡಿಸಿಕೊಳ್ಳಿರೊ!)

ಅರಸು : ಎಲೋ, ದುಷ್ಟ, ಪಿಶಾಚಿಯೆ, ತಿರಸ್ಕರಣೀ ವಿದ್ಯೆಯಿಂದ ಗುಪ್ತವಾಗಿರುವೆ ಯೆಂದು ಗರ್ವತಾಳಿದೆಯಾ? ಚಿಂತೆಯಿಲ್ಲ; ಯದ್ಯಪಿ ನಾನು ನಿನ್ನನ್ನು ನೋಡದೆ ಇದ್ದರೂ ನನ್ನ ಅಸ್ತ್ರವು ನಿನ್ನನ್ನು ನೋಡಿಕೊಂಡೀತು.

ಭಾಮಿನಿ || ಗರುವ ತಾಳಲಿ ಬೇಡ ನಿನ್ನಯ
ತಿರಸ್ಕರಣಿ ವಿದ್ಯದಿ ಪರರಕ
ಣ್ಗರಿಯದಂತಿವನಂ ಪಿಡಿಯಲೆನ್ನಂಬುಗಳು ನಿನ್ನ
ಕರಳ ಕತ್ತರಿಸುವವು ಹಂಸದ
ಮರಿಯು ಪಾಲ್ನೀರ್ಗೂಡಿರಿಸೆ ತಾಂ
ಬರಿಯೆ ದುಗ್ಧವನುಂಬತೆರ ನೋಡೆನ್ನ ವಿಕ್ರಮವ ||೧||

(ಹೀಗೆಂದು ಅಸ್ತ್ರವನ್ನು ಬಿಡುವಷ್ಟರಲ್ಲಿ ವಿದೂಷಕನನ್ನು ಬಿಟ್ಟು ಇಂದ್ರನ ಸಾರಥಿಯಾದ ಮಾತಲಿಯು ಬರುತ್ತಾನೆ.)

ಮಾತಲಿ : ಹೇ ದುಷ್ಯಂತ ಪ್ರಭೋ, ನಾನು ವಧ್ಯನಲ್ಲ ಕಂಡೆಯಾ? ನಿನ್ನ ಮಿತ್ರನಾಗಿದ್ದೇನೆ. ಶಸ್ತ್ರವನ್ನು ಬಿಡಬೇಡ.

ಭಾಮಿನಿ || ತೆಗೆ ತೆಗೆ ನೃಪತಿ ಪೊಡೆಯದಿರ್ ನಾಂ
ಪಗೆಯನಲ್ಲಂಬುಗಳ ರಾಕ್ಷಸ
ರಿಗೆಯೆ ನಿನ್ನ ಸ್ತ್ರಗಳೆನುತಲಿಂದ್ರಂ ನಿಯಮಿಸಿರಲು |
ಬಗೆಯದಿರ್ ನಿನ್ನಾಪ್ತನಹೆ ನೀ
ಬಗೆಯನಾಂ ತಿಳುಹುವೆ ಸವಿಸ್ತರ
ಬಿಗಿಯದಿರ್ ಬಾಣಗಳ ನಾ ನೋಡಿಂದ್ರ ಸಾರಥಿಯು ||೧||

ಅರಸು : (ಬಾಣವನ್ನು ಒಂದಕ್ಕೆ ತೆಗೆದುಕೊಂಡು) ಹೋಹೋ! ಮಾತಲಿ! ಮಹೇಂದ್ರ ಸಾರಥಿಯೇ, ಬರಬಹುದು ಬರಬಹುದು.

ವಿದೂಷಕ : (ಬಂದು) ಎಲಿ ಇವನ! ನನ್ನ ಹಿಡಿದಕ್ಯಾಸಿ ಕುತ್ತಿಗೇ ಹಿಚಕತಿದ್ದ. ಅವಗ ಇವ ಬಹುಮಾನ ಮಾಡತಾನು.

ಮಾತಲಿ : (ನಕ್ಕು) ಹೇ ಆಯುಷ್ಮನ್, ಮಹೇಂದ್ರನು ನನ್ನನ್ನು ನಿನ್ನ ಬಳಿಗೆ ಕಳುಹಿದ ಬಗೆ ಹೇಳುತ್ತೇನೆ ಕೇಳು.

ಅರಸು : ಕೇಳುತ್ತೇನೆ.

ಮಾತಲಿ : ಕಾಲನೇಮಿಯು ಪುತ್ರನಾದ ದುರ್ಜಯನೆಂಬ ದಾನವನನ್ನು ಬಲ್ಲೆಯಷ್ಟೆ?

ಅರಸು : ಅಹುದು ನಾನು ಬಲ್ಲೆ; ಒಂದಕ್ಕೆ ನಾರದರ ಮುಖದಿಂದ ಕೇಳಿದ್ದೇನೆ.

ಮಾತಲಿ : ಆತನು ಸ್ವರ್ಗಲೋಕವನ್ನು ಬಹು ಪೀಡಿಸಲಾರಂಭಿಸಿದ್ದಾನೆ. ತನ್ನ ಹೆಸರಿನಂತೆ ಇದುವರೆಗೆ ಆತನು ಎಲ್ಲರಿಗೂ ದುರ್ಜಯನಾಗಿದ್ದಾನೆ. ಆತನನ್ನು ಪರಾಭವಿಸುವದು ನಿನ್ನ ಭುಜಬಲದಿಂದಲೇ ಆಗತಕ್ಕದ್ದಿದೆ.

ಭಾಮಿನಿ || ಕಡು ಭಯಂಕರನಾ ಅಸುರನಂ
ಕೆಡಪುವದು ನಿರ್ಜರಪನಿಂ ಕೇಳ್
ಕಡೆಯಗಾಣದು ನಿಶಿಯ ತಮವೀ ರವಿಯಕರದಿಂದ ||
ಪೊಡೆಯ ಪಡದೀಹದಕೆ ತಾರೆಗ
ಳೊಡೆಯನೇ ಬೇಕೆಂದು ನಿನ್ನಂ
ಕಡುತ್ವರದಿ ಕರೆಕೊಂಡು ಬಾರೆಂದೆನ್ನ ಕಳುಹಿದನೈ ||

ಆದಕಾರಣ ಶಸ್ತ್ರವನ್ನು ಧಾರಣ ಮಾಡಿರುವಿಯಷ್ಟೆ! ಹೀಗೆಯೆ ಈ ಇಂದ್ರನ ರಥವಲ್ಲಿ ವಿಜಯ ಪ್ರಸ್ಥಾನವನ್ನು ಮಾಡಬಹುದು ಜೀಯಾ.

ಅರಸು : ದೇವೇಂದ್ರನು ಮಹಾಕಾರ್ಯಕ್ಕೆ ಆಮಂತ್ರಣ ಮಾಡಿದ್ದು ನನ್ನ ಮೇಲೆ ಆತನ ಅನುಗ್ರಹವೇ ಸರಿ. ನಾನು ಬಾಹುವದಕ್ಕೆ ಸಿದ್ಧನಾಗಿದ್ದೇನೆ. ಹೇ ಮಾತಲಿ, ನಮ್ಮ ಮಾಢವ್ಯನನ್ನು ಏನು ಕಾರಣ ಹೀಗೆ ಬಾಧೆಪಡಿಸಿದಿ ಎಂಬುದನ್ನು ಹೇಳಬೇಕು.

ಮಾತಲಿ : ಅದರ ಕಾರಣವನ್ನು ಹೇಳುತ್ತೇನೆ ಕೇಳು. ಯಾವದೋ ಒಂದು ಕಾರಣದಿಂದ ನಿನ್ನ ಮನಸ್ಸಿಗೆ ಸಂತಾಪವಾಗಿ ಅತಿ ಖಿನ್ನನಾಗಿ ಕುಳಿತುಕೊಂಡಿದ್ದಿ. ನಿನ್ನ ಮನಸ್ಸಿನ ದುಃಖಿಸ್ಥಿತಿಯನ್ನು ಹೋಗಿಸಿ ಉತ್ತೇಜನವನ್ನು ಹುಟ್ಟಿಸುವದಕ್ಕಾಗಿ ಈ ಯುಕ್ತಿಯನ್ನು ಪ್ರಯೋಗಿಸಿ ನಿನ್ನ ಮನದಲ್ಲಿ ಕೋಪವನ್ನುಂಟು ಮಾಡಿಸಿದ್ದೇನೆ ಜೀಯಾ.

ಕಂದ || ಕಿಚ್ಚುರೆಯನು ಬೀಸಲು ತಾಂ
ಹೆಚ್ಚುವದಹಿಯ ತಡಿಯೆ ತ್ವೇಷದಿ ಕಚ್ಚುವದು.
ಕೆಚ್ಚೆದೆಯ ಭಟರ ಮನದೊಳ್
ರೊಚ್ಚೇರ್ವಿಸೆ ನಿಜ ಸಾಮರ್ಥ್ಯವ ತೋರ್ದಪರೈ ||

ಅರಸು : (ಸ್ವಲ್ಪ ಧ್ಯಾನಿಸಿಕೊಂಡು) ಹೇ ಮಿತ್ರಾ, ಮಾಢವ್ಯಾ, ದೇವೇಂದ್ರನಾಜ್ಞೆಯನ್ನು ಮೀರಲಾಗದು. ಈ ವೃತ್ತಾಂತವನ್ನು ಪ್ರಧಾನನಿಗೆ ಶ್ರುತಪಡಿಸಿ ಹೇಳತಕ್ಕದ್ದೇನೆಂದರೆ -

ಕಂದ || ಎನ್ನಯ ಧನುವಿದು ಸಗ್ಗದೊ
ಳನ್ಯವಿಚಾರದೊಳಿಹ ಪರಿಯಂತೆಚ್ಚರದಿಂ

ತನ್ನೋರ್ವನ ಮತಿಯಿಂ ಪ್ರಜರ
ರನ್ನೀಕ್ಷಿಸಿ ಪರಿಪಾಲನೆ ಗೆಯ್ಯುದಮಾತ್ಯಂ ||

ವಿದೂಷಕ : ಬಾಳ ಉತ್ತಮ. ಹೇಳತೇನ ನನ್ನ ಒಡ್ಯಾ(ಹೊರಟು ಹೋಗುತ್ತಾನೆ.)

ಮಾತಲಿ : ಹೇ ರಾಜನ್, ಇನ್ನು ರಥಾರೂಢನಾಗಬಹುದು.

ಅರಸು : ಆಗುತ್ತೇನೆ; (ರಥದಲ್ಲಿ ಕುಳಿತು ಸಂಜ್ಞೆ ಮಾಡುತ್ತಾನೆ.)
(ಇಬ್ಬರೂ ಹೊರಟು ಹೋಗುತ್ತಾರೆ.)

ಆರನೆಯ ಅಂಕವು ಮುಗಿದುದು.

ಏಳನೆಯ ಅಂಕವು

(ದುಷ್ಯಂತರಾಜನೂ ಮಾತಲಿಯೂ ರಥಾರೂಢರಾಗಿ ಬರುತ್ತಾರೆ.)

ಅರಸು : ಹೇ ಮಾತಲೀ, ದೇವೇಂದ್ರನ ಆಜ್ಞೆಯಂತೆ ಆತನ ಕಾರ್ಯವನ್ನು ಯದ್ಯಪಿ ನಾವು ಸಿದ್ಧಿಗೆ ಒಯ್ದಾಗ್ಯೂ ಆತನು ಮಾಡಿದಂಥ ಸನ್ಮಾನದ ಮುಂದೆ ನಮ್ಮ ಸಹಾಯವು ಏನೂ ಅಲ್ಲವೆಂದು ಕಾಣುತ್ತದೆ.

ಮಾತಲಿ : (ನಕ್ಕು) ಹೇ ಆಯುಷ್ಮನ್, ಆ ದೇವೇಂದ್ರನಿಗೂ ಇದೇ ಪ್ರಕಾರವೇ ಕಾಣಿಸುತ್ತದೆ. ನೀವಿಬ್ಬರೂ ನಿಮ್ಮ ನಿಮ್ಮ ಕೃತಿಗಳ ವಿಷಯಕ್ಕೆ ಅಸಂತುಷ್ಟರಾಗಿದ್ದೀರಿ.

ಕಂದ ||
ನೀ ಮಾಡಿದ ಕೃತಿ ನಿನಗತಿ
ಸಾಮಾನ್ಯವೆ ಕಾಣುವದು ನಿಗರ್ವಿಯೆ ಕೇಳ್ ತಾಂ
ಸಾಮಾನ್ಯ ಮಾನಮಂ ಗೈ
ದೀಮಾತಿಗೆ ವಜ್ರಿಯತ್ತ ನೆರೆ ಹಳಹಳಿಪಂ ||

ಅರಸು : ಮಾತಲಿ, ಹಾಗೆನ್ನಬೇಡ. ಅಪ್ಪಣೆ ಕೊಟ್ಟು ನನ್ನನ್ನು ತಿರುಗಿ ಕಳುಹಿಸುವ ವ್ಯಾಳ್ಯದಲ್ಲಿ ಆತನು ಮಾಡಿದಂಥ ಸತ್ಕಾರವು ನನ್ನ ಮನೋರಥಕ್ಕೂ ಹೆಚ್ಚಾಗಿ ಹೋಯಿತು ಬಲ್ಲೆಯಾ?

ವಾರ್ಧಿಕ ||
ದೇವೇಂದ್ರನತಿ ಹರುಷದಿಂದೆದಿರು ಬಂದೆನ್ನ
ದೇವಗಣಸಭೆಯಲ್ಲಿ ನೋಡಲರ್ಧಾಸನದಿ
ಕೈಪಿಡಿದು ಕೇಳ್ ಕುಳ್ಳಿಸಿದ ಬಳಿಕ ಘಚ್ಚಂದನಾಂಕಿತವ ಮಂಗಳದಾ ||
ಪೂವಿನತಿ ಚೆಲ್ವಹಾರಂ ತೆಗೆದು ಪಿಡೆಯೆ ಮೇ
ಣಾವೇಳೆಯೊಳ್ ಜಯಂತಂ ನೋಡಲಾತನಾ
ಭಾವಮಂ ತಿಳಿದು ನಸುನಗುತಲೆನ್ನೊಡು ಕೊರಳಿಗ್ಹಾಕಿದ ಪ್ರೀತಿಯಿಂದ ||

ಮಾತಲಿ : ಆಯುಷ್ಮನ್, ದೇವೇಂದ್ರನಿಂದ ತಮಗೆ ದೊರಕಲಿಕ್ಕೆ ಅಯೋಗ್ಯವಾದ ಪದಾರ್ಥವು ಯಾವದುಂಟು?

ಸುರಪತಿಯ ತ್ರಿದಿವಲೋಕಂ
ಪೊರೆದವರೀರ್ವರೆ ನೀವಸುರರಕಂಟಕದಿಂ ||
ಶರತೀಕ್ಷ್ಣತೆಯಿಂ ನೀನಾ
ನರಕೇಸರಿ ಪೆರನುಗರಿನ ಮೊನೆಯಿಂ ಕ್ಷಿತಿಪಾ ||

ಅರಸು : ಆದರೂ ಇಲ್ಲಿ ಶತಕ್ರತುವಿನ ಮಹಿಮಾವರ್ಣನೆಯೇ ಯೋಗ್ಯವಾಗಿದೆ.

ಕಂದ || ಭೃತ್ಯರು ಗೈಯೆ ಮಹತ್ವದ
ಕೃತ್ಯಮದಕೊಡೆಯನಸುಕೃತ ನಿಜಕಾರಣವಾ -||
ದಿತ್ಯನ ಸಾರಥ್ಯವನಗ -
ಲ್ದತ್ಯಧಿಕ ತಮವದನರುಣತಾಂ ಪೊಡೆದಪನೆ ||

ಮಾತಲಿ : ಈ ಮಾತು ನಿನಗೆ ಒಪ್ಪುತ್ತದೆ. ದೊಡ್ಡವರು ತಾವು ಕಾರ್ಯವನ್ನು ಮಾಡಿದ್ದು ಬಾಯಿಂದಾಡಿಕೊಂಬುವದಿಲ್ಲ. ಅವರ ಲಕ್ಷಣವೇ ಇದು. (ಸ್ವಲ್ಪ ರಥವನ್ನು ಮುಂದಕ್ಕೆ ನಡಿಸಿ) ಹೇ ಆಯುಷ್ಮನ್, ನಿನ್ನ ಯಶಸ್ಸಿನ ವೈಭವವು ಸ್ವರ್ಗ ಶಿಖರಕ್ಕೆ ಹೋಗಿ ಮುಟ್ಟಿದೆ ನೋಡಿದೆಯಾ?

||ಚಂಪಕಮಾಲಾ ವೃತ್ತ||

ಸುರಗಣವಿಲ್ಲಿ ನಿನ್ನ ಚರಿತಂ ನೆರೆಚಿಂತನೆಗೈದು ಪದ್ಯಗಳ್ |
ಪರಿಪರಿ ರಾಗರಾಗಿಣಿಯ ಛಂದದಿ ಪಾಡುವೆವೆಂದು ಮೋದದಿಂ ||
ಸರಸಗಭೀರ ವಾಕ್ಯಗಳಲಿಂ ರಚಿಸಲ್ ಸುರಸುಂದರಾಂಗಿಯರ್
ಬರೆವರು ಕಲ್ಪವೃಕ್ಷದೆಲೆಯೊಳ್ ಮೊಲೆ ಚಿತ್ರಿಸೆ ತಂದ ಬಟ್ಟದಿಂ ||

ಅರಸು : ಹೇ ಮಾತಲೀ, ನಿನ್ನಿನ ದಿವಸವೇ ಸ್ವರ್ಗಲೋಕವನ್ನು ಏರಿದಾಗ್ಯೂ ದೈತ್ಯರನ್ನು ಹೊಡೆಯುವ ಉತ್ಸುಕತೆಯಲ್ಲಿ ಈ ಪ್ರದೇಶವು ಚೆನ್ನಾಗಿ ಲಕ್ಷದಲ್ಲಿ ಬರಲಿಲ್ಲ. ಕಾರಣ ವಾಯುವಿನಾವ ಮಾರ್ಗದಲ್ಲಿ ನಾವಿಹೆವೆಂಬುವದನ್ನು ಹೇಳಬಹುದು.

ಮಾತಲಿ : ಹೇಳುತ್ತೇನೆ ಕೇಳು.

ಪರಿಯುಡಿಯಿಂ ಪವಿತ್ರತೆಯ ತಾಳ್ದಿದು ಮೂಜಗ ಮೊಕ್ಕು ಪಾಯ್ವಹೆ-
ದ್ದೊರೆ ಗಗನ ಪ್ರತಿಷ್ಠೆಯಳನಂ ಪರಿಸುತ್ತಲೆ ತಾರಕಾಗಣಂ ||
ತಿರುಗಿಸುತರ್ಕಚಂದ್ರರುರೆ ಕಾಂತಿಯ ತಾಳ್ದೆಸೆಯುತ್ತಲಾವಗಂ |
ಪರಿವಹವೆಂಬ ವಾಯುವಿಹದಿಲ್ಲಿಗೆ ಬಂದಿಹೆವೈ ಧರಾಧಿಪಾ||

ಅರಸು : ಸೈ ಸೈ ! ಹಾಗೆಂತಲೆ ನನ್ನ ಆತ್ಮವು ಸಬಾಹ್ಯಾಂತರದಲ್ಲಿ ಸಂತುಷ್ಟವಾಗಿದೆ. (ರಥಚಕ್ರಗಳನ್ನು ನೋಡಿ) ಈಗ ನಾವು ಮೇಘಮಂಡಲದಲ್ಲಿಳಿದಿದ್ದೇವೆ.

ಮಾತಲಿ : ಯಾತರ ಮೇಲಿಂದ ಹೇಳಿದೆ?

ಅರಸು : ಇಕ್ಕೋ ನೋಡು,

|| ಮಾಲಿನೀ ವೃತ್ತ||

ಪೊಳೆಯೆ ಚಪಲ ತೇಜಂ ಕೂಡೆವಾಜಿಂಗಳುಂ ಮಿಂ-
ಚಲು ಪೊದರೊಳಗಿಂದೇಳ್ತಂದಿರಲ್ ಚಾತಕಂಗಳ್||
ಬಳಗವರಿಸಿ ಬಾಯೊಡ್ಡಲ್ಕೆ ಮೇಘೋದಕಕ್ಕಾಂ |
ತಿಳಿವೆ ಜಲದ ಮಾರ್ಗಂ ಗಾಲಿಗಳ್ ತೊಯ್ದಿರಿಂ ಕೇಳ್ ||

ಮಾತಲಿ : ಸೈ ಸೈ. ಇನ್ನೊಂದು ಕ್ಷಣಹೊತ್ತಿನಲ್ಲಿ ನಿನ್ನ ಅಧಿಕಾರ ಭೂಮಿಯಲ್ಲಿ ಬರುವಿ.

ಅರಸು : (ಕೆಳಗೆ ನೋಡಿ) ಹೇ ಮಾತಲಿ, ನಾವು ತೀವ್ರದಿಂದ ಕೆಳಗಿಳಿಯುವದರಿಂದ ಮನುಷ್ಯಲೋಕವು ನನ್ನ ದೃಷ್ಟಿಗೆ ಬಹು ಆಶ್ಚರ್ಯಕರವಾಗಿ ಕಾಣಿಸುತ್ತದೆ.

||ಚಂಪಕಮಾಲಾ ವೃತ್ತ||

ಬದಿಯಲಿ ಶೈಲದಗ್ರಗಳು ಬರ್ಪವು ಸುತ್ತಣಭೂಮಿ ಹಿಂದೆ ಪೋ
ಪುದು ತರುಶಾಖೆಗಳ್ ತಳಿರಿನಿಂದಡಗಿರ್ದವು ಬೇರೆ ಕಾಣ್ಬವೀ
ನದಿಗಳ ತುಂಡುತುಂಡುಗಳು ಕೂಡುತೆ ವಿಸ್ತೃತವಾಗೆ ಪಾತ್ರಗಳ್
ಎದುರಿಗೆ ಬರ್ಪಳೈ ಭುವನೆಯೆನ್ನನು ಶೀಘ್ರದೊಳಪ್ಪಿಕೊಂಬಪೋಲ್||

ಮಾತಲಿ : ಸೈ, ಸೈ. (ಬಹುಮಾನಪೂರ್ವಕವಾಗಿ ನೋಡಿ) ಅಹಹ, ಪೃಥ್ವಿಯು ಏನು ಉದಾರ ರಮಣೀಯವಾಗಿ ತೋರುತ್ತದೆ!

ಅರಸು : ಹೇ ಮಾತಲೀ, ಅಸ್ತಮಾನಕಾಲದ ಮೇಘಸಮುದಾಯದಂತೆ ಸುವರ್ಣಮಯವಾಗಿ ಕಾಣಿಸುವ ಪರ್ವತವು ಯಾವುದಯ್ಯಾ ಇದು? ಇದರ ಒಂದು ತುದಿ ಪೂರ್ವಸಮುದ್ರದಲ್ಲಿ, ಮತ್ತೊಂದು ಪಶ್ಚಿಮ ಸಮುದ್ರದಲ್ಲಿ ಮುಳಿಗಿವೆ.

ಮಾತಲಿ : ಆಯುಷ್ಮನ್, ಇದು ಹೇಮಕೂಟವೆಂಬ ಪರ್ವತವು ಕಂಡೆಯಾ; ಇದರಲ್ಲಿ ಕಿಂಪುರುಷರೆಂಬ ಕುಬೇರನ ಸೇವಕರು ವಾಸ ಮಾಡುತ್ತಾರೆ. ಇದು ಋಷಿಗಳ ತಪಸ್ಸಿದ್ಧಿಯ ಮಹಾಕ್ಷೇತ್ರವಹುದು.

||ಪೃಥ್ವೀವೃತ್ತ||

ನರಾಧಿಪತಿ ನೋಡಿದೇಸ್ಥಳದಿ ಮುಂಚಿನಾಕಾಲದಿಂ
ಮರೀಚಿಯ ಮಗಂ ಸ್ವಯಂಭುವಿನ ಮೊಮ್ಮಗಂ ತಂದೆಮೇಣ್
ಸುರಾಸುರರಿಗಾಪ್ರಜಾಪತಿಯು ಪತ್ನಿಯಂ ಕೂಡಿಕೊಂ
ಡಿರುತ್ತಿಹ ನಿರಂತರಂ ಚರಿಸುವಂ ತಪಶ್ಚರ್ಯಮಂ ||

ಅರಸು : (ಆದರದಿಂದ) ಓಹೋ, ಹಾಗಾದರೆ ಇಂಥ ಪುಣ್ಯಪ್ರಾಪ್ತಿಯ ವ್ಯಾಳ್ಯವನ್ನು ಅಂತರಿಸಕೂಡದು. ಋಷಿಗಳಿಗೆ ಪ್ರದಕ್ಷಿಣೆ ಹಾಕಿ ಮುಂದೆ ಹೋಗುವ.

ಮಾತಲಿ : ಬಹು ಉತ್ತಮ. ರಥವನ್ನು ಭೂಮಿಗೆ ಇಳಿಸುತ್ತಾನೆ.)

ಅರಸು : (ಆಶ್ಚರ್ಯದಿಂದ)-

|| ಮಾಲಿನೀ ವೃತ್ತ||

ಇಳೆಗಿಳಿದುದು ತೇರಂ ನೋಡಲಿಲ್ಲಾವಗೊ ಭೂ.-
ತಳದೊಳು ನಡಿಯಲೇಳ್ಕೇಳೇವೇತಕ್ಕೆ ಶಬ್ದಂ
ಗಳನರಿದು ನೆಲಂ ಮುಟ್ಟಿಪ್ಪುದಿಲ್ಲೆಂತುಮಶ್ವಂ
ಗಳ ಖುರಪುಟದಿಂದ ಪೇಳೇಳದೇತಕ್ಕೆ ಧೂಳಂ ||

ಮಾತಲಿ : ಹೇ ಆಯುಷ್ಮಾನ್, ನಿನ್ನಲ್ಲಿಯೂ ಶತಕೃತುವಿನಲ್ಲಿಯೂ ಇಷ್ಟೇ ಭೇದವುಂಟು.

ಅರಸು : ಹೇ ಮಾತಲೀ, ಮಾರೀಚ ಪ್ರಜಾಪತಿಗಳಾಶ್ರಮವೆಲ್ಲಿ?

ಮಾತಲಿ : (ಕೈಯಿಂದ ತೋರಿಸಿ) ಈತನೇ ನೋಡು ಎದುರಿನಲ್ಲಿ.

ಶಾ. ವಿ. || ಪುತ್ತುಂಗಳ್ನೆರೆ ಮುಚ್ಚಲರ್ಧತನುವಂ ಸರ್ಪತ್ವಚಂ ಶಿಲ್ಕಿ ಮೈ |
ಸುತ್ತಿರ್ದಿಂತು ಲತಾಪ್ರತಾನವಲಯಂ ಸಂಪೀಡಿ ಸಲ್ವೆನ್ನಿನೊಳ್ ||
ಬತ್ತಿಂಗಳ್ ಪೊಸೆದಿರ್ಪ ದೀರ್ಘಜಟೆಯೊಳ್ ಗೂಡಿಕ್ಕೆ ಮೇಣ್ ಪಕ್ಕಿಗಳ್
ಪೊತ್ತಂ ತೋರ್ಪನ ನೋಡುತಿರ್ಪ ನಿರುತಂ ನಿಂತಿರ್ಪನ್ನೈ ಸ್ತಂಭದೋಲ್ ||

ಅರಸು : ಹೇ ಕಷ್ಟತಾಪಸೆ, ನಿನಗೆ ನಮಸ್ಕಾರವಿರಲಿ.

ಮಾತಲಿ : (ಅಶ್ವಗಳ ರಶ್ಮಿಗಳನ್ನು ಜಗ್ಗಿ ಹಿಡಿದು) ಆಯುಷ್ಮಾನ್, ಈಗ್ಗೆ ನಾವು ಮಾರೀಚಮುನಿಗಳಾಶ್ರಮಕ್ಕೆ ಬಂದು ತಲುಪಿದ್ದೇವೆ. ಇದು ನೋಡಿದೆಯಾ, ಅದಿತಿಯಿಂದ ಪರಿವರ್ಧಿತವಾದಂಥ ಮಂದಾರವೃಕ್ಷಗಳನ್ನು.

ಅರಸು : ಅಹಹ! ಈ ಸ್ಥಾನವು ಸ್ವರ್ಗಕ್ಕಿಂತಲೂ ಹೆಚ್ಚು ಸುಖಕರವಾಗಿದೆ. ಅಹಹ! ಅಮೃತ ಡೋಹದಲ್ಲಿ ಮುಳಗಿದಂತೆ ಅನುಭವವಾಗುತ್ತದೆ.

ಮಾತಲಿ : (ರಥವನ್ನು ನಿಲ್ಲಿಸಿ) ರಾಜನ್ ಕೆಳಗಿಳಿಯಬಹುದು.

ಅರಸು : (ಇಳಿದು) ಹೇ ಮಾತಲೀ, ನೀನೂ ಬರುವೆಯಷ್ಟೆ?

ಮಾತಲಿ : ನಾನೂ ಬರುತ್ತೇನೆ. (ಕೆಳಗಿಳಿದು) ಆಯುಷ್ಮನ್ ಈ ತಪೋವನ ಭೂಮಿಯನ್ನು ನೋಡಿದೆಯಾ?

ಅರಸು : ನೋಡಿ ಬಹು ಆನಂದಾಶ್ಚರ್ಯವಾಗುತ್ತದೆ,

||ಚಂಪಕಮಾಲಾವೃತ್ತ||

ಎಲರುಣುತಿರ್ಪ ಜೀವಿಪನು ಕಲ್ಪತರುಂಗಳರಣ್ಯದೊಳ್ ಸರಿರ
ಜ್ಜಲದಿ ಸುವರ್ಣ ಪದ್ಮಮಿರೆ ನೋಡದೆ ಮಾಳ್ಪನು ಸ್ನಾನಸಂಧ್ಯೆಯಂ
ತಳೆದಿಹ ಧ್ಯಾನರತ್ನ ಶಿಲೆಯೊಳ್‌ಸುರನಾರಿಯರೊಳು ಸಂಯಮಂ
ಉಳಿದ ತಪಸ್ವಿಗಳ್ ಬಯಸುವಸ್ಥಳದೋಳಿರೆ ಮಾಣನೈ ತಪಂ

ಮಾತಲಿ : ದೊಡ್ಡವರ ಮನೋರಥವು ಸಹ ದೊಡ್ಡದಾಗಿರುತ್ತದೆ. (ಮೇಲೆ ನೋಡಿ) ಎಲೋ ವೃದ್ಧಶಾಕಲ್ಯನೆ, ಭಗವಾನ್ ಮಾರೀಚ ಋಷಿಗಳು ಈ ವ್ಯಾಳ್ಯದಲ್ಲಿ ಏನು ಮಾಡುತ್ತಿದ್ದಾರೆ? (ಕಿವಿಗೊಟ್ಟು) ತಮ್ಮ ಪತ್ನಿಯಾದ ದಾಕ್ಷಾಯಣಿಯು ಪತಿವೃತಾ ಪುಣ್ಯ ಮಹಾತ್ಮ್ಯೆಯನ್ನು ಹೇಳಬಹುದೆಂದು ಕೇಳಿಕೊಂಡಿದ್ದರಿಂದ ಅವಳಿಗೂ ಇತರ ಋಷಿ ಪತ್ನಿಗಳಿಗೂ ಆ ಮಹಾತ್ಮ್ಯೆಯನ್ನು ಹೇಳುತ್ತಿದ್ದಾರೆ.

ಅರಸು : ಹಾಗಾದರೆ ಸ್ವಲ್ಪ ನಿಂತುಕೊಂಡು ಹೋಗುವ.

ಮಾತಲಿ : ಆ ಅಶೋಕವೃಕ್ಷದ ನೆರಳಿನಲ್ಲಿ ಒಂದು ಕ್ಷಣ ಕುಳಿತುಕೊಳ್ಳಬೇಕು. ಅಷ್ಟರಲ್ಲಿ ನೀನು ಬಂದ ವರ್ತಮಾನವನ್ನು ಇಂದ್ರತಾತನಿಗೆ ತಿಳುಹಿಸಿ ಬರುತ್ತೇನೆ.

ಅರಸು : ಒಳ್ಳೇದು. (ಅಶೋಕವೃಕ್ಷದ ನೆರಳಿನಲ್ಲಿ ಕುಳಿತುಕೊಳ್ಳುತ್ತಾನೆ.)

ಮಾತಲಿ : ಹೋಗಿ ಬರುತ್ತೇನೆ ಹಾಗಾದರೆ. (ಹೊರಟು ಹೋಗುತ್ತಾನೆ.)

ಅರಸು : (ಸುಚಿಹ್ನವಾದದ್ದನ್ನು ಕಂಡು) ಶಕುನವೇನು ಕಾರಣವಾಗುತ್ತಿದ್ದೀತಿಲ್ಲಿ?

|| ವೃತ್ತ ಶುದ್ಧಕಾಮದೆಯಂತೆ||

ಸ್ಫುರಣ ವ್ಯರ್ಥಕೇಳ್ ಭುಜವೆ ನಿನ್ನಯ|
ಸಿರಿಯು ಬಂದರಂದೊದಿದೆ ಕಾಲಿಸಿಂ ||
ಬರಿದೆ ಮೇಣ್ಮನೋರಥಗಳೇಕೆ ಪೇರ್ |
ಮರುಗುಮಾತ್ರ ಮಿಕ್ಕಿಹುದು ಜನ್ಮದೊಳ್||

(ಹಿಂದೆ ಶಬ್ದವಾಗುತ್ತದೆ.) ಎಲೋ ಹಾಗೆ ಕಿಡಿಗೇಡಿತನ ಮಾಡಬಾರದಪ್ಪಯ್ಯಾ! ಏನ್ನು ಹಿಡಿಯಬೇಕು ನಿನ್ನ! ಕಡೆಗೆ ತನ್ನ ಜಾತಿ ಸ್ವಭಾವಕ್ಕೇ ಹೋಗುತ್ತಾನೆ.

ಅರಸು : (ಕಿವಿಗೊಟ್ಟು) ಇಲ್ಲಿ ಯಾರು ಕಿಡಿಗೇಡಿತನ ಮಾಡುವವರು? ಅಂಥ ಸ್ಥಳವಿದಲ್ಲ. ಹೀಗಿದ್ದು ಯಾರು ಕೋಪಿಸುತ್ತಿರಬಹುದು? ಆಹಾಹಾ! ತಪಸ್ವಿನಿಗಳಿಂದ ಹಿಡಿಯಲ್ಪಟ್ಟ ಚಪಲನಾದ ಬಾಲಕನು ಯಾವನಯ್ಯಾ ಇವನು?

ಪ್ರಹರ್ಷಿಣಿ || ಪೇಳಲ್ವೇಡೆನೆ ಮುನಿಪತ್ನಿಯರ್ಕಳಂ ತಾಂ
ಕೇಳಂ ಸಿಂಗನ ಮರಿ ತಾಯಿ ಪಾಲನುಣ್ಣಲ್
ಕೇಳಿಂಗೆಂದದರನೆ ಜೋಲ್ವಗೂದಲಂಗಳ್
ಕೀಳಲ್ ಜಗ್ಗುವನಿವ ಪುಟ್ಟದಿಟ್ಟಬಾಲಂ ||

(ಇಷ್ಟರಲ್ಲಿ ಇಬ್ಬರು ತಪಸ್ವಿನಿಯರಿಂದ ಸಹಿತವಾಗಿ ಬಾಲಕನು ಬರುತ್ತಾನೆ.)

ಬಾಲಕ : ಬಾಯಿ ತೆಲಿಯಲೆ ಸಿಂಯನ ಮಗನೆ; ಹಲ್ಲೆತ್ತು ಬಂದವೆ. ನಿನಗೆ ನೋದುವಾ.

ಮೊದಲನೇ
ತಪಸ್ವಿನಿ : ಎಲೋ ಕ್ರೂರಾ, ವನದಲ್ಲಿಯು ನಮ್ಮ ಮಕ್ಕಳ ಸರಿಯಾದ ಪಶುಗಳ ಶಿಶುವುಗಳನ್ನು ಇಲ್ಲದಂತೆ ಮಾಡಬೇಕೆಂದು ಮನಸಿನಲ್ಲಿ ಮಾಡಿಕೊಂಡಿದ್ದೀಯಾ? ಇರುತ್ತಿರುತ್ತ ನಿನ್ನ ಹಾವಳಿ ಹೆಚ್ಚಾಯಿತು. ಋಷಿಗಳು ನಿನಗೆ ಸರ್ವದಮನನೆಂಬ ಹೆಸರಿಟ್ಟದ್ದು ಯೋಗ್ಯವಾಯಿತು.

ಅರಸು : ಈ ಬಾಲಕನ ಮೇಲೆ ನನ್ನ ಮನಸು ಹೊಟ್ಟೆಯಿಂದ ಹುಟ್ಟಿದ ಮಗುವಿನಂತೆ ಏನು ಕಾರಣ ಮೋಹಗೊಳ್ಳುತ್ತಿದ್ದೀತು? (ಧ್ಯಾನಿಸಿ) ನನಗೆ ಮಕ್ಕಳಿಲ್ಲೆಂದು ಹೆರವರ ಮಕ್ಕಳನ್ನು ನೋಡಿ ಲೋಭ ಉಂಟಾಗುತ್ತಿರಬಹುದು.

ಎರಡನೇ
ತಪಸ್ವಿನಿ : ಬಾಲಕಾ, ಆ ಸಿಂಹಶಿಶುವನ್ನು ಬಿಟ್ಟುಬಿಡಪ್ಪಯ್ಯ, ನೋಡು ಆ ಸಿಂಹಿಣಿಯ! ನಿನ್ನನ್ನು ಚಿವುರಿಕೊಂಡೀತು.

ಬಾಲಕ : (ನಕ್ಕು) ಹೌದು ಹೌದು ನನಗೆ ಬಾಲ ಬಯ ಬಲುತ್ತದೆ. (ದವಡೆ ಕಚ್ಚಿ ಸಿಂಹಿಣಿಯನ್ನು ನೋಡುತ್ತಾನೆ.)

ಅರಸು : ಇವನ್ಯಾವನೋ ವಿಲಕ್ಷಣ ಬಾಲಕನು ಕಾಣುತ್ತಾನೆ.

ಕಂದ || ಸಿಂಗನ ಶಿಶುವಿನ ಕೂಡಾ |
ಡಂಗವಣೆಯ ಬಾಲನೊಳುರೆ ತೇಜದ ಬೀಜಂ ||
ಕಂಗೊಳಿಸುತಲಿರ್ಪುದು ಸ್ಪು|
ಲಿಂಗವದಿಂಧನವಾಪೇಕ್ಷಿಸವೊಲ್ತೋರ್ಪಂ|

ಮೊದಲನೇ
ತಪಸ್ವಿನಿ : ಎಲೋ ಬಾಲಕನೆ, ಆ ಸಿಂಹನ ಮರಿಯನ್ನು ಬಿಡು ಕಂಡೆಯಾ, ನಿನಗೆ ಎರಡನೇ ಆಟಿಕೆ ತಂದು ಕೊಡುತ್ತೇನೆ.

ಬಾಲಕ : ಕುಲು ಹಂಗಲ (ಅಂಗೈಯನ್ನು ಪಸರಿಸಿ ಬೇಡುತ್ತಾನೆ.)

ಅರಸು : (ಬಾಲಕನ ಹಸ್ತವನ್ನು ನೋಡಿ) ಆಹಾಹಾ! ಈ ಅರ್ಭಕನ ಕೈಯಲ್ಲಿ ಚಕ್ರವರ್ತಿ ಲಕ್ಷಣಗಳು ಸಹ ತೋರುತ್ತವೆ. ಇವನು ಎಲ್ಲ ಪೃಥ್ವಿಯನ್ನಾಳುವನು.

||ಪುಷ್ಪಿತಾಗ್ರಾವೃತ್ತ||

ಕಿರಿನಗೆಯಲಿ ಬೇಡಲಿಂತು ಬೇಕಾ
ಗಿರುವ ಸುವಸ್ತುವಿನಂ ಪ್ರಭಾತದೊಳ್ಮಂ
ಬಿರಿವ ಕಮಲದಂತೆ ಪುಟ್ಟ ಕೈ ಕೆಂ
ಬೆರಳ್ಗಳನಂತೆರೆದೊಪ್ಪುತಿರ್ಪ ಬಾಲಂ ||

ಎರಡನೇ ತಪಸ್ವಿನಿ : ಎಲೆ ಸುವ್ರತಾ, ಈ ಬಾಲಕನು ಬರೆ ಬಾಯಿ ಮಾತಿನಿಂದೆ ಕೇಳುವವನಲ್ಲ. ನಮ್ಮ ಪರ್ಣಕುಟಿಯಲ್ಲಿ ಹೋಗಿ ಮಾರ್ಕಂಡೇಯ ಋಷಿ ಕುಮಾರನ ಬಣ್ಣದ ನವಿಲನ್ನು ತಂದು ಕೊಡು ಈತನಿಗೆ.

ಮೊದಲನೇ ತಪಸ್ವಿನಿ : ಒಳ್ಳೇದು (ಹೋಗುತ್ತಾಳೆ.)

ಬಾಲಕ : ತಂದು ಕುಲುವನಕಾ ನಾ ಸಿಂಯನ ಮಲೀ ಸಂಗಾತೇ ಆಲೇನು. (ತಾಪಸಿಯನ್ನು ನೋಡಿ ನಗುತ್ತಾನೆ.)

ಅರಸು : ಈ ದುಷ್ಟ ಕೇಳಿಯ ಹುಡುಗನನ್ನು ನೋಡಿ ನನ್ನ ಮನಸು ಎತ್ತಿಕೊಳ್ಳ ಬೇಕೆಂದೆನಿಸುತ್ತದೆ.

ಭಾಮಿನಿ || ತೋರಲೆಳೆಯಳೆ ದಂತಪಂಕ್ತಿಯು
ಕಾರಣೆಲ್ಲದೆ ನಗುವ ನುಡಿಗಳು
ಬಾರದಲೆ ತೊದಲಾಡಿ ಸವಿಯುಣಿಸುವ ಕಿವಿಗೆ ಮುದ್ದು ||
ಮೋರೆ ಮೇಲ್ಮಾಡುತಲಿ ಕರಕೊಂ
ಡೇರು ಮಾಳಿಗೆಯೆಂದು ಕಣ್ಣೀರ್
ತಾರದಳುವರ್ಭಕನ ಮೈಮಣ್ತಾಳ್ವರೇಂಕೃತರೋ||

ತಾಪಸಿ : ಮಾತು ಕೇಳುವದಿಲ್ಲವೆ ಹೇಳಿದ್ದು? (ಹಿಂದಿರುಗಿ) ಅಲ್ಲಿ ಯಾರು ಕುಳಿತುಕೊಂಡವರು? ಯಾವನೋ ಋಷಿಕುಮಾರನು ಕಾಣುತ್ತಾನೆ. (ಅರಸನಿಗೆ) ಎಲೋ, ಭದ್ರಮುಖನೆ, ಸ್ವಲ್ಪ ದಯಮಾಡಿ ಇತ್ತ ಬಂದು, ಈ ಬಾಲಕನು ಗಟ್ಟಿಯಾಗಿ ಸಿಂಹದ ಮರಿಯನ್ನು ಹಿಡಿದಿದ್ದಾನೆ. ಬಿಡಿಸಪ್ಪಯ್ಯ.

ಅರಸು : (ಬಾಲಕನ ಹತ್ತಿರ ಹೋಗಿ ಮುಗುಳು ನಗೆಯಿಂದ) ಎಲೋ ಮಹರ್ಷಿ ಪುತ್ರನೆ. ಈ ವೃತ್ತಿಯು ನಿನಗೆ ಯೋಗ್ಯವಲ್ಲಯ್ಯಾ,

|| ವೃತ್ತ, ಕಾಮದೆಯಂತೆ ||

ಕಂದ ಕೇಳಿದಾಶ್ರಮಕೆ ದೋಷವ್ಯೆ
ತಂದೆ ತಾಳ್ದಸಂಯಮ ಸುವೃತ್ತಿಯ ||
ನ್ನಿಂದು ಬಿಟ್ಟು ಈ ಪರಿಯ ಮಾಳ್ಪರೇ
ಚಂದನಕ್ಕೆ ಸುತ್ತಿರುವ ಸರ್ಪದೋಲ್ ||

ತಾಪಸಿ : ಎಲೋ ಭದ್ರಮುಖಾ, ಇವನು ಋಷಿಕುಮಾರನಲ್ಲ.

ಅರಸು : ಅದನ್ನು ಈತನ ಆಕಾರ ವರ್ತನಗಳ ಮೇಲಿಂದ ನಾನು ತಿಳಿದೆ. ಆದರೂ ಇಂಥ ಸ್ಥಾನದಲ್ಲಿ ಇವನಿರುವನೆಂದು ಹೀಗೆ ತರ್ಕವಾಯಿತು. (ಮನಸಿನೊಳಿದ್ದಂತೆ ಆ ಬಾಲಕನನ್ನು ಎತ್ತಿಕೊಂಡು ಸ್ಪರ್ಶಸುಖಪಟ್ಟು).

ಸಾಕೀ ಎಂಬ ಮಹಾರಾಷ್ಟ್ರ ವೃತ್ತದಂತೆ

ನೇತ್ರಂಗಳು ಸಂತೋಷಿಸಿದಪಿವನ ರೂಪವ ನೋಡಲು ಎನ್ನಾ ||
ಗಾತ್ರಂ ಸುಖಮಯಮಾಯ್ತು ಕ್ಷಣದೋಳೆತ್ತಿಕೊಳಲು ಬಾಲಕನಾ|
ಪಾತ್ರಮಿಹುದು ಕುಲಮಾವುದೊ ಕೀರ್ತಿಗೆ ಜನನಿಜನಕರಾರಿಹರೋ|
ಪುತ್ರನ ನೋಡುತಲಂತಃಕರಣದೊಳೆಷ್ಟು ಸಮಾಧಾನಿಪರೋ||

ತಾಪಸಿ : (ಇಬ್ಬರನ್ನೂ ನೋಡಿ) ಏನಾಶ್ಚರ್ಯವಿದು!

ಅರಸು : ಅದು, ಯಾವಾಶ್ಚರ್ಯವಮ್ಮಾ?

ತಾಪಸಿ : ಈ ಬಾಲಕನಂತೆ ರೂಪವು ಕಾಣಿಸಿತು. ಇಷ್ಟಕ್ಕೆ ಆಶ್ಚರ್ಯವಾಯಿತಂತಲ್ಲ. ತಾವು ಅಪರಿಚಿತರಾಗಿದ್ದು ಇಂಥ ಚಂಡಿ ಹುಡುಗನು ತಮ್ಮ ಮಾತನು ಕೇಳಿದನು!

ಅರಸು : (ಬಾಲಕನನ್ನು ಲಾಲಿಸುತ್ತ) ಅಮ್ಮಾ, ಈತನು ಋಷಿಕುಮಾರನಲ್ಲದಿದ್ದರೆ ಯಾವ ವಂಶದಲ್ಲಿ ಈತನು ಅಂಕುರಿಸಿದವನು?

ತಾಪಸಿ : ಪುರುವಂಶದಲ್ಲಿ.

ಅರಸು : (ತನ್ನೊಳಗೆ) ಈತನ ವಂಶವೂ ನನ್ನ ವಂಶವೂ ಒಂದೆಯೊ? ಅದಕ್ಕಂತೇ ನನ್ನಾ ಇವನಾ ಮುಖಚರ್ಯೆಗಳು ಕೂಡುತ್ತವೆಂದು ಈ ತಾಪಸಿಯು ನುಡಿದಳು. ಪುರುವಂಶದ ಅರಸರಿಗೆ ಕಟ್ಟಕಡೆಗೆ ವನವಾಸಕ್ಕೆ ಬರುವದು ಕುಲವ್ರತವಾಗಿದೆ.

ಕಂದ || ಅವನಿಯ ರಕ್ಷಿಗೆ ಮೊದಲೊಳ್
ಭವನದಿ ಸುಖವನುಭವಿಸುತಲಿ ಮುಂದೆ ಸನ್ನಾ ||
ಸವಗ್ರಹಿಸಿ ವನದಿ ತರುಮೂ-
ಲವೆ ಮನೆಮಾಡಿರುವರು ಪೌರವರ್‍ಯ್ಯೆ ತಪಕೆ|

(ತಾಪಸಿಗೆ) ಏನಮ್ಮಾ, ಸ್ವಾಭಾವಿಕ ರೀತಿಯಿಂದ ನೋಡಲಾಗಿ ಈ ಸ್ಥಳವು ಮನುಷ್ಯರಿರತಕ್ಕದ್ದಲ್ಲ. ಹೀಗಿದ್ದು ಈ ಬಾಲಕನು ಇಲ್ಲಿ ಹ್ಯಾಗೆ ಬಂದನು?

ತಾಪಸಿ : ಎಲೋ ಭದ್ರಮುಖನೆ, ನೀನೆಂಬುವದು ನಿಜ. ಅಪ್ಸರೆಯ ಸಂಬಂಧದಿಂದ ಈ ಬಾಲಕನ ಜನನಿಯು ಈ ಮಾರೀಚ ಮುನಿಗೆ ತಪೋವನದಲ್ಲಿ ಬಂದು ಪ್ರಸವ ಹೊಂದಿದಳು.

ಅರಸು : (ತನ್ನೊಳಗೆ) ಆಶೆ ಹೆಚ್ಚಾಗಲಿಕ್ಕೆ ಇದೊಂದು ಕಾರಣವಾಯಿತು. (ತಾಪಸಿಗೆ) ಈತನ ಜನನಿ ಯಾವ ರಾಜರ್ಷಿಯ ಪತ್ನಿಯು?

ತಾಪಸಿ : ಅಯ್ಯಾ, ಧರ್ಮಪತ್ನಿಯನ್ನು ತ್ಯಾಗ ಮಾಡುವಂಥಾತನ ಹೆಸರುಗೊಳ್ಳಬಾರದು, ಆತನ ನಾಮವೇನೆಂಬುದು ನಮ್ಮನ್ನು ಕೇಳಬೇಡ.

ಅರಸು : (ತನ್ನೊಳಗೆ) ಈ ಮಾತುಗಳೆಲ್ಲಾ ನನಗೇ ಹೊಂದುತ್ತವೆ. ಏನಾಶ್ಚರ್ಯವಿದು! ಈ ಬಾಲಕನ ಮಾತೆಯ ಹೆಸರು ಕೇಳುವೆನೇ ಪರಸ್ತ್ರೀಯರ ನಾಮವನ್ನು ಕೇಳುವದು ಯೋಗ್ಯವಲ್ಲ.

ತಾಪಸಿ : (ಹೋದಂಥವಳು ಬಂದು) ಎಲೋ ಸರ್ವದಮನ, ಈ ಶಕುಂತ* ಲಾವಣ್ಯವನ್ನು ನೋಡಿದೆಯಾ?

ಬಾಲಕ : ಅಮ್ಮಯ್ಯಾ, ಎಲ್ಲಿದ್ದಾಳೆ ನಮ್ಮಮ್ಮಯ್ಯ?

ತಾಪಸಿಯರು: (ನಕ್ಕು) ನಾಮ ಸದೃಶದಿಂದ ಈತನು ತನ್ನ ತಾಯಿ ಬಂದಳೆಂದು ತಿಳಿದನು.

ಎರಡನೆಯ
ತಾಪಸಿ : ಬಾಳಾ, ಈ ಮೃತ್ತಿಕೆಯ ನವಿಲಿನ ಸೌಂದರ್ಯವನ್ನು ನೋಡೆಂದನು. ನಿನ್ನ ಮಾತೆ ಇಲ್ಲಿ ಬಂದಿಲ್ಲ.

ಅರಸು : (ತನ್ನೊಳಗೆ) ಈತನ ಮಾತೆಯ ನಾಮವು ಶಕುಂತಲೆಯೋ? ಅಂತೂ ಎಲ್ಲಾ ಸಂಗತಿಗಳೂ ಹೊಂದುತ್ತವೆ. ಆದರೇನು? ಒಂದೇ ಹೆಸರಿನ ಮನುಷ್ಯರು ಪೃಥ್ವಿಯಲ್ಲೇನಿರುವದಿಲ್ಲವೋ? ಮಾತ್ರ ಈ ನಾಮಶ್ರವಣ ಪ್ರಸಂಗದಿದ ಮೃಗಜಲಕ್ಕೆ ಆತುರಿಸಿದಂತೆ ನಾನು ಬರಿದೆ ವಿಷಾದ ಹೊಂದುತ್ತೇನೆ.

ಬಾಲಕ : ಅಕ್ಕಯ್ಯಾ, ತಾಲೆ! ತಾಲೆ! ನೋಲು ಒಲ್ಲೇ ಸಂನಾಗಿದೆ. (ಕೈ ಚಾಚುತ್ತಾನೆ.)

ಮೊದಲನೆಯ
ತಾಪಸಿ : (ಆತನ ಕೈ ನೋಡಿ ಉದ್ವೇಗದಿಂದ) ಅಮ್ಮಾ ಈತನ ಕೈಯಲ್ಲಿಯ ತಾಯತವೆಲ್ಲಿ ಹೋಯಿತೆ?

---

* ಶಕುಂತ = ಪಕ್ಷಿ. ಲಾವಣ್ಯ = ಸೌಂದರ್ಯ. ಆದ್ದರಿಂದ ಶಕುಂತ-ಲಾವಣ್ಯ = ಪಕ್ಷಿಯ ಸೌಂದರ್ಯ

ಅರಸು : ಅಮ್ಮಾ ಗಾಬರಿಯಾಗಬಾರದು. ಈ ಸಿಂಹನ ಮರಿಯನ್ನು ಈತನೆಳೆಯುವ ವ್ಯಾಳ್ಯದಲ್ಲಿ ಬಿಚ್ಚಿ ಇಲ್ಲಿ ಬಿದ್ದಿದೆ. (ಎಂದು ಅದನ್ನು ತೆಗೆದುಕೊಳ್ಳಲು ಹೋಗುತ್ತಾನೆ.)

ತಾಪಸಿಯರು: ಹಾ ಹಾ! ಮುಟ್ಟಕೂಡದು ಮುಟ್ಟಕೂಡದು! ಅವ್ವಯ್ಯಾ! ಈತನು ಕೈಯಲ್ಲಿ ತೆಗೆದುಕೊಂಡನು ! (ಆಶ್ಚರ್ಯದಿಂದ ಹೃದಯದಲ್ಲಿ ಕೈ ಇಟ್ಟುಕೊಳ್ಳುತ್ತಾರೆ.)

ಅರಸು : ಯಾಕೆ ಮುಟ್ಟಕೂಡದೆಂದಿರಮ್ಮಾ?

ಮೊದಲನೆಯ ತಾಪಸಿ : ಕೇಳಬಹುದು ಸ್ವಾಮೀ, ಇದು ಅಪರಾಜಿತಾ ಎಂಬ ಯಂತ್ರವು. ಈತನ ಜಾತಕರ್ಮದ ಕಾಲಕ್ಕೆ ಭಗವಾನ್ ಮಾರೀಚ ಋಷಿಗಳು ಇದನ್ನು ಕಟ್ಟಿದ್ದರು. ಒಂದು ವ್ಯಾಳ್ಯ ಇದು ಈತನ ಕೈಯಿಂದ ಬಿಚ್ಚಿಬಿದ್ದರೆ ಈತನಾಗಲಿ ಈತನ ತಾಯಿತಂದೆಗಳಾಗಲಿ ಎತ್ತಬಹುದು. ಅನ್ಯರ್‍ಯಾರೂ ಎತ್ತಲಾಗದು.

ಅರಸು : ಎತ್ತಿದರೇನಾಗುವುದು?

ಮೊದಲನೇ ತಾಪಸಿ : ಅನ್ಯರ್‍ಯಾರಾದರೂ ಎತ್ತಿದರೆ ಇದು ತತ್‌ಕ್ಷಣವೆ ಸರ್ಪವಾಗಿ ಕಚ್ಚುವದು.

ಅರಸು : ಈ ಮಾತು ನಿಮಗೆ ಪ್ರತ್ಯಂತರಕ್ಕೆ ಎಂದಾದರೂ ಬಂದಿಹದೊ?

ತಾಪಸಿ : ಎಷ್ಟೋ ಸಾರೆ.

ಅರಸು : (ಹರುಷದಿಂದ ತನ್ನೊಳಗೆ) ನನ್ನ ಮನೋರಥ ಪೂರ್ಣವಾಯಿತು. ಈ ಆನಂದಕ್ಕೆ ಪಾರಾವಾರವಿಲ್ಲ. (ಬಾಲಕನನ್ನು ಅಪ್ಪಿಕೊಳ್ಳುತ್ತಾನೆ.)

ಎರಡನೇ ತಾಪಸಿ : ಎಲೆ ಸುವ್ರತೆ, ನಡೆ; ನಾವು ಈ ವರ್ತಮಾನವನ್ನು ಶಕುಂತಲೆಗೆ ಹೋಗಿ ಹೇಳುವ. (ಇಬ್ಬರೂ ತಾಪಸಿಯರು ಹೊರಟು ಹೋಗುತ್ತಾರೆ.)

ಬಾಲಕ : ಬಿಲು ಬಿಲ ನನ್ನ, ನಮ್ಮ ಮಾತೇ ಹತ್ತಲ ಹೋಗುತ್ತೇನೆ;

ಅರಸು : ಎಲೋ ಪುತ್ರಕಾ, ನನ್ನನ್ನು ಸಂಗಡ ತೆಗೆದುಕೊಂಡು ನಿನ್ನ ಮಾತೆಯ ಹತ್ತರ ಹೋಗು.

ಬಾಲಕ : ನೀನು ನನಗೆ ಪುತ್ತಾ ಎಂತ ಯಾಕ ಕಲೀತಿ? ನೀ ನಮ್ಮಪ್ಪನೆ? ನಮ್ಮಪ್ಪ ದುಸ್ಯಂತಲಾಜ.

ಅರಸು : (ಸ್ವಲ್ಪ ನಕ್ಕು) ಈ ವಿವಾದವೇ ನೈಜವನ್ನು ತೋರುತ್ತದೆ.(ಇಷ್ಟರಲ್ಲಿ ಶಕುಂತಲೆ ಬರುತ್ತಾಳೆ. ಕೇಶಗಳನ್ನು ಒಂದೇ ಗಂಟಿನಲ್ಲಿ ಕಟ್ಟಿದ್ದಾಳೆ.)

ಶಕುಂತಲೆ : (ಧ್ಯಾನಿಸಿಕೊಂಡು) ಸರ್ವದಮನನ ತಾಯಿತವನ್ನು ಪರಜನರು ಮುಟ್ಟಿದ ಕ್ಷಣವೆ ಸರ್ಪವಾಗತಕ್ಕದ್ದು. ಅಂಥದು ಸಹ ತನ್ನ ಗುಣವನ್ನು ಬಿಟ್ಟು ಬಿಟ್ಟಿತು.

ಇನ್ನ್ಯಾತರ ಆಶೆ ಸುಡುತ್ತದೆ? ಅಥವಾ ಸಾನುಮತಿಯು ಹೇಳಿದಂತೆ ಯಾಕಿರಬಾರದು? (ಮುಂದೆ ನಡೆಯುತ್ತಾಳೆ.)

ಅರಸು : (ಶಕುಂತಲೆಯನ್ನು ನೋಡಿ) ಆಹಾಹಾ! ಇವಳೇ ಶಕುಂತಲೆ ಕಾಣುತ್ತಾಳೆ. ಏನಾಗಿ ಹೋಗಿದೆ ಇವಳ ಅವಸ್ಥೆ!

ವೃತ್ತ || ಮಲಿನ ವಸ್ತ್ರಗಳು ಧರಿಸಿರ್ದು ಕೂ-
ದಲಗಳೊಂದೆಯೆ ಗಂಟಿಲಿ ಕಟ್ಟಿ ಮೈ
ಬಲು ಕೃಶಂಗೊಳೆ ತಾಂ ಪಲಕಾಲದಿಂ |
ಕಳೆದಳೆನ್ನಲಂ ವ್ರತದಂತೆವೊಲ್ ||

ಇದೇ ಅರ್ಥದ ಪದ

(ದಾಟಿ : ಮಾತಾಡದಾ ಬಗೆ ಏನು ಏನು| ನಿನ್ನ ಪ್ರೀತಿಗೊಲಿದ ಪ್ರಾಣನಾಥನೊಡನೆ|| ಎಂಬ ಪದದಂತೆ.)

ಏನಾದಳೈ ಮೃದುವಾಣೀ ಜಾಣೇ ||ಎನ್ನ||
ಹೀನ ನಡತೆಗಹಿವೇಣೀ ರಾಣೀ ||ಪಲ್ಲ||
ಅತಿ ನಿರ್ದಯ ನಾನು| ನೂಂಕಿದ |
ಪತಿವ್ರತೆಯಳು ತಾನು | ನಿರ್ಮಲ ||
ಮತಿಯಾಚರಣದೊಳೊರಗಿ || ಸೊರಗಿ ||೧||

ಮಲಿನ ವಸನವುಟ್ಟು| ಜಡೆಗೂ|
ದಲ ಪರಿವೆಯ ಬಿಟ್ಟು| ಮನದೊಳು |
ತಳಮಳಿಸುತಲಿ ಕುಲೀನೇ ದೀನೇ ||೨||

ನೇಮನಿಷ್ಠೆಗೂಡಿ ಶ್ರಮದೊಳು|
ಕೋಮಲ ಮುಖ ಬಾಡಿ| ತಾಳದೆ
ಕಾಮನ ಬಾಧೆಗೆ ನೊಂದು ಬೆಂದು ||೩||

ನಿಷ್ಠುರ ಹೃದಯನ್ನ | ನಂಬಿದೆ
ಕಷ್ಟಬಡುವರಿನ್ನ ಎನ್ನದ-
ರು ಷ್ಟವೆನುತಲುಸರಿಟ್ಟು ಕೆಟ್ಟ ||೪||

ಪಲಕಾಲದೊಳಳುತಾ| ಆಯುವಿ
ನಳತೆಯ ಮಾಡುತ್ತಾ | ಬಳಲುತ
ಗಳಿಗೆ ಯುಗದವೊಲ್ ತಿಳಿದು ಕಳೆದು ||೫||

ಶಕುಂತಲೆ : (ಪಶ್ಚಾತ್ತಾಪದಿಂದ ನಿಸ್ತೇಜನಾದಂಥ ಅರಸನನ್ನು ನೋಡಿ) ಈತನು ಆರ್ಯಪುತ್ರನಂತೆ ಕಾಣಿಸುವದಿಲ್ಲ. ಅಲ್ಲೆನ್ನ ಬೇಕೆ? ನನ್ನ ಪುತ್ರನ ಕೈಯಲ್ಲಿಯ

ತಾಯಿತವನ್ನು ಅನ್ಯರ್‍ಯಾರು ಮುಟ್ಟುವವರು?

ಬಾಲಕ : (ತಾಯಿಯ ಹತ್ತಿರ ಹೋಗಿ) ಅಮ್ಮಯ್ಯಾ, ಈತನು ದಾಲೆ? ನನ್ನನ್ನು ಪುತ್ತಾ ಪುತ್ತಾ ಅಂತ ಅಪ್ಪುತ್ತಾನೆ.

ಅರಸು : ಹೇ ಪ್ರಿಯೆ, ನಿನ್ನ ಕೂಡ ಎಷ್ಟು ಕ್ರೂರತನ ಮಾಡಿದೆ. ಅದು ಕಡೆಗೆ ಈವೊತ್ತಿಗೆ ಅತಿ ಪ್ರೀತಿಯಲ್ಲಿ ಪರಿಣಾಮಗೊಂಡಿತಲ್ಲಾ! ಹೇ ಸಹನಶೀಲೆ, ಇನ್ನು ನೀನೇ ದಯಮಾಡಿ ನನ್ನನ್ನು ಕ್ಷಮಿಸಬೇಕೇ ಹೊರ್ತು ಬೇರೆ ಉಪಾಯ ಉಳಿಯಲಿಲ್ಲ. ನಾನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ನನ್ನಿಂದ ಬಹಳಪರಾಧವಾಯಿತು.

ಶಕುಂತಲೆ : (ತನ್ನೊಳಗೆ) ಹೃದಯವೆ, ಧೈರ್ಯ ತಾಳು, ನಿನ್ನ ಅದೃಷ್ಟವು ಮಾತ್ಸರ್ಯವನ್ನು ಬಿಟ್ಟು, ನಿನ್ನ ಮೇಲೆ ದಯೆತೋರಿದೆ. ಈತನು ಆರ್ಯಪುತ್ರನೇ ಹೌದು.

ಅರಸು : ಹೇ ಪ್ರಿಯೆ, ಈವೊತ್ತಿನಾನಂದವೆಂಥಾದು?

ಕಾಮದಾವೃತ್ತ ||
ಅಂದು ಮೋಹವೆಂಬುವ ತಮಸ್ಸಿನೋಳ್ |
ಸುಂದರಾಂಗಿ ವಿಸ್ಮೃತಿಯ ಗೊಂಡೆಕೇಳ್||
ಇಂದು ನಿನ್ನ ಕಾಂಬೆನುಪರಾಗದಿಂ |
ದಿಂದು ಬಂದು ರೋಹಿಣಿಯ ಕಾಂಬವೊಲ್ ||

ಶಕುಂತಲೆ : ಜಯತು ಜಯತು ಆರ್ಯಪುತ್ರಃ (ಅರ್ಧೋಕ್ತಿಯನ್ನಾಡಿ ಕಂಠ ಸದ್ಗದಿತಳಾಗುತ್ತಾಳೆ.)

ಅರಸು : ಹೇ ಪ್ರಿಯೆ,

ಕಾಮದಾ ವೃತ್ತದಂತೆ ||
ಬಿಗಿದ ಕಂಠದಿಂ ಜಯತು ಶಬ್ದಮಂ|
ಸುಗುಣರನ್ನನೀ ನುಡಿಯದಿರ್ದರುಂ ||
ಚಿಗುರ್ದುಟಿಂಗೆ ವೀಳ್ಯವನು ಕಾಣದಾ |
ಮೊಗವನೋಡಿ ನಾಂ ವಿಜಯನಪ್ಪೆ ಕೇಳ್ ||

ಬಾಲಕ : ಅಮ್ಮಯ್ಯಾ, ಆಲೆ ಈತ?

ಶಕುಂತಲೆ : ವತ್ಸಾ, ನಿನ್ನ ದೈವಕ್ಕೆ ಕೇಳು.(ಕಣ್ಣೀರು ಸುರಿಸುತ್ತಾಳೆ.)

ಅರಸು : (ಶಕುಂತಲೆಯ ಕಾಲಿಗೆರಗಿ)

(ಪದ)

(ದಾಟಿ : 'ನಾನಿನ್ನಾಧೀನಳಾದ ಬಳಿಕಾ' ಎಂದ ಪದದಂತೆ.)
ನಾ ನಿನ್ನ ಪಾದಕೆರಗುವೆ ಪ್ರೌಢೆ ||ಪಲ್ಲ||
ಮಾನವತಿಯೆ ಸುಸಹನ ಶೀಲೆ |

ಸಾನುರಾಗದಿಂದೆನ್ನಪರಾಧಗ|
ಳೇನು ನೋಡದಲೆ ನೀ ಕ್ಷಮಿಸೆ ||ಅನುಪಲ್ಲ||

ಅಂದು ಮುನಿಗಳಾ ಗೂಡ ನಡೆಯುತ |
ಸುಂದರಿ ನೀ ಬಂದಿರೆ ಮನೆಗೆ||
ಅಂದು ನಾವು ಕೂಡಿದ ಬಗೆ ಸ್ಮರಣೆಗೆ |
ಬಂದುದಿಲ್ಲ ನಿನ್ನಡಿಯಾಣೆ ||೧||

ನೀರೆ ನೀ ಪರನಾರಿಯೆನುತಲಿ |
ದೂರಿದೆನಾನಾಸಮಯದಲಿ |
ದೂರಿನಿಂದೆ ನೋಡಿದೆ ಯೆನ್ನನು ಕ-
ಣ್ಣೀರುತಂದು ಸಾನದ ಮರೆಯೆ ||೨||

ಆರೋ ಏನೋ ಮಾಡಿದರೆ ಪ್ರಿಯೆ |
ಬಾರಲಿಲ್ಲವೆ ಸ್ಮೃತಿ ವ್ಯಾಳ್ಯದಲಿ ||
ಘೋರ ಬಡಿಸಿದೆ ನಿನ್ನನು ಬಹುಪರಿ |
ನಾರೀನಾ ಸೆರಗೊಡ್ಡುವೆ ಮರೆಯೇ ||೩||

ಮಂದಮತಿಯು ನಾಮಂದ ಭಾಗ್ಯನೆ |
ಅಂಧನ ಕೊರಳೊಳು ಮಾಲೆಯನು ||
ತಂದು ಹಾಕಲಹಿಯೆಂದಜುತಲೊಗೆ ||
ದಂದದಿಂದೆ ನಿನ್ನನು ಜರಿದೆ ||೪||

(ಹೀಗೆಂದು ಕಾಲಿಗೆರಗುತ್ತಾನೆ.)

ಶಕುಂತಲೆ : ಹೇ ಪ್ರಾಣಪತೇ, ಇದು ಯೋಗ್ಯವಲ್ಲ. ಇದರಿಂದ ನಾನು ಪಾಪಿಷ್ಟಳಾಗುವೆನು ಬಲ್ಲಿರಾ. ಏಳಿ ಏಳಿ ಬೇಗ ಏಳಿ.

(ಅರಸು ಏಳುತ್ತಾನೆ)

||ಪದ||

(ದಾಟಿ : ಮೇಲಿನ ಪದದಂತೆ)

ನಿನ್ನೊಳೇನುಂಟು ದೋಷವು ನಾಥಾ
ಖಿನ್ನನಾಗದಿರು ಪ್ರಾಣೇಶಾ||
ಮುನ್ನಿನ ಜನುಮದೊಳ್ಮಾಡಿದ ದುಷ್ಕೃತಿ
ಯನ್ನೆ ಭೋಗಿಸಿದೆ ದೀನೇಶಾ ||ಅನುಪಲ್ಲ||

ನೀತಿಸಾಗರಾ ಕೇಳೊ ನಮ್ಮಯ
ಪ್ರೀತಿಗೆ ಮರವಾದಪುದುಂಟೆ
ಯಾತರಿಂದಲೀ ಮಾತಾಯಿತೋ ಬಿಡು
ಯಾತಕಿನ್ನು ಹಳಹಳಿ ರಮಣಾ ||೧||

ಧನ್ಯವಾಯಿತೀಜನ್ಮ ರಾಯನೆ |
ನಿನ್ನನುಕೂಡಿ ನಾ ಬಳಲಿದರೂ ||
ನಿನ್ನ ಕೀರ್ತಿಯೊಳ್ ಲಾಂಛನವಾಯಿತು |
ಎನ್ನ ಪೂರ್ವಪಾಪವು ಕಾಂತಾ ||೨||

ಮೇದಿನೀಶನೇ ನಿನ್ನ ಸ್ಮರಣೆಯೋ|
ಳೀದಾಸಿಯು ಬಂದಿಹಳಿದಕೆ ||
ಆದಕಾರಣಾವುದು ಪೇಳ್ವುದು ಇ|
ನ್ನಾದ ಮಾತು ಮರೆವುದು ಜೀಯಾ ||೩||

ಅರಸು : ಪ್ರಿಯೇ, ನಿನ್ನ ಸ್ಮರಣೆ ಹೇಗಾಯಿತೆಂಬುವದು ನನ್ನ ಹೃದಯದೊಳಗಿನ ವಿಷಾದಶಲ್ಯವು ಹೋದನಂತರ ಹೇಳುತ್ತೇನೆ.

||ಪದ||

(ದಾಟಿ : ಬೆಳಗಾಗ ಬಂತು ಬಿಡೆನ್ನ| ನಾಳೆ ತಡೆಯದೆ ಬರುವೆನೋ ಕೇಳೋ ಮೋಹನ್ನಾ|| ಎಂಬ ಪದದಂತೆ.)

ಕಣ್ಣೀರಿನೊರಿಸುವೆನಿಂದು || ನೋಡಿ
ಧನ್ಯನಾಗುವೆನೆ ನಾ ಸಖಿಯ ಮುಖೇಂದು ||ಪಲ್ಲ||

ಇಂದುಮುಖಿಯೆ ಕೇಳಂದು || ಬಾಷ್ಪ-
ದಿಂದೆ ಮೈದೊಳೆದೆ ನೀ ಬಳಿಯೊಳು ನಿಂದು||
ತಂದುದಿಲ್ಲದು ಲಕ್ಷಿಗೆಂದು | ಹಿಂದಿ-
ನಿಂದೆ ಬಾಧಿಪ ತಾಪಗಳೆಯಬೇಕೆಂದು ||೧||

ತನುವೇನಾದುದೆ ನಿನ್ನ | ಮನ -
ದನುತಾಪದಿಂ ಮುಕ್ತನಾಗುವೆ ನಿನ್ನಾ ||
ಕನಸೆಂದು ತಿಳಿಯೆ ಇದನ್ನಾ | ನಿನ್ನ -
ಕೊನೆಗಣ್ಮ ನೋಟಕ್ಕೆ ಕಾಣದ ಮುನ್ನ ||೨||

ಹಲವು ಕಾಲದಿ ನಿನ್ನ ಮೇಲೆ | ಸ್ಮೃತಿ-
ಗಳೆದು ನಿರ್ದಯನಾದೆ ಕೇಳೆ ಸುಶೀಲೆ||

ಕಳವಳಿಸಿದೆ ಮನದಲ್ಲೆ | ನಿನ್ನ -
ಕೆಳದುಟಿ ರಸವನಾ ಸವಿಯದೆ ಮೊದಲೆ ||೩||

ಶಕುಂತಲೆ : (ಅಷ್ಟರಲ್ಲಿ ಬೆರಳಿನಲ್ಲಿ ಉಂಗುರವನ್ನು ಕಂಡು) ಪ್ರಾಣನಾಥ, ಇದೇ ಮುದ್ರಿಕೆಯಲ್ಲವೇ ಅದು?

ಅರಸು : ಹೌದು ಪ್ರಾಣಸಖಿ, ಇದು ಸಿಕ್ಕಿದರಿಂದಲೇ ನಿನ್ನ ನೆನಪಾಯಿತು.

ಶಕುಂತಲೆ : ಈ ಮುದ್ರಿಕೆಯು ಬಹಳ ಕೆಟ್ಟ ಕೆಲಸ ಮಾಡಿತು. ಯಾವ ವ್ಯಾಳ್ಯಕ್ಕೆ ಪ್ರಾಣನಾಥನಿಗೆ ವಿವಾಹದ ಸ್ಮರಣೆಯಾಗತಕ್ಕದ್ದೋ ಅದೇ ವ್ಯಾಳ್ಯಕ್ಕಿಲ್ಲದ ಹಾಗಾಯಿತು.

ಅರಸು : ಇರಲಿ, ಆ ಮಾತು ಇನ್ನು ತೆಗೆಯಬೇಡ. ವಸಂತಕಾಲಕ್ಕೆ ಹ್ಯಾಗೆ ಕುಸುಮಗಳ ಗುರುತವೋ ಹಾಗೆ ನಮ್ಮ ದರ್ಶನದ ಗುರುತಕ್ಕೆ ಪುನಃ ಈ ಉಂಗುರವು ನಿನ್ನ ಕೈಯಲ್ಲಿರಲಿ ತೆಗೆದುಕೊ. (ಉಂಗುರವನ್ನು ತೆಗೆದುಕೊಡುತ್ತಾನೆ.)

ಶಕುಂತಲೆ : ಅಯ್ಯೋ, ನಾನು ಒಲ್ಲೆ. ಇದರಲ್ಲಿ ಇನ್ನು ಮೇಲೆ ನಾನು ವಿಶ್ವಾಸವಿಡಲಾರೆ. ಇದು ಪ್ರಾಣನಾಥರ ಕೈಯಲ್ಲಿಯೇ ಇರಲಿ.

(ಇಷ್ಟರಲ್ಲಿ ಇಂದ್ರಸಾರಥಿಯಾದ ಮಾತಲಿಯು ಬರುತ್ತಾನೆ.)

ಮಾತಲಿ : ಸುದೈವದಿಂದ ಧರ್ಮಪತ್ನಿಯ ದರ್ಶನವಾಯಿತು. ಪುತ್ರನ ಮುಖವನ್ನು ನೋಡಿ ಹೇ ಭೂಪತೇ, ನಿನಗೆ ಸರ್ವದಾ ಸೌಖ್ಯವಾಗಲಿ.

ಅರಸು : ನನ್ನ ಮನೋರಥವಲ್ಲಿಗೆ ಉತ್ತಮ ಫಲಗಳು ಬಂದವು. ಮಾತಲೀ, ಇಂದ್ರನಿಗೆ ಈ ವರ್ತಮಾನವು ತಿಳಿದಿದ್ದೀತೇ?

ಮಾತಲಿ : (ನಕ್ಕು) ದೇವರಿಗೆ ಪರೋಕ್ಷವ್ಯಾವದಾದರೂ ಉಂಟೇ? ಆಯುಷ್ಮಂತಾ, ಭಗವಾನ್ ಮಾರೀಚ ಋಷಿಗಳು ನಿನ್ನ ದರ್ಶನದ ಉದ್ದಿಶ್ಯ ದಾರಿ ನೋಡುತ್ತಿದ್ದಾರೆ.

ಅರಸು : ಪ್ರಿಯೆ ಶಕುಂತಲೆ, ಬಾಲಕನನ್ನು ಎತ್ತಿಕೊ, ನಡೆ. ಭಗವಾನ್ ಮಾರೀಚ ಋಷಿಗಳ ದರ್ಶನವನ್ನು ನಿನ್ನಿಂದ ಸಹಿತನಾಗಿ ತೆಗೆದುಕೊಳ್ಳತಕ್ಕದ್ದು.

ಶಕುಂತಲೆ : ಹಿರಿಯರ ಬಳಿಯಲ್ಲಿ ನಿಮ್ಮ ಗೂಡ ಬರುವದಕ್ಕೆ ನಾಚಿಕೆ ಬರುತ್ತದೆ.

ಅರಸು : ಅಭ್ಯುದಯ ಕಾಲಕ್ಕೆ ಹೀಗೇ ಮಾಡತಕ್ಕದ್ದು, ನಡೆ.

(ಎಲ್ಲರೂ ನಡೆಯಲಾರಂಭಿಸುತ್ತಾರೆ.)

(ಅಷ್ಟರಲ್ಲಿ ಮಾರೀಚ ಋಷಿಗಳು ಬಂದು ಆಸನದ ಮೇಲೆ ಕುಳಿತುಕೊಳ್ಳುತ್ತಾರೆ. ಆತನ ಪತ್ನಿಯಾದ ಪ್ರದಿತಿಯು ಬಳಿಯಲ್ಲಿ ಕುಳಿತುಕೊಳ್ಳುತ್ತಾಳೆ.)

ಮಾರೀಚ : (ಅರಸನನ್ನು ನೋಡಿ ಅದಿತಿಗೆ ಹೇಳುತ್ತಾನೆ) ಹೇ ದಾಕ್ಷಾಯಣೀ -

ವೃ|| ಇವನೇ ನಿನ್ನಯ ಪುತ್ರನಾಹವವದಿ ತಾಂ ಸೇನಾಧಿಪತ್ವಂ ತಳೆ|
ರ್ದವನೀನಾಥನು ನಾಕರಕ್ಷಕನಿವಂ ದುಷ್ಯಂತ ರಾಜೇಂದ್ರ ನಂ ||
ಬವನಿಂದ್ರಾಯುಧ ವಜ್ರಮಾಭರಣದಂತಾಯ್ತಿನ್ನ ದಕ್ಕಿಲ್ಲ ಕಾ-
ಕಾರ್ಯವೆ ಕೇಳೀತನ ಬಿಲ್ಲುಮಾಯ್ತು ಸುರಲೋಕಾ
ಧಾರಭೂತಂ ಸತೀ ||

ಅದಿತಿ : ಈತನ ಆಕೃತಿಯೇ ಸಂಭಾವನೀಯವಾಗಿ ತೋರುತ್ತದೆ.

ಮಾತಲಿ : ಹೇ ಆಯುಷ್ಮಂತಾ, ರಾಜಾ, ಸಕಲ ದೇವತೆಗಳ ತಾಯಿ ತಂದೆಗಳಾದವರು ನಿನ್ನನ್ನು ಪುತ್ರಪ್ರೀತಿಯಿಂದ ನೋಡುತ್ತಾರೆ. ಇವರ ಬಳಿಯಲ್ಲಿ ಬರಬಹುದು. ಇವರೆಂಥವರೆಂದರೆ -

ಚಾಮರವೃತ್ತ ||

ಆ ಮರೀಚಿದಕ್ಷರಿಂದೆ ಪುಟ್ಟಿದರ್ವಿಧಾತನೋ |
ಈ ಮಹಾತ್ಮರೋಳು ಒಂದೇ ಪೀಠಿಕೇಳ್ ಪರಾತ್ಪರಂ ||
ವಾಮನಾವತಾರಗೆಜ್ಞ ದೀಶನಾತ್ರಿಲೋಕದಾ |
ಸ್ವಾಮಿಗಿನ್ನು ಷಡ್ದ್ವಿರೂಪನಾದಿನಂಗೆ ಕಾರಣರ್ ||

ಅರಸು : ಅಂಥವರು ಇವರೇನೋ?

ಮಾತಲಿ : ಹೌದು ಜೀಯಾ, ಅವರೇ ಇವರು.

ಅರಸು : (ಸಮೀಪಕ್ಕೆ ಹೋಗಿ) ಇಂದ್ರನ ಸೇವಕನಾದಂಥ ದುಷ್ಯಂತನು ಉಭಯತರಿಗೆ ವಂದನೆ ಮಾಡುತ್ತಾನೆ.

ಮಾರೀಚ : ವತ್ಸಾ, ಚಿರಂಜೀವಿಯಾಗಿ ಪೃಥ್ವಿಯನ್ನು ಪಾಲಿಸಪ್ಪಾ!

ಅದಿತಿ : ವತ್ಸಾ, ರಣದಲ್ಲಿ ನಿನಗೆ ಯಶಸ್ಸು ಬರಲಿ. ಶತ್ರುಗಳಿಲ್ಲದ ಹಾಗಾಗಲಿ!

ಶಕುಂತಲೆ : ಬಾಲಕನಿಂದ ಸಹಿತಳಾಗಿ ಉಭಯತರಿಗೆ ನಾನು ಪಾದವಂದನೆ ಮಾಡುತ್ತೇನೆ.

ಮಾರೀಚ : ವತ್ಸೆ, ಅಖಂಡ ಸೌಭಾಗ್ಯವತಿಯಾಗು!

ಕಂದ || ಪತಿಯಾ ಖಂಡಲ ನಂತಿರೆ
ಸುತನು ಜಯಂತನ ಪ್ರತಿಮೆಯೊಲಿರೆ ಮೇಣೆನ್ನಾ
ಕಿತರಾಶಿಷಗಳು ಇಂದ್ರನ
ಸತಿ ಪೌಲೋಮಿಯೊಲಾಗಿರು ನೀ ನೃಪಗೆ ||

ಅದಿತಿ : ವತ್ಸೆ, ಪತಿಯು ನಿನ್ನ ಮೇಲೆ ಪ್ರೀತಿ ಮಾಡಲಿ ನಿನ್ನ ಪುತ್ರನು ದೀರ್ಘಾಯುಷಿಯಾಗಿ ಉಭಯಕುಲಕ್ಕೂ ಆನಂದದಾಯಕನಾಗಲಿ ಕುಳಿತುಕೊಳ್ಳಿ.

ಮಾರೀಚ : (ಬೆರಳಿನಿಂದೆ ಮೂವರನ್ನು ತೋರುತ್ತ)

ಸ್ವಾಗತಾ|| ಈ ಶಕುಂತಲೆಯು ಸಾಧ್ವಿಯು ಪುತ್ರಂ |
ತಾ ಶುಭೋದಯನು ನೀ ಗುಣ ಪೂರ್ಣಂ ||
ಈಸು ಮೂವರೊಳು ಕೂಡಿದವೈ ಪೃ|
ಥ್ವೀಶ ಭಕ್ತಿಧನ ಸದ್ವಿಧಿಗಳ್ ಕೇಳ್ ||

ಅರಸು : ಭಗವನ್, ಮೊದಲೇ ಮನೋರಥ ಸಿದ್ಧಿಯಾಗಿದೆ. ಆಮೇಲೆ ದರ್ಶನವಾಯಿತು. ತಸ್ಮಾತ್ ಸ್ವಾಮಿಗಳ ಗ್ರಹವು ಅಪೂರ್ವವಾಗಿರುತ್ತದೆ.

ಪೃಷ್ಪಿತಾಗ್ರಾ || ಜನಿಸುವದು ಸುಮಂ ಫಲಕ್ಕೆ ಪೂರ್ವಂ
ಘನ ಮೊದಲೊಳ್ ತದವಂತರ ಪಯಂ ಕಾ
ರಣ ಕೃತಿಕ್ರಮಮಪ್ಪುತಿರ್ದು ಮುಂಗಂ
ಡೆನುಸಲೆ ಸಂಪದಮಂ ಪ್ರಸಾದವಾ ಮೇಲ್ ||

ಮಾತಲಿ : ಸೃಷ್ಟಿಕರ್ತನ ಪ್ರಸಾದದ ಮಹಾತ್ಮ್ಯವೇ ಹಾಗಿರುವದು.

ಅರಸು : ಭಗವಾನ್, ತಮ್ಮ ಆಜ್ಞಾಧಾರಿಣಿಯಾದ ಶಕುಂತಲೆಯನ್ನು ನಾನು ಗಾಂಧರ್ವ ವಿವಾಹದಿಂದ ಪಾಣಿಗ್ರಹಣ ಮಾಡಿದೆ. ಆದರೂ ಕೆಲವು ಕಾಲ ಹೋದ ಬಳಿಕ ಅವಳ ಬಂಧುಜನರು ನನ್ನ ಮಂದಿರಕ್ಕೆ ತೆಗೆದುಕೊಂಡು ಬಂದ ವ್ಯಾಳ್ಯದಲ್ಲಿ ನನ್ನ ಸ್ಮೃತಿಯು ನಷ್ಟವಾಗಿ ಇವಳನ್ನು ನಿರ್ಭರ್ತ್ಸನೆ ಮಾಡಿ ಸಗೋತ್ರರಾದ ಕಣ್ವಮುನಿಗಳಿಗೆ ನಾನು ಮಹಾಪರಾಧಿಯಾದೆನು. ಆಮೇಲೆ ಯಾವಾಗ್ಗೆ ನನ್ನ ದೃಷ್ಟಿಗೆ ಈ ಮುದ್ರಿಕೆಯು ಬಿತ್ತೋ ಆಗ್ಗೆ ಇವಳ ಕೂಡ ವಿವಾಹ ಹೊಂದಿರುವದು ಯಾವತ್ತೂ ಸ್ಮರಣೆಗೆ ಬಂತು. ಇದರಿಂದ ನನಗೆ ಬಹು ಆಶ್ಚರ್ಯವಾಗುತ್ತದೆ.

||ಯೂಥಿಕಾವೃತ್ತ||

ಆನೆ ಪೋಗಲದು ಕಂಡಿರೆ ಶಂಕೆಯಿಂ |
ದಾನೆಲಂ ತಳೆದ ಹೆಜ್ಜೆಗಳೋರ್ವನಂ ||
ತಾನಿರೀಕ್ಷಿಸುತೆ ನಿಶ್ಚಯಿಪಂತೆವೋ |
ಲಾನು ಕೆಟ್ಟೆನು ಮನಸ್ಸಿನ ದೋಷದಿಂ ||

ಮಾರೀಚ : ವತ್ಸಾ, ನೀನು ಅಪರಾಧವನ್ನು ಮಾಡಿದಿಯೆಂದು ಮನಸ್ಸಿನಲ್ಲಿ ಬಹು ತರಬೇಡ ಕಂಡೆಯಾ. ಅದರ ಕಾರಣವು ಬೇರೆ ಆಗಿರುತ್ತದೆ ಹೇಳುತ್ತೇನೆ ಕೇಳು.

ಅರಸು : ಸ್ವಾಮಿ, ಕೇಳುತ್ತೇನೆ.

ಮಾರೀಚ : ಯಾವಾಗ್ಗೆ ಅಪ್ಸರಸ್ ತೀರ್ಥದಿಂದ ದುಃಖಗ್ರಸ್ತಳಾದ ಶಕುಂತಲೆಯನ್ನು ತೆಗೆದುಕೊಂಡು ಮೇನಕೆ ದಾಕ್ಷಾಯಣಿಯ ಬಳಿಗೆ ಬಂದಳೋ ಆಗ್ಗೆ ನಾನು

ಅಂತರ್ಜ್ಞಾನ ದೃಷ್ಟಿಯಿಂದ ನೋಡಲಾಗಿ ನೀನು ದೂರ್ವಾಸ ಋಷಿಗಳ ಶಾಪಮೂಲಕವಾಗಿ ಧರ್ಮಪತ್ನಿಯನ್ನು ತ್ಯಾಗ ಮಾಡಿದ್ದೆಯೆಂದು ನಾನು ತಿಳಿದೆನು. ಶಾಪವು ಅಂಗುಲೀಯಕ ದರ್ಶನಾವಧಿಯಾಗಿಯೇ ಇತ್ತು. ಕಾರಣ ನೀವು ಉಂಗುರವನ್ನು ನೋಡಿದ ಕ್ಷಣವೆ ನಿವೃತ್ತಿಯಾಯಿತು.

ಅರಸು : (ಶ್ವಾಸವಿಟ್ಟು) ಈವೊತ್ತು ನಾನು ಲೋಕಾಪವಾದದಿಂದ ಮುಕ್ತನಾದೆನು.

ಶಕುಂತಲೆ : (ತನ್ನೊಳಗೆ) ಅಯ್ಯೋ ದೈವವೆ, ಆರ್ಯಪುತ್ರನು ನನ್ನನ್ನು ನಿಷ್ಕಾರಣದಿಂದ ಪರಿತ್ಯಾಗ ಮಾಡಿದನೆಂದು ನಾನು ತಿಳಿದೆ. ಶಾಪದಿಂದ ಹೀಗಾಯಿತೆಂಬುವದು ನಾನರಿಯೆ. ಶಾಪವಾದಾಗ್ಗೆ ನಾನು ವಿರಹಗ್ರಸ್ತಳಾಗಿ ತಿಳಿಯದೆ ಹೋದೆ ಕಾಣುತ್ತದೆ. ಅದಕ್ಕಂತೆಯೆ ನನ್ನ ಸಖಿಯರು ಆರ್ಯಪುತ್ರನು ಗುರುತು ಹಿಡಿಯದಿದ್ದ ಪಕ್ಷದಲ್ಲಿ ಮುದ್ರಿಕೆಯನ್ನು ತೋರಿಸೆಂದು ಹೇಳಿದ್ದರು, ಇದಕ್ಕೆ ಸಂಶಯವಿಲ್ಲ.

ಮಾರೀಚ : ವತ್ಸೆ, ಆದ ಮಾತು ಆಗಿಹೋಯಿತು. ಬಿಡು, ನಿನ್ನ ಪತಿ ದರ್ಶನವಾಯಿತು. ಇನ್ನು ಮೇಲೆ ಹಿಂದಿನ ವೃತ್ತಾಂತವನ್ನು ನೆನೆದು ಪತಿಯ ಮೇಲೆ ಕೋಪಿಸಬೇಡ ಕಂಡೆಯಾ, ಕೇಳು -

||ಮ. ವಿ. ವೃತ್ತ||

ಮುನಿಶಾಪಕ್ಕೆ ತೊಡಂಗಿ ವಿಸ್ಮರಿಸಿ ನಿನ್ನಂ ತ್ಯಾಜ್ಯ ಗೈದಿರ್ದನೀ |
ತನ ಮೇಲಿನ್ನು ದನಿತ್ವ ನಿನ್ನ ದಿವನಾದಂ ದೋಷದಿಂ ಮುಕ್ತಕೇಳ್ ||
ಮನದೊಳ್ ಕೋಪವು ಬೇಡ ತೋರದಿರೆ ಬಿಂಬಂ ಮಣ್ಣುಗೊಂಡಾಗಲಾಂ
ಛನವಾಗಿರ್ಪುದೆ ರನ್ನಗನ್ನಡಿಗದೇ ಸ್ವಚ್ಛತ್ವಮಂ ತಾಳ್ದಮೇಲ್ ||

ಅರಸು : ಭಗವನ್ ತಾವೆಂಬುವದು ವಾಸ್ತವಿಕವಾಗಿದೆ.

ಮಾರೀಚ : ಈ ಶಕುಂತಲೆಯ ಹೊಟ್ಟೆಯಿಂದ ಹುಟ್ಟಿದಂಥ ನಿನ್ನ ಪುತ್ರನ ಜಾತಕರ್ಮಾದಿ ಗಳನ್ನು ಶಾಸ್ತ್ರೋಕ್ತ ಮಾಡಿದ್ದೇನೆ. ಇದು ನಿನ್ನ ಮನಸ್ಸಿಗೆ ಬರುತ್ತದಷ್ಟೆ?

ಅರಸು : ಭಗವನ್ ಇವನೇ ನನ್ನ ಕುಲಕ್ಕೆ ಆಧಾರನಾಗಿದ್ದಾನೆ.(ಬಾಲಕನ ಬೆನ್ನ ಮೇಲೆ ಕೈ ಎಳೆಯುತ್ತಾನೆ.)

ಮಾರೀಚ : ಹಾಗೂ ಈತನು ಚಕ್ರವರ್ತಿಯಾಗತಕ್ಕವನಿದ್ದಾನೆಂದು ತಿಳಿ. ಈತನು ಮುಂದೇನು ಮಾಡುವನೆಂದರೆ -

ಭಾಮಿನಿ || ಇವನ ರಥ ಜಡಧಿಯನೆ ದಾಂಟುವ |
ದಿವನು ಸಪ್ತದ್ವೀಪಗಳ ಜಯಿ- |
ಸುವನಿವನ ಸರಿ ರಥಿಕರಿಳೆಯೊಳಗಿಲ್ಲದಾಗುವರು ||

ಇವನು ಸರ್ವರ ದಮನಗೈಯಲೆ|
ನುವೆವು ಸರ್ವದಮನ ನೆನುತ ಮುಂ-
ದಿವಸು ಪ್ರಜರಸು ಭರಣಗೈಯಲು ಭರತನೆಸಿಸುವನು||

ಅರಸು : ಭಗವನ್, ತಾವೇ ಈತನ ಜನ್ಮ ಸಂಸ್ಕಾರವನ್ನು ಮಾಡಿದ್ದೀರಿ ಅಂದ ಮೇಲೆ ಇವೆಲ್ಲ ಮಾತುಗಳು ಘಟಿಸುವವೆಂದು ನಮಗೆ ನಿಃಸಂಶಯವಾಗಿ ತೋರುತ್ತದೆ.

ಅದಿತಿ : ಭಗವನ್, ಮಗಳ ಮನೋರಥಗಳು ಸಂಪೂರ್ಣವಾದ ವೃತ್ತಾಂತವನ್ನು ಸವಿಸ್ತಾರವಾಗಿ ಕಣ್ವ ಋಷಿಗಳಿಗೆ ತಿಳುಹಿಸಬೇಕು. ಮಮತೆಯಿಂದ ಪೂರಿತಳಾದ ಅವಳ ತಾಯಿ ಮೇನಕೆಯಂತೂ ಇಲ್ಲಿಯೇ ಇದ್ದಾಳೆ.

ಶಕುಂತಲೆ : ನನ್ನ ಮನಸಿನೊಳಗಿನ ಮಾತನ್ನೇ ದೇವಿಯಾಡಿದಳು.

ಮಾರೀಚ : ತಪಸ್ಸಾಮರ್ಥ್ಯದಿಂದ ಕಣ್ವ ಋಷಿಗಳಿಗೆ ಎಲ್ಲವೂ ಅವಗತವಾಗಿದೆ.

ಅರಸು : ಹಾಗೆಂತಲೇ ಅವರು ನನ್ನ ಮೆಲೆ ಕೋಪಿಷ್ಟರಾಗಲಿಲ್ಲೆಂದು ಕಾಣುತ್ತದೆ.

ಮಾರೀಚ : ಆದರೂ ಆನಂದವಾರ್ತೆಯನ್ನು ನಾವು ತಿಳುಹಿಸುವುದು ಯೋಗ್ಯವಾಗಿದೆ. ಯಾರವರು ಅಲ್ಲಿ? (ಇಬ್ಬರು ಶಿಷ್ಯರು ಬರುತ್ತಾರೆ.)

ಶಿಷ್ಯ : ಭಗವನ್ ಏನು ಆಜ್ಞೆ?

ಮಾರೀಚ : ಏಲೋ ಗಾಲವಾ, ಈಗಿಂದೀಗಲೇ ಆಕಾಶ ಮಾರ್ಗದಿಂದ ಹೋಗಿ ಆ ಕಣ್ವ ಋಷಿಗಳಿಗೆ, "ಶಕುಂತಲೆಯ ಶಾಪವು ನಿವೃತ್ತಿಯಾಗಿ ದುಷ್ಯಂತರಾಜನು ಅವಳನ್ನು ಪುತ್ರಸಹಿತ ಸ್ವೀಕಾರ ಮಾಡಿದನೆಂಬಾನಂದ ವಾರ್ತೆಯನ್ನು ಬೇಗ ತಿಳುಹಿಸಿ ಬಾ" ಹೋಗು.

ಶಿಷ್ಯ : ಭಗವನ್, ಆಜ್ಞೇಪ್ರಕಾರ ಮಾಡುತ್ತೇನೆ.

ಮಾರೀಚ : ವತ್ಸಾ, ನೀನು ನಿನ್ನ ಪತ್ನಿಯನ್ನೂ ಪುತ್ರನನ್ನೂ ಕೂಡಿಕೊಂಡು ಇಂದ್ರನ ರಥದಲ್ಲಿ ಆರೂಢನಾಗಿ ನಿನ್ನ ರಾಜಧಾನಿಗೆ ಸುಖದಿಂದ ಹೊರಟು ಹೋಗು.

ಅರಸು : ಭಗವನ್, ಮಹದಾಜ್ಞೆ.

ಮಾರೀಚ : ಇನ್ನೊಂದು ಹೇಳುತ್ತೇನೆ ಕೇಳು.
(ಎನಲು)

ಭಾಮಿನಿ ||

ಧರೆಗೆ ಮಳೆಗರಿಸಲಿ ಬಿಡೌಜನು |
ನಿರುತದೊಳ್ ಯಾಗದಲಿ ನೀನಾ-
ಸುರರ ಸಂತುಷ್ಟಿಸುತಲಿರು ಕೇಳ್ ಭೂಪಕುಲತಿಲಕಾ ||
ಎರಡು ಲೋಕವನಿಬ್ಬರೊಂದಾ|
ಗಿರುತ ಪೊರೆವದು ಸ್ನೇಹದಿಂದೀ
ತೆರದಿ ಶತಯುಗ ತಿರುತಿರುಗಿ ಬರುವಲ್ಲಿ ಪರಿಯಂತ ||

ಅರಸು : ಭಗವನ್, ಲೋಕ ಕಲ್ಯಾಣಾರ್ಥವಾಗಿ ಯಥಾನುಶಕ್ತಿ ಪ್ರಯತ್ನ ಮಾಡೇನು. ಅದಕ್ಕೆ ನ್ಯೂನವಾಗಲಿಕ್ಕಿಲ್ಲ.

ಮಾರೀಚ : ವತ್ಸಾ, ಇನ್ನೇನು ನಿನಗೆ ಪ್ರಿಯವಾದದ್ದು? ಬೇಡಿಕೊ.

ಅರಸು : ಭಗವಾನ್ ಇದಕ್ಕೂ ಹೆಚ್ಚಿನದೇನು ಬೇಡತಕ್ಕದ್ದಿದೆ. ಆದರೂ ಸ್ವಾಮಿಗಳು ಕೊಡುವಿರೆಂದ ಪಕ್ಷದಲ್ಲಿ ನಾನು ಹೀಗೆ ಬೇಡಿಕೊಳ್ಳುತ್ತೇನೆ.

ಭಾಮಿನಿ | ಅರಸರೆಲ್ಲರು ಜನರ ಹಿತಕನು
ಸರಿಸಿ ನಡೆಯಲಿ ಎಲ್ಲ ಧರೆಯ ಜ
ನರು ಸರಸ್ವತಿ ವಾಣಿ ದೇವತೆಯನ್ನೆ ಮನ್ನಿಸಲಿ|
ಕರುಣದಿಂ ಪರಮಾತ್ಮ ವಿಶ್ವಂ
ಭರನೆನೆಗೆ ಮುನ್ನಂತ ಕಾಲದಿ
ಎರಡನೆಯ ಜನುಮವನೆ ತೋರದೆ ಕೊಡಲಿ ಮುಕ್ತಿಯನು ||

ಏಳನೆಯ ಅಂಕವು ಮುಗಿದುದು.

ಇತಿ ಶ್ರೀ ಮನ್ಮಹಾ ಕವಿ ಕಾಲಿದಾಸ ವಿರಿಚತ ಮಭಿಜ್ಞಾನ ಶಾಕುಂತಲ ನಾಮ ನಾಟಕ ಸಮಾಪ್ತಂ.

ಕನ್ನಡ ಭಾಷಾಂತರಂ ಸಂಪೂರ್ಣಂ

- ಮಿತಿ -

ನೂರಾನಾಲ್ಕದರಷ್ಟರಿಂ ಗುಣಿಸು ತೊಂಬತ್ತೈದನು ವರ್ಗ ಗೈ-
ತೋರಾಲಬ್ಧಗಳಲ್ಲಿಯಂತರವನಂ ಶುಕ್ಲಾಬ್ದಕಾ ಪೌಷದೋಳ್ *
ತಾರಾಧೀಶನ ಮಾರ್ಗಮಂ ಕ್ಷುಧಿತ ಶೈವರ್ನೋಳ್ಪರಂದಿಂದಿರಾ**
ವಾರ +ಕ್ಕೀಕೃತಿ ಪೂರ್ಣವಾಯ್ತು ಜಗದಾಧಾರೇಚ್ಛೆಯಿಂ ಶೇಷನಿಂ ||

ಮುಗಿದುದು

---

* ಶಾ. ಶ. ೧೭೫೧ನೇ ಶುಕ್ಲ ಸಂವತ್ಸರ ಪುಷ್ಯಮಾಸ

** ಬಹುಳ ಚತುರ್ಥಿ (ಸಂಕಷ್ಟಿ) + ಶುಕ್ರವಾರ

ನಾಟಕದ ಸಮಗ್ರ ಸಮೀಕ್ಷೆ

ಡಾ. ಭೀಮರಾವ ಚಿಟಗುಪ್ಪಿ

ಪ್ರಸ್ತಾವನೆ

ದಿವಗಂತ ಡಾ. ಭೀಮರಾವ ಚಿಟಗುಪ್ಪಿ ಹಾಗೂ ಡಾ. ಪ್ರಹ್ಲಾದ ಮುದಗಲ್ಲ ಅವರುಗಳೂ ನಾನೂ ಖಾಸಾ ಮುಂಬಯಿಗರು. ಅಲ್ಲಿಯವರೇ ಆದ, ಆದ್ಯ ಕನ್ನಡ ನಾಟಕಕಾರ ಚುರಮರಿ ಶೇಷಗಿರಿರಾಯರ ಬಗ್ಗೆಯೂ, ಮರಾಠೀ ರಂಗಭೂಮಿಯ ಬಗ್ಗೆಯೂ ಮೊದಲಿಗೆ ಮುದಗಲ್ಲ ಅವರು ಕನ್ನಡ, ಮರಾಠೀ ಎರಡೂ ಭಾಷಾ ಪತ್ರಿಕೆಗಳಲ್ಲಿ ಬರೆಯತೊಡಗಿದರು. ಮರಾಠಿಯ ಪ್ರಥಮ ನಾಟಕಕಾರ ಅಣ್ಣಾಸಾಹೇಬ ಕಿರ್ಲೋಸ್ಕರರಿಗಿಂತ ಶೇಷಗಿರಿಯವರು ಮೊದಲಿಗರು. ಮಾತ್ರವಲ್ಲ, ಕಿರ್ಲೋಸ್ಕರರು ಕನ್ನಡ ನಾಟಕದಿಂದ ಪ್ರಭಾವಿತರೂ ಆಗಿದ್ದರು ಎಂಬ ಅಂಶವನ್ನು ಮುದಗಲ್ಲರು ಸಾಧಾರ ಪ್ರತಿಪಾದಿಸಿ ಮರಾಠಿಗರ ಕ್ಷೋಭೆಗೆ ಪಾತ್ರರಾಗಿದ್ದರು. ನಾನೂ ಆಗೀಗ ತುಸು ಬರೆಯುತ್ತಿದ್ದೆ. ಆದರೆ ಶೇಷಗಿರಿರಾಯರದು ಸಂಸ್ಕೃತ ಕಾವ್ಯ ಶಾಸ್ತ್ರದಲ್ಲಿ ಅದಾವ ಬಗೆಯ ನಾಟಕವೆಂಬುದನ್ನು ವಿವೇಚಿಸಿ, ಸೂಕ್ತವಾದ ಐತಿಹಾಸಿಕ ಹಿನ್ನೆಲೆಯೊಡನೆ ಸಮಗ್ರವಾಗಿ ಈ ವಿಷಯವನ್ನು ಗ್ರಂಥರೂಪದಲ್ಲಿ ಪ್ರತಿಪಾದಿಸಬೇಕೆಂದು ವಿದ್ವಾಂಸರಾದ ಚಿಟಗುಪ್ಪಿಯವರಿಗೆ ವಿನಂತಿಸಿದೆ. ಅದರ ಫಲವಾಗಿ ಈ ಗ್ರಂಥ ರಚನೆ.

ಇದನ್ನು ಬರೆಯುವಾಗ ಅವರು ತಮ್ಮ ಲಂನೆಯ ವಯಸ್ಸನ್ನು ಅದೆಂದೊ ದಾಟಿದ್ದರು. ಆದಾಗ್ಯೂ ಲೈಬ್ರರಿಗಳಿಗೆ ಎಡತಾಕಿಯೊ, ನಮ್ಮಿಂದ ಪುಸ್ತಕಗಳನ್ನು ತರಿಸಿಕೊಂಡು ಅಭ್ಯಾಸ ಮಾಡಿದರು. ಯಾವ ಕಾಲಕ್ಕೂ ಅವರದು ಆಳವಾದ ಅಭ್ಯಾಸ ಮತ್ತು ಚಿಂತನ-ಮಂಥನ ಇರುತ್ತಿತ್ತು. ಬರೆದಾದ ಮೇಲೆ ಹಸ್ತಪ್ರತಿಯನ್ನು ನನ್ನ ಕಡೆಗೆ ಕೊಟ್ಟರು. ಅವರ ಮೊತ್ತ ಮೊದಲಿನ ಲೇಖವನ್ನು ಮೊದಲ್ಗೊಂಡು (೧೯೬೪) ಎಲ್ಲ ಬರಹಗಳ ಪ್ರಕಟನೆಯ ವ್ಯವಸ್ಥೆ ಮಾಡುವ ಹೊಣೆ ನನ್ನದಾಗಿತ್ತು. ಒಳನಾಡಿನ ಪ್ರಕಾಶನ ಪ್ರಪಂಚದ ಸಂಪರ್ಕ ಅವರಿಗೆ ಇದ್ದಿಲ್ಲವೆಂಬುದು ಮಾತ್ರವಲ್ಲ: ಅವರು ಇಂಥ ವ್ಯವಹಾರಗಳಲ್ಲಿ ಎಳ್ಳಷ್ಟೂ ಆಸ್ಥೆ ಇಟ್ಟುಕೊಂಡವರಲ್ಲ.

ಇನ್ನಿದರ ಪ್ರಕಟನೆಗೆ, ಕೆಲ ವರ್ಷಗಳ ಹಿಂದೆ ಕೆ. ವಿ. ಸುಬ್ಬಣ್ಣ ತಾವಾಗಿ ಮುಂದೆ ಬಂದಿದ್ದರು. ಕಾರಣಾಂತರದಿಂದ ಅದು ಕೈಗೂಡಲಿಲ್ಲ. ಇದು ಚಿಟಗುಪ್ಪಿಯವರ ಜನ್ಮ ಶತಾಬ್ದಿಯ ಸಮಯ. ಈಗಲಾದರೂ ಇದು ಪ್ರಕಟವಾಗಬೇಕು; ಹೇಗೆ ಸಾಧ್ಯ ಎಂಬ

ಚಿಂತೆಯಲ್ಲಿರುವಾಗ ಡಾ. ನಾ. ದಾಮೋದರ ಶೆಟ್ಟಿ ಅವರು ಆಸ್ಥೆವಹಿಸಿ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ ಸೂಚಿಸಿದ್ದೇ ತಡ, ಮುಂದಿನ ಕೆಲಸ ಸುಸೂತ್ರ ಮುಂದುವರಿಯಿತು.

ಕರ್ನಾಟಕ ನಾಟಕ ಅಕಾಡೆಮಿಯು ಈ ಹಿಂದೆ ಚುರಮುರಿಯವರ ನಾಟಕವನ್ನು ಕೀರ್ತಿನಾಥ ಕುರ್ತಕೋಟಿ ಅವರ ಮುನ್ನುಡಿಯೊಡನೆ ಪ್ರಕಟಿಸಿದ್ದರು. ಅದರ ಪ್ರತಿಗಳು ಅದೆಂದೋ ಮುಗಿದಿದ್ದವು. ಈಗ ಅದರ ಕುರಿತ ಸಮಗ್ರ ವಿಮರ್ಶೆ - ಸಮೀಕ್ಷೆಯ ಈ ಗ್ರಂಥವನ್ನು ಸೇರಿಸಿ ಅವರು ಹೊರತರುತ್ತಿರುವುದು ಸಯುಕ್ತಿಕವೂ ಪ್ರಶಂಸನೀಯವೂ ಆಗಿದೆ. ಸಂತೋಷವಾಯಿತು.

ಮಂಗಳೂರು, ಜುಲೈ ೨೦೦೬ **ಶ್ರೀನಿವಾಸ ಹಾವನೂರ**

ಕರ್ನಾಟಕ ಥಿಯಾಲಾಜಿಕಲ್ ಕಾಲೇಜ್
ಮಂಗಳೂರು - ೧
ಫೋನ್ : ೦೮೨೪ - ೨೪೮೧೯೭೮

ಪರಿವಿಡಿ

ಡಾ. ಭೀಮರಾವ ಚಿಟಗುಪ್ಪಿ ಅವರ ಜೀವನರೇಖೆ

ಹೆಸರು : ಚಿಟಗುಪ್ಪಿ, ಭೀಮರಾವ ಬಿಂದೂರಾವ

ಜನನ : ಹುಬ್ಬಳ್ಳಿಯಲ್ಲಿ. ೪ ನವೆಂಬರ್ ೧೯೦೬

ಮರಣ : ೧ ಅಕ್ಟೋಬರ್ ೧೯೯೮, ಮುಂಬಯಿಯಲ್ಲಿ.

ಶಿಕ್ಷಣ : ಎಂ.ಎ., ಡಿ.ಲಿಟ್

ವೃತ್ತಿ : ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯಲ್ಲಿ ಅಧಿಕಾರಿಗಳು. ೧೯೬೭ರಲ್ಲಿ ನಿವೃತ್ತಿ.

ಪ್ರಶಸ್ತಿ : ೧೯೮೬ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಲೆಟರ್ಸ್

ಕೃತಿಗಳು : ಕವಿರಾಜ ಮಾರ್ಗ ಪ್ರಶಸ್ತಿ (೧೯೭೦)
ಸಂಶೋಧನ ಪಂಚದಶಿ (೧೯೭೪)
ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದ ಕನ್ನಡ ಕವಿಗಳು (೧೯೭೪)
ಇಮ್ಮಡಿ ನಾಗವರ್ಮ (೧೯೮೩)
ಖ್ಯಾತ ವಿಜ್ಞಾನಿ ಡಾ. ಅಸುಂಡಿ ರಂಗರಾಯರು (೧೯೮೮)
ಆದ್ಯ ನಾಟಕಕಾರ ಚುರಮರಿ ಶೇಷಗಿರಿರಾಯ

ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳು

The Chalukyas of Badami (M.A. Thesis) 1935
ವಿಜಯನಗರದ ನಿರ್ಣಾಯಕ ಯುದ್ಧ (ಸು. ೧೯೫೫)
ಇವಲ್ಲದೆ ದ್ವೈತ ಸಾಹಿತ್ಯಕ್ಕೆ ಸಂಬಂಧಪಟ್ಟ ಹಲವು ಲೇಖನಗಳನ್ನು ಬರೆದಿದ್ದಾರೆ.

ಡಾ. ಪ್ರಹ್ಲಾದ ಮುದಗಲ್ಲ ಅವರ ಬದುಕು ಬರಹ

ಕನ್ನಡ ಹಾಗೂ ಮರಾಠೀ ರಂಗಭೂಮಿಗಳ ವಿಷಯವಾಗಿ ಚಿಟಗುಪ್ಪಿಯವರಂತೆಯೇ ಆಳವಾದ ಆಸ್ಥೆಯುಳ್ಳವರು. ಅದರ ಒಂದು ಕಾರಣ ನಾಟಕ ಹಾಗೂ ರಂಗಭೂಮಿಗೆ ಸಾಕಷ್ಟು ಚಾಲನೆ ನೀಡಿದ್ದ ಬಾಗಿಲುಕೋಟೆಯಲ್ಲಿ ಅವರ ಜನನ ಹಾಗೂ ಬಾಲ್ಯ ದಿನಗಳನ್ನು ಕಳೆದದ್ದು.

ಮುಂಬಯಿಗೆ ಬಂದ ಮೇಲೆ, ಬಾಗಿಲುಕೋಟೆಯುವರೇ ಆಗಿದ್ದ ಕೆರೂರ ವಾಸುದೇವಾಚಾರ್ಯರನ್ನು ಕುರಿತು, ಪ್ರೊ. ಸಿ.ಕೆ. ದೀಕ್ಷಿತರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಮಟ್ಟದ ಅಧ್ಯಯನ ಕೈಕೊಂಡು ಮುಗಿಸಿದರು. ಆಮೇಲೆ ಅದು ಪ್ರಕಟವಾಗಿದೆ. ನೌಕರಿ? ಸಾಹಿತ್ಯ ಕಲೆಗಳಿಗೆ ಏನೂ ಸಂಬಂಧಪಡದ ಸೆಕ್ಯುರಿಟಿ ಆಫೀಸರಕಿ! ಮುಂಬಯಿಯ ಐ.ಐ.ಟಿ.ಯಲ್ಲೇ ಪೂರ್ಣಾವಧಿಯ ಸೇವೆ ಸಲ್ಲಿಸಿ ನಿವೃತ್ತರಾದರು.

ಮುದಗಲ್ಲರಿಗೆ ಮರಾಠೀ ಸಾಹಿತ್ಯದ ಆಳವಾದ ಪರಿಚಯವಿದ್ದಿತು. ಅದು ಕಾರಣವಾಗಿ ಮರಾಠೀ ಸಾಹಿತ್ಯಿಕರು ತಮ್ಮ ನಾಟ್ಯ ಪರಂಪರೆಯನ್ನು ಅತಿಯಾಗಿ ಎತ್ತಿ ಹಿಡಿಯುವಾಗ, ಅದಕ್ಕೆ ಸಂದ ಕನ್ನಡ ರಂಗಭೂಮಿ, ಸಂಗೀತ ಪ್ರಭಾವಗಳನ್ನು ಕಡೆಗಣಿಸಿದ್ದು ಮುದಗಲ್ಲರನ್ನು ಬಡಿದೆಬ್ಬಿಸಿತು.

ಮರಾಠಿಯಲ್ಲಿ ಕಿರ್ಲೋಸ್ಕರರಿಂದ ಅನುವಾದಗೊಂಡ ಶಾಕುಂತಲ ನಾಟಕವೇ ಮುಂಬಯಿ ಪ್ರಾಂತದಲ್ಲಿ ಮೊದಲ ಅಭಿಜಾತ ನಾಟಕ ಎಂದು ಅವರುಗಳು ಹೆಮ್ಮೆಯಿಂದ ಬೀಗುತ್ತಿರುವಾಗ ಈ ಭಾಗದ ಪ್ರಥಮ ಅಭಿಜಾತ ನಾಟಕ ಚುರಮುರಿಯವರದು - ಎಂಬುದಾಗಿ ಆಧಾರ ಸಹಿತ ಮಂಡಿಸಿದರು. ಮಹತ್ವದ್ದೆಂದರೆ ೧೮೮೦ರಿಂದ ೧೯೨೦ರವರೆಗೆ 'ಅವೆಷ್ಟೋ ನಾಟ್ಯ ಸಂಗೀತಗಳಿಗೆ ಕನ್ನಡದ ಧಾಟಿಗಳನ್ನೇ ಅನುಕರಿಸಲಾಗಿದೆ' ಎಂದು ಬರೆದರು. ಅದಕ್ಕೆಲ್ಲ 30 ಮರಾಠೀ ಹಾಡುಗಳ ಕನ್ನಡ ಧಾಟಿಯ ಮೂಲವನ್ನು ತೋರಿಸಿಕೊಟ್ಟರು.

ಈ ವಿಷಯದ ಕುರಿತು ಮುದಗಲ್ಲರು ಬರೆದ ಲೇಖನ-ಪುಸ್ತಕಗಳು ಇಂತಿವೆ.

೧. ಮರಾಠೀ ಶ್ರೀಕೃಷ್ಣ ಪಾರಿಜಾತ ಮತ್ತು ನಾಟ್ಯ ಪರಂಪರೆ, 'ಸಾಧನೆ' ೧೯೭೭

೨. ನಾಟ್ಯಾಚಾರ್ಯ ಚುರಮರಿಯವರು. 'ಕಸ್ತೂರಿ' ಆಗಸ್ಟ್ ೧೯೮೩

೩. ನಾಟ್ಯಸಂಗೀತ (ಮರಾಠಿಯಲ್ಲಿ) 'ಅಮೃತ' ಮೇ ೧೯೮೩

೪. ಮರಾಠಿಯಲ್ಲಿ ದಶಾವತಾರ ಆಟಗಳು. ಕ. ಸಾ.ಪ. ಪತ್ರಿಕೆ, ಜೂನ್ ೧೯೮೪

೫. ಕನ್ನಡ-ಮರಾಠೀ ರಂಗಭೂಮಿವರೀಲ ದೇವಾಣ-ಘೇವಾಣ (ಮರಾಠಿಯಲ್ಲಿ) ನವಭಾರತ, ಡಿಸೆಂಬರ್ ೧೯೯೦

೬. ಸ್ವ. ಚುರಮರಿ ಶೇಷಗಿರಿರಾಯರು ಕಂಡ ಕನ್ನಡ ಭಾಷೆ ಸಾಧನೆ ೧೯......

೭. **ಶಾಕುಂತಲ ನಾಟಕವು** ಮುಂಬಯಿ ಎಂ.ವಿ. ಕನ್ನಡ ವಿಭಾಗ, ೧೯೯೫

೮. **ಕನ್ನಡ ರಂಗ ಪರಂಪರೆ** ಮಿಂಚಿನ ಬಳ್ಳಿ, ಹುಬ್ಬಳ್ಳಿ, ೧೯೯೫

೯. ಚುರಮರಿ - ಮರುಚಿಂತನ ಸಂಕ್ರಮಣ, ಜೂನ್ ೧೯೯೯

೧೦. ಮರಾಠಿಯಲ್ಲಿ ಕುಮಾರವ್ಯಾಸ ಭಾರತ ಕಸ್ತೂರಿ, ಸೆಪ್ಟೆಂಬರ್ ೧೯೯೯

ಇವುವೆ ಅವರ ಕೊನೆಯ ಬರಹ. ಮರುವರ್ಷವೆ ತೀರಿಕೊಂಡರು.

●

ಅಗ್ರಮಾನ್ಯ ಸಂಶೋಧಕ ಡಾ. ಭೀಮರಾವ ಚಿಟಗುಪ್ಪಿ

ಡಾ. ಚಿಟಗುಪ್ಪಿ ಅವರು ಸಂಶೋಧನ ರಂಗದಲ್ಲಿ ಕಾಲಿಟ್ಟದ್ದು ತಮ್ಮ 60ನೆಯ ವರ್ಷ ದಾಟಿದ ಮೇಲೆಯೇ. ನಮ್ಮಲ್ಲಿಯ ಎಷ್ಟೋ ಜನ ವಿದ್ವಾಂಸರು, ಪ್ರೊಫೆಸರುಗಳು ಆ ವಯಸ್ಸಿಗೆ ಅದು-ಇದನ್ನು ಬರೀತಿರ್ತಾರೆ. ಆದರೆ ಮೌಲಿಕ ಸಂಶೋಧನೆಯನ್ನು ನಿಲ್ಲಿಸಿರುತ್ತಾರೆ. ಇಷ್ಟೊಂದು ತಡವಾಗಿ ತಾವು ವ್ಯಾಸಂಗ-ಸಂಶೋಧನೆಗಳಲ್ಲಿ ತೊಡಗಿದ್ದರ ಕಾರಣ ಚಿಟಗುಪ್ಪಿಯವರಿಗೂ ಸ್ಪಷ್ಟವಾಗಿರಲಿಲ್ಲವಂತೆ. ತಮ್ಮ ಎಂ.ಎ. ಪದವಿಗಾಗಿ ಅವರು ಖ್ಯಾತ ಇತಿಹಾಸಜ್ಞ ಫಾದರ್ ಹೆರಾಸರ ನೇತೃತ್ವದಲ್ಲಿ ಬಾದಾಮಿ ಚಾಲುಕ್ಯರನ್ನು ಕುರಿತು ಪ್ರೌಢ ಪ್ರಬಂಧವನ್ನೇನೊ ಸಲ್ಲಿಸಿದ್ದರು. (1935). ಅದು ಅವರ ಈ ದಿಸೆಯಲ್ಲಿಯ ಒಲವಿನ ನಿದರ್ಶನ ಮಾತ್ರ ಎನ್ನಬೇಕು. ಅನಂತರದ ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಸುದೀರ್ಘ ನೌಕರಿ (1935-1967) ಯಾವ ಕೈಂಕರ್ಯವೆ ಇರಲಿ ಅದರಲ್ಲಿ ತಮ್ಮನ್ನು ಪೂರ್ಣ ತೊಡಗಿಸಿಕೊಳ್ಳುವುದು ಅವರ ಸ್ವಭಾವವೆ ಆಗಿದ್ದಿತೆನ್ನುವುದು ನಿಜ.

ಅವರ ಮೊದಲ ಲೇಖವು ಮಧ್ವಾಚಾರ್ಯರು ಹಾಗೂ ಅವರ ಹಿಂದಿನ ಅವತಾರಗಳಾದ ಭೀಮ, ಹನುಮರ ಸಂಗೀತ ಪರಿಣತಿಯನ್ನು ಕುರಿತದ್ದಾಗಿತ್ತು (1964). ಕ್ರಮೇಣ ಅವರ ಸಂಶೋಧನ ಲೇಖಗಳು ಪ್ರಬುದ್ಧ ಕರ್ಣಾಟಕ, ಕರ್ನಾಟಕ-ಭಾರತಿ ಮೊದಲಾದ ಪತ್ರಿಕೆಗಳಲ್ಲಿ ಬರತೊಡಗಿದುವು. ಸನ್ಮಾನ ಗ್ರಂಥ, ಸ್ಮರಣ ಸಂಪುಟಗಳ ಪ್ರಸಕ್ತಿ ಇದ್ದಾಗ ಅವರ ಲೇಖನಕ್ಕಾಗಿ ಸಂಪಾದಕರುಗಳಿಂದ ಕರೆ ಹೋಗುತ್ತಿದ್ದುದು ವಾಡಿಕೆಯಾಗಿದ್ದಿತು. ಅವರ ಲೇಖನಗಳಲ್ಲಿ ಪುಂಖಾನುಪುಂಖವಾಗಿ ಸಂಸ್ಕೃತ, ಪ್ರಾಕೃತಾದಿ ಆಕರಗಳ ಪ್ರಸ್ತಾಪವಿದ್ದದ್ದನ್ನು ನೋಡಿದಾಗ, ಅವರು ಈ ಭಾಷೆಗಳಲ್ಲಿಯ ಕಾವ್ಯಶಾಸ್ತ್ರ ಗ್ರಂಥಗಳನ್ನೂ ಅನೇಕ ಹಳಗನ್ನಡ ಕಾವ್ಯಗಳನ್ನೂ ಅತ್ಯಲ್ಪ ಅವಧಿಯಲ್ಲಿ ಮನನ ಮಾಡಿಕೊಂಡಿದ್ದರೆಂಬುದು ಗೋಚರವಾಗುತ್ತದೆ.

ಅವರ ಮೊದಲ ಪ್ರಕಟಿತ ಗ್ರಂಥ 'ಕವಿರಾಜ ಮಾರ್ಗ ಪ್ರಶಸ್ತಿ'(1970), 'ಸಂಶೋಧನ ಪಂಚದಶಿ' ಎನ್ನುವ ಅವರ ಹದಿನೈದು ಪ್ರಬಂಧಗಳ ಸಂಕಲನ ಪ್ರಕಟವಾದದ್ದು 1974ರಲ್ಲಿ. 'ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದ ಕನ್ನಡ ಕವಿಗಳು' ಹೊರಬರಲು ಮತ್ತೈದು

ವರ್ಷಗಳು ಸಂದುವು. 'ಇಮ್ಮಡಿ ನಾಗವರ್ಮ' ವೂ ಹೀಗೇ ಐದು ವರ್ಷದ ಅಂತರದಲ್ಲಿ ಪ್ರಕಟವಾಯಿತು. ಅದನ್ನು ಪ್ರಕಟಿಸಿದ ಮಂಗಳೂರಿನ ವಿ.ಬಿ. ಹೊಸಮನೆಯವರಿಗೆ ದೂರದ ಮುಂಬಯಿಯಲ್ಲಿದ್ದ ಚಿಟಗುಪ್ಪಿಯವರ ವೈಯಕ್ತಿಕ ಪರಿಚಯ - ಸಂಪರ್ಕ ಏನೂ ಇರಲಿಲ್ಲ. ಕೇವಲ ಅವರ ಸಂಶೋಧನ ಮಹೋನ್ನತಿಗೆ ಮಾರು ಹೋಗಿ ಪ್ರಕಟನೆಗೆ ಮುಂದಾದರು. ಚಿಟಗುಪ್ಪಿಯವರ ಗ್ರಂಥಗಳಿಗೆ ಆ ಆ ವರ್ಷದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ತಪ್ಪದೇ ದೊರೆತದ್ದೂ ಗಮನಾರ್ಹವಾದುದು.

ಅವರ ಕಡೆಯ ಗ್ರಂಥವು ವರ್ಣಪಟಲ ಶಾಸ್ತ್ರದಲ್ಲಿ (Spectroscopy) ಅಂತರರಾಷ್ಟ್ರೀಯ ಖ್ಯಾತಿ ಪೊಂದಿದ್ದ ಡಾ. ಅಸುಂಡಿ ರಂಗರಾಯರ ಚರಿತ್ರೆಯಾಗಿದೆ. (1988) ಚಿಟಗುಪ್ಪಿಯವರಿಗೆ ಆತ್ಮೀಯರಾಗಿದ್ದ ಆ 'ರಂಗಣ್ಣ' ನಿಜಕ್ಕೂ ಚರಿತ್ರಾರ್ಹರು.

ಡಾ. ಚಿಟಗುಪ್ಪಿಯವರ ಸಂಶೋಧನ ಕಾರ್ಯದ ಮೂಲ ಸೂತ್ರವೆಂದರೆ ಭಾರತೀಯ ಕಾವ್ಯಶಾಸ್ತ್ರದ ಪರಂಪರೆಯಲ್ಲಿ ಹಳಗನ್ನಡ ಸಾಹಿತ್ಯದ ವಿವೇಚನೆ. ಈ ಕ್ಷೇತ್ರದಲ್ಲಿ ಹೊಸ ಅಂಶಗಳನ್ನು ಗುರುತಿಸುವುದಕ್ಕೂ ಅನಿರ್ಣೀತವಿದ್ದವುಗಳ ಮೇಲೆ ಬೆಳಕು ಚೆಲ್ಲುವುದಕ್ಕೂ ಬೇಕಾದಷ್ಟು ಅವಕಾಶವಿದೆ. ಡಾ. ಚಿಟಗುಪ್ಪಿಯವರು ಹಾಗೆ ಮಾಡುವಾಗ ಎಷ್ಟೋ ಬಾರಿ ತಮ್ಮ 'ಊಹಾಶ್ವವನ್ನು' (ಇದು ಅವರದೇ ಶಬ್ದ) ಓಡಿಸಿ ಇತ್ಯರ್ಥಗೊಳಿಸಿದ್ದಾರೆ. (ಉದಾ.ಗೆ ಕವಿಪರಮೇಷ್ಠಿಯ ಲಭ್ಯವಾಗದ ಕೃತಿ - ಕನ್ನಡದಲ್ಲೇ ಇತ್ತೆಂಬುದು). ಲಭ್ಯವಿರುವ ನಿಶ್ಚಿತಾಂಶಗಳು, ಯುಕ್ತ ಗ್ರಹಿಕೆ ಮತ್ತು ಊಹೆ - ಇವು ಮೂರರ ಸಂಗಮ ಅವರ ಬಹುತರ ಎಲ್ಲ ಸಂಶೋಧನೆಗಳಲ್ಲಿ ಕಂಡು ಬರುತ್ತದೆ.

ಮುಂಬಯಿ ವಿಶ್ವವಿದ್ಯಾಲಯವು ಅವರ 'ಕವಿರಾಜಮಾರ್ಗ ಪ್ರಶಸ್ತಿ'ಗೆ ಡಿ.ಲಿಟ್ ಪದವಿಯನ್ನು ದಯಪಾಲಿಸಿತ್ತು(೧೯೮೬). ಅವರಿಗೆ ಆಗ 81 ವರ್ಷ. ಮುಂಬಯಿ ವಿಶ್ವವಿದ್ಯಾಲಯದ ಘಟಿಕೋತ್ಸವದ ಕಾಲಕ್ಕೆ ಒಬ್ಬ ಸ್ನಾತಕನಿಗೆ ಮಾತ್ರ ವೇದಿಕೆಯ ಮೇಲೆ ಕರೆದು ಸಾಂಕೇತಿಕವಾಗಿ ಪದವೀದಾನ ಮಾಡುವ ಕ್ರಮವಿರುತ್ತದೆ. ಆ ವರ್ಷದ ಘಟಿಕೋತ್ಸವ ಸಮಾರಂಭಕ್ಕೆ ಎರಡು ದಿನ ಮೊದಲು ಕುಲಪತಿಗಳು ನನಗೆ ಫೋನಿಸಿ (ನಾನಾಗ ಅಲ್ಲಿಯ ಕನ್ನಡ ವಿಭಾಗದ ಮುಖ್ಯಸ್ಥನಾಗಿ ಇದ್ದೆ). "ಸಮಾರಂಭಕ್ಕೆ ಚಿಟಗುಪ್ಪಿಯವರನ್ನು ಕರೆತರಬೇಕು" ಎಂದು ಹೇಳಿದರು. "ಅವರೀಗ 80ನ್ನು ದಾಟಿದ ವೃದ್ಧರು" ಎಂದೆ. "ಅದಕ್ಕೇನೆ ಪದವೀದಾನಕ್ಕಾಗಿ ಅವರನ್ನು ಆಯ್ದದ್ದು. ಈ ಇಳಿ ವಯಸ್ಸಿನಲ್ಲಿ ಅದೆಷ್ಟು ಜನ ಡಿ.ಲಿಟ್ ಪಡೆದವರಿದ್ದಾರೆ? ಅವರನ್ನು ಕರೆತರಲು ಕಾರನ್ನು ಕಳಿಸುವೆ" ಎಂದಿದ್ದರು. ಆದರೇನು, ಚಿಟಗುಪ್ಪಿಯವರು ಮೊಮ್ಮಗಳ ಮದುವೆಗೆಂದು ಹುಬ್ಬಳ್ಳಿಗೆ ಹೋಗಿದ್ದರು. ಮರಳಿ ಬಂದ ಮೇಲೆ ಈ ವಿಷಯ ತಿಳಿಸಿದಾಗ ಹಳಹಳಿಸಿದರು. ತಮಗಾಗಿ ಅಲ್ಲ; ಈ ಪ್ರಸಂಗದಿಂದ ಮುಂಬಯಿಯಲ್ಲಿ ಕನ್ನಡ ಅಧ್ಯಯನ ರಂಗಕ್ಕೆ ದೊರೆಯಬಹುದಿದ್ದ ಗೌರವ ತಪ್ಪಿತೆಂದು.

ಹಳಗನ್ನಡ ವಿಚಾರದಲ್ಲಿ ಆದಿಮ ಕವಿರಾಜಮಾರ್ಗದಿಂದ ಹಿಡಿದು ಆಧುನಿಕ ಪೂರ್ವದ ಮುದ್ರಾಮಂಜೂಷದ ವರೆಗೆ ಅವರ ಸಂಶೋಧನ ವ್ಯಾಪ್ತಿ ಕಂಡು ಬರುತ್ತದೆ. ವಡ್ಡಾರಾಧನೆಯ ಆಕರಗಳು, ಕರ್ತೃತ್ವ ಮತ್ತು ರಚನಾಕಾಲದ ಬಗ್ಗೆ ಮರುಚಿಂತನೆ ನಡೆಸಿ ಕೆಲವು ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಪಂಪ ಮತ್ತು ರನ್ನರ ಮಹಾಭಾರತ - ಗದಾಯುದ್ಧಗಳಲ್ಲಿ, ಅರ್ಜುನನ (ಅರಿಕೇಸರಿಯ) ಪಟ್ಟಾಭಿಷೇಕ ಮುಂತಾದ ವಿಸಂಗತಿಗಳಿವೆಯಷ್ಟೆ. ನಮಗೆ ಹಾಗೆ ಕಂಡರೂ ಆ ಕವಿಗಳಿಗೆ ಅದು 'ಉಭಯಾಭೇದ ರೂಪಕಾಲಂಕಾರ' ವಾಗಿತ್ತು ಎಂದಿದ್ದಾರೆ. ಆಂಡಯ್ಯನ ಬಗೆಗೂ ಒಂದು ಹೊಸ ದೃಷ್ಟಿಕೋನದ ಲೇಖನವಿದೆ.

ಆದರೆ ಛಂದಸ್ಸು ಅವರ ವಿಶೇಷ ಒಲವಿನ ವಿಷಯವಾಗಿದ್ದಿತು. 'ರನ್ನನ ಮೂರು ಸಮಸ್ಯಾತ್ಮಕ ಛಂದೋಬಂಧಗಳು', 'ಪದ್ದಳಿ' ಎಂಬ ಅಪೂರ್ವ ಛಂದೋಬಂಧ, ವಚನ, ಉಗಾಭೋಗ, ಸುಳಾದಿಗಳ ತುಲನೆ ಮುಂತಾದವುಗಳು ಅವರ ವಿಶೇಷ ಕೊಡುಗೆಯೆನ್ನಬೇಕು. 'ಸಂಸ್ಕೃತ ಛಂದಸ್ಸಿಗೆ ಕನ್ನಡ ಛಂದಸ್ಸಿನ ಕಾಣಿಕೆ' ಎನ್ನುವುದೂ ಹೊಸ ಮಾತುಗಳನ್ನು ಒಳಗೊಂಡಿದೆ. ಯಕ್ಷಗಾನದ ಬಗ್ಗೆಯೂ ಅವರ ವಿವೇಚನೆ ಸಾಗಿ ಬಂದಿದೆ. ಕನ್ನಡ ಸಾಹಿತ್ಯದಲ್ಲಿ 'ಕೊರವಂಜಿಯ ಪಾತ್ರ' - ಇದು ಅವರ ಕೊನೆಗಾಲದ ಒಂದು ಪ್ರಬಂಧವಾಗಿದೆ.

ಅವರು ತುಂಬಾ ಧರ್ಮಪರರು. ಆ ನಿಮಿತ್ತದಿಂದಲೂ ಹಲವು ಲೇಖಗಳು ಪ್ರಕಟಗೊಂಡಿವೆ. ಮೊದಲ ಲೇಖವು ಹನುಮಂತನ ಅವತಾರತ್ರಯದ ಕುರಿತಿದ್ದೆಂಬುದನ್ನು ನೋಡಿದ್ದೇವೆ. ಹರಿದಾಸರು ಬೌದ್ಧಾವತಾರವನ್ನು ಕಂಡ ಬಗೆ ಮತ್ತು ತೊರವೆ ರಾಮಾಯಣದ ವಿವೇಚನೆ ಈ ಸದರಿನಲ್ಲಿ ಬರುವಂತಹವೇ. ಅವರ ಕಟ್ಟಕಡೆಯ ಬರಹವು ಭೀಮನಿಂದ ದುಶ್ಯಾಸನನ ರಕ್ತಪಾನ ಮತ್ತು ಅವನು ಊರು ಭಂಗ ಮಾಡಿದ್ದರ ಆರೋಪದ ಸಮರ್ಥನೆಯನ್ನು ಕುರಿತದ್ದು.

ಅಂತೂ ಅವರ ಯಾವುದೇ ವಿಷಯದ ಬರಹವಿರಲಿ, ಅದರಲ್ಲಿ ಅವರ ಆಳವಾದ ಅಧ್ಯಯನ, ಚಿಂತನೆಗಳು ಮುಪ್ಪುರಿಗೊಂಡಿರುವ ವಿಷಯವಾಗಿ ನಮ್ಮ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಅಲ್ಲದೆ ಅವರು ಯಾರ ಉಸಾಬರಿಗೆ ಹೋಗದೇ ಹೊರನಾಡಿನಲ್ಲಿದ್ದು ಕೊಂಡು ಮೌಲಿಕ ಸಂಶೋಧನೆ ಕೈಗೊಂಡದ್ದು ಬಹುಕಾಲ ನೆನೆಯಬೇಕಾದ ಪ್ರಮೇಯವಾಗಿದೆ.

ಅಂದ ಹಾಗೆ ಅವರು ಕನ್ನಡ ಟೈಪ್‌ರೈಟರ್ ಯಂತ್ರವನ್ನು 1950ರ ದಶಕದಲ್ಲಿ ನಿರ್ಮಿಸಿದರು - ಕೈ ಬರಹದ ಲಿಪಿಯಲ್ಲಿ ಯಾವ ಬದಲಾವಣೆಯಿಲ್ಲದೇ. ಅದು ಡಿ.ಪಿ.ಜಿ.ಯವರಿಗೆ ಹಿಡಿಸಿತ್ತು. ತಮ್ಮ ಯಂತ್ರವನ್ನು ಆಗಿನ ಮೈಸೂರು ಸರಕಾರದ ಕೇಳಿಕೆಯ ಮೇರೆಗೆ ಕಳಿಸಿಯೂ ಇದ್ದರು. 1956ರಲ್ಲಿ ಏಕೀಕರಣವಾದ ಮೇಲೆ ಬೇರೊಂದು ಸಮಿತಿಯ ನೇಮಕವಾಗಿ ಸಮ್ಮತವಾದಂಥ ಅಧಿಕೃತ ಕೀಬೋರ್ಡ್ ಅವರದ್ದೇ ಸುಧಾರಿತ ಮಾದರಿಯಾಗಿತ್ತು. ಅವರದು ಮಾತ್ರ ಸರಕಾರೀ ಕೋಣೆಯೊಂದರ ಮೂಲೆಯಲ್ಲಿ ಇನ್ನೂ ಬಿದ್ದುಕೊಂಡಿರಬೇಕು!

ಅವರ ನನ್ನ ಸಂಬಂಧ 40-45 ವರ್ಷಗಳ ಹಿಂದಿನದು. ಅವರ ಸ್ವಭಾವ ಸರಳತೆಗೆ

ನಾನು ಆಗ ಮಾರುಹೋಗಿದ್ದೆ. ಅವರು ಕನ್ನಡ ಅಧ್ಯಯನಕ್ಕೆ ತೊಡಗಿದಾಗ ಅವರಿಗೆ ಗ್ರಂಥಗಳನ್ನು ಒದಗಿಸುವ ಮೂರು ನಾಲ್ಕು ಜನರಲ್ಲಿ ನಾನೂ ಒಬ್ಬನಾಗಿದ್ದೆ. ಆ ರೀತಿಯ ಅವರ ಬೇಡಿಕೆಗಳನ್ನು ಒಬ್ಬರೇ ಆಗಲಿ, ಒಂದೇ ಲೈಬ್ರರಿಯಾಗಲಿ ಪೂರೈಸುವಂತಿರಲಿಲ್ಲ! ಅವರು ನಾಗವರ್ಮನ ಛಂದೋವಿಚಿತಿಯ ಬಗ್ಗೆ ಬರೆದ ಲೇಖನವನ್ನೋದಿದಾಗ ಅವರ ವಿದ್ವತ್ತಿನ ಆಳ ಹಾಗೂ ಸಂಶೋಧನ ಮೌಲಿಕತೆಯ ಅರಿವಾಯಿತು. ಆಗ ಅವರಿಗೆ ಒಳನಾಡಿನ ಯಾವ ಪತ್ರಿಕಾ ಸಂಪಾದಕರಾಗಲೀ, ಪ್ರಕಾಶಕರಾಗಲೀ ತಿಳಿದಿರಲಿಲ್ಲವಾದ್ದರಿಂದ ಪ್ರಕಟನ ಕಾರ್ಯದಲ್ಲಿ ನೆರವಾಗುತ್ತಿದ್ದೆ. ಯಾವುದೊಂದು ಸಂಶೋಧನ ಲೇಖ ಮುಗಿದೊಡನೆ, "ಇನ್ಯಾವ ವಿಷಯ ಎತ್ತಿಕೊಳ್ಳಲಿ" ಎಂದು ಕೇಳುತ್ತಿದ್ದರು. "ನಿಮ್ಮ ಒಲವಿನ ವಿಷಯವಾದ ಛಂದಸ್ಸು - ಭಾರತೀಯ ಛಂದಸ್ಸಿನ ಬಗ್ಗೆಯೇ ಬರೆಯಿರಿ" ಎಂದೊಮ್ಮೆ ಸೂಚಿಸಿದ್ದೆ. ಆದರೆ ಅಷ್ಟೊಂದು ಪರಿಶ್ರಮದ ಕಾಯಕಕ್ಕೆ ಅವರ ಮುಪ್ಪಾದ ಕಾಯ ಸಿದ್ಧವಿರಲಿಲ್ಲ. ಕೊನೆಗಾಲದ ತಮ್ಮೊಂದು ಪತ್ರದಲ್ಲಿ "ಬರಲಿರುವ ನವೆಂಬರ್ 4 ರಂದು ನನಗೆ 92 ವರ್ಷಗಳು ಪೂರ್ಣವಾಗುತ್ತವೆ. ಭಗವಂತನ ಕೃಪೆಯಿಂದ ಡಯಾಬಿಟೀಸ್, ರಕ್ತದ ಒತ್ತಡ ಮೊದಲಾದ ಗಂಭೀರ ಸ್ವರೂಪದ ವೃದ್ಧಾಪ್ಯದ ಕಾಯಿಲೆಗಳಿಲ್ಲ. ಆದರೆ ಹೆಚ್ಚು ನಡೆದಾಡಲು ಆಗುವುದಿಲ್ಲ" ಎಂದು ಬರೆದಿದ್ದರು. ಮರು ತಿಂಗಳಲ್ಲಿ ಬರೆದ 'ಭೀಮನ ಮೇಲೆ ರಕ್ತಪಾನದ ಆರೋಪ ಎಷ್ಟರ ಮಟ್ಟಿಗೆ ಸರಿ' - ಎಂಬ ವಿಷಯದ ಲೇಖವೇ ಕೊನೆಯದೆಂದು ಕಾಣುತ್ತದೆ. "ಭಗವದಿಚ್ಛೆ ಇನ್ನೂ ಏನೇನೂ ಬರೆಯಬೇಕೆಂದಿದ್ದೆ. ಕೈಸಾಗದಂತಾಗಿದೆ. ಮುಪ್ಪು ಒತ್ತರದಿಂದ ಬರತೊಡಗಿದೆ. ಕಣ್ಣು ಮಂಜಾಗತೊಡಗಿದೆ. ಕೈ ನಡುಗುತ್ತದೆ" ಎಂಬ ಅವರ ಒಕ್ಕಣಿಕೆ ನನಗೆ ಬೇಸರ ಮೂಡಿಸಿತ್ತು. ನನ್ನ ಉತ್ತರ ಮುಂಬಯಿ ತಲುಪುವ ಮುಂಚೆಯೇ ಹೋಗಿಬಿಟ್ಟರು.

ಹಾಂ. ಇದೊಂದು ಸಂಗತಿಯನ್ನು ಕಾಣಿಸಬೇಕು. ಹತ್ತು ವರ್ಷಗಳ ಹಿಂದೆ ಮುಂಬಯಿಯ ಅವರ ಅಭಿಮಾನಿಗಳು ಅವರಿಗೆ ಅರಿಯದಂತೆ ರಾಜ್ಯೋತ್ಸವ ಪ್ರಶಸ್ತಿ ಸಿಗುವುದಕ್ಕೆ ಪ್ರಯತ್ನಿಸಿದ್ದರು. ಅವರು ಹೊರನಾಡಿನ ಉಚ್ಚತಮ ವಿದ್ವಾಂಸರೆಂದು. ಆದರೆ ಆ ಪ್ರಯತ್ನಕ್ಕೆ ಫಲ ಸಿಕ್ಕಿರಲಿಲ್ಲ. ಅದಾಗಿ ಎರಡು ಮೂರು ತಿಂಗಳು ಕಳೆದ ಮೇಲೆ ನಾನು ಮುಂಬಯಿಯಲ್ಲಿ ಭೆಟ್ಟಿಯಾದಾಗ ಅದನ್ನು ಪ್ರಸ್ತಾಪಿಸಿದೆ. "ಅಲ್ರೆಪಾ, ಟ್ರೇನ್ ರಿಸರ್ವೇಶನ್ನಿಗೆ ಇದ್ದಾಂಗ ಇಲ್ಲಿಯೂ waiting list ಅಂತ ಇರೋದಿಲ್ಲೇನು?" ಎಂದು ನಗೆಯಾಡಿದ್ದರು. ಆಮೇಲೆ ತಾವೇ "ಹೋಗಲಿ ಬಿಡ್ರಿ. ಈಗ ಅದನ್ನ ತಗೊಂಡು ಏನು ಮಾಡೋದದ?" ಎಂದು ನಿರ್ಲಿಪ್ತ ಭಾವನೆಯಿಂದ ಹೇಳಿದ್ದರು.

ಆದರೆ ನನಗೆ ಬೇರೊಂದು ವಿಚಾರವಾಗಿ ಬೇಸರವಾಯಿತು. ಅವರೇನೊ ತುಂಬು ಜೀವನ ನಡೆಸಿ, ಸಾರ್ಥಕ ಸಾಹಿತ್ಯವನ್ನು ರಚಿಸಿ ಹಣ್ಣು ವಯಸ್ಸಿಗೆ ಮೃತರಾದರು. ಆದರೆ ಅವರಿಂದ ಮುಂಬಯಿಯಲ್ಲಿ ಇದ್ದ ಏಕಮೇವ ವಿದ್ವಾಂಸ - ಕನ್ನಡಿಗ ಇಲ್ಲದಂತಾಯಿತು. ಈಗ ಅವರ ಸಮಸ್ತ ಸಂಶೋಧನ ಕೃತಿಗಳನ್ನು ಸಂಕಲಿಸಿ ಪ್ರಕಟಿಸುವ ಪ್ರಯತ್ನ ನಡೆದಿದೆ.

ಶ್ರೀ. ಪಾ.

ಡಾ. ಭೀಮರಾವ್ ಚಿಟಗುಪ್ಪಿ

ಮೊದಲ ಮಾತು

ಕನ್ನಡ ಸಾಹಿತ್ಯಕ್ಕೆ ೧೦೦೦ ವರ್ಷ ಮಿಕ್ಕಿದ ಇತಿಹಾಸವಿದ್ದರೂ ಪ್ರಾರಂಭದಲ್ಲಿಯೇ ಕವಿರಾಜಮಾರ್ಗದಂಥ ಪ್ರೌಢ ಲಕ್ಷಣಗ್ರಂಥ ವಿಕ್ರಮಾರ್ಜುನವಿಜಯದಂಥ ಲಕ್ಷಣಬದ್ಧ ಲಲಿತ ಕಾವ್ಯಕೃತಿಗಳು ಮೈದಾಳಿದ್ದರೂ ಕಾಳಿದಾಸ ಭವಭೂತಿಗಳ ಶಾಕುಂತಲ ಉತ್ತರ ರಾಮ ಚರಿತೆ ಬಗೆಯ ಅಭಿಜಾತ ನಾಟಕಗಳ ಅಭಾವ ಎದ್ದುಕಾಣುವಂತಿದೆ. ಅನುಕೃತಿ ಇರಲಿ, ಸ್ವತಂತ್ರವಿರಲಿ, ಅಂಥ ನಾಟಕಗಳಿಗೆ ಕ್ರಿ.ಶ. ೧೯ನೇ ಶ.ದ ಉತ್ತರಾರ್ಧದ ವರೆಗೆ ದಾರಿ ಕಾಯಬೇಕಾಯಿತು. ಮಧ್ಯಂತರದಲ್ಲಿ ಅಂದರೆ ಸು. ೨೦೦ ವರ್ಷ ಮೊದಲು ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' ಹೊರಬಂದಿದ್ದರೂ ಶಾಸ್ತ್ರ ದೃಷ್ಟಿಯಿಂದ ಅದು ನಾಟಕದ ಲಕ್ಷಣಗಳಿಗೆ ಹೊಂದುವಂತಿಲ್ಲ. ಅದು ಕನ್ನಡವಲ್ಲಿ ಇರುವುದರಿಂದ ಸಟ್ಟಕ(?). ನಾಟಕಕ್ಕಿಂತ ದರ್ಜೆಯಲ್ಲಿ ಕೆಳಗಿನದು. ಅನಂತರ ಕಾಣಸಿಗುವುದು ಚುರಮರಿ ಶೇಷಗಿರಿಯಾರ ಸಂಸ್ಕೃತದಲ್ಲಿರುವ ಮಹಾಕವಿ ಕಾಳಿದಾಸನ ಲಕ್ಷಣಬದ್ಧ ಅಭಿಜಾತ ನಾಟಕ ಅಭಿಜ್ಞಾನ ಶಾಕುಂತಲದ ಅನುವಾದ. ಅದು ಹೊರಬಂದದ್ದು ೧೮೭೦ರಲ್ಲಿ. ತುಸು ಹೆಚ್ಚು ಕಡಿಮೆ ಈ ಪರಿಸ್ಥಿತಿ ಇತರ ಜಾತೀಯ ಭಾಷೆಗಳಲ್ಲಿನ ನಾಟ್ಯ ಸಾಹಿತ್ಯಕ್ಕೂ ಅನ್ವಯಿಸುವುದು. ಶಾಕುಂತಲದಂಥ ಪ್ರಥಮ ಶ್ರೇಣಿಯ ನಾಟಕಗಳನ್ನು ಬಿಟ್ಟು ಪರಿವರ್ತನೆಗಾಗಿ ಸಿಂಗರಾರ್ಯ ಅವಕ್ಕಿಂತ ಕೆಳಗಿನ ವರ್ಗಕ್ಕೆ ಸೇರಿದ ನಾಟಿಕೆಯನ್ನೇಕೆ ಆರಿಸಿಕೊಂಡನೆಂಬುದು ಇನ್ನೊಂದು ಪ್ರಶ್ನೆ.

ಚುರಮರಿ ಬೆಳೆದು ಬಾಳಿದ ಕಾಲ ಕನ್ನಡದ ಮಟ್ಟಿಗೆ ಅತ್ಯಂತ ನಿಕೃಷ್ಟ ಪರಿಸ್ಥಿತಿಯ ಕಾಲ. ಕನ್ನಡಿಗರಿಗೆ, ಅದರಲ್ಲೂ ಬಹುಸಂಖ್ಯೆ ಉತ್ತರ ಕರ್ನಾಟಕದವರಿಗೆ, ತಾವು ಕನ್ನಡಿಗರು, ತಾವಿರುವುದು ಕನ್ನಡ ನಾಡು ಎಂಬುದರ ಅಭಿಮಾನವಿರಲಿ, ಅರಿವು ಕೂಡ ಇದ್ದ ಕಾಲ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಮುಂಬಯಿಯಂಥ ಹೊರನಾಡಿನಲ್ಲಿ ಕೆಲಸ ಮಾಡುತ್ತಿದ್ದರೂ ಕಾಳಿದಾಸನ ಈ ಮೇರುಕೃತಿಯನ್ನು ಕನ್ನಡಿಸಿ, ಅಲ್ಲಿಯೇ ಮುದ್ರಿಸಿ, ಪ್ರಕಟಿಸಿದ್ದು ಸಾಹಸದ ಮಾತೇ ಸೈ. ಕಂದ ವೃತ್ತಾದಿ ಪರಂಪರಾಗತ ಛಂದೋರೂಪಗಳೊಂದಿಗೆ ಆ ಕಾಲದಲ್ಲಿ

ಲೋಕಪ್ರಿಯವಿದ್ದ ಕರ್ನಾಟಕ ಹಿಂದೂಸ್ತಾನಿ ಮಟ್ಟುಗಳಲ್ಲಿನ ರಾಗ ತುಂಬಿದ್ದ ಹಾಡುಗಳು ಮತ್ತು ದಿನಬಳಕೆಯ ಸುಲಭ ಗದ್ಯ ಅವರ ಕೃತಿಯ ಎದ್ದು ಕಾಣುವಂಥ ವೈಶಿಷ್ಟ್ಯಗಳು. ಇತರತ್ರ ಏನೇ ಇದ್ದರೂ ಕನಿಷ್ಠ ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಈ ಬಗೆಯ ಅಂದರೆ ಸಾಗ್ರ ಸಂಗೀತ ನಾಟಕಗಳಿಗೆ ಅವರದು ಮಾತೃಸ್ಥಾನದಲ್ಲಿದ್ದ ಕೃತಿ ಎಂದು ಧಾರಾಳವಾಗಿ ಹೇಳಬಹುದು. ಚುರಮುರಿ ಕೃತಿ ಮುದ್ರಿತ ರೂಪದಲ್ಲೇನೋ ಬಂದಿತು. ಆದರೆ ರಂಗಕ್ಕೆ ಬರಲಿಲ್ಲ. ಅದಕ್ಕೆ ಮುಂದೆ ೨೯ ವರ್ಷಗಳು ಗತಿಸಬೇಕಾಯಿತು. ನಾಟಕ ರಚನೆ ಬೇರೆ, ಪ್ರದರ್ಶನ ಬೇರೆ. ಪ್ರದರ್ಶನ ಪ್ರತ್ಯೇಕ ಕಲೆ. ಅದಕ್ಕಾಗಿ ಕುಶಲನ ನಟಸಂಚಯವಲ್ಲದೆ, ಅನ್ಯ ಪರಿಕರಗಳ ಸಂಯೋಜನೆ, ಹತ್ತಿಪ್ಪತ್ತು ಜನರ ಹತ್ತಿಪ್ಪತ್ತು ಬಗೆಯ ಸಕ್ರಿಯ ಸಹಕಾರ ಬೇಕು. ಮೂಲತಃ ಬುದ್ಧಿ-ಜೀವಿ, ಪತ್ನೀ ವಿಯೋಗದಿಂದ ದಿನದಿನಕ್ಕೇ ಅಂತರ್ಮುಖಿಯಾಗತೊಡಗಿದ್ದ ಚುರಮುರಿಗೆ ಆ ಜೊಂಜಾಟ ಬೇಡೆನಿಸಿದ್ದರೆ ಅದೇನು ಅಂಥ ಅಚ್ಚರಿಯ ಮಾತಾಗದು. ಆದರೂ ಅವರ ಜೀವಮಾನದಲ್ಲಿಯೇ ಅವರ ಕೃತಿ ಎರಡು ಆವೃತ್ತಿಗಳನ್ನು ಕಂಡಿತು, ಅದರಲ್ಲಿನ ಹಾಡುಗಳು ಜನಸಾಮಾನ್ಯರಲ್ಲಿ ಸಾರ್ವಜನಿಕ ಉತ್ಸವ ಜಾತ್ರೆಗಳಲ್ಲಿ ಕೇಳಿಬರುತ್ತಿದ್ದವು ಎಂಬುದು ಸಾಮಾನ್ಯ ಪ್ರಶಸ್ತಿ ಎನ್ನುವಂತಿಲ್ಲ.

ಚುರಮುರಿ ಕೃತಿ ಬೆಳಕು ಕಂಡನಂತರ ಸುಮಾರು ೧೦ ವರ್ಷಗಳ ಬಳಿಕ (೧೮೮೧) ಆಗಿನ ಮೈಸೂರರಸರ ಪ್ರೇರಣೆಯಿಂದ ಆಸ್ಥಾನ ವಿದ್ವಾಂಸ ಬಸವಪ್ಪ ಶಾಸ್ತ್ರಿಗಳ ಕರ್ನಾಟಕ ಶಾಕುಂತಲ ಹೊರಬಂದಿತು. ಅರಮನೆಯ ನಾಟ್ಯ ಸಿಬ್ಬಂದಿ ಅದನ್ನು ರಂಗಕ್ಕೂ ತಂದಿತು. ಇತ್ತ ಮಹಾರಾಷ್ಟ್ರದಲ್ಲಿ ಒಂದು ವರ್ಷ ಮೊದಲು ಅಂದರೆ ೧೮೮೦ರಲ್ಲಿ ಅಣ್ಣಾಸಾಹೇಬ ಕಿರ್ಲೋಸ್ಕರ ಅವರ ಸಂಗೀತ ಶಾಕುಂತಲವು ರಂಗಭೂಮಿಯನ್ನು ಕಂಡಿತು. ಸ್ವರೂಪದಲ್ಲಿ ಚುರಮುರಿ ಕೃತಿಯಿಂದ ಅಭಿನ್ನವಿರುವ ಅವರ ಶಾಕುಂತಲ ಮುಂದೆ ತುಸು ಹೆಚ್ಚು ಕಡಿಮೆ ಅರ್ಧ ಶತಮಾನ ಕಾಲ ಕರ್ನಾಟಕ ಮಹಾರಾಷ್ಟ್ರ ರಂಗಭೂಮಿಗಳನ್ನಾಳಿದ, ಅಂಥ ಬಗೆಯ ಅಂದರೆ ಸಾಗ್ರ ಸಂಗೀತ ನಾಟಕಗಳಿಗೆ ನಾಂದಿಯಾಗಿ ವಿಕ್ರಮವನ್ನು ಸ್ಥಾಪಿಸಿತು.

ಚುರಮುರಿ ಕೃತಿಯ ನಾಲ್ಕನೆಯ ಮುದ್ರಣಕ್ಕಿರುವ (೧೯೩೪) ಪರಿಚಯಾತ್ಮಕ ಮುನ್ನುಡಿಯಲ್ಲಿ ದಿ. ಮುದವೀಡು ಕೃಷ್ಣರಾಯರು ಚುರಮುರಿ ಬಸವಪ್ಪ ಶಾಸ್ತ್ರಿಗಳ ಅನುವಾದಗಳನ್ನು ಹೋಲಿಸಿ ಚುರಮುರಿ ಕೃತಿಯಲ್ಲಿನ ಸೌಂದರ್ಯಾಂಶಗಳನ್ನು ಎತ್ತಿ ತೋರಿಸಿದ್ದು, ಮತ್ತು ಚುರಮುರಿ ಕೃತಿಯನ್ನು ಮಾದರಿಯಾಗಿಟ್ಟುಕೊಂಡು ಕಿರ್ಲೋಸ್ಕರರು ತಮ್ಮ ಕೃತಿಯನ್ನು ರಚಿಸಿದರೆಂಬ ಅವರ ಮಾತು, ಈರ್ವರ ಅಭಿಮಾನಿಗಳಿಗೆ ರುಚಿಸಲಿಲ್ಲ. ಶಾಸ್ತ್ರಿಗಳ ಕೃತಿ ಹೊಸ ಬಗೆಯ ಪಾರ್ಸಿ ನಾಟಕಗಳನ್ನು ಮೆಚ್ಚಿಕೊಂಡು ಕನ್ನಡದಲ್ಲೂ ಅಂಥ ನಾಟಕಗಳ ರಚನೆಯಾಗಲೆಂಬ ಮಹಾರಾಜರ ಆದೇಶಾನುಸಾರ ಹುಟ್ಟಿಕೊಂಡಿದ್ದರೂ ಆ ಅಂಶವನ್ನು ಅಷ್ಟಕ್ಕೇ ಬಿಟ್ಟು ಅವರ ಭಾಷಾಂತರ ಕೌಶಲ್ಯವನ್ನಷ್ಟೇ ಎತ್ತಿ ಹಿಡಿದು ಚುರಮುರಿಯವರದು ಭಾಷಾಂತರವೇ ಅಲ್ಲ, ಶಾಸ್ತ್ರಿಗಳೆಲ್ಲಿ, ಚುರಮುರಿ ಎಲ್ಲಿ? ಮುದವೀಡರದು ಕೇವಲ ಪ್ರಾಂತಾಭಿಮಾನ ಎನ್ನುವವರಿಗೆ

ವಾದ ಬೆಳೆಯಿತು. ಇತ್ತ ಮಹಾರಾಷ್ಟ್ರದಲ್ಲಿ 'ಕಿರ್ಲೋಸ್ಕರರದು ಸ್ವಯಂ ಪ್ರೇರಣೆಯಿಂದ ರಚಿತವಾದ ಕೃತಿ; ಮರಾಠಿಯಲ್ಲಿಯೇ ಎರಡು ಮೂರು ಶಾಕುಂತಲದ ಅನುವಾದಗಳಿದ್ದವು. ಇಷ್ಟವೆನಿಸಿದ್ದರೆ ಅವರು ಸುಲಭದಲ್ಲಿ ಅವುಗಳ ನೆರವು ಪಡೆಯಬಹುದಿತ್ತು, ಅದನ್ನು ಬಿಟ್ಟು ಕನ್ನಡದತ್ತ ಕೈ ನೀಡುವ ದ್ರಾವಿಡ ಪ್ರಾಣಾಯಾಮದ ಅಗತ್ಯವೇನಿದ್ದಿತೆಂಬ ವಾದ' ತಲೆ ಎತ್ತಿತು. ಒಬ್ಬರಂತೂ ಚುರಮರಿಯೇ ಕಿರ್ಲೋಸ್ಕರರನ್ನು ಅನುಸರಿಸಿರುವರೆಂದು ಪ್ರಸ್ತಾಪಿಸಲೆತ್ನಿಸಿದರು; ಮುದವೀಡರ ಮಾತು 'ಮಿಥ್ಯಾಯಿಕೆ' ಎಂದು ಹೀಗಳೆದರು.

ಒಳತಿರುಳು

ಸಂಸ್ಕೃತ ಮೂಲ ಮತ್ತು ಚುರಮರಿ, ಬಸವಪ್ಪ ಶಾಸ್ತ್ರಿ, ಕಿರ್ಲೋಸ್ಕರ ಅನುವಾದಗಳನ್ನು ಜೊತೆ ಜೊತೆ ನೋಡಿದಾಗ ಆಂತರಿಕ ಪ್ರಮೇಯವೊಂದು ಇಣಕಿಕ್ಕಿತು. ಪ್ರಚಾರದಲ್ಲಿರುವ ಶಾಕುಂತಲದ ಸಂಸ್ಕೃತ ಮೂಲ ಮತ್ತು ಬಸವಪ್ಪ ಶಾಸ್ತ್ರಿ ಕಿರ್ಲೋಸ್ಕರ ಅನುವಾದಗಳಲ್ಲಿಲ್ಲದ ಕೆಲವು ಶ್ಲೋಕ ಮಾತುಗಳು ಚುರಮರಿ ಅನುವಾದದಲ್ಲಿ ಕಾಣಸಿಗುತ್ತವೆ. ಅವು ಕೂಡ ಇತರ ಕೆಲವು ಹೊಸ ಶ್ಲೋಕ /ಹಾಡುಮಾತುಗಳೊಂದಿಗೆ ಚುರಮರಿ ಸ್ವಂತದವು ಎಂಬ ಅಭಿಪ್ರಾಯಕ್ಕೆ ಬರುವ ಮುನ್ನ ಮೂಲ ಶಾಕುಂತಲದ ಬೇರೆ ಬೇರೆ ಸಂಸ್ಕರಣಗಳ ಪರಿಶೀಲನೆ ಅಗತ್ಯವೆನಿಸಿ ಅದನ್ನು ಕೈಕೊಳ್ಳಬೇಕಾಯಿತು.

ಇವೆಲ್ಲ ಪ್ರಮೇಯ ಪ್ರತಿಭಟನೆಗಳ ಯಥಾಮತಿ - ಯಥಾಶಕ್ತಿ ವಿವೇಚನೆ ಇರುವ ಪ್ರಕೃತ ಪ್ರಬಂಧವನ್ನು ಏಳು ಅಧ್ಯಾಯಗಳಲ್ಲಿ ವಿಂಗಡಿಸಿದೆ. 'ವಿಷಯೋಪಕ್ಷೇಪ' ಎಂಬ ಮೊದಲನೇ ಅಧ್ಯಾಯದಲ್ಲಿ ಕನ್ನಡದಲ್ಲಿ (ಆನುಷಂಗಿಕವಾಗಿ ಇತರ ಭಾರತೀಯ ಭಾಷೆಗಳಲ್ಲಿ) ಅಭಿಜಾತ ನಾಟಕಗಳ ಆವಿರ್ಭಾವಕ್ಕೆ ಇಷ್ಟೊಂದು ವಿಲಂಬವೇಕಾಯಿತು, ಕನ್ನಡದಲ್ಲಿ ಒಂದರ್ಥದಲ್ಲಿ ಸಿಂಗರಾರ್ಯನಿಗೆ ಅಭಿಜಾತ ನಾಟಕಗಳ ಆದ್ಯತನ ಪಟ್ಟವನ್ನು ಕೊಡಬಹುದಾಗಿದ್ದರೂ ಶಾಸ್ತ್ರ ದೃಷ್ಟಿಯಿಂದ ಅದರ ಸ್ವರೂಪವೇನು, ದೇಶೀ ರಂಗಭೂಮಿ, ಪಾಶ್ಚಿಮಾತ್ಯ ಸಂಪರ್ಕದಿಂದ ನಾಟಕ ರಚನೆ ಮತ್ತು ಪ್ರದರ್ಶನ ರೀತಿ ನೀತಿಗಳಲ್ಲಿ ಆವರೆಗೆ ನಿಷ್ಠೆಯಿಂದ ಪಾಲಿಸಲಾಗುತ್ತಿದ್ದ ಶಾಸ್ತ್ರ ಪರಂಪರೆಗಳಲ್ಲಿ ಉಂಟಾದ ಶೈಥಿಲ್ಯ, ಪಾರ್ಸಿ ನಾಟಕಗಳ ಉಗಮ, ವಿಕಾಸ, ಕೊನೆಗೊಮ್ಮೆ ಅಭಿಜಾತ ನಾಟಕಗಳ ಪ್ರಾದುರ್ಭಾವ ಮತ್ತು ಆನುಷಂಗಿಕ ವಿಷಯಗಳ ಸಿಂಹಾವಲೋಕನ ಸ್ವರೂಪದ ವಿವೇಚನೆ ಇದೆ.

ನಂತರ ಬಂದಿರುವುದು ಪ್ರಕೃತ ಪ್ರಬಂಧದ ನಾಯಕ ಚುರಮರಿಯವರ ಜೀವನ ವೃತ್ತಾಂತ. ಆ ಬಳಿಕ ಮೂಲ ಶಾಕುಂತಲ ಪ್ರತಿಗಳ ಸ್ವರೂಪ ಮತ್ತು ಭಾಷಾಂತರ ವಿಚಾರವನ್ನು ಎತ್ತಿಕೊಂಡಿದೆ. ಚುರಮರಿ ತಮ್ಮ ಕೃತಿಗೆ ಭಾಷಾಂತರವೆಂದಿದ್ದರೂ ಅನೇಕ ಸಂದರ್ಭಗಳಲ್ಲಿ ವಿಶೇಷವಾಗಿ ಹಾಡುಗಳ ವಿಚಾರದಲ್ಲಿ, ಭಾಷಾಂತರದ ಮಾನದಂಡಗಳನ್ನು ಪಾಲಿಸಿಲ್ಲ. ಕೆಲವೆಡೆ ಮೂಲದಲ್ಲಿ ಗದ್ಯವಿದ್ದುದ್ದನ್ನು ಪದ್ಯ/ಹಾಡಿನಲ್ಲಿ, ಪದ್ಯವಿದ್ದುದ್ದನ್ನು ಗದ್ಯದಲ್ಲಿ

ಪರಿವರ್ತಿಸಿರುವರು. ತಮ್ಮವೇ ಆದ ಹೊಸ ಪದ್ಯ/ಹಾಡು, ಮಾತುಗಳನ್ನು ಸೇರಿಸಿರುವರು. ಅನ್ಯ ಕೆಲವು ಮಾರ್ಪಾಟುಗಳಾದರೂ ಇವೆ. ಇವೆಲ್ಲ ವ್ಯತ್ಯಾಸಗಳಿಗೆ ಗ್ರಂಥಸ್ಥವಿಲ್ಲದಿದ್ದರೂ 'ಶಿಷ್ಟ ಪ್ರಯೋಗ' ಬಗೆಯ ಆಧಾರಗಳಿರಬೇಕೆಂದು ಬಗೆದು ಭಾಷಾಂತರ ಹೆಸರಿನಲ್ಲಿ ಅನ್ಯ ಭಾಷಾಕೃತಿಗಳನ್ನು ತಮ್ಮ ಭಾಷೆಗೆ ಪರಿವರ್ತಿಸಿ ಕೀರ್ತಿಶಾಲಿಗಳಾದ ಪೂರ್ವಿಕರು (ಇಂಗ್ಲಿಷ್, ಕನ್ನಡ) ಮತ್ತು ಆಧುನಿಕರಲ್ಲಿ ಡಿ.ವಿ.ಜಿ. ತಮ್ಮ 'ಗೀತ ಶಾಕುಂತಲ'ದಲ್ಲಿ ಅನುಸರಿಸಿದ ರೀತಿ ನೀತಿಗಳೊಂದಿಗೆ ಚುರಮುರಿ ಅನುಸರಿಸಿದ ರೀತಿ ನೀತಿಗಳ ಹೊಂದಾಣಿಕೆಯನ್ನು ಪರಾಮರ್ಶಿಸಿದೆ. ಅನಂತರ ಮೂಲ ಕೃತಿಯ ಘನತೆಯನ್ನು ಕುರಿತಾದ ನಾಲ್ಕು ಮಾತುಗಳೊಂದಿಗೆ ವಸ್ತುವಿನ್ಯಾಸ ರೂಪದಲ್ಲಿ ಚುರಮುರಿ ಅನುವಾದದ ವಿಸ್ತೃತ ಮೌಲ್ಯಾಂಕನವಿದೆ. ಶಾಕುಂತಲದಂಥ ನಾಟಕದಲ್ಲಿ ಚುರಮುರಿ ಬಗೆಯ ಗದ್ಯದ ಬಳಕೆ ಆಗಿನ ಕಾಲದಲ್ಲಿ ಸಾಹಸದ ಮಾತೇ ಆಗಿತ್ತೆಂಬ ವಿಮರ್ಶಕರ ಅಭಿಪ್ರಾಯವನ್ನು ಅನುಲಕ್ಷಿಸಿ ಮೌಲ್ಯಾಂಕನದಲ್ಲಿ ವಸ್ತು ನಿರೂಪಣೆಯ ಅಂಗವಾಗಿ ಅಷ್ಟಿಷ್ಟು ಮಾರ್ಪಾಟುಗಳೊಂದಿಗೆ ಸಾಧ್ಯವಿದ್ದಷ್ಟು ಅದನ್ನೇ, ಕೆಲವೆಡೆ ಯಥಾಮೂಲ, ಬಳಸಿದೆ.

ಚುರಮುರಿ - ಕಿರ್ಲೋಸ್ಕರ ವಾದದ ವಿಚಾರದಲ್ಲಿ ಈರ್ವರ ಕೃತಿಗಳಲ್ಲಿನ ಸಾಮ್ಯಾಂಶಗಳನ್ನು ಗುರುತಿಸಿ ತನ್ಮೂಲಕ ತಥ್ಯಾಂಶವನ್ನು ಕಾಣಲೆತ್ನಿಸಿದೆ. ಸಾಮ್ಯಾಂಶಗಳು ಹೆಚ್ಚಾಗಿ ಮೂಲ ಮತ್ತು ಕಿರ್ಲೋಸ್ಕರ ಪೂರ್ವ ಮರಾಠಿ ಅನುವಾದಗಳಲ್ಲಿಲ್ಲದ ಹಾಡುಗಳ ಪಲ್ಲವಿ, ಪದವಾಕ್ಯ ಪ್ರಯೋಗ ಇತ್ಯಾದಿಗಳಿಗೆ ಸಂಬಂಧಿಸಿವೆ. ಎರಡೂ ಅನುಕೃತಿಗಳಿರುವುದರಿಂದ ಇದು ಅನಿವಾರ್ಯ. ಕೊನೆಯದು ಉಪಸಂಹಾರ.

ಪ್ರಾರಂಭದಲ್ಲಿ ವಿವೇಚನಾತ್ಮಕವಿರುವ ಈ ಪ್ರಬಂಧದ ವ್ಯಾಪ್ತಿ ಚುರಮುರಿ ಕಿರ್ಲೋಸ್ಕರ ವಾದಕ್ಕಷ್ಟೇ ಸೀಮಿತವಿದ್ದಿತು. ಅದನ್ನು ಸಹಬಂಧು ಲೇಖಿಕ ಪ್ರಹ್ಲಾದ ಮುದಗಲ ಸ್ವಯಂ ಪ್ರೇರಣೆಯಿಂದ ಕೈಗೆತ್ತಿಕೊಂಡಿದ್ದರು. ಅದನ್ನು ಗಮನಿಸಿದ ೧೯ ನೇ ಶ. ಕನ್ನಡ ಸಾಹಿತ್ಯದ 'ಸ್ಪೆಶಲಿಸ್ಟ' ಡಾ. ಶ್ರೀನಿವಾಸ ಹಾವನೂರರು ಬಿಡಿ ಲೇಖಗಳಿಗಿಂತ ಚುರಮುರಿ ಕೃತಿಗೆ ಸಂಬಂಧಪಟ್ಟ ಎಲ್ಲ ಪ್ರಮೇಯ ವಾದವಿವಾದಗಳನ್ನು ಕ್ರೋಢೀಕರಿಸಿದ ವ್ಯಾಪಕ ವಿವೇಚನೆ ಹೆಚ್ಚು ಉಪಯುಕ್ತವಾದೀತೆಂದು ನನ್ನನ್ನೂ ಎಳೆದು ಈರ್ವರಿಗೂ ಈ ಕಾರ್ಯವನ್ನು ಒಪ್ಪಿಸಿದರು. ಅಗತ್ಯವಿರುವ ಎಲ್ಲ ಸಹಾಯ ಸಹಕಾರಗಳನ್ನು ನೀಡುವ ಭರವಸೆ ಕೊಟ್ಟರು.

ಹೀಗೆ ಈರ್ವರ ಸಂಯುಕ್ತ ಪರಿಶ್ರಮದಿಂದ ರೂಪಗೊಂಡ ಈ ವಿವೇಚನೆ ಓದುಗರಿಂದ ಮೂಲ ಶಾಕುಂತಲ ಮತ್ತು ಅದರ ಚುರಮುರಿ, ಬಸವಪ್ಪ ಶಾಸ್ತ್ರಿ, ಕಿರ್ಲೋಸ್ಕರ ಅನುವಾದಗಳ ಪೂರ್ವ ಪರಿಚಯವನ್ನು ಅಪೇಕ್ಷಿಸುತ್ತದೆ. ಉಚಿತ ವಿಮರ್ಶೆಗೆ (ಕಹಿ ಇರಲಿ, ಸಿಹಿ ಇರಲಿ) ಇದು ಇಷ್ಟ. ಒಂದೆರಡು ತಲೆಮಾರು ಮೊದಲು ಈ ಬಗೆಯ ಅಪೇಕ್ಷೆ ವಿಚಿತ್ರವೆನಿಸುತ್ತಿತ್ತು. ಈಗ ಕಾಲ ಬದಲಿಸಿದೆ. ಜಗದ್ವಿಖ್ಯಾತವಿರುವ ಕಾಳಿದಾಸನ ಕೃತಿ ಕೂಡ ಇಂದು ಗ್ರಂಥಾಲಯಗಳನ್ನು ಬಿಟ್ಟು ಇತರತ್ರ ಕಾಣಸಿಗುವುದು ಅಪರೂಪ. ಅನುವಾದಗಳ ಮಾತಾದರೂ ಅಷ್ಟೇ. ಇವನ್ನು ಮನಗಂಡು ಸಾಧ್ಯವಿದ್ದಷ್ಟು ಸ್ವಯಂಪೂರ್ಣವೆನಿಸುವ ಬಗೆಯಲ್ಲಿ ವಿವೇಚಿಸಲು ಯತ್ನಿಸಲಾಗಿದೆ.

ಇನ್ನು ಉಪಕಾರ ಸ್ಮರಣೆ. ಡಾ. ಹಾವನೂರ ಅಂತೂ ಸೈಯೇ ಸೈ. ಜೊತೆಗೆ ಉದಾರ ಹಸ್ತದಿಂದ ಅಗತ್ಯವಿದ್ದ ಆಧಾರಸಾಹಿತ್ಯವನ್ನು ಒದಗಿಸಿದ ಮುಂಬಯಿ ವಿ.ವಿ. ಗ್ರಂಥಾಲಯದ ಮುಖ್ಯಾಧಿಕಾರಿ ಶ್ರೀ ಎ.ಸಿ. ಟಿಕೇಕರ, ರೂಪರೇಲ ಕಾಲೇಜ ಗ್ರಂಥಾಲಯದ ಮುಖ್ಯಾಧಿಕಾರಿ ಶ್ರೀ ಕೆ. ಎಸ್. ದಾಮಲೆ ಇವರುಗಳ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ. ಇತೀ

ವಿದ್ವಜ್ಜನ ವಿಧೇಯ

ಮುಂಬಯಿ ೧೯೮೮ ಭೀಮರಾವ ಚಿಟಗುಪ್ಪಿ

ನಾಟಕಕಾರ ಚುರಮುರಿ
ವಿಷಯೋಪಕ್ಷೇಪ : ಕನ್ನಡ ನಾಟಕ

"ಕೃತಾನುಕರಣಮೆ ನಾಟ್ಯಂ" ಎಂಬುದೊಂದು ಸೂತ್ರ-ಸದೃಶ ಮಾತಿನಲ್ಲಿ ಪಂಪನು ನಾಟಕದ ಜೀವಾಳವನ್ನೇ ಉಸುರಿದ್ದರೂ ನಮ್ಮ ಹಳಗನ್ನಡ ಸಾಹಿತ್ಯದಲ್ಲಿ ಕಂಡುಬರುವ ಭಾಸ ಕಾಳಿದಾಸ ಮೊದಲಾದವರ ನಾಟಕಗಳ ಬಗೆಯ ಅಭಿಜಾತ; ಮಾರ್ಗೀಯ ಅಥವಾ ಕ್ಲಾಸಿಕಲ್ ನಾಟಕಗಳ ಅಭಾವವು ಇನ್ನೂ ಒಂದು ಸಮಸ್ಯೆಯಾಗಿಯೇ ಉಳಿದಿದೆ ಎಂದಿರುವರು ಸುವಿಖ್ಯಾತ ಆಧುನಿಕ ವಿಮರ್ಶಕರೊಬ್ಬರು.[೧] ಬೇರೆ ಕೆಲವರು ನೃಪತುಂಗನ ಕವಿರಾಜ ಮಾರ್ಗದಲ್ಲಿ ಬರುವ ಪಗರಣ ಮತ್ತು ಇತರತ್ರ ಕಾಣಸಿಗುವ ನಾಟ್ಯ, ನಾಟಕ, ನಾಟ್ಯಶಾಲೆ ಶಬ್ದಗಳನ್ನೂ ಕರ್ನಾಟಕ ಮಾಲತೀ ಮಾಧವ, ಪ್ರಬೋಧ ಚಂದ್ರೋದಯ ಮೊದಲಾದ ಸಂಸ್ಕೃತ ಅಭಿಜಾತ ನಾಟಕಗಳ ನಾಮನಿರ್ದೇಶನವನ್ನೂ ಗಮನಿಸಿ ನಮ್ಮಲ್ಲಿ ಕೂಡ ಅಂಥ ನಾಟಕಗಳಿದ್ದಿರಬೇಕು; ಅವು ದೊರೆತಿಲ್ಲ ಎಂದು ಪ್ರತಿಪಾದಿಸಿರುವರು. ಅನ್ಯ ಕೆಲವರು ಅದೊಂದು ಸಂಸ್ಕೃತ ನಾಟಕಗಳ ಅವನತಿಯ ಕಾಲ, ವಿಶೇಷವಾಗಿ ಕನ್ನಡದಲ್ಲಿ ಚಂಪೂ (ಗದ್ಯ ಪದ್ಯ ಯುಕ್ತ) ಕಾವ್ಯ ಪ್ರಕಾರಗಳ ಉನ್ನತಿಯ ಕಾಲ; ಕಾಲಿದಾಸ ಬಾಣರನ್ನು ಸಮಗಟ್ಟಿ ಬಯಸುತ್ತಿದ್ದ ನಮ್ಮ ಕವಿಗಳಿಗೆ ಅದೊಂದು ಸುವರ್ಣ ಮಾಧ್ಯಮವಾಗಿ ಪರಿಣಮಿಸಿರಬೇಕು; ಅದಕ್ಕೆ ಪಕ್ಕಾದ ಅವರು ನಾಟಕ ರಚನೆಯತ್ತ, ಅಷ್ಟೊಂದು ಮನಸ್ಸು ಮಾಡಿರಲಿಕ್ಕಿಲ್ಲ ಎಂದು ಬಗೆದಿರುವರು. ದೇಶೀ ಭಾಷೆಗಳ ಅಪಕ್ವ ಸ್ಥಿತಿ,[೨] ಪರಕೀಯರ (ವಿಶೇಷವಾಗಿ ಮುಸಲ್ಮಾನರ) ದಾಳಿ, ನಾಟಕಾದಿ ಲಲಿತ ಮನರಂಜನೆಯ ಸಾಧನಗಳ ವಿಷಯದಲ್ಲಿದ್ದ ಅವರ ತಾತ್ಸಾರ ಭಾವ, ಬಹುಸಂಖ್ಯೆಯ ವಿದ್ವಾಂಸರುಗಳಲ್ಲಿ ತಲೆ ಎತ್ತಿದ ಮತೀಯ ಮತ್ತು ದಾರ್ಶನಿಕ ಸ್ಪರ್ಧೆ, ಇತ್ಯಾದಿ ಕಾರಣಗಳೂ ಅಲ್ಲಲ್ಲಿ ವ್ಯಕ್ತವಾಗಿದ್ದುಂಟು.

---

೧. ಕೀರ್ತಿನಾಥ ಕುರ್ತಕೋಟಿ, ನಡೆದು ಬಂದ ದಾರಿ, ಸಂ. ೧, ಪು. ೨೧೩

೨. ಕ್ರಿ. ೯ನೇ ಶ. ದಲ್ಲಿ ಹುಟ್ಟಿದ ಕವಿರಾಜಮಾರ್ಗದಂಥ ಪ್ರಗಲ್ಭ ಗ್ರಂಥಗಳಿರುವ ಕನ್ನಡದ ಮಟ್ಟಿಗೆ ಈ ಮಾತು ಅದೆಷ್ಟು ಮಟ್ಟಿಗೆ ಅನ್ವಯಿಸುವದೆಂಬುದು ಸಂದೇಹಾಸ್ಪದ.

ಒಬ್ಬರಂತೂ ಯಾವನೇ ರಾಜನ ಪೋಷಣೆಯಲ್ಲಿ ಯಾವನೇ ಒಬ್ಬ ಕವಿಯು ಪ್ರಾದೇಶಿಕ ಭಾಷೆಯಲ್ಲಿ ಒಂದೇ ಒಂದಾದರೂ ನಾಟಕವನ್ನು (ಅಭಿಜಾತ) ಬರೆದಿರುವದನ್ನು ಸಂಶೋಧನ ನಮಗೆ ಈ ವರೆಗೆ ತೋರಿಸಿಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳಿರುವರು.[೧] ಇದಕ್ಕೆ ಕಾರಣವಿಲ್ಲದಿಲ್ಲ. ಕನ್ನಡದಲ್ಲಾಗಲಿ ಪ್ರಚಾರದಲ್ಲಿರುವ ಇತರ ಭಾರತೀಯ ಭಾಷೆಗಳಲ್ಲಾಗಲಿ ನಾಟಕವು ತಡವಾಗಿ ಹುಟ್ಟಿಕೊಳ್ಳಲು ಕವಿಗಳ ಶಾಸ್ತ್ರನಿಷ್ಠೆ, ಸಂಪ್ರದಾಯ ನಿಷ್ಠೆ ಮತ್ತು ಪಾತ್ರಗಳು ಅವುಗಳ ಸ್ಥಾನಮಾನಗಳಿಗೆ ಅನುಸರಿಸಿ ಸಂಸ್ಕೃತ, ಪ್ರಾಕೃತ ಮತ್ತು ಅನ್ಯ ಪ್ರಾದೇಶಿಕ ಇಲ್ಲವೆ ಜನಾಂಗ ಭಾಷೆಗಳನ್ನು ಬಳಸಬೇಕೆಂಬ ಭರತೋಕ್ತಿಯೇ (ಕ್ರಿ.ಪೂ. ೧ ಶ.) ಮುಖ್ಯ ಕಾರಣವೆಂದು ಹೇಳಬಹುದಾಗಿದೆ. ಭಾಸನ 'ದೂತವಾಕ್ಯವು (ಕೃಷ್ಣಸಂಧಾನ)'ಸಂಪೂರ್ಣ ಸಂಸ್ಕೃತದಲ್ಲಿರುವದು ನಮ್ಮ ಪ್ರಾಚೀನರು ಪಾತ್ರಗಳ ವಿಷಯದಲ್ಲಿರುವ ಭಾಷಾನಿಯಮವನ್ನು ಅದೆಷ್ಟು ನಿಷ್ಠೆಯಿಂದ ಪಾಲಿಸುತ್ತಿದ್ದರೆಂಬುದಕ್ಕೆ ಒಂದು ಉತ್ಕೃಷ್ಟ ಉದಾಹರಣೆಯಾಗಿದೆ. ಅದರಲ್ಲಿ ಕಂಚುಕಿ ಒಬ್ಬನನ್ನು ಬಿಟ್ಟು ಕೃಷ್ಣ ದುರ್ಯೋಧನಾದಿ ಮಿಕ್ಕೆಲ್ಲ ಪಾತ್ರಗಳು ಉಚ್ಚ ವರ್ಗದವು. ನಿಯಮಾನುಸಾರ ಅವರೆಲ್ಲರೂ ಸಂಸ್ಕೃತವನ್ನಾಡುವರು. ಕಂಚುಕಿಯದು ನಿಮ್ನ ಪಾತ್ರವಿದ್ದರೂ ಅವನು ಸಂಸ್ಕೃತವನ್ನಾಡಬೇಕೆಂದಿದೆ.

ಮಹಾಕಾವ್ಯ ಮತ್ತು ಇತರ ಕಾವ್ಯ ಪ್ರಕಾರಗಳು ಉಕ್ತ ಲಕ್ಷಣಗಳೊಂದಿಗೆ ದೇಶ ಭಾಷೆಗಳಲ್ಲೂ ಇರಬಹುದೆಂದಿದೆ. ನಾಟಕಗಳ ವಿಷಯದಲ್ಲಿ ಈ ರಿಯಾಯಿತಿ ಇಲ್ಲ. ಸಟ್ಟಕವೆಂಬ ಪ್ರಕಾರವು ಪ್ರಾಕೃತದಲ್ಲಿ ಇರಬಹುದಿದ್ದರೂ ಅದು ಲಾಕ್ಷಣಿಕ ಸಮ್ಮತ ಪರಿಪೂರ್ಣ ನಾಟಕವಲ್ಲ. ಅದು ನಾಟಿಕೆ ಎಂಬ ಇನ್ನೊಂದು ಪ್ರಕಾರದ ಪ್ರಾಕೃತ ರೂಪಾಂತರ. ನಾಟಕ ನಾಟಿಕೆಗಳಲ್ಲಿ ವಿಶೇಷ ವ್ಯತ್ಯಾಸವಿಲ್ಲದಿದ್ದರೂ ದರ್ಜೆಯಲ್ಲಿ ನಾಟಿಕೆ, ನಾಟಕಕ್ಕಿಂತ ಕೆಳಗಿನದು. ಎಲ್ಲ ರೂಪಕಗಳಲ್ಲಿ ನಾಟಕವೇ ಶ್ರೇಷ್ಠ ರೂಪಕ. ಕಾಳಿದಾಸಾದಿಗಳ ಸರಿಸಮಾನ, ಅವರನ್ನು ಮೀರಿಸಿದವರೆಂದು ಸಹ ಹೇಳಿಕೊಂಡ ನಮ್ಮ ಪ್ರಾಚೀನ ಕವಿಗಳಿಗೆ ಕಾಳಿದಾಸಾದಿಗಳ ಬಗೆಯ ಅಭಿಜಾತ ನಾಟಕಗಳ ರಚನೆ ಅಸಾಧ್ಯವಿರಲಿಲ್ಲ. ಅದರಲ್ಲಿ ಅಭಿರುಚಿ ಇಲ್ಲದಿರಲಿಲ್ಲ.[೨] ಬರೆದರೆ ಕಾಳಿದಾಸಾದಿಗಳಂತಹದೆ ನಾಟಕವನ್ನು ಬರೆಯಬೇಕು; ಇಲ್ಲವಾದರೆ ಆ ವಿಷಯವೇ ಬೇಡವೆಂದು ಅವರು ಬಗೆದಿದ್ದರೆ ಅದರಲ್ಲಿ ಆಶ್ಚರ್ಯ ಅಥವಾ ಅಸ್ವಾಭಾವಿಕವೆಂಬುದಿಲ್ಲ. ಆದರೆ ಹಾಗೆ ಮಾಡಲು ಭರತಾದಿ ಲಾಕ್ಷಣಿಕರು ಹಾಕಿಕೊಟ್ಟ ಭಾಷಾನಿಯಮ ಸಂಪ್ರದಾಯ ನಿಷ್ಠೆ ಅಡ್ಡ ಬರುತ್ತಿದ್ದವು. ಕಾಳಿದಾಸಾದಿಗಳ ನಂತರ ಸಂಸ್ಕೃತ ನಾಟಕಗಳ ಬೆಲೆ ತಗ್ಗಿದರೂ ಆ ಭಾಷೆಯಲ್ಲಿ ನಾಟಕ ರಚನೆ, ಅವುಗಳನ್ನು ಕುರಿತಾದ ಲಕ್ಷಣ ಗ್ರಂಥಗಳ ರಚನೆ ಅವಿಚ್ಛಿನ್ನವಾಗಿ ಸಾಗಿ

---

೧. ಆದ್ಯ (ಶ್ರೀರಂಗ), ಭಾ. ರಂ. ಭೂಮಿ, ಪು. ೧೧೯

೨. ಉದಾ: ರನ್ನನ ಗದಾಯುದ್ಧದಲ್ಲಿ ಭಟ್ಟನಾರಾಯಣನ ವೇಣೀಸಂಹಾರದಲ್ಲಿಯ ಅನೇಕ ಶ್ಲೋಕ ಮಾತುಗಳನ್ನು ಸುಲಭದಲ್ಲಿ ಗುರುತಿಸಬಹುದಾಗಿದೆ.

ಬಂದಿರುವುದೂ ಕನ್ನಡದಲ್ಲಿ ಮತ್ತು ಇತರ ದೇಶಭಾಷೆಗಳಲ್ಲಿ ಅವು ತಡವಾಗಿ ಹುಟ್ಟಿ ಬಂದಿರುವದೂ ಇದನ್ನೇ ಸಮರ್ಥಿಸುತ್ತದೆ.[೧]

ಕನ್ನಡದಲ್ಲಿ ನಾಟಕಗಳಿದ್ದಿಲ್ಲವೆನ್ನಲು ಪೋಷಕ ಆಧಾರಗಳೆಂದು ಪ್ರಮುಖ ಆಧಾರಗ್ರಂಥಗಳಾದ ನೃಪತುಂಗನ (೮೧೪-೮೭೭) ಕವಿರಾಜಮಾರ್ಗ ಮತ್ತು ಇಮ್ಮಡಿ ನಾಗವರ್ಮನ (೧೦೪೨) ಕಾವ್ಯಾವಲೋಕನಗಳನ್ನು ಉದಾಹರಿಸಬಹುದು. ತನ್ನ ಗ್ರಂಥದಲ್ಲಿ ನೃಪತುಂಗನು ಹೆಚ್ಚಾಗಿ ಸಂಸ್ಕೃತದ ಪ್ರಾಚೀನತಮ ಲಾಕ್ಷಣಿಕ ಭಾಮಹನ (ಸು. ಕ್ರಿ. ೭ನೆಯ ಶತ.) ಕಾವ್ಯಾಲಂಕಾರ ಮತ್ತು ದಂಡಿಯ (ಸು. ಕ್ರಿ. ೭೦೦) ಕಾವ್ಯಾದರ್ಶವನ್ನು ಅನುಸರಿಸಿರುವದು ಜನಜನಿತವಿದೆ. ನಾಟಕವೊಂದು ಮಿಶ್ರ (ಗದ್ಯ-ಪದ್ಯ) ಕಾವ್ಯ. ಲಾಕ್ಷಣಿಕರು ಇಂಥ ಕೃತಿಗಳನ್ನು ಗದ್ಯ-ಪದ್ಯಮಯ, ಮಿಶ್ರ, ಸಮ್ಮಿಶ್ರ ಎಂದು ಹೇಳಿ ಶ್ರವ್ಯ, ದೃಶ್ಯ (ಅಭಿನೇಯ, ಪ್ರೇಕ್ಷಾರ್ಥ) ಎಂದು ಇಬ್ಬಗೆಯಲ್ಲಿ ವಿಂಗಡಿಸಿರುವರು. ನಾಟಕಾದಿ ಪ್ರಕಾರಗಳು ದೃಶ್ಯ ಕಾವ್ಯಗಳಲ್ಲಿ ಒಳಗೊಂಡಿವೆ. ಭಾಮಹನು ಕಾವ್ಯದಲ್ಲಿ 'ಗದ್ಯಂ ಪದ್ಯಂ ಚ ತದ್ವಿಧಾ' ಎಂದು ಎರಡೇ ಭೇದಗಳನ್ನು ಹೇಳಿದ್ದರೂ (೧ -) ಆ ಪ್ರಕಾರ ವಿಂಗಡನೆಯಲ್ಲಿ ನಾಟಕ ಮತ್ತು ಸದೃಶ ಕೃತಿಗಳನ್ನು ಅಭಿನೇಯಾರ್ಥದ ಅಂಗವಾಗಿ ಉಲ್ಲೇಖಿಸಿ ಅವುಗಳ ವಿಷಯದಲ್ಲಿ ಅನ್ಯರು (ಭರತಾದಿಗಳು) ವಿವರವಾಗಿ ಹೇಳಿರುವರು (ತದಭಿನೇಯಾರ್ಥಂ ಉಕ್ತೋSನ್ಯೈ ಸ್ತಸ್ಯವಿಸ್ತರಃ, ೧. ೨೪), ಎಂದಿರುವನು. ದಂಡಿಯು ಮಿಶ್ರ ಪ್ರಕಾರವನ್ನು ಹೇಳಿರುವನಲ್ಲದೆ ಅದನ್ನು ಶ್ರವ್ಯ ಮತ್ತು ಪ್ರೇಕ್ಷಾರ್ಥ ಎಂದು ವಿಂಗಡಿಸಿರುವನು. ಜೊತೆಗೆ ಶ್ರವ್ಯ ಮಿಶ್ರಕ್ಕೆ ಕೆಲವರು ಚಂಪೂ ಎನ್ನುವರೆಂದಿರುವನು. ಭಾಷಾವಾರ ವಿಂಗಡನೆಯಲ್ಲಿ ಸಂಸ್ಕೃತ, ಪ್ರಾಕೃತ - ಅಪಭ್ರಂಶಾದಿ ಭಾಷೆಗಳಲ್ಲಿರಬಹುದಾದ ಕೃತಿಗಳ ಸ್ವರೂಪವನ್ನು ತಿಳಿಸಿ 'ನಾಟಕಾದಿತು ಮಿಶ್ರಕಮ್'(೧.೩೭) ಮಾತಿನಲ್ಲಿ ಅದೊಂದು ಬಹುಭಾಷಾ ಕೃತಿ - ಎಂಬುದನ್ನು ಸ್ಪಷ್ಟಪಡಿಸಿರುವನು. ನೃಪತುಂಗನು ಭಾಮಹನಂತೆ ಕಾವ್ಯದಲ್ಲಿ ಗದ್ಯ ಪದ್ಯ ಎರಡೇ ಭೇದಗಳನ್ನು ಹೇಳಿದ್ದರೂ ಕನ್ನಡದಲ್ಲಿದ್ದ ಮಿಶ್ರ ಪ್ರಕಾರಗಳ ಅಸ್ತಿತ್ವವನ್ನು ಗಮನಿಸಿ ಅದನ್ನು ಗದ್ಯಕಥೆ ಅಥವಾ ಚಂಪೂ (ಶ್ರವ್ಯ) ಪ್ರಕಾರಕ್ಕೆ ಮಿತಗೊಳಿಸಿರುವನು (ಕ. ಮಾ. ೧.೨೭) ದೃಶ್ಯ ಪ್ರಕಾರಗಳನ್ನು ಕುರಿತಾದ ಭಾಮಹ ದಂಡಿಯರ

---

೧. ಸಂಪ್ರದಾಯ ನಿಷ್ಠೆಯ ವಿಷಯದಲ್ಲಿ ಕೀಥರ ಈ ಕೆಳಗಿನ ಅಭಿಪ್ರಾಯವನ್ನು ಗಮನಿಸುವಂತಿದೆ - There must, it is certain, have been a time when the genius of Indian poetry was active in trying and developing the new instrument of drama, but with the appearance of the Natya - Sastra this creative epoch came to all intents and purposes to a close, and the writers of the classical drama accept without question the forms imposed on them by authority, although that authority rests on no logical or psychological basis, but represents generalisations, often hasty, from a limited number of plays - Sanskrit Drama, p. 352.

೨. ಲಕ್ಷಣ ಗ್ರಂಥಗಳಲ್ಲಿ ಪ್ರಮಾಣಭೂತವೆಂದು ಗಣಿಸಲ್ಪಟ್ಟ ಶಾರದಾತನಯನ (ಕ್ರಿ. ೧೩ ಶ.) ಭಾವಪ್ರಕಾಶನವನ್ನೂ ಉದಾಹರಿಸಬಹುದು.

ಉಲ್ಲೇಖಗಳನ್ನು ಸಂಪೂರ್ಣ ಕೈಬಿಟ್ಟಿರುವನು. ಇದು ಆತನ ಸಮಯದಲ್ಲಿ ಕನ್ನಡದಲ್ಲಿ ಅಂಥ ಕೃತಿಗಳಿದ್ದಿಲ್ಲ ಎಂಬುದನ್ನು ಸೂಚಿಸುವದು. ಇಮ್ಮಡಿ ನಾಗವರ್ಮನಿಗೆ ಭಾಮಹ, ದಂಡಿ, ವಾಮನ (ಲಾಶ) ರುದ್ರಟ(೯ನೇ ಶ.) ಸ್ಫೂರ್ತಿಸ್ಥಾನರಾಗಿದ್ದರೂ ವಾಮನ 'ಸಂದರ್ಭೇಷು ದಶರೂಪಕಂ ಶ್ರೇಯಂ', (೧.೩.೩೦) ಎಂದು ದೃಶ್ಯಕಾವ್ಯಗಳ ಮಾತೆತ್ತಿಲ್ಲ. ಗದ್ಯ ಪದ್ಯ ಚಂಪೂಗಳನ್ನು ಉಲ್ಲೇಖಿಸಿ ನೇರವಾಗಿ ಕನ್ನಡದ ವಿಶಿಷ್ಟ, ಬೆದಂಡೆ, ಬಾಜನೆಗಬ್ಬ ಮೊದಲಾದ ದೇಶೀ ಪದ್ಯ ಪ್ರಕಾರಗಳನ್ನು ಪ್ರಸ್ತಾಪಿಸಿರುವನು. ಅವನ ನಂತರದವನಿರಬಹುದಾದ ಉದಯಾದಿತ್ಯ (ಸು. ೧೧೫೦) ಕೂಡ 'ವಚನಕಾವ್ಯ' ಎಂಬ ಹೆಸರಿನಲ್ಲಿ ಚಂಪೂಪ್ರಕಾರವನ್ನಷ್ಟೇ ಉಲ್ಲೇಖಿಸಿರುವನು.

ಕನ್ನಡಿಗನೇ ಇದ್ದ ಕಲ್ಯಾಣದ ಪಶ್ಚಿಮ ಚಾಲುಕ್ಯ ದೊರೆ ಸೋಮೇಶ್ವರನು (೧೨ ಶ. ಪ್ರಾರಂಭ) ತನ್ನ ಮಾನಸೋಲ್ಲಾಸದಲ್ಲಿ ನಾಟಕವನ್ನು ವರ್ಣಿಸಿರುವನು. ಆದರೆ ಅದು 'ಶಾಸ್ತ್ರ ವಿನೋದ' ಪ್ರಕರಣದಲ್ಲಿ ಪಂಡಿತರೊಂದಿಗೆ ಚರ್ಚಿಸುವ ವಿಷಯವಾಗಿ ಬಂದಿದೆ. ಪಾತ್ರಗಳಿಗೆ ಸಂಸ್ಕೃತ ಪ್ರಾಕೃತಾದಿ ಭಾಷಾ ನಿಯಮವನ್ನು ಹೇಳಿದ್ದರಿಂದ ಅದು ಸಂಸ್ಕೃತ ಮಾರ್ಗೀ ರೂಪಕಗಳಿಗಿಷ್ಟೇ ಮಿತವಾಗಿದ್ದಿತೆನ್ನಬಹುದು. ಗಾನ ನರ್ತನಾದಿ ವಿನೋದ ಪ್ರಕಾರಗಳ ನಿರೂಪಣೆ ಹೀಗಿಲ್ಲ. ಅವು ತತ್ಸಂಬಂಧಿತ ಲಕ್ಷಣ ಲಕ್ಷ್ಯಗಳೊಂದಿಗೆ ಬಂದಿವೆ.

ಕೊನೆಯವನಾದ ತಿರುಮಲಾರ್ಯ (೧೬೪೫-೧೭೦೬) ತನ್ನ ಅಪ್ರತಿಮವೀರ ಚರಿತೆಯಲ್ಲಿ ಚಂಪುವಿನ ವ್ಯಾಪ್ತಿಯನ್ನು ಮಹಾಕಾವ್ಯ ಲಕ್ಷಣಗಳನ್ನೊಳಗೊಂಡ 'ಕಾವ್ಯ' ಶೈಲಿಯಲ್ಲಿ ಬರೆದ 'ವಸ್ತುಕ' ಪ್ರಕಾರಕ್ಕೇ ಅಂದರೆ ಯಾವನೊಬ್ಬ ಉದಾತ್ತ ನಾಯಕನ ಸುತ್ತ ಹೆಣೆದ ಕಥೆ ಅಥವಾ ಪ್ರಶಸ್ತಿ ಕಾವ್ಯಕ್ಕೆ ಮಿತಗೊಳಿಸಿರುವನು. ಅವನ ತಮ್ಮ ಸಿಂಗರಾರ್ಯನು (ಸು. ೧೬೮೦) ಶ್ರೀಕೃಷ್ಣನ ಪರವಾಗಿ 'ಮಿತ್ರವಿಂದಾ ಗೋವಿಂದ' ಹೆಸರಿನಲ್ಲಿ ಸಂಸ್ಕೃತ ಅಭಿಜಾತ ದೃಶ್ಯ ಕಾವ್ಯಗಳಲ್ಲಿ ಒಂದಾದ ಶ್ರೀಹರ್ಷನ (೫೯೦ ೬೪೭) ರತ್ನಾವಲಿಯನ್ನು ಪರಿವರ್ತಿಸಿದ್ದರೂ ತನ್ನ ಕೃತಿಯಲ್ಲಿ ತಿರುಮಲಾರ್ಯ ನಾಟಕವನ್ನು ಪ್ರಸ್ತಾಪಿಸಿಲ್ಲ.

ಶ್ರೀಹರ್ಷನ ರತ್ನಾವಲಿ ಲಕ್ಷಣೋಕ್ತ ಪರಿಪೂರ್ಣ ನಾಟಕವಲ್ಲ. ಅದು ನಾಟಿಕೆ, 'ನಾಟಿ' ಹೆಸರಿನಿಂದ ಭರತನು ನಾಟಕದೊಂದಿಗೆ ಅದನ್ನು ತನ್ನ ದಶರೂಪಕಗಳಲ್ಲಿ ಸೇರಿಸಿಕೊಂಡಿದ್ದರೂ ಇತರರು ಉಪರೂಪಕವೆಂದು ಗಣಿಸಿರುವರು. ನಾಟಿಕೆಗಳಲ್ಲಿ ಆದರ್ಶ ಕೃತಿಯೆಂದು ಅನೇಕ ಲಾಕ್ಷಣಿಕರು ಅದನ್ನು ಉದಾಹರಿಸಿದ್ದಾರೆ. ನಾಟಿಕೆಯಲ್ಲಿ ಧೀರ ಲಲಿತ, ಉದಾತ್ತ, ಪ್ರಖ್ಯಾತ ರಾಜನು ನಾಯಕನಿರುವನು. ಜ್ಯೇಷ್ಠೆ ಕನಿಷ್ಠೆ ಈರ್ವರು ನಾಯಿಕೆಯರು, ಜ್ಯೇಷ್ಠೆ ರಾಜವಂಶಜಳು, ಪ್ರಗಲ್ಭೆ, ಗಂಭೀರೆ, ಮಾನವತಿ. ಕನಿಷ್ಠೆಯಾದರೂ ರಾಜವಂಶಜಳು, ಅವಿವಾಹಿತೆ, ಮುಗ್ಧೆ, ಮನೋಹರೆ. ಅಂತಃಪುರದ ಸಂಬಂಧದಿಂದ ನಾಯಕನ ಸಮೀಪಸ್ಥಳು. ನಾಯಕನು ಕನಿಷ್ಠೆಯನ್ನು ಪ್ರೇಮಿಸುವಲ್ಲಿ ಜ್ಯೇಷ್ಠೆ ಕ್ರೋಧ, ಅಸೂಯೆ, ಇತ್ಯಾದಿಗಳ ಮೂಲಕ ವಿಘ್ನ ತರುವಳು. ಸಖಿ, ದಾಸಿ ಮೊದಲಾದ ಇತರ ಸ್ತ್ರೀಪಾತ್ರಗಳೂ ಇರುತ್ತವೆ. ವಿದೂಷಕನೂ ಇರುತ್ತಾನೆ. ನಾಯಕನ

ಪ್ರೇಮ ವ್ಯವಹಾರದಲ್ಲಿ ಅವನ ಮಧ್ಯಸ್ಥಿಕೆ ಇರುತ್ತದೆ. ಕೊನೆಗೆ ಜ್ಯೇಷ್ಠೆಯ ಅನುಮತಿಯೊಂದಿಗೆ ಕನಿಷ್ಠೆಯ ಕೂಡ ನಾಯಕನ ಮದುವೆ ಆಗುತ್ತದೆ. ನಾಲ್ಕು ಅಂಕಗಳು. ನಾಯಿಕೆಯ (ಕನಿಷ್ಠೆ) ಹೆಸರು ನಾಟಿಕೆಯ ಹೆಸರಿರಬೇಕೆಂಬ ಇನ್ನೊಂದು ನಿಯಮವಿದೆ. ಪ್ರಧಾನ ರಸ ಶೃಂಗಾರ. ಅದಕ್ಕನುಗುಣವಾಗಿ ಕೈಶಿಕೆ (ಮೃದು, ಲಲಿತ) ವೃತ್ತಿ. ಅದ್ಭುತವೂ ಕಾಣಿಸಿಕೊಳ್ಳುತ್ತದೆ.

ರತ್ನಾವಳಿಯಲ್ಲಿ (ಇದು ಕನಿಷ್ಠೆಯ ಹೆಸರು) ಜ್ಯೇಷ್ಠೆ ಕನಿಷ್ಠೆಯನ್ನು ಗುಪ್ತವಾಗಿ ಅಂತಃಪುರದಲ್ಲಿ ಬಂಧಿಸಿಡುತ್ತಾಳೆ. ಇಂದ್ರಜಾಲಿಕನ ಮಾಯಿಯಿಂದ (ಅದ್ಭುತ) ಅದಕ್ಕೆ ಬೆಂಕಿ ಬಿದ್ದು (ಆಭಾಸ) ಅದರಲ್ಲಿ ಕನಿಷ್ಠೆ ಬೆಂದು ಸತ್ತು ಹೋಗುವಳೆಂಬ ಪರಿಸ್ಥಿತಿ ಉಂಟಾಗುತ್ತದೆ. ಜ್ಯೇಷ್ಠೆ ತನ್ನ ಕೃತಿಗಾಗಿ ಪರಿತಪಿಸುತ್ತಾಳೆ. ಇಂದ್ರಜಾಲಿಕನು ತನ್ನ ಮಾಯೆಯನ್ನು ಹಿಂತೆಗೆದುಕೊಂಡಾಗ ಎಲ್ಲವೂ ಶಾಂತವಾಗುತ್ತದೆ. ಜ್ಯೇಷ್ಠೆಗೆ ಕನಿಷ್ಠೆ ತನ್ನ ಸಮೀಪದ ಪ್ರಿಯ ಆಪ್ತಳೆಂಬುದು ಗೊತ್ತಾಗುತ್ತದೆ. ಸ್ವಸಂತೋಷದಿಂದ ಆಕೆ ಅವಳನ್ನು ನಾಯಕನಿಗೆ ಒಪ್ಪಿಸುತ್ತಾಳೆ.

ಪಾತ್ರಗಳ ಹೆಸರುಗಳನ್ನು ಬದಲಿಸಿ ಶ್ರೀಕೃಷ್ಣನ ಪರವಾಗಿ 'ಮಿತ್ರವಿಂದಾ ಗೋವಿಂದಾ' ಎಂದು ಏಕಭಾಷೆ, ಅಂದರೆ ಕನ್ನಡದಲ್ಲಿ ಸ್ವಯಂ ಸಂಪ್ರದಾಯನಿಷ್ಠ ಮತ್ತು ಅಂಥ ಪರಿಸ್ಥಿತಿ ಪರಿಸರಗಳಲ್ಲಿ ಬೆಳೆದ ಘನ ವಿದ್ವಾಂಸ ಸಿಂಗರಾರ್ಯ ಅದೆಂತು ಪರಿವರ್ತಿಸಿದನೆಂಬುದೊಂದು ಪ್ರಶ್ನೆ. ಇದಕ್ಕೆ ಊಹೆಯೊಂದೇ ಆಧಾರ. ರೂಪಕಗಳಲ್ಲಿ ನಾಟಿಕೆಗೂ ಸಟ್ಟಕಕ್ಕೂ ಭಾಷಾನಿಯಮ ಒಂದನ್ನು ಬಿಟ್ಟರೆ ಅಂಥವೇನು ಅನ್ಯ ವ್ಯತ್ಯಾಸಗಳಿಲ್ಲವೆಂಬುದನ್ನು ಈ ಮೊದಲು ಕಂಡಿದ್ದಾಗಿದೆ. ನಾಟಿಕೆ ಸಂಸ್ಕೃತ ಪ್ರಾಕೃತಾದಿ ಮಿಶ್ರವಿದ್ದರೆ ಸಟ್ಟಕ ಏಕ ಭಾಷೆಯಲ್ಲಿ ಇರಬಹುದೆಂದಿದೆ. ಅಧಿಕಾಂಶ ಲಾಕ್ಷಣಿಕರು ಏಕಭಾಷೆಯೆಂದರೆ ಪ್ರಾಕೃತವೆಂದು ಬಗೆದಿದ್ದರೆ ಸೌರಾಷ್ಟ್ರದ ಪ್ರಸಿದ್ಧ ಜೈನ ಲಾಕ್ಷಣಿಕ ಹೇಮಚಂದ್ರನು (೧೦೮೯ - ೧೧೭೩):... ಏಕಭಾಷಯಾ ಭವತಿ, ಅಪ್ರಾಕೃತ ಸಂಸ್ಕೃತ ಯಾ ಸಟ್ಟಿಕೋ ನಾಟಿಕಾ ಪ್ರತಿಮಃ, ಎಂದಿರುವನು. (ಕಾವ್ಯಾನುಶಾಸನ, ಪು. ೪೪೪), ರುದ್ರದಾಸನ (ಸು. ೧೬೬೦) ಚಂದ್ರಲೇಖಾ ಸಟ್ಟಕವನ್ನು ಸಂಪಾದಿಸಿದ ಡಿ. ಎ. ನೇ ಉಪಾಧ್ಯೆ 'ಹೇಮಚಂದ್ರನ ಸಟ್ಟಕದ ಈ ವ್ಯಾಖ್ಯೆ ಅವನ ಸ್ವಂತದ್ದಲ್ಲ. ಬಹುಶಃ ಯಾವನೊಬ್ಬ ಪೂರ್ವಿಕನ ಉದ್ಧೃತಿ. ಇದರಲ್ಲಿನ 'ಅಪ್ರಾಕೃತ -ಸಂಸ್ಕೃತ' ಪದ ಪ್ರಯೋಗದ ಅರ್ಥ ತೊಡಕಿನದಾಗಿದೆ' ಎಂದಿರುವರು (ಮುನ್ನುಡಿ, ಪು. ೨೩). ಶಾರದಾತನಯ ತನ್ನ ಭಾವಪ್ರಕಾಶನದಲ್ಲಿ 'ಶೂರಸೇನ ಮಹಾರಾಷ್ಟ್ರ ವಾಚ್ಯಾ ಭಾಷಾದಿ ಕಲ್ಪಿತಮ್' (ಪು. ೨೬೫) ಎಂದಿರುವನು. ಅವನ ಈ ಉಕ್ತಿಯಲ್ಲಿನ 'ಆದಿ' ಶಬ್ದವು ಗಮನಾರ್ಹವಿದ್ದು ಅದರಲ್ಲಿ ಸಟ್ಟಕದಂಥ ಮಾರ್ಗೀ ರೂಪಕಗಳನ್ನು ಪಕ್ವವಿರುವ ಯಾವುದೇ ಭಾಷೆಯಲ್ಲಿ ರಚಿಸಬಹುದೆಂದು ಅರ್ಥವಿಸಬಹುದಾಗಿದೆ. ಆದರೂ ಮುಂದರಿದು ಅವನೇ 'ಸಟ್ಟಕಂ ಚೇನ ತಸ್ಯಾಹುರ್ಭಾಷಾಂ ತಾಂ ಪ್ರಾಕೃತೋಪರೇ' ಮಾತಿನೊಂದಿಗೆ ಉದಾಹರಣೆಯೆಂದು ಸಂಪೂರ್ಣ ಪ್ರಾಕೃತದಲ್ಲಿರುವ ರಾಜಶೇಖರನ (೧೦ ಶ. ಆದಿ) ಕರ್ಪೂರ ಮಂಜರಿಯನ್ನು ಉಲ್ಲೇಖಿಸಿದ್ದರಿಂದ ಎರಡರಲ್ಲಿ ಯಾವುದು ಗ್ರಾಹ್ಯವೆಂಬುದು ನಿಚಿತವಾಗುವಂತಿಲ್ಲ. ಉಪಲಬ್ಧ ಸಟ್ಟಕಗಳೆಲ್ಲ ಪ್ರಾಕೃತದಲ್ಲಿರುವುದನ್ನು ಗಮನಿಸಿದಾಗ ಬೇರೆ

ಬೇರೆ ಲಾಕ್ಷಣಿಕರ ಮತ ಏನೇ ಇದ್ದರೂ ಸಟ್ಟಕ ಏಕಭಾಷೆಯಲ್ಲಿದ್ದರೂ ರೂಢಿಯಲ್ಲಿ ಆ ಭಾಷೆ ಪ್ರಾಕೃತವೆಂಬ ಅಧಿಕಾಂಶ ಲಾಕ್ಷಣಿಕರ ಅಭಿಪ್ರಾಯದತ್ತ ವಾಲಬೇಕಾಗುತ್ತದೆ.

ಆದರೂ ಸಿಂಗರಾರ್ಯನ ಕೃತಿ (ನಾಟಿಕೆ) ಸಂಪೂರ್ಣ ಕನ್ನಡದಲ್ಲಿದ್ದುದರಿಂದ ಮತ್ತು ಆತ ಸಂಪ್ರದಾಯನಿಷ್ಠ ಕವಿ ಇದ್ದುದರಿಂದ ಅದಕ್ಕೇನಾದರೂ ಆಧಾರ ದೊರೆಯುವಂತಿದ್ದರೆ ನೋಡುವದು ಅನಿವಾರ್ಯವಿಲ್ಲದಿದ್ದರೂ ಇಷ್ಟವಾಗಿದೆ. ನಮ್ಮ ಕನ್ನಡ ಕವಿಗಳು ಹೆಚ್ಚಾಗಿ ದಂಡಿಯಿಂದ ಪ್ರಭಾವಿತರಾದವರು ಎಂಬುದನ್ನು ಮನಗಂಡಾಗ ದಂಡಿಯ ಕೃತಿ ಕಾವ್ಯಾದರ್ಶದಲ್ಲಿ ಒಂದು ಎಳೆ ಸಿಗುವಂತಿದೆ. ಭಾಷೆಗಳ ವಿಷಯದಲ್ಲಿ ದಂಡಿಯು ಶಾಸ್ತ್ರದ ದೃಷ್ಟಿಯಿಂದ ಸಂಸ್ಕೃತ ಒಂದನ್ನು ಬಿಟ್ಟು ಉಳಿದೆಲ್ಲ ಭಾಷೆಗಳನ್ನು (ನಮ್ಮ ಆದಿ ನಾಗವರ್ಮನ ಮೇರೆಗೆ ಕನ್ನಡ ಸಹ) ಅಪಭ್ರಂಶಗಳೆಂದು ಗಣಿಸಬೇಕು (ಶಾಸ್ತ್ರೇತು ಸಂಸ್ಕೃತಾದನ್ಯದಪಭ್ರಂಶ ತಯೋ ದಿತಮ್) ಎಂಬ ಮಾತು ಗಮನಾರ್ಹವೆನಿಸುವದು. ಬಹುಶಃ ಸಿಂಗರಾರ್ಯನು ದಂಡಿಯ ಈ ಮಾತನ್ನೂ ತನಗೆ ಅನುಕೂಲವಿದ್ದ ಇತರ ಲಾಕ್ಷಣಿಕರ ಅಭಿಪ್ರಾಯಗಳನ್ನೂ ಮುಂದಿಟ್ಟುಕೊಂಡು ಸಂಸ್ಕೃತದಲ್ಲಿ ನಾಟಿಕೆಯೆಂದು ಪ್ರಸಿದ್ಧವಿದ್ದ ಶ್ರೀಹರ್ಷನ ರತ್ನಾವಳಿಯನ್ನು ಅದರಲ್ಲಿರುವ ಸಂಸ್ಕೃತ - ಪ್ರಾಕೃತಗಳ ಬದಲು ಸಂಪೂರ್ಣ ಕನ್ನಡ ಸೇರಿಸಿ ತನ್ನ ಹೊಸ ಬಗೆಯ ಪರಿವರ್ತಿತ (ಶ್ರೀಕೃಷ್ಣಪರ) ಕೃತಿಯನ್ನು (ಸಟ್ಟಕ) ರೂಪಿಸಿದ್ದರೆ ಅದು ಅಸಂಭವದ ಮಾತಾಗದು.

ಸಟ್ಟಕದಲ್ಲಿ ಅಂಕಕ್ಕೆ 'ಜವನಿಕಾಂತರ' ಎನ್ನಬೇಕೆಂಬುದಕ್ಕೂ ನಾಟಿಕೆಗೂ ವ್ಯತ್ಯಾಸವಿದೆ. ಇದು ಕಡೆಗಣಿಸಬಹುದಾದ ವ್ಯತ್ಯಾಸ. ಇದಕ್ಕಾದರೂ ದಂಡಿಯೇ ಆಧಾರ. ಗದ್ಯದಲ್ಲಿ ಆತ ಕಥೆ, ಆಖ್ಯಾಯಿಕೆ ಮುಂತಾದ ಭೇದೋಪಭೇದಗಳನ್ನು ಅಲ್ಲಗಳೆದು, ಹೆಚ್ಚೆಂದರೆ ಕಥೆ ಆಖ್ಯಾಯಿಕೆ ಎರಡೇ ಭೇದ, ತಿರುಳಿನಲ್ಲಿ ಅವು ಕೂಡ ಒಂದೇ (೧೦-೨೩) ಎಂದು ಉಳಿದ ಭೇದಗಳನ್ನು ಕಡೆಗಣಿಸಿರುವನು. ದಂಡಿಯು ಪೆಚ್ಚೆಯನ್ನು ಅನುಸರಿಸಿ ಸಿಂಗರಾರ್ಯನಾದರೂ 'ಜವನಿಕಾಂತರ' ಬದಲು ಮೂಲದಲ್ಲಿರುವಂತೆ - 'ಅಂಕ' ಎಂದಿದ್ದರೆ, ಅದೇನು ಅಂಥ ಪ್ರಮಾದವೆನಿಸದು. ಒಟ್ಟಿನಲ್ಲಿ ಅವನ 'ಮಿತ್ರವಿಂದಾ ಗೋವಿಂದ' ನಾಟಕಾದಿ ಮಾರ್ಗೀ ದೃಶ್ಯ ರೂಪಕಗಳಲ್ಲಿ ಒಂದಾದ ಸಟ್ಟಕ (ಪ್ರಾಕೃತದ ಬದಲು ಕನ್ನಡ) ಎಂದು ಹೇಳಬಹುದಾಗಿದೆ. ಸಂಸ್ಕೃತದ ಭಾಷಾಂತರವಿದ್ದರೂ ಅವನ ಈ ಕೃತಿ ಸಾಮಾನ್ಯವಾಗಿ ಸಾಹಿತ್ಯಗಳು ಬೆಳೆಯುವ ದಾರಿಯಲ್ಲಿ ಒಂದಾಗಿದ್ದರೂ ಇದಕ್ಕಾಗಿ ಆತ ಆರಿಸಿಕೊಂಡ ಮೂಲ (ರತ್ನಾವಳಿ ನಾಟಿಕೆ) ಅರ್ಥಪೂರ್ಣವೆಂಬ ಶ್ರೀರಂಗರ ಮಾತು (ಭಾ. ರಂ. ಭೂಮಿ. ಪು, ೧೯೯) ಈ ಸಂದರ್ಭದಲ್ಲಿ ಗಮನಾರ್ಹವಿದೆ. ಆದರೂ ಅದೊಂದು ಅಪವಾದಾತ್ಮಕ ಕೃತಿ ಎನ್ನುವಂತಿದೆ. ಅದಕ್ಕೆ ಸಾರ್ವತ್ರಿಕ ಮನ್ನಣೆ ದೊರೆತಂತಿಲ್ಲ. ಏಕೆಂದರೆ ಸಿಂಗರಾರ್ಯನ ನಂತರ ಸು. ೧೫೦ ವರ್ಷಗಳ ನಂತರ ಆಗಿಹೋದ ಮುಮ್ಮಡಿ ಕೃಷ್ಣರಾಜರು ಕಾಳಿದಾಸನ ಶಾಕುಂತಲವನ್ನು ಮಿಶ್ರದಲ್ಲಿ (ಗದ್ಯ-ಪದ್ಯ) ನೇರವಾಗಿ ಕನ್ನಡಿಸಬಹುದಿತ್ತು. ಆದರೆ ಅದು ಲಕ್ಷಣಬದ್ಧ ನಾಟಕವಿರುವುದರಿಂದ ಅವರು 'ಶಾಕುಂತಳ ನಾಟಕದ ನವೀನ ಟೀಕೆ' ಎಂದು ಗದ್ಯದಲ್ಲಿ ಕಥಾರೂಪದಲ್ಲಿ ರಚಿಸ ಹೇಳಿದಂತಿದೆ.

ಸ್ವರೂಪ ತಿಳಿಯದ್ದರಿಂದ ಹಳಗನ್ನಡ ಸಾಹಿತ್ಯದಲ್ಲಿ ಕಾಣಸಿಗುವ ಸಂಸ್ಕೃತ ಮಾರ್ಗೀ ನಾಟಕಗಳ ತದ್ರೂಪ ಹೆಸರುಗಳಿರುವ ಕರ್ಣಾಟ ಮಾಲತೀ ಮಾಧವ[೧] ಪ್ರಬೋಧ. ಚಂದ್ರೋದಯಾದಿ ಕೃತಿಗಳನ್ನು ಲೆಕ್ಕಕ್ಕೆ ಹಿಡಿಯುವಂತಿಲ್ಲ. ಪಗರಣದ ವಿಷಯ ಮುಂದೆ ಬರುವದು. ನಾಟ್ಯಶಾಲೆ, ನಾಟ್ಯ, ನಾಟಕ ಶಬ್ದಗಳು ಸಾಮಾನ್ಯಾರ್ಥ ವಾಚಕಗಳು. ಅರಮನೆಯ ಅಂಗವಾಗಿ ನಾಟ್ಯಶಾಲೆ ಮಾರ್ಗ ದೇಶೀ ಎರಡೂ ಬಗೆಯ ಸಾಹಿತ್ಯದಲ್ಲಿ ಉಕ್ತವಾಗಿದೆ. ದೃಶ್ಯ ಕಾವ್ಯಗಳ ಎರಡೂ ಬಗೆಗಳನ್ನು (ಮಾರ್ಗೀ, ದೇಶಿ) ಕ್ರೋಢೀಕರಿಸಿ ಶಾರದಾತನಯ ಇವೆಲ್ಲವುಗಳನ್ನು ಸಾಮಾನ್ಯವಾಗಿ ನಾಟಕಗಳೆಂದು ಕರೆಯುವರು'. (ತೇಷಾಂ ರೂಪಕ ಸಂಜ್ಞಾಪಿ ಪ್ರಾಯೋದೃಶ್ಯತಯಾ ಕ್ವಚಿತ್ - ಭಾ. ಪ್ರ. ಅ. ೬) ಎಂದಿರುವನು. ಅತ ಏವ ಪಂಪಾದಿಗಳ ಮತ್ತು ಅವರಿಗಿಂತ ಈಚೆಯವರಾದ ರತ್ನಾಕರವರ್ಣಿ ಮುಂತಾದವರ ಕೃತಿಗಳಲ್ಲಿ ಕಾಣಸಿಗುವ ಈ ಶಬ್ದಗಳು ಮಾರ್ಗೀ ದೃಶ್ಯ ಕಾವ್ಯ ಸೂಚಕವೆಂದು ಗಣಿಸುವಂತಿಲ್ಲ.

ಹಳಗನ್ನಡ ಸಾಹಿತ್ಯದಲ್ಲಿ ಮಾರ್ಗೀ ರೂಪಗಳಿದ್ದಿಲ್ಲವೆನ್ನಲು ಅವುಗಳಿಗೆ ಭರತಾದಿ ಲಾಕ್ಷಣಿಕರು ಪಾತ್ರಗಳಿಗಾಗಿ ಹಾಕಿಕೊಟ್ಟ ಭಾಷಾ ನಿಯಮವು ಪ್ರಮುಖ ಕಾರಣ ಎಂಬುದು ಈ ವರೆಗಣ ಪ್ರತಿಪಾದನೆಯ ಪ್ರಧಾನ ಶ್ರುತಿ ಇದ್ದರೂ ಅದರರ್ಥ ಕನ್ನಡವಲ್ಲಾಗಲಿ ಇತರ ದೇಶೀ ಭಾಷೆಗಳಲ್ಲಾಗಲಿ ರಂಗಭೂಮಿಯೇ ಇದ್ದಿಲ್ಲವೆಂದಲ್ಲ. ಇದ್ದಿತು, ಆದರೆ ಅದು ಗಾನ, ನರ್ತನ ಮತ್ತು ಅಲಿಖಿತ ಅಥವಾ ಆಶು ಸಂಭಾಷಣ ಪ್ರಧಾನವಿದ್ದಿತು. ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಉಪರೂಪಕಗಳೆಂದು ಗಣಿಸಲ್ಪಟ್ಟ ಹಲವು ಪ್ರಕಾರಗಳನ್ನು ಒಳಗೊಂಡಿತ್ತು. ಸಂಸ್ಕೃತ ಲಾಕ್ಷಣಿಕರು ನಾಟಕಾದಿ ಅಭಿಜಾತ ರೂಪಕಗಳೊಂದಿಗೆ ಸುಮಾರು ೨೫ ಉಪರೂಪಕಗಳನ್ನು ಹೇಳಿ ಉಳಿದವುಗಳಿಗೆ ಲೆಕ್ಕವಿಲ್ಲೆಂದಿರುವರು. ಭರತನ ಶಿಷ್ಯರಲ್ಲಿ ಒಬ್ಬನೆಂದು ಗಣಿಸಲ್ಪಟ್ಟ ಕೋಹಲನು ರೂಪಕಗಳನ್ನು ಮಾರ್ಗೀ ದೇಶೀ ಎಂದು ವಿಂಗಡಿಸಿರುವನು. ಅವನ ಮೇರೆಗೆ ಮಾರ್ಗೀ ಪ್ರಕಾರಗಳಲ್ಲಿ ಕಾಲಿದಾಸ ಭವಭೂತಿ ಮೊದಲಾದವರ ನಾಟಕ ಪ್ರಕಾರಗಳು ಬರುತ್ತವೆ. ದೇಶೀ ಪ್ರಕಾರಗಳು ಗಾನ ನರ್ತನ ಭೂಯಿಷ್ಠವಿದ್ದು ಡೋಂಬಿಕಾದಿ ಪ್ರಕಾರಗಳನ್ನು ಒಳಗೊಳ್ಳುತ್ತವೆ.[೨] ಬಹುಶಃ ಇದನ್ನು ಗಮನಿಸಿಯೊ ಏನೊ ಉಪಾಧ್ಯೆ 'ಉಪರೂಪಕಗಳಲ್ಲಿ ಕೆಲವು ಸ್ವತಂತ್ರ, ಕೆಲವು ಆ ಮೊದಲು ದೇಶಭಾಷೆಗಳಲ್ಲಿ ಅಸ್ತಿತ್ವದಲ್ಲಿದ್ದ ಕೃತಿಗಳನ್ನು ಸಂಸ್ಕರಿಸಿ (ಉದಾ: ಡೋಂಬಿ, ಹಲ್ಲೀಸಕ, ಸಿದ್ಧದಕ, ಇತ್ಯಾದಿ) ಸಂಸ್ಕೃತದಲ್ಲಿ ಅಳವಡಿಸಿಕೊಂಡಂತಿವೆ' ಎಂದಿರುವರು (ಚಂ. ರೇಖಾ, ಮುನ್ನುಡಿ, ಪು. ೨೯). ಹೇಮಚಂದ್ರ ದೃಶ್ಯಕಾವ್ಯಗಳನ್ನು ಪಾಠ್ಯ ಮತ್ತು ಗೇಯ ಎಂದು

---

(೧) ಕರ್ಣಾಟ ಮಾಲತೀಮಾಧವವನ್ನು ಉಲ್ಲೇಖಿಸಿದ ಜಯಕೀರ್ತಿ (ಛಂದೋನುಶಾಸನ) ಅದನ್ನು ಕುಮಾರಸಂಭವದೊಡನೆ : 'ಕರ್ಣಾಟಮಾಲತೀಮಾಧವ ಪ್ರಭೃತಿ ಕಾವ್ಯೇ' ಎಂದಿರುವದರಿಂದ ಆದಾದರೂ ಕಾವ್ಯವಿರಬೇಕೆನಿಸುವದು.

(೨) ಉದ್ಧೃತಿ : Hist, of Sk. class. Lit, Krishnamachar

ವಿಂಗಡಿಸಿ ನಿರ್ದಿಷ್ಟ ರೀತಿಯಲ್ಲಿ ಲಿಖಿತ ಸಂಭಾಷಣ ಮತ್ತು ಇತರ ಲಕ್ಷಣಗಳಿರುವ ನಾಟಕಾದಿ ಅಭಿಜಾತ. ರೂಪಕಗಳನ್ನು ಪಾಠ್ಯದಲ್ಲಿ ಮತ್ತು ಪಾಠ್ಯವಲ್ಲದ ಅಂದರೆ ಗಾನ ನರ್ತನ ಭೂಯಿಷ್ಠ ಉಪರೂಪಕಗಳನ್ನು ಗೇಯ ಪ್ರಕಾರಗಳಲ್ಲಿ ಸೇರಿಸಿರುವನು.[೧]

ಕನ್ನಡದಲ್ಲೂ ಉಪರೂಪಕಗಳಿದ್ದವೆನ್ನಲು ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ 'ಪಗರಣ' ಎಂಬ ಪ್ರಕಾರವನ್ನು ಉಲ್ಲೇಖಿಸಿರುವದು ನಮ್ಮ ಸುದೈವ. ಅವನ ನಂತರ ಆಗಿಹೋದ ಇತರ ಕೆಲವರ ಕೃತಿಗಳಲ್ಲೂ ಅದು ಕಾಣಸಿಗುತ್ತದೆ. ದೋಷ ಪ್ರಕರಣದಲ್ಲಿ ನೃಪತುಂಗನು ಶ್ರುತದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿ ಕಷ್ಟ - ಎಂಬ ನಾಲ್ಕು ಬಗೆಯ ಕೃತಿ ದೋಷಗಳನ್ನು ಹೆಸರಿಸಿರುವನು. ದುಷ್ಕರವಿರುವ ಚಕ್ರಬಂಧ, ಕಮಲಬಂಧ ಮುಂತಾದ ಚಿತ್ರಕಾವ್ಯಗಳಲ್ಲಿ ಅನಿವಾರ್ಯವಾಗಿ ಶ್ರುತಿಕಷ್ಟ ದೋಷ ಸಂಭವಿಸಿದರೂ ಅದು ಕ್ಷಮ್ಯ. ಅದೇ ರೀತಿ ಪಗರಣದಲ್ಲಿ ಉಳಿದ ಮೂರು ದೋಷಗಳು ಕಂಡುಬಂದರೂ (ಉದ್ದೇಶ ಹಾಸ್ಯೋತ್ಪಾದನ ಇರುವದರಿಂದ) ಅದಾದರೂ ಕ್ಷಮ್ಯ ಎಂದಿರುವನು. ತುಸು ಹೆಚ್ಚು ಕಡಿಮೆ ಅದೇ ಕಾಲಖಂಡಕ್ಕೆ ಸೇರಿದ ವಡ್ಡಾರಾಧನದಲ್ಲಿ ಕಾರ್ತಿಕ ಸ್ವಾಮಿಯ ಕಡೆಯಲ್ಲಿ ಪಗರಣದ ಪ್ರಸಂಗವೊಂದು ವರ್ಣಿತವಾಗಿದೆ. ಅದೊಂದು ನಾನಾ ಬಗೆಯ ವೇಷಗಳನ್ನು ಧರಿಸಿ ಹಾಡುತ್ತ ಕುಣಿಯುತ್ತ ತಮ್ಮ ಕಲಾಪ್ರದರ್ಶನವನ್ನು ನೀಡಿ ಮುಂದೆ ಸಾಗುವ ಸೋಗುಗಳ ಮೆರವಣಿಗೆಯಂತಿದೆ.[೨]

ಪಗರಣವು ಅಭಿಜಾತ ರೂಪಕಗಳಲ್ಲಿ ಒಂದಿರುವ ' ಪ್ರಕರಣ'ದ ತದ್ಭವ ವೆಂದು ಬಗೆದು ಅದಕ್ಕೂ ಪಗರಣಕ್ಕೂ ಸಂಬಂಧ ಜೋಡಿಸುವತ್ತ ಕೆಲವರು ವಾಲಿರುವರು. ಸಂಸ್ಕೃತದಲ್ಲಿ ಪ್ರಕರಣಕ್ಕೆ ಆ ಹೆಸರಿನ ಲಕ್ಷಣಬದ್ಧ ರೂಪಕ (ಉದಾ : ಮೃಚ್ಛಕ ಟಿಕ) ಎಂದಲ್ಲದೆ ಎಲ್ಲ ಬಗೆಯ ರೂಪಕಗಳನ್ನು ಒಳಗೊಳ್ಳುವ ವರ್ಗವಾಚಕ ಅರ್ಥವೂ ಇದ್ದು ಈ ಅರ್ಥದಲ್ಲಿ ಕಾಳಿದಾಸನ ಶಾಕುಂತಲದಲ್ಲಿ ಪ್ರಯುಕ್ತವಾಗಿದೆ. ನಟಿಗೆ ಅಂದು ತಾವು ಅಭಿನಯಿಸಬೇಕಿದ್ದ ನಾಟಕವು ಕಾಲಿದಾಸನ ಅಭಿಜ್ಞಾನ ಶಾಕುಂತಲವೆಂದು ಮೊದಲೇ ತಿಳಿಸಿದ್ದರೂ ಅವಳ ಗಾನದಿಂದ ಮೈಮರೆತು ಸೂತ್ರಧಾರನು : ಕಥಮತ್ ಪ್ರಕರಣ ಮಾಶ್ರಿತ್ಯೈನಮಾಮಾರಾಧಯಾಮಃ, ಉಪಸ್ಥಿತರಿದ್ದ ವಿದ್ವದ್ವರೇಣ್ಯರನ್ನು ಯಾವ 'ಪ್ರಕರಣ' ದಿಂದ ಸಂತೋಷಪಡಿಸಬೇಕೆಂದು ಕೇಳುತ್ತಾನೆ. ಟೀಕೆಯಲ್ಲಿ ರಾಘವಭಟ್ಟ 'ಪ್ರಕರಣಂ - ರೂಪಕಂ' ಎಂದು ಇಲ್ಲಿ ಪ್ರಕರಣಕ್ಕಿರುವ

---

೧. ಪಾಠ್ಯೇ ಸಾಕ್ಷಾತ್ಕಾರ ಕಲ್ಪಾನು ವ್ಯವಸಾಯ ಸಂಪ್ರತ್ಯುಪಯೋಗಿನಃ ಪಾತ್ರಂ ಪ್ರತಿ ಭಾಷಾ ನಿಯಮಸ್ಯ
    ನಿ   ಯತಸ್ಯ ಛಂದೋಲಕಾರಾದೇಶ್ಯಾಭಿಧಾನಂ ದೃಶ್ಯತೇ|
    ಗೀಯ ಮಾನಂಚ ನಾಭಿನೀಯತೇ ಅಸಂಗಾದಪತ್ಯೇರಪಿ ತು ಯಾ ದೃಶಾ
    ಲಯ ತಾಲಾದಿನಾ ಯಾದ್ಯಗರ್ಥ ಸೂಚನ ಯೋ ಗ್ಯೋಽಭಿನಯಃ| ಕಾವ್ಯಾನು ಶಾಸನ..
ಶಾಸನ, ಅ. ೧ ಮುಂದೆ, ಟೀಕೆ ಗೇಯ ಪ್ರಕಾರದಲ್ಲಿ ಉದಾಹರಿಸಿದ ಭಾಗವು ಡೋಂಬಿ ಹೇಮಚಂದ್ರನ
    ಭಾಷಾ ನಿಯಮ ಸಮಸ್ಯೆ ನಿಯತಸ್ಯ' ಮಾತು ಗಮನಿಸುವಂಥದು.

೨. ಈ ಬಗೆಯ ಪಗರಣವು 'ಹಗರಣ' ಹೆಸರಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

ಸಾಮಾನ್ಯ ಅರ್ಥವನ್ನು ಹೇಳಿರುವನು, ಟಿಪ್ಪಣಿಗಳಲ್ಲಿ ಸಂಪಾದಕರು (ಎಂ.ಆರ್. ಕಾಳೆ) ಶಾಕುಂತಲ ನಾಟಕವಿದ್ದರೂ ಅದನ್ನು ಪ್ರಕರಣವೆಂದು ನಿರ್ದೇಶಿಸಿರುವದು ಪ್ರಕರಣಕ್ಕಿರುವ ರೂಪಕ ಸಾಮಾನ್ಯ ಎಂಬ ಅರ್ಥದಲ್ಲಿ ಎಂದು ರಾಘವ ಭಟ್ಟನ ಅರ್ಥಗಾರಿಕೆಯನ್ನು ಸ್ಪಷ್ಟಪಡಿಸಿರುವರು. ಇದರಿಂದ ಕನ್ನಡದ ಸಂಬಂಧ ಮಾತ್ರವಿದ್ದಂತೆ ತೋರುವುದರಿಂದ ಎರಡರ ಸಂಬಂಧ ಜೋಡಿಸುವಾಗ ಈ ಅಂಶವನ್ನು ಗಮನಿಸಬೇಕಾಗುವದು.

ಹಳಗನ್ನಡ ನಾಟ್ಯ ನಾಟಕಗಳ ಸಂಬಂಧದಲ್ಲಿ ಪಂಪನ ನೀಲಾಂಜನೆ ನೃತ್ಯ, ರತ್ನಾಕರವರ್ಣಿಯ ಭರತೇಶ ವೈಭವದಲ್ಲಿನ ಪೂರ್ವ ಮತ್ತು ಉತ್ತರ ನಾಟಕ ಸಂಧಿಗಳು ಒಳ್ಳೇ ಉದಾಹರಣೆಗಳಾಗಿವೆ. ಇವಾವುವೂ ಅಭಿಜಾತ ನಾಟಕಗಳಲ್ಲ. ಯಕ್ಷಗಾನ / ಮೂಡಲಪಾಯ ಆಟಗಳೂ ಅಲ್ಲ. ಇವುಗಳಿಗಿದ್ದ ಪೂರ್ವರಂಗವೇ ಮುಂದೆ ಯಕ್ಷಗಾನ ಮೂಡಲಪಾಯ ಆಟಗಳಿಗೆ ಅಷ್ಟಿಷ್ಟು ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ಪೂರ್ವರಂಗವಾಗಿ ಬಂದಿದೆ.

ಮಾನವ ಪಾತ್ರಗಳಿರುವ ಆಟಗಳೊಂದಿಗೆ ಗೊಂಬೆ (ಮರ, ತೊಗಲು) ಆಟಗಳೂ ಬಹಳ ಪುರಾತನ ಕಾಲದಿಂದ ನಡೆದು ಬಂದಿರಬೇಕು. ಕೆಲವರಂತೂ ದೃಶ್ಯಕಾವ್ಯಗಳ ಮೂಲವನ್ನು ಗೊಂಬೆ ಆಟಗಳಲ್ಲಿ ಕಂಡದ್ದುಂಟು. ಕೌಟಿಲ್ಯನ (ಕ್ರಿ.ಪೂ. ೩೨೦) ಅರ್ಥಶಾಸ್ತ್ರದಲ್ಲಿ ಊರೂರು ಸುತ್ತಿ ಜನತೆಗೆ ಮನರಂಜನೆ, ಜೊತೆಗೆ ಉಪದೇಶ ಒದಗಿಸುತ್ತಿದ್ದ ಮೇಳಗಳ ಮಾತು ಬರುತ್ತದೆ. ಅವರಿಗೆ ಆತ 'ರಂಗೋಪಜೀವಿಗಳು' ಎಂದಿರುವನು. ಹೊಲಗೆಲಸಗಳ ಹಂಗಾಮಿನಲ್ಲಿ ಅವರನ್ನು ಒಂದೆಡೆ ನಿಲ್ಲುವಂತೆ. ಏರ್ಪಾಡು ಮಾಡಿ, ಮಿಕ್ಕ ಸಮಯದಲ್ಲಿ ಬರಮಾಡಿಕೊಂಡು ಕಾರ್ಯಕ್ರಮಗಳನ್ನು ಜರುಗಿಸಬೇಕೆಂದು ವಿಧಿಸಿರುವನು.

ಚಾಲುಕ್ಯ ದೊರೆ ಸೋಮೇಶ್ವರನ ಮಾನಸೋಲ್ಲಾಸದಿಂದ ಆವನ ಕಾಲದಲ್ಲಿ ಮನರಂಜನೆಯ ಕಲಾತ್ಮಕ ಸಾಧನೆಗಳೆಂದು ಗಾನ, ನರ್ತನ, ಪುರಾಣ, ಕಥಾಕಾಲಕ್ಷೇಪಗಳು ಅಸ್ತಿತ್ವದಲ್ಲಿದ್ದರೂ ಇಂದಿನ ಬಗೆಯ ಯಕ್ಷಗಾನ ಮೂಡಲಪಾಯ ಗೊಂಬೆ ಆಟಗಳು ಇನ್ನೂ ರೂಪಗೊಂಡಿದ್ದಿಲ್ಲವೆಂದು ತೋರುವದು. ಕಥಾ ಕಾಲಕ್ಷೇಪ ವಿವರಣದಲ್ಲಿ ಸೋಮೇಶ್ವರನು ಕಥಕರಲ್ಲಿ ನಾಲ್ಕು ವರ್ಗಗಳನ್ನು ಹೇಳಿರುವನು. ಸಂಗೀತದಲ್ಲಿನ 'ಯಕ್ಕಲಗಾಣ'ದಂತೆ ಅನ್ಯರ ನೆರವಿಲ್ಲದೆ ಒಬ್ಬನೇ ಕಥೆ ಹೇಳುತ್ತಿದ್ದರೆ ಆತನಿಗೆ ಏಕವಕ್ತ್ಯ ಎನ್ನುತ್ತಿದ್ದರು. ಇಬ್ಬರಿದ್ದರೆ 'ದ್ವಿಕ್ಕರು', ನಾಲ್ಕರಿಗಿಂತ ಹೆಚ್ಚು ಜನರಿದ್ದರೆ ಅವರಿಗೆ 'ಬಹುಪುರೂಷಾ' ಎನ್ನುತ್ತಿದ್ದರು. ಪ್ರಮುಖ ಕಥಾನಿರೂಪಕನಿಗೆ 'ಸೂತ್ರಧಾರ' ಎನ್ನುತ್ತಿದ್ದರು. ಕಥಾ ನಿರೂಪಣೆ ಪ್ರಾಕೃತದಲ್ಲಿ ಅಂದರೆ ದೇಶೀ ಭಾಷೆಯಲ್ಲಿ ಇರುತ್ತಿತ್ತು. ಹಿಮ್ಮೇಳವಿರುತ್ತಿತ್ತು. ನಡುನಡುವೆ ಹಾಡುವವಕ್ಕೆ ಗಾಯಿಕೆಯರಿ ರುತ್ತಿದ್ದರು. ಕಥೆ ಕನ್ನಡದಲ್ಲಿದ್ದರೆ ಅದು ಹೆಚ್ಚಾಗಿ ಷಟ್ಪದಿಗಳಲ್ಲಿರಬೇಕು ಎಂದಿರುವನು. ಕಥೆ ರಸಪೂರ್ಣ ಅಂದರೆ ಶೌರ್ಯ, ಔದಾರ್ಯ, ಅದ್ಭುತ, ಭೀಭತ್ಸ, ಹಾಸ್ಯ, ಕರುಣ, ಶೃಂಗಾರಭರಿತವಿರಬೇಕು; ರಾಮಾಯಣ, ಮಹಾಭಾರತ, ಬೃಹತ್ಕಥಾದಿಗಳಲ್ಲಿಯ ಪ್ರಸಂಗಗಳು, ಪ್ರಸಿದ್ಧ ನಾಟಕ ಮಹಾಕಾವ್ಯ ವಸ್ತುಗಳು, ಲೋಕವೃತ್ತಾಂತ ನಿಪುಣನಿಂದ ರಚಿಸಲ್ಪಟ್ಟ ವೀರರ

ಚರಿತ್ರೆಗಳು ಕಥಾ ವಿಷಯಗಳಿರಬೇಕೆಂದಿರುವನು. ಕಥೆಯೆಂದ ಬಳಿಕ (ಈರ್ವರು ಅಥವಾ ಹೆಚ್ಚು ಕಥಕರಿರುವ ಸಂದರ್ಭಗಳಲ್ಲಿ ನಡುನಡುವೆ) ಅಲಿಖಿತ ಅಥವಾ ಆಶು ಸಂಭಾಷಣ ಸಹಜ ಮತ್ತು ಕ್ರಮಪ್ರಾಪ್ತ. ಇದಕ್ಕೆ ನರ್ತನದ ಪೂರ್ವರಂಗವನ್ನೂ, ಕಥಕರಿಗೆ ವೇಷಭೂಷಣಗಳನ್ನೂ ಪ್ರಾಸಂಗಿಕ ನರ್ತನವನ್ನೂ ಸೇರಿಸಿದರೆ ಸಾಕು; ಅದು ಇಂದು ಪರಿಚಿತವಿರುವ ಯಕ್ಷಗಾನ, ಮೂಡಲಪಾಯ, ಆನುಷಂಗಿಕವಾಗಿ ಗೊಂಬೆ ಆಟಗಳಿಗೆ ಸಿದ್ಧವಾಗಿತ್ತು.

ಹೀಗೆ ರೂಪಗೊಂಡಿರಬಹುದಾದ ಯಕ್ಷಗಾನ ಮತ್ತು ಸದೃಶ ಆಟಗಳು ವಿಜಯನಗರ ಪತನಾನಂತರ ಅತೀವ ಲೋಕಪ್ರಿಯವಾಗಿ ರಾಜಮನ್ನಣೆ ಪಡೆದವು. ಸಂಗೀತ ಸುಧಾ ಎಂಬ ಪ್ರಮಾಣಭೂತ ಸಂಗೀತ ಗ್ರಂಥವನ್ನು ಬರೆದ ತಂಜಾವರ ಅರಸು ರಘುನಾಥ ನಾಯಕ (ಕ್ರಿ.ಶ. ೧೯೧೪), 'ರುಕ್ಮಿಣೀ ಕೃಷ್ಣ ವಿವಾಹ' ಯಕ್ಷಗಾನ ಪ್ರಸಂಗವನ್ನು ರಚಿಸಿದ್ದನೆಂಬ ಮಾತು ಅವನ ಈ ಗ್ರಂಥದಲ್ಲಿದೆ. ಯಕ್ಷಗಾನ ಆಟಗಳಲ್ಲಿ ಭಾಗವತನಿಗೆ ದೊರೆತ ಪ್ರಾಧಾನ್ಯ ಮತ್ತು ಭಕ್ತಿ ಸಂಪ್ರದಾಯದ ಉಚ್ಛ್ರಾಯ ಸ್ಥಿತಿಗಳನ್ನು ಗಮನಿಸಿದಾಗ ಭಾಗವತ ಸಂಪ್ರದಾಯದ ಮತ್ತು ಅದರದೇ ಒಂದು ಕವಲಾದ ಹರಿದಾಸ ಸಂಪ್ರದಾಯದ ಹಿನ್ನೆಲೆ, ಜೊತೆಗೆ ಆವರೆಗೆ ನಡೆದುಬಂದ ಗಾನ ನರ್ತನ ವೇಷಭೂಷಣಾದಿ ರೀತಿನೀತಿಗಳ ಮಧುರ ಸಂಗಮದಲ್ಲಿ ಸದ್ಯ ಪರಿಚಿತವಿರುವ ಯಕ್ಷಗಾನ / ಮೂಡಲಪಾಯ ಮತ್ತು ತತ್ ಸದೃಶ ಆಟಗಳ ಉಗಮ ವಿಕಾಸಗಳನ್ನು ಗುರುತಿಸಬಹುದಾಗಿದೆ. ಮೂಡಲಪಾಯ ಆಟಗಳಲ್ಲಿ ಸಾರಥಿಗೆ (ಹನುಮನಾಯಕ/ಹಾಸ್ಯಗಾರ) ಪ್ರಾಧಾನ್ಯವಿದೆ. ಇತ್ತ ಭಾಗವತನು ಹಿಮ್ಮೇಳದ ಪ್ರಮುಖನಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಾನೆ.

ತಂಜಾವರದ ನಾಯಕ ಅರಸರೂ ಅವರ ನಂತರ ಬಂದ ಮರಾಠಾ ಅರಸರೂ ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವರು. ಅವು ತೆಲುಗಿನಲ್ಲಿವೆ. ಮರಾಠಾ ಅರಸರಲ್ಲಿ ಕೆಲವರು ಮರಾಠಿಯಲ್ಲೂ ರಚಿಸಿರುವರು. ಕರ್ನಾಟಕದಲ್ಲಿ ಕೆಳದಿ ಅರಸರು ಯಕ್ಷಗಾನ ಕಲೆಯನ್ನು ಚೆನ್ನಾಗಿ ಪೋಷಿಸಿಕೊಂಡು ಬಂದರು. ದಕ್ಷಿಣ ಕನ್ನಡ ಜಿಲ್ಲೆಯ ಮೇಳವೊಂದು ಕ್ರಿ. ೧೮೧೨ರಲ್ಲಿ ಮೈಸೂರು ಮಹಾರಾಜರ ದರ್ಬಾರದಲ್ಲಿ ಪ್ರದರ್ಶನ ನೀಡಿದ ದಾಖಲೆಗಳಿವೆ. ಮೈಸೂರು ಅರಸುಗಳ ಮನೆತನಕ್ಕೆ ಸೇರಿದ ಅಳಿಯ ಲಿಂಗರಾಜನೂ (೧೮೨೩-೧೮೭೪) ಕೆಲವು ಯಕ್ಷಗಾನ ಕೃತಿಗಳನ್ನು ರಚಿಸಿರುವನು. ಇತ್ತ ಉತ್ತರ ಕನ್ನಡ ಜಿಲ್ಲೆಯ ಕರ್ಕಿ ಮೇಳವು ಕ್ರಿ. ೧೮೪೨ರಲ್ಲಿ ಸಾಂಗಲಿಯಲ್ಲಿ (ಮಹಾರಾಷ್ಟ್ರ) ಪ್ರದರ್ಶನ ನೀಡಿ ಮರಾಠಿ ರಂಗಭೂಮಿಗೆ ಸ್ಫೂರ್ತಿಸ್ಥಾನ ವಾಯಿತು. ಸಾಂಗಲಿಯ ಆಗಿನ ಸಂಸ್ಥಾನಿಕ ಶ್ರೀಮಂತ ಚಿಂತಾಮಣರಾವ ಪಾಂಡುರಂಗರಾವ ಉರ್ಫ ಅಪ್ಪಾಸಾಹೇಬ ಪಟವರ್ಧನ ಅವರು ಕರ್ಕಿ ಮೇಳದ ಆಟಗಳನ್ನು ಮೆಚ್ಚಿಕೊಂಡು ತಮ್ಮ ವ್ಯವಹಾರ ಕುಶಲ, ಆಶ್ರಿತ ವಿಷ್ಣುದಾಸ ಭಾವೆ ಅವರಿಗೆ ಮರಾಠಿಯಲ್ಲೂ ಆ ಬಗೆಯ ಆಟಗಳನ್ನು ರಚಿಸಲು ಆದೇಶಿಸಿದರು. ಸೀತಾಸ್ವಯಂವರವೆಂಬ ಭಾವೆ ರಚಿತ ಆ ಬಗೆಯ ಅಂದರೆ ಯಕ್ಷಗಾನ ಬಗೆಯ ಆಟವು ೧೮೪೩ರಲ್ಲಿ ರಂಗಭೂಮಿಗೆ ಬಂದು ಜನ ಮೆಚ್ಚುಗೆಯನ್ನು ಗಳಿಸಿತು. ಸ್ವಯಂ

ಭಾವೆ ಬೇರೆ ಬೇರೆ ಅನೇಕ ಆಟಗಳನ್ನು ರಚಿಸಿ ರಂಗಭೂಮಿಗೆ ತಂದರು. ಅವೆಲ್ಲ ಪೌರಾಣಿಕ ಕಿರುನಾಟಕ/ಆಖ್ಯಾನಗಳೆಂದು ಪ್ರಸಿದ್ಧವಾದವು. ಯಕ್ಷಗಾನ ಆಟಗಳಲ್ಲಿ ನರ್ತನಕ್ಕೆ ಪ್ರಾಧಾನ್ಯವಿರುವಷ್ಟು ಭಾವೆ ನಾಟಕಗಳಲ್ಲಿ ಅದಿಲ್ಲ. ಹೆಚ್ಚಾಗಿ ಅವು ಗಾನಪ್ರಧಾನ, ಕ್ರಿಯಾತ್ಮಕ ಮತ್ತು ಶಬ್ದಾತ್ಮಕವಿದ್ದವು. ಭಾವೆ ಮೇಳದ ಜಾಡಿನಲ್ಲಿ ಮಹಾರಾಷ್ಟ್ರದಲ್ಲಿ ಅನೇಕ ಮೇಳಗಳು ಹುಟ್ಟಿಕೊಂಡವು. ಅವುಗಳಲ್ಲಿ ಸಾಂಗಲೀಕರ ಮತ್ತು ಈಚಲಕರಂಜಿಕರ ಮಂಡಳಿಗಳು ಹೆಚ್ಚು ಪ್ರಸಿದ್ಧಿ ಪಡೆದವು. ಮಹಾರಾಷ್ಟ್ರದಲ್ಲಷ್ಟೇ ಅಲ್ಲ, ಮಹಾರಾಷ್ಟ್ರದ ಹೊರಗೆ, ಕರ್ನಾಟಕದಲ್ಲಿ ಸಹ, ಪ್ರದರ್ಶನ ನೀಡಿ ಕೀರ್ತಿ ಗಳಿಸಿದವು. ತತ್ಪೂರ್ವದಲ್ಲಿ ಶಾಮಜಿ ಕಾಳೆ ಎಂಬಾತನು ಕರ್ನಾಟಕದಿಂದ ಯಕ್ಷಗಾನ ಜಾತಿಗೆ ಸೇರಿದ ದಶಾವತಾರ ಆಟವನ್ನು ಮಹಾರಾಷ್ಟ್ರಕ್ಕೆ ತಂದಿದ್ದನು. ರತ್ನಾಗಿರಿ ಜಿಲ್ಲೆಯ ಆಡಿವರೆ ಎಂಬಲ್ಲಿಯ ಮಹಾಕಾಳಿ ದೇವಸ್ಥಾನದಲ್ಲಿ ಅದು ಪ್ರದರ್ಶಿಸಲ್ಪಡುತ್ತಿತ್ತು. ಸರದಾರ ಆಂಗ್ರೆ ಕ್ರಿ. ೧೭೩೬ರಲ್ಲಿ ತನ್ನ ಮಗ ಫಕೀರಜಿಯ ಮದುವೆ ಸಮಯದಲ್ಲಿ ಶಾಮಜಿ ಕಾಳೆಯ ಈ ಮೇಳವನ್ನು ಆಮಂತ್ರಿಸಿದ್ದನೆಂಬ ಉಲ್ಲೇಖವಿದೆ (ಲೋ. ನಾ. ಪರಂಪರಾ, ಪು. ೧೫). ಆದರೂ ಭಾವೆಯೇ ಕ್ರಮಬದ್ಧ ಮರಾಠಿ ರಂಗಭೂಮಿಯ ಆದ್ಯ ಪ್ರವರ್ತಕನೆಂದು ಗಣಿಸಲ್ಪಟ್ಟಿರುವನು.

ಸೌರಾಷ್ಟ್ರದ ಹೇಮಚಂದ್ರನು ಉಪರೂಪಕಗಳನ್ನು ಉದ್ಧತ, ಮಸೃಣ (ಮೃದು), ಮಿಶ್ರ ಎಂದು ಮೂರು ಬಗೆಗಳಲ್ಲಿ ವಿಂಗಡಿಸಿರುವನು. ಯಕ್ಷಗಾನ ಮತ್ತು ಸದೃಶ ಆಟಗಳನ್ನು ಅವನು ಉದ್ಧತ/ ಮಿಶ್ರ ಪ್ರಕಾರಗಳಲ್ಲಿ ಸೇರಿಸಿದರೆ, ಉತ್ತರ ಕರ್ನಾಟಕದಲ್ಲಿ ಸಣ್ಣಾಟ (ಮೂಡಲಪಾಯಕ್ಕೆ ದೊಡ್ಡಾಟ ಎನ್ನುವದುಂಟು) ಎಂದು ಪ್ರಸಿದ್ಧವಿರುವ 'ಕೃಷ್ಣ ಪಾರಿಜಾತ' ಬಗೆಯ ಆಟಗಳನ್ನು ಮಸೃಣ ಪ್ರಕಾರದಲ್ಲಿ ಸೇರಿಸಬಹುದು. ಉದ್ಧತವು ವೀರ ರೌದ್ರ ರಸ ಪ್ರಧಾನವಿದ್ದರೆ ಮಸೃಣ ಶೃಂಗಾರ ರಸಪ್ರಧಾನವಿರುತ್ತದೆ. ಮಿಶ್ರದಲ್ಲಿ ತುಸು ಹೆಚ್ಚು ಕಡಿಮೆ ಎರಡೂ (ವೀರ - ಶೃಂಗಾರ) ಸಮ ಪ್ರಮಾಣದಲ್ಲಿರುತ್ತವೆ.

ದೃಶ್ಯಕಾವ್ಯವೊಂದು ರಸಾಸ್ವಾದವೇ ಮುಖ್ಯೋದ್ದೇಶವಾಗಿರುವ ವಸ್ತು ಅಭಿನಯಗಳ[೧] ಕಲಾತ್ಮಕ ಪ್ರದರ್ಶನವೆಂದಿಟ್ಟುಕೊಂಡು ಹೊರಟಲ್ಲಿ, ಅರಸರ ಅರಮನೆಯಿಂದ ಬಡವನ ಗುಡಿಸಲಿನವರೆಗೆ ಕರ್ನಾಟಕದಲ್ಲಿ, ಕನ್ನಡ ಭಾಷೆಯಲ್ಲಿ, ಆವರೆಗೆ ಅಂದರೆ ೧೯ ಶ. ದ್ವಿತೀಯಾರ್ಧದವರೆಗೆ ಯಕ್ಷಗಾನ / ಮೂಡಲಪಾಯ (ದೊಡ್ಡಾಟ) ಮತ್ತು ಅದರಷ್ಟೇ ಒಂದು ಕವಲಾದ ಸಣ್ಣಾಟ, ಆನುಷಂಗಿಕವಾಗಿ ಗೊಂಬೆ ಆಟ ಮೊದಲಾದವು ಮನರಂಜನೆಯ ಪ್ರಮುಖ ಸಾಧನಗಳಾಗಿದ್ದವು. ಕಾಳಿದಾಸ ಭವಭೂತಿ ಮೊದಲಾದವರ ನಾಟಕಗಳ ಬಗೆಯ ಅಭಿಜಾತ ನಾಟಕಗಳಿದ್ದಿಲ್ಲ. ಹೀಗಾಗಲು ನಾಟಕಾದಿ ಮಾರ್ಗರೂಪಕಗಳಿಗೆ ಭರತ ಮತ್ತು ಆವನ ನಂತರದ ಲಾಕ್ಷಣಿಕರು ಪಾತ್ರಗಳ ಸ್ಥಾನಮಾನಗಳನುಸಾರ ಅವುಗಳಿಗೆ ಹಾಕಿಕೊಟ್ಟ, ಸಂಸ್ಕೃತ, ಪ್ರಾಕೃತ

---

೧. ಅಭಿನಯವು ಆಂಗಿಕ, ವಾಚಿಕ, ಆಹಾರ್ಯಕ (ವೇಷಭೂಷಣ), ಸಾತ್ವಿಕ (ರೋಮಾಂಚಾದಿಗಳ ಪ್ರದರ್ಶನ) ಎಂದು ಚತುರ್ವಿಧವಾಗಿದೆ.

ಮೊದಲಾದ ಭಾಷಾನಿಯಮ ಅಡ್ಡ ಬರುತ್ತಿತ್ತು; ಸಿಂಗರಾರ್ಯನ ಮಿತ್ರವಿಂದಾಗೋವಿಂದ ಸಂಪೂರ್ಣ ಕನ್ನಡದಲ್ಲಿದ್ದರೂ ಅದು ಲಕ್ಷಣಬದ್ಧ ನಾಟಕವಲ್ಲ; ಅದೊಂದು ಸಟ್ಟಕ[1]; ಅರಮನೆಯ ಮತ್ತು ತತ್ಸಂಬಂಧಿತ - ವಿದ್ವಾಂಸರ ಸಂತೋಷಕ್ಕಾಗಿ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಹುಟ್ಟಿಕೊಂಡ ಪ್ರಥಮ ಮತ್ತು ಬಹುಶಃ ಕೊನೆಯ ಅಪವಾದಾತ್ಮಕ, ಆದರೂ ಕನ್ನಡ ನಾಟಕಗಳ ದೃಷ್ಟಿಯಿಂದ ಒಂದಡಿ ಮುಂದೆ ಇಟ್ಟ ಕೃತಿ ಎಂಬುದು ವ್ಯಕ್ತವಾಗದಿರದು.

ಮರಾಠಿ ರಂಗಭೂಮಿಯ ಪ್ರಾರಂಭಿಕ ಯುಗಕ್ಕೆ ಸಾಂಗಲಿ ಸಂಸ್ಥಾನಾಧಿಪತಿಯ ರಸಿಕತೆ. ಗುಣಗ್ರಾಹಕತೆ ಪ್ರಚೋದಕವಾದಂತೆ. ಕರ್ನಾಟಕದ ಈ ಬಗೆಯ ರಂಗಭೂಮಿಗೆ ಮುಂದೆ 30 ವರ್ಷಗಳ ನಂತರ ಆಗಿಹೋದ ಶಾಂತಕವಿಗಳ (ಬಾಳಾಚಾರ್ಯ ಸಕ್ಕರಿ) ಅದಮ್ಯ ಕನ್ನಡ ಭಕ್ತಿಯು ಪ್ರಚೋದಕವಾಯಿತು. ಕ್ರಿ. ಶ. ೧೮೭೫ ರಿಂದ ನಾಟಕ ರಚನೆಯಲ್ಲಿ ತೊಡಗಿದ ಅವರ ನಾಟಕಗಳ ವಸ್ತು ಪೌರಾಣಿಕವಿದ್ದರೂ ಸಮಗ್ರ ಕರ್ನಾಟಕದ ಸ್ವತಂತ್ರ ನಾಟಕಕಾರರಲ್ಲಿ ಅವರೇ ಆದ್ಯರೆನ್ನಬೇಕು. ಅವರಾದರೂ ಕರ್ನಾಟಕದ ಕರಾವಳಿ ಜಿಲ್ಲೆಗಳ ಯಕ್ಷಗಾನ ಆಟಗಳಿಂದ ಪ್ರಭಾವಿತರಾದವರು. "ಪುರಾಣ ಕಥೆಯಾಟಗಳನಾಡಿ ಬುಧ ಮಂಡಳಿಯ ಮೆಚ್ಚಿಸಿದ ಘಟ್ಟದ ಬುಡದ ಭಾಗವತರಾಧ್ಯಗುರು ನಟರಿಗೆ" ಎಂದು ಸಾರಿದ ಅವರ ಆರಂಭದ ನಾಟಕಗಳಂತೂ ಸುಧಾರಿತ ಯಕ್ಷಗಾನ ಆಟಗಳಂತಿವೆ. ಪ್ರಾರಂಭದವಿರಲಿ, ನಂತರದವಿರಲಿ, ಶಾಂತಕವಿಗಳ ಮೂಲ ಉದ್ದೇಶ ಕನ್ನಡ ಪ್ರಚಾರವಾಗಿತ್ತಾದ್ದರಿಂದ ಅವರ ನಾಟಕಗಳು ಸ್ವಯಂಪೂರ್ಣವಾಗಿ ಬರಲಿಲ್ಲೆಂಬ ಅಭಿಪ್ರಾಯವೂ ಇದೆ. ಅವರ ಪ್ರಪ್ರಥಮ ನಾಟಕ 'ಉಷಾಹರಣ' ೧೮೭೭ರಲ್ಲಿ ಗದುಗಿನಲ್ಲಿ ರಂಗಭೂಮಿಯ ಮೇಲೆ ಬೆಳಕು ಕಂಡಿತು.[2]

ಅಭಿಜಾತ ನಾಟಕಗಳ ಅರುಣೋದಯ

ಕ್ರಿ. ೧೯ ಶ. ದ್ವಿತೀಯಾರ್ಧವು ಸಮಗ್ರ ಭಾರತೀಯ ರಂಗಭೂಮಿಯ ಇತಿಹಾಸದಲ್ಲಿ ತೀವ್ರ ಬದಲಾವಣೆಯ ಕಾಲವೆನ್ನಬಹುದು.[3] ಪ್ರಕೃತ ವಿವೇಚನೆಯ ನಾಯಕ ಶ್ರೀ ಚುರಮರಿ

---

೧. ಸಂಸ್ಕೃತ ನಾಟ್ಯ ಸಾಹಿತ್ಯದಲ್ಲಿಯೇ ಉಪಲಬ್ಧ ಸಟ್ಟಕಗಳ ಸಂಖ್ಯೆ ಬೆರಳೆಣಿಕೆಯಷ್ಟು ಇರುವಾಗ ಕನ್ನಡದಲ್ಲಂತೂ ಅವುಗಳ ಅಸ್ತಿತ್ವ (ಸಿಂಗಾರಾರ್ಯನ ಈ ಕೃತಿಯೊಂದನ್ನು ಬಿಟ್ಟು) ದೂರದ ಮಾತೇ ಸರಿ.

೨. ಹಾವನೂರ - ಹೊ. ಅ. ಪು. ೩೯೮; ಕೀರ್ತಿನಾಥ ಕುರ್ತಕೋಟಿ ಸ. ಬಂ. ದಾರಿ, ಸಂ. ೧, ಪು. ೨೧೪; ಎಚ್. ಕೆ. ರಂಗನಾಥ - ಕರ್ನಾಟಕ ಥಿಯೇಟರ್, ಪು. ೮೧.

೩. ಈ ಅವಧಿಗೆ ಸಂಬಂಧಿಸಿದ ಮುಂದಣ ವೃತ್ತಾಂತವನ್ನು ಶ್ರೀರಂಗರ (ಆದ್ಯ) 'ಭಾರತೀಯ ರಂಗಭೂಮಿ', ಆರ್.ಕೆ. ಯಾಜ್ಞಿಕರ ' ಇಂಡಿಯನ್ ಥಿಯೇಟರ್', ಶ್ರೀನಿವಾಸ ಹಾವನೂರರ 'ಹೊಸಗನ್ನಡದ ಅರುಣೋದಯ', ಎಚ್.ಕೆ. ರಂಗನಾಥರ 'ಕರ್ನಾಟಕ ಥಿಯೇಟರ್', ಶ್ರೀಕೃಷ್ಣದಾಸರ 'ಹಮಾರಿ ನಾಟ್ಯ ಪರಂಪರಾ' ಲಕ್ಷ್ಮೀನಾರಾಯಣಲಾಲರ 'ಪಾರ್ಸಿ - ಹಿಂದೀ ರಂಗಮಂಚ',ಚುರಮರಿ ಶಾಕುಂತಲಕ್ಕಿರುವ (೩ನೇ ಆವೃತ್ತಿ) ಮುದವೀಡು ಕೃಷ್ಣರಾಯರ ಮುನ್ನುಡಿ - ಈ ಗ್ರಂಥಗಳಿಂದ ಸಂಗ್ರಹಿಸಿಕೊಟ್ಟಿದೆ.

ಶೇಷಗಿರಿರಾಯರು ಹುಟ್ಟಿ ಬೆಳೆದು ಸದ್ಯ ಉಪಲಬ್ಧವಿರುವ ತಮ್ಮ ಏಕಮೇವ ಕೃತಿಯೇ ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಕನ್ನಡಿಸಿ ಕರ್ನಾಟಕ ರಂಗಭೂಮಿಗೆ ಅರ್ಪಿಸಿ (೧೮೭೦) ಕಣ್ಮರೆಯಾದ ಕಾಲವಾದರೂ ಇದೇ (೧೮೮೨). ಪ್ರಾರಂಭದಲ್ಲಿ ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಪಾಶ್ಚಿಮಾತ್ಯರಲ್ಲಿ ನಡೆದ ವ್ಯಾಪಾರ, ಉದ್ದಿಮೆ, ರಾಜಕಾರಣ ಕ್ಷೇತ್ರಗಳಲ್ಲಿನ ಸ್ಪರ್ಧೆಯಲ್ಲಿ ಬ್ರಿಟಿಷರು ಗೆದ್ದು ಕೊನೆಗೆ ರಾಜ್ಯಕರ್ತರಾಗಿ ಇಲ್ಲಿಯೇ ಉಳಿದುಕೊಂಡರು. ಉದ್ದೇಶ ಸ್ವಾರ್ಥದ್ದಿದ್ದರೂ ತಮ್ಮ ಆಡಳಿತ ವ್ಯವಸ್ಥೆಗಾಗಿ ಅವರು ಭಾರತೀಯರಿಗೆ ಶಿಕ್ಷಣ ಒದಗಿಸಿ ಇಂಗ್ಲಿಷ್ ಭಾಷೆಯ ಪರಿಚಯ ಮಾಡಿಕೊಟ್ಟದ್ದೊಂದು ಮಹತ್ವದ ವಿಷಯವೆನ್ನಬಹುದು. ಶ್ರೀರಂಗರ ಮಾತಿನಲ್ಲಿ ಹೇಳುವದಾದರೆ - ಹೊಸ ಶಿಕ್ಷಣ ಪಡೆದ ಭಾರತೀಯರಿಗೆ ಅವರ ಸಾಹಿತ್ಯ, ಸಂಸ್ಕೃತಿ ಮತ್ತು ಜೀವನದ ಇತರ ಎಲ್ಲ ರಂಗಗಳಲ್ಲಿ ಏನೋ ಒಂದು ಮೇಲ್ಮೆ ಕಾಣತೊಡಗಿತು. ಅವರನ್ನು ಅನುಕರಿಸಬೇಕೆಂಬ ಆಶೆ ಅದಮ್ಯವಾಯಿತು. ಅವರೆಗೆ ಅನಾದಿ ಕಾಲದಿಂದ ನಡೆದು ಬಂದ ಶಾಸ್ತ್ರ ನಿಷ್ಠೆ, ಸಂಪ್ರದಾಯಕ ಕಟ್ಟುನಿಟ್ಟುಗಳು ಭ ರದಿಂದ ಸಡಿಲಾಗತೊಡಗಿದವು. ಕೆಲವು ನಾಮಶೇಷವಾದವು. ರಂಗಭೂಮಿಯೂ ಇದಕ್ಕೆ ಅಪವಾದವಾಗಲಿಲ್ಲ.

ಪ್ರಾರಂಭದಲ್ಲಿ ಬಂಗಾಲದಲ್ಲಿ ಬ್ರಿಟಿಷರು ಹೆಚ್ಚು ಸಂಖ್ಯೆಯಲ್ಲಿ ನೆಲೆಸಿದ್ದರು. ಕಲಕತ್ತೆಯಲ್ಲಿ ಅವರು ತಮ್ಮದೇ ಆದ ಒಂದು ರಂಗಮಂದಿರವನ್ನು (ಥಿಯೇಟರ್) ಕಟ್ಟಿಸಿಕೊಂಡಿದ್ದರು. ಮುಂಬಯಿ ಅವರ ಎರಡನೇ ಕೇಂದ್ರ. ಅಲ್ಲಿಯೂ ಕ್ರಿ.ಶ. ೧೭೭೦ -ರಲ್ಲಿ ಕಟ್ಟಿಸಿದ ಅವರದೊಂದು ರಂಗಮಂದಿರವಿದ್ದಿತು. ವಿಲಾಯತಿಯಿಂದ ಆಗಾಗ ನಾಟ್ಯ ಮೇಳಗಳು ಬಂದು ಶೇಕ್ಸ್‌ಪಿಯರ ಮತ್ತು ಇತರರ ಪ್ರಸಿದ್ಧ ಶೋಕಾಂತ ಸುಖಾಂತ, ಗೀತ ಪ್ರಧಾನ (ಆಪೆರಾ), ಹಾಸ್ಯ ಪ್ರಧಾನ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಸ್ಥಳೀಕ ಆಂಗ್ಲರು ತಮ್ಮವೇ ಆದ ಮೇಳಗಳನ್ನು ಕಟ್ಟಿಕೊಂಡಿದ್ದರು. ಕಾರ್ಯಕ್ರಮಗಳಿಗೆ ಪ್ರತಿಷ್ಠಿತ ಭಾರತೀಯರನ್ನು ಆಮಂತ್ರಿಸುತ್ತಿದ್ದರು. ದೇಶ ಭಾಷೆಗಳಲ್ಲಿ ಸಂಸ್ಕೃತ - ಅಭಿಜಾತ ನಾಟಕಗಳು ಮತ್ತು ಇಂಗ್ಲಿಷಿನಲ್ಲಿದ್ದ ಹೊಸ ಬಗೆಯ ನಾಟಕಗಳು ಭರದಿಂದ ಅನುವಾದಗೊಳ್ಳತೊಡಗಿದವು. ಕೆಲವು ಭಾರತೀಯರ ಜೀವನದ ರೀತಿನೀತಿಗಳಿಗೆ ಒಗ್ಗುವಂದದಲ್ಲಿ ರೂಪಾಂತರ ಹೊಂದಿದವು. ಕ್ರಿ. ೧೮ನೇ ಶತಮಾನದ ಕೊನೆಕೊನೆಗೆ ಆಂಗ್ಲೇತರ ಪಾಶ್ಚಿಮಾತ್ಯನೊಬ್ಬನ ಮುಂದಾಳುತನದಲ್ಲಿ ಎರಡು ಇಂಗ್ಲಿಷ್ ನಾಟಕಗಳು ಅನುವಾದಗೊಂಡು ರಂಗಭೂಮಿಗೆ ಬಂದಿದ್ದು ಒಂದು ಉಲ್ಲೇಖನೀಯ ಸಂಗತಿ. ಇದಾದದ್ದು ಬಂಗಾಲಿ ಭಾಷೆಯಲ್ಲಿ. ಹೆರಾಸಿಮ್ ಲೆಬೆಡೆಫ್ ಎಂಬ ರಶಿಯನ್ ಸಾಹಸಿಯೊಬ್ಬನು ಗೋಲಖನಾಥ ದಾಸ ಎಂಬುವನ ಸಹಕಾರದೊಂದಿಗೆ ಒಂದು ಮೇಳವನ್ನು ಕಟ್ಟಿ ಕ್ರಿ. ೧೭೯೫ರಲ್ಲಿ 'The Disguise', ೧೭೯೬ರಲ್ಲಿ 'Love is the Best Doctor' ಎಂಬ ಎರಡು ನಾಟಕಗಳನ್ನು ಕಲಕತ್ತೆಯಲ್ಲಿ ಹೊಸದಾಗಿ ಕಟ್ಟಿಸಿದ ಇಂಡಿಯನ್ ಥಿಯೇಟರಿನಲ್ಲಿ ಪ್ರದರ್ಶಿಸಿದನು. ಇತ್ತ ಸ್ವದೇಶಾಭಿಮಾನಿಗಳು, ಸ್ವಸಂಸ್ಕೃತಿ ಪ್ರೇಮಿಗಳು ಜಾಗ್ರತರಾಗಿದ್ದರು. ಹೊಸ ಹೊಸ ರಂಗಮಂದಿರಗಳು ಹುಟ್ಟಿಕೊಂಡವು. ಪಂಡಿತ - ರಾಮ ನಾರಾಯಣ ತರ್ಕರತ್ನ ಎಂಬವರು ಬರೆದ 'ಕುಲೀನ - ಕುಲ - ಸರ್ವಸ್ವ' ಎಂಬುದು ಬಂಗಾಲಿಯಲ್ಲಿಯ ಸ್ವತಂತ್ರ

ಮತ್ತು ಪ್ರಥಮ ಶೋಕಾಂತಿಕ ನಾಟಕ. ಕಲಕತ್ತೆಯಲ್ಲಿ ಅದು ೧೮೫೭ರಲ್ಲಿ ರಂಗಭೂಮಿಯನ್ನು ಕಂಡಿತು. ಕಾಳಿದಾಸನ ಅಭಿಜ್ಞಾನ ಶಾಕುಂತಲ ಮೊದಲ ಬಾರಿ ಆಸಾಮಿ ಭಾಷೆಗೆ ಪರಿವರ್ತಿತವಾಯಿತೆಂದು ಹೇಳಲಾಗುತ್ತಿದೆ. ಬಂಗಾಲಿಯಲ್ಲಿ ಅದು ೧೮೫೭ರಲ್ಲಿ ಪರಿವರ್ತಿತವಾಗಿ ಸಿಮ್ಲಾದಲ್ಲಿ! ಪ್ರದರ್ಶಿಸಲ್ಪಟ್ಟಿತು.

ಮುಂಬಯಿಯಾದರೋ ಮೊದಲಿನಿಂದಲೂ ಬಹುಭಾಷಿಕ ಪಟ್ಟಣ. ಉರ್ದು, ಗುಜರಾತಿ, ಮರಾಠಿ ನಾಟಕಗಳ ಅಭಿವೃದ್ಧಿಗೆ ಫಲವತ್ತಾದ ಭೂಮಿಯಾಗಿದ್ದಿತು. ಮುಂಬಯಿಯ ಪ್ರಸಿದ್ಧ ನಾಗರಿಕ, ಕೊಡುಗೈ ದೊರೆ ಮತ್ತು ಭಾರತೀಯ ವಿದ್ಯೆ ಸಂಸ್ಕೃತಿಗಳ ಅಭಿಮಾನಿ ಜಗನ್ನಾಥ ಶಂಕರ ಶೇಟ ಅವರು ೧೮೪೨ರಲ್ಲಿ ಒಂದು ಹೊಸ ರಂಗಮಂದಿರವನ್ನು ಕಟ್ಟಿಸಿ ಕ್ಲಪ್ತ ಬಾಡಿಗೆಯಿಂದ ಭಾರತೀಯ ಮತ್ತು ಯುರೋಪಿಯನ್ ಎರಡೂ ಬಗೆಯ ನಾಟಕಗಳಿಗೆ ಅದನ್ನು ಒದಗಿಸಿದರು. ಕ್ರಿ. ೧೭೭೦ರಲ್ಲಿ ಕಟ್ಟಿದ ಆಂಗ್ಲ ಮಂದಿರ ಅಕಸ್ಮತ್ತಾಗಿ ಬೆಂಕಿಯಿಂದ ನಾಶವಾದದ್ದು ಶಂಕರಶೇಟರ ಈ ಹೊಸ ಮಂದಿರದ ನಿರ್ಮಾಣಕ್ಕೆ ಪ್ರಚೋದಕವಾಯಿತು. ಅಷ್ಟೊತ್ತಿಗೆ ರಾಜಾಶ್ರಯ ತಪ್ಪಿ ವ್ಯವಸಾಯ ಮಂಡಳಿಯಲ್ಲಿ ಪರಿವರ್ತಿತರಾದ ಸಾಂಗಲಿಯ ಭಾವೆ ಮಂಡಳಿಯು ಸ್ಥಳಿಕ ಪಾರ್ಸಿ ಮೇಳ (ಹಿಂದು ಡ್ರಾಮೆಟಿಕ್ ಕೋರ್) ಮತ್ತು ಅನ್ಯ ಕೆಲವರ ಸಕ್ರಿಯ ಸಹಾಯದಿಂದ ಮುಂಬಯಿಗೆ ಬಂದು ೧೮೫೩, ೧೮೫೪ರಲ್ಲಿ ಶಂಕರಶೇಟರ ಹೊಸ ರಂಗಮಂದಿರದಲ್ಲಿ ಪ್ರದರ್ಶನ ನೀಡಿತು. ಮುಂಬಯಿಯ ಸುವಿಖ್ಯಾತ ವಿಲ್ಸನ್ ಕಾಲೇಜಿನ ಪ್ರಿನ್ಸಿಪಾಲ ಡಾ. ವಿಲ್ಸನ್ ಭವಭೂತಿಯ ಉತ್ತರರಾಮಚರಿತವನ್ನು ಇಂಗ್ಲಿಷಿಗೆ ಪರಿವರ್ತಿಸಿದ್ದರು. ಆಗಲೆ ಕಲಕತ್ತೆಯಲ್ಲಿ ರಂಗಭೂಮಿಯನ್ನು ಕಂಡಿತು (೧೮೩೧). ಮುಂಬಯಿಯಲ್ಲಿ ಸ್ಥಾಪಿತವಾದ ಕಾಲಿದಾಸ ಎಲ್ಫಿನ್‌ಸ್ಟನ್ ಸೊಸೈಟಿ ಎಂಬುದೊಂದು ಹವ್ಯಾಸಿ ಮೇಳವು ಶಾಕುಂತಲವನ್ನು ಅಭಿನಯಿಸಿತು. ಇಂಗ್ಲಿಷಿನಲ್ಲಿ ಪುಣೆಯ ಕಾಲೇಜು ವಿದ್ಯಾರ್ಥಿಗಳು ಶೇಕ್ಸ್‌ಪಿಯರನ ಜುಲಿಯಸ್ ಸೀಜರ್ ನಾಟಕವನ್ನು ಪ್ರದರ್ಶಿಸಿದರು. ತತ್ಪರಿಣಾಮವಾಗಿ ಮರಾಠಿಯಲ್ಲಿ ಸಂಸ್ಕೃತ ಇಂಗ್ಲಿಷ್ ಭಾಷೆಗಳಲ್ಲಿನ ಶ್ರೇಷ್ಠ ಮತ್ತು ಲೋಕಪ್ರಿಯ ನಾಟಕಗಳ ಪರಿವರ್ತನೆಗೆ ಪುಟ ದೊರೆತು ಅನೇಕ ಅಂಥ ನಾಟಕಗಳು ಬೆಳಕಿಗೆ ಬಂದವು. ಅವುಗಳಲ್ಲಿ ಕೆಲವು ರಂಗಭೂಮಿಯನ್ನು ಕಂಡವು. ಆಗಲೆ ಪ್ರಕಟವಾಗಿದ್ದರಿಂದ ಅವು 'ಬುಕಿಶ್' ನಾಟಕಗಳೆಂದು ಪ್ರಸಿದ್ಧವಾದವು. ಬೆಳಕಿಗೆ ಬಂದ ಸ್ವತಂತ್ರ ನಾಟಕಗಳಲ್ಲಿ ೧೮೬೧ರಲ್ಲಿ ಪ್ರಕಟವಾದ ಕೀರ್ತನೆ ಕೃತ 'ಥೋರಲೆ ಮಾಧವರಾವ ಪೇಶ್ವೆ' ಬಹಳಷ್ಟು ಪ್ರಸಿದ್ಧಿ ಪಡೆಯಿತು. ಕಾಳಿದಾಸನ ಶಾಕುಂತಲವು ಮರಾಠಿಯಲ್ಲಿ ಅನುವಾದವಾದರೂ ಇದೇ ಸಮಯದಲ್ಲಿ ರುದ್ರ ಇಲ್ಲವೆ ಗಂಭೀರ ಸ್ವರೂಪದ ನಾಟಕಗಳಿಂದ ಭಾರವಾದ ಮನಸ್ಸನ್ನು ಹಗುರವಾಗಿಸಲು ಅವುಗಳ ಜೊತೆಗೆ ಗಂಟೆ ಅರ್ಧಗಂಟೆ ನಡೆಯುವ 'ಫಾರ್ಸ' ಅಥವಾ ಪ್ರಹಸನಗಳನ್ನು ಅಭಿನಯಿಸುವ ಉಪಕ್ರಮ ಹೇಗೋ ತೊಡಗಿತು. ಹೆಚ್ಚಾಗಿ ಅವಾದರೂ

---

೧. ಕೆಲವರ ಅಭಿಪ್ರಾಯದಲ್ಲಿ ಇದು ಮೊನೀರ ವಿಲಿಯಮ್ಸ್ ಸಂಪಾದಿತ ಶಾಕುಂತಲದ ಇಂಗ್ಲಿಷ್ ಭಾಷಾಂತರದ ಪರಿಷ್ಕೃತ ರೂಪವೆಂದಿದೆ.

ಪಾಶ್ಚಿಮಾತ್ಯ ನಾಟ್ಯಸಾಹಿತ್ಯದಲ್ಲಿನ ರೂಪಾಂತರಗಳೇ. ಒರಟು ಇಲ್ಲವೆ ಕೀಳುದರ್ಜೆಯ ಫಾರ್ಸುಗಳಿಗೂ ಇಂಬಿಲ್ಲದಿದ್ದಿಲ್ಲ.

ಪಾರ್ಸಿಗಳ ಪುರೋಗಾಮಿತ್ವ

ಮುಂಬಯಿ ಪಾರ್ಸಿಗಳ ಪ್ರಮುಖ ವಾಸಸ್ಥಳ. ಅಲ್ಪಸಂಖ್ಯಾಕರಿದ್ದರೂ ಅವರದ್ದೊಂದು ಸುಸಂಘಟಿತ ಉದಾರವೃತ್ತಿಯ ಉದ್ಯೋಗಶೀಲ ಸಮಾಜ. ತಮ್ಮ ಮೂಲ ಸಂಸ್ಕೃತಿ ಪರಂಪರೆಗಳನ್ನು ಬಿಡದೆ ಭಾರತೀಯ, ವಿಶೇಷವಾಗಿ ಪಾಶ್ಚಿಮಾತ್ಯ ಸಂಸ್ಕೃತಿ -ಪರಂಪರೆಗಳತ್ತ ವಾಲಿದ ಸಮಾಜ. ಒಂದು ದೃಷ್ಟಿಯಿಂದ ಭಾರತೀಯ ಆಧುನಿಕ ರಂಗಭೂಮಿಯ (ಹವ್ಯಾಸಿ, ವ್ಯವಸಾಯಿ) ವಿಕಾಸ ಮತ್ತು ಪ್ರಸರಣಕ್ಕೆ ಅವರೇ ಪುರೋಗಾಮಿಗಳೆಂದು ಹೇಳಬಹುದು. ಕ್ರಿ. ೧೮೫೩ರಷ್ಟೊತ್ತಿಗೆ ಅವರು ತಮ್ಮದೇ ಆದ ಮೇಳವನ್ನು ಕಟ್ಟಿಕೊಂಡಿದ್ದರು. ಆದರೆ ಬಂಗಾಲಿ, ಗುಜರಾತಿ, ಮರಾಠಿ ಇತ್ಯಾದಿಗಳಂತೆ ಅವರದ್ದೇ ಆದ ಪರಿಪಕ್ವ ಭಾಷೆ ಇದ್ದಿಲ್ಲ. ಅವರದು ಅನೇಕ ಉರ್ದು ಶಬ್ದಗಳಿಂದ ಕೂಡಿದ ಒಂದು ಬಗೆಯ ಫಾರ್ಸಿ-ಗುಜರಾತಿ ಭಾಷೆ. ಶಬ್ದಗಳ ಉಚ್ಚಾರ, ಮಾತಿನ ಶೈಲಿ ಇತ್ಯಾದಿಗಳಲ್ಲಿ ಇಂದು ಕೂಡ ಒಡೆದು ಕಾಣುವಷ್ಟು ವ್ಯತ್ಯಾಸವುಂಟು. ಬಹುಸಂಖ್ಯೆ ಪಾರ್ಸಿಗಳಲ್ಲಿ ನಾಟಕೀಯತೆ ಜನ್ಮಜಾತವಾಗಿ ಬಂದಿದ್ದರೂ ಸರಿಯಾದ ಭಾಷಾಮಾಧ್ಯಮಕ್ಕಾಗಿ ಅವರು ಉರ್ದು, ಹಿಂದಿ, ಗುಜರಾತಿ ಕಲಾಕಾರರನ್ನು ಕಲೆಹಾಕಿಕೊಳ್ಳ ಬೇಕಾಯಿತು. ಪ್ರಾರಂಭದಿಂದ ಅನ್ಯ ಕ್ಷೇತ್ರಗಳಲ್ಲಿ ಬೆಳೆದು ಬಂದ ಅವರ ವ್ಯಾಪಾರಿ ದೃಷ್ಟಿ ಇಲ್ಲಿಯೂ ಇಣಕಿಕ್ಕಿತ್ತು. ತನ್ಮೂಲಕ ಸಾಹಿತ್ಯಿಕ ದೃಷ್ಟಿಯಿಂದ ಅವರ ನಾಟಕಗಳು ಮೇಲ್ಮಟ್ಟಕ್ಕೇರಲಿಲ್ಲ. ಭಾರತೀಯ ನಾಟ್ಯಶಾಸ್ತ್ರ ಮತ್ತು ಸಂಪ್ರದಾಯಿಕ ಕಟ್ಟುನಿಟ್ಟುಗಳಿಗಾಗಿ ಸ್ವತಂತ್ರವಿದ್ದ ಅವರು ಜನರಂಜನೆಯನ್ನೇ ಮುಖ್ಯವಾಗಿಟ್ಟುಕೊಂಡು ಇಂಗ್ಲಿಷ್, ಇರಾಣ, ಅರಬ್ಬಿ ಜೊತೆಗೆ ಭಾರತೀಯ ಪೌರಾಣಿಕ, ಐತಿಹಾಸಿಕ ವಿಷಯುಗಳನ್ನು ಸಾಧು ಸಂತರ ಚರಿತ್ರೆಗಳನ್ನು ತಮ್ಮ ನಾಟಕಗಳಿಗೆ ವಸ್ತುವಾಗಿ ಬಳಸಿಕೊಂಡರು. ಸೀನಸೀನರಿ, ಬಣ್ಣ-ಬೆಳಕು, ವೇಷ-ಭೂಷಣ, ಇತ್ಯಾದಿ ರಂಗಸಜ್ಜಿಕೆ, ಮೋಹಕ ಮಟ್ಟದ ಗಾನ ನರ್ತನಗಳೊಂದಿಗೆ ಸಮಗ್ರ ಭಾರತದಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಮುಂಬಯಿ ರಂಗದಲ್ಲಿ ದಾದಾಭಾಯಿ ಪಟೇಲ, ಕೆ. ಖಟಾವ, ಕೆ. ಬಾಲಿವಾಲಾ ಮೊದಲಾದವರು ಪ್ರಮುಖರಾಗಿದ್ದರು. ಬಹುಸಂಖ್ಯೆಯವರು ಇಂಗ್ಲಿಷ್ ಶಿಕ್ಷಣ ಪಡೆದವರಿದ್ದರು. ಕೆಲವರು ಇಂಗ್ಲಂಡಕ್ಕೆ ಹೋಗಿ ನಾಟ್ಯ ಕಲೆಯಲ್ಲಿ ತರಬೇತಿ ಪಡೆದು ಬಂದಿದ್ದರು. ನಾಟಕಕಾರನ ಪ್ರತಿಭೆ, ನಟರ ಕಲಾಕೌಶಲ್ಯ ಅದೆಷ್ಟೇ ಉಚ್ಚಮಟ್ಟದವಿದ್ದರೂ ಪ್ರೇಕ್ಷಕವರ್ಗ ಅದೇ ಇದ್ದರೂ ಯಶಸ್ಸಿಗೆ ಅವರಲ್ಲಿ ಒಂದು ಬಗೆಯ ಅದ್ಭುತ ರಮ್ಯ ಅನ್ವಯಿಸುವಂತಿತ್ತು. ಅವರ ನಾಟಕಗಳಲ್ಲೆಲ್ಲ ಇಂದ್ರಸಭೆ ಎಂಬ ನಾಟಕವು ಅಖಿಲ ಭಾರತೀಯ ಲೋಕಪ್ರಿಯತೆಯನ್ನು ಗಳಿಸಿತ್ತು.

ಮೂಲದಲ್ಲಿ ಇಂದ್ರಸಭಾ ಒಂದು ಉರ್ದು ನಾಟಕ (ಅಪೇರಾ). ೧೮೫೩ ರಲ್ಲಿ ರಂಗಕ್ಕೆ ಬಂದ ಅದನ್ನು ಔಧ ಪ್ರಾಂತದ ಕೊನೆಯ ನವಾಬ ವಜೀದಲ್ಲೀ ಶಹನ ಆಸ್ಥಾನ ಕವಿ ಅಮಾನತ್

ಎನ್ನುವವನು ಬರೆದನು. ಕಥೆ ತೀರ ಸರಳ. ಇಲ್ಲವೇ ಇಲ್ಲೆಂದರೂ ನಡೆದೀತು. ದೇವೇಂದ್ರರ ಒಡ್ಡೋಲಗ. ಅನೇಕ ಸ್ವರ್ಗಾಂಗನೆಯರ ನರ್ತನ ನಡೆದಿರುತ್ತದೆ. ಅವರಲ್ಲಿ ಓರ್ವಳು ಗುಲ್‌ಫ್ರಾಮ್ ಎಂಬ ಮಾನವನನ್ನು ಪ್ರೀತಿಸುತ್ತಾಳೆ. ಇಂದ್ರನಿಗೆ ಇದು ಗೊತ್ತಾದಾಗ ಆತ ಅವಳ ಪಂಖಗಳನ್ನು (ಪಾಶ್ಚಿಮಾತ್ಯ ಮತ್ತು ಯವನ ಕಲ್ಪನೆ ಅನುಸಾರ) ಕತ್ತರಿಸಿ ಗುಲ್‌ಫ್ರಾಮನನ್ನು ನೆಲಮನೆಯಲ್ಲಿ ಬಂಧಿಸಿಡುತ್ತಾನೆ. ಪಂಖ ಕಳೆದುಕೊಂಡ ಸ್ವರ್ಗಾಂಗನೆ ಜೋಗಿಣಿಯಾಗುತ್ತಾಳೆ. ಗಾನವೇ ಅವಳ ಜೀವನಾಧಾರವಾಗುತ್ತದೆ. ಅವಳ ದಿವ್ಯಗಾನದ ಖ್ಯಾತಿ ಇಂದ್ರನ ಕಿವಿಗೆ ಮುಟ್ಟುತ್ತದೆ. ತಾನು ಕೇಳಿದ್ದನ್ನು ಕೊಟ್ಟರೆ ಹಾಡುವದಾಗಿ ಆಕೆ ಇಂದ್ರನಿಗೆ ಹೇಳುತ್ತಾಳೆ. ಇಂದ್ರ ಒಪ್ಪುತ್ತಾನೆ. ತನ್ನ ಗಾನದಿಂದ ಇಂದ್ರನನ್ನು ಸಂತೋಷಗೊಳಿಸಿ ಆಕೆ ಗುಲ್‌ಫ್ರಾಮನನ್ನು ಬಿಡಿಸಿಕೊಳ್ಳುತ್ತಾಳೆ. ಈರ್ವರ ಮಿಲನವಾಗುತ್ತದೆ. ಅಂತೂ ಬಣ್ಣಬಣ್ಣದ ಉಡುಗೆ-ತೊಡುಗೆ, ಕಣ್ಣು ತುಂಬುವ ಸೀನಸೀನರಿ, ಶ್ರುತಬದ್ಧ ತಾಲಬದ್ಧ ಮೋಹಕ ಗಾನನರ್ತನಗಳಿಂದ ಅದು ಭಾರತದಾದ್ಯಂತ ಲೋಕಪ್ರಿಯವಾಯಿತು. ಅನೇಕರು ತಮ್ಮವೇ ಆದ ಇಂದ್ರಸಭಾಗಳನ್ನು ರಚಿಸಿದರು. ಕನ್ನಡದಲ್ಲಿ ೧೮೮೦ನೇ ದಶಕದಲ್ಲಿ ಗುರುರಾವ ರಾಘವೇಂದ್ರ ಮಮದಾಪುರ ಮತ್ತು ಮೈಸೂರು ಆಸ್ಥಾನ ವಿದ್ವಾಂಸ ಪೋಟಗಾನಹಳ್ಳಿ ಶಂಕರ ಶಾಸ್ತ್ರಿ ಇಂದ್ರಸಭಾಗಳನ್ನು ರಚಿಸಿದ್ದುಂಟು.

ಮೈಸೂರತ್ತಣ ಅಭಿಜಾತ ನಾಟಕ ಪರಂಪರೆಗೆ ಅಲ್ಲಿ ಜರುಗಿದ ಸಾಂಗಲೀಕರ ಮಂಡಳಿಯ ಪೌರಾಣಿಕ ನಾಟಕಗಳ (೧೮೭೬ -೭೭) ಮತ್ತು ೧೮೭೨ರಲ್ಲಿ 'ಲಿಮಿಟೆಡ್ ಕಂಪೆನಿ' ಎಂದು ಅಸ್ತಿತ್ವದಲ್ಲಿ ಬಂದ ವಿಕ್ಟೋರಿಯ (ಬಾಲಿವಾಲಾ) ಪಾರ್ಸಿ ಕಂಪನಿಯ ಇಂದ್ರಸಭಾ, ಗುಲೇಬಕಾವಲಿ ಮೊದಲಾದ ನಾಟಕಗಳು ಪ್ರಚೋದಕವಾದವು. ಅವುಗಳನ್ನು ಮೆಚ್ಚಿಕೊಂಡ ಆಗಿನ ಅರಸು ಶ್ರೀ ಚಾಮರಾಜೇಂದ್ರ ಒಡೆಯರು ಆ ಬಗೆಯ ನಾಟಕಗಳನ್ನು ರಚಿಸಿ ಪ್ರಯೋಗಿಸಲು ಆಸ್ಥಾನ ವಿದ್ವಾಂಸರಿಗೆ ಆದೇಶವಿತ್ತರು(೧೮೮೦). ಅವರ ಆದೇಶಾನುಸಾರ ಮೊದಲು ಹೊರಬಂದದ್ದು ಬಸವಪ್ಪ ಶಾಸ್ತ್ರಿಗಳ ಕರ್ಣಾಟಕ ಶಾಕುಂತಲ. ಕ್ರಿ. ೧೮೮೧ ರಲ್ಲಿ ರಂಗಭೂಮಿಗೆ ಇಳಿದ ಆ ನಾಟಕ ಅವರಿಗೆ 'ಅಭಿನವ ಕಾಳಿದಾಸ' ಬಿರುದನ್ನೂ ತಂದು ಕೊಟ್ಟಿತಲ್ಲದೆ ಶಾಕುಂತಲ ಕರ್ಣಾಟಕ ನಾಟಕ ಸಭಾ ಎಂಬ ಅರಮನೆ ಪೋಷಿತ. ಸಂಸ್ಥೆಗೆ ಜನ್ಮ ಕೊಟ್ಟಿತು. ಬೇರೆ ಕೆಲವು ಸಂಸ್ಕೃತ ಇಂಗ್ಲಿಷ್ ನಾಟಕಗಳು ಕನ್ನಡದಲ್ಲಿ ಬೆಳಕು ಕಂಡವು. ಮರುವರ್ಷ ಅಂದರೆ ೧೮೮೨ರಲ್ಲಿ ಅರಮನೆಯ ಶಾಕುಂತಲ ಕರ್ಣಾಟಕ ನಾಟಕ ಸಭೆಯು ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭಾ ಎಂಬ ಹೆಸರಿನಿಂದ ಮೆರೆಯತೊಡಗಿತು.

ಇದಿಷ್ಟು ತುಸು ಹೆಚ್ಚು ಕಡಿಮೆ ೧೯ ಶ. ದ್ವಿತೀಯಾರ್ಧದವರೆಗೆ ಇದ್ದದ್ದು. ಕನ್ನಡದಲ್ಲಾಗಲಿ ಅನ್ಯ ದೇಶಭಾಷೆಗಳಲ್ಲಾಗಲಿ ಸಂಸ್ಕೃತದಲ್ಲಿರುವ ಭಾಸ ಕಾಳಿದಾಸ ಮೊದಲಾದವರ ಬಗೆಯ ಅಭಿಜಾತ ನಾಟಕಗಳು ಅದೇಕೆ ಹುಟ್ಟಿಕೊಳ್ಳಲಿಲ್ಲ, ನಂತರ ಅದೆಂತು ಹುಟ್ಟಿಕೊಂಡವು, ಅಲ್ಲಿಯವರೆಗಣ ದೇಶೀರಂಗಭೂಮಿಯ ಸ್ವರೂಪ, ವಿದೇಶೀ ನಾಟಕಗಳ

ಮತ್ತು ಪ್ರದರ್ಶನ ತಂತ್ರಗಳ ಆವಿಷ್ಕರಣ ಇತ್ಯಾದಿಗಳ ವಿಹಂಗಮ ಸಮೀಕ್ಷೆ, ಮುಂದಣದು ಇದೇ ಅವಧಿಯಲ್ಲಿ ಹುಟ್ಟಿದ ಪ್ರಕೃತ ಪ್ರಬಂಧ ನಾಯಕ ಚುರಮರಿ ಶೇಷಗಿರಿರಾಯರ ಜೀವನ ವೃತ್ತಾಂತ; ಕನ್ನಡದಲ್ಲಿ ಅವರು ಅನುವಾದಿಸಿದ ಕಾಳಿದಾಸನ ಅಭಿಜ್ಞಾನ ಶಾಕುಂತಲದ ವಿಮರ್ಶೆ ಮತ್ತು ಆನುಷಂಗಿಕ ವಿಷಯಗಳ ವಿಚಾರ.

ಆದರೂ ತತ್ಪೂರ್ವದಲ್ಲಿ ಒಂದು ಮಾತನ್ನು ಹೇಳಬೇಕು. ಅದೆಂದರೆ ಅವರು ಹೊಸಗನ್ನಡ ತಿಳಿಮಾತಿನ ಸಾಗ್ರಸಂಗೀತ ಅಭಿಜಾತ ನಾಟಕಗಳ ಆದ್ಯಪ್ರವರ್ತಕರಲ್ಲದೆ ಸು. ೧೮೮೦ ರಿಂದ ತುಸು ಹೆಚ್ಚು ಕಡಿಮೆ ಅರ್ಧ ಶತಮಾನ ಕಾಲ, ವಿಶೇಷವಾಗಿ ಕನ್ನಡ ಮರಾಠಿ ರಂಗಭೂಮಿಗಳನ್ನಾಳಿದ ಅಂಥ ನಾಟಕಗಳ ಆದ್ಯ ಪ್ರವರ್ತಕರೆಂದು ಸಹ ಹೇಳಬಹುದು.

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಶಾಂತಕವಿಗಳು ಜಂಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿರುವರು. ಕನ್ನಡ ರಂಗಭೂಮಿಯ ಮೇಲೆ ೧೮೭೭ರಲ್ಲಿ ಬಂದ ಅವರ ಪ್ರಪ್ರಥಮ ನಾಟಕ 'ಉಷಾಹರಣ' ಅವರಿಗೆ ' ಕರ್ಣಾಟಕ ನಾಟಕ ಪಿತಾಮಹ' ಎಂಬ ಬಿರುದನ್ನು ತಂದುಕೊಟ್ಟಿತು. ಶಾಂತಕವಿಗಳ ಆದ್ಯ ನಾಟಕಕ್ಕಿಂತ ಏಳು ವರ್ಷ ಮೊದಲು ಬೆಳಕು ಕಂಡಿದ್ದರೂ ಚುರಮರಿಯವರ ಕೃತಿ ರಂಗಭೂಮಿಗೆ ಬರಲು ಸು. ೨೯ ವರ್ಷಗಳು ಹಿಡಿದವು. ವಿಜಾಪುರ ಜಿಲ್ಲೆ ಬಾದಾಮಿಯ ಕೆಲವು ನಾಟ್ಯ ವಿಲಾಸಿಗಳು ಅಲ್ಲಿ ವಕೀಲರಾಗಿದ್ದ ಶ್ರೀ ಮುಗಳಿ ಶ್ರೀನಿವಾಸರಾಯರೇ ಮೊದಲಾದವರ ಪ್ರೇರಣೆಯಿಂದ ಒಂದು ಹವ್ಯಾಸಿ ಮೇಳವನ್ನು ಕಟ್ಟಿಕೊಂಡು ವಿಜಾಪುರ ಬಾಗಲಕೋಟೆಗಳಲ್ಲಿ ಅದನ್ನು ಪ್ರದರ್ಶಿಸಿ ಸಾಕಷ್ಟು ಜನಮೆಚ್ಚುಗೆ ಗಳಿಸಿದರು. ಇದಾದದ್ದು ೧೮೯೯ರಲ್ಲಿ. ಅವರ ಪ್ರಯೋಗಗಳಿಂದ ಸ್ಫೂರ್ತಿಗೊಂಡ ಮುದವೀಡು ಕೃಷ್ಣರಾಯರು ೧೯೦೫ರಲ್ಲಿ ಧಾರವಾಡದಲ್ಲಿ 'ಭರತ ಕಲೋತ್ತೇಜಕ ಸಂಗೀತ ಸಮಾಜ' ಎಂಬ ಹವ್ಯಾಸಿ ಮೇಳವನ್ನು ಸಂಘಟಿಸಿ ಮೊದಲನೆಯ ಪ್ರಯೋಗವೆಂದು ಅದನ್ನು ಮತ್ತೆ ರಂಗಭೂಮಿಗೆ ತಂದರು. ಮುಂದೆ ಅದರ ಹತ್ತಿಪ್ಪತ್ತು ಪ್ರಯೋಗಗಳಾದವು. ಸ್ವಯಂ ಮುದವೀಡು ಒಂದೆರಡು ನಾಟಕಗಳನ್ನು ರಚಿಸಿದ್ದರು. ಚುರಮುರಿ ಶಾಕುಂತಲದೊಡನೆ ಅವುಗಳ ಪ್ರಯೋಗವೂ ನಡೆಯುತ್ತಿತ್ತು. ನಟವರ್ಗದಲ್ಲಿ ಅಧಿಕಾಂಶರು ಆಗ ಧಾರವಾಡದಲ್ಲಿದ್ದ ರೇಲ್ವೆ 'ಹೆಡ್ಡಾಫೀಸಿನ' ನೌಕರರಿದ್ದರು. ೧೯೦೮ರಲ್ಲಿ 'ಹೆಡ್ಡಾಫೀಸು' ಮದ್ರಾಸಕ್ಕೆ ಸ್ಥಾನಾಂತರಿಸಲ್ಪಟ್ಟಿದ್ದರಿಂದ ಮೇಳ ಕುಸಿಯಲಾರಂಭಿಸಿ ಕೊನೆಗೆ ಸು. ೧೯೧೫-೧೬ರಲ್ಲಿ ನಾಮಶೇಷವಾಯಿತು.

ಶಾಂತಕವಿಗಳು ಕನ್ನಡ ನಾಡಿನ ಆದ್ಯ ನಾಟಕಕಾರರಿದ್ದರೂ ಅವರ ನಾಟಕಗಳು ಯಕ್ಷಗಾನ/ ಮೂಡಲಪಾಯ ಆಟಗಳ ತಳಹದಿಯ ಮೇಲೆ ರಚಿತವಾದಂಥವು. ಸಾಹಿತ್ಯಿಕ ದೃಷ್ಟಿಯಿಂದ ಅವು ಅಪೂರ್ಣವೆಂಬ ವಿದ್ವಾಂಸರ ವಿಮರ್ಶಾತ್ಮಕ ಅಭಿಪ್ರಾಯದ ಉಲ್ಲೇಖ ಈ ಮೊದಲು ಬಂದು ಹೋಗಿದೆ. ಪ್ರಕೃತ ಪ್ರಬಂಧವಾದರೊ ಕನ್ನಡದಲ್ಲಿದ್ದ ಕಾಳಿದಾಸ ಮೊದಲಾದವರ ನಾಟಕಗಳ ಬಗೆಯ ಅಭಿಜಾತ ನಾಟಕಗಳಿಗೆ ಸಂಬಂಧಿಸಿದೆ. ಹೊಸಗನ್ನಡ ರಂಗಭೂಮಿ ಶಾಂತಕವಿಗಳ ನಾಟಕಗಳಿಂದ ತೊಡಗಿದ್ದರೂ ಅವರ ಆದ್ಯತನದ ಮನ್ನಣೆ ಸರ್ವಮಾನ್ಯವಿದ್ದರೂ

ಅವರ ನಾಟಕಗಳು ಉಪರೋಕ್ತ ಬಗೆಯ ನಾಟಕಗಳ ಮಾಲಿಕೆಯಲ್ಲಿ ಬರುವಂತಿಲ್ಲ. ಸಿಂಗರಾರ್ಯನ ಮಿತ್ರವಿಂದಾ ಗೋವಿಂದವನ್ನು ಕೂಡ ಈ ಮಾಲಿಕೆಯಲ್ಲಿ ಸೇರಿಸುವಂತಿಲ್ಲ. ಅದೊಂದು ಕಂದ ವೃತ್ತಗಳಿಂದ ತುಂಬಿದ ಹಳಗನ್ನಡದಲ್ಲಿರುವ ಅಪವಾದಾತ್ಮಕ ಕೃತಿ. ಚುರಮರಿಯವರ ಕೃತಿ ಅಂತಿಲ್ಲ. ಮುಂದೆ ೧೮೮೦ರಲ್ಲಿ ರಂಗಕ್ಕೆ ಬಂದು ಯುಗಪ್ರವರ್ತಕ ನಾಟಕವೆಂಬ ಕೀರ್ತಿಯನ್ನು ಗಳಿಸಿದ ಮರಾಠೀ ಶಾಕುಂತಲವೂ ಅಂತಿಲ್ಲ. ಭಾಷಾಂತರದ ಮಾನದಂಡಗಳನ್ನನುಸರಿಸಿದ ಪರಿವರ್ತನಗಳಲ್ಲದಿದ್ದರೂ ಅವು ಸ್ವತಂತ್ರವೆನಿಸುವಷ್ಟು ಅವರವರ ಪ್ರತಿಭೆ ಅನುಭವಗಳಿಂದ ಕೂಡಿದ, ತತ್ಕಾಲೀನ ಹಳೆ ಹೊಸ ಬಗೆಯ ಲೋಕಪ್ರಿಯ ಸಾಮಾನ್ಯ ಮತ್ತು ರಾಗದಾರಿ ಮಟ್ಟುಗಳಲ್ಲಿರುವ ಹಾಡು, ಅಷ್ಟಿಷ್ಟು ವ್ಯಾಕರಣ ಬದ್ಧವಿದ್ದರೂ ಬಳಕೆ ಮಾತಿನ ಶೈಲಿಯಲ್ಲಿರುವ ಗದ್ಯ ಸಂಭಾಷಣಗಳಿಂದ ಯುಕ್ತವಾಗಿವೆ. ಈರ್ವರೂ ನಿಮ್ನ ಪಾತ್ರಗಳಿಗೆ (ಮೀನುಗಾರ) ಗ್ರಾಮ್ಯ, ಬಾಲಕರಿಗೆ (ಸರ್ವದಮನ) ತೊದಲು ಭಾಷೆ ಬಳಸಿದ್ದಾರೆ. ಚುರಮರಿ ವಿದೂಷಕನನ್ನು ಅಬ್ರಾಹ್ಮಣ ಹನುಮನಾಯಕನನ್ನಾಗಿಸಿ ಅವನಿಗಾಗಿ ಗ್ರಾಮ್ಯವನ್ನು ಬಳಸಿದ್ದರೆ ಕಿರ್ಲೋಸ್ಕರರು ಸಾರಥಿಯನ್ನು ಯವನನ್ನಾಗಿಸಿ ಹಿಂದುಸ್ತಾನಿ ಬಳಸಿರುವರು.

ತಡವಾಗಿ ರಂಗಭೂಮಿಗೆ ಬಂದರೂ ಚುರಮರಿ ಇನ್ನೂ ಬದುಕಿರುವಾಗಲೇ (೧೮೮೨-ಪ್ರಾರಂಭಿಸಿ) ಅದರ ಎರಡನೇ ಆವೃತ್ತಿ ಹೊರಬಂದಿತ್ತು. ಮುದವೀಡರ ಮಾತುಗಳಲ್ಲಿ ಹೇಳುವದಾದರೆ ಆಗಿನ ಸುಸಂಸ್ಕೃತರ ಮನೆಮನೆಗಳಲ್ಲಿ ಅದರ ಪ್ರತಿಗಳು ಕಾಣಸಿಗುತ್ತಿದ್ದವು. ಗೌರಿ-ಗಂಗೆಯರ ಆರತಿಯ ಪದಗಳಂತೆ "ಪತಿಯ ಮಂದಿರಕೆ ನೀಲಾಪೋದಮ್ಯಾಲಿನಿತು ಪದ್ಧತಿಯಿಂದೆ ನಡೆಯಬೇಕಮ್ಮ ಕೇಳು" ಎಂಬುದಾಗಿ ಕಣ್ವ ಋಷಿಗಳು ಶಕುಂತಲಾಗೆ ಮಾಡಿದ ಉಪದೇಶ ಪದ್ಯವು ಸುಶಿಕ್ಷಿತ ಗೃಹಿಣಿಯರ ಬಾಯಿಯಿಂದ ಕೇಳಲು ದೊರೆಯುತ್ತಿತ್ತು. ಸಿರಿವಂತರ ಉಲ್ಹಾಸ ಕೂಟಗಳಲ್ಲಿ ಸಂಗೀತ ಸಮಾರಂಭಗಳಲ್ಲಿ ಶಾಕುಂತಲದ ಪದಗಳನ್ನು ಗಾಯಕರಿಂದ ಹೇಳಿಸಿ ಸಂತೋಷಬಟ್ಟು ತಲೆದೂಗುವ ತರುಣ ರಸಿಕರ ತಂಡಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದ್ದವು. "ಮದುವೆ ಮುಂಜಿಗಳ ಪ್ರಸಂಗಗಳಲ್ಲಿ, ವಸಂತೋತ್ಸವದ ಹಂದರಗಳಲ್ಲಿ, ನಡೆಯುತ್ತಿದ್ದ ಗಾನ ಪ್ರಸಂಗಗಳಲ್ಲಿ" ಬಾ ಬಿಡಿಸೋ ಮೋಹನ", "ಆಯಾಸವನ್ನು ಪಡಬ್ಯಾಡೆ", "ಚುಂಬಿಸಲು ಚೆಲ್ವ ಸಂಧಿಯೊಳು" ಮೊದಲಾದ ಪದಗಳನ್ನು ಸುಸ್ವರವಾಗಿ ಸಾಭಿನಯವಾಗಿ 'ಪಾಡುವ ಸರಸಿಜಾಕ್ಷಿಯರನ್ನು' ನೋಡಿ ರಸಭಾವಗಳ ಕುಶಲತೆಯಿಂದ ವಿಶದಪಡಿಸುವ ಅವರ ಹಾಡುಗಾರಿಕೆಯನ್ನು ಕೇಳಿ ಬೆರಗಾಗಿ ಮೈಮರೆತು ಕುಳಿತ, ಅನೇಕ ಪ್ರಸಂಗಗಳು ತಮ್ಮ ಸ್ವಂತ ಅನುಭವಕ್ಕೆ ಬಂದಿವೆ" ಎಂದಿರುವರು ಅವರು.

ಇತ್ತ ಕಿರ್ಲೋಸ್ಕರರ ಶಾಕುಂತಲವು ಪುಣೆಯ ಆನಂದೋದ್ಭವ ನಾಟ್ಯಮಂದಿರದಲ್ಲಿ ರಂಗಕ್ಕೆ ಬಂದಂದಿನಿಂದಲೇ (೩೧-೧೦-೧೮೮೦) ವಿಕ್ರಮವನ್ನು ಸ್ಥಾಪಿಸಿತು. ತತ್ಕಾಲೀನ ಸುವಿಖ್ಯಾತ ಮರಾಠಿ ಸಾಹಿತಿ ವಿಷ್ಣುಶಾಸ್ತ್ರಿ ಚಿಪಳೋಣಕರರ 'ಮರಾಠಿ ರಂಗಭೂಮಿಗೊಂದು ಹೊಸ ತಿರುವು ಕೊಟ್ಟಿತೆಂದು' ಅದನ್ನು ಹೊಗಳಿದರು. ಜೊತೆಗೆ ಪತ್ರಿಕೆಗಳಲ್ಲಿ ಹೊಗಳಿಕೆ ತೆಗಳಿಕೆ ಎರಡೂ

ಬಗೆಯ ಲೇಖನ ಪತ್ರ ವ್ಯವಹಾರಗಳೂ ನಡೆದವು. ಅದರಿಂದೇನು ಕಿರ್ಲೋಸ್ಕರರ ಕೃತಿಯ ಲೋಕಪ್ರಿಯತೆ ತಗ್ಗಲಿಲ್ಲ. ಮುಂದೆ ಎರಡು ವರ್ಷಗಳ ನಂತರ (೧೮೮೨) ರಂಗಕ್ಕೆ ಬಂದ ಅವರ 'ಸೌಭದ್ರ' ವಂತೂ ಅವರ ಉಜ್ವಲ ಪ್ರತಿಭೆಯ ಸಾಕಾರ ಕುರುಹೆಂಬ ಪ್ರಸಿದ್ಧಿ ಪಡೆಯಿತು. ಮಹಾರಾಷ್ಟ್ರದಲ್ಲಿ ಕಳೆದ ವರ್ಷ ಅಂದರೆ ೧೯೮೨ರಲ್ಲಿ ಅದರ, ಅದಕ್ಕೂ ಮತ್ತು ಎರಡು ವರ್ಷ ಮೊದಲು (೧೯೮೦) ಶಾಕುಂತಲದ ಶತಮಾನೋತ್ಸವಗಳು ನಡೆದವು. ಪೌರಾಣಿಕವಿದ್ದರೂ ಕಿರ್ಲೋಸ್ಕರರ 'ಸೌಭದ್ರ' ಸ್ವತಂತ್ರ ಕೃತಿ.

ಆದರೂ ಚುರಮರಿಯವರ ಶಾಕುಂತಲವನ್ನು ಮಾದರಿ ಎಂದಿಟ್ಟುಕೊಂಡು ಅದೇ ಪದ್ಧತಿಯಲ್ಲಿ ಕಿರ್ಲೋಸ್ಕರರು ಮರಾಠಿಯಲ್ಲಿ ತಮ್ಮ ಶಾಕುಂತಲವನ್ನು ರಚಿಸಿದರೆಂಬ ಮುದವೀಡರ ಮಾತು ಕೆಲವು ಮರಾಠಿಗರಿಗೆ ರುಚಿಸಿಲ್ಲ. ಆದರೆ ಚುರಮರಿ ಕಿರ್ಲೋಸ್ಕರ ಈರ್ವರ ಕೃತಿಗಳನ್ನು ಜೊತೆ ಜೊತೆ ಇಟ್ಟುಕೊಂಡು ನೋಡಿದಾಗ ಇತರತ್ರ ಇಲ್ಲದ, ಆದರೆ ಇವೆರಡೇ ಕೃತಿಗಳಲ್ಲಿ ಕಾಣಸಿಗುವ ಕೆಲವು ಸಾಮ್ಯಾಂಶಗಳು ಮುದವೀಡರ ಉಪರೋಕ್ತ ಮಾತು ಕೇವಲ ಒಣ ಹೆಮ್ಮೆಯದಲ್ಲ ಎಂಬುದನ್ನು ಎತ್ತಿ ತೋರಿಸುವಂತಿವೆ.(ಈ ವಿಷಯ ಮುಂದೆ ಬಂದಿದೆ). ಚುರಮರಿ ಕೃತಿ ಕಿರ್ಲೋಸ್ಕರ ಕೃತಿಗಿಂತ ಹತ್ತು ವರ್ಷ ಮೊದಲೇ ಪ್ರಕಟವಾಗಿತ್ತಾದ್ದರಿಂದ ಅದರ ಆದ್ಯತನ ವಾದಾತೀತ ಎಂಬುದಕ್ಕೆ ಎಳ್ಳಷ್ಟೂ ಕೂಡ ಬಾಧೆ ಇಲ್ಲ. ರಚನಾ ವಿಧಾನದಲ್ಲಿ ಈರ್ವರ ಕೃತಿಗಳಲ್ಲಿ ಕಂಡು ಬರುವ ಹೊಸ ತಿರುವಿಗಿದ್ದ ಸ್ಫೂರ್ತಿಸ್ಥಾನ ಒಂದೇ ಆಗಿದ್ದರೂ ಅದು ಬಂದದ್ದು ಬೇರೆಡೆಯಿಂದ; ಪಾಶ್ಚಿಮಾತ್ಯ ಸಂಪರ್ಕದಿಂದ; ನಾಟಕ ರಚನೆ, ನಾಟಕ ಪ್ರದರ್ಶನದ ರೀತಿ ನೀತಿಗಳಲ್ಲಿ ಉಂಟಾದ ತೀವ್ರ ಬದಲಾವಣೆ ಮತ್ತು ಅದಕ್ಕೆ ಪ್ರತ್ಯಕ್ಷ ಉದಾಹರಣೆಯಂತಿದ್ದ ಪಾರ್ಸಿ ನಾಟಕಗಳಿಂದ.

●

ಪ್ರಕರಣ ೨

ನಾಟಕಕಾರರ ಪರಿಚಯ

ಚುರಮರಿ ಶೇಷಗಿರಿರಾಯರದು ಬಹುಮುಖಿ ಜೀವನ. ಒಳ್ಳೇ ರಸಿಕ ವಿದ್ವಾಂಸರು, ಕವಿ, ಸಂಶೋಧಕ(ಸಾಹಿತ್ಯ , ವಿಜ್ಞಾನ), ಹೀಗೆ ಹಲವು ದಿಶೆಗಳಲ್ಲಿ ಅವರ ಬುದ್ಧಿ ಕುತೂಹಲಗಳು ಪರಿದಾಡುತ್ತಿದ್ದವು. ಜೊತೆಗೆ ಸ್ವತಂತ್ರ ವಿಚಾರಿಗಳೂ ಆಗಿದ್ದರು. ಆದರೆ ಬಾಳ್ವೆಗಾಗಿ ಆರಿಸಿಕೊಂಡ ವೃತ್ತಿಗೂ ಉಪರೋಕ್ತ ಅವರ ಜನ್ಮಜಾತ ಮತ್ತು ಅಷ್ಟಿಷ್ಟು ಕೃತಿಗಿಳಿದ ಗುಣಗಳಿಗೂ ಇದ್ದ ಹೊಂದಾಣಿಕೆ ಅಷ್ಟಕಷ್ಟೆ. ವೃತ್ತಿಯಿಂದ ಅವರು ಲೋಕೋಪಯೋಗಿ ಕಾಮಗಿರಿ ಖಾತೆಯ (ಪಿ.ಡಬ್ಲ್ಯೂ.ಡಿ.) ಓರ್ವ ಸಾಮಾನ್ಯ ನೌಕರ - ಓವರ್ಸಿಯರ. ಉಪಲಬ್ಧವಿರುವ ಅವರ ಮಹಾಕವಿ ಕಾಲಿದಾಸನ ಅಮರ ಕೃತಿ - ಅಭಿಜ್ಞಾನ ಶಾಕುಂತಲದ ಕನ್ನಡ ಅನುವಾದ ಪ್ರಕಟಗೊಂಡ ವರ್ಷ (ಕ್ರಿ. ೧೮೭೦. ಅದರಲ್ಲಿಯ ಪ್ರಾಸ್ತಾವಿಕ ಪದ್ಯಗಳಲ್ಲಿ ತಮ್ಮ ಜನಕ ತಂದೆ ರಾಮಚಂದ್ರ, ಗುರು (ವಿಶೇಷವಾಗಿ ಕನ್ನಡ ದೀಕ್ಷೆ ಮತ್ತು ಉಪಜೀವನದ ದಾರಿ ತೋರಿದ) ಡೆಪ್ಯುಟಿ ಚೆನ್ನಬಸಪ್ಪನವರು, ಮತ್ತು 'ಬೆಳಗಾವ ಸಮಚಾರ' ಪತ್ರಿಕೆಯಲ್ಲಿ ಪ್ರಕಟವಾದ ಅವರ ನಿಧನ ದಿನಾಂಕ (೨-೬-೧೮೮೨) ಇವಿಷ್ಟನ್ನು ಬಿಟ್ಟರೆ ಅವರ ಜೀವನದ ಇನ್ನಿತರ ನಿಶ್ಚಿತಾತ್ಮಕ ಇತಿವೃತ್ತಗಳಿಲ್ಲ. ತುಸು ಹೆಚ್ಚು ಕಡಿಮೆ ಅವರಿಂದ ಎರಡನೆಯ ತಲೆಮಾರಿನವರಿದ್ದ ಉತ್ತರ ಕರ್ನಾಟಕದ ಸುವಿಖ್ಯಾತ ಪತ್ರಿಕಾಕರ್ತ, ರಾಜಕೀಯ, ವಿಶೇಷವಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಮುಂದಾಳು, ಸ್ವಯಂ ನಟ ಹಾಗೂ ನಾಟಕಕಾರ ದಿ. ಮುದವೀಡು ಕೃಷ್ಣರಾಯರು ಚುರಮರಿಯವರ ಕಕ್ಕನ (ಕೃಷ್ಣರಾಯ) ಮಗ ಗುಂಡೇರಾಯರಿಂದ (ಇವರಾದರೂ ಹೊಸಗನ್ನಡದ ಆದ್ಯ ಗದ್ಯ ನಾಟಕಕಾರರಲ್ಲಿ ಒಬ್ಬರು) ಮತ್ತು ಶಾಂತಕವಿ ಮೊದಲಾದ ಅನ್ಯ ಸಮಕಾಲಿಕ ಹಿರಿಯರಿಂದ ಸಂಗ್ರಹಿಸಿದ ಚುರಮರಿಯವರ ಇತಿವೃತ್ತವನ್ನು ಅವರ ಅನುವಾದ ಕೃತಿ ಶಾಕುಂತಲದ ನಾಲ್ಕನೆಯ ಮುದ್ರಣಕ್ಕಿರುವ (೧೯೩೪) ಮುನ್ನುಡಿಯಲ್ಲಿ ಕೊಟ್ಟಿರುವರು. ಡಾ. ಶ್ರೀನಿವಾಸ ಹಾವನೂರರ 'ಹೊಸಗನ್ನಡದ ಅರುಣೋದಯ'ದಲ್ಲೂ ಒಂದೆರಡು ಹೊಸ ಮಾತುಗಳಿವೆ. ಮುಂದಣದು ಇವರೀರ್ವರ ಸಂಕ್ಷೇಪ - ವಿಸ್ತಾರರೂಪಿ ಪರಿಷ್ಕರಣ.

ಚುರಮುರಿ ಸು. ೧೮೨೭ರಿಂದ ೧೮೮೨ರವರೆಗೆ ಜೀವಿಸಿದ್ದರು. ಅವರು ಜನಿಸಿದಾಗ ಉತ್ತರ ಕರ್ನಾಟಕದ ಮನೆ ಧಾರವಾಡ ಸುಭಾವು ಬ್ರಿಟಿಶರ ವಶಕ್ಕೆ ಬಂದು ಆದೀಗ ಐದಾರು ವರ್ಷಗಳಾಗಿದ್ದವು. ಚುರಮುರಿಯುವರ ಮೂಲ ಮನೆತನ ರಾಮದುರ್ಗದ್ದು. ಅದೊಂದು ಧಾರವಾಡ ಜಿಲ್ಲೆಯ ಗಡಿಪ್ರದೇಶದಲ್ಲಿದದ ಚಿಕ್ಕ ಸಂಸ್ಥಾನದ ಮುಖ್ಯಸ್ಥಳವಿದ್ದಿತು. ಅಲ್ಲಿ ಅವರ ಮನೆತನಕ್ಕೆ ಮುದಕವಿ ಎಂಬ ಹೆಸರಿದ್ದಿತು. ರಾಮದುರ್ಗವನ್ನು ಬಿಟ್ಟು ಅವರ ಮನೆತನ ಧಾರವಾಡಕ್ಕೆ ಬಂದದ್ದು ಎಂದು ಮತ್ತು ಏಕೆ ನೆಲೆಸಿತೆಂಬುದು ತಿಳಿಯದು. ಧಾರವಾಡಕ್ಕೆ ಬಂದ ಅವರ ಮನೆತನದ ಮೂಲಪುರುಷರು ಅಲ್ಲಿಯ ಚುರಮುರಿ ಎಂಬ ಪ್ರಸಿದ್ಧ ಧಾರ್ಮಿಕ ಪ್ರವೃತ್ತಿಯ ವೀರಶೈವ ವ್ಯಾಪಾರಸ್ಥರಲ್ಲಿ[೧] ಗುಮಾಸ್ತರೆಂದು ಕೆಲಸಕ್ಕೇ ನಿಂತರು. ಬಹುಕಾಲ ಅಲ್ಲಿಯೇ ಕೆಲಸ ಮಾಡುತ್ತಿದ್ದರೆಂದು ಮುದಕವಿ ಹೆಸರಿನ ಬದಲು ಚುರಮುರಿಯುವರ ಗುಮಾಸ್ತರು, ಕೊನೆಗೆ ಚುರಮುರಿ ಎಂಬ ಹೆಸರು ಅವರಿಗೆ ಅಂಟಿಕೊಂಡು ಬಳಕೆಯಲ್ಲಿ ಅದೇ ಅವರ ಮನೆತನದ ಅಡ್ಡ ಹೆಸರಾಗಿ ಮುಂದರಿದಂತಿದೆ.

ಚುರಮುರಿಯುವರದು ಅಪ್ಪಟ ಮಾಧ್ವ ವೈಷ್ಣವ ಮನೆತನ. ತಂದೆ ರಾಮಚಂದ್ರರಾಯರು ಕೆಲವು ಸಮಯ ಪೋಲೀಸ್ ಖಾತೆಯಲ್ಲಿ ಫೌಜದಾರರೆಂದು ಕೆಲಸ ಮಾಡುತ್ತಿದ್ದರಂತೆ. ಅವರು ತಕ್ಕ ಮಟ್ಟಿಗೆ ಭಾರತ ಭಾಗವತಾದಿ ಗ್ರಂಥಗಳನ್ನು ಓದಿಕೊಂಡಿದ್ದರು. ಭಾಗವತ ಪುರಾಣವನ್ನು ರಸಭರಿತವಾಗಿ ಹೇಳುತ್ತಿದ್ದರು. ಜೊತೆಗೆ ಸಂಗೀತ ಬಲ್ಲವರೂ ಆಶು ಕವಿಗಳೂ ಆಗಿದ್ದರು. ನೌಕರಿಯಲ್ಲಿದ್ದಾಗ ಆಂಗ್ಲ ವರಿಷ್ಠಾಧಿಕಾರಿಯೊಡನೆ ನಡೆದ ಒಂದು 'ಚಕಮಕಿ' ಪ್ರಸಂಗವನ್ನು ಮುದವೀಡು ಸ್ವಾರಸ್ಯವಾಗಿ ವರ್ಣಿಸಿರುವರು. ನೌಕರಿಯ ನಂತರ ಅವರು ಶೇಷಾಯುಷ್ಯವನ್ನು ಬೆಳಗಾವಿ ಜಿಲ್ಹೆ ಸವದತ್ತಿಯಲ್ಲಿ ವಕೀಲಿ ಮಾಡುತ್ತಿದ್ದ ಅಣ್ಣ ಕೃಷ್ಣರಾಯರ (ಚುರಮುರಿಯುವರ ಕಕ್ಕ) ಬಳಿ ಕಳೆದರೆಂಬ ವದಂತಿ ಇದೆ. ವೇಶ್ಯೆಯರ ಕೃತಕ ಪ್ರೇಮ-ಶೃಂಗಾರಗಳನ್ನು ಕುರಿತಾದ ಅವರದೊಂದು ಪದ್ಯದಲ್ಲಿನ ಈ ಕೆಳಗಿನ ತುಂಡು ಅದೆಷ್ಟೋ ವಿಷಯ ಲಂಪಟನಿದ್ದರೂ ಜುಗುಪ್ಸೆ ಹುಟ್ಟಿಸದಿರದು -

ಮೊದಲಿಗೋರ್ವನೊಳ್ ರಮಿಸಿ ಕಳುಹಿಸಿ
ಸದನಕೆ ಮತ್ತೋರ್ವನು ಬರೆ
ಕದಲಿದಾ ನಿರೆಗಳನು ತಿದ್ದುತೆ ಸುದತಿ ಕುಂಕುಮ ಪಣೆಗೆ ರೇಖಿಸಿ|
ಹೃದಯದೊಲ್ಲಭ ತಡೆದೆ ಯಾತಕೊ
ಮದನನನಂಬಿಗೆ ತಾಳಲಾರೆನು
ಮುದವಿ ರತಿಗೊಡೆನುತೆ ಸೊಪ್ಪಾದಧರ ಬಾಯೊಳಗಿಡುವಳಕಟಾ||

ಮಗ ಶೇಷಗಿರಿಯಲ್ಲಿ ಕೂಡ ತಂದೆಯ ಈ ಗುಣಗಳು ಅನುವಂಶಿಕವಾಗಿ ಇಳಿದು ಬಂದಿದ್ದವೆಂದು ಹೇಳಬಹುದು. ಚಿಕ್ಕಂದಿನ ವಿದ್ಯಾಭ್ಯಾಸ ಮುಗಿದ ಬಳಿಕ ಮುಂದಣ ಅಭ್ಯಾಸಕ್ಕೆ

೧. ಆಗಿನ ಧಾರವಾಡ ಶಹರದ ಉಪನಗರ ಸೈದಾಪುರ ಭಾಗದಲ್ಲಿ ಚುರಮುರಿ ಹೆಸರಿನ ಒಂದು ವೀರಶೈವ ಮಠವಿದ್ದಿತೆಂದಿದೆ, ಧಾರವಾಡ ಜಿಲ್ಲೆ ಗಜೆಟಿಯರದಲ್ಲಿ.

ಅದರಲ್ಲೂ ಸಂಸ್ಕೃತ ಇಂಗ್ಲಿಷುಗಳಿಗಾಗಿ ಸ್ವಪ್ರಯತ್ನ ಮತ್ತು ಅನ್ಯ ವಿದ್ವಾಂಸರ ನೆರವು ಅಗತ್ಯವಿದ್ದಿತು. ಧಾರವಾಡ ಜಿಲ್ಹೆ ಕರ್ನಾಟಕದ ಭಾಗ, ಕನ್ನಡಿಗರ ನೆಲೆವೀಡು ಎಂಬುದನ್ನು ಆದೇ ಅಧಿಕಾರಕ್ಕೆ ಬಂದ ಬ್ರಿಟಿಶರು ಮನಗಂಡು ೧೮೩೭ರಲ್ಲಿಯೇ ಸರಕಾರಿ ಮತ್ತು ಲೆಕ್ಕಪತ್ರಾದಿ ವ್ಯಾವಹಾರಿಕ ಭಾಷೆ ಕನ್ನಡದಲ್ಲಿರಬೇಕೆಂಬ ಪರಿಪತ್ರ ಹೊರಡಿಸಿದ್ದರೂ ಅದೆಲ್ಲ ಕಾಗದದಲ್ಲಿಯೇ ಉಳಿದುಕೊಂಡಿತ್ತು. ಪೇಶ್ವೆಯರ ಕಾಲದಿಂದ ನಡೆದು ಬಂದ ಮರಾಠಿಯದೇ ಪ್ರಾಬಲ್ಯವಿದ್ದಿತು. ಸುಶಿಕ್ಷಿತರಿಗಂತೂ ಅದೊಂದು ಸಂಸ್ಕೃತಿಯ ಚಿಹ್ನವಾಗಿತ್ತು. ಕನ್ನಡ, ವಿಶೇಷವಾಗಿ ಬ್ರಾಹ್ಮಣ ವರ್ಗದಲ್ಲಿ, ಮನೆ, ಭಾಷೆ, ಬಳಕೆ ಭಾಷೆ ಎನ್ನುವ ಮಟ್ಟಿಗೆ ಸೀಮಿತವಾಗಿತ್ತು. ಧಾರವಾಡ ಜಿಲ್ಹೆಯ ಮಟ್ಟಿಗೆ ಪ್ರಪ್ರಥಮ ಇಂಗ್ಲಿಷ್ ಶಾಲೆ ಸ್ಥಾಪಿತವಾದದ್ದು ೧೮೪೮ರಲ್ಲಿ. ಅದಕ್ಕೆ ಮೊದಲು ಧಾರವಾಡದಲ್ಲಿ ಒಂದು, ಹುಬ್ಬಳ್ಳಿಯಲ್ಲಿ ಒಂದು - ಹೀಗೆ ಎರಡು ಮರಾಠಿ ಸರಕಾರೀ ಪ್ರಾಥಮಿಕ ಶಾಲೆಗಳಿದ್ದವು. ಇಂಥ ಪರಿಸ್ಥಿತಿಯಲ್ಲಿ ಕಲಿಯಲು ಬಹುಸಂಖ್ಯೆಯವರಿಗೆ ಉಪಾಧ್ಯಾಯರ ಮನೆಮಠಗಳೇ ಪ್ರಮುಖ ಸ್ಥಳಗಳಾಗಿದ್ದವು. ಹೆಚ್ಚಿನ ವಿದ್ಯೆಗಾಗಿ ತಕ್ಕ ಗುರುಗಳನ್ನು ಆಶ್ರಯಿಸುವದು ಅನಿವಾರ್ಯವಿದ್ದಿತು. ಸ್ವಪ್ರಯತ್ನಕ್ಕೆ ಕೊರತೆ ಇಲ್ಲದಿದ್ದರೂ ಹೆಚ್ಚಿನ ಅಭ್ಯಾಸಕ್ಕಾಗಿ ಚುರಮರಿ ಆದಾವ ಗುರುಗಳನ್ನು ಆಶ್ರಯಿಸಿದ್ದರೊ ತಿಳಿಯದು.

ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ಧಾರವಾಡದಲ್ಲಿ ೧೮೫೫-೫೭ ರಲ್ಲಿ ಸ್ಥಾಪಿತವಾಗಿದ್ದ ಶಿಕ್ಷಕ ಟ್ರೇನಿಂಗ್ ಕಾಲೇಜನ್ನು ವಿದ್ಯಾರ್ಥಿಗಳ ಅಭಾವದಿಂದಾಗಿ ೧೮೬೧ರಲ್ಲಿ ಬೆಳಗಾವಿಗೆ ಸ್ಥಾನಾಂತರಿಸಿ ಧಾರವಾಡದ ಕಾಲೇಜನ್ನು ನಾರ್ಮಲ್ ಸ್ಕೂಲಿನಲ್ಲಿ ಪರಿವರ್ತಿಸಲಾಯಿತು. ಬೆಳಗಾವಿಯಲ್ಲಿ ವಿದ್ಯಾರ್ಥಿಗಳೇನೋ ಮುಂಬಂದರು. ಆದರೆ ಅವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮರಾಠಿಗರು. ೧೮೫೭-೭೧ರವರೆಗೆ ಧಾರವಾಡದ ನಾರ್ಮಲ್ ಸ್ಕೂಲಿನಲ್ಲಿ ಅಧ್ಯಾಪಕರಿದ್ದ ಚುರಮರಿಯವರ ಗುರು ಚೆನ್ನಬಸಪ್ಪ ಮತ್ತು ಆ ಸಮಯದಲ್ಲಿ ಶಿಕ್ಷಣ ಖಾತೆಯ ವಿಭಾಗೀಯ ಅಧಿಕಾರಿಯೆಂದು ಬೆಳಗಾವಿಗೆ ಬಂದ ವಿಲಿಯಮ್ ರಸೆಲ್ ಕನ್ನಡದ ಸಲುವಾಗಿ ಮನಮುಟ್ಟಿ ಪ್ರಯತ್ನಿಸಿದರು. ಕನ್ನಡ ಪ್ರೇಮ, ಅಭಿಮಾನ; ಸಂಸ್ಕೃತ ಇಂಗ್ಲಿಷುಗಳಂತೆ ಅದನ್ನೂ ಕಲಿಯಬೇಕೆಂಬ ಅಭಿಲಾಷೆ, ಹೆಚ್ಚೆಚ್ಚು ಬೆಳೆಯುವಂತಾದವು.

ಉತ್ತರ ಕರ್ನಾಟಕದಲ್ಲಿ ಪೇಶ್ವೆಯರ ಕಾಲದಿಂದ ದಿನದಿನಕ್ಕೆ ಕುಸಿಯುತ್ತಿದ್ದ ಕನ್ನಡವನ್ನು ಮತ್ತೆ ಮೇಲಕ್ಕೇಳುವಂತೆ ಮಾಡಿದ ಶ್ರೇಯಸ್ಸು ಹೆಚ್ಚಾಗಿ ವಿಭಾಗೀಯ ಶಿಕ್ಷಣಾಧಿಕಾರಿ ರಸೆಲ್, ಅವರ ಸಹಾಯಕ್ಕಾಗಿ 'ಡಿಪ್ಟಿ' (ಡೆಪ್ಯುಟಿ) ಎಂದು ಬಡತಿ ಹೊಂದಿ ಬೆಳಗಾವಿಗೆ ತೆರಳಿದ ಧಾರವಾಡ ನಾರ್ಮಲ್ ಸ್ಕೂಲಿನ ಅಧ್ಯಾಪಕ ಚೆನ್ನಬಸಪ್ಪ, ತೆರವಾದ ಅವರ ಸ್ಥಳಕ್ಕೆ ನೇಮಿಸಲ್ಪಟ್ಟ ವೆಂ.ರಂ. ಕಟ್ಟಿ, ಅವರಂತೆ ೧೮೭೫ರಲ್ಲಿ ಮತ್ತೆ ಧಾರವಾಡಕ್ಕೆ ಸ್ಥಾನಾಂತರಿಸಲ್ಪಟ್ಟ ಟ್ರೇನಿಂಗ್ ಕಾಲೇಜಿನಿಂದ ಹೊರಬಂದ ಶಿಕ್ಷಕ ಪಡೆ, ಅಧಿಕಾರಿ ವರ್ಗ, ಅವರಲ್ಲೂ ವಿಶೇಷವಾಗಿ ಶಾಂತವೀರ ರಾಚಿದೇವ ಕಿತ್ತೂರ, ಗಂಗಾಧರ ಮಡಿವಾಳೇಶ್ವರ ತುರಮರಿ, ಶಾಂತಕವಿ, ಧೋಂಡೋ ನರಸಿಂಹ ಮುಳಬಾಗಲ, ರಾ. ಹ. ದೇಶಪಾಂಡೆ ಇವರೆಲ್ಲರಿಗೆ ಸಲ್ಲಬೇಕು.

ಸುಮಾರು ೧೮೬೯ರಿಂದ ಎರಡು ದಶಕಗಳ ಕಾಲ ಡೆಪ್ಯುಟಿ ಎಂದು ಸೇವೆ ಸಲ್ಲಿಸಿದ ಚೆನ್ನಬಸಪ್ಪನವರ ಕನ್ನಡ ನಿಷ್ಠೆ ಮತ್ತು ಸಾಹಸ ವೃತ್ತಿಗಳು ಎಂಥವರಿಗಾದರೂ ಅಭಿಮಾನ ಹುಟ್ಟಿಸುವಂಥವು. ರೇಲ್ವೆಗಳಿಲ್ಲದ ಆ ಕಾಲದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆಂದು ಕೇವಲ ಮೂರು ರೂಪಾಯಿ ಹಣ ಹಿಡಿದುಕೊಂಡು ಧಾರವಾಡದಿಂದ ಪುಣೆಗೆ ಕಲಿಯ ಹೊರಟಿದ್ದು ಸಾಹಸದ ಮಾತೇ ಸೈ. ತಮ್ಮ ಮೇಧಾವಿತನದಿಂದ ಅಲ್ಲಿನ ಎಂಜಿನಿಯರಿಂಗ್ ಪರೀಕ್ಷೆಯಲ್ಲಿ ಮೇಲಿನ ಸ್ಥಾನವನ್ನು ಗಳಿಸಿ ಕೆಲವು ಕಾಲ ಅದೇ ಕಾಲೇಜಿನಲ್ಲಿ ಅಧ್ಯಾಪಕರೆಂದು ಸೇವೆ ಸಲ್ಲಿಸಿದರು. ಪುಣೆಯ ಸುಶಿಕ್ಷಿತ ವರ್ಗದ ಭಾಷಾಪ್ರೇಮ ಸಾಂಸ್ಕೃತಿಕ ವಾತಾವರಣಗಳಿಂದ ಸ್ಫೂರ್ತಿ ಪಡೆದ ಕನ್ನಡಿಗರಲ್ಲಿ ಮೊದಲಿಗರಾಗಿ ನಾರ್ಮಲ್ ಸ್ಕೂಲಿನ ಅಧ್ಯಾಪಕರೆಂದು ಧಾರವಾಡಕ್ಕೆ ಮರಳಿದರು. ಶೇಕ್ಸ್‌ಪಿಯರನ ಒಂದೆರಡು ನಾಟಕಗಳನ್ನು ಮೆಕ್‌ಬೆಥ್, ಕಾಮೆಡಿ-ಆಫ್ ಎರರ್ಸ್ -ಕನ್ನಡಕ್ಕೆ ಕಥಾರೂಪದಲ್ಲಿ ಪರಿವರ್ತಿಸಿರುವರು. ಮರಾಠಿಯಲ್ಲಿ ಮಕ್ಕಳಿಗಾಗಿ ಒಂದೆರಡು ಗಣಿತ ಪುಸ್ತಕಗಳನ್ನು ಬರೆದಿರುವರು. ಸ್ವಯಂ ಗ್ರಂಥರಚನೆಗಿಂತ ಅದಕ್ಕಾಗಿ ಇತರರಿಗೆ ಅವರು ಪ್ರೋತ್ಸಾಹ ಮತ್ತು ಅನ್ಯ ಬಗೆಯ ಸಹಾಯವಿತ್ತ ಹೇರಳ ಉದಾಹರಣೆಗಳಿವೆ. ಸ್ವತಃ ಚುರಮರಿ ತಮ್ಮ ಅನುವಾದ ಕೃತಿ ಶಾಕುಂತಲದ ಪ್ರಾಸ್ತಾವಿಕ ಪದ್ಯಗಳಲ್ಲಿ "ಬಡವರ ವಿದ್ಯೆಗಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ ಬಡುತಿಹ ಧೀರ ಚೆನ್ನ ಬಸವೇಶ್ವರ ದಿವ್ಯಪಾದ ಭೂಷಣಂ" ಎಂದು ಅವರಿಗೆ ಪ್ರಾಂಜಲಪೂರ್ವಕ ಕೃತಜ್ಞತೆಗಳನ್ನು ಅರ್ಪಿಸಿರುವರು.

ಚುರಮರಿ ಹಾಗೂ ಚೆನ್ನಬಸಪ್ಪನವರ ಸಂಬಂಧ ಬಹುಶಃ ಚನ್ನಬಸಪ್ಪ ಧಾರವಾಡದಲ್ಲಿ ನಾರ್ಮಲ್ ಸ್ಕೂಲಿನಲ್ಲಿ ಅಧ್ಯಾಪಕರಿರುವಾಗ ಬಂದಿರಬೇಕು. ಚುರಮರಿಯವರಿಗೆ ಕನ್ನಡ ದೀಕ್ಷೆ ಹಾಗೂ ಎಂಜಿನಿಯರಿಂಗ್ ಅಭ್ಯಾಸ ಕೈಕೊಳ್ಳಲು ಅದೇ ನಾಂದಿಯಾಗಿರಬೇಕು. ಪುಣೆಯ ಎಂಜಿನಿಯರಿಂಗ್ ಕಾಲೇಜದಲ್ಲಿ ಪ್ರವೇಶವಾದರೂ ಅವರ ನೆರವಿನಿಂದಲೇ ದೊರೆತಿರಬೇಕು. ಪುಣೆಯು ವಿದ್ವಾಂಸರ, ಅದರಲ್ಲೂ ಸಂಸ್ಕೃತದಲ್ಲಿರುವ ಶಾಸ್ತ್ರ ಸಾಹಿತ್ಯಾದಿ ಪಾರಂಪರಿಕ ವಿಷಯಗಳಲ್ಲಿನ ವಿದ್ವಾಂಸರ ನೆಲೆವೀಡು. ಇಂಗ್ಲೀಷ ಕಲಿತ ಸಂಸ್ಕೃತಜ್ಞರಿಗೂ ಇತರ ಸಾಂಸ್ಕೃತಿಕ ಸಾಮಾಜಿಕ ಚಟುವಟಿಕೆಗಳಿಗೂ ಅಲ್ಲಿ ಕೊರತೆ ಇದ್ದಿಲ್ಲ. ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಚುರಮರಿ ಇವೆಲ್ಲವುಗಳ ಯಥೇಷ್ಟ ಪ್ರಯೋಜನ ಪಡೆದಿರಬೇಕು.

ಆಗ ಮುಂಬಯಿಯಲ್ಲಿ ರೇವು(ಬಂದರ) ಕಟ್ಟುವ ಕೆಲಸ ನಡೆದಿತ್ತು. ಶಿಕ್ಷಣ ಮುಗಿದ ಬಳಿಕ ಚುರಮರಿ ಅಲ್ಲಿ ಓವರ್ ನಾಯಕ ಎಂದು ಕೆಲಸಕ್ಕೆ ಸೇರಿಕೊಂಡಂತಿವೆ. ಅವರದು ಚಿಕ್ಕ ಸಂಸಾರ -ಹೆಂಡತಿ - ಈರ್ವರು ಹೆಣ್ಣು ಮಕ್ಕಳು. ಕೆಲಸಕ್ಕೆ ಸೇರಿದ ಬಳಿಕ ಅವರನ್ನು ಅಲ್ಲಿಗೆ ಕರೆತಂದು ಸಂಸಾರ ಹೂಡಿದರು. ಮುಂಬಯಿ ವ್ಯಾಪಾರ ಉದ್ದಿಮೆಗಳ ಕೇಂದ್ರವಾಗಿದ್ದರೂ ಮನರಂಜನೆ ಕ್ಷೇತ್ರದಲ್ಲಿ ಅದೊಂದು ಪಾರ್ಸಿ ನಾಟ್ಯವಿಲಾಸಿಗಳ ಜನ್ಮದ ಮತ್ತು ಉತ್ತರೋತ್ತರ ಅಭಿವೃದ್ಧಿಯ ಕಾಲ. ಇತರ ಕ್ಷೇತ್ರಗಳಲ್ಲಿರುವಂತೆ ನಾಟ್ಯ ಕಲೆಯನ್ನು ಒಂದು ವ್ಯಾಪಾರಿ ಕ್ಷೇತ್ರವೆಂದು ಸಂಘಟಿತರಾದ ಅವರು ಹಣ ತೊಡಗಿಸಿ ನೇತ್ರ ದೀಪಕ ನೇಪಥ್ಯ ರಚನೆ, ಉಡುಗೆ

ತೊಡುಗೆ, ಗಾನ ನರ್ತನಯುಕ್ತ ಹಿಂದಿ, ಉರ್ದು, ಗುಜರಾತಿ, ಮರಾಠಿ ಮೇಳಗಳನ್ನು ಕಟ್ಟಿ ಅಥವಾ ಹೊರಗಿನಿಂದ ಬರಮಾಡಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದರು. ಬರಬರುತ್ತ ತಮ್ಮವೇ ಆದ ವ್ಯವಸಾಯಿ ಕಂಪನಿಗಳನ್ನು ಕಟ್ಟಿಕೊಳ್ಳುವ ಎತ್ತುಗಡೆ ನಡೆಸಿದ್ದರು.

ಇಂಥ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದ ಚುರಮರಿಯವರ ಜನ್ಮಜಾತ, ರಸಿಕತೆಗೆ, ತಮಗೆ ಅವಗತವಿದ್ದ ಸಂಸ್ಕೃತ-ಇಂಗ್ಲಿಷ್, ಮರಾಠಿ ಭಾಷೆಗಳಲ್ಲಿನ ಲಲಿತ-ವಾಙ್ಮಯದ ನಿಷ್ಠಾಪೂರ್ವಕ ಪರಿಶ್ರಮಕ್ಕೆ ಪುಟದೊರೆತು ತಾವು ಕೂಡ ಕನ್ನಡದಲ್ಲೂ ಒಂದು ಹೊಸ ಬಗೆಯ ನಾಟಕವನ್ನು ರಚಿಸಬೇಕೆಂಬ ಸ್ಫೂರ್ತಿ ಒದಗಿದ್ದರೆ ಅದೇನು ಅಂಥ ಆಶ್ಚರ್ಯ ಅಥವಾ ಅಸ್ವಾಭಾವಿಕ ವಿಷಯವಾಗದು. ಮುಂಬಯಿಯಲ್ಲಿರುವಾಗಲೇ ಚುರಮರಿ ಶಾಕುಂತಲದ ತಮ್ಮ ಅನುವಾದವನ್ನು ಮುಗಿಸಿ ಅಲ್ಲಿಯೇ ಪ್ರಸಿದ್ಧಿಸಿದರೆಂಬ ಮುದವೀಡರ ಮಾತು ಈ ಬಗೆಯ ಅನುಮಾನಕ್ಕೆ ಪೋಷಕವಾಗಿದೆ. ಕಿರ್ಲೋಸ್ಕರರಿಗೆ ತಮ್ಮ ಶಾಕುಂತಲ ರಚನೆಗೆ ಒದಗಿದ ಸ್ಫೂರ್ತಿ ಸ್ಥಾನವಾದರೂ ಇದೇ ಬಗೆಯದೆಂಬ ಮಾತಿದೆ ಅವರ ಚರಿತ್ರೆಯಲ್ಲಿ.[೧]

ಶಾಕುಂತಲದ ಹೊರ್ತಾಗಿ ಚುರಮರಿ 'ಸುಂದರಾ' ಎಂಬುದೊಂದು ಏಕಾಂಕವನ್ನು ರಚಿಸಿ ಮಿತ್ರ ಕೃ.ಪೀ. ಜೋಶಿ ಅವರ ಹೆಸರಿನಲ್ಲಿ ಪ್ರಕಟಿಸಿದ್ದರೆಂದಿರುವರು ಮುದವೀಡು. ಹಾವನೂರ ಇದೊಂದು ಪ್ರಖ್ಯಾತ ಆಂಗ್ಲ ಸಾಹಿತಿ. ಹೇನ್ರಿ ಫಿಲ್ಡಿಂಗನ ಒಂದು ಕೃತಿಯ ಅನುವಾದವಿದ್ದಿತೆಂದಿರುವರು. ಫೀಲ್ಡಿಂಗನ ಸಾಹಿತ್ಯಿಕ ಕೃಷಿ ನಾಟಕ, ಹೆಚ್ಚಾಗಿ 'ಅಪೆರಾ'(ಗೀತ ಅಥವಾ ಗೀತಪ್ರಧಾನ) ನಾಟಕ ಮತ್ತು ಪ್ರಹಸನಗಳಿಂದ ಪ್ರಾರಂಭವಾಯಿತೆನ್ನುತ್ತಾರೆ. ಅವುಗಳಲ್ಲಿ 'Miss Lucy in Town' ಎಂಬುದೊಂದು ಪ್ರಹಸನವಿದೆ. ಅದರ ಈ ಹೆಸರು 'ಸುಂದರಾ' ದಲ್ಲಿದೆಯೆಂದು ಮುದವೀಡು ಉದಾಹರಿಸಿದ ಚುಟುಕಗಳಲ್ಲಿನ 'ಸಾಕಮ್ಮಾ ಸೊಗಸು ಶೃಂಗಾರಾ, ಬೇಕಮ್ಮಾ ನಮಗ ಹಳ್ಳೂರ ವಿಚಾರಾ' ಚುಟುಕನ್ನು ಮನಗಂಡಾಗ ಬಹುಶಃ 'ಸುಂದರಾ' ಈ ಪ್ರಹಸನದ ಅನುವಾದವಿರಬೇಕೆನಿಸುವದು. ಫೀಲ್ಡಿಂಗನ ಈ ಕೃತಿ ನೋಡಲು ಸಿಗಲಿಲ್ಲ; 'ಸುಂದರಾ' ದೊರೆತಿಲ್ಲ. ಆದ್ದರಿಂದ ಹೀಗೆಯೆ ಎಂದು ಹೇಳುವಂತಿಲ್ಲ.[೨] ತಮ್ಮ ಆಯುಷ್ಯದ ಕೊನೆಯ ಪಂತದಲ್ಲಿ ಚುರಮರಿ ಶೂದ್ರಕನ ಮೃಚ್ಛಕಟಿಕವನ್ನು ಕನ್ನಡದಲ್ಲಿ ಗದ್ಯದಲ್ಲಿ ಅನುವಾದಿಸಿದ್ದರು.

---

೧. ಸ್ಫೂರ್ತಿಯ ವಿಷಯದಲ್ಲಿ ಸ್ಫೂರ್ತಿಸ್ಥಾನವು ಸ್ಫೂರ್ತಿ ಪಡೆದವನಿಗಿಂತ ಮೇಲ್ಮಟ್ಟದ್ದೆಂಬ ತಿಳಿವಳಿಕೆಯು ನಿರಂತರ ಸತ್ಯವಲ್ಲ. ದಿ. ಬೇಂದ್ರೆಯವರ ಪತ್ನಿ ಗಂಗಾಳದಲ್ಲಿ ನೀರು ತೋಡಿಟ್ಟಿದ್ದೇನೆ, ಬೇಗ ಸ್ನಾನಕ್ಕೇಳಿ ಎಂದಾಗ, ಆ ಮಾತಿನಲ್ಲಿಯ 'ಗಂಗಾಳ' ಶಬ್ದವು ಅವರ ಅಮರ ಗೀತ. 'ಇಳಿದು ಬಾ ತಾಯಿ'ಗೆ (ಗಂಗಾವತರಣ) ನಿಮಿತ್ತವಾಯಿತೆಂಬ ಮಾತನ್ನು ಇಲ್ಲಿ ನೆನೆಯುವಂತಿದೆ.

೨. ಫೀಲ್ಡಿಂಗನ ಅನುವಾದ ಇದು ಎಂದು ಬ್ರಿಟಿಶ್ ಮ್ಯೂಸಿಯಮ್‌ನ ಕೆಟಲಾಗಿನಲ್ಲಿ ಸ್ಪಷ್ಟವಾಗಿ ಇದೆ. - ಶ್ರೀ ಹಾ.

ಅದು ಪ್ರಕಟವಾಗುವ ಮೊದಲೇ ದೈವ ಅವರನ್ನು ಕೊಂಡೊಯ್ಯಿತು.[೧] ಮುಂಬಯಿಯಲ್ಲಿದ್ದಾಗ ಅವರು ಲಕ್ಷ್ಮೀಶನ ಜೈಮಿನಿ ಭಾರತದಲ್ಲಿನ ಕೆಲವು ಪದ್ಯಗಳನ್ನು (ಪೀಠಿಕಾ ಸಂಧಿ) ಮರಾಠಿಯಲ್ಲಿ ಪದ್ಯದಲ್ಲಿಯೇ ಅನುವಾದಿಸಿ ಮರಾಠಿಗರಿಗೆ ಕನ್ನಡ ಸಾಹಿತ್ಯದ ಸವಿಯನ್ನು ಉಣಿಸಿದ್ದುಂಟು. ಜೊತೆಗೆ ಕನ್ನಡ ಭಾಷೆಯ ಸ್ವರೂಪವನ್ನು ಕುರಿತಾದ ಒಂದು ಸಂಶೋಧನಾತ್ಮಕ ಲೇಖವನ್ನು (ಅನುವಾದಿಸಿ ಇಲ್ಲಿ ಅನುವಾದವಾಗಿ ಕೊಡಲಾಗಿದೆ.) 'ಬಹಿರ್ಲಾಪಿಕಾ' ಶೀರ್ಷಿಕೆಯ ಕೆಳಗೆ ಓದುಗರು ಉತ್ತರಿಸಲೆಂದು ಕೆಲವು ಒಗಟುಗಳನ್ನು ಪ್ರಕಟಿಸಿರುವರು. ಇವೆಲ್ಲ ಮರಾಠಿಯಲ್ಲಿ ಆಗಿನಿಂದಲೂ ಹೆಸರುವಾಸಿಯಾಗಿದ್ದ 'ವಿವಿಧ ಜ್ಞಾನ ವಿಸ್ತಾರ' ಮಾಸಪತ್ರಿಕೆಯಲ್ಲಿ ಪ್ರಸಿದ್ಧವಾಗಿವೆ. ಇನ್ನೂ ಏನೇನು ಬರೆದಿದ್ದರೊ ಗೊತ್ತಿಲ್ಲ.

ಚುರಮುರಿಯವರ ಶಾಕುಂತಲದಲ್ಲಿ ಕಂಡು ಬರುವ ಉತ್ಕಟ ಶೃಂಗಾರ, ಕರುಣ, ಮೂಲಕ್ಕಿಂತ ಹೆಚ್ಚು ಸ್ವಾರಸ್ಯಕರವಿರುವ ಹಾಸ್ಯ ಇತ್ಯಾದಿ ರಸಭಾವಗಳ ಚಿತ್ರಣದಿಂದ ಮುಂಬಯಿಯಲ್ಲಿನ ಆವರೆಗಣ ಅವರ ಜೀವನ ಸಾಕಷ್ಟು ತೃಪ್ತಿಕರವಾಗಿ ಸಾಗಿರಬಹುದೆಂದು ಬಗೆಯುವಂತಿದ್ದರೂ ಹೊಂಚು ಹಾಕಿಕೊಂಡು ಕುಳಿತ ಪತ್ನೀವಿಯೋಗ ಅದನ್ನೆಲ್ಲ ಮಣ್ಣುಗೂಡಿಸಿತು. ಅದೇ ಕಾಲಕ್ಕೆ ಅವರಿಗೆ ದೂರದ ಸಿಂಧ ಪ್ರಾಂತಕ್ಕೆ ವರ್ಗವಾಯಿತು. ಆಗ ಸಿಂಧ ಮುಂಬಯಿ ಇಲಾಖೆಯ ಒಂದು ಭಾಗವಿದ್ದಿತು. ಹೊಸ ಜನ, ಹೊಸ ಪ್ರದೇಶ, ಹೊಸ ವಾತಾವರಣಗಳ ಮಧ್ಯದಲ್ಲಿ ಮನಸ್ಸಿಗೆ ಸ್ವಲ್ಪ ನೆಮ್ಮದಿ ದೊರೆತೀತೆಂದು, ಇದ್ದ ಈರ್ವರು ಹೆಣ್ಣುಮಕ್ಕಳನ್ನು ಕಕ್ಕ ಕೃಷ್ಣರಾಯರ ಉಡಿಯಲ್ಲಿ ಹಾಕಿ ತಮ್ಮ ಕೆಲಸಕ್ಕಾಗಿ ಸಿಂಧಕ್ಕೆ ತೆರಳಿದರು. ಸಿಂಧದ ಹವಾಮಾನ ಅವರಿಗೆ ಒಗ್ಗಲಿಲ್ಲೆಂದು ತೋರುತ್ತದೆ. ಪತ್ನೀ ವಿಯೋಗದಿಂದ ಮೊದಲೇ ಜರ್ಜರಿತರಾದ ಅವರು ಅಲ್ಪಾವಧಿಯಲ್ಲಿಯೇ ತೀವ್ರ ಅನಾರೋಗ್ಯಕ್ಕೆ ಗುರಿಯಾದರು. ಆದರೆ ಆಯುಷ್ಯ ಇನ್ನೂ ಗಟ್ಟಿಯಾಗಿತ್ತು. ಆಗ ಧಾರವಾಡ ಜಿಲ್ಲೆ ಹಿರೇಕೆರೂರ ತಾಲೂಕಿನ ಮದಗ ಮಾಸೂರಿನಲ್ಲಿರುವ ವಿಜಯನಗರ ಕಾಲೀನ ಸರೋವರದ ಜೀರ್ಣೋದ್ಧಾರ ಕೆಲಸ ಪ್ರಾರಂಭವಾಗಿತ್ತು.

ಮುಂಬಯಿ ಬಂದರದ ಕಟ್ಟುವಿಕೆಯಲ್ಲಿ ಅನುಭವವಿದ್ದ ಚುರಮುರಿಯವರನ್ನು ಓವರಸಿಯರೆಂದು ಅಲ್ಲಿಗೆ ವರ್ಗಾಯಿಸಲಾಯಿತು. ಮಾಸೂರಿನ ಕಾಮಗಿರಿ ಮುಗಿದ ಬಳಿಕ ಧಾರವಾಡಕ್ಕೆ ಮರಳಿ ಅಲ್ಲಿ ಕೆಲವು ಸಮಯ ಕೆಲಸ ಮಾಡಿ ಸರಕಾರಿ ಸೇವೆಯಿಂದ ನಿವೃತ್ತರಾದರು.

೧. ಚುರಮುರಿಯವರ ಈ ಕೃತಿಯ ಮುದ್ರಣ ಬೆಳಗಾವಿಯಲ್ಲಿ 'ಬೆಳಗಾವ ಸಮಾಚಾರ' ಪತ್ರಿಕೆಯ ಪ್ರೆಸ್ಸಿನಲ್ಲಿ ನಡೆದಿತ್ತು. ಮುದವೀಡು ಬೆಳಗಾವಿಯಲ್ಲಿ ನಡೆದ ಒಂದು ಪುಸ್ತಕ ಪ್ರದರ್ಶನದಲ್ಲಿ (೧೯೨೯) ಪುಟಗಳಷ್ಟೇ ಜೋಡಿಸಿ ಹೊಲಿದ ಅದರದೊಂದು ಪ್ರತಿಯನ್ನು ನೋಡಿದ್ದಾಗಿ ಉಲ್ಲೇಖಿಸಿರುವರು. ಚುರಮುರಿಯವರ ನಿಧನವಾರ್ತೆಯಲ್ಲಿ ಅವರ ಮುದ್ರಣವಿನ್ನೂ ಮುಗಿದಿಲ್ಲೆಂಬ ಮಾತಿದೆ. ಮುದವೀಡು ನೋಡಿದ್ದು ಬಹುಶಃ ಅಪೂರ್ಣ ಪ್ರತಿ ಇರಬೇಕು.

ಮಧ್ಯಂತರದಲ್ಲಿ ಕೊನೆವರೆಗೆ ಒಂಟಿಜೀವಿಯಾಗಿ ಬಾಳುವಂಥ ಒಂದು ಅಸಮಾಧಾನಕರ ಘಟನೆ ನಡೆಯಿತು. ಅದಕ್ಕೆ ಹೆಚ್ಚಾಗಿ ತತ್ಕಾಲೀನ ಮಾಧ್ವ ವೈಷ್ಣವರ ಧಾರ್ಮಿಕ ರೀತಿ ಸಂಪ್ರದಾಯಗಳು ಮತ್ತು ಅವುಗಳ ವಿಷಯದಲ್ಲಿದ್ದ ಅವರ ಸ್ವತಂತ್ರ ವಿಚಾರಗಳು ಕಾರಣವಾಗಿದ್ದವು. ಸಿಂಧದಲ್ಲಿ ಮೃತ್ಯುವಿನ ದವಡೆಯಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಅನ್ಯ ಜಾತೀಯರಿಂದ ಔಷಧೋಪಚಾರ, ಅನ್ನ-ನೀರು, ಸೇವೆ ಶುಶ್ರೂಷೆ ಪಡೆಯುವುದು ಅನಿವಾರ್ಯವಿದ್ದಿತು. ಸಾಲದ್ದಕ್ಕೆ ಮುಂಬಯಿಯಿಂದ ಕರಾಚಿಗೆ, ಅಲ್ಲಿಂದ ಮರಳಿ ಮುಂಬಯಿಗೆ ಸಮುದ್ರ ಪರ್ಯಟನ ಬೇರೆ. ಜಾತಿ ಭ್ರಷ್ಟತೆಗೆ ಆ ಕಾಲದಲ್ಲಿ ಈ ಎರಡು ಬಲವತ್ತರ ಕಾರಣಗಳಾಗಿದ್ದವು. ಪ್ರಾಯಶ್ಚಿತ್ತ ಪಡೆದು ಶುದ್ಧರಾಗಿ ಮತ್ತೆ ಸ್ವಜನರೊಂದಿಗೆ ಕೂಡಿ ಇರಬಹುದಿದ್ದರೂ ಅದು ಬೇಡೆನಿಸಿ ಧಾರವಾಡದಲ್ಲಿಯೇ ಬೇರೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಒಬ್ಬ ಅಡಿಗೆಯವನನ್ನಿಟ್ಟುಕೊಂಡು ಸ್ವತಂತ್ರವಾಗಿ ಇರತೊಡಗಿದರು.

ಚುರಮರಿ ಮೊದಲೇ ಭಾವಜೀವಿ. ಜಾತಿಭ್ರಷ್ಟರೆಂದು ತಾವಾಗಿಯೇ ತಂದುಕೊಂಡ ಏಕಾಂತವಾಸವು ಅವರಿಗೆ ಹೆಚ್ಚೆಚ್ಚು ಅಂತರ್ಮುಖಿಯಾಗಲು ಅನುಕೂಲವಾಗಿ ಪರಿಣಮಿಸಿತು. ಜೊತೆಗೆ ನಾನಾ ವಿಷಯಗಳ ನಾನಾ ಬಗೆಯ ಗ್ರಂಥವಾಚನ, ಶೂದ್ರಕನ ಮೃಚ್ಛಕಟಿಕದ ಕನ್ನಡ ಗದ್ಯಾನುವಾದ, ಬಡಗಿತನ, ಕಮ್ಮಾರಿಕೆ, ವೈಜ್ಞಾನಿಕ ಅದರಲ್ಲೂ ರಾಸಾಯನಿಕ ಪ್ರಯೋಗ ಇವೇ ಮೊದಲಾದ ಹವ್ಯಾಸಗಳು ಹೊತ್ತುಗಳೆಯಲು ಸಾಧನಗಳಾಗಿದ್ದವು. ಅವರದು ಬೆಲೆಯುಳ್ಳ ಗ್ರಂಥ ಭಂಡಾರ. ಆಗಿನ ಕಾಲದಲ್ಲಿ ಅದರ ಅಗ್ಗದ ಬೆಲೆಯೇ 3000 ರೂ. ಇದ್ದಿತೆಂದು ತಿಳಿಯುತ್ತದೆ. ಇದ್ದ ಈರ್ವರು ಹೆಣ್ಣುಮಕ್ಕಳು ಮದುವೆಯಾಗಿ ತಮ್ಮ ಗಂಡಂದಿರೊಂದಿಗೆ ಹಾಯಾಗಿದ್ದರು. ಅಂಥವೇನು ಇತರ ಪ್ರಾಪಂಚಿಕ ಹೊಣೆಗಳಿದ್ದಿಲ್ಲ. ಮರಣಾನಂತರ ಗ್ರಂಥಭಂಡಾರದ ಮಾರಾಟದಿಂದ ಬಂದ ಹಣ ಮತ್ತು ಕಳೆದುಳಿದ ತಮ್ಮ ಗಳಿಕೆಯನ್ನು ಸೇರಿಸಿ ಒಟ್ಟು ಮೊತ್ತವನ್ನು 'ಮೆಡಿಕಲ್'ಗೆ ಹೋಗುವ ಉತ್ತರ ಕರ್ನಾಟಕದ ಬುದ್ಧಿವಂತ ಬ್ರಾಹ್ಮಣ ವಿದ್ಯಾರ್ಥಿಗೆ 'ಸ್ಕಾಲರ್‌ಶಿಪ್' ರೂಪದಲ್ಲಿ ಸಲ್ಲಿಸಲು ವಿನಿಯೋಗಿಸಬೇಕೆಂದು ಮರಣ ಪೂರ್ವದಲ್ಲಿ ಮೃತ್ಯುಪತ್ರ ಮಾಡಿಟ್ಟಿದ್ದರು. ಆ ಮೇರೆಗೆ, ಕರ್ನಾಟಕವು ಪ್ರತ್ಯೇಕ ರಾಜ್ಯವಾಗುವ ವರೆಗೆ ಮುಂಬಯಿಯ ಗ್ರ್ಯಾಂಟ್ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಉತ್ತರ ಕರ್ನಾಟಕದ ಅರ್ಹ ಬ್ರಾಹ್ಮಣ ವಿದ್ಯಾರ್ಥಿಗೆ ಅವರ ಹೆಸರಿನಿಂದ ಆ ಸ್ಕಾಲರ್‌ಶಿಪ್ ಸಲ್ಲುತ್ತಿತ್ತು. ಈಗ ಏನಾಗಿದೆಯೋ ಗೊತ್ತಿಲ್ಲ.

ತೀರ ಅಕಾಲಿಕವೆಂದು ಹೇಳಲಾಗದಿದ್ದರೂ ಚುರಮರಿಯವರದು ಆಕಸ್ಮಿಕ ಮರಣ. ಅವರ ಅನೇಕ ಹವ್ಯಾಸಗಳಲ್ಲಿ ಒಂದಿದ್ದ ರಾಸಾಯನಿಕ ಪ್ರಯೋಗದಲ್ಲಿ ತೊಡಗಿದಾಗ ವಿಷಾರಿವಾಯು ಹೊಟ್ಟೆಯಲ್ಲಿ ಸೇರಿ ಮೃತ್ಯುವಶವಾದರು. (೨-೬-೧೮೮೨)[೧].

---

೧. ಉದ್ಧೃತ - ಮರಾಠೆ - ಮರಾಠಿ ರಂ. ಭೂ. ಪೂರ್ವರಂಗ, ಪು. ೧೯೦, ಬೆಳಗಾವ ಸಮಾಚಾರದಲ್ಲಿ ಪ್ರಕಟವಾದ ಚುರಮರಿ ನಿಧನವಾರ್ತೆಯಲ್ಲಿ ಅವರ ಶವಸಂಸ್ಕಾರಕ್ಕೆ ವಿಘ್ನ ಒದಗಿತೆಂಬ ಮಾತನ್ನು

ಚುರಮುರಿಯವರ ಶವಸಂಸ್ಕಾರ ಸಮಯದಲ್ಲಿ ವಿಘ್ನ ಒದಗಿತೆಂಬ ಮಾತಿನಲ್ಲಿ ತಥ್ಯಾಂಶ ಶಕ್ಯ. ಶವಸಂಸ್ಕಾರ, ವಿಶೇಷವಾಗಿ ಮಾಧ್ವ ವೈಷ್ಣವರಲ್ಲಿ, ಸಾಮಾನ್ಯ ಸಂದರ್ಭಗಳಲ್ಲಿ ಕೂಡ, ಪ್ರಯಾಸದ ಕೆಲಸ. ಸಾಕಷ್ಟು ಜನ ಮುಂಬರುವುದಿಲ್ಲ. ಒಂದಿಲ್ಲೊಂದು ನೆವ ಹೇಳಿ ತಪ್ಪಿಸಿಕೊಳ್ಳುವವರೇ ಹೆಚ್ಚು. ಚುರಮುರಿಯವರಿಗಾದರೋ ಜಾತಿಭ್ರಷ್ಟರೆಂಬ ಹೆಸರು ತಗಲಿಕೊಂಡಿತ್ತು. ಕರ್ಮಠ ಪ್ರಧಾನವಿದ್ದ ಆ ಕಾಲದಲ್ಲಿ ಬಹಿಷ್ಕಾರ(ಜಾತಿಯಿಂದ) ಭಯದಿಂದ ಮುಂಬರಲು ಜನ ಹಿಂಜರಿದಿದ್ದರೆ ಅದೇನು ಅಂಥ ಅಚ್ಚರಿಯ ಮಾತಾಗದು. ವೈಜ್ಞಾನಿಕ ಪ್ರಯೋಗದಲ್ಲಿ ಆಕಸ್ಮಾತ್ತಾಗಿ ತೀರಿಕೊಂಡಿದ್ದರಿಂದ ಮರಣೋತ್ತರ ಶವಪರೀಕ್ಷೆ (ಪೋಸ್ಟ್ ಮಾರ್ಟಮ್) ಪ್ರಶ್ನೆ ಕೂಡ ಉದ್ಭವಿಸಿರಬೇಕು. ಶವಸಂಸ್ಕಾರ ನಿರ್ವಿಘ್ನವಾಗಿ ಸಾಗಲಿಲ್ಲೆಂಬುದಕ್ಕೆ ಚುರಮುರಿ ತಾವಾಗಿಯೇ ತಂದುಕೊಂಡ ಜಾತಿಭ್ರಷ್ಟರೆಂಬ ಆಪಾದನೆ ಮತ್ತು ಅವರ ಆಕಸ್ಮಿಕ ಮರಣ ಕಾರಣವಿರಬೇಕಲ್ಲದೆ ಕ್ರೈಸ್ತಮತವನ್ನು ಸ್ವೀಕರಿಸಿದ್ದರೆಂದಲ್ಲ. ಅದೊಂದು ಮರಾಠೆ ಅವರ ಊಹೆ ಎಂಬುದು ಅವರ ಮಾತಿನಲ್ಲಿಯೇ ವ್ಯಕ್ತವಾಗಿದೆ.

●

ಅನುಲಕ್ಷಿಸಿ ಮರಾಠೆ; ಚುರಮುರಿ ನಿವೃತ್ತರಾದ ಬಳಿಕ ಚೆನ್ನಬಸಪ್ಪ ಚುರಮುರಿ ಎಂಬ ಕ್ರೈಸ್ತಮತವನ್ನು ಸ್ವೀಕರಿಸಿದ ವೀರಶೈವ ಗೃಹಸ್ಥರನ್ನು ಆಶ್ರಯಿಸಿದ್ದರು. ಕ್ರೈಸ್ತ ಮತೀಯರನ್ನು ಆಶ್ರಯಿಸಿದ್ದರೆಂದ ಬಳಿಕ ಅವರಾದರೂ ಆ ಮತವನ್ನು ಸ್ವೀಕರಿಸಬೇಕು. ಅಂತೆಯೇ ಅವರ ಶವಸಂಸ್ಕಾರಕ್ಕೆ ವಿಘ್ನ ಒದಗಿರಬೇಕು ಎಂಬ ಸಲ್ಲದ ಊಹೆಗೆ ಚಾಲನೆ ಕೊಟ್ಟಿರುವರು. ಈ ಚೆನ್ನಬಸಪ್ಪ ಚುರಮುರಿ ಯಾರೋ ತಿಳಿಯದು. ಪ್ರಕೃತ ವಿವೇಚನೆಯ ಸಹಬಂಧು ಲೇಖಕ ಪ್ರಹ್ಲಾದ ಮುದಗಲ್ಲ ನಡೆಸಿದ ಶೋಧದಲ್ಲಿ ಆಗಿನ್ನೂ ಜೀವಿಸಿದ್ದ ಚುರಮುರಿಯವರ ಗುರು ಡೆಪ್ಯುಟಿ ಚೆನ್ನಬಸಪ್ಪ ಧಾರವಾಡದಲ್ಲಿ ಇಂದಿಗೂ ಅಸ್ತಿತ್ವದಲ್ಲಿ ಕ್ರೈಸ್ತಮತವನ್ನು ಸ್ವೀಕರಿಸಿದ ಚುರಮುರಿ ಹೆಸರಿನ ಬೇರೆ ಮನೆತನ ಮತ್ತು ಚುರಮುರಿ ತುರಮುರಿ ಹೆಸರುಗಳಲ್ಲಿನ ಅಲ್ಪವ್ಯತ್ಯಾಸದಿಂದ ಉಂಟಾದ ಅಭೇದ ಭಾವ- ಇವುಗಳ ಮುಪ್ಪುರಿಯಿಂದ ಹುಟ್ಟಿಕೊಂಡಿರಬಹುದಾದ ಕಟ್ಟುಕಥೆಯೆಂದು ಕಂಡುಬಂದಿದೆ.

ಪ್ರಕರಣ ೩

ಮೂಲ ಶಾಕುಂತಲ ಪ್ರತಿಗಳ ಸ್ವರೂಪ

ಚುರಮರಿಯವರ ಅನುವಾದದಲ್ಲಿಯ ಕೆಲವು ಪದ್ಯ/ ಮಾತುಗಳಿಗೆ ಸಂವಾದಿಯಾದ ಪದ್ಯ/ ಮಾತುಗಳು ಪ್ರಚಾರದಲ್ಲಿರುವ ಬಹುಸಂಖ್ಯೆಯ ಸಂಸ್ಕೃತ ಶಾಕುಂತಲ ಪ್ರತಿಗಳಲ್ಲಿ ದೊರೆಯುವುದಿಲ್ಲ. ನಿರ್ವಿವಾದವಾಗಿ ಅವರ ಸ್ವಂತದವೆಂದು ಬರೆಯಬಹುದಾದ ಹಲವು ಪದ್ಯ/ ಮಾತುಗಳು ಅದರಲ್ಲಿದ್ದರೂ ಮೌಲ್ಯಮಾಪನ ದೃಷ್ಟಿಯಿಂದ ಉಳಿದವು ಎಲ್ಲಿಂದ ಮತ್ತು ಹೇಗೆ ಬಂದಿರಬಹುದೆಂಬುದರ ಪರಾಂಬರಿಕೆ ಇಷ್ಟವಿದೆ. ಅಲ್ಲದೆ ಚುರಮರಿಯವರ ಮತ್ತು ಮರಾಠಿಯಲ್ಲಿರುವ ಕಿರ್ಲೋಸ್ಕರರ ತತ್‌ಸದೃಶ ಅನುವಾದಗಳ ವಿಷಯದಲ್ಲಿ ನಡೆದು ಬಂದ ವಾದದ ಪರಾಮರ್ಶೆಗೆ ಇದಾದರೂ ಒಂದು ಉಪಯುಕ್ತ ಸಾಧನವಾಗಬಲ್ಲದು.

[ಕಾಳಿದಾಸ ಜಗದ್ವಿಖ್ಯಾತ ಕವಿ. ಅವನ ಕೃತಿ -ಶಾಕುಂತಲ ಕೂಡಾ ಅಷ್ಟೇ ಜಗದ್ವಿಖ್ಯಾತ ಇರುವದರಿಂದ ಭಾರತೀಯ ಮತ್ತು ಭಾರತೀಯೇತರ ಅನೇಕ ಭಾಷೆಗಳಲ್ಲಿ ಅದರ ಅನುವಾದಗಳಾಗಿವೆ. ರಂಗಕ್ಕೆ ಅಳವಡಿಸಿಕೊಳ್ಳುವ ಉದ್ದೇಶದಿಂದ ಅಥವಾ ಪಠ್ಯಪುಸ್ತಕವೆಂದು ಪರಿಷ್ಕರಿಸಲ್ಪಟ್ಟಿವೆ. ಆದರೂ ಅವನ ಸ್ಥಳಕಾಲಾದಿಗಳು ಇಂದಿಗೂ ಊಹಾತ್ಮಕ ಅರ್ಥಾತ್ ವಾದಾತ್ಮಕವಿವೆ. ಬಹುಸಂಖ್ಯೆ ವಿದ್ವಾಂಸರು ಆತ ಕ್ರಿ. ೪ನೇ ಶ. ದವನೆಂದು ಬಗೆದಿದ್ದರೆ, ಬೇರೆ ಕೆಲವರು, ವಿಶೇಷವಾಗಿ ಭಾರತೀಯರು , ಕ್ರಿ.ಪೂ. ೧ನೇ ಶ.ದವನೆಂದು ಬಗೆದಿರುವರು. ಪರಂಪರೆ ಅವನನ್ನು ಉಜ್ಜಯಿನಿಯ ಅರಸು ವಿಕ್ರಮಾದಿತ್ಯನ ಪ್ರಮುಖ ಆಸ್ಥಾನಕವಿಯನ್ನಾಗಿಸಿದೆ. ಇದಕ್ಕನುಗುಣವಾಗಿ ಕಾಲನಿರ್ಣಯ ನುಡಿಗಳು ತಮ್ಮ ಪ್ರತಿಪಾದನೆಗೆ ಸರಿಹೋಗುವಂಥ ಒಬ್ಬೊಬ್ಬ ವಿಕ್ರಮಾದಿತ್ಯನನ್ನು (ಬಿರುದು ಅಥವಾ ನಿಜನಾಮ) ಕಂಡುಕೊಂಡಿರುವರು. ನಿರ್ವಿವಾದವಾಗಿ ಕಾಲಿದಾಸನದೆಂದಿರುವ ಆರು ಕೃತಿಗಳು ದೊರೆತಿವೆ. ಅವುಗಳಲ್ಲಿ ಮೂರು ಕಾವ್ಯಗಳು - ರಘುವಂಶ, ಕುಮಾರಸಂಭವ, ಮೇಘದೂತ, ಮತ್ತು ಮೂರು ನಾಟಕಗಳು - ವಿಕ್ರಮೋರ್ವಶೀಯ, ಮಾಲವಿಕಾಗ್ನಿಮಿತ್ರ, ಶಾಕುಂತಲ. ಅವನದೆನ್ನಲಾಗುತ್ತಿದ್ದ ಇನ್ನೆರಡು

ಕೃತಿಗಳಿವೆ - ೧. ಷಡ್‌ಋತುಗಳನ್ನು ವರ್ಣಿಸುವ 'ಋತುಸಂಹಾರವೆಂಬ ಕಾವ್ಯ' ೨. ಲಕ್ಷಣವನ್ನೇ ಲಕ್ಷ್ಯವಾಗಿಸಿ ಛಂದಶ್ಶಾಸ್ತ್ರವನ್ನು ನಿರೂಪಿಸಿದ 'ಶ್ರುತಬೋಧ' ಎಂಬ ಚಿಕ್ಕ ಕೃತಿ. ಹೆಚ್ಚಿನ ವಿವರಗಳು ಸದ್ಯ ಅಪ್ರಸಕ್ತ.]

ಜಗದ್ವಿಖ್ಯಾತ ಕೃತಿ ಇರುವದರಿಂದ ಶಾಕುಂತಲದ ಹಸ್ತಪ್ರತಿಗಳು ಭಾರತದಾದ್ಯಂತ ದೊರೆತಿವೆ. ಆದರೆ ಅವುಗಳಲ್ಲಿ ನಿಶ್ಚಿತ ಬಗೆಯ ಏಕರೂಪತೆ ಇಲ್ಲ. ಅನೇಕ ಪಾಠಾಂತರಗಳಿವೆ. ಹೆಚ್ಚು ಕಡಿಮೆಗಳಿವೆ. ಲಭ್ಯವಾದ ಎಲ್ಲ ಪ್ರತಿಗಳನ್ನು ಪರಿಶೀಲಿಸಿ ವಿದ್ವಾಂಸರು ಅವನ್ನು ಬಂಗಾಲಿ, ದೇವನಾಗರಿ, ಕಾಶ್ಮೀರಿ ಮತ್ತು ದಾಕ್ಷಿಣಾತ್ಯ ಅಥವಾ ಅವುಗಳ ಬಳಗಕ್ಕೆ ಸೇರಿದ ಪ್ರತಿಗಳೆಂದು ಸ್ಥೂಲವಾಗಿ ವಿಂಗಡಿಸಿರುವರು. ಬಂಗಾಲಿ ದೇವನಾಗರಿ ಎಂದು ಎರಡು ಗುಂಪುಗಳಲ್ಲಿ ಸಹ ವಿಂಗಡಿಸಬಹುದೆಂಬ ಅಭಿಪ್ರಾಯವಾದರೂ ಇದೆ. ಬಂಗಾಲಿ ಸಂಸ್ಕರಣದಲ್ಲಿ ೨೨೧ ಶ್ಲೋಕಗಳಿದ್ದರೆ ದೇವನಾಗರಿ ಸಂಸ್ಕರಣದಲ್ಲಿ ೧೯೪ ಇವೆ. ಮೊದಲನೇದು ದೀರ್ಘ ಅಥವಾ 'ಪಿಶೆಲ್' ಸಂಸ್ಕರಣ, ಎರಡನೇದು ಹ್ರಸ್ವ ಅಥವಾ 'ಮೊನೀರ ವಿಲಿಯಮ್' ಸಂಸ್ಕರಣ ಎಂದು ಸಹ ಅಲ್ಲಲ್ಲಿ ಉಕ್ತವಾಗಿವೆ. ಕಾಶ್ಮೀರಿ ಸಂಸ್ಕರಣದಲ್ಲಿ ೭ನೇ ಅಂಕದ ಪ್ರಾರಂಭದಲ್ಲಿ ಮೌಲಿಕತೆಯ ದೃಷ್ಟಿಯಿಂದ ಅಷ್ಟೇನು ಮಹತ್ವದ್ದಿಲ್ಲದ ಒಂದು ಪ್ರವೇಶವಿದ್ದು ಉಳಿದ ಅಂಶಗಳಲ್ಲಿ ಅದಕ್ಕೂ ಬಂಗಾಲಿ ಸಂಸ್ಕರಣಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಅದೇ ರೀತಿ ದೇವನಾಗರಿ ದಾಕ್ಷಿಣಾತ್ಯ ಸಂಸ್ಕರಣಗಳಲ್ಲಿ ಅಂಥವೇನು ಮಹತ್ವದ ವ್ಯತ್ಯಾಸಗಳಿಲ್ಲ. ಕೀಥರ ಅಭಿಪ್ರಾಯದಲ್ಲಿ ದೇವನಾಗರಿ ರಂಗಕ್ಕಾಗಿ ಸಂಕ್ಷೇಪಿಸಿದ ಸಂಸ್ಕರಣವೆಂಬ ಪ್ರತಿಪಾದನೆಯನ್ನು ಮನ್ನಿಸುವುದಾದರೆ ಬಂಗಾಲಿ ಕವಿಯದು ಮೂಲ ಪ್ರತಿಯಾಗುವದು. ಆದರೆ ಹಾಗೆ ಬಗೆಯಲು ಸಾಕಷ್ಟು ಆಧಾರಗಳಿಲ್ಲ. ಅತಏವ ಎರಡರಲ್ಲಿ (ಬಂಗಾಲಿ, ದೇವನಾಗರಿ) ಯಾವುದೊಂದನ್ನು ಕವಿಯ ಪ್ರತಿಮೆಯೊಂದು ಇದಮಿತ್ಥಂ ಬಗೆಯಲ್ಲಿ ಸ್ವೀಕರಿಸುವಂತಿಲ್ಲ, ಎಂದಿದೆ. ಜೊತೆಗೆ ಉಪರೋಕ್ತ ನಾಲ್ಕು ಸಂಸ್ಕರಣಗಳೊಂದಿಗೆ ಐದನೆಯದೊಂದು ಸಂಸ್ಕರಣವು ಬೆಳಕಾಗಿ ಬರುವ ಸಂಭವವಿಲ್ಲದಿಲ್ಲ, ಎಂದಿರುವರು ಅವರು. ಇತ್ತೀಚೆಗೆ (೧೯೫೭) ಮೈಥಿಲಿ ಪಾಠವೆಂಬ ಮಿಥಿಲಾ ವಿದ್ಯಾಪೀಠದ ಸಂಸ್ಕರಣವೊಂದು ಪ್ರಕಟವಾಗಿದೆ. ಅದು ಮೈಥಿಲಿ ಲಿಪಿಯಲ್ಲಿರುವ ಹಸ್ತಪ್ರತಿಗಳನ್ನು ಆಧರಿಸಿದ್ದರೂ ಡಾ. ರಾಘವನ್ ಮೇರೆಗೆ ಅದು ಐದನೆಯ ಸಂಸ್ಕರಣವಾಗದು. ತಥ್ಯದಲ್ಲಿ ಅದು ಬಂಗಾಲಿ-ಕಾಶ್ಮೀರಿ ಮಿಶ್ರ ಸಂಸ್ಕರಣಗಳ ಬಳಗಕ್ಕೆ ಸೇರಿದೆ.

ಭಾರತೀಯ ಸಾಹಿತ್ಯ ಅಕಾಡೆಮಿ ೧೯೬೫ರಲ್ಲಿ ಶಾಕುಂತಲದ ಸಂಶೋಧಿತ (ಕ್ರಿಟಿಕಲ್) ಸಂಸ್ಕರಣವನ್ನು ಹೊರಡಿಸಬೇಕೆಂದು ನಿರ್ಧರಿಸಿ ಸುವಿಖ್ಯಾತ ಸಂಸ್ಕೃತ ಸಂಶೋಧಕ ವಿದ್ವಾಂಸ ಡಾ. ಬೆಳವಲಕರ ಅವರಿಗೆ ಆ ಕೆಲಸವನ್ನು ಒಪ್ಪಿಸಿತು. ಆದರೆ ಅನಾರೋಗ್ಯದ ಮೂಲಕ ಅವರಿಂದ ಅದನ್ನು ಪೂರ್ತಿಗೊಳಿಸುವದಾಗಲಿಲ್ಲ. ಆದರೂ ಮಧ್ಯಂತರದಲ್ಲಿ ಅವರು ಪಾಠಾಂತರಗಳನ್ನೂ ನ್ಯೂನಾಧಿಕ್ಯಗಳನ್ನು ಕುರಿತಾದ ಟಿಪ್ಪಣಿಗಳಿಲ್ಲದೆ ಮೂಲ ಕವಿಪ್ರತಿಯು ಅಂತಿರಬಹುದೆಂದು ಸಂಪೂರ್ಣ ನಾಟಕವನ್ನು ಸಿದ್ಧಪಡಿಸಿದ್ದರು. ಅವರ ಅನುಭವ ವಿದ್ವತ್ತುಗಳಿಗೆ ಮಾನ ಚಿಹ್ನವೆಂದು

ಅದನ್ನೇ ಅಕೆಡೆಮಿ ಅವರ ಹೆಸರಿನಲ್ಲಿ ಮುದ್ರಿಸಿ, ನಾಟಕದ ಸಾರವತ್ತಾದ ಎಲ್ಲ ಅಂಶಗಳು ಎಲ್ಲ ಸಂಸ್ಕರಣಗಳಲ್ಲಿ ಲಭ್ಯವಿರುವದರಿಂದ ಜಿಜ್ಞಾಸುಗಳು ನಿರಾಶರಾಗದೆ ಅಷ್ಟರಿಂದಲೇ ತೃಪ್ತರಾಗುವರೆಂದು ಹಾರೈಸಿದೆ.

ಮುಖ್ಯವಾಗಿರುವದು ಬಂಗಾಲಿ ಸಂಸ್ಕರಣದಲ್ಲಿ ಮೂರನೇ ಅಂಕಿನಲ್ಲಿ ದೊರೆಯುವ ಕೆಲವು ಶೃಂಗಾರಿಕ ಶ್ಲೋಕ ಮಾತುಗಳು ಮತ್ತು ಕಾಶ್ಮೀರಿ ಸಂಸ್ಕರಣದಲ್ಲಿ ಏಳನೇ ಅಂಕದ ಪ್ರಾರಂಭದಲ್ಲಿ ದೊರೆಯುವ ಪ್ರವೇಶಕ. ಅಕಾಡೆಮಿ ಆವೃತ್ತಿಯಲ್ಲಿ ವಾದದಲ್ಲಿ ಸಿಲುಕಿದ ಒಂದೆರಡು ಶ್ಲೋಕ/ ಮಾತುಗಳು ಮತ್ತು ಕಾಶ್ಮೀರಿ ಸಂಸ್ಕರಣದಲ್ಲಿಯ ಪ್ರತೀಶಕ ಕಾಣಸಿಗುತ್ತವೆ. ಪ್ರಚಲಿತ ಸಂಸ್ಕರಣಗಳಲ್ಲಿಯ ಕೆಲವು ಶ್ಲೋಕ/ಮಾತುಗಳು ಬಿಟ್ಟುಹೋಗಿವೆ. ಕೆಲವು ಹೊಸದಾಗಿ ಸೇರಿವೆ. ಬಿಟ್ಟು ಹೋದ ಪದ್ಯಗಳಲ್ಲಿ ಪ್ರಾರಂಭದಲ್ಲಿ ಬರುವ ಸುಪರಿಚಿತ 'ನ ಖಲು ನ ಖಲು ಬಾಣಃ ಸನ್ನಿಪಾತ್ಯೋಽಯ ಮಸ್ಮಿನ್' ಒಂದು.

ದೇವನಾಗರಿ ಸಂಸ್ಕರಣದ ಪುರಸ್ಕೃತರು ಬಂಗಾಲಿ ಸಂಸ್ಕರಣದಲ್ಲಿನ ಶೃಂಗಾರಿಕ ಶ್ಲೋಕ/ ಮಾತುಗಳು ಸದಭಿರುಚಿಗೆ ಶೋಭಿಸುವಂತಿಲ್ಲವೆಂದು ವಾದಿಸಿದ್ದರೆ ಬಂಗಾಲಿ ಸಂಸ್ಕರಣದ ಪುರಸ್ಕೃತರು ಅವರನ್ನು ಮಡಿವಂತರು(ಪ್ಯುರಿಟನ್) ಎಂದು ಮೂದಲಿಸಿರುವರು. ದೀರ್ಘ(ಬಂಗಾಲಿ) ಸಂಸ್ಕರಣವನ್ನಾಧರಿಸಿ ಮೂಲ ಶಾಕುಂತಲವನ್ನು ಇಂಗ್ಲಿಷಿನಲ್ಲಿ ಪರಿವರ್ತಿಸಿದ ಕೆಲಿಫೋರ್ನಿಯ(ಅಮೇರಿಕೆ) ವಿಶ್ವ ವಿದ್ಯಾಲಯದ ಆರ್ಥರ್ ರೈಡರ್: ಎರಡೂ ಪಕ್ಷಗಳ ವಾದಸರಣಿ ಸಾಕಷ್ಟು ತೂಕದ್ದಾಗಿದ್ದರೂ, ಸಮಗ್ರ ದೃಷ್ಟಿಯಿಂದ ನೋಡಿದಾಗ ಅಷ್ಟೊಂದು ಹೃದ್ಯ ಮತ್ತು ರಸಾವಹ ಶ್ಲೋಕ/ ಮಾತುಗಳನ್ನು ಸೇರಿಸಲು ಕಾಲಿದಾಸನನ್ನು ಸಮಕಟ್ಟುವಂಥ ಕವಿಯೇ ಬೇಕು, ಅಲ್ಲದೆ ದೀರ್ಘವಿದ್ದದನ್ನು ರಂಗಭೂಮಿ ಅಥವಾ ಪಠ್ಯಪುಸ್ತಕಕ್ಕಾಗಿ ಹ್ರಸ್ವಿಸುವದು ಸುಲಭ. ಆದರೆ ಹ್ರಸ್ವವಿದ್ದದ್ದನ್ನು ಸ್ವಯಂ ಕವಿಯೇ ಬರೆದಿರುವಂತೆ ದೀರ್ಘಿಸುವದು ದುಸ್ಸಾಧ್ಯ ಎಂಬ ನಿಲುಮೆಯನ್ನು ಮಂಡಿಸಿರುವರು. ಫ್ರಾನ್ಸದ ಪ್ರಾಚ್ಯವಿದ್ಯಾ ವಿದ್ವಾಂಸ ಸಿಲ್ವಿಯನ್ ಲೆವಿ ವಾದದಲ್ಲಿ ಸಿಲುಕಿದ ಶ್ಲೋಕ [ಮಾತುಗಳ ಉಚಿತಾನುಚಿತ ಸ್ವರೂಪವನ್ನು ಭಾರತೀಯರ ಒಲವು ಅಭಿರುಚಿಗಳ ದೃಷ್ಟಿಯಿಂದ ನಿರುಕಿಸಬೇಕೆಂಬ ಅಭಿಪ್ರಾಯವನ್ನು ತಾಳಿರುವರು.

ಕನ್ನಡ ಅನುವಾದಗಳಲ್ಲಿ ಚುರಮರಿ ಅನುವಾದದಲ್ಲಿ ಮಾತ್ರ ವಾದದಲ್ಲಿ ಸಿಲುಕಿದ ಬಂಗಾಲಿ ಸಂಸ್ಕರಣದಲ್ಲಿನ ಕೆಲವು ಶ್ಲೋಕ/ ಮಾತುಗಳು ಕಾಣಸಿಗುತ್ತವೆ. ಉಳಿದೆಲ್ಲ ಅನುವಾದಗಳು (ಮರಾಠಿ ಸಹ) ದೇವನಾಗರಿ ಸಂಸ್ಕರಣ ಅಥವಾ ಅದರ ಬಳಗಕ್ಕೆ ಸೇರಿದ ಪ್ರತಿಗಳನ್ನು ಅನುಸರಿಸಿವೆ. ಒಂದೆರಡು ಪಾತ್ರಗಳ ಹೆಸರುಗಳಲ್ಲೂ ವ್ಯತ್ಯಾಸಗಳಿವೆ. ದೇವನಾಗರಿ ಸಂಸ್ಕರಣದಲ್ಲಿ ಕಣ್ವ ಶಿಷ್ಯರಲ್ಲಿ ಒಬ್ಬನು ನಾರದನೆಂದು ಉಕ್ತನಾಗಿದ್ದರೆ ಬಂಗಾಲಿ ಸಂಸ್ಕರಣದಲ್ಲಿ ಆತ ಹಾರೀತನೆಂದು ಕಾಣಿಸಿಕೊಂಡಿರುವನು. ಚುರಮರಿ ಅನುವಾದದಲ್ಲೂ ಆತ ಹಾರೀತನೆಂದೇ ಕಾಣಿಸಿಕೊಂಡಿರುವನು. ಆದರೆ ಆರನೇ ಅಂಕವಲ್ಲಿ ಬರುವ ಶಕುಂತಲೆಯ ತಾಯಿ ಮೇನಕೆಯಿಂದ

ಕಳಿಸಲ್ಪಟ್ಟ ಅಪ್ಸರೆ ಬಂಗಾಲಿ ಸಂಸ್ಕರಣದಲ್ಲಿ ಮಿಶ್ರಕೇಶ ಎಂದು ಉಕ್ತಳಾಗಿದ್ದರೆ ದೇವನಾಗರಿ ಸಂಸ್ಕರಣವಲ್ಲಿ, ಚುರಮುರಿ ಅನುವಾದದಲ್ಲಿ ಸಹ, ಆಕೆ ಸಾನುಮತಿ ಎಂದು ಕಾಣಿಸಿಕೊಂಡಿರುವಳು. ಐದನೇ ಅಂಕವು ದೇವನಾಗರಿ ಸಂಸ್ಕರಣದಲ್ಲಿ ಅರಸು ದುಷ್ಯಂತ, ವಿದೂಷಕ ಮತ್ತು ತೆರೆಯಲ್ಲಿ ಹಂಸಪದಿಕೆಯ ನಿಂದಾವ್ಯಂಜಕ ಗೀತದೊಂದಿಗೆ ತೊಡಗುತ್ತಿದ್ದರೆ ಬಂಗಾಲಿ ಸಂಸ್ಕರಣ ಮತ್ತು ಚುರಮುರಿ ಅನುವಾದಗಳಲ್ಲಿ: ಗೌತಮಿ ಮತ್ತು ಕಣ್ವಶಿಷ್ಯರೊಂದಿಗೆ ಶಕುಂತಲೆಯು ಬಂದಿರುವುದನ್ನು ಅರಿಕೆ ಮಾಡಿಕೊಳ್ಳಲು ದುಷ್ಯಂತನೆಡೆ ಹೊರಟ ಕಂಚುಕಿಯ ವೇಶದೊಂದಿಗೆ ಪ್ರಾರಂಭವಾಗುತ್ತದೆ.

ಮಠದಲ್ಲಿ ಸಿಲುಕಿದ ಮೂರನೇ ಅಂಕಿಗಳಲ್ಲಿರುವ ಸು. ಬಿಶ್ಲೋಕ ಮತ್ತು ೮೦ ಗದ್ಯ ಸಂಭಾಷಣಗಳನ್ನು ಚುರಮುರಿ ಒಂದು ಹಾಡು ಮತ್ತು ೫೦ ಗದ್ಯ ಸಂಭಾಷಣಗಳಲ್ಲಿ ಸಂಗ್ರಹಿಸಿರುವರು. ಅದರಲ್ಲಿಯ ಹಾಡು ಮತ್ತು ಕೆಲವು ಮಾತುಗಳನ್ನು ಅವರ ಅನುವಾದದ ಮೂಲ್ಯಾಂಕನ ಸಂದರ್ಭದಲ್ಲಿ ಕೊಟ್ಟಿದೆ.

ಮರಾಠಿಯಲ್ಲಿ ಶಾಕುಂತಲವನ್ನು ಅನುವಾದಿಸಿದ ಕಿರ್ಲೋಸ್ಕರ ಆಗಲಿ ಅವರ ಪೂರ್ವಿಕರಾಗಲಿ ಹೆಚ್ಚಾಗಿ ದೇವನಾಗರಿ ಸಂಸ್ಕರಣವನ್ನು ಬಳಸಿಕೊಂಡಿರುವರು. ಕನ್ನಡದಲ್ಲಿ ಬಸವಪ್ಪಶಾಸ್ತ್ರಿಗಳ ಅನುವಾದವಾದರೂ ದೇವನಾಗರಿ ಸಂಸ್ಕರಣವನ್ನು ಆಧರಿಸಿದೆ.

●

ಪ್ರಕರಣ ೪

ಭಾಷಾಂತರ ವಿಚಾರ

ಸಾಹಿತ್ಯವಿರಲಿ ಶಾಸ್ತ್ರವಿರಲಿ ತಮ್ಮ ಭಾಷೆಯಲ್ಲಿಯ ಸ್ವಾರಸ್ಯಪೂರ್ಣ ಕೃತಿಗಳನ್ನು ಬೇರೆ ಭಾಷೆಗಳಲ್ಲಿ ಮತ್ತು ಆ ಭಾಷೆಗಳಲ್ಲಿನ ಇಂಥ ಕೃತಿಗಳನ್ನು ತಮ್ಮ ಭಾಷೆಯಲ್ಲಿ ಪರಿವರ್ತಿಸಿ ಜಿಜ್ಞಾಸುಗಳನ್ನು ತಣಿಸುವದು ಭಾಷಾಕೋವಿಂದ ವಿದ್ವಾಂಸರ ಸಹಜ ಪ್ರವೃತ್ತಿ. ಯಾವುದೊಂದು ಭಾಷೆಯಲ್ಲಿನ ಜ್ಞಾನವಿಸ್ತಾರಕ್ಕೆ ರಸಾಸ್ವಾದಕ್ಕೆ ಈ ಬಗೆಯ ಕೊಡುಕೊಳೆ ಒಂದು ಮಹತ್ವದ ಸಾಧನವೆಂದರೆ ತಪ್ಪಾಗದು. ಕನ್ನಡ ಮೊದಲಾದ ಭಾಷೆಗಳೂ ಇದಕ್ಕೆ ಅಪವಾದವಾಗವು. ಆದರೆ ಕಾವ್ಯ ನಾಟಕಗಳಂಥ ಲಲಿತ ಸಾಹಿತ್ಯ ಕ್ಷೇತ್ರದಲ್ಲಿ ಈ ಕಾರ್ಯ ಆಡಿದಷ್ಟು ಮಾಡುವದು ಸುಲಭವಿಲ್ಲ. ಏಕೆಂದರೆ ಪ್ರತಿಯೊಂದು ಭಾಷೆಗೆ ಅದರದರ ಮಾಧುರ್ಯವಿರುತ್ತದೆ. ವಾಗ್ಧರೆಗಳಿರುತ್ತವೆ. ಹೃದ್ಯ ಅಭಿವ್ಯಕ್ತಿಯ ತಿರುವುಗಳಿರುತ್ತವೆ. ಹತ್ತು ಶಬ್ದಗಳಲ್ಲಿ ಹೇಳಬಹುದಾದ ಮಾತನ್ನು ಒಂದೇ ಶಬ್ದದಲ್ಲಿ ಹೇಳಬಹುದಾದ ಶಬ್ದಗಳಿರುತ್ತವೆ. ಆ ಆ ಭಾಷಿಕರ ಒಲವು ಅಭಿರುಚಿಗಳು ಅವುಗಳತ್ತ ಒಲಿದಿರುತ್ತವೆ. ಇವುಗಳನ್ನು ಮನಗಂಡು ಭಾಷಾಂತರಕ್ಕೆ ತೊಡಗಿದರೆ ಭಾಷಾಂತರವು ಮೂಲಕ್ಕೆ ಅದೆಷ್ಟೇ ಸಮೀಪವಿದ್ದರೂ ಒರೆಹಚ್ಚಿ ನೋಡಿದಾಗ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಮೂಲದ ಪರಿಚಯವಿಲ್ಲದವರು ಮೆಚ್ಚಿಕೊಂಡು ಕುಣಿದಾಡಿದರೂ ಎರಡರ ಸವಿಯನ್ನು ಬಲ್ಲ ವಿದ್ವಾಂಸರು ಭಾಷಾಂತರಿತ ಕೃತಿಯಲ್ಲಿ ಅನೇಕ ನ್ಯೂನಾತಿರೇಕಗಳನ್ನು ಕಾಣುತ್ತಾರೆ. ಹಾಗೆಂದು ಶಬ್ದಶಃ ಭಾಷಾಂತರಿಸಿದರೆ ಕೃತಿ ಸಪ್ಪಗಾಗುತ್ತದೆ. ಒಮ್ಮೊಮ್ಮೆ ವಿಕೃತವೆನಿಸುವಷ್ಟು ಹದಗೆಡಿಸುತ್ತದೆ.

ಪ್ರಖ್ಯಾತ ಗ್ರೀಕ ಕವಿ ಹೋಮರನ (ಕ್ರಿ.ಪೂ. ೮೫೦) ಕೃತಿಗಳ ಇಂಗ್ಲೀಷ ಪರಿವರ್ತನ ಸಂದರ್ಭದಲ್ಲಿ ಭಾಷಾಂತರ ರೀತಿ ನೀತಿಗಳನ್ನು ಕುರಿತಾದ ಚರ್ಚೆಗಳಾಗಿವೆ. ಪ್ರಾರಂಭಿಕ ಭಾಷಾಂತರಕಾರರಲ್ಲಿ ಒಬ್ಬನಿದ್ದ ಜೋರ್ಜ್ ಚಾಪ್ಮನ್ (೧೫೫೯-೧೬೩೪) ಭಾಷಾಂತರಕಾರನು ಮೂಲದಲ್ಲಿಯ ವಾಕ್ಯರಚನೆ, ಅಲಂಕಾರ, ಶಬ್ದಾರ್ಥ ಚಮತ್ಕೃತಿ, ರಸ ಭಾವಾದಿಗಳನ್ನು

ಅರಗಿಸಿಕೊಂಡು ಸಾಧ್ಯವಿದ್ದಷ್ಟು ತನ್ನ ಭಾಷೆಯಲ್ಲಿ ಅವಕ್ಕೆ ಅನುಗುಣವಿದ್ದ ಪದವಾಕ್ಯಾದಿಗಳನ್ನು ಪ್ರಯೋಗಿಸುವದು ಸೂಕ್ತವೆಂದು ಬಗೆದು ತನ್ನ ಕಾರ್ಯವನ್ನು ಮುಂದರಿಸಿರುವನು (ಚಾಪ್ಮನ್ ಕೃತಿಗಳು, ಪು. ೧೦) ತತ್ಕಾಲೀನ ಲೋಕಾಭಿರುಚಿಗೆ ಮತ್ತು ಮುಂದೆ ಎಷ್ಟೋ ಸಮಯ ಅದು ಹಿಡಿಸಿರಬೇಕು. ಗ್ರೀಕ ಭಾಷೆಯನ್ನರಿಯದ ಕೀಟ್ಸನಿಗೆ (೧೭೯೫- ೧೮೨೧) ಚಾಪ್ಮನ್ನನ ಈ ಕೃತಿಯನ್ನು ಓದಿದಾಗ ಆಗಸವನ್ನು ಅರಸುವ ಖಗೋಲಜ್ಞನ ದೃಷ್ಟಿ ಪಥದಲ್ಲಿ ಹೊಸದೊಂದು ಗ್ರಹ ತೇಲಿ ಬಂದಂತಾಯಿತಂತೆ(Then felt I lke some satcher of the skies when a new planet swims into hisken, on First looking into Ihapman's Homer). ಆದರೂ ವಿಮರ್ಶಕರ ಆಕ್ಷೇಪಣೆಗಳಿಂದ ಅದು ಅಲಿಪ್ತವಾಗಿಲ್ಲ. ಅದರಲ್ಲಿ ಹೋಮರನು ಕನಸು ಮನಸುಗಳಲ್ಲಿ ಕೂಡ ಕಂಡಿರದ ಸಾಮಾಜಿಕ, ವೈಯಕ್ತಿಕ ಶೀಲ ಚಾರಿತ್ರ್ಯಗಳ ಉಪದೇಶವೇ ಹೆಚ್ಚೆಂದು ಅವರು ಆಕ್ಷೇಪಿಸಿರುವರು(Lewis, 16th cent-Eng.Lit, p. 517).

ಚಾಪ್ಮನ್ನನ ನಂತರ ಹೋಮರನ ಕೃತಿಗಳನ್ನು ಇಂಗ್ಲಿಷಿಗೆ ಪರಿವರ್ತಿಸಿದವರಲ್ಲಿ ಜಾನ್ ಡ್ರಾಯ್ಡನ್ (೧೬೩೧-೧೭೦೦) ಮತ್ತು ಅಲೆಕ್ಸಾಂಡರ್ ಪೋಪ್(೧೬೮೮-೧೭೪೪) ಪ್ರಮುಖರು. ಭಾಷಾಂತರ ಕಾರ್ಯಕ್ಕೆ ತೊಡಗಿದವನು ಮೂಲತ ತೇಜಸ್ಸು ಓಜಸ್ಸುಗಳನ್ನು ತನ್ನ ಪರಿವರ್ತನೆಯಲ್ಲಿ ಉಳಿಸಿಕೊಳ್ಳಬೇಕಿದ್ದರೆ ಆತನು ಮೂಲ ಕರ್ತೃವು ಬಳಸಿದ ಶಬ್ದಗಳನ್ನಷ್ಟೇ ಗಮನದಲ್ಲಿಟ್ಟುಕೊಂಡರೆ ಕೆಲಸವಾಗದು. ಮೂಲದ ಭಾಷೆ, ಅದರ ವೈಶಿಷ್ಟ್ಯ, ಪದವಾಕ್ಯಗಳ ಪ್ರಯೋಗ ಪ್ರಕ್ರಿಯೆಗಳ ರೀತಿ-ನೀತಿ, ವಿಷಯದ ಸ್ವರೂಪ ಇತ್ಯಾದಿಗಳನ್ನು ಆತ ಚೆನ್ನಾಗಿ ಅರಿತುಕೊಂಡಿರಬೇಕೆಂಬುದು ಡ್ರಾಯ್ಡನ್ನನ ಭೂಮಿಕೆ. 'ಹೀಗಾದರೇನೆ ಭಾಷಾಂತರಕಾರನು ಮೂಲದ ಯಥಾತಥ್ಯ ಮತ್ತು ಅದರಲ್ಲಿನ ಜೀವಂತಿಕೆಗಳನ್ನು ಉಳಿಸಿಕೊಂಡು, ತನ್ನದು ಅನುಕೃತಿ ಇದ್ದರೂ ಯಶಸ್ವಿಯಾಗಬಲ್ಲನು. ಬದಲಾಗಿ ಶಬ್ದಕ್ಕೆ ಪ್ರತಿ ಶಬ್ದವನ್ನು ಇಡುತ್ತ ಹೋದಲ್ಲಿ ಮೂಲದ ಸತ್ವವೆಲ್ಲ ಎಲ್ಲೆಲ್ಲೋ ಕಳಚಿ ಕಾಣದೆ ಹೋಗುವದು' ಎಂದು ಎಚ್ಚರಿಸಿರುವನು. (ಉದ್ಧೃತ, ಗೋಡ ಬೊಲೆ- ಮಹಾರಾಷ್ಟ್ರ ಶಾಕುಂತಲ, ಪು. ೨೧ - ಮುನ್ನುಡಿ).

ಆದರೆ ಪ್ರತ್ಯಕ್ಷ ಕೃತಿಯಲ್ಲಿ ಡ್ರಾಯ್ಡನ್ ತಾನೇ ಈ ಆದರ್ಶವನ್ನು ಪಾಲಿಸಿಲ್ಲ. ಪರಿವರ್ತನೆಯಲ್ಲಿ ಆತ ತನ್ನ ಒಲವು ಅಭಿರುಚಿಗಳಿಗನುಸಾರ ಮೂಲದಲ್ಲಿಯ ಕೆಲವು ಭಾಗಗಳನ್ನು ಬಿಟ್ಟಿರುವನು. ಕೆಲವೆಡೆ ಮೂಲದಲ್ಲಿಲ್ಲದ ಹೊಸ ಮಾತುಗಳನ್ನು ಸೇರಿಸಿರುವನು. ಹೀಗೆ ಮಾಡಿರುವದು ದಾರ್ಷ್ಟ್ಯದ ಕೆಲಸವೆಂಬುದರ ಅರಿವಿದ್ದಿತು ಅವನಿಗೆ. ಆದಕ್ಕಾಗಿ ಓದುಗರ ಕ್ಷಮೆ ಕೋರಿರುವನು. ಹೆಚ್ಚಿಗೆ ಸೇರಿಸಿದ ಮಾತುಗಳು ಅನ್ಯವೆಂದು ತಿಳಿಯಬೇಕಿಲ್ಲ. ಅವು ಮೂಲ ಕವಿಗೇನೆ ಗೋಚರವಾಗುವಂಥವು (ವಿಮರ್ಶಕ ಪಂಡಿತರಿಗಲ್ಲ) ಹೇಗೋ ಅವನಿಂದ ಬಳಸಲ್ಪಡದೆ ಉಳಿದುಕೊಂಡಿವೆ. ಆದಾದರೂ ಇಷ್ಟು ಎಂದು ತನ್ನ ಕೃತಿಯನ್ನು ಸಮರ್ಥಿಸಿಕೊಂಡಿರುವನು. ಬಿಟ್ಟಿರುವ ಅಥವಾ ಸಂಕ್ಷೇಪಿಸಿದ ಭಾಗಗಳು ಒಂದೊಮ್ಮೆ ಗ್ರೀಕ್ ಇಲ್ಲವೆ ಲ್ಯಾಟಿನ್ ಭಾಷೆಗಳಲ್ಲಿ ಸ್ವಚ್ಛವಾಗಿದ್ದರೂ ಇಂಗ್ಲೀಷಿನ ಜಾಯಮಾನಕ್ಕೆ ಸರಿಯಾಗಿ ಪರಿಣಮಿಸುವವು ಎಂದಿರುವನು.

ಮುಖ್ಯವಾಗಿ ಪರಿವರ್ತಿಸಿದ ಭಾಷೆಯಲ್ಲಿ ಮೂಲ ಕೃತಿಯನ್ನು ವಿಕೃತಗೊಳಿಸದೆ ಅದರ ಸೌಂದರ್ಯವನ್ನು ಸಾಧ್ಯವಿದ್ದಷ್ಟು ಹೆಚ್ಚಿಸುವದು ಭಾಷಾಂತರಕಾರನ ಆದ್ಯ ಉದ್ದಿಷ್ಟ ಎಂದಿರುವನು, Dryden (Poems, p. 383)

ಪೋಪನ ಧಾರ್ಷ್ಟ್ಯ ಡ್ರಾಯ್ಡನ್ನನಿಗಿಂತ ಹೆಚ್ಚಿನದು. ಮೊದಲನೆಯದಾಗಿ ಅವನಿಗೆ ಗ್ರೀಕ ಅವಗತವಿದ್ದಿಲ್ಲ. ಆದರೂ ಒಂದು ಸಹಸ್ರ ಪೌಂಡು ಮೊತ್ತವನ್ನು ಕೂಡಿಸಿಕೊಟ್ಟಲ್ಲಿ ಕಾರ್ಯಕ್ಕೆ ತೊಡಗುವದಾಗಿ ಸಾರಿದನು. ಭಾಷಾಂತರಿತ ಕೃತಿ ಪ್ರಕಟವಾಗುವ ಮೊದಲು ಮತ್ತು ನಂತರ ಅವನು ಬಯಸಿದ್ದಕ್ಕಿಂತ ಹೆಚ್ಚು ಅಂದರೆ ಐದು ಪಟ್ಟು ವರಮಾನ ಬಂದಿತಂತೆ. ತನ್ನ ಕಾರ್ಯಕ್ಕಾಗಿ ಪೋಪ್ ಆ ವರೆಗಣ ಹೋಮರನ ಕೃತಿಗಳ ಇಂಗ್ಲಿಷ್ ಭಾಷಾಂತರಗಳನ್ನು ಅವಲೋಕಿಸಿ ಪದ್ಯದ ಪ್ರತಿಯೊಂದು ನುಡಿಯ ಭಾವವನ್ನು ಗ್ರಹಿಸಿ ತನ್ನ ಪದ್ಯಗಳನ್ನು ರಚಿಸುತ್ತಿದ್ದನು. ಅಗತ್ಯವೆನಿಸಿದಾಗ ಗ್ರೀಕ್ ಬಲ್ಲವರ ನೆರವು ಪಡೆಯುತ್ತಿದ್ದನು. ಆದರೂ ಕೈಗೆತ್ತಿಕೊಂಡ ಕಾರ್ಯದಲ್ಲಿ ಕಲ್ಪನೆ ಮೀರಿ ಯಶಸ್ವಿಯಾದನು. ಸಮಕಾಲೀನ ಪ್ರಖ್ಯಾತ ವಿಮರ್ಶಕ ವಿದ್ವಾಂಸ ಡಾ. ಜೋನ್ಸನ್ ಪೋಪನ ಗೈಮೆಯನ್ನು "the noblest version of poetry the world has ever seen" ಎಂದು ಹೊಗಳಿದರೆ, ಅಷ್ಟೇ ಪ್ರಖ್ಯಾತನಿದ್ದ ಮತ್ತು ದೇಶಿ (ಇಂಗ್ಲಿಷ್) ಹಾಗೂ ಮಾರ್ಗೀ(ಗ್ರೀಕ್, ಲಾಟಿನ್) ಭಾಷೆಗಳಲ್ಲಿ ನಿಷ್ಣಾತನಿದ್ದ ರಿಚರ್ಡ್ ಬೆಂಟ್ಲೆ "a pretty poem, Mr. Pope, but you must not call it Homer" ಎಂದು ಮೂದಲಿಸಿದನಂತೆ (Pope, p. 64) ಆದರೂ ತುಸು ಹೆಚ್ಚು ಕಡಿಮೆ ಒಂದು ಶತಮಾನದವರೆಗೆ ಪೋಪನದೇ ಮುಂದಿನವರಿಗೆ ಮಾದರಿಯ ಕೃತಿಯಾಗಿ ಮೆರೆಯಿತಂತೆ. ಪೋಪನಿಗಿದ್ದ ಲೋಕಾಭಿರುಚಿಯ ದಟ್ಟ ಪರಿಚಯ, ತನ್ನ ಭಾಷೆಯ ಮೇಲಣ ಅಸದೃಶ ಪ್ರಭುತ್ವ, ಅಲಂಕಾರಾದಿ ಕಾವ್ಯ ಸೌಂದರ್ಯ ಸಾಧನಗಳ ಪರಿಣಾಮಕಾರಿ ಪ್ರಯೋಗ ಇತ್ಯಾದಿಗಳು ಅವನ ಯಶಸ್ಸಿನ ಮೂಲಗಳೆಂದು ಹೇಳಲಾಗುತ್ತದೆ.

ಹೋಮರನಂಥ ಪ್ರಾಚೀನ ಕವಿಕೃತಿಗಳ ಯಶಸ್ವೀ ಭಾಷಾಂತರವು ಭಾಷಾಂತರಕಾರನ ಕಾಲದಲ್ಲಿ ಸತ್ಕಾವ್ಯ ವಿಷಯದಲ್ಲಿ ಪ್ರಚಲಿತವಿದ್ದ ಮಾನದಂಡ ಮತ್ತು ಲೋಕಾಭಿರುಚಿಗಳೊಂದಿಗೆ ನಿಗದಿತವಿದ್ದು ಅದೇ ಕೊನೆಯದೆಂದು ಯಾರೊಬ್ಬರ ಭಾಷಾಂತರವನ್ನು ಬೆರಳಿಟ್ಟು ತೋರಿಸುವಂತಿಲ್ಲ. ಸ್ಥೂಲದಲ್ಲಿ ಎಲ್ಲರೂ ತಮ್ಮ ಪರಿವರ್ತನೆಗಳಿಗೆ ಭಾಷಾಂತರವೆಂದಿದ್ದರೂ ಭಾಷಾಂತರದ ಕಟ್ಟುನಿಟ್ಟುಗಳ ಮಾನದಿಂದ ಬಹುಸಂಖ್ಯೆಯ ಕೃತಿಗಳು ಆ ಚೌಕಟ್ಟಿನಲ್ಲಿ ಬರುವಂತಿಲ್ಲ. ಹಾಗೆಂದು ಉಕ್ತ ರೀತಿಯಲ್ಲಿ ಭಾಷಾಂತರಿಸಲ್ಪಟ್ಟ ಕೃತಿಗಳು ತಮ್ಮ ಪರಿಮಿತಿ ಚೌಕಟ್ಟಿನಲ್ಲಿ ಅದೆಷ್ಟೋ ಸರಸವಾಗಿ ಅದೆಷ್ಟೋ ನಿರ್ದುಷ್ಟವಿದ್ದರೂ ಎರಡೂ ಭಾಷೆಗಳನ್ನು ಬಲ್ಲ ಸುಸಂಸ್ಕೃತ ಅಲ್ಪಸಂಖ್ಯಾಕ ವಿದ್ವಾಂಸರನ್ನು ಮಾತ್ರ ತಣಿಸಬಲ್ಲವು. ಅವೆಂದಿಗೂ ಲೋಕಮಾನಸವನ್ನು ತಮ್ಮತ್ತ ಸೆಳೆದುಕೊಳ್ಳಲಾರವು (ಅದೇ, ಪು. ೬೬)

ಕನ್ನಡದಲ್ಲಿ

ಸುವಿಖ್ಯಾತ ಸಂಸ್ಕೃತ ಲಲಿತ ಕೃತಿಗಳ ಲಭ್ಯವಿರುವ ಭಾಷಾಂತರಗಳಲ್ಲಿ ಕನ್ನಡದ ಮಟ್ಟಿಗೆ ಕ್ರಿ.ಶ. ೧೦೪೨ರಲ್ಲಿ ಆಗಿ ಹೋದ ಇಮ್ಮಡಿ ನಾಗವರ್ಮನ, 'ಕರ್ನಾಟಕ ಕಾದಂಬರಿ'ಯೇ ಪ್ರಪ್ರಥಮ ಕೃತಿಯೆಂದು ತೋರುತ್ತದೆ. ಮೂಲಕೃತಿ ಬಾಣನದು. ಗದ್ಯದಲ್ಲಿದೆ. ನಾಗವರ್ಮ ಅದನ್ನು ಚಂಪೂ ರೂಪದಲ್ಲಿ ಪರಿವರ್ತಿಸಿರುವನು. ಅದಕ್ಕಾಗಿ ಮೂಲದಲ್ಲಿಯ ಅನವಶ್ಯಕವೆನಿಸಿದ ವರ್ಣನ ಭಾಗಗಳನ್ನು ಬಿಟ್ಟಿರುವನು. ಕೆಲವನ್ನು ಸಂಕ್ಷೇಪಿಸಿರುವನು. ಕೆಲವನ್ನು ಯಥಾಸ್ಥಿತ ಅನುವಾದಿಸಿರುವನು. ಕೆಲವೆಡೆ ಅನ್ಯ ಪದ ವಾಕ್ಯಗಳನ್ನು ಪ್ರಯೋಗಿಸಿರುವನು. ಅಲ್ಲಲ್ಲಿ ತನ್ನವೇ ಆದ ಪದ್ಯ / ಮಾತುಗಳನ್ನು ಸೇರಿಸಿರುವನು. ಆದರೂ 'ಕಥಾನಕ, ಪಾತ್ರಗಳ ಜೀವಾಳ, ವರ್ಣನಾ ಸ್ವಾರಸ್ಯಾದಿಗಳಿಗೆ ಕುಂದು ಬರದಂತೆ. ಮೂಲವನ್ನು ಬಿಡದೆ ಸಲೀಲವಾಗಿ ಬರೆದಿದ್ದಾನೆ; ತನ್ಮೂಲಕ ಅನುಕೃತಿಯೂ ಸ್ವತಂತ್ರ ಕೃತಿಯಾಗಿದೆ' ಎಂಬ ವಿಮರ್ಶಕರ ಮಾತಿನಲ್ಲಿ ಗೌರವಾನ್ವಿತ ಸ್ಥಾನವನ್ನು ಗಳಿಸಿರುವನು. ಸ್ವಯಂ ನಾಗವರ್ಮನೇ ' ಮುನ್ನಂ ಬಾಣ ವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟ ಭಾಷಾ ಚತುರತ್ವ ಪೂರ್ದು" ಅದರ ಕೀರ್ತಿ ಆಚಂದ್ರಾರ್ಕ ಸರ್ವತ್ರ ಪ್ರಸರಿಸಿತೆಂಬ ಮಾತಿನಲ್ಲಿ ತನ್ನದು ಅದರ ಉಚಿತ ಭಾಷಾಂತರ ಎಂಬುದಕ್ಕಿಂತ ಹೆಚ್ಚು ಹೇಳಿಕೊಂಡಿಲ್ಲ (೧೦-೯೫). ಆತನ 'ಕರ್ಣಾಟ ಭಾಷಾಚತುರತ್ವಂ ಪೂರ್ದು' ಎಂಬ ಮಾತು ಅರ್ಥಗರ್ಭಿತವಿದ್ದು ಅದರಲ್ಲಿ ಉಪರೋಕ್ತ ಪಾಶ್ಚಿಮಾತ್ಯ ಕವಿಗಳ (ಚಾಪ್ಮನ್, ಡ್ರಾಯ್ಡನ್, ಪೋಪ) ಅನುಕೃತಿಗಳ ವಿಷಯದಲ್ಲಿ ವ್ಯಕ್ತವಾದ ಅಭಿಪ್ರಾಯಗಳ ತಿರುಳು ಒಳಗೊಂಡಿದೆಯೆಂದು ಬಗೆದರೆ ತಪ್ಪಾಗದು.

ಅನಂತರ (ಸು. ೧೬೮೦) ಬಂದದ್ದು ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ'. ಅದರ ವಿಷಯ ಈಗಾಗಲೇ ಬಂದು ಹೋಗಿದ್ದರಿಂದ ಇಲ್ಲಿ ಹೆಚ್ಚು ಹೇಳಬೇಕಿಲ್ಲ. ಆದರೂ ಅದೊಂದು ರಂಗಭೂಮಿಗಾಗಿ ಜನ್ಮ ತಾಳಿದ ಹಳಗನ್ನಡ ಕಂದ ವೃತ್ತ ಭೂಯಿಷ್ಠ ಕೃತಿ. ಶ್ರೀರಂಗನಾಥ ಸ್ವಾಮಿಯ ವಸಂತೋತ್ಸವ ಸಂದರ್ಭದಲ್ಲಿ 'ಸಕ್ಕದದೊಳಂ ಕನ್ನಡದೊಳಂ ಬೇಜೆ ವೇಜೆ ಕಿವಿಗಿನಿದಂ ಸೂಸುವ ಪಲವಗೆಯ ಕಾವ್ಯ ನಾಟಕಾಲಂಕಾರಂ ಮೊದಲಾದ ವಸ್ತುಕ ವರ್ಣಕ ಪ್ರಬಂಧಗಳಂ ಗಡಿಯಿಲ್ಲದೆ ಸಿರವಿಸಿರ್ಪ 'ಆಸ್ಥಾನಿಕ ವಿದ್ವತ್ ಸಮೂಹದೆದುರು ಪ್ರದರ್ಶಿಸಲ್ಪಟ್ಟಂತಿದೆ. ಭಾಷೆ ಕೃತಕವೆನಿಸಿದರೂ ಲಲಿತ ಶೃಂಗಾರಿಕ ನರ್ಮವಿನೋದಿಂದ ತತ್ಕಾಲೀನ ಅಭಿರುಚಿಗನುಸರಿಸಿ ಅರಮನೆ ರಂಗಭೂಮಿಗೆ ಕಳೆತಂದಿರಬೇಕೆನಿಸುತ್ತದೆ.

ಬಳಿಕ ಬೆಳಕಿಗೆ ಬಂದದ್ದು (೧೮೭೦) ಚುರಮುರಿ ಶೇಷಗಿರಿರಾಯರ ಮಹಾಕವಿ ಕಾಳಿದಾಸನ ಲಕ್ಷಣಬದ್ಧ ನಾಟಕ ಅಭಿಜ್ಞಾನ ಶಾಕುಂತಲದ ಅನುವಾದ -ಕನ್ನಡ ಮರಾಠಿ ಎರಡೂ ಭಾಷೆಗಳಿಗೆ ಮಾತೃಸ್ಥಾನದಲ್ಲಿರುವ ಪ್ರಪ್ರಥಮ ಹೊಸ ಬಗೆಯ ಸಾಗ್ರಸಂಗೀತ ಮಾರ್ಗೀಕೃತಿ. ಪ್ರಾಸ್ತಾವಿಕ ಪದ್ಯಗಳಲ್ಲಿ ತಮ್ಮದು 'ಭಾಷಾಂತರ' ಎಂದಿದ್ದರೂ ಅದು ಕಥಿಲಾರ್ಥದಲ್ಲಿ. ಬಹುಶಃ ಕಾಳಿದಾಸನ 'ಪ್ರಯೋಗ ಪ್ರಧಾನಂ ಹಿ ನಾಟ್ಯಶಾಸ್ತ್ರಂ' ಉಕ್ತಿಯನ್ನು ನೆನೆದೊ ಏನೊ ತಾವು ಅನುವಾದಿಸುತ್ತಿರುವುದು ನಾಟಕ; ನಾಟಕದ ಪರಮೋದ್ದೇಶ ಪ್ರೇಕ್ಷಕರ ಸರ್ವತೋಪರಿ ಮೆಚ್ಚಿಗೆ;

ತಮ್ಮ ಅನುವಾದ ಕನ್ನಡದಲ್ಲಿ; ಪ್ರೇಕ್ಷಕರು ಕನ್ನಡಿಗರು; ಅವರ ಸಂತೃಪ್ತಿಯಲ್ಲಿಯೇ ತಮ್ಮ ಕೃತಕೃತ್ಯತೆ ಎಂದು ಬಗೆದು ತಮಗೆ ಉಚಿತವೆನಿಸಿದ ಬದಲಾವಣೆ, ನ್ಯೂನಾತಿರೇಕ ಭಾಷಾ ವ್ಯತ್ಯಾಸ, ಇತ್ಯಾದಿಗಳೊಂದಿಗೆ ಮುಂದರಿದಂತಿದೆ. ಉದಾಹರಣೆಗಾಗಿ ಎರಡನೇ ಅಂಕದ ಪ್ರಾರಂಭದಲ್ಲಿ ವಿದೂಷಕನು ತನ್ನ ಗೋಳನ್ನು ತೋಡಿಕೊಳ್ಳುತ್ತಿರುವಾಗ ದುಷ್ಯಂತನು ಅರಣ್ಯ ಕುಸುಮ ಮಾಲೆಗಳನ್ನು ಧರಿಸಿದ ಯವನ ಪರಿಚಾರಿಕೆಯರೊಂದಿಗೆ ಪ್ರವೇಶಿಸುತ್ತಾನೆ. ಬಹುಸಂಖ್ಯೆ ಅನುವಾದಗಳಲ್ಲಿ ಮೂಲದಲ್ಲಿರುವ 'ಯವನೀಭಿಃ' ಓದಲು ಯವನಸ್ತ್ರೀಯರು, ಯವನ ಹೆಂಗಳೆಯರು ಎಂದಿದೆ. ಚುರಮರಿ ಧಾರವಾಡದವರು. ಧಾರವಾಡದ ಪಶ್ಚಿಮ ಸೆರಗಿನಲ್ಲಿ ಬೇಡರ ವಸತಿ ಹೆಚ್ಚು. ಬೇಟೆ (ಆ ಸಮಯದಲ್ಲಿ) ಅವರ ಮುಖ್ಯ ಜೀವನೋಪಾಯವಿದ್ದಿತು. ಚುರಮರಿ ತಮ್ಮ ಅನುವಾದದಲ್ಲಿ 'ಯವನೀಭಿಃ' ಬದಲು 'ಬ್ಯಾಡತಿಯರು, ಬ್ಯಾಡ್ರ ಹೆಂಗಸರು' ಶಬ್ದಗಳನ್ನು ಬಳಸಿರುವರು. ಚುರಮರಿ ವಿದೂಷಕನನ್ನು ಕನ್ನಡ ಯಕ್ಷಗಾನ ಮತ್ತು ಸದೃಶ ಆಟಗಳಿಗೆ ವಿಶಿಷ್ಟವಿರುವ ತತ್ಸಮ ಪಾತ್ರ 'ಹನುಮನಾಯಕ' ಎಂದು ಹೆಸರಿಸಿ ಅವನಿಗಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಾರದಲ್ಲಿರುವ ಗ್ರಾಮ್ಯ ಭಾಷೆಯನ್ನು ನಿಯೋಜಿಸಿದ್ದರಿಂದ 'ಬ್ಯಾಡತಿ, ಬ್ಯಾಡ್ರ ಹೆಂಗಸರು' ಎಂದಿದ್ದಾರೆ. ವಿದೂಷಕನನ್ನು ಹನುಮ ನಾಯಕನನ್ನಾಗಿಸಿ ಆ ಪಾತ್ರಕ್ಕೆ ಕನ್ನಡದ ಮೆರಗು ಕೊಟ್ಟಿದ್ದಾದರೂ ಪ್ರೇಕ್ಷಕರ ಸಂತೋಷಕ್ಕಾಗಿಯೇ. (ಈ ವಿಷಯ ಮುಂದೆ ಬರಲಿದೆ)

ರಂಗಭೂಮಿಗಾಗಿಯೇ ಜೀವನವನ್ನು ಸವೆಸಿದ, ಶ್ರೀರಂಗರು ಚುರಮರಿಯವರ ಗೈಮೆಯನ್ನು 'ಸರಳವಾದ ಗದ್ಯ ಮತ್ತು ಹಾಡುಗಳಿಂದ ಕೂಡಿದ ಅದ್ಭುತ ಭಾಷಾಂತರ' ಎಂದು ಪ್ರಶಂಸಿಸಿದ್ದರೆ (ಭಾ. ರಂ. ಭೂ. ಪು. ೧೪೪) ತತ್ಪೂರ್ವದಲ್ಲಿ ಚುರಮರಿ ಅನುವಾದಕ್ಕೆ ಮುನ್ನುಡಿ ರೂಪದಲ್ಲಿ ಪ್ರಕಟವಾದ ಮುದವೀಡರ ವಿಮರ್ಶೆ ಅವರ ಈ ಮಾತಿನ ವಿಸ್ತರಣ ಎನ್ನುವಂತಿದೆ. ತಮ್ಮ ವಿಮರ್ಶೆಯಲ್ಲಿ ಮುದವೀಡು -

"ಮೂಲ ಶಾಕುಂತಲದಲ್ಲಿರುವ ಅಗಾಧವಾದ ಕಲ್ಪನಾ ಚಮತ್ಕೃತಿ, ಅಸದೃಶವಾದ ವರ್ಣನಾ ಚಾತುರ್ಯ, ಅನನ್ಯ ಸಾಧಾರಣವಾದ ಅಲಂಕಾರ ನಿಯೋಜನೆ ಮೊದಲಾದ ಕಾಳಿದಾಸನ

---

೧. ಪ್ರೇಕ್ಷಕರ ಸಂತೃಪ್ತಿಯೇ ನಾಟಕಕಾರನ (ಸ್ವತಂತ್ರ, ಅನುಕೃತಿ) ಆದ್ಯ ಉದ್ದಿಷ್ಟವೆಂಬುದಕ್ಕೆ, ಆಧುನಿಕವಿದ್ದರೂ ಈ ಕೆಳಗಣ ಪಾಶ್ಚಿಮಾತ್ಯ ನಾಟ್ಯ ಕಲಾಕೋವಿದರ ಅಭಿಪ್ರಾಯಗಳು ಸಂದರ್ಭೋಚಿತವಿದ್ದು ಗಮನಾರ್ಹವಾಗಿವೆ -

1. One of the first obligations of a person essaying to write stage plays is manifestly to study the conditions in which he is to make his appeal and the system of distribution through which that public is to be reached. European theories of the Drama, p. 526 (3rd Edn.)

2. Words put on the stage assume a complexity, all their own because they are words written to be acted, seen and heard of L. Stayan, Element of Drama, Intro.

ಕಲಾವೈಶಿಷ್ಟ್ಯಗಳನ್ನು ಅಚ್ಚಗನ್ನಡದ ಮುಸಿಯಲ್ಲಿ ಎರಕ ಹೊಯ್ಯುವಾಗ ಸ್ವ. ಶೇಷಗಿರಿರಾಯರು ತಮಗೆ ನಿಸರ್ಗಸಿದ್ಧವಾದ ಕವಿತ್ವ ಪ್ರತಿಭೆಯ ಪ್ರಭಾವದಿಂದ ಚೆನ್ನಾಗಿ ವಿಕಾಸಗೊಳಿಸಿ ಮೂಲ ಕೃತಿಯ ಅಂದಚೆಂದಗಳಿಗೆ ಹೆಚ್ಚಿನ ಸಿಂಗರವನ್ನು ತಂದುಕೊಟ್ಟಿರುವರು" ಎಂದಿರುವರು.

ಗದ್ಯದ ವಿಷಯದಲ್ಲಿ "ನಾಟಕದ ಭಾಷೆಯು ಎಷ್ಟು ಮಟ್ಟಿಗೂ ಕ್ಲಿಷ್ಟವಾಗಿರದೆ ಸಾಮಾನ್ಯವಾಗಿ ದೇಶದಲ್ಲಿ ಬಳಕೆಯಲ್ಲಿದ್ದ ಭಾಷೆಯೇ ಅದರಲ್ಲಿ ಉಪಯೋಗಿಸಲ್ಪಡ ಬೇಕೆಂಬುದು ಸ್ಪಷ್ಟವಾಗಿದೆ. ಸ್ವ. ಶೇಷಗಿರಿರಾಯರು ಈ ತತ್ವವನ್ನು ಕಂಡು ಹಿಡಿದು ತಮ್ಮ ಕಾಲಕ್ಕೆ ಈ ಸೀಮೆಯಲ್ಲಿ (ಧಾರವಾಡ) ಪ್ರಚಾರದಲ್ಲಿದ್ದ ಸರಳವಾದ ಸುಲಭವಾದ ಆದರೂ ಪರಿಶುದ್ಧವಾದ ಭಾಷಾ ಶೈಲಿಯನ್ನೇ ಅನುಸರಿಸಿರುವದು ಕಂಡುಬರುತ್ತದೆ. ವಿದೂಷಕ ಹಾಗೂ ಮೀನುಗಾರ ಇವೆರಡೂ ಪಾತ್ರಗಳನ್ನು ಬಿಟ್ಟು ಎಲ್ಲ ಪಾತ್ರಗಳ ಮಾತುಗಳು ಸುಸಂಸ್ಕೃತ ಸಮಾಜದಲ್ಲಿ ವಾಡಿಕೆಯಾಗಿ ಬಳಕೆಯಲ್ಲಿರುವ ಭಾಷಾಸರಣಿಯಲ್ಲಿ ಬರೆಯಲ್ಪಟ್ಟಿವೆ. ವಿದೂಷಕ ಮತ್ತು ಮೀನುಗಾರ ಇವರ ಬಾಯಿಯಲ್ಲಿ ಮಾತ್ರ ಇತ್ತ ಕಡೆಯ ಗ್ರಾಮ್ಯ ಭಾಷೆಯು ನಿಯೋಜಿತವಾಗಿದೆ."

ಹಾಡು ಮತ್ತು ಪದ್ಯಗಳ ವಿಷಯದಲ್ಲಿ, "ಪದಗಳು ಕರ್ನಾಟಕ ದೇಶದಲ್ಲಿ ಪುರಾತನ ಕಾಲದಿಂದಲೂ ಜ್ಞಾನಭಕ್ತಿ ವೈರಾಗ್ಯಗಳ ಜೊತೆಯಲ್ಲಿಯೇ ನಯ ನೀತಿ ನಡಾವಳಿಗಳನ್ನು ಸಾಮಾನ್ಯವಾಗಿ ಜನಾಂಗಕ್ಕೆಲ್ಲ ಬೋಧಿಸುತ್ತ ಮನುಷ್ಯ ಪ್ರಪಂಚವನ್ನೇ ಪರಮಾರ್ಥಮಯವಾಗಿ ಮಾಡಿದ ಭಗವದ್ಭಕ್ತರ ದಿವ್ಯವಾಣಿಯ ಸಮುಚ್ಚಯವಾಗಿರುವ 'ದಾಸಕೂಟ ವಾಙ್ಮಯ'ದ ಲಲಿತ ಬಂಧ ಸರಣಿಯನ್ನು ಅನುಸರಿಸಿರುತ್ತವೆ. ಕಂದವೃತ್ತಾದಿ ಪದ್ಯಗಳು ಕೂಡ ಬಹುಮಟ್ಟಿಗೆ ಸುಲಭವೂ ಸರಳವೂ ಆದ ಶೈಲಿಯಲ್ಲಿಯೇ ಬರೆಯಲ್ಪಟ್ಟಿವೆ. ಆದರೂ ಹಲವು ಕಡೆಗೆ ಹಳಗನ್ನಡ ಪ್ರತ್ಯಯಗಳಿಂದ, ಅಲ್ಪ ಸ್ವಲ್ಪ ಹಳಗನ್ನಡ ಪ್ರಯೋಗಗಳಿಂದ ಕೊಂಚ ಮಟ್ಟಿಗೆ ಕಠಿಣವಾಗಿ ತೋರಬಹುದು. ಆದರೆ ಇಂಥ ಸಂದರ್ಭಗಳು ತೀರ ಕಡಿಮೆ."

ದೋಷಗಳ ವಿಚಾರದಲ್ಲಿ "ಸ್ವ. ಶೇಷಗಿರಿರಾಯರ ಪದ್ಯಗಳಲ್ಲಿ ಛಂದಶ್ಶಾಸ್ತ್ರದ ದೋಷಗಳಿರಬಹುದು. ಶಬ್ದಮಣಿದರ್ಪಣ ಶಬ್ದಾನುಶಾಸನ ಸೂತ್ರಗಳ ವರೆಗಲ್ಲಿಗೆ ಹಚ್ಚಿದಲ್ಲಿ ವ್ಯಾಕರಣ ದೋಷಗಳೂ ಹಲಕೆಲವು ಹೊರಡಬಹುದು. ಸಾಹಿತಿಗಳೆಂಬ ಶಾಸ್ತ್ರಾಭ್ಯಾಸ ನಿಪುಣರಿಗೆ ಇಂಥವು ಸರಿಬರಲಾರವೆಂಬುದು ಕಟ್ಟಿಟ್ಟ ಮಾತೇ ಸರಿ. ಆದರೆ ಸ್ವ. ಶೇಷಗಿರಿರಾಯರು ಇದನ್ನು ಬರೆದ ಕಾಲ, ಅವರು ಬೆಳೆದ ಪರಿಸ್ಥಿತಿ, ಅವರು ಸಂಪಾದಿಸಿದ ಶಿಕ್ಷಣ ಮೊದಲಾದ ಆನುಷಂಗಿಕ ಸಂಗತಿಗಳನ್ನೆಲ್ಲ ಮನಸ್ಸಿಗೆ ತಂದು ನೋಡಿದರೆ ಇಂಥ ದೋಷಗಳನ್ನು ಆರ್ಷ ಪ್ರಯೋಗ (archaic) ಎಂಬ ಕಾವ್ಯಲಕ್ಷಣದಲ್ಲಿ ಸೇರಿಸುವದು ಸೂಕ್ತವೆನಿಸುವದು" ಎಂದಿರುವರು.

ಮುಂದೆ ೧೧ ವರ್ಷಗಳ ನಂತರ ಅಂದರೆ ೧೮೮೧ರಲ್ಲಿ ಮೈಸೂರರಸು ಚಾಮರಾಜರ ಆದೇಶಾನುಸಾರ ಅವರ ಆಸ್ಥಾನಕವಿ ಬಸವಪ್ಪ ಶಾಸ್ತ್ರಿಗಳ ಕರ್ನಾಟಕ ಶಾಕುಂತಲ ನಾಟಕ'ವು ಪ್ರಕಟವಾಯಿತು. ರಂಗಕ್ಕೂ ಬಂದಿತು. ಹೊಸಗನ್ನಡ ಗದ್ಯ, ಹಳಗನ್ನಡ ಪ್ರಚುರ ಪದ್ಯಗಳಿಂದ

(ಕಂದವೃತ್ತ) ಕೂಡಿದ ಅವರ ಅನುವಾದವು ಭಾಷಾಂತರ ದೃಷ್ಟಿಯಿಂದ ಸಾಹಿತ್ಯ ಕ್ಷೇತ್ರದಲ್ಲೊಂದು ಮೌಲಿಕ ಕೃತಿಯೆಂದು ಗಣಿಸಲ್ಪಟ್ಟಿದ್ದು ತತ್ಕಾಲೀನ ಆಸ್ಥಾನ ಮತ್ತು ಅನ್ಯ ಪಂಡಿತ ಮಂಡಳಿಯ, ಸ್ವಯಂ ಅರಸರ ಮೆಚ್ಚಿಗೆಗೆ ಪಾತ್ರವಾಗಿ ಅವರಿಗೆ 'ಅಭಿನವ ಕಾಳಿದಾಸ' ಎಂಬ ಬಿರುದನ್ನು ಗಳಿಸಿಕೊಟ್ಟಿತು. ಸಾಹಿತ್ಯಿಕ ದೃಷ್ಟಿ ಪುಟಪುಟಗಳಲ್ಲಿ ವ್ಯಕ್ತವಾಗಿದ್ದರೂ ಅದರ ಜನ್ಮ ಪ್ರಾಮುಖ್ಯವಾಗಿ ರಂಗಕ್ಕೆಂಬುದನ್ನು ಮನಗಂಡು ಪ್ರದರ್ಶನಕ್ಕೆ ಅನುಕೂಲವಾಗಲೆಂದು ಒಂದು ಕಾಲಾಂಶದಷ್ಟು ಪದ್ಯಗಳನ್ನು ಬೇರೆ ಬೇರೆ ರಾಗದಾರಿ ಹಾಡುಗಳಲ್ಲಿ ಪರಿವರ್ತಿಸಿ, ಕೆಳಗೆ ಟಿಪ್ಪಣಿಗಳನ್ನು ಕೊಡಲಾಗಿದೆ.

ಚುರಮರಿ ಕೃತಿ ವಿಮರ್ಶನ ಸಂದರ್ಭದಲ್ಲಿ ಮುದವೀಡು ಆನುಷಂಗಿಕವಾಗಿ ಶಾಸ್ತ್ರಿಗಳ ಕೃತಿಯನ್ನು ಉಲ್ಲೇಖಿಸಿ ಅದೊಂದು "ಹೊಸಗನ್ನಡ ಗದ್ಯದಿಂದೊಡಗೂಡಿ ಪದ್ಯಗಳಲ್ಲಿ ಶಾಸ್ತ್ರಿಗಳವರ ಅಗಾಧ ಪಾಂಡಿತ್ಯಕ್ಕೆ ಅನುರೂಪವಾಗುವಂಥ 'ಪಳಗನ್ನಡ ನುಡಿದಾರಿಯ ನ್ನೊಳಗೊಂಡ ಪಂಡಿತ ಪ್ರಬುದ್ಧ ಪ್ರಿಯ'ವಾಗಿ ಮೂಲದ ಪ್ರತಿಬಿಂಬವೇ ಆಗಿರುವದೆನ್ನಲು ಅಡ್ಡಿ ಇಲ್ಲ. ಮೂಲವನ್ನು ಪ್ರತಿಕೃತಿಯಲ್ಲಿ ಇದ್ದಕ್ಕಿದ್ದಂತೆಯೇ ಆದರೂ ಸೊಗಸಾಗಿ ಸುಂದರವಾಗಿ ಸುಮನೋಹರವಾಗಿ ಒಡಮೂಡಿಸಿ ಕೊಡಬಲ್ಲ ಛಾಯಾಚಿತ್ರಕಾರನ (photographer) ಕಲಾಭಿಜ್ಞತೆಯೂ ನೈಪುಣ್ಯ ವಿಶೇಷವೂ ಕಂಡುಬರುತ್ತವೆ" ಎಂದಿರುವರು.

ಇಂದಿನವರಾದ ನಮಗೆ ಚುರಮರಿ ಬಸವಪ್ಪಶಾಸ್ತ್ರಿ ಈರ್ವರೂ ಅಭಿವಂದ್ಯರು. ಕಾಲಕ್ರಮದಲ್ಲಿ ಅಲ್ಪ ವ್ಯತ್ಯಾಸವಿದ್ದರೂ ಆದ್ಯರು, ಶಾಸ್ತ್ರಿಗಳ ಅನುವಾದದ ಮೇಲ್ಮೆಯನ್ನು ಮನ್ನಿಸಿ ಹಲವು ಲೇಖಗಳು ಪ್ರಕಟವಾಗಿವೆ. ಅದನ್ನು ಚುರಮರಿ ಅನುವಾದಕ್ಕೆ ಹೋಲಿಸಿ ಯಾವುದು ಹೆಚ್ಚು ಉತ್ತಮ ಎನ್ನುವ ಬಗ್ಗೆ ಅಭಿಪ್ರಾಯಗಳು ವ್ಯಕ್ತವಾಗಿವೆ. ಸಾಹಿತ್ಯ ವಿಮರ್ಶೆಯಲ್ಲಿ ಇದು ನಡೆಯತಕ್ಕದ್ದೇ. ಆದರೆ ಚುರಮರಿ ಕೃತಿಗಿರುವ ಮುದವೀಡರ ಮುನ್ನುಡಿಯನ್ನು ಅನುಲಕ್ಷಿಸಿ, "ಅದೆಲ್ಲಿ......ಇದೆಲ್ಲಿ?" ಮುದವೀಡರದು 'ಅರ್ಥವಿಲ್ಲದ ಪ್ರಾಂತಾಭಿಮಾನ' ಎಂಬ ಆರೋಪವು (ಕನ್ನಡ ನಾಟಕ, ತ.ಸು. ಶಾಮರಾಯ, ಪು. ೧೦೫) ಮಾತ್ರ ಗರ್ಹಣೀಯ. ಚುರಮರಿ ಅನುವಾದ ರಂಗಭೂಮಿಯೆಂಬುದು ಸ್ಪಷ್ಟವಿದ್ದರೂ ಶಾಸ್ತ್ರಿಗಳ ಕೃತಿ ಕೂಡ ರಂಗಕ್ಕಾಗಿ ಅರಸರ ಆದೇಶಾನುಸಾರ ಜನ್ಮ ತಾಳಿದ್ದೆಂಬುದು ಗೊತ್ತಿದ್ದರೂ ಶಾಸ್ತ್ರಿಗಳ ಭಾಷಾಂತರ ಕೌಶಲ್ಯವನ್ನಷ್ಟೇ ಎತ್ತಿಕೊಂಡು ಉದಾಹರಣೆಯೆಂದು ಶಾಕುಂತಲದ ಎರಡನೇ ಅಂಕಿನಲ್ಲಿ ದುಷ್ಯಂತನು ವಿದೂಷಕನಿಗೆ ಶಕುಂತಲೆಯ ಲಾವಣ್ಯಾತಿಶಯವನ್ನು ಬಣ್ಣಿಸುವ ಈ ಕೆಳಗಣ ಕಾಲಿದಾಸ.

ಚಿತ್ರೇ ನಿವೇಶ್ಯ ಪರಿಕಲ್ಪಿತ ಸತ್ವಯೋಗಾ
ರೂಪೋಚ್ಚಯೇನ ಮನಸಾ ವಿಧಿನಾಕೃತಾನು
ಸ್ತ್ರೀರತ್ನ ಸೃಷ್ಟಿರಪರಾ ಪ್ರತಿಭಾತಿ ಸಾ ಮೇ
ಧಾತುರ್ವಿಭುತ್ವಮನುಚಿಂತ್ಯ ವಪುಶ್ಚ ತಸ್ಯಾಃ||

ಶಾಸ್ತ್ರಿಗಳು 'ಪ್ರಾಣಂ ಬೊಯ್ದನೊ ಚಿತ್ರಿಸುತ್ತಮವಳಂ ಸೌಂದರ್ಯ ಸಾರಂಗಳಿಂ
ವಾಣೀವಲ್ಲಭರನೋಪ್ಪೋ ನಿರ್ಮಿಸಿದನೋ ಮೇಣ್ ಚಿತ್ತದಿಂ ಗೆಯ್ದನೋ| ಜಾಣಂ
ಬ್ರಹ್ಮನ ಮತ್ತು ಆಕೆಯೊಡಲಂ ನೋಡಲ್ಕದೇನೆಂದಪೆಂ
ಕೋಣೇ ಭಾಗದೆ ಜೇರೆ ತೋರ್ಕುಮೆನಗಾಸ್ತ್ರೀರತ್ನ ಸೃಷ್ಟಿಕ್ರಮಂ' ||

ಚುರಮರಿ ಬಣ್ಣಿಸಿಲ್ಹ್ಯಾಂಗಿನ್ನು ನುಡಿಯಲಿ ಲಾ-
ವಣ್ಯದ ಖಣಿಯನ್ನು ||ಪ||

ಕಣ್ಣೊಳು ಕಟ್ಟಿದಾ ಹೆಣ್ಣಿನ ರೂಪವು |
ಎನ್ನೊಳಂಗನ ಸನ್ನಿಧಿಯಂತಿರೆ ||ಅ.ಪ.||
ಮೊದಲು ಮನಸು ಗೊಟ್ಟು | ವಿಧಿಯು ಚಿತ್ರ|
ಮುದದಿಂದೆ ಬರೆದಿಟ್ಟು |
ಅದರ ಮೈಯೊಳು ಜೀವದ ಕಳೆಯನು ತುಂ |
ಬಿದ ಮ್ಯಾಲಿಳೆಯೊಳಗುದಭವಿಸಿದಳೇನೋ ||೧||

ಕೈನಡಗುವದೆಂದು | ವಿಧಾತನು |
ಧ್ಯಾನದೊಳಗೆ ತಂದು |
ಮೌನದಿಂದತಿಶಯ ಮೋಹದ ರೂಪವ|
ಧೇನಿಸಿ ಪಡೆದಿಹ ಮಾನಸ ಪುತ್ರಿಯೊ ||೨||

ಎಂದಿಗೆ ಬರಬೇಕೈ | ಬ್ರಹ್ಮನಿಗಿಂಥ |
ಸುಂದರ ಕೃತಿ ಸಾಕೈ |
ಇಂದಿರಾ ರೂಪವ ಚೆಂದದಿ ಕಲಿತವ -|
ಳಂದದೊಳಿಸಿಹ ನಿಂದೀವರಾಕ್ಷಿಯ ||೩||

ಈ ಪದ್ಯಗಳನ್ನು ಕೊಟ್ಟು 'ಕೈ ಹುಣ್ಣಿಗೆ ಕನ್ನಡಿ ಜೇಪ' ಎಂದು ಆಕ್ಷೇಪಣೆಯನ್ನು ಉಪಸಂಹರಿಸಿರುವರು. ಇದು ಹೇಗಿದ್ದರೂ ರಂಗಪ್ರದರ್ಶನ ದೃಷ್ಟಿಯಿಂದ ಬಸವಪ್ಪ ಶಾಸ್ತ್ರಿಗಳ ಕೃತಿ ಮತ್ತು ಅದರ ಜಾಡಿನಲ್ಲಿ ಅರಮನೆ ರಂಗಕ್ಕೆ ಬಂದ ಅವರ ಮತ್ತು ಅನ್ಯಪಂಡಿತ ಮಾನ್ಯ ಕೃತಿಗಳು ಸಾಮಾನ್ಯ ಜನತೆಗೆ ಅವೆಷ್ಟು ಸಪ್ಪೆಯಾಗಿದ್ದವೆಂಬುದು ಇತ್ತೀಚೆಗೆ ಬೆಳಕಿಗೆ ಬಂದ ಒಂದು ಮಾಹಿತಿಯಿಂದ ಗೊತ್ತಾಗುವಂತಿದೆ. ಸ್ವತಃ ಚಾಮರಾಜರ ಕೃಪಾಶ್ರಯದಲ್ಲಿ ಬೆಳೆದ ಮಂಡ್ಯದ ರಂಗಾಚಾರ್ಯರೆಂಬ ನಾಟ್ಯಕಲಾ ಕುಶಲರು ಅರಮನೆ ರಂಗದಿಂದ ಹೊರಬಂದು 'ರಾಜಧಾನಿ ನಾಟಕಮಂಡಳಿ' ಎಂಬ ಜನಪ್ರಿಯ ಮೇಳವನ್ನು ಕಟ್ಟಿ ಅರಮನೆ ಕಂಪೆನಿಯೊಂದಿಗೆ ಹುರುಡು ಕಟ್ಟಿ ಸೆಣಸಾಡಿದರು. ಅದೇ ಊರಲ್ಲಿ ಅದೇ ರಾತ್ರಿ ಇಕ್ಕೆಲಗಳಲ್ಲಿ ನಾಟಕಗಳು ನಡೆಯತೊಡಗಿದವು. ಆಗ ಮಹಾರಾಜರ ಕೋಪಕ್ಕೆ ಪಾತ್ರರಾಗಬಹುದೆಂಬ ಭೀತಿಯಿಂದ ಸಂಚಾರಿ

ಉದ್ಯೋಗಿಗಳು ನಿಸ್ಸಾರವಾದ ಅರಮನೆ ಪ್ರದರ್ಶನಗಳಿಗೆ ಹೋಗುತ್ತಿದ್ದರು. ಅರಮನೆ ನಾಟಕ ಶಾಲಾಧ್ಯಕ್ಷ ಅಂಟಿಲ್ ನರಸಿಂಹಯ್ಯಂಗಾರರು ನಾಟಕ ರಂಗವನ್ನು ಬಿಟ್ಟೊಡನೆಯೇ ಅವರೆಲ್ಲರೂ ರಂಗಾಚಾರ್ಯರ ನಾಟಕ ಮಂದಿರಕ್ಕೆ ಬಿದ್ದೋಡುತ್ತಿದ್ದರಂತೆ. ರಂಗಾಚಾರ್ಯ ಮಂಡಳಿ ಇತರ ಕೆಲವು ನಾಟಕಗಳೊಂದಿಗೆ ಶಾಕುಂತಲವನ್ನೂ (ಎಸ್.ಜಿ. ನರಸಿಂಹಾಚಾರ್ಯ ಕೃತ) ಪ್ರದರ್ಶಿಸುತ್ತಿದ್ದರಂತೆ.(ಬಣ್ಣ ಬೆಳಕು, ಎಚ್. ಕೆ. ರಂಗನಾಥ್, ಪು. ೬-೭, ಉದ್ಧೃತ) ಹೆಚ್ಚಿನ ಊಹಾಪೋಹ ಅನಗತ್ಯ.

ಮುದವೀಡರವೆಂದು ಕೊಟ್ಟ ಉಪರೋಕ್ತ ಅವತರಣಿಕೆಗಳು ಚುರಮುರಿ ಕೃತಿಗಿರುವ ಅವರ ಮುನ್ನುಡಿಯಲ್ಲಿಯವು. ಅಭಿವಂದ್ಯರಿರುವ ಈರ್ವರ (ಬಸವಪ್ಪಶಾಸ್ತ್ರಿ, ಚುರಮುರಿ) ವಿಷಯದಲ್ಲಿ ಅವುಗಳಲ್ಲಿ ಒಂದಾದರೂ ಆಕ್ಷೇಪಾರ್ಹ ಮಾತಿಲ್ಲ. ಬದಲಾಗಿ ಹೊಗಳಿಕೆಯೇ ಇದೆ. ಮುನ್ನುಡಿ ಚುರಮುರಿ ಅನುವಾದಕ್ಕೇನೆ ಇರುವದರಿಂದ ಅವರ ವಿಷಯ ಹೆಚ್ಚು ಬಂದಿರುವದು ಕ್ರಮ ಪ್ರಾಪ್ತ. ಗುಣಗಳೊಂದಿಗೆ ಚುರಮುರಿಯವರ ದೋಷಗಳನ್ನು ಎತ್ತಿ ತೋರಿಸಲು ಮುದವೀಡು ಮರೆತಿಲ್ಲ.

ಚುರಮುರಿ ಬಸವಪ್ಪ ಶಾಸ್ತ್ರಿಗಳ ನಂತರ ಕನ್ನಡದಲ್ಲಿ ಶಾಕುಂತಲದ ಹಲವು ಅನುವಾದಗಳು ಪ್ರಕಟವಾಗಿವೆ. ಅವಲ್ಲದೆ ಡಿ.ವಿ.ಜಿ. ಅವರ 'ಗೀತ ಶಾಕುಂತಲ' ಎಂಬುದೊಂದು ವೈಶಿಷ್ಟ್ಯಪೂರ್ಣ ಕೃತಿ ಇದೆ. ಹೆಸರಿನ ಮೇಲಿಂದ ಅದೊಂದು 'ಆಪೇರಾ' ಬಗೆಯ ಗೀತಾನುವಾದ ವಿರಬೇಕೆಂದೆನಿಸಿದರೂ ಹಾಗಿಲ್ಲ. ಮೂಲದ ವ್ಯಾಸಂಗದಲ್ಲಿ 'ಸ್ವಾರಸ್ಯ ಭೂಮಿ' ಎನಿಸಿದ ಕೆಲವು ಪದ್ಯಗಳಲ್ಲಿನ ಭಾವವಿಕಾಸವನ್ನು ಆಗಾಗ ಮೆಲಕು ಹಾಕಿ ಸವಿದುಕೊಳ್ಳಲೆಂದು ಅವನ್ನು ಹಾಡುಗಳ ರೂಪದಲ್ಲಿ ಪರಿವರ್ತಿಸಿ, ಸಂದರ್ಭಸೂಚಿ, ಮೂಲ, ಬಸವಪ್ಪ ಶಾಸ್ತ್ರಿಗಳ ಅನುವಾದ ಮತ್ತು ಹಾಡಿನ ರೂಪದಲ್ಲಿರುವ ತಮ್ಮ ಪರಿವರ್ತನೆ ಮೂರನ್ನೂ ಕೊಟ್ಟಿರುವರು. ತಮ್ಮ ಭೂಮಿಕೆಯನ್ನು ವಿಸ್ತರಿಸುತ್ತ ಡಿ.ವಿ.ಜಿ., ಪರಿವರ್ತಿತ ಗೀತಗಳು ಕಾಳಿದಾಸನ ಮನೋಗತವನ್ನು ಯಥಾವತ್ತಾಗಿ ಪ್ರತಿಧ್ವನಿಸುತ್ತವೆಂದು ಹೇಳಿಕೊಳ್ಳುವ ಆಸೆ ಇದ್ದರೂ ಧೈರ್ಯವಿಲ್ಲ. ಕಾಳಿದಾಸನು ಒಂದೆರಡು ಮಾತುಗಳಿಂದ ಧ್ವನಿಸಿತ ಮಾಡಿರುವದಕ್ಕೆ ತಾವು ಮೂರು ನಾಲ್ಕು ಮಾತುಗಳನ್ನು ಬಳಸಿದ್ದುಂಟು. ಅವನ ಕೃತಿಯಲ್ಲಿನ ವ್ಯಂಗ್ಯ ತಮ್ಮದರಲ್ಲಿ ವಾಚ್ಯವಾಗಿರಬಹುದು. ಅವನ ಅಂತರ್ಭಾವಕ್ಕೆ ಅಭಿವ್ಯಕ್ತಿ ಕೊಡುವಲ್ಲಿ ನ್ಯೂನಾತಿರೇಕಗಳು ಕಂಡು ಬರಬಹುದು. ಆದರೂ ಕವಿಯ ಮೂಲ ವಾಕ್ಯದಲ್ಲಿ ಅಷ್ಟೊಂದು ಸ್ಪಷ್ಟವಿಲ್ಲೆಂದು ತೋರುವ ಧ್ವನಿ ಭಾವವನ್ನು ಅಂತರ್ಭಾವವನ್ನು ಸ್ಪಷ್ಟಪಡಿಸುವುದು ವ್ಯಾಖ್ಯಾನಕಾರನಿಗೆ ಸಂಪ್ರದಾಯದಿಂದ ಬಂದಿರುವ ಅಧಿಕಾರ. ತಮ್ಮದು ಅಂಥ ಗೀತ ವ್ಯಾಖ್ಯಾನ, ಅದನ್ನು ಕಾಳಿದಾಸನ ಹೃದಯದ ಪ್ರತಿಬಿಂಬವೆಂದು ಹೇಳುವದಕ್ಕಿಂತ, ಅನುವಾದಕನ ಹೃದಯದರ್ಪಣದಲ್ಲಿ ಪ್ರತಿಫಲಿಸಿದ ಕಾಳಿದಾಸೀಯ ಪ್ರತಿಬಿಂಬದ ಪ್ರತಿಬಿಂಬ ವೆಂದು ಹೇಳುವದು ಸರಿಯಾದೀತು. ಕಾಳಿದಾಸನ ದೃಷ್ಟಿಯಲ್ಲಿದ್ದ ವಾಚಕ ಪ್ರೇಕ್ಷಕ ಸಮಾಜ ಆತನದು. ತಮ್ಮ ಸಮಾಜ ತಮ್ಮದು. ಎರಡರ ಮನಃ ಪರಿಪಾಕವೂ ಬುದ್ಧಿ ಸಂಸ್ಕಾರವೂ

ಒಂದೇ ಮಟ್ಟದವೆಂದು ಹೇಳಲಳವಲ್ಲ. ಕಾಳಿದಾಸನ ಮನೋಭಾವ ಇಂದಿನ ಜನಕ್ಕೇ ಅಷ್ಟಿಷ್ಟಾದರೂ ತೋರಲೆಂಬುದು ತಮ್ಮ ಆಶಯ' ಎಂದಿರುವರು ಡಿ.ವಿ.ಜಿ.

ಇದೊಂದು ಉದಾಹರಣೆಯ ಜೊತೆಗೆ ಚುರಮರಿ ಅನುವಾದವನ್ನೂ ಕೊಟ್ಟಿದೆ. ಸಂದರ್ಭ: ದುಷ್ಯಂತನಿಗೂ ಶಕುಂತಲೆಗೂ ಪರಸ್ಪರ ಸಂದರ್ಶನವಾಗಿದೆ. ಆದರೆ ಸ್ನೇಹ ಇನ್ನೂ ವಿಕಸಿತವಾಗಿಲ್ಲ. ತನ್ನ ವಿಷಯದಲ್ಲಿ ಆಕೆಯ ಪ್ರತಿಚರ್ಯೆಯನ್ನು ನೋಡಿ ದುಷ್ಯಂತ ತನ್ನ ಮನಸ್ಸಿನಲ್ಲಾದ ಪರಿಣಾಮವನ್ನು ಹೇಳಿಕೊಳ್ಳುತ್ತಾನೆ.

ಮೂಲ - ವಾಚಂನ ಮಿಶ್ರಯತಿ ಯಶ್ಯಪಿ ಮದ್ವಚೋಭಿಃ
ಕರ್ಣದದಾತ್ಯಭಿಮುಖಂ ಮಯಿಭಾಷಮಾಣೇ|
ಕಾಮಂನ ತಿಷ್ಠತಿ - ಮದಾನನ ಸಂಮುಖೀನಾ
ಭೂಯಿಷ್ಠಮನ್ಯ ವಿಷಯಾನತುದೃಷ್ಟಿರಸ್ಯಾಃ ||

ಬಸವಪ್ಪ ಶಾಸ್ತ್ರಿ -
ನುಡಿಯುತ್ತಿರೆ ನಾಂ ನುಡಿಯಳ್
ಕೂಡುವಳ್ ಕಿವಿಯಂ ಮದುಕ್ತಿಗವಲೋಕಿಸೆ ನಾ|
ನೊಡನೆ ತಲೆವಾಗಿ ಪಳ್ ಕ-
ಣ್ಣಡೆಯಂ ಪಿರಿದಿತರ ವಿಷಯದೊಳಗಿಡಳಾದಳ್ ||

ಡಿ.ವಿ.ಜಿ. - ರಾಗ : ಸಾರಂಗ
ಮನದೊಳ್ ಆಂದೋಳನ - ಮಾನಿನೀ ಮಣಿಗೇನೋ|
ನಾನೆಂತು ಕಾಣುವೆನೋ - ಆ ಮರುಮವ ||ಪ||

ಸಾನುರಾಗಿಯೊ ಅವಳೇನುದಾಸೀನೆಯೋ|
ಅನುಮಾನಿಪುದು ಸಾಹಸ - ಅದೇಂ ಕ್ಲೇಶ ||ಅ.ಪ.||

ಸಲ್ಲಾಪವಲಿ ಸೇರಳ್ - ಆದರು ಮಳ್ತಿಯಿಂ |
ಸಲ್ಲಿಪಳ್ ಕಿವಿಯನ್ - ಎನ್ನಯ ಸೊಲ್ಲ ಕೇಳೆ|
ಕುಳ್ಳಿರೆನ್ನೆದುರೋಳ್ ತನ್ನ ಮುಖವೆತ್ತಿ |
ಚೆಲಲು ನೋಟವನಿತ್ತತ್ತ ಸುಳಿಸಿ ||
ಇವಳಾ ಭಾವವದೇನೋ - ತವಕವಡಿಪುದೆನ್ನ |
ಭವಿತ ವ್ಯವೆಂತಿಹುದೋ - ಪೇಳುವರಾರೋ||

ಚುರಮರಿ - ದಾಟಿ 'ದಿಲ್ಕೀ ದಿಲ್ ಮಾರ್ಗೆ ಉಧಾಜ' ಎಂಬ ಹಿಂದುಸ್ಥಾನಿ ಪದದಂತೆ -
ಮನಸಾ ನಟ್ಟಿಹಳು | ಎನ್ನೊಳು ||ಪ||
ಗಗನದೊಳ್ ದಾಟಿ -| ನೋಳು ನಾಸಿರಲು|

ತಿಳಿಸದೆ ಎನ್ನನು ಬಲು ನೋಡುತಿಹಳು ||೧||
ಚೆಲುವ ಮುಖವ ನಾ ನೋ | ಡಲು ನಾಚುತೆ ಮೋರೆ |
ಕೆಳಗೆ ತಗ್ಗಿಸುತಲೇ | ನೆಲವ ಗೀಚುವಳು ||೨||
ಬಾಲೆ ಎನ್ನಯ ಮಾತಿನೊಳು ತಾ ಬಾರಳು |
ಆಲಿಸಿ ಮೆಲ್ಲನೆ | ಎಲ್ಲ ಕೇಳುವಳು ||೩||
ಅನ್ಯ ಮಾತಿನ ನೆವ | ದಿಂ ತನ್ನೊಳು ತಾನೇ|
ರನ್ನೆ ಗಲ್ಲದಿ ನಗು | ತೆನ್ನ ನೋಡಿದಳು ||೪||

- ಶಾಸ್ತ್ರಿಗಳ ಅನುವಾದ ಮೂಲಕ್ಕೆ ಹೊಂದಿಕೊಂಡು ಬಂದಿದ್ದರೆ ಉಳಿದೀರ್ವರದು ಸಾಕಷ್ಟು ವಿಸ್ತಾರ ಹೊಂದಿದೆ. ಆಕ್ಷೇಪಕರು ಉದಾಹರಿಸಿದ ಚುರಮರಿ ಅನುವಾದಿತ 'ಬಣ್ಣಿಸಲ್ಯಾಂಗಿನ್ನು' ಮತ್ತು ಇತರ ಹಾಡುಗಳು ಇದೇ ಬಗೆಯವೆಂದು ಬೇರೆ ಹೇಳಬೇಕಿಲ್ಲ.

ಸ್ವಲ್ಪವರಲ್ಲಿ, ಡಿ.ವಿ.ಜಿ. ಆಗಲಿ, ಅವರಿಗಿಂತ ಎಷ್ಟೋ ಪೂರ್ವಿಕರಿದ್ದ ಚುರಮರಿ, ಕಿರ್ಲೋಸ್ಕರ(ಮರಾಠಿ), ಪಾಶ್ಚಿಮಾತ್ಯರಲ್ಲಿ ಹೋಮರನ ಕೃತಿಗಳನ್ನು ಇಂಗ್ಲಿಷಿಗೆ ಪರಿವರ್ತಿಸಿದ ಚಾಪ್ಮನ್, ಡ್ರಾಯ್ಡನ್, ಪೋಪ ಆಗಲಿ ಮೂಲದೊಂದಿಗೆ ತಮ್ಮ ಕಾಲದ ಬಹುಸಂಖ್ಯೆ ಸಹೃದಯರ ಒಲವು ಅಭಿರುಚಿಗಳನ್ನು ಮನದಲ್ಲಿಟ್ಟುಕೊಂಡು ಮೂಲವನ್ನು ಯಥಾವತ್ತಾಗಿ ಅಲ್ಲದಿದ್ದರೂ ಜನಮೆಚ್ಚುಗೆಗೆ ಅರ್ಹವಾಗುವಂತೆ ಕೈಗೆತ್ತಿಕೊಂಡ ಕಾರ್ಯವನ್ನು ನಿರ್ವಹಿಸಿರುವರು. ಭಾಷಾಂತರ ದೃಷ್ಟಿಯಿಂದ ಅಸಮರ್ಪಕವೆಂಬ ಆಕ್ಷೇಪಣೆಗೆ ಗುರಿಯಾದರೂ ಒಟ್ಟಿನಲ್ಲಿ ಸಾಕಷ್ಟು ಯಶಸ್ವಿಯಾಗಿರುವರು. ಸ್ವಲ್ಪ ನಿಷ್ಠುರವೆನಿಸಿದರೂ ಡಿ.ವಿ.ಜಿ. ಸಹಾನುಭೂತಿ ಇಲ್ಲದವರು ಅದನ್ನು (ಗೀತ-ಶಾಕುಂತಲ) ತಮ್ಮ ಅಧಿಕಾರ ಪರಿಧಿಯಲ್ಲಿ ತೆಗೆದುಕೊಳ್ಳ ಬೇಕಿಲ್ಲೆಂದು ವಿಜ್ಞಾಪಿಸಿಕೊಂಡು ಕನ್ನಡ ದೇಶದ ಸಾಮಾನ್ಯ ಮನೆತನಗಳ ಲಲಿತ ಮನಸ್ಸಿನ ಹೆಣ್ಣು ಮಕ್ಕಳೂ ಹೊಲಗದ್ದೆಗಳಲ್ಲಿ ದುಡಿಮೆ ಮಾಡುವ ಸರಳ ಜನರೂ ತಮ್ಮ ಕೃತಿಯಲ್ಲಿನ ಹಾಡುಗಳನ್ನು ಹಾಡಿಕೊಳ್ಳುವಂತಾದರೆ ಅದು ತಮಗೆ 'ಕನಕಾಭಿಷೇಕ' ಎಂದು ಆಶಿಸುವರು. ಚುರಮರಿಯವರ ಹಾರೈಕೆ ಏನಿದ್ದಿತೋ ತಿಳಿಯದು. ಜೀವಿಸಿದ್ದಾಗ ಅವರ ಕೃತಿ ರಂಗಕ್ಕೆ ಬಂದದ್ದನ್ನು ನೋಡುವ ಭಾಗ್ಯ ಅವರಿಗೆ ಲಭಿಸದಿದ್ದರೂ ಅನೇಕ ವರ್ಷಗಳವರೆಗೆ ಉತ್ತರ ಕರ್ನಾಟಕದ ಮನೆ ಮನೆಗಳಲ್ಲಿ ಸಾರ್ವಜನಿಕ ಉತ್ಸವ ಜಾತ್ರೆಗಳಲ್ಲಿ ಕೇಳಿಬರುವುದು ಅದರಲ್ಲಿನ ಹಾಡುಗಳು ಜನಪ್ರಿಯವಾಗಿದ್ದವೆಂಬ ಮುದವೀಡು ಕೃಷ್ಣರಾಯರಂಥ ರಸಿಕ ವಯೋವೃದ್ಧರ ಸ್ವಾನುಭವ ಸಾಕ್ಷಿ ನುಡಿಗಿಂತ ಹೆಚ್ಚಿನ ಪ್ರಶಸ್ತಿ ಇನ್ನಾವುದಿದೆ?

ಇದರರ್ಥ ಯಥಾಮೂಲ ಭಾಷಾಂತರಗಳು ಅನಗತ್ಯವೆಂದಲ್ಲ. ಚುರಮರಿ ಮತ್ತು ಬಸವಪ್ಪ ಶಾಸ್ತ್ರಿಗಳ ಕೃತಿಗಳ ವಿಚಾರದಲ್ಲಿ ಕೊಟ್ಟ ಡಾ. ಹಾವನೂರರ ದೃಷ್ಟಾಂತವನ್ನು ಪುನರುಚ್ಚರಿಸುವುದಾದರೆ ಒಂದು ಮಲ್ಲಿಗೆ ಇನ್ನೊಂದು ಸಂಪಿಗೆ. ನಮಗೆ ಎರಡೂ ಬೇಕು. ಇತರತ್ರ ಹೇಗಿದೆಯೋ ಗೊತ್ತಿಲ್ಲ. ಮರಾಠಿಯಲ್ಲಿ ಮಾತ್ರ ಶ್ರೀ ಕೇಶವ ವಿನಾಯಕ ಗೋಡಬೋಲೆ

ಅವರು ಕಾಳಿದಾಸನ ಈ ಕೃತಿಯನ್ನು ಯಥಾವತ್ತಾಗಿ ಭಾಷಾಂತರಿಸಿರುವರು. ಮುನ್ನುಡಿಯಲ್ಲಿ ಮಹಾವಿದ್ವಾನ್, ಸಂಸ್ಕೃತಜ್ಞ (ಮರಾಠಿಯಲ್ಲಿ ಸಹ) ತತ್ವಜ್ಞಾನಿ, ಅನುಭಾವಿ ಗುರುದೇವ ಆರ್.ಡಿ. ರಾನಡೆ ಅವರು ತಮ್ಮ ಅಧಿಕಾರ ಸಂಪನ್ನವಾಣಿಯಲ್ಲಿ ಸೋದಾಹರಣೆಗಳೊಂದಿಗೆ ಗೋಡಬೋಲೆ ಅವರ ಭಾಷಾಂತರ ಅದೆಷ್ಟು ಸಮರ್ಪಕವಾಗಿದೆ, ಅದೆಷ್ಟು ಸಲೀಸಾಲಾಗಿದೆ ಎಂಬುದನ್ನು ಮನಸಾರೆ ಪ್ರಶಂಸಿರುವರು. ಭಾಷಾಂತರದಲ್ಲಿ ಪದ್ಯಗಳಿಗಾಗಿ ಮೂಲದಲ್ಲಿ ಶ್ಲೋಕವಿದ್ದಲ್ಲಿ ಶ್ಲೋಕ, ವೃತ್ತವಿದ್ದಲ್ಲಿ ಆ ವಿಶಿಷ್ಟ ವೃತ್ತ, ಜೊತೆಗೆ ಮರಾಠಿಯಲ್ಲಿ ರೂಢವಿದ್ದ ಅಂತ್ಯಪ್ರಾಸವನ್ನು ಬಳಸಿರುವದು ಗೋಡಬೋಲೆ ಕೃತಿಯ ಇನ್ನೊಂದು ವೈಶಿಷ್ಟ್ಯ. ಗೋಡಬೋಲೆ ಭಾಷಾಂತರದ ಖ್ಯಾತಿಯಿಂದ ಸ್ಫೂರ್ತಿ ಪಡೆದ ಶ್ರೀ ಮಲ್ಲಿಕಾರ್ಜುನ ಶಿವಲಿಂಗಪ್ಪ ರೈನಾಪೂರ ಕನ್ನಡದಲ್ಲೂ ದ್ವಿತೀಯಾಕ್ಷರ ಪ್ರಾಸವಿಟ್ಟು ಸಮಶ್ಲೋಕ ಸಮವೃತ್ತಗಳಲ್ಲಿ ಕಾಳಿದಾಸನ ಈ ಕೃತಿಯನ್ನು ಭಾಷಾಂತರಿಸಿದ್ದುಂಟು. ಪ್ರಸಕ್ತಿ ಇಲ್ಲದ್ದರಿಂದ ಅವರ ಮತ್ತು ಇನ್ನಿತರ ಭಾಷಾಂತರಗಳ ವಿಚಾರವನ್ನು ಇಲ್ಲಿ ಎತ್ತಿಕೊಂಡಿಲ್ಲ.

•

ಪ್ರಕರಣ ೫

ಮೂಲಕೃತಿಯ ಘನತೆ : ಚುರಮುರಿ ಅನುವಾದ

"ಕಾವ್ಯೇಷು ನಾಟಕಂ ರಮ್ಯಂ ತತ್ರಾಪಿಚ ಶಕುಂತಲಾ" ಎಂಬುದು ಭಾರತದಲ್ಲಿ ಎಂದಿನಿಂದಲೂ ನಡೆದುಬಂದ ಮನೆಮಾತು. ಅದನ್ನು ಬರೆದವ ಕಾಳಿದಾಸ. ಭಾರತದ ಏಕಮೇವಾದ್ವಿತೀಯ ಕವಿ. ಶ್ರೇಷ್ಠ ಕವಿಗಳ ಗಣತಿಯ ಒಂದು ಸಂದರ್ಭದಲ್ಲಿ 'ಮೊದಲು ಕಾಳಿದಾಸನನ್ನು ಹೆಸರಿಸಿ ಕಿರಿಬೆರಳನ್ನು ಮಡಚಿದರಂತೆ. ಕಿರಿಬೆರಳಿಗೆ ಹೊಂದಿ ಬರುವ ಬೆರಳು 'ಅನಾಮಿಕೆ'. ಅದಕ್ಕೆ ಹೆಸರಿಲ್ಲ. ಕಾಳಿದಾಸನನ್ನು ಸಮಕಟ್ಟುವ ಇನ್ನೊಬ್ಬ ಕವಿಯನ್ನು ಹೆಸರಿಸಿ ಅದನ್ನೂ ಮಡಚಬೇಕೆಂದರೆ ಅಂಥವನಾರೂ ದೊರೆಯದ್ದರಿಂದ ಅದು 'ಅನಾಮಿಕೆ' ಎಂದೇ ಉಳಿದು ಅದಕ್ಕಿರುವ ಆ ಹೆಸರು ಸಾರ್ಥಕವಾಯಿತೆಂಬ ಇನ್ನೊಂದು ಜಾಣ ನುಡಿ ಇದೆ.[೧] ನಾಟಕಗಳಲ್ಲಿ ಶಾಕುಂತಲ, ಕವಿಗಳಲ್ಲಿ ಅದನ್ನು ರಚಿಸಿದ ಕಾಳಿದಾಸ - ಏಕಮೇವಾದ್ವಿತೀಯ ಎನ್ನಲು ಇದಕ್ಕಿಂತ ಹೆಚ್ಚಿನ ಗೌರವ ಇನ್ನಾವುದಿದೆ?

ನಾಟಕದ ವಸ್ತು ಹೊಸದಲ್ಲ. ಮಹಾಭಾರತದಲ್ಲಿ ಬಂದಿರುವ ದುಷ್ಯಂತ ಶಕುಂತಲೆಯರ ಕಥೆ. ಆದರೂ ಕವಿ ತನ್ನ ಪ್ರತಿಭಾರೂಪಿ ಯಕ್ಷಿಣಿ ದಂಡದಿಂದ ಯುಕ್ತ ಬದಲಾವಣೆಗಳೊಂದಿಗೆ ಅದನ್ನು ಅಮರವಾಗಿಸಿರುವರು. ನಾಟಕದಾದ್ಯಂತ ನಾಯಿಕೆ ಶಕುಂತಲೆ ಮುಗ್ಧೆ, ಪ್ರೇಮಾಸಕ್ತ ತರುಣಿ, ಪ್ರಗಲ್ಭೆ, ಪತ್ನಿ, ಪರಿತ್ಯಕ್ತ ಗರ್ಭಿಣಿ, ಪತಿ ವಿರಹದಿಂದ ಕೊರಗುತ್ತಿರುವ ತಾಯಿ - ಹೀಗೆ ದೃಶ್ಯದಿಂದ ದೃಶ್ಯಕ್ಕೆ ಬದಲಿಸುವ ರಸ-ಭಾವ ಭಂಗಿಗಳನ್ನು ಆತ್ಮಸಾತ್ತಾಗಿಸಿಕೊಂಡು ಪ್ರೇಕ್ಷಕರ ಚಿತ್ತವನ್ನು ಅತ್ತಿತ್ತ ಅಲುಗಾಡದಂತೆ ಸೆರೆಹಿಡಿದು ಸೂರೆಗೊಳ್ಳುತ್ತಾಳೆ.

ಕಥೆ ಮುಂದರಿದಂತೆ ಒದಗುವ ದಾರುಣ ಸನ್ನಿವೇಶಕ್ಕೆ ಋಷಿ ಶಾಪವನ್ನು ನಿಮಿತ್ತ ಮಾಡಿ ಕವಿ ಅದಕ್ಕೊಂದು ದೈವೀ ಮೆರಗನ್ನು ಕೊಟ್ಟಿರುವನು. ಅದು ಒದಗಿದ್ದಾದರೂ ಪತಿ ವಿರಹದಿಂದ ಅನ್ಯಮನಸ್ಕಳಾದ ಶಕುಂತಲೆಯಿಂದ ಘಟಿಸಿದ, ನವವಿವಾಹಿತ. ತರುಣಿಗೆ ಅಸಹಜವಲ್ಲದ, ಒಂದು ಕ್ಷುಲ್ಲಕ ಪ್ರಮಾದದಿಂದ. ಅದರ ವಿಮೋಚನೆಯಿಂದ ಖಲನಾಯಕನಂತೆ. ಅವಳೊಂದಿಗೆ ವರ್ತಿಸಿದ ದುಷ್ಯಂತನನ್ನು ದೋಷಮುಕ್ತಗೊಳಿಸಿ, ಪತಿ-ಪತ್ನಿ ಮತ್ತು

ಮಧ್ಯಂತರದಲ್ಲಿ ಜರುಗಿದ ಪತ್ರ - ಪೂರ್ವರ ಮಧುರ ಸಮ್ಮಿಲನಕ್ಕೆ ಕಾರಣವಾಗಿರುವದು ನಾಟಕದ ಇನ್ನೊಂದು ವೈಶಿಷ್ಟ್ಯ.

ಮಾನವ ಮತ್ತು ನಿಸರ್ಗ ಎರಡನ್ನೂ ಒಂದಾಗಿಸಿ ಸಮನ್ವಯಿಸಿರುವುದು ಕೃತಿಯ ಮತ್ತೊಂದು ವೈಶಿಷ್ಟ್ಯ. ನಾಯಿಕೆಯ ಸಾಕು ತಂದೆ ಕಣ್ವ ಋಷಿಯ ಆಶ್ರಮದಲ್ಲಿ ಮಾನವರಿಷ್ಟೇ ಅಲ್ಲ, ಅವರೊಂದಿಗೆ ಗಿಡಬಳ್ಳಿ, ಮೃಗಪಕ್ಷಿಗಳು ಕೂಡ ನಾಟಕದ ಪಾತ್ರಗಳಂತೆ ವರ್ತಿಸಿವೆ. ಮಧ್ಯದ ಎರಡು (೫-೬) ಅಂಕಗಳನ್ನು ಬಿಟ್ಟರೆ ಉಳಿದ ಐದು ಅಂಕಗಳಲ್ಲಿನ ಘಟನೆಗಳು ತಮ್ಮ ಆಧ್ಯಾತ್ಮಿಕ ತಪೋಬಲದಿಂದ ಎಲ್ಲ ಜೀವರಾಶಿಗಳಲ್ಲಿನ ಸಾಮರಸ್ಯವನ್ನು ಸಾಕ್ಷಾತ್ಕರಿಸಿಕೊಂಡ ಋಷಿಗಳ ಆಶ್ರಮಗಳಲ್ಲಿ ನಡೆದಿರುವದು ಸಮಗ್ರ ನಾಟಕಕ್ಕೊಂದು ಬಗೆಯ ನಿತಾಂತ ರಮ್ಯ ಆವರಣವನ್ನು ಕಲ್ಪಿಸಿಕೊಟ್ಟಂತಾಗಿದೆ.

ಅನುವಾದದ ವೈಶಿಷ್ಟ್ಯ

ಅನ್ಯ ಅಭಿಪ್ರಾಯಗಳೇನೇ ಇರಲಿ, ಪ್ರಾಸ್ತಾವಿಕ ಪದ್ಯಗಳಲ್ಲಿ ಸ್ವಯಂ ಚುರಮುರಿ "ಅವರಿಗೆ ಬೇರೆ ಬೇರೆ ಭಾಷೆಗಳಲ್ಲಿ ಪ್ರಸಿದ್ಧವಾದ ಕಾಳಿದಾಸನ ಈ ಅಮರಕೃತಿ. ಶಾಕುಂತಲದ ಅನುವಾದಗಳೊಂದಿಗೆ 'ಸವಿಯೊಳು ಪಚ್ಚಿನೋಡಿ ನೂರೆ ಕನ್ನಡಿ ನನ್ನದು ಪಚ್ಚಿದಿರ್ದೊಡೆ ಕವಿತೆಯು ಗಂಡು ಮೆಟ್ಟು, ಕರನಾಟಕ ಬಿಟ್ಟು, ತೆರಳು ಪೋಗುವೆಂ" ಎಂದು ಹೇಳಿಕೊಂಡಿದ್ದಾರೆ. ಮರುಕ್ಷಣದಲ್ಲಿಯೇ ಮೂಲದ ಘನತೆ, ಅದನ್ನು ರಚಿಸಿದ ಕವಿಯ ಘನತೆ, ಅವೆಲ್ಲಿ ತಾವೆಲ್ಲಿ, ಎಂಬುವದರ ಅರಿವು ಮರುಕಳಿಸಿ: 'ಬಡ ಕವಿಗೆ ಅಂದರೆ ತಮಗೆ ಈ ಕುರೂಪಿ ಕೃತಿಕನ್ನಿಕೆ ಪುಟ್ಟಿರುವಳು, ಜಾಣರ ಅಡಿದಾಸಿಯಾಗಿ ಬಾಳೆಂದು ಅವಳನ್ನು ಕಳಿಸಿದ್ದೇನೆ; ಅವಳ ಯೋಗ್ಯತೆ ಅಷ್ಟೇನೆ; ಇದಕ್ಕೆ ತಪ್ಪಿ ನಡೆದರೆ ದೊಂಬರ ದಾಸರೊಳ್ ಸಾಯ್‌ನಡೆ' ಎಂದು ಅವಳನ್ನು ಮರಳಿ ಅಟ್ಟಿಬಿಡಿ; ತೊಂದರೆ ಬೇಡ', ಎಂದು ಯಾಚಿಸಿರುವರು. ಸಾಂಪ್ರದಾಯಿಕವೆನಿಸಿದರೂ ಸ್ವಲ್ಪದರಲ್ಲಿ ರಸಾಸ್ವಾದನವೇ (ಸವಿಯೊಳು) ತಮ್ಮ ಮುಖ್ಯಧ್ಯೇಯ, ಉಳಿದವೆಲ್ಲ, ಅವು ಗುಣಗಳೇ ಇರಲಿ ದೋಷಗಳೇ ಇರಲಿ, ಗೌಣ ಎಂಬುದು ಅವರ ಈ ಮಾತುಗಳ ಮಥಿತಾರ್ಥ ಎಂಬುದು ಸ್ಪಷ್ಟ. ಪ್ರಕೃತದಲ್ಲಿ ಅವರ ಈ ಮುಖ್ಯಧ್ಯೇಯ, ರಸಾಸ್ವಾದನ, ಅದೆಷ್ಟು ಮಟ್ಟಿಗೆ ಕೈಗೂಡಿದೆಯೆಂಬುದನ್ನು ಕಾಣಲೆತ್ನಿಸಿದೆ. ಜೊತೆಗೆ ಅವರು ಗೌಣವೆಂದು ಬಗೆದ ಅನ್ಯ ಗುಣದೋಷಗಳನ್ನು ಎತ್ತಿ ತೋರಿಸಿದೆ.

ಚುರಮುರಿಯವರ ನೈಸರ್ಗಿಕ ಪ್ರತಿಭೆ, ಅಧಿಕಾಂಶದಲ್ಲಿ ಸ್ವಯಪ್ರಯತ್ನದಿಂದ ಗಳಿಸಿದ ಅಧ್ಯಯನ, ಪಾಂಡಿತ್ಯ - ಇವೆರಡೇ ಮೂಲ ಭಾಂಡವಲೆಂಬುದು ಪ್ರಕೃತ ಮೌಲ್ಯಮಾಪನದ ಹಿನ್ನೆಲೆಯಾಗಿದ್ದರೆ, ಈ ಹಿಂದೆ ಪ್ರಸ್ತಾಪಿಸಿದ ತಮ್ಮ 'ಗೀತ ಶಾಕುಂತಲ'ದಲ್ಲಿ ಡಿ.ವಿ.ಜಿ. ವ್ಯಕ್ತಪಡಿಸಿದ : ಕಲಾಕೃತಿ, ಸಾಹಿತ್ಯ ಶಿಲ್ಪ, ಯಾವುದೇ ಇರಲಿ, ಅದರ ಮೌಲ್ಯಮಾಪನದಲ್ಲಿ,

---

೧. ಪುರಾಕವೀನಾಂ ಗಣನಾ ಪ್ರಸಂಗೇ ಕನಿಷ್ಠಿಕಾಧಿಷ್ಠಿತ ಕಾಲಿದಾಸಾ|
ಅದ್ಯಾಪಿ ತತ್ತುಲ್ಯಕವೇರಭಾವದನಾಮಿಕಾಸಾऽರ್ಥವತೀಬಭೂವ||

'ತಾತ್ಪರ್ಯ ದೃಷ್ಟಿ' ಹೆಚ್ಚು ವಿಧಾಯಕ; ಮೌಲ್ಯಮಾಪಕನ ದೃಷ್ಟಿ ಕೃತಿಯ ಒಟ್ಟರ್ಥದ ಕಡೆಗೆ ಇರಬೇಕೇ ಹೊರತು ಅಕ್ಷರಕ್ಷರದ ಮೇಲೆ ಗೆರೆಗೆರೆಯ ಮೇಲೆ ಅಲ್ಲ; ವಾಚಕರ ಅಥವಾ ಪ್ರೇಕ್ಷಕರ ಚಿತ್ತ ವಿಸ್ತಾರವೇ ಇಲ್ಲಿರುವ ಮುಖ್ಯಾಶಯವೆಂಬ ಅಭಿಪ್ರಾಯವು ಅದನ್ನು ಮುನ್ನಡೆಸಿಕೊಂಡು ಹೋಗಿದೆ.

ನಾಟಕದ ವಸ್ತು ಮತ್ತು ಅನುವಾದದ ಮೌಲ್ಯಾಂಕನ

ನಾಂದಿ ಪ್ರಸ್ತಾವನಾದ ಸಾಂಪ್ರದಾಯಿಕ ವಿಧಿಗಳ ನಂತರ ಮೃಗಯಾವಿಹಾರ ನಿರತ ಪೌರವ ದೊರೆ ದುಷ್ಯಂತನು ಒಂದು ಚಿಗರೆಯನ್ನು ಅಟ್ಟಿಸಿಕೊಂಡು ಮಾಲಿನೀ ತೀರದಲ್ಲಿದ್ದ ಕಣ್ವಾಶ್ರಮ ಪರಿಸರವನ್ನು ಪ್ರವೇಶಿಸುವನು. ಇನ್ನೇನು ಚಿಗರೆ ಬಾಣದ ಅಳವಿನಲ್ಲಿ ಬಂದಿತು, ಹೊಡೆಯಬೇಕು ಎನ್ನುವಷ್ಟರಲ್ಲಿ, ಮೂವರು ತಪಸ್ವಿಗಳು ಅಡ್ಡಬಂದು: ರಾಜನ್, ಹೊಡೆಯಬೇಡ. ಇದು ಆಶ್ರಮದ ಚಿಗರೆ; ವಜ್ರದಂತಿರುವ ನಿನ್ನ ಬಾಣಗಳು ದುಷ್ಟರ ದಮನಕ್ಕಲ್ಲದೆ ಎರಳೆಯಂಥ ಮೃದು ಜೀವಕ್ಕಲ್ಲ; ಬಾಣವನ್ನು ಹಿಂತೆಗೆದುಕೊಳ್ಳು, ಎಂದು ಅರ್ಜಿಪಿಸುವರು. ದುಷ್ಯಂತನು ತಕ್ಷಣ ಬಾಣವನ್ನು ಹಿಂತೆಗೆದುಕೊಂಡು ಅವರಿಗೆ ಅಭಿವಂದಿಸುವನು. ಸಂತೃಪ್ತರಾದ ಅವರು 'ನಿನಗೆ ಚಕ್ರವರ್ತಿ ಪುತ್ರನಾಗುವನು' ಎಂದು ಹರಸಿ, ಬಳಿಯಲ್ಲಿಯೇ ಕಣ್ವರ ಆಶ್ರಮವಿದೆ. ತಾವು ಅವರ ಶಿಷ್ಯರು. ಸದ್ಯ ಅವರು ಆಶ್ರಮದಲ್ಲಿಲ್ಲ. ಅತಿಥಿ ಸತ್ಕಾರಕ್ಕಾಗಿ ಮಗಳು ಶಕುಂತಲೆಯನ್ನಿಟ್ಟು, ಆಕೆಗೆ ಒದಗಿದ ಪ್ರತಿಕೂಲ ಗ್ರಹಗಳ ಶಾಂತ್ಯರ್ಥ ಸೋಮತೀರ್ಥಕ್ಕೆ ಹೋಗಿದ್ದಾರೆ. ಅತಿಥಿ ಸತ್ಕಾರ ಸ್ವೀಕರಿಸಿ, ಆಶ್ರಮವಾಸಿಗಳ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಸ್ವಸ್ಥಾನಕ್ಕೆ ಮರಳಬಹುದೆಂದು ತಿಳಿಸಿ, ತಮ್ಮ ಕೆಲಸಕ್ಕೆ ಹೊರಟು ಹೋಗುವರು. 'ಮಹದಾಜ್ಞೆ' ಎಂದು ದುಷ್ಯಂತ ಆಶ್ರಮದತ್ತ ರಥವನ್ನು ಹೊರಳಿಸಲು ಸಾರಥಿಗೆ ಆಜ್ಞಾಪಿಸುವನು. ಆಶ್ರಮದ್ವಾರದಲ್ಲಿ ಕೆಳಗಿಳಿದು, ಪವಿತ್ರ ಸ್ಥಳದಲ್ಲಿ ಆಡಂಬರ ಬೇಡವೆಂದು ಧನುರ್ಬಾಣಾದಿಗಳನ್ನು ಸಾರಥಿಗೆ ಒಪ್ಪಿಸಿ ಸೌಮ್ಯವೇಷದಲ್ಲಿ ಆಶ್ರಮವನ್ನು ಪ್ರವೇಶಿಸುವನು. ಅಷ್ಟರಲ್ಲಿ ಆಶ್ರಮದ ದಕ್ಷಿಣ ದಿಕ್ಕಿನಲ್ಲಿ - 'ಗೆಳತಿಯರಾ, ಹೂವಿನ ಗಿಡಗಳಿಗೆ ನೀರು ಚಿಮ್ಮುಡಿಸುವ ಬನ್ನಿರೇ' ಎಂದು 'ಕೋಮಲ ಎಳೆ ಹೆಣ್ಣಿನ' ಸ್ವರ ಕೇಳಿ ಬರುತ್ತದೆ. ದುಷ್ಯಂತ ಅತ್ತ ಸಾಗುತ್ತಾನೆ. ಮೂವರು ತಾಪಸ ಕನ್ನಿಕೆಯರು ಚಿಕ್ಕ ಚಿಕ್ಕ ಕಲಶಗಳಿಂದ ಹೂವಿನ ಗಿಡಬಳ್ಳಿಗಳಿಗೆ ನೀರು ಚಿಮ್ಮುಡಿಸಲೆಂದು ಬರುತ್ತಿರುವುದು ಅವನ ಕಣ್ಣಿಗೆ ಬೀಳುತ್ತದೆ. ದುಷ್ಯಂತ ಮರೆಯಾಗುತ್ತಾನೆ. ಅವರಲ್ಲಿ ಓರ್ವಳು ಶಕುಂತಲೆ. ಉಳಿದೀರ್ವರು, ಅನಸೂಯೆ, ಪ್ರಿಯಂವದೆ, ಅವಳ ಗೆಳತಿಯರು ಗಿಡಗಳಿಗೆ ನೀರೆರೆಯುತ್ತ ಶಕುಂತಲೆ - ಹಾಡುತ್ತಾಳೆ.

ನೀರು ಚಿಮ್ಮುಡಿಸುವಾ | ಬನ್ನಿರೆ ಬನದೊಳು ||ಪ||
ಸಾರಸ ಸಖಿನುರೆ ಮೀರಿದ ಬಿಸಲೊಳು ||ಅ.ಪ. ||
.... ||೧||
ಶಾವಂತಿಗೆ ಮೊಲ್ಲೆ | ಸೌರಿಡಲೆಳೆಯೆಳೆ |

ಹೂವಿನ ಗಿಡಗಳು | ಹಾದಿಯ ಕೆಲದೊಳು |
ಲೇಪಿರೆ ಮೊಗ್ಗೆಗಳು | ತೆರೆದರಳುವ ಓಲು ||೨||

ತಳಿ ಹಾಕಿರೆ ಬನ - | ದೊಳು ಬಿಳಿ ಮಳಲಿನ |
ಥಳಥಳಿಸುವ ಪಥ | ದೊಳು ಬಲು ದಣಿಯುತ |
ನೆಳಲೊಳತಿಥಿಗಳು | ಬರಲು ಸುಖಿಪ ಓಲು ||೩||

- ಇದೊಂದು ಚುರುಮುರಿಯವರ ಸ್ವರಚಿತ ಪದ್ಯ. ಮೂಲದಲ್ಲಿಲ್ಲ. ಬಾಲೆ ಓರ್ವಳು ಗೆಳತಿಯರೊಂದಿಗೆ ಗಿಡಗಳಿಗೆ ನೀರುಣಿಸುವ ಸನ್ನಿವೇಶದ ಸಾಮಾನ್ಯ ವರ್ಣನೆ. ಶಕುಂತಲೆ ಸತ್ ಕ್ರಿಯೆಗಳ ಸಾಕಾರಮೂರ್ತಿ (ಮೂರ್ತಿಮತೀವಸತ್ಕ್ರಿಯಾ) ಎಂಬ ಸಾಕ್ಷಾತ್ ಕಣ್ವರ ಮಾತಿನಲ್ಲಿ ಅಡಕವಾದ ಅವಳ ಅವೆಷ್ಟೋ ಸದ್ಗುಣಗಳು ನಾಟಕದಾದ್ಯಂತ ರಸಾವಹವಾಗಿ ಅಭಿವ್ಯಕ್ತಿ ಪಡೆದಿದ್ದರೂ ಚುರುಮುರಿ ಅವುಗಳಲ್ಲಿ ಬಂದಿರದ ಒಂದು ಗುಣಕ್ಕೆ ಇಲ್ಲಿ ಅಭಿವ್ಯಕ್ತಿ ಕೊಟ್ಟಿರುವರು. ಅದೆಂದರೆ ಕರ್ತವ್ಯ ನಿಷ್ಠೆ. ಪ್ರಕೃತದಲ್ಲಿ ತಾ. ಪ. ಕಣ್ವರೊಪ್ಪಿಸಿದ ಅತಿಥಿ ಸತ್ಕಾರ ಕಾರ್ಯವನ್ನು ಅವರ ಅಪೇಕ್ಷೆಗಿಂತ ಹೆಚ್ಚು ತತ್ಪರತೆಯಿಂದ ನಿರ್ವಹಿಸಬೇಕೆಂಬ ಔತ್ಸುಕ್ಯ ಈ ಹಾಡಿನ ಎರಡು ಮತ್ತು ಮೂರನೇ ನುಡಿಗಳಲ್ಲಿ : ಬಿಸಿಲಿನಿಂದ ಕಾಯ್ದು ಬಿಳಿಮಳಲಿನ ಆಶ್ರಮ ಪಥದ ಮೇಲೆ ನಡೆದು ಬರುವ ದಣಿದ ಅತಿಥಿಗಳ ಮನಃಪ್ರಸನ್ನತೆಗಾಗಿ ಅದರ ಇಕ್ಕೆಲಗಳಲ್ಲಿ ಬೆಳೆದ ಶೇವಂತಿಗೆ ಮಲ್ಲಿಗೆ ಮೊಗ್ಗೆಗಳು ಅರಳಿ ಆಹ್ಲಾದಕರವಾಗುವಂತೆ ನೀರೆರೆಯೋಣ; ಸುತ್ತಲಿನ ನೆಲ ತಂಪಾಗುವಂತೆ ತಳಿ ಹಾಕೋಣ ಬನ್ನಿರೇ, ಗೆಳತಿಯರಾ ಬನ್ನಿರೇ - ಎಂಬ ಸರಳ ಸುಂದರ ಮಾತುಗಳಲ್ಲಿ ಆ ಔತ್ಸುಕ್ಯ ಅದೆಂತು ವ್ಯಕ್ತವಾಗಿದೆಂಬುದನ್ನು ಗಮನಿಸಬೇಕು.

ಗಿಡದ ಮರೆಯಲ್ಲಿ ನಿಂತು ನೋಡುತ್ತಿದ್ದ ದುಷ್ಯಂತನಿಗೆ ಆಶ್ರಮ ಕನ್ನಿಕೆಯರ ಪರಸ್ಪರ ಚೇಷ್ಟೆ, ನಗೆಮಾತುಗಳಿಂದ ಯಾರು ಯಾರೆಂಬುದು ಗೊತ್ತಾಗುವದು. ಶಕುಂತಲೆಯ ಸೌಂದರ್ಯ ಅವನನ್ನು ಮಂತ್ರಮುಗ್ಧನನ್ನಾಗಿಸುವದು. ಅವಳ ವಿಷಯದಲ್ಲಿ ಒಂದು ಬಗೆಯ ತೀವ್ರ ಆಕರ್ಷಣೆ ಹುಟ್ಟುವದು. ತನ್ನಂಥ ಸತ್ಕುಲ ಪ್ರಸೂತ ಸತ್ಯನಿಷ್ಠ ಕ್ಷತ್ರಿಯನಿಗೆ ಅವಳಲ್ಲಿ ಮನಸ್ಸಾಗಬೇಕಾದರೆ ಆಕೆ ತನಗೆ ವಿವಾಹಯೋಗ್ಯಳಿರಬೇಕೆನಿಸುವದು. ಆದರೂ ಅದು ಅನಿಸಿಕೆ. ಅಷ್ಟರಲ್ಲಿ ಮಲ್ಲಿಗೆ ಹೂಗಳೊಳಗಿಂದ ಭ್ರಮರವೊಂದು ಕಮಲವೆಂದು ಭ್ರಮಿಸಿ ಶಕುಂತಲೆಯ ಮುಖದ ಸುತ್ತ ಸುಳಿದಾಡತೊಡಗುವದು. ಎತ್ತ ತಿರುಗಿದರೂ ಏನು ಮಾಡಿದರೂ ಅವಳನ್ನು ಬಿಡಲೊಲ್ಲದು ಗಾಬರಿಗೊಂಡ ಆಕೆ ಅದರಿಂದ ತನ್ನನ್ನು ಬಿಡಿಸಿಕೊಳ್ಳಲು ಗೆಳತಿಯರಿಗೆ ಮೊರೆಯಿಟ್ಟಳು. ಅದೊಂದು ಕಾವ್ಯಮಯ ಸನ್ನಿವೇಶ. ಮೊದಲೇ ಶಕುಂತಲೆಗೆ ಮನಸೋತ ದುಷ್ಯಂತನಿಗೆ ಅವಳ ಆಗಿನ ಹಾವಭಾವಗಳು ಪ್ರಲೋಭಗೊಳಿಸುವವೆನಿಸಿರಬೇಕು. ಕುಲಗೋತ್ರಗಳ ನಿರ್ಬಂಧನೆಗಳಿಲ್ಲದ ಭ್ರಮರದ ಸ್ವಚ್ಛಂದ ವರ್ತನೆ ಅವನಲ್ಲಿ ಒಂದು ಬಗೆಯ ಅಸೂಯೆ ಹುಟ್ಟಿಸಿರಬೇಕು. ಆಗ ದುಷ್ಯಂತ ತನ್ನೊಳಗೆ :

ಸವಿಗಾರ ಭ್ರಮರನಹುದೆಲೊ ನೀ ದೈವ ಎಂತನೊ|
ನೀ ಹಾರಿಸುತ್ತ ತರುಣಿ ನೋಡುತಿಹಳು ಧನ್ಯನೊ ||ಪ||

ಎಳೆ ಹೆಣ್ಣು ನೀ ಬರಲಂಜಿ ಹಿಂದೆ ಹಿಂದೆ ಸರಿವೊಳೊ|
ಕುಡಿಗಣ್ಣ ನೋಟ ನಡುಗಲು ನಿನ್ನೀಮೊಸುವಳೋ ||೧||

ಮಂಜುಳ ರವದಿಂ ಭರದಿ ಕಿವಿಯ ಬಳಿಗೆ ಬರುವಿಯೊ|
ಬಲು ಸಲುಗೆಯಿಂದಲವಳೊಳು ಏಕಾಂತ ವೇಳ್ವಿಯಾ ||೨||

ಕೈಯಿಂದ ನಿನ್ನ ನಿವಾರಿಸಲು ಸಥಿಯ ಮಾಳ್ಪೆಯೊ|
ಬಲುವಿಂದಲಧರದಮೃತವೀಂಚಿ ತೃಪ್ತನಪ್ಪೆಯೋ ||೩||

ಶಾಬಾಸ್, ಭ್ರಮರನೇ ಶಾಬಾಸ್! ನಮ್ಮಂಥ ದೈವಹೀನ ಜನರಿಗೆ ಹ್ಯಾಗೆ ಬಂದೀತಪ್ಪಾ ಇಂಥ ವೈಭವ!

-'ಸಾಸೂಯಮಿವ' ರಂಗ ನಿರ್ದೇಶನದೊಂದಿಗೆ ಬಂದಿರುವ ಮೂಲದಲ್ಲಿಯ 'ಚಲಾಪಾಂಗಾಂ ದೃಷ್ಟಿಂ'(೧.೨೧) ಪದ್ಯದ ಭಾವವಿಸ್ತರಣವಿದು. ಕೆಲವು ಸಂಸ್ಕರಣಗಳಲ್ಲಿ ಇದರ ಹೊರತಾಗಿ 'ಸಸ್ಪೃಹಂವಿಲೋಕ್ಯ'ರಂಗ ನಿರ್ದೇಶನದೊಂದಿಗೆ ವಿಶೇಷವಾಗಿ ಶಕುಂತಲೆಯ ಆಗಿನ ಅಂಗವಿನ್ಯಾಸ ದೃಷ್ಟಿ, ವಿನ್ಯಾಸಗಳನ್ನು ಬಣ್ಣಿಸುವ ಇನ್ನೆರಡು ಪದ್ಯಗಳಿವೆ. ಡಿ.ವಿ.ಜಿ. ಮೂರೂ ಪದ್ಯಗಳನ್ನು ಹಾಡುಗಳಲ್ಲಿ ಪರಿವರ್ತಿಸಿರುವರು. ಚುರಮರಿ ಅನುವಾದದಲ್ಲಿ ಉಳಿದೆರಡು ಪದ್ಯಗಳಲ್ಲಿನ ಒಂದೆರಡು ಶಬ್ದಗಳ ಭಾವ ಬಂದಿದ್ದರೂ ಹೆಚ್ಚಾಗಿ ಅದು ಸರ್ವತ್ರ ಸ್ವೀಕೃತವಿರುವ 'ಚ.ಪಾಪಾಂಗಾಂ' ಪದ್ಯದ ಭಾವವಿಸ್ತರಣ. ಆದರೂ ವಾಚ್ಯಾರ್ಥದಲ್ಲಿ ಬಂದಿರುವ ಅದರಲ್ಲಿನ ಸುಪರಿಚಿತ ಕೊನೆಯ 'ವಯಂತತ್ತ್ವಾನ್ವೇಷಾನ್ ಮಧುಕರ ಹತಾಸ್ತ್ವಂ ಖಲುಕೃತೀ" (ಎಲೋ ಭ್ರಮರ, ಅವಳ ಕುಲಗೋತ್ರ. ವಿಚಾರದಲ್ಲಿ ತೊಡಗಿದ ನಾವು ಕೈಸಾಗದಂತಾದೆವು, ನೀನೇ ಭಾಗ್ಯಶಾಲಿ) ಕೊನೆಯಲ್ಲಿ ವ್ಯಕ್ತವಾದ ಭಾವವನ್ನು ಅದೇಕೋ ಬಿಟ್ಟಿರುವರು. ಲೋಭ ಈರ್ಷೆ ಮಾನವ ಸಹಜವಿದ್ದರೂ ದುಷ್ಯಂತನಂಥ ಸತ್ಕುಲ ಪ್ರಸೂತ ಸುಸಂಸ್ಕೃತ ಅರಸನಿಂದ ಅವುಗಳಿಗೆ ವಾಚ್ಯಾರ್ಥದಲ್ಲಿ ಅಭಿವ್ಯಕ್ತಿ ಕೊಡಿಸುವದು ಅನುಚಿತವೆಂದು ಬಗೆದೋ ಏನೊ ಚುರಮರಿ ಸೋತ ಆಟಗಾರನು ಗೆದ್ದ ಎದುರಾಳಿಯನ್ನು ಔಪಚಾರಿಕವಾಗಿ ಅಭಿನಂದಿಸುವ ಬಗೆಯಲ್ಲಿ ಹಾಡಿನ ನಂತರ ಬಂದಿರುವ 'ಶಾಭಾಸ್ ಭ್ರಮರನೇ' ಇತ್ಯಾದಿ ಮಾತುಗಳಲ್ಲಿ ಸೂಚ್ಯವಾಗಿ ಅಭಿವ್ಯಕ್ತಿ ಕೊಡಿಸಿದಂತಿದೆ. ಹಾಡಿನ ಪ್ರಾರಂಭದಲ್ಲಿ ಭ್ರಮರಕ್ಕೆ ಅನ್ವಯಿಸಿ ಬಂದಿರುವ 'ಸವಿಗಾರ' ಪದದಲ್ಲಿ ಸವಿಗಾರನ ಪ್ರವೃತ್ತಿ. ಮೊದಲು ಉಪಭೋಗ, ನಂತರ ಯುಕ್ತಾಯುಕ್ತತೆಯ ವಿಚಾರ; ದುಷ್ಯಂತ ಅಂಥವನಲ್ಲ ಎಂಬುದು ಸೂಚಿತವಾದಂತಿದೆ.

ಮೊರೆ ಇಡುತ್ತಿದ್ದ ಶಕುಂತಲೆಗೆ ನಗೆಮಾತಿನಲ್ಲಿ ಸಖಿಯರು: ನಾವಾರೇ ನಿನ್ನನ್ನು ಬಿಡಿಸಿಕೊಳ್ಳಲಿಕ್ಕೆ? ದುಷ್ಯಂತರಾಜನನ್ನು ಕರೆ ಬೇಕಾದರೆ; ಅವನೇ ಈ ತಪೋವನದ ರಕ್ಷಕ

ಎನ್ನುವರು. ಅದೇ ತಕ್ಕ ಸಮಯವೆಂದು ದುಷ್ಯಂತ: ಯಾರವರು? ಅರಿಯದ ಎಳೆ ಕನ್ನಿಕೆಯರನ್ನು ಕಾಡುವವರು? ಎಂದು ಗರ್ಜಿಸುತ್ತ ಮುಂಬರುವನು. ಅವನ ಆಕಸ್ಮಿಕ ಬರವಿನಿಂದ ಸಿಮಿಪಾರ್ಥ ಭಯಪಟ್ಟ ಶಕುಂತಲೆಯು ಸಖಿಯರು ಸಾವರಿಸಿಕೊಂಡು ಅವನನ್ನು ಸ್ವಾಗತಿಸುವರು. ದುಷ್ಯಂತನಿಗಾದಂತೆ ಶಕುಂತಲೆಗೂ ಅವನನ್ನು ಕಂಡಾಕ್ಷಣ ಪ್ರೇಮ ಅಂಕುರಿಸುವದು. ಅವಳಿಗೆ ಅದೊಂದು ಹೊಸ ಅನುಭವ. ತಪೋವನಕ್ಕೆ ಅಯೋಗ್ಯವಿದ್ದ ವಿಕಾರಗಳೇಕೆ ಬರುತ್ತಿದ್ದಾವೆಂದು ನಾಚಿಕೊಂಡು ತಲೆತಗ್ಗಿಸಿ ಕುಳಿತುಕೊಳ್ಳುವರು. ಸಖಿಯರ ಮುಖಾಂತರ ಪರಸ್ಪರರ ಪರಿಚಯವಾಗುವದು. ದುಷ್ಯಂತನಿಗೆ ಶಕುಂತಲೆಯ ವೃತ್ತಾಂತವನ್ನು ತಿಳಿದುಕೊಳ್ಳಬೇಕೆಂಬ ಆತುರ. ಕಣ್ವರಾದರೋ ನೈಷ್ಠಿಕ ಬ್ರಹ್ಮಚಾರಿ. ಅಂಥವರಿಗೆ ಮಗಳೆಲ್ಲಿಂದ ಬಂದಳೆಂಬ ಸಮಸ್ಯೆ ಆತನಿಗೆ. ಸಖಿಯರು ನಿಜವಾಗಿ ಆಕೆ ವಿಶ್ವಾಮಿತ್ರ ಮೇನಕೆಯರ ಮಗಳು. ಕಣ್ವರು ಸಾಕುತಂದೆ ಎಂಬುದನ್ನೂ ತಿಳಿಸುವರು. ವಿಶ್ವಾಮಿತ್ರ ಜನ್ಮದಿಂದ ಕ್ಷತ್ರಿಯ. ಆಗಿನ್ನೂ ಆತ ಬ್ರಹ್ಮರ್ಷಿ ಆಗಿದ್ದಿಲ್ಲ. ಮೇನಕೆಯಂತೂ ದೇವಾಂಗನೆ, ಅಪ್ಸರೆ, ಅಂತೆಯೇ ಶಕುಂತಲೆ ಅಷ್ಟೊಂದು ರೂಪವತಿ, ಲಾವಣ್ಯವತಿ ಎಂದುಕೊಂಡು ದುಷ್ಯಂತ:

ಪುಟ್ಟುವದೇ ಮನುಜೆಯಲಿತು ರೂಪಂ
ಪೊಟ್ಟಿಯಲಿಂ ಪಡೆಯಳಿದೆಂಥ ಕಾಂತಿಯೊ ನಾ|
ದಿಟ್ಟಿಸಿ ನೋಡೆನು ಮುರೆಮಿಂಚಿನಿಂದ ವಾಸಾ
ಘಟ್ಟಿಯದೆಂದಿಗೆ ಬರಬೇಕು ಪೃಥ್ವಿಯಿಂದಾ"

ಶಕುಂತಲೆಯು ಮೋರೆ ಲಜ್ಜೆಯಿಂದ ಕೆಳಗಾಗುವದು. ಶಕುಂತಲೆಗೆ ಅನ್ವಯಿಸಿ: ಮಿಂಚು ಹುಟ್ಟುವದು ಆಗಸದಲ್ಲಿ ಭೂಮಿಯಲ್ಲಿ ಅಲ್ಲೆಂಬ ಮೂಲದಲ್ಲಿಯ ದೃಷ್ಟಾಂತ ಅಷ್ಟೊಂದು ಹೊಂದಿಕೊಂಡು ಬಂದಿಲ್ಲ. ಮಿಂಚು ಥಳಥಳಿಸಿ ಕ್ಷಣಮಾತ್ರದಲ್ಲಿ ಮಾಯವಾಗುವ ಘಟನೆ. ಇಲ್ಲಿ ಆ ಮಿಂಚು ಮೂರ್ತಿಮಂತವಾಗಿ ದುಷ್ಯಂತನೆದುರು ನಿಂತಿದೆ - ಅದೂ ಭೂಮಿಯ ಮೇಲೆ. 'ಮುರೆ ಮಿಂಚಿನಿಂದವಾಸಾ ಘಟ್ಟಿ' ಎಂಬ ಚುರಮರಿ ಮಾತಿನಲ್ಲಿ ಮೂಲದಲ್ಲಿಯ ದೃಷ್ಟಾಂತ ಸರ್ವತೋಪರಿ ಶಕುಂತಲೆಗೆ ಅನ್ವಯಿಸುವಂತಾಗಿದೆ. ಶಕುಂತಲೆಯ ಜನ್ಮ ವೃತ್ತಾಂತದಿಂದ ಆಕೆ ವಿವಾಹಯೋಗ್ಯಳೆಂದು ಗೊತ್ತಾದರೂ ಅವಳ ಮದುವೆ ವಿಷಯದಲ್ಲಿ ಕಣ್ವರ ಮನೀಷೆ ಏನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ದುಷ್ಯಂತನಿಗೆ. ಸಖಿಯರ ಅನುಮತಿ ಪಡೆದು ಆತ:

ಎಷ್ಟು ದಿವಸಗಳ ತನಕ ನಿಮ್ಮಯ ಸಖಿ|
ಕಷ್ಟವನನುಭವಿಸಲಿ ಬೇಕೆ? ||ಪ||
ಹೆಚ್ಚಿನ ತಾಪಸ ನೇಮದಿಂ ಬಯಕೆಗಳ್|
ಮುಚ್ಚಿ ತನ್ನೊಳು ತಾನೇ ನೊಯ್ಯಬೇಕೆ?||
ಇಚ್ಛೆಗಳೆಲ್ಲ ಈ ವ್ರತದಿಂ ಬಿಗಿದ ಗಂಟು|
ಬಿಚ್ಚಿ ತಾವೇ ಹೊರಬೀಳಬೇಕೆ? ||೧||

ಈ ತರುಣಿಯ ಪೋಲು ಕಣ್ಣುಗಳಿರುವಂಥ|
ಈ ತಪೋವನದೆರಳೆಗಳ ಕೂಡ||
ಸ್ವಾತಂತ್ರ್ಯವಿಲ್ಲದೆ ನಿತ್ಯ ನಿರಂತರ |
ತಾ ತೊಳಲುತಲಿರಬೇಕೇನಯ್ಯಾ ||೨||
ಹೊನ್ನಿನ ಬಳ್ಳಿಯು ಪೊರಳುತಿಹುದು ಕಾಮ -|
ನೆನ್ನುವ ರವಿಯ ತಾಪಕ್ಕೆ ಕೇಳು ||
ಬಂನ ಬಡುವದಯ್ಯೊ ಮುನಿಕುಲವನದೊಳಿ -|
ದ್ದನೆ ಕಾಯಲು ವೃಕ್ಷವಿಲ್ಲವಲ್ಲೆ ||೩||

ಚುರಮರಿಯವರ ಈ ಹಾಡು ಮೂಲದ 'ವೈಖಾನಸಂ ಕಮನಯಾ - ೧. ೨೭' ಪದ್ಯದ ವಿಸ್ತೃತ ರೂಪ. ಮೊದಲನೇ ನುಡಿಯ ಪ್ರಥಮಾರ್ಧ ಮತ್ತು ಎರಡನೇ ನುಡಿಯು ಮೂಲಕ್ಕೆ ಸಮೀಪವಾಗಿವೆ. ಮಿಕ್ಕಿದ್ದೆಲ್ಲ ಚುರಮರಿಯವರ ಕಲ್ಪನಾ ವಿಲಾಸ. ಬಿಗಿದು ಕಟ್ಟಿದ ಗಂಟು ಬಿಚ್ಚಿ ಒಳಗಿನ ವಸ್ತುಗಳು ಹೊರಬೀಳುವಂತೆ. ತಾಪಸ ವ್ರತದಿಂದ ಹತ್ತಿಕ್ಕಿದ ಅವಳ ಇಚ್ಛೆಗಳೆಲ್ಲ (ಅನುರೂಪ ಪತಿಯನ್ನು ವರಿಸಿ ಸಂಸಾರಿಗಳಾಗಬೇಕೆಂಬ) ತಾವಾಗಿಯೇ ಒಂದಿಲ್ಲೊಂದು ದಿನ ಹೊರಬೀಳಬೇಕೇ ಎಂಬ ಅವರ ಮಾತು ಮಾನಸ ಶಾಸ್ತ್ರದಲ್ಲಿಯ ಪ್ರಬಲ ಮನೋನಿಗ್ರಹದ (supression of emotions) ದೃಶ್ಯ ಪರಿಣಾಮಗಳ ಪೂರ್ವಸೂಚನೆಯಂತಿದ್ದು ಮುಂದೆ ಮೂರನೇ ಅಂಕಿನಲ್ಲಿ ಕಾಮಬಾಧೆಯಿಂದ ಸಂತ್ರಸ್ತಳಾದ ಶಕುಂತಲೆಯನ್ನು ಕಂಡಾಗ ಅದರ ಪ್ರತೀತಿ ಬರುವಂತಿದೆ. ಕಾಮನೆಂಬ ರವಿಯ ತಾಪದಿಂದ ಬಾಡುತ್ತಿದ್ದ ಈ ಹೊನ್ನಿನ ಬಳ್ಳಿಗೆ ಮುನಿಕುಲದಲ್ಲಿ ತಕ್ಕ ವೃಕ್ಷವಿಲ್ಲವೆ ಎಂಬ ಮಾತಿನಲ್ಲಿ ಅಷ್ಟರಲ್ಲಿ ಆಶ್ರಮದ ಯಾವನೊಬ್ಬ ಮುನಿಕುಮಾರನೊಂದಿಗೆ ಅವಳ ಮದುವೆ ಗೊತ್ತಾಗಿರಬಹುದೆ ಎಂಬ ದುಷ್ಯಂತನ ಅವ್ಯಕ್ತ ಶಂಕೆಗೆ ಅಭಿವ್ಯಕ್ತಿ ದೊರೆತಿದೆ.

ಅನುರಾಗದ ಮೊದಲು ಮೆಟ್ಟಿಲು

ಪ್ರಿಯಂವದೆ: ಹಾಗೇನಿಲ್ಲ. ಎಲ್ಲದರಲ್ಲೂ ಆಕೆ ಪರಾಧೀನೆ. ಯೋಗ್ಯ ವರ ನೋಡಿ ಮದುವೆ ಮಾಡಬೇಕೆಂಬ ಕಣ್ವರ ಸಂಕಲ್ಪ ಉಂಟು, ಎಂದು ಉತ್ತರಿಸಿದಾಗ ದುಷ್ಯಂತನ ಸಂದೇಹಗಳೆಲ್ಲ ದೂರಾಗುವವು. ದುಷ್ಯಂತನಲ್ಲಿ ಉಂಟಾದ ಶಕುಂತಲೆಯ ಅನುರಾಗವು ಹೆಚ್ಚುತ್ತ ಸಾಗಿದೆ. ಅದರೊಂದಿಗೆ ಸಖಿಯರ ಚೇಷ್ಟೆ, ನಗೆಮಾತುಗಳೂ ಹೆಚ್ಚುವವು. ಹೀಗೆಲ್ಲ ಮಾತಾಡಿದರೆ ಗೌತಮ್ಮನಿಗೆ (ಆಶ್ರಮದ ಅಜ್ಜಿ) ಹೇಳುತ್ತೇನೆ ಎಂದು ಕೃತಕ ಕೋಪದಿಂದ ಅಲ್ಲಿಂದೆದ್ದು ಹೋಗಲನುವಾಗುತ್ತಾಳೆ. ಆದರೆ ಹೋಗುವದಿಲ್ಲ. ಇತ್ತ ದುಷ್ಯಂತನಿಗೆ ಅವಳಾದರೂ ತನ್ನಲ್ಲಿ ಅನುರಕ್ತಳಾಗಿರಬಹುದೇ ಎಂಬ ಅನುಮಾನ ಮೂಡುತ್ತದೆ. ಅದಕ್ಕನುಗುಣವಾಗಿ ಅವಳ ಹಾವಭಾವಗಳ ಬಣ್ಣನೆ ಇರುವ 'ಮನಸಾಸಿಟ್ಟಿಪಳು ಎನ್ನೊಳು' ಎಂಬುದೊಂದು ಹಾಡಿದೆ ಇಲ್ಲಿ. ಮೂಲ ಮತ್ತು ಚುರಮರಿ ಅದನ್ನು ವಿಸ್ತರಿಸಿದ ಬಗೆಯ ಒಂದು ಉದಾಹರಣೆಯೆಂದು ಡಿ.ವಿ.ಜಿ.

ಅವರ 'ಗೀತ - ಶಾಕುಂತಲ' ಸಂದರ್ಭದಲ್ಲಿ ಈ ಹಿಂದಣ ಪ್ರಕರಣದಲ್ಲಿ ಕೊಟ್ಟಿದ್ದರಿಂದ ಅವರ ಪುನರುಚ್ಚರಣೆ ಇಲ್ಲಿ ಅನಗತ್ಯ.

ಅಷ್ಟರಲ್ಲಿ ಬೇಟೆಗಾಗಿ ದುಷ್ಯಂತ ಬಂದಿದ್ದಾನೆ; ಆಶ್ರಮದಲ್ಲಿನ ಮೃಗ ಪಶುಗಳೆಲ್ಲ ಗಾಬರಿಯಿಂದ ದಿಕ್ಕೆಟ್ಟು ಓಡುತ್ತಿವೆ; ಕಾಡಾನೆಯೊಂದು ಕಂಪದ್ದನ್ನೆಲ್ಲ ಧ್ವಂಸ ಮಾಡುತ್ತ ಮುನ್ನುಗ್ಗುತ್ತಿದೆ; ರಕ್ಷಿಸಿಕೊಳ್ಳಿರಿ, ರಕ್ಷಿಸಿಕೊಳ್ಳಿರಿ ಎಂಬ ಕೋಲಾಹಲವೇಳುತ್ತದೆ. ಭಯಗೊಂಡ ಸಖಿಯರು ಯಥಾಸಾಂಗ ಆತಿಥ್ಯಕ್ಕೆ ಇನ್ನೊಮ್ಮೆ ಬರಬೇಕೆಂದು ಬಿನ್ನವಿಸಿಕೊಂಡು ಗಡಿಬಿಡಿಯಿಂದ ತಮ್ಮ ಪರ್ಣಕುಟಿಗಳತ್ತ ಹೊರಡುತ್ತಾರೆ. ಶಕುಂತಲೆ ಒಂದಿಲ್ಲೊಂದು ನೆವದಿಂದ ದುಷ್ಯಂತನತ್ತ ತಿರುತಿರುಗಿ ನೋಡುತ್ತ ಗೆಳತಿಯೊರಂದಿಗೆ ನಿಷ್ಕ್ರಮಿಸುತ್ತಾಳೆ. ಮನವಿಲ್ಲದ ಮನಸ್ಸಿನಿಂದ ದುಷ್ಯಂತ ಸೈನ್ಯಕ್ಕೆ ಪರಿಸ್ಥಿತಿಯನ್ನು ಹತೋಟಿಗೆ ತಂದು ಒಂದೆಡೆ ಬೀಡು ಬಿಡಿರೆಂದು ಆಜ್ಞಾಪಿಸಲು ಹೊರಡುತ್ತಾನೆ. ಹೋಗೋಗುತ್ತ ದುಷ್ಯಂತ - ಹಾಡುತ್ತಾನೆ:

ಬರಲಾರದೆನ್ನ ಮನ | ಎನ್ನೊಡನೆ ||ಪ||

ಜನುಮದ ಸ್ನೇಹದ| ತನುವಿನೊಳಿರೆ ಪರ|
ತನುವಿಯ ಕೋಮಲ ತನುವ ಬಯಸಿ ತಾ ||೧||

ಶರೀರ ಮುಷ್ಟಿದಕೆ ಪೋಗು | ತಿರಲು ರಥದ ಕೇತು|
ವಿರದೆ ಹಿಂದಕೆ ಜಗ್ಗು| ತಿರುವ ತೆರದೊಳು ||೨||

ಲಲಿತ ಕೂಪದ ಸರ|ದೊಳು ನೇತ್ರ ನಳಿನ |
ದಳದ ಮೋಹದಾ ಲತಾ | ವಲಯದಿ ಸಿಲುಕಿ ||೩||

- ಮೂಲ ಪದ್ಯ 'ಗಚ್ಛತಿ ಪುರಃ ಶರೀರಂ ಧಾವತಿ - ಪಶ್ಚಾದಸಂಸ್ತುತಂ ಚೇತಃ ೧.೩೪' ಆರ್ಯೆಯ ಭಾವ ವಿಸ್ತರಣ ಪಲ್ಲವಿ ಮತ್ತು ಎರಡನೇ ನುಡಿಯಲ್ಲಿ ಮೂಲದ ಭಾವ ಬಂದಿದ್ದರೆ, ಮೊದಲನೇ ನುಡಿಯಲ್ಲಿ ಭವಭೂತಿಯ ಉತ್ತರ ರಾಮ ಚರಿತದಲ್ಲಿಯ 'ವ್ಯತಿಷಜತಿ ಪದಾರ್ಥಾನಂತರಃ ಕೋಽಪಿಹೇತುಃ' ಶಾಕುಂತಲದಲ್ಲಿಯೇ ಮುಂದೆ ಐದನೇ ಅಂಕಿಗಳಲ್ಲಿ ಬಂದಿರುವ 'ಭಾವಸ್ಥಿರಾಣಿ ಜನನಾಂತರ ಸೌಹೃದಾನಿ' - ಈ ಮಾತುಗಳಲ್ಲಿ ವ್ಯಕ್ತವಾದ ಭಾವವನ್ನು ಪ್ರತಿಬಿಂಬಿಸುತ್ತದೆ.

ಭಾರತೀಯ ಕಲೆಯೇ ಇರಲಿ ಕಾವ್ಯವೇ ಇರಲಿ ಅದರ ಅಂತಿಮ ಗುರಿ ಆಧ್ಯಾತ್ಮಿಕ ಸತ್ವದ ಬಲಸಂವರ್ಧನ ಮತ್ತು ಸಾಕ್ಷಾತ್ಕಾರ. ಪುರುಷಾರ್ಥ ಚತುಷ್ಟಯಲ್ಲಿ ಧರ್ಮಕ್ಕೆ ಪ್ರಥಮ ಸ್ಥಾನ ಕೊಟ್ಟು, ಮಧ್ಯದಲ್ಲಿ ಅರ್ಥಕಾಮಗಳನ್ನಿರಿಸಿ ಕೊನೆಗೆ ಮೋಕ್ಷವನ್ನು ನಿರ್ದೇಶಿಸಿರುವರು ನಮ್ಮ ಹಿರಿಯರು. ಸಾಕ್ಷಾತ್ಕಾರ ಲಭಿಸುವದಾದರೂ ಅಲ್ಲಿಯೇ. ಐಹಿಕ ವಸ್ತು ವಿಷಯ ಅರ್ಥಕಾಮಗಳಲ್ಲಿ ನಿರತರವಾಗಿರುವದು ಮಾನವನ ಹುಟ್ಟುಗುಣ. ಧರ್ಮವನ್ನು ಬಿಡದೆ ಇವುಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ಯೋಗ್ಯ ದಿಶೆಯಲ್ಲಿ ನಡೆಸಿಕೊಂಡು ಹೋಗುವದು

ಜೀವನರಂಗದಲ್ಲಿ ಆತ ನಿರ್ವಹಿಸಬೇಕಿದ್ದ ಆದ್ಯ ಕರ್ತವ್ಯ. ವಿಶೇಷವಾಗಿ ಸಾಹಿತ್ಯ ರಂಗದಲ್ಲಿ ಹೆಣ್ಣು ಗಂಡುಗಳ ಕಾಮ ಪ್ರೇಮಗಳಿಗೆ ಇರುವಷ್ಟು ಪ್ರಾಧಾನ್ಯ ಇತರ ಐಹಿಕ ವಸ್ತು ವಿಷಯಗಳಿಗಿಲ್ಲ. ಪ್ರಾರಂಭದಲ್ಲಿ ಪ್ರೇಮಕ್ಕಿಂತ ಕಾಮವೇ ಹೆಚ್ಚು. ಆದರೆ ಅಂತಿಮ ಗುರಿ ಸಾಧ್ಯತೆಯಲ್ಲಿ ಕಾಮವು ಸಂಪೂರ್ಣವಾಗಿ ಅಳಿದು ಶುದ್ಧಪ್ರೇಮವಿಷ್ಟೇ ಉಳಿಯಬೇಕು. ಹಾಗಾಗಲು ಪೂರ್ವರ ಅಗಲಿಕೆ;ತನ್ಮೂಲಕ ಉದ್ಭವಿಸುವ ಕಷ್ಟ, ಕೋಟಲೆಗಳ ಅನುಭವ ಪಶ್ಚಾತ್ತಾಪ ಇತ್ಯಾದಿಗಳು ಅನಿವಾರ್ಯ. ನಂತರ ಈರ್ವರ ಮಧುರ ಸಮ್ಮಿಲನ ಮತ್ತು ಜೊತೆ ಜೊತೆ ಅಂತಿಮ ಗುರಿ ಸಾಧನೆಯತ್ತ ಮಾರ್ಗಕ್ರಮಣ.

ಕಾಳಿದಾಸನ ಶಾಕುಂತಲದಲ್ಲಾಗಲಿ ಅವನ ಇತರ ಕೃತಿಗಳಲ್ಲಾಗಲಿ ನಾವು ಕಾಣುವದಾದರೂ ಇದನ್ನೇ. ಶಾಕುಂತಲದಲ್ಲಿ ಎಲ್ಲವೂ ಸುಖಾಂತವಾಗಿ ಕೊನೆಗೊಂಡ ಬಳಿಕ, ಮಾರೀಚ ಋಷಿಗಳು ದುಷ್ಯಂತನಿಗೆ: ವತ್ಸಾ, ಇನ್ನೇನಾದರೂ ನಿನಗೆ ಪ್ರಿಯವಾದದ್ದನ್ನು ಬೇಡಿಕೋ ಎಂದಾಗ ಆತ ಬೇರೆ ಏನೂ ಬೇಡ; ಪರಮಾತ್ಮನು ಜನನ - ಮರಣಗಳ ಚಕ್ರವನ್ನು ತಪ್ಪಿಸಿ ಮೋಕ್ಷವನ್ನು ಕರುಣಿಸಲೆಂದು ಆಶೀರ್ವದಿಸಿ ಎಂದು ಕೇಳಿಕೊಳ್ಳುವನು. ಕಾಳಿದಾಸ ಶೃಂಗಾರಕವಿ ಎಂಬುದು ಲೋಕಪ್ರಸಿದ್ಧವಿದ್ದರೂ ಅವನ ಶೃಂಗಾರದ ಪರ್ಯವಸಾನ ಇಂಥದು. ಉಪರೋಕ್ತ 'ಬರಲಾರದೆನ್ನಮನ ಎನ್ನೊಡನೆ' ಹಾಡಿನ ಮೊದಲನೆಯ ಮೂರು ಪಾದಗಳಲ್ಲಿ ವ್ಯಕ್ತವಾದ ಭಾವವು ದುಷ್ಯಂತ ಶಕುಂತಲೆಯಲ್ಲಿ ಅಂಕುರಿಸಿದ ಪ್ರಾರಂಭಿಕ ಅಂದರೆ ಕಾಮಪ್ರಧಾನ ಪ್ರೇಮದ ಮೊದಲು ಮೆಟ್ಟಿಲು.

ಎರಡನೇ ಮೆಟ್ಟಿಲು

ಮರುದಿನದ ಪ್ರಸಂಗ. ದುಷ್ಯಂತನ ಶಿಬಿರದಲ್ಲಿ ಆತನ ಆಪ್ತ ಮಿತ್ರ ವಿದೂಷಕ (ಚುರಮರಿ ಅನುವಾದದಲ್ಲಿ ಹನುಮನಾಯಕ, ಭಾಷೆ - ಗ್ರಾಮ್ಯ) ತನ್ನ ಗೋಳನ್ನು ಹೇಳಿಕೊಳ್ಳುತ್ತಾನೆ. ಹಿಂಸ್ರ ಪಶುಗಳ ಪರಿಸರದಲ್ಲಿ ಕಲ್ಲು ಮುಳ್ಳುಗಳನ್ನು ತುಳಿಯುತ್ತ ದುಷ್ಯಂತನೊಂದಿಗೆ ಅರಣ್ಯದಲ್ಲಿ ಅಲೆದಾಡಿ ಅಲೆದಾಡಿ ದಣಿದು ಹೈರಾಣಾಗಿದ್ದಾನೆ. ಹೊತ್ತಿಗೆ ಊಟವಿಲ್ಲ. ವಿಶ್ರಾಂತಿ ಇಲ್ಲ. ರಾತ್ರಿ ನಿದ್ರೆ ಇಲ್ಲ, ಜಿಗರೆಯನ್ನು ಅಟ್ಟಿಸಿಕೊಂಡು ಒಬ್ಬನೇ ಬಲು ದೂರ ಹೋಗಿದ್ದ ದುಷ್ಯಂತ. ಆಶ್ರಮ ಕನ್ನಿಕೆ ಶಕುಂತಲೆಯನ್ನು ಕಂಡು ಮೋಹಿತನಾದ ಸುದ್ದಿ ಅವನಿಗೆ ತಿಳಿದಿದೆ. ಅವಳ ಚಿಂತನದಲ್ಲಿಯೇ ಮಗ್ನನಾದ ದುಷ್ಯಂತ ರಾಜಧಾನಿಗೆ ಮರಳುವನೊ ಇಲ್ಲವೊ ಎಂಬ ಚಿಂತೆ ಅವನನ್ನು ಕಾಡತೊಡಗಿದೆ. ದುಷ್ಯಂತನನ್ನು ಕಂಡಾಗ ಕನಿಷ್ಟ ಒಂದು ದಿನವಾದರೂ ತನಗೆ ವಿಶ್ರಾಂತಿ ಕೊಡಬೇಕೆಂದು ಅಲ್ಲರಿಯ ಬೇಡಿಕೊಳ್ಳುತ್ತಾನೆ. ಶಕುಂತಲೆಗಾಗಿ ಮನಸೋತ ದುಷ್ಯಂತನಿಗಾದರೂ ಅಷ್ಟೇ ಬೇಕಿತ್ತು. ಆಶ್ರಮವಾಸಿಗಳಿಗೆ ತೊಂದರೆ ಬೇಡೆಂಬ ನೆವವನ್ನು ಮುಂದೆ ಮಾಡಿ ಬೇಟೆಯನ್ನು ಸ್ಥಗಿತಗೊಳಿಸಿ ವಿದೂಷಕನೆದುರು ಮತ್ತು ಮನಸಿನಿಂದ ಶಕುಂತಲೆಯ ರೂಪ ಲಾವಣ್ಯಗಳನ್ನು, ಅವಳಲ್ಲಿ ತನಗೆಷ್ಟು ಆಸಕ್ತಿ ಉಂಟಾಗಿದೆಯೆಂಬುದನ್ನು ವರ್ಣಿಸಲು ಆರಂಭಿಸುತ್ತಾನೆ. ಮಧ್ಯದಲ್ಲಿಯೇ ವಿದೂಷಕನು ಏನಪಾ ನನ್ನ ಪಪ್ಪಾ, ಋಸಿ(ಋಷಿ)ಗೋಳಮಗಳಾಕೆ; ಮತ್ತು

ಅಕೋ ಪಂತ್ಯಾಕ ನೀ ಹೋಗಾಣೆಲ್ಲ ಮುಟ್ಯಾಣೆಲ್ಲ; ಬರೇ ಮನಸಿಟ್ಟೇನು ಫಲಾ?- ಎಂದು ಅವನನ್ನು ತಡೆಯಲೆತ್ನಿಸುವನು. ಅದಕ್ಕೆ ದುಷ್ಯಂತ : ಶಕುಂತಲೆ ಮುನಿಕನ್ಯೆಯಲ್ಲ; ಅವಳೋರ್ವ ಅಪ್ಸರ ಕನ್ಯೆ; ಪುರುವಂಶದಲ್ಲಿ ಹುಟ್ಟಿದ ತನ್ನಂಥವನಿಗೆ ಸರ್ವಥೈವ ಯೋಗ್ಯಳು,ಕೇಳು:

ಮುನಿಗಳ ಮಗಳಲ್ಲ ತಿಳಿಯೊ | ದೇವಾಂ-
ಗನೆಯಿಂದ ಜನಿಸಿದ ಕನಕ ಪುತ್ಥಳಿಯೋ|| ಪ.||

ಚಲ್ಲೆಗಂಗಳೆ ಚಾರುಲೀಲೆ| ಪೂಸ -
ಕುಸುಮವೆಕ್ಕೆಗಿಡದೆಲೆ ಮ್ಯಾಲೆ||
ಚೆಲ್ಲಿದ ತೊರನಂತೆ ಬಾಲೇ ವನ -
ದಲ್ಲಿ ಸಿಲ್ಕಿಹಳೊ ಮುನಿಯ ಕರದಲ್ಲೆ ||೧||

ಮಂಜುಳ ಮೃದು ನುಡಿಯುವಳು | ದೇವ-
ನಂಜುಂಡನಡವಿಯೊಳ್ ಮದನನ ಶುಕಳು||
ಪಂಜರವಗಲಿ ಬಂದಿಹಳು | ಬಹ-
ಳಂಜಿಕೊಂಡಿಹಳೊ ತಾಪಸಕಷ್ಟಕವಳು ||೨||

ಪೊಳೆಯಸೆಳವಿನೊಳ್ ಬಂದಿರುವ | ಸಣ್ಣ
ಮಳಲೊಳ್ ಸಿಲ್ಕಿಹ ರತ್ನದ್ಧರಳಂತೆ ಪೊಳೊವಾ||
ಚೆಲುವ ಸುದತಿಯಳ ಇರವ | ನೋಡಿ
ಬಳಲುವೆ ಬಲ್ಲವನಿಕೆ ಕೇಳ್ಪತ್ಯಯವಾ ||೩||

ಪಲ್ಲವಿ ಮತ್ತು ಮೊದಲನೇ ನುಡಿಯು ಮೂಲ 'ಸುರಯುವತಿ ಸಂಭವಂ ಕಿಲ ಮುನೇರಪತ್ಯಂ (-೨.೮' -) ಪದ್ಯಕ್ಕೆ ಸಮೀಪವರ್ತಿ ಆಗಿವೆ. ಮೂಲಪದ್ಯದ ಟೀಕೆಗಳಲ್ಲಿ ಶಕುಂತಲೆಯನ್ನು ನವಮಾಲಿಕಾ ಕುಸುಮಕ್ಕೂ ಕಣ್ವರನ್ನು ಎಕ್ಕೆ ಗಿಡಕ್ಕೂ ಹೋಲಿಸಿರುವುದು ದುಷ್ಯಂತನಿಗೆ ಅವರಲ್ಲಿ ಗೌಣ ಭಾವವಿದ್ದಿತೆಂದಲ್ಲ; ಶಕುಂತಲೆಯಲ್ಲಿ ಬೆಳೆಯುತ್ತಿದ್ದ ಆಸಕ್ತಿ ಅವನಿಂದ ಹಾಗೆ ನುಡಿಸಿದೆಯೆಂಬ ಸಮರ್ಥನೆ ಇದೆ. ಎರಡು ಮೂರನೇ ನುಡಿಗಳು ಚುರಮುಂ ಸ್ವತಂತ್ರವು. "ದೇವ ನಂಜುಂಡ ನಡವಿಯೊಳ್ ಮದನನ ಶುಕಳು ಪಂಜರವಗಲಿ ಬಂದಿಹಳು" ಬಗ್ಗೆ ಕುಮಾರಸಂಭವ ಕಾವ್ಯದಲ್ಲಿ ಮದನ ಮತ್ತು ಅವನ ಸಂಗಾತಿ ವಸಂತ ಶಿವನ ತಪಸ್ಸನ್ನು ಕೆಡಿಸುವುದಕ್ಕಾಗಿ ಶಿವನು ಸಮಾಧಿಸ್ಥನಾಗಿ ಕುಳಿತು ತಪೋವನದತ್ತ ಸಾಗಿದ ಸಂದರ್ಭಕ್ಕೆ ಸಂಬಂಧಿಸಿದೆ. ಮದನ ವಸಂತರ ಪ್ರಭಾವದಿಂದ ಎತ್ತ ನೋಡಿದತ್ತೆಲ್ಲ ಕಾಮಸಂಚಾರ ಮಂದಮಾರುತ ಸರ್ವತ್ರ ಸುಗಂಧವನ್ನು ಬೀರತೊಡಗಿದನು. ಗಿಡ ಬಳ್ಳಿಗಳು ಹೂತು ಬಂದವೆಲ್ಲವು ತಬ್ಬಿಕೊಂಡವು. ಮೃಗ, ಪಕ್ಷಿ, ಹೆಚ್ಚೇಕೆ ತಪಸ್ಸಿಗೆ ಕುಳಿತ ಋಷಿಮುನಿಗಳಲ್ಲಿ ಶಿವಗಣಗಳಲ್ಲಿ ಕೂಡ ಕಾಮಬಾಧೆ ಉನ್ಮಾದವನ್ನೆಬ್ಬಿಸತೊಡಗಿತು. ಶಿವನ ತಪೋಭಂಗಕ್ಕಾಗಿ

ಮದನ ವಸಂತರು ಸಜ್ಜುಗೊಳಿಸಿಕೊಂಡ ಸಾಧನ ಸಾಮಗ್ರಿಗಳಲ್ಲಿ ಒಂದಿದ್ದ ಗಿಳಿ ಪಂಜರದಿಂದ ಹೇಗೊ ತಪ್ಪಿಸಿಕೊಂಡು ಶಕುಂತಲೆಯ ರೂಪದಲ್ಲಿ ಇಲ್ಲಿ ಬಂದಿದೆ ಎಂದು ಉತ್ಪ್ರೇಕ್ಷಿಸಿದ್ದಾರೆ ಚುರಮರಿ. ಮೇನಕೆ ಹೆಣ್ಣು ಮಗುವಿಗೆ ಜನ್ಮ ಕೊಟ್ಟು ಅದನ್ನು ಅಲ್ಲಿಯೇ ಬಿಟ್ಟು ಹೋದನಂತರ ಶಕುಂತ ಪಕ್ಷಿಗಳು ಆ ಮಗುವನ್ನು ರಕ್ಷಿಸುತ್ತಿದ್ದವು; ಅಷ್ಟರಲ್ಲಿ ಅಕಸ್ಮತ್ತಾಗಿ ಅಲ್ಲಿಗೆ ಬಂದ ಕಣ್ವರು ಕನಿಕರದಿಂದ ಅದನ್ನೆತ್ತಿಕೊಂಡು ತಮ್ಮ ಆಶ್ರಮದಲ್ಲಿ ಮಗಳಂತೆ ಸಾಕಿ ಸಲಹಿದರು; ಶಕುಂತ ಪಕ್ಷಿಗಳಿಂದ ರಕ್ಷಿಸಲ್ಪಟ್ಟಿದ್ದರಿಂದ ಆ ಮಗುವಿಗೆ ಶಕುಂತಲೆ ಎಂಬ ಹೆಸರು ಬಂದಿತೆಂಬುದು ಪ್ರಸಿದ್ಧವಿದೆ. ಮೂರನೇ ನುಡಿಯಲ್ಲಿರುವ 'ಪೊಳೆಯ ಸೆಳವಿನೊಳ್ ಬಂದಿರುವ| ಸಣ್ಣ ಮಳಲೊಳ್ ಸಿಂಹ ರತ್ನ' ಮಾತಿನಲ್ಲಿ ಚುರಮರಿ ಶಕುಂತಲೆ ಕಣ್ವರಿಗೆ ಅಕಸ್ಮತ್ತಾಗಿ ದೊರೆತಳೆಂಬ ಪಮಂತಿಯೊಂದಿಗೆ ಅವಳ ಲಾವಣ್ಯಾತಿಶಯ ಸಂದರ್ಭದಲ್ಲಿ; ಅವಳೊಂದು 'ಪೊಳೆವ ರತ್ನ' ಎಂದು ಬಣ್ಣಿಸ ಮೂಲ ಪದ್ಯದ ಸೌಂದರ್ಯವನ್ನು ದ್ವಿಗುಣಿತವಾಗಿಸುವರು.

ಶಕುಂತಲೆಯ ಮೋಹದಿಂದ ದುಷ್ಯಂತನನ್ನು ಪರಾವೃತ್ತಗೊಳಿಸಲು ವಿದೂಷಕ ಅಂತಃ ಪುರದಲ್ಲಿ ಬೇಕಾದಷ್ಟು ಸೌಂದರ್ಯವತಿಯರಿರುವಾಗ "ಕಜ್ಜೂರ ತಿಂದ ತಿಂದ ಕಣಗೆಟ್ಟ ಹುಣಸೇ ಹಣ್ಣ ತಿನ್ನುವನ್ಹಾಂಗ ಮಾಡತೀ" ನೀ ಎನ್ನುವನು. ಇದು ಗ್ರಾಮ್ಯದಲ್ಲಿರುವ ಮೂಲದ ಪರಿವರ್ತನ. ದುಷ್ಯಂತ: ಹಾಗಲ್ಲೊ, ಇನ್ನೂ ನೀನು ಅವಳನ್ನು ನೋಡಿಲ್ಲವಾದ್ದರಿಂದ ಹೀಗೆನ್ನುತ್ತೀ, ಕೇಳು:

ಬಣ್ಣಿಸಲ್ಯಾಂಗಿನ್ನು | ನುಡಿಯಲಿ ಲಾವಣ್ಯದ ಖಣಿಯನ್ನು.... ಇ.

- ಹಿಂದಣ ಪ್ರಕರಣದಲ್ಲಿ ಈ ಹಾಡು ಮೂಲ, ಬಸವಪ್ಪ ಶಾಸ್ತ್ರಿಗಳ ಅನುವಾದ ಮತ್ತು ಚುರಮರಿಯವರ ಅನುವಾದ ಮೂರನ್ನು ಉದಾಹರಣೆಯೆಂದು ಪೂರ್ಣರೂಪದಲ್ಲಿ ಕೊಟ್ಟಿದ್ದರಿಂದ ಜಿಜ್ಞಾಸುಗಳು ಅಲ್ಲಿ ಅವುಗಳ ಸೌಂದರ್ಯವನ್ನು ಸವಿಯಬಹುದು. ಮಂದಣರು 'ಅನಾಘ್ರಾತಂ ಪುಷ್ಪಂ ಕಿಸಲಯ ಮಹಿನಂಕರರು ಹೈಃ, (೨-೧೦ ಪದ್ಯ). ಅವಿವಾಹಿತ ಕನ್ಯೆಯ ದೈಹಿಕ ಶೃಂಗಾರದ ಮೋಹಕ ಬಣ್ಣನೆ. ಕಾಲೇಜುಗಳಲ್ಲಿ ಸಂಸ್ಕೃತವು ಕಡ್ಡಾಯದ ವಿಷಯವಿದ್ದಾಗ ಈ ಪದ್ಯವನ್ನರಿಯದ ವಿದ್ಯಾರ್ಥಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಎಂದರೆ ತಪ್ಪಾಗದು.

ಚುರಮರಿ ಇದನ್ನು ಹಾಡಿನಲ್ಲಿ ಪರಿವರ್ತಿಸಿರುವರು. ಪಲ್ಲವಿ ಬಿಟ್ಟು ಮಿಕ್ಕಿದ್ದೆಲ್ಲ ಮೂಲದ ಸರಳಾನುವಾದ -

ಮೀಸಲು ದೇಹದ ಬಾಲೆ ಮೋಹಿಪ ಲೀಲೆ | ಅವಳು
ಮಾಸುವಳೆಂದೆನ್ನ ಮನಸು ಮುಚ್ಚಿಹದಿಲ್ಲೆ ||ಪ||
ಮಘಮಘಿಸಾ ಕುಸುಮವ್ಯಾರೂ ಮೂಸೀ ನೋಡಿಲ್ಲಾ ||ಅವಳು||
ಉಗುರು ನಂಬಿಸದ ಎಳೆಯ ಚಿಗುರು ಕೇಳಯ್ಯ ||೧||
ಎಜ್ಜವಿನ್ನೂ ಮಾಡದಿಹ ಮುತ್ತು ಕಾಣಯ್ಯ ||ಎನ್ನ||

ಗುಜ್ಜಾರೆ ತಾನಚ್ಚ ಜೇನು ಯಾರೂ ಸವಿದಿಲ್ಲ ||೨||
ಈ ವಸುಧೆಯೊಳು ಇಂಥ ಪೂರ್ವ ಪುಣ್ಯದ ದೃಶ್ಯ|
ನ್ಯಾವನಿಹನೊ ಇವಳ ಪುರುಷ ವಿಧಿಯೆ ತಾ ಬಲ್ಲ ||೩||

ದುಷ್ಯಂತನ ಬಣ್ಣನೆ ಕೇಳಿ ವಿದೂಷಕ 'ನನ್ನ ಬಿಡ್ಯಾ ನಿನ್ನ ಹೊರ್ತ ಅದ್ಯಾವ ಭೂಮೀ ಮ್ಯಾಗ ಪುಣ್ಯವಂತಾ? ವನರ ಹಂಚಿಕೆ ಮಾಡಿ ಗಡಾ ನಿನ್ನ ಹಂತ್ಯಾಕ ಎಳಕೋ ನೋಡ. ಇಲ್ಲಿ ರಕ ಜಡಿಗೆಲ್ಲಿಂಗಳೀ ಎಣ್ಣೆ ಬಡಕೊಂಡ ಕ್ಯಾಸ ತಲಿ ಮಾಸಿದ ಮುನಿ (ಋಷಿ) ಯಾವನಾರ ನೆಗವಿಕೊಂಡ ನಡವಾನ. ಹೇಳಿರತೇನ ಮಲ್ತೇಗ', ಎಂದು ನಗೆ ಮಾತಾಡಿ ಶಕುಂತಲೆಯ ಅಭಿಪ್ರಾಯವೇನೆಂದು ಕೇಳುವನು. ಅದಕ್ಕೆ ದುಷ್ಯಂತ ಮುನಿಕನ್ಯೆಯರು ಜಾತ್ಯಾ ಸಂಕೋಚ ಶೀಲೆಯರು. ಆದರೂ ಅವಳು ಮನಸ್ಸಿನೊಳಗಿನ ಭಾವವನ್ನು ಪೂರ್ಣವಾಗಿ ವ್ಯಕ್ತಪಡಿಸಲೂ ಇಲ್ಲ ಮರೆಮಾಚಲೂ ಇಲ್ಲ ಎಂದು ಕೆಳಗಣ ವೃತ್ತವನ್ನು ಹೇಳುವನು -

ಎನ್ನಂ ನೋಡಲು ಲಜ್ಜೆಯಿಂ ಬಳಿಗೆ ನಿಲ್ಲಳ್ ತಾಳ್ದಪಳ್ ಮೌನಮಂ
ತನ್ನೊಳ್ ತಾನೆ ನಗುತ್ತ ಲಸ್ಯ ನೆವದಿಂ ಕಳ್ಗಟ್ಟಿಯಿಂ ನೋಡ್ಪಪಳ್|
ಅಣ್ಣಂ ಕಾಮನು ಚೇಷ್ಟೆಯಂಗೊಳಿಸೆ ಮೈಯೊಳ್ ಭಾವಗಳ್ ಮಾಟಕೇಳ್
ಹೆಣ್ಣು ಮಾನದ ಹಣ್ಣು ಮಾಳ್ಕತೆಯಿಂ ಪತ್ತೊತ್ತಿಪಳ್ ತೋರಳ್ ||

ಮೂಲದ 'ಅಭಿಮುಖೇಮಯಿ ಸಂಹೃತಮೀಕ್ಷಿತಂ - (೨. ೧೧) ಪದ್ಯದ ಭಾವಾನುವಾದ. ಮೂಲದಲ್ಲಿರುವ 'ವಿನಯವಾರಿತ ವೃತ್ತಿ(ಸ್ತ್ರೀ ಸಹಜ ಸಂಕೋಚ ವೃತ್ತಿ) ಪದಕ್ಕೆ ಚುರುಮುರಿ ಬಳಸಿದ ಹೊಸಬಿಯಂತಿರುವ 'ಹೆಣ್ಣುಂ ಮಾನದ ಹಣ್ಣುಂ' ಪದಗಳನ್ನು ಗಮನಿಸುವುದು.

ದುಷ್ಯಂತನ ಮಾತಿನಿಂದ ಶಕುಂತಲೆ ಕೂಡ ಅವನಲ್ಲಿ ಅಷ್ಟೇ ಅನುರಕ್ತಳಾಗಿರುವುದನ್ನು ಮನಗಂಡು ವಿದೂಷಕ 'ಅವಳು ಮುತ್ತಿನ್ಹೇನ ಮಾಡಬೇಕಂತೆ? ಕಂಡಗಳಿಗ್ಗೆ ಬಂದ ಕ್ಯಾಸ ತೊಡಿಮ್ಯಾಗ ಕುಂತ ಕಸೀ ಬಿಚ್ಚಬೇಕೇನ?' ಎಂದು ಮೂದಲಿಸುವನು. 'ಕಸಿ ಬಿಚ್ಚಬೇಕೇನ' ಮಾತು ಚುರುಮುರಿ ಸ್ವಂತದ್ದು. ಗ್ರಾಮ್ಯ ವಿನೋದದ ಸ್ವಾರಸ್ಯಪೂರ್ಣ ಮಾದರಿ.

ದುಷ್ಯಂತನಿಗೆ ಇನ್ನೂ ಕೆಲವು ದಿನ ಅಲ್ಲಿಯೇ ಇರಬೇಕಾಗಿದೆ. ಅದಕ್ಕಾಗಿ ಸೂಕ್ತ ಕಾರಣವನ್ನು ಹುಡುಕುತ್ತಿರುವಾಗ ಋಷಿ ಕುಮಾರರೀರ್ವರು ಬಂದು ಕಣ್ವರ ಅನುಪಸ್ಥಿತಿಯಲ್ಲಿ ರಾಕ್ಷಸ ಬಾಧೆ ಹೆಚ್ಚತೊಡಗಿದೆ, ಅದನ್ನು ತಡೆಗಟ್ಟಬೇಕೆಂದು ವಿನಂತಿಸಿಕೊಳ್ಳುವರು. ದುಷ್ಯಂತನಿಗೆ ಅಷ್ಟೇ ಬೇಕಿತ್ತು. ಆಗಲಿ, ಎನ್ನುವನು. ವಿದೂಷಕ ದುಷ್ಯಂತನಿಗೆ (ಮೆಲ್ಲನೆ) 'ಈ ಮಾತ (ಋಷಿ ಕುಮಾರರ ವಿನಂತಿ) ನಿನಗೆ ಈ ಹೊತ್ತಿನ್ಯಾಗ ಪಳೀ ಮನಸಿಗೆ ಬಂತ್ಯಾಕ? ಎಂದು ಮೂದಲಿಸುವನು. ಇಷ್ಟೇನು ಸಮಸ್ಯೆ ಬಗೆಹರಿಯಿತೆನ್ನುವಷ್ಟರಲ್ಲಿ ಮತ್ತೊಂದು ತಲೆ ಎತ್ತುವುದು. ರಾಜಮಾತೆ ಕೈಕೊಂಡ ವ್ರತ ಹಿಂದ ಬಾವನ ವ್ರತದ ಪಾರಣೆ ಇದು. ಅದಕ್ಕಾಗಿ ಬೇಗ್ನ ಹೊರಟು ಬರಬೇಕೆಂದು ಕರೆ ಬರುತ್ತದೆ. ದುಷ್ಯಂತನಿಗೆ ಮತ್ತೆ ಪೇಚಾಟ. ಕೊನೆಗೆ ತನ್ನ ಬದಲಾಗಿ ಪುತ್ರ

ಕರ್ತವ್ಯವನ್ನು ನಿರ್ವಹಿಸಲು ವಿದೂಷಕನನ್ನು ಕಳಿಸಲು ನಿಶ್ಚಯಿಸಿ ತಪಸ್ವಿಗಳ ರಕ್ಷಣೆಗಾಗಿ ತಾನು ಅಲ್ಲಿಯೇ ನಿಲ್ಲುವನು. ವಿದೂಷಕ ವಾಚಾಳಿ. ಅವನಿಂದ ಶಕುಂತಲೆಯಲ್ಲಿ ತಾನು ಅನುರಕ್ತನಾಗಿರುವದು ಅಂತಃಪುರದಲ್ಲಿ ತಿಳಿದು ಸವತಿ ಮತ್ಸರದ ಬೇಗೆ ಏಳಬಹುದೆಂದು ಹೊರಡುವ ಮುನ್ನ ವಿದೂಷಕನನ್ನು ಕರೆದು: ಮಿತ್ರ ನಾನು ಇಲ್ಲಿಯೇ ಉಳಿಯುವದು ಋಷಿಗಳ ರಕ್ಷಣೆಗಾಗಿ, ಶಕುಂತಲೆಗಾಗಿ ಅಲ್ಲ. ಅರಣ್ಯದಲ್ಲಿ ಚಿಗರೆಗಳ ಮಧ್ಯ ಬೆಳೆದ ಅವಳೆಲ್ಲಿ, ಅರಸನಾದ ನಾನೆಲ್ಲಿ; ಇಲ್ಲಿಯವರೆಗೆ ನಾನು ಹೇಳಿದ್ದೆಲ್ಲ ನಗೆಯಾಟ; ನಿಜವೆಂದು ತಿಳಿಯಬೇಡ, ಎಂದು' ಅವನನ್ನು ನಂಬಿಸಿ ಬೀಳ್ಕೊಟ್ಟು ಋಷಿಗಳ ರಕ್ಷಣೆಗಾಗಿ ತೆರಳುವನು.

ದುಷ್ಯಂತನ ರಕ್ಷಣೆಯಲ್ಲಿ ಯಜ್ಞ ಯಾಗಾದಿ ಕರ್ಮಗಳು ಮತ್ತೆ ಸುಸೂತ್ರವಾಗಿ ಸಾಗತೊಡಗಿವೆ. ಬಿಸಿಲಿನ ತಾಪದಿಂದ (ನಿಜವಾಗಿ ಕಾಮಬಾಧೆಯಿಂದ) ಬಳಲುತ್ತಿದ್ದ ಶಕುಂತಲೆಗೆ ಶೀತೋಪಚಾರ ಸಲ್ಲಿಸಲು ಪ್ರಿಯಂವದೆ ಹೊರಟಿದ್ದಾಳೆ. ಕಣ್ವ ಶಿಷ್ಯನೋರ್ವ ಪ್ರಿಯಂವದೆಗೆ ಶಕುಂತಲೆಯನ್ನು ಜತನದಿಂದ ನೋಡಿಕೊಳ್ಳಲು ಹೇಳಿ ಅವಳಿಗಾಗಿ ಗೌತಮಿಯೊಂದಿಗೆ ಶಾಂತ್ಯುದಕವನ್ನು ಕಳಿಸಲು ಯಜ್ಞಶಾಲೆಗೆ ಹೋಗುವನು. ಇತ್ತ ಅಂಥದ್ದೇನು ಕೆಲಸವಿಲ್ಲದೆ ಆಶ್ರಮ ಪರಿಸರದಲ್ಲಿ ಸುತ್ತಾಡುತ್ತಿದ್ದ ಕಾಮಪೀಡಿತ ದುಷ್ಯಂತನಿಗೆ ಶಕುಂತಲೆಯನ್ನು ಕಾಣುವ ಆತುರತೆ ಹೆಚ್ಚಿ ಬಹುಶಃ ಆಕೆ ಮಾಲಿನೀ ತೀರದಲ್ಲಿರುವ ಲತಕುಂಜದಲ್ಲಿರಬೇಕೆಂದು ಅತ್ತ ತಿರುಗುವನು. ಲಂತಾಮಂಟಪ ದ್ವಾರದಲ್ಲಿ ಬಿಳಿ ಮಳಲಿನಲ್ಲಿ 'ನಿತಂಬ ಭಾರದಿಂದ ಹಿಮ್ಮಡಿಗಳೊತ್ತಿ ಮೂಡಿದ' ಹೆಜ್ಜೆಗಳನ್ನು ಕಂಡು ಅವು ಶಕುಂತಲೆಯವೇ ಇರಬೇಕೆಂದು ಒಳಗೆ ಪ್ರವೇಶಿಸುವನು. ಶಕುಂತಲೆ ಹೂವ್ವಾಸಿಗೆಯ ಮೇಲೆ ಒರಗಿದ್ದಾಳೆ. ಗೆಳತಿಯರು ಶೀತೋಪಚಾರ ನಡೆಸಿದ್ದಾರೆ. ಗಾಳಿ ಬೀಸುತ್ತ ಅವರು ಸಖಿಯೇ. ಈ ಕಮಲಪತ್ರದ ಬೀಸಣಿಕೆಯಿಂದ ಸ್ವಲ್ಪಾದರೂ ಸಮಾಧಾನವಾಗುವದೇ? ಎಂದು ಕೇಳಿದಾಗ ಶಕುಂತಲೆ: ಗೆಳತಿಯರಾ ಗಾಳಿ ಬೀಸುತ್ತೀರಾ? ಎಂದು ಕೇಳುತ್ತಾಳೆ. ಅಷ್ಟೊಂದು ತೀವ್ರವಾಗಿದೆ ಅವಳ ಬಾಧೆ. ಅದು ಕಾಮಬಾಧೆ ಇರಬೇಕೆಂದು ಅವರು : 'ಅಮ್ಮಾ, ನಮಗಂತೂ ಮದನ ಪ್ರಕರಣದಲ್ಲಿ ವಿಶೇಷ ಜ್ಞಾನವಿಲ್ಲ. ಕಥೆ ಪುರಾಣಗಳಲ್ಲಿ ಕೇಳಿದ ಕಾಮಿಗಳಂತೆ. ನಿನ್ನ ಅವಸ್ಥೆಯಾಗಿದೆ. ಇದ್ದದ್ದನ್ನು ಹೇಳು. ವಿಕಾರ ತಿಳಿಯದೆ ಚಿಕಿತ್ಸೆ ಮಾಡುವಂತಿಲ್ಲ', ಎಂದು ಆಗ್ರಹಪಡಿಸುವರು. ಪ್ರಿಯಂವದೆಯಂತೂ 'ಸಖಿಯೇ, ಶಕುಂತಲಾ, ನಮ್ಮ ಮಾತಿಗೆ ಉತ್ತರವೇ ಇಲ್ಲೇನೆ? ಕೂಸಿನ ಹಾಗೆ ಮಾಡುತ್ತೀಯಲ್ಲೇ? ಪ್ರಾಯಕ್ಕೆ ಬಂದೆವ್ವಾ. ಇನ್ನು ಮೇಲೆ ನಿನ್ನ ಜೀವವನ್ನು ನೀನೇ ಕಾಯಬೇಕು; ನೋಡಿದೆಯಾ ನಿನ್ನ ಅವಯವಗಳೆಲ್ಲ ಕೃಶವಾಗುತ್ತ ನಡೆದಿವೆ. ಲಾವಣ್ಯ ಮಾತ್ರ ಉಳಿದಿದೆ,' ಎನ್ನುವಳು. ಮರೆಯಲ್ಲಿ ನಿಂತು ಕೇಳುತ್ತಿದ್ದ ದುಷ್ಯಂತ ತನ್ನೊಳಗೆ ಶಾಬಾಸ್ ಪ್ರಿಯಂವದಾ! ಯಥಾಸ್ಥಿತವಾಗಿ ಮಾತಾಡಿದೆ, ಎಂದುಕೊಳ್ಳುವನು. ಶಕುಂತಲೆಯ ಉತ್ತರಕ್ಕಾಗಿ ತಡೆದುಕೊಳ್ಳಲಾರದಷ್ಟು ಅವನ ಕಾತರತೆ ಹೆಚ್ಚುವದು. ಮೂಲದಲ್ಲಿಯ 'ಕ್ಷಾಮಕ್ಷಾಮಕಪೋಲಮಾನನಮುರಃ...' ಸಮದುಃಖ ಸುಖೇನ ಬಾಲಾ - (೩.೯) ಪದ್ಯದ ಭಾವವಿಸ್ತರಣ -

ಏನೆಂದು ದೇವಿ ನುಡಿವಳಯ್ಯೋ| ಕೇಳು -
ವಾನಂದ ವಲ್ಲದಂಜುವೆನಯ್ಯೋ ||ಪ||
ಚಾಲುವರಿವರು ಬಳಿಯ ನಿಂತು | ಜೀವ
ದೋಲು ತಿಳಿವ ಗೆಳತಿಯರಿಂತು ||
ಪೇಳದಿರಳು ಮನಸಿನ ಮಾತು| ಇನ್ನು
ಮೇಲೆನ್ನ ದೈವವು ತಿಳಿದೀತು ||೧||

ಕಣ್ಣಿನಿಂದಲೆ ಮಮತೆಯ ದೋರೀ ಭಾವ
ವನ್ನೆ ಕಾಣಿಸಿಹಳೊ ಒಯ್ಯಾರಿ||
ಇನ್ನೇನೆಂಬವಳೊ ಲಜ್ಜೆಯ ಮೀರಿ | ಮನ-
ಸಿನ್ನೂ ಬಿಡದು ಸಂಶಯ ಭಾರಿ ||೨||

ಅಲರಂಬು ಗಣೆಯ ಮೇಲಿಹೆ ನಿಂದು| ಎಡ
ಬಲದೊಳು ದುಃಖ ಸುಖದ ಸಿಂಧು||
ತಿಳಿಯೆನಿವಳ ನುಡಿಗಳು ಬಂದು| ಎನ್ನ
ಎಲರಿನೋಪೆತ್ತ ನೂಕುವವಿಂದು ||೩||

- ಮೊದಲಿನ ಎರಡು ನುಡಿಗಳು ಮೂಲಕ್ಕೆ ಸಮೀಪವರ್ತಿಯಾಗಿವೆ. ಮೂರನೇದು ಚುರಮುರಿ ಸ್ವಂತದ್ದು. ಎಡಬಲ ಸುಖದುಃಖ ಸಮುದ್ರಗಳ ಮಧ್ಯದಲ್ಲಿ ಮನ್ಮಥನ ಹೂವಿನ ಬಾಣದ ತುದಿಯ ಮೇಲೆ ನಿಂತವನಂತೆ. ಅವಳ ಉತ್ತರದಿಂದ ತಾನೆತ್ತ ಬೀಳುವೆನೋ ಎಂಬ ದುಷ್ಯಂತನ ಮಾತು ಅವನ ಕಾತರತೆಯನ್ನು ತೀವ್ರ ತರವಾಗಿಸಿ ಹಾಡಿನ ಒಟ್ಟಂದಕ್ಕೆ ಹೆಚ್ಚು ಕಳೆ ತಂದಿದೆ.

ಶಕುಂತಲೆ ತನ್ನ ವ್ಯಥೆಗೆ ದುಷ್ಯಂತನೇ ಕಾರಣನೆಂದು ಹೇಳಿದಾಗ ಅವನ ಮನಸ್ಸು ಹಗುರಾಗಿ ಅವರೆಗೆ ಬಾಧಿಸುತ್ತಿದ್ದ ಮನ್ಮಥ ಈಗ ತಾನೆ ದಯೆದೋರಿದನೆಂದು ಹರುಷದಿಂದ ಹೇಳಿಕೊಳ್ಳುತ್ತಾನೆ. ಇತ್ತ ಗೆಳತಿಯರು ಅವರೀರ್ವರ ಸಮ್ಮಿಲನಕ್ಕಾಗಿ ಗುಪ್ತ ಸಂಧಾನ ನಡೆಸುತ್ತಾರೆ. ಪ್ರಿಯಂವದೆ 'ಶಕುಂತಲೆ ಒಂದು ಪತ್ರ ಬರೆಯಲಿ; ದೇವತಾ ನಿರ್ಮಾಲ್ಯವೆಂದು ಹೂವುಗಳಲ್ಲಿ ಮುಚ್ಚಿ, ಅದನ್ನು ದುಷ್ಯಂತನಿಗೆ ಮುಟ್ಟಿಸುತ್ತೇನೆ ಎನ್ನುತ್ತಾಳೆ. ಶಕುಂತಲೆ ಕಂಟ ಕಮಲ ಪತ್ರಗಳನ್ನು ಸಜ್ಜಾಗಿಸಿಕೊಂಡು ಏನು ಬರೆಯಬೇಕೆಂಬ ಯೋಚನೆಯಲ್ಲಿ ತೊಡಗುತ್ತಾಳೆ. ಮರೆಯಲ್ಲಿದ್ದ ದುಷ್ಯಂತ ಶಕುಂತಲೆಯ ಆಗಿನ ಮುಖಭಂಗಿ-ಭಾವಗಳು ತನ್ನಲ್ಲಿದ್ದ ಆಕೆಯ ಅನುರಾಗವನ್ನು ಸೂಚಿಸುತ್ತವೆಂಬ ಬಣ್ಣನೆ ಇರುವ ಒಂದು ಆರ್ಯೆಯನ್ನು ಹೇಳುತ್ತಾನೆ. ಶಮ್ಮದು ಅನುಕೃತಿ ಇದ್ದರೂ ಚುರಮುರಿ ಅದನ್ನು ಸ್ವತಂತ್ರವೆನಿಸುವಂಥ ಒಂದು ಸುಂದರ ಹಾಡಿನಲ್ಲಿ ವರ್ಣಿಸಿರುವರು. ಹೀಗೆ -

ಪದವ ರಚಿಸುತಿಹಳು ಚಂದಿರವದನೆ ಮನದೊಳು|
ಹೃದಯದಾಸೆದೋರಲು ಬಲು | ಹೆದರಿ | ಬೆದರಿ | ಚದುರಿ | ಮಧುರಿ ||ಪ||
ಕರದಿ ಗಲ್ಲವಿರಿಸಿ ಒಂದು ಕಡೆಗೆ ನೋಡುತಾ|
ಬೆರಳಿನಿಂದ ಮೆಲ್ಲನೆ ಮೃದು ತಾಳ ಮೆಟ್ಟುತಾ||
ಸಿರವನೊಲಿಯೆ ಫಣೆಯೊಳು ಕರಿ-
ಸುರುಳು ಗುರುಳು ಉರುಳುತಿರಲು ||೧||

ತವಕದಿಂದ ಉಚಿತ ಸೂಚಿಸಿರಲು ಹಿಗ್ಗುತಾ|
ಕವನರಸದಿ ಕೆನ್ನೆಯೊಳು ಮುಳ್ಳು ನಾದುತಾ||
ಕವಿಯೆ ಬಾಷ್ಪ ಕಣ್ಣೊಳುಕ್ಕು-
ತಿವೆ ತನುಪತಿ ನವ-ಯುವತಿ ||೨||

ಒಂದೆ ಭ್ರೂಲತೆಯ ಬಾಲೆ ಮೇಲಕ್ಕೆತ್ತುತಾ|
ಹೊಂದಿ ಬರಲು ರಚನೆ ಸಣ್ಣ ಸ್ವರದಿ ನುಡಿಯುತಾ||
ಬಂಧನ ಸೌಂದರಿಯದಾ -
ನಂದದಿಂದ ಮಿಂದು ಒಂದು ||೩||

ಪತ್ರದಲ್ಲಿ ಶಕುಂತಲೆ 'ಬಾ ಬಿಡಿಸೊ ಮೋಹನ್ನಾ| ಅಂಗಜ ತಾಪದಿಂದೆನ್ನ' ಎಂದು ತೊಡಗುವ ಪದವನ್ನು ರಚಿಸಿ ಬರೆದಾದ ಬಳಿಕ ಸಖಿಯರಿಗೆ ಓದಿ ತೋರಿಸುವದಿಷ್ಟೇ ತಡ; ದುಷ್ಯಂತ - 'ಬಂದೆ ಕಾಮಿನಿ ಮಣಿಯೆ| ಕುಸುಮ ಬಾಣಕೆ ನೊಂದ ಜಾಣೆಯೆ| ನಿಷ್ಠುರ ಮದನನೆನ್ನನು ದಹಿಸುವನೆ' ಪದವನ್ನು ಹಾಡುತ್ತ ಶೀಘ್ರದಿಂದ ಮುಂದುದು ಪ್ರಕಟನಾಗುವನು.

ಎರಡೂ ಹಾಡುಗಳು ಮೂಲದಲ್ಲಿಯ 'ತವನಜಾನೇ ಹೃದಯಂ, ಕಾಮಃ ಮತ್ತು ಅಂಗಾನಿ ದಿವಾ ಲಿಪಿ ರಾತರಪಿ ಲಿಪಿ ತಪತಿ, ೩. ೧೪' ಮತ್ತು 'ಹೇ ತನುಗಾತ್ರಿ, ಮದನಃ ತ್ವಾಂ ತಪತಿ, ಮಾಂ ಪುನಃ ಅಹರ್ನಿಶಂ ದಹತಿ ಏವ್ಮ, ದಿವಸಃ ಯಥಾ ಶಶಾಂಕಂ ಗ್ಲಪಯತಿ ತಥಾ ಕುಮುದ್ವತೀಂ ನ, - ೩.೧೫ - ಪದ್ಯಗಳ ಭಾವವಿಸ್ತರಣ. ಟೀಕಾಕಾರರು ಇಲ್ಲಿ ಪ್ರಯುಕ್ತವಾದ 'ತಪತಿ', 'ದಹತಿ' ಮತ್ತು ಹಗಲಿನಲ್ಲಾಗುವ ಚಂದ್ರನ ಸಂಪೂರ್ಣ ಹಾಗೂ ಕನ್ನೆಯ್ದಿಲೆಯ ಅಂಶತಃ ಕಾಂತಿ ಹೀನತ್ವ - ಶಬ್ದ ಮತ್ತು ಮಾತುಗಳನ್ನು ಬೆರಳಿಟ್ಟು ತೋರಿಸಿ ಇದು ಸ್ತ್ರೀಯರಿಗಿಂತ ಪುರುಷರ ವಿಷಯದಲ್ಲಿ ಮನ್ಮಥ ಹೆಚ್ಚು ನಿಷ್ಠುರನೆಂಬುದರ ಪರೋಕ್ಷ ಅಭಿವ್ಯಕ್ತಿ ಎಂದಿರುವರು. ಚುರಮುರಿ ಕೂಡ ತಮ್ಮ ಅನುವಾದದಲ್ಲಿ ದುಷ್ಯಂತನ ಹಾಡಿನಲ್ಲಿ 'ತಮೋಪಹನು ಚೆಲುವ ಕುಮುದಿನಿಗಿಂತ ಚಂದ್ರಮನ ಕೇಳ್ ಕಳೆಗುಂದಿಸುವನೆ' - ಮೂಲಕ್ಕೆ ಸರಿಹೋಗುವ ಮಾತನ್ನು ಸೇರಿಸಿರುವರಲ್ಲದೆ:

ಸಮ ದುಃಖಿಗಳು ನಾವು ಸಖಿಯೆ ಕೂಡಿದೆವಿನ್ನು|
ಸುಮಶರನನು ಸೋಲಿಸುವೆವೆ ||

ಈ ಪೆಚ್ಚಿನ ಮಾತಿನಿಂದ ಹಾಡಿಗೆ ಮುಕ್ತಾಯ ಕೊಟ್ಟು ಸ್ವದೇಶದ ಸೊಬಗಿಗೆ ಇನ್ನಷ್ಟು ಕಳೆ ತುಂಬಿರುವರು. ದುಷ್ಯಂತನ ಆಗಮನದಿಂದ ಆನಂದಿತರಾದ ಸಖಿಯರು ಎದ್ದು ನಿಂತು ಅವನನ್ನು ಸ್ವಾಗತಿಸುವರು. ಶಕುಂತಲೆಯ ಅವಸ್ಥೆಯನ್ನು ತಿಳಿಸಿ ಅವಳ ಭವಿತವ್ಯದ ಬಗ್ಗೆ ಪ್ರಸ್ತಾಪಿಸಿರುವರು. ದುಷ್ಯಂತ : ಭೂಮಿ ಮತ್ತು ಶಕುಂತಲೆ ಈರ್ವರನ್ನು ಬಿಟ್ಟು ನನಗೆ ಮೂರನೆಯ ಒಡತಿ ಇಲ್ಲ; ಎವೆಗಳು ಕಣ್ಣುಗಳನ್ನು ಪೊರೆವಂತೆ ಅವಳನ್ನು ಪೊರೆಯುವೆನು ಎಂದು ಭರವಸೆ ಕೊಡುವನು. ಎರಡನೆಯದು ಚುರುಮುರಿ ಮಾತು. ಈರ್ವರಿಗೆ ಏಕಾಂತ ಕಲ್ಪಿಸಿಕೊಡಲೆಂದು ಗೆಳತಿಯರು ಜಿಗರೆ ಮರಿಯನ್ನು ಅದರ ತಾಯಿಯೊಂದಿಗೆ ಸೇರಿಸುವ ನೆಪ ಹೇಳಿ ಅಲ್ಲಿಂದ ಜಾರಿಕೊಳ್ಳುವರು. ಈರ್ವರ ಸರಸ ಸಲ್ಲಾಪ ಪ್ರಾರಂಭವಾಗುವದು. ಆದರೂ ಆವರೆಗೆ ದುಷ್ಯಂತನಿಗಾಗಿ ಪರಿತಪಿಸುತ್ತಿದ್ದ ಶಕುಂತಲೆ ಪ್ರತ್ಯಕ್ಷ ಆತ ಬಂದಿರುವಾಗ ಸ್ತ್ರೀಸಹಜ ಭಯ ಲಜ್ಜೆಗಳಿಂದ ಹಿಂಜರಿಯತೊಡಗುವಳು. ಇದೇ ವೈಚಿತ್ರ್ಯವೆಂದು ದುಷ್ಯಂತ:

ಹೆಣ್ಣಿನ ಗುಣಗಳಿವೇ | ಚಿಕ್ಕ ಪ್ರಾಯದ ||ಪ||

ತನ್ನೊಳಗಾರ್ತಿಪ | ನನ್ನು ಕೂಡದೆ ಪ್ರೀತಿ |
ಯನ್ನೆ ದೋರುತ ವ್ಯಾಳ್ಯ | ವನ್ನೆಗಳೆವರಯ್ಯಾ ||೧||

ಕಣ್ಣಿನ ಪ್ರೇಮದಿಂ | ಹೊನ್ನು ಸೋಲಿಸುವಲಾ-
ವಣ್ಯದಾಶೆಯೊಳಾಂಕಿ | ಹಣ್ಣು ಮಾಡುವರಯ್ಯಾ ||೨||

ಕಮ್ಮಗೋಲನ ಬಾಧೆ | ತಮ್ಮೊಳು ಹೆಚ್ಚಲು|
ದಮ್ಮನೆ ದಣಿವರು | ಸುಮ್ಮನಿರುವರಯ್ಯಾ ||೩||

ಸುಮಶರನ ದಯದಿ | ಸಮೀಪಿಸಿದನುಕೂಲ|
ಸಮಯದೊಳಂಗಜ | ಸಮರಕಂಜುವರಯ್ಯಾ ||೪||

- ಮೂಲ ಪದ್ಯ ಮತ್ತು ಮುಂದಿನ ಕೆಲವು ಮಾತುಗಳು ಬಂಗಾಲಿ ಸಂಸ್ಕರಣದಲ್ಲಿ ಕಾಣಸಿಗುತ್ತವೆ. ಶಕುಂತಲೆ ಹೋಗತೊಡಗುವಳು. ದುಷ್ಯಂತ ಬೆನ್ನು ಹತ್ತಿ ಸೆರಗು ಹಿಡಿಯುವನು. ಶಕುಂತಲೆ: ಪೌರವರಾಯರೆ, ವಿನಯವಿರಲಿ. ಇದೇನು ಚಂದ? ತಪೋವನದ ನಾಲ್ಕೂ ದಿಕ್ಕುಗಳಲ್ಲಿ ಋಷಿಗಳು ಸಂಚರಿಸುತ್ತಾರೆ, ಎನ್ನುವಳು. ದುಷ್ಯಂತ: ಅವರ್ಕೇಕಿಷ್ಟು ಭಯ? ಗಾಂಧರ್ವ ವಿಧಿಯಿಂದ ಮದುವೆಯಾಗೋಣ. ನಮ್ಮಂಥವರಿಗೆ ಅದು ಶಾಸ್ತ್ರ ಸಮ್ಮತ, ಎಂದು ಆಗ್ರಹಪಡಿಸುವನು. ಆದರೂ ಶಕುಂತಲೆ ಅಲ್ಲಿಂದ ಹೊರಡುವಳು. ಹೋಗುತ್ತ:ತಮ್ಮ ಮಾತು ಕೇಳದಿದ್ದರೂ ಇಷ್ಟು ಮಾತಾಡಿದ ಸ್ನೇಹವನ್ನು ಮಾತ್ರ ಮರೆಯಬಾರದು ಎಂದು ವಿನಂತಿಸಿಕೊಳ್ಳುವಳು.

ದುಷ್ಯಂತ: ಪ್ರಿಯೇ, ಹೇಗೆ ಮರೆಯಲಿ? ಸಂಧ್ಯಾಕಾಲದಲ್ಲಿ ವೃಕ್ಷದ ಛಾಯೆ ಎಷ್ಟು ದೂರ ಹೋದರೂ ಮೂಲವನ್ನು ಹೇಗೆ ಬಿಡುವದಿಲ್ಲವೊ ಹಾಗೆ ನನ್ನಿಂದ ನೀನು ಎಷ್ಟು ದೂರ ಹೋದರೂ ಈ ಹೃದಯವನ್ನು ಬಿಡಲಾರೆ ಬಲ್ಲೆಯಾ, ಎನ್ನುವನು. ಅವನ ಮಾತು ನಿಜವಾಗುವದು. ಶಕುಂತಲೆಯು ಹೆಜ್ಜೆ ಸಾಗದಂತಾಗುವವು. ವಿರಹದಿಂದ ದುಷ್ಯಂತ ಏನು ಮಾಡುವನೆಂಬುದನ್ನು ನೋಡಲು ಒಂದು ಗಿಡದಮರೆಗೆ ನಿಲ್ಲುವಳು. ಶೂನ್ಯವಾದ ಲತಾಮಂಟಪದಲ್ಲಿ ದುಷ್ಯಂತ ಶಕುಂತಲೆಯ ಕೈಯಿಂದ ಕಳಚಿ ಬಿದ್ದ ಮೃಣಾಳ ಕಂಕಣವನ್ನು ಎತ್ತಿಕೊಂಡು ಅಷ್ಟರಿಂದಲೇ ಸಮಾಧಾನ ಹಚ್ಚಿಕೊಳ್ಳಲು ಎತ್ನಿಸುವನು. ಕಂಕಣದ ನೆವ ಮಾಡಿ ಶಕುಂತಲೆ ಮರಳಿ ಬರುವಳು. ದುಷ್ಯಂತನಿಗೆ ಮತ್ತೆ ಜೀವ ಮರುಕಳಿಸಿದಂತಾಗುವದು. ಶಕುಂತಲೆ: ಕಂಕಣವನ್ನು ದಯಮಾಡಿ ಕೊಡಬೇಕು. ಮುನಿಜನರಿಗೆ ತಿಳಿದರೆ ನನ್ನ ಮಾನ ಉಳಿಯಕ್ಕಿಲ್ಲ, ಎನ್ನುವಳು.

ದುಷ್ಯಂತ : ನನ್ನದೊಂದು ಮಾತುಂಟು; ಅದನ್ನು ನಡೆಸಿದರೆ ಸೈ, ನಾನು ತಿರುಗಿ ಕೊಡುತ್ತೇನೆ.

ಶಕುಂ : ಅದು ಯಾವುದು?

ದುಷ್ಯಂತ : ನಾನೇ ಕೈಯಲ್ಲಿಡಿಸುವವನು.

ಶಕುಂ : ಯಾರು ಬ್ಯಾಡೆನ್ನುವರು? (ಮುಂದಕ್ಕೆ ಬರುವಳು).

ದುಷ್ಯಂತ : ಇದನ್ನು ಇಡಿಸಬೇಕಾದರೆ ನಾವು ಮೊದಲೆಲ್ಲಿ ಕುಳಿತಿದ್ದೆವೊ ಅಲ್ಲಿಗೇ ಹೋಗಬೇಕು.

ಶಕುಂ : ಈ ಹೊತ್ತಿನಲ್ಲಿ ನೀವು ಹ್ಯಾಗೆ ಹೇಳುತ್ತೀರಿ ಹಾಗೆ ಕೇಳಬೇಕು. ಉಪಾಯವೇನು? (ಇಬ್ಬರೂ ಲತಾ ಮಂಟಪದಲ್ಲಿಯೇ ಹೋಗಿ ಕುಳಿತುಕೊಳ್ಳುವರು.)

ದುಷ್ಯಂತ : (ಕಂಕಣವನ್ನು ಕೈಯಲ್ಲಿಡಿಸಿ) ಹೇ ಸುಂದರಿ, ನೋಡಿದೆಯಾ, ಈಗ ಈ ಮೃಣಾಳ ವಲಯವು ಬಿದಿಗೆಯ ಚಂದ್ರನು ನಿನ್ನ ಸೌಂದರ್ಯಕ್ಕೆ ನಾಚಿ ಅಂಬರದಿಂದಿಳಿದು ನಿನ್ನ ಕರಭೂಷಣನಾಗಿದ್ದಾನೆಂಬಂತೆ ಕಾಣಿಸುತ್ತದೆ.

ಶಕುಂ : (ಕಣ್ಣು ತಿಕ್ಕುತ್ತ) ನನಗೆ ಕಾಣಿಸುವದಿಲ್ಲ. ಕಣ್ಣ ಕಮಲದ ಎಸಳು ಬಿತ್ತು. ಹಾಯ್ ಉರಿಯುತ್ತದೆ!

ದುಷ್ಯಂತ : (ಮುಗುಳು ನಗೆಯಿಂದ) ನನಗೆ ಅಪ್ಪಣೆ ಕೊಟ್ಟರೆ ಮೆಲ್ಲನೆ ಊದಿ ತೆಗೆಯುತ್ತೇನೆ. ನನ್ನ ಅನಿಸಯ ಶಂಕೆಯಿಂದ ಅಂಜಬೇಡ. (ಅವಳ ಮುಖವನ್ನು ನೋಡುತ್ತ) ಏನು ಅಧರವಣ್ಣಾ ಇದು!

ಶಕುಂ : ವಚನ ಕೊಟ್ಟಿದ್ದನ್ನು ಮುರಿಯುತ್ತೀರೆಂಬಂತೆ ಕಾಣುತ್ತಿದೆ.

ದುಷ್ಯಂತ : ಹೇ ಸುಂದರಿ, ನಿನ್ನ ನೇತ್ರಗಳು ಉತ್ಪಲ ಪುಷ್ಪಗಳೆಂದು ನನಗೆ ಭ್ರಾಂತಿ ಉತ್ಪನ್ನವಾಗುತ್ತದೆ (ಮೆಲ್ಲನೆ ಊದುತ್ತಾನೆ)

ಶಕುಂ : ಹೋಯಿತು. ಈಗ ತಣ್ಣಗಾಯಿತು. ಆರ್ಯಪುತ್ರರು ತಮ್ಮ ವಚನವನ್ನು ಮುರಿಯದಲೆ ಶ್ರಮ ಪಟ್ಟಿದ್ದಕ್ಕೆ ಪ್ರತ್ಯುಪಕಾರವನ್ನು ಏನು ಮಾಡಬೇಕೆಂಬುದು ತಿಳಿಯದೆ ನನಗೆ ನಾಚಿಕೆ ಬರುತ್ತದೆ. ಸಖಿಯರನ್ನು ಕೇಳಿ ಬರುತ್ತೇನೆ, ಬಿಡಬೇಕು. (ಇಲ್ಲಿಂದ ಮುಂದೆ ಬರುವ ಪದ, ಪದ್ಯ ಮಾತುಗಳು ಸಾಮಾನ್ಯವಾಗಿ ಎಲ್ಲ ಸಂಸ್ಕರಣಗಳಲ್ಲಿ ಕಾಣಸಿಗುತ್ತವೆ.)

ದುಷ್ಯಂತ : ಆಮೇಲೆ ಬಿಡುತ್ತೇನೆ.

ಶಕುಂ : ಏನಾದ ಮೇಲೆ?

ದುಷ್ಯಂತ :

ಆ ಮ್ಯಾಲೆ ಬಿಡುವೆ | ಮನೋಹರ | ಕೋಮಲತರ ತನುವೆ ||ಪ||
ಕಾಮಿನಿಕಡು ಎಳೇ ರೋಮಗಳಿಹ ಮೃದು|
ಹೇಮಲತೆಯಚಿಗು- | ರೀ ಮೀಸಲು ದುಟಿ |
ಕಾಮಬಾಧೆಗತಿ | ಶಾಮಕೆಂದು ಸಂ-
ಪ್ರೇಮದಿ ಸವಿಯಲು | ನಾ ಮನದಣಿದು ||ಅ.ಪ.||

....

ಅರುಣನಖದ ಕೈ | ಬೆರಳಿನಿಂದ ಮು-
ಚ್ಚಿರುವ ಗಲ್ಲಮಂ |ತೆರೆಯಲೊಮ್ಮೆ ಚ-
ಪ್ಪರಿದತಿ ಮದನಾ | ತುರತೃಷೆಗಳೆದು ||೧||

....

ಅಲರ ಕಂಪನಂ | ತಳೆದ ಕುಚದ ಮೊನೆ-
ಗಳನು ಮೆಲ್ಲನೆದೆ | ಯೊಳಗೆ ಹೊಂದು ತೊ-
ತ್ತಲು ಮನಸಿಜನುರೆ | ಗಳೆಯುವೆ ಮುನ್ನ ||೨||

....

ತನುವ ತನುವಿನೊಳ್| ಮನವ ಮನದೊಳ್
ಅನಗು ಸುಖದ ಸಮ | ಕೊನರಿಪಂತಿರಸಿ |
ಎನಗೆ ನೀನರಿಸಿ | ನಿನಗೆ ನಾನರಸು |
ಎನಲನುನಯಕೀ | ದಿನ ಮೊದಲೆನಿಸಿ ||೩||

- ಭಾವವೊಂದನ್ನು ಬಿಟ್ಟರೆ ಮೂಲ ಪದ್ಯಕ್ಕೂ ಇದಕ್ಕೂ ಸ್ವತಂತ್ರವೆನಿಸುವಷ್ಟು ಅಂತರವಿದೆ. ಮೂಲವು ಧಾರಿಣೆ ಎಂಬ ಚಿಕ್ಕ ಅರ್ಧಸಮ ವೃತ್ತದಲ್ಲಿದೆ. ಭ್ರಮರವು ಅದೀಗ ಅರಳಿದ ಕುಸುಮದಲ್ಲಿಯ ಮಧುರ ರಸವನ್ನು ಸವಿಯುವಂತೆ ನಿನ್ನ (ಮೀಸಲು) ತುಟಿಗಳಲ್ಲಿನ ರಸವನ್ನು ಸವಿದ ಬಳಿಕ ಬಿಡುವೆನೆಂಬುದು ಅದರ ಭಾವ. ಚುರಮುರಿ ಅದನ್ನು ಪಲ್ಲವಿ, ಅನುಪಲ್ಲವಿ ಮತ್ತು ಎಂಟೆಂಟು ಪಾದಗಳ ಮೂರು ನುಡಿಗಳಲ್ಲಿ ಬಗೆಬಗೆಯ ಶೃಂಗಾರಿಕ ಪದ, ಪದ ಸಮೂಹಗಳನ್ನು ತುಂಬಿ ಹಿಗ್ಗಿಸಿರುವರು.

ದುಷ್ಯಂತ ಚುಂಬನಕ್ಕೆ ಯತ್ನಿಸುವನು. ಶಕುಂತಲೆ ತಪ್ಪಿಸಿಕೊಳ್ಳುವಳು. ಅಷ್ಟರಲ್ಲಿ : ಎಲೈ ಚಕ್ರವಾಕಿಯೇ, ರಾತ್ರಿ ಸಮೀಪಿಸಿತು. ನಿನ್ನ ಕಾಂತನನ್ನು ಕರೆದು ತೀವ್ರದಿಂದ ಏಕಾಂತವಾದುವುದನ್ನು ಮುಗಿಸೆಂಬ ಧ್ವನಿ ಕೇಳಿಬರುತ್ತದೆ. ಶಕುಂತಲೆ: ಗಾಬರಿಯಿಂದ ಶಾಂತ್ಯುದಕವನ್ನು ತೆಗೆದುಕೊಂಡು ಗೌತಮಿ ಅಲ್ಲಿಗೇನೆ ಬರುತ್ತಿದ್ದಾಳೆ; ಆಚೆಗಿರುವ ಲತಾ ಗೃಹದಲ್ಲಿ ಅಡಗಿಕೊಳ್ಳಿರಿ ಎಂದು ದುಷ್ಯಂತನನ್ನು ಕಳಿಸುತ್ತಾಳೆ. ಗೌತಮಿ ಅವಳ ಆರೋಗ್ಯದ ಬಗ್ಗೆ ವಿಚಾರಿಸಿ ಗೊತ್ತಾಯಿತೆಂದು ಶಕುಂತಲೆಯೊಂದಿಗೆ ಆಶ್ರಮ ಕುಟಿಯತ್ತ ಹೊರಡುತ್ತಾಳೆ. ನಿರುಪಾಯಳಾದ ಶಕುಂತಲೆ : (ತನ್ನೊಳಗೆ) ಎಲೆ ಹೃದಯವೆ, ನಿನ್ನ ಮನೋರಥದಂತೆ - ನಿನ್ನ ಭಾಗ್ಯವು ನಿನ್ನೆದುರು ಕೈಮುಗಿದುಕೊಂಡು ನಿಂತಿತ್ತು. ಆಗ ಭೀರು ಸ್ವಭಾವದಿಂದ ಅದರ ಸ್ವಾದವನ್ನು ತೆಗೆದುಕೊಳ್ಳದೆ ಬಿಟ್ಟುಬಿಟ್ಟೆ. ಈಗ ಅದೇನೆ ಸಿಟ್ಟಿನಿಂದ ಪ್ರತಿಕೂಲವಾಗಿ ಹೋಯಿತು. ಪಶ್ಚಾತ್ತಾಪದಿಂದ ಏನು ಫಲ, ಎಂದುಕೊಂಡು ದುಷ್ಯಂತನನ್ನು ಉದ್ದೇಶಿಸಿ ಲತಾಮಂಟಪಕ್ಕೆ: 'ಲತಾ ಮಂಟಪಾ, ಸಂತಾಪ ಹಾರಕಾ, ಪುನಃ ಸೌಖ್ಯಾನುಭವಕ್ಕಾಗಿ ಬರುತ್ತೇನೆ, ಕೇಳಿದಿಯಾ', ಎನ್ನುತ್ತ ಜಡಮನಸ್ಸಿನಿಂದ ನಿಷ್ಕ್ರಮಿಸುತ್ತಾಳೆ.

ದುಷ್ಯಂತ - ಹೊರಬಂದು ಇಷ್ಟಸಿದ್ಧಿಗೆ ಅವೆಷ್ಟು ವಿಘ್ನಗಳೆಂದು,
ಚುಂಬಿಸಲಿಲ್ಲ| ಇಂಥ ವ್ಯಾಳ್ಯದೊಳು | ನಾ-
ಬಿಂಬಾಧರೆಯು ಪೋಗ|ಲೆಂಬ ನಂಬಿಕೆಯೊಳು ||ಪ.||
....
ಬಳಿಯಲ್ಲಿ ಬಂದು ಹೊಂದಿಕುಳ್ಳಿರಲು |ಕೈ-
ಯೊಳು ನಾ ಚೆಲುವ ಮುಖ ಪಿಡಿದಿರಲು | ಅರ-
ಗಳಿಸ ಮಾಡಿದೆ ಪೂರಾ ನಾ ಮರುಳು|
ತಿಳಿಯೆ ನೀ ವ್ಯಾಳ್ಯದೊಳಿಲ್ಲಿ ಪೋದಿತೊ ಮಲೆ ||೨೧||

ಪಲ್ಲವಿ ಮತ್ತು ಮೂರುನುಡಿಗಳಲ್ಲಿರುವ ಈ ಪದ ಮೂಲದ 'ಮುಹುರಂಗುಲಿ ಸಂವೃತಾಧರೋಷ್ಠಂ - ೩.೨೪' ಪದ್ಯದ ಭಾವ ವಿಸ್ತರಣ. ಎಲ್ಲಿ ಹೋಗಬೇಕು, ಏನು ಮಾಡಬೇಕು ಎಂಬುದು ತಿಳಿಯದೆ, ಮಿಂಚಿ ಹೋದ ವೇಳೆಗೆ ಚಿಂತಿಸಿ ಫಲವಿಲ್ಲ, ಶಕುಂತಳೆ ಮರಳಿ ಬಂದರೂ ಬರಬಹುದು ಎಂದು ಸಮಾಧಾನ ತಂದುಕೊಂಡು ಹಿಂದಿನದನ್ನು ನೆನೆಸಿಕೊಳ್ಳುತ್ತ ಅಲ್ಲಿಯೇ

ಇರುವದು ಲೇಸೆಂದುಕೊಳ್ಳುವನು. ಅಷ್ಟರಲ್ಲಿ ರಾಕ್ಷಸ ಬಾಧೆ ಮತ್ತೆ ಪ್ರಾರಂಭವಾಗಿದೆಯೆಂಬ ಕೂಗು ಕೇಳಿ, ಕರ್ತವ್ಯ ಜಾಗ್ರತವಾಗಿ, ಬಂದೆ ಬಂದೆ ಎನ್ನುತ್ತ ಅತ್ತ ತೆರಳುವನು.

ಪತಿಗೃಹ ನಿರ್ಗಮನ

ದುಷ್ಯಂತನೊಂದಿಗೆ ಶಕುಂತಲೆಯ ಗಾಂಧರ್ವ ವಿವಾಹವಾಗಿದೆ. ಋಷಿಕಾರ್ಯವನ್ನು ವಿಘ್ನ ಬರದಂತೆ ನೆರವೇರಿಸಿಕೊಟ್ಟು, ದುಷ್ಯಂತ ರಾಜಧಾನಿಗೆ ಮರಳಿದ್ದಾನೆ. ಗೆಳತಿಯರು ಶಕುಂತಲೆಯ ಸೌಭಾಗ್ಯ ವೃದ್ಧಿಗೆಂದು ದೇವತಾರಾಧನೆಗೆ ಹೂ ಕೊಯ್ಯುತ್ತಿದ್ದಾರೆ. ರಾಜಧಾನಿಗೆ ಮರಳಿದ ನಂತರ ಅಂತಃಪುರ ಸ್ತ್ರೀಯರೊಂದಿಗಿನ ಸರಸಸಲ್ಲಾಪಗಳಲ್ಲಿ ದುಷ್ಯಂತನಿಗೆ ತಾನು ಶಕುಂತಲೆಯ ಕೂಡ ಗಾಂಧರ್ವ ವಿವಾಹಮಾಡಿಕೊಂಡಿದ್ದರ ನೆನಪಾದರೂ ಬರಬಹುದೆ ಎಂಬ ಸಂದೇಹ ಕಾಡತೊಡಗಿದೆ ಅನಸೂಯೆಯನ್ನು. ಪ್ರಿಯಂವದೆಯನ್ನು ಕಾಡುತ್ತಿದ್ದ ಚಿಂತೆಯೇ ಬೇರೆ. ಶಕುಂತಲೆ ದುಷ್ಯಂತರ ಮದುವೆ ಕಣ್ವರಿಗೆ ಅದೆಷ್ಟು ಮಟ್ಟಿಗೆ ರುಚಿಸೀತೆಂಬ ಭಯ ಅವಳಿಗೆ. ಈರ್ವರಿಗೂ ಎಲ್ಲವೂ ಸರಿ ಹೋದೀತೆಂಬ ಆಶೆ. ಅಷ್ಟರಲ್ಲಿ -"ಎಲೇ, ಬಾಗಿಲಿಗೆ ಬಂದ ಅತಿಥಿಯ ಪರಿವೆ ಇಲ್ಲದವಳೇ, ಯಾರನ್ನು ಕುರಿತು ಇಷ್ಟು ಚಿಂತಿಸುತ್ತಿರುವೆಯೋ ಆತ ಅದೆಷ್ಟು ನೆನಪು ಮಾಡಿಕೊಟ್ಟರೂ ಕ್ಷಣದಲ್ಲಿ ಹೇಳಿದ್ದನ್ನು ಮರುಕ್ಷಣದಲ್ಲಿ ಮರೆಯುವ ಉನ್ಮತ್ತನಂತೆ ನಿನ್ನನ್ನು ಗುರುತಿಸುವುದಿಲ್ಲ" ಎಂಬ ಶಾಪವಾಣಿ ಕೇಳಿಸುತ್ತದೆ.

ಸೋಮತೀರ್ಥಕ್ಕೆ ಹೊರಡುವ ಮುನ್ನ ಕಣ್ವರು ಅತಿಥಿ ಸತ್ಕಾರದ ಹೊಣೆಯನ್ನು ಶಕುಂತಲೆಗೆ ಒಪ್ಪಿಸಿದ್ದರು. ಒಬ್ಬ ಅತಿಥಿಯೂ ಬಂದನು - ಸಾರ್ವಭೌಮ ದುಷ್ಯಂತ. ಕಣ್ವರ ಅಪೇಕ್ಷೆಗಿಂತ ಹೆಚ್ಚು ಚೆನ್ನಾಗಿ ಸತ್ಕರಿಸಿ ಶಕುಂತಲೆ ಅವನಿಗೆ ತನ್ನನ್ನು ಕೂಡ ಅರ್ಪಿಸಿಕೊಂಡಿದ್ದಳು. ಈಗ ಬಂದ ಅತಿಥಿ ಸಾಮಾನ್ಯನಲ್ಲ. ಶೀಘ್ರ ಕೋಪಿ ದುರ್ವಾಸ. ಗೆಳತಿಯರಿಗೆ ಸಿಡಿಲು ಎರಗಿದಂತಾಯಿತು. ಆದರೂ ಪ್ರಿಯಂವದೆ ಓಡಿಹೋಗಿ ಅರ್ಘ್ಯವನ್ನು ಗಟ್ಟಿಯಾಗಿ ಕಾಲು ಹಿಡಿದು: ಭಗವನ್, ಆಕೆ ತಮ್ಮ ಹೊಟ್ಟೆ ಮಗಳಂತಿರುವವಳು; ತಮ್ಮ ತಪಶ್ಚರ್ಯದ ಸಾಮರ್ಥ್ಯವನ್ನು ತಿಳಿದವಳಲ್ಲ; ಇದೇ ಅವಳ ಮೊದಲ ತಪ್ಪು. ದಯಮಾಡಿ ಕ್ಷಮಿಸಬೇಕೆಂದು ಅಲ್ಲರಿದಳು. ಕನಿಕರ ಹುಟ್ಟಿ ದೂರ್ವಾಸ: ನನ್ನ ಮಾತು ಎಂದಿಗೂ ಸುಳ್ಳಾಗದು. ಆದರೂ ಏನಾದರೂ ಗುರುತಿನ ಅಲಂಕಾರ ತೋರಿಸಿದರೆ ಶಾಪ ನಿವೃತ್ತಿಯಾಗುವದೆಂದು ಹೇಳಿ ಕಾಲುಗಳನ್ನು ಕೊಸರಿಕೊಂಡು ಹೊರಟು ಹೋದನು. ಇಷ್ಟರಲ್ಲಿಯೇ ಸಮಾಧಾನ ತಂದುಕೊಂಡರು ಗೆಳತಿಯರು: ಹೇಗೂ ಹೊರಡುವ ಮುನ್ನ ಶಕುಂತಲೆಗೆ ದುಷ್ಯಂತ ತನ್ನ ಕೈಯೊಳಗಿನ ಉಂಗುರವನ್ನು ಕೊಟ್ಟಿರುವನು; ಅದು ಸಮಯಕ್ಕೆ ಬಂದೀತೆಂದುಕೊಂಡು ತಮ್ಮ ಕೆಲಸಕ್ಕೆ ತೆರಳುವರು. ದುಷ್ಯಂತನ ಚಿಂತೆಯಲ್ಲಿ ಮೈಮರೆತು ಕುಳಿತ ಶಕುಂತಲೆಯನ್ನು ಕಂಡು ಪ್ರಿಯಂವದ:

ನೋಡೇ ಚಿಂತೆಯೇಕಾರ - ಗೂಢ ಮಾತಾಡದವಳ ||ಪ||
ಪಲ್ಲವದೊಳಲ್ಲಿ ಮಿದುವು | ಗಲ್ಲವಿರಿಸಿ ಫುಲ್ಲಶರನ

ಮಲ್ಲ ಯುದ್ಧದಲ್ಲಿ ಗೈದ | ಸಲ್ಲಿಸ ಕೃತಿಯೆಲ್ಲ ನೆನೆದು ||೧||
ಕೆಂಬಲ್ಲಿಲಿ ಬಿಂಬದುಟಿಯು | ಸುಂಬುವನಿಂಗೆ ತುಂಬ ಮನದೊಳ್
ಇಂಬುಗೊಟ್ಟು ಹಂಪೆ ಚಿತ್ರದ | ಗೊಂಬೆಯಂತೆ ಕಾಂಬುತಿಹಳ ||೨||
ಶರೀರವಿಲ್ಲಿ ಹರಣವಲ್ಲಿ | ಪೆರವರ ಪರಿವಿರುವದೆ? ಈ
ಪರಿಯಲಿರಲು ಮರುಳ ಋಷಿಯು | ತ್ವರದಿ ಶಾಪವನಿಂದನವ್ವಯ್ಯಾ ||೩||

- ಮೂಲ ಗದ್ಯದಲ್ಲಿದೆ. ಪಲ್ಲವಿ ಮತ್ತು ಎರಡನೇ ನುಡಿಯು ಎರಡನೇ ಪಾದ ಅದಕ್ಕೆ ಹತ್ತಿರವಾಗಿದೆ. ಹಾಡಿನ ಮೊದಲಿನವೆರಡು ನುಡಿಗಳಲ್ಲಿ ಆಡಕವಾದ ಶೃಂಗಾರಿಕ ಸ್ವರೂಪ ರಸಿಕರ ಮನಸೆಳೆಯದಿರದು.

ಶಾಪದ ದಾರುಣ ವಾರ್ತೆಯಿಂದ ಕೋಮಲ ಮನಸಿನ ಶಕುಂತಲಗೆ ಆಘಾತವಾದೀತೆಂದು ಗೆಳತಿಯರು ಅದನ್ನು ತಮ್ಮಲ್ಲಿ ಗುಪ್ತವಾಗಿರಿಸಿಕೊಳ್ಳಲು ನಿರ್ಧರಿಸುವರು. ಕೆಲವು ದಿನಗಳು ಉರುಳಿದವು. ಕಣ್ವರು ಸೋಮತೀರ್ಥದಿಂದ ಮರಳಿ ಬಂದಿರುವರು. ಅವರ ಆಜ್ಞಾನುಸಾರ ಶಿಷ್ಯನೋರ್ವನು ರಾತ್ರಿ ಇನ್ನೂ ಎಷ್ಟಿದೆಯೆಂದು ಹೊರಬಂದು ಬೆಳಗು ಮೂಡಿದ್ದನ್ನು ಕಂಡು, ಮೂಲದಲ್ಲಿಯು 'ಯಾತ್ಯೇಕ ತೋಽಸ್ತ ಶಿಖರಂ ಪತಿರೋಷಧೀನಾಂ' - (೪.೧) 'ಶ್ಲೋಕವನ್ನಾಧರಿಸಿದ' ಬೆಳಗಾಯಿತು ಮೂಡಲಲ್ಲಿ, ತಿಂಗಳನಸ್ತನಾದನು ಪಶ್ಚಿಮದಲ್ಲಿ ಎಂಬ 'ಹಾಡನ್ನು ಹೇಳುವನು. ಚುರಮುರಿ ಅದರೊಂದಿಗೆ ಇನ್ನೊಂದು ಹಾಡನ್ನು ಸೇರಿಸಿರುವರು. ಅದಕ್ಕೆ ಬಂಗಾಲಿ ಸಂಸ್ಕರಣದಲ್ಲಿ ಬಂದಿರುವ ಇನ್ನೆರಡು ಪದ್ಯಗಳು ಪ್ರಚೋದಕವಿದ್ದರೂ ಚುರಮುರಿಯದು ಸ್ವತಂತ್ರ ರಚನೆ. 'ಉದಯ ಕಾಲವಾಯಿತು. ಜಗವೆಲ್ಲ ಸಮುದ್ರವಾಗಲು' ಎಂದು ತೊಡಗುವ ಪಲ್ಲವಿ ಮತ್ತು ಎಂಟೆಂಟು ಪಾದಗಳಿರುವ ಮೂರು ನುಡಿಗಳಿರುವ ಅದರಲ್ಲಿ, ಮೊದಲಿನ ನುಡಿ ದಂಪತಿಗಳ ರಾತ್ರಿಯ ಕೊನೆಯ ಜಾವದ ಸಂಭೋಗ ಶೃಂಗಾರಕ್ಕೆ ಸಂಬಂಧಿಸಿದ್ದರೆ ಎರಡು ಮೂರನೆಯ ನುಡಿಗಳಲ್ಲಿ ಅನಂತರ 'ಸಿರಿಯ ಸಾವರಿಸಿ ಜೋಲ್ ಮುಡಿಯ ತಿದ್ದುತ ಓಮಕರ ವದನೆಯರು ಬಾಗಿಲ ತೆರೆಯಲಾಗಿ' ಕಂಡ ಮುಂಜಾವಿನ ಮನೋಹರ ವರ್ಣನೆ ಬಂದಿದೆ. ಹೀಗೆ:

ಪೃಥ್ವಿದೇವಿಯು ದಿನಪತಿಗಾಗಿ ಮುಲ್ತೆನಾ|
ಕುತಿಯ ಹರುಷದಿಂದೆ ಪಿಡಿದವ್ರೋಲು|
ಅತಿ ರಮ್ಯವಾದ ಇಬ್ಬನಿಗಳು ವೃಕ್ಷದೊ |
ಳತಿಶಯವಾಗಿ ಶೋಭಿಸುತಿರಲು||
ಲತೆ-ಗೈಯಿಂಸಾರಿಸಿ ಲಲಿತಾಂಗಿಯರು ಮತ್ತೆ|
ಮಿತದಿಂ ರಂಗೋಲೆಯಕ್ಕಿಗಳಿಡಲು|
ಹಿತದಿಂ ರವಿಯು ಸೆರಗಿನೊಳಿಪ್ಪ ಕುಚಗಳ್ ಭ-
ಕುತರಾದ ಚಕ್ರವಾಕಗಳೆಂದು ಕರವಿಡಲುದಯ (ಕಾಲವಾಯಿತು) ||೩||

ಕೊನೆಯ ಎರಡು ಪಾದಗಳಲ್ಲಿನ ಬಣ್ಣನೆ ಮಡಿವಂತರಲ್ಲಿ ಕೆಲವರಿಗೆ ಶೃಂಗಾರದ ಅತಿರೇಕವೆನಿಸಬಹುದಾದರೂ ಅದು ಚುರಮುರಿ ಕಾಲದವರೆಗೆ ನಡೆದು ಬಂದ ಶೃಂಗಾರ ರಸ ಚಿತ್ರಣದ ಕಲ್ಪನೆಗಳನ್ನು ಮೀರಿಲ್ಲವೆನ್ನಬುದು.[೧]

ದೂರ್ವಾಸ ಋಷಿಯ ಶಾಪದ ಪ್ರಭಾವ ಕಾಣಲಾರಂಭಿಸಿದೆ. ರಾಜಧಾನಿಗೆ ಮರಳಿ ಅದೆಷ್ಟು ದಿನಗಳಾಗಿದ್ದರೂ ವಚನ ಕೊಟ್ಟ ಮೇರೆಗೆ ಶಕುಂತಲೆಯನ್ನು ಕರೆದುಕೊಂಡು ಹೋಗಲು ಯಾರೂ ಬರಲಿಲ್ಲ. ಅನಸೂಯೆಯ ಕಳವಳ ಹೆಚ್ಚಿದೆ. ದುಷ್ಯಂತ ಶಕುಂತಲೆಗೆ ಮೋಸ ಮಾಡಿದನೆಂಬ ಭಾವನೆ ಬಲವತ್ತರ ಸಾಗತೊಡಗಿದೆ ಅವಳಲ್ಲಿ.

ಮೋಸ ಮಾಡಿ ಪೋದನಮ್ಮಾ| ಆ ರಾಜ ಋಷಿಯು
ಮೋಸ ಮಾಡಿ ಪೋದನಮ್ಮಾ| ವನವಾಸಿ ನಮ್ಮ ||ಪ||
ಈ ಸಖಿಯಳ ಮೆರೆವಭರದ
ಮೀಸಲು ಯೌವನವ ಕಂಡು|
ಆ ಸಮಯಕೆ ತನ್ನ ಕೆಲಸ
ತಾ ಸಾಧಿಸಿಕೊಂಡು ಎಮ್ಮೊಳು ||ಅ.ಪ.||

ಅಂತ ತಿಳಿಯಲಿಲ್ಲವಾತನ | ಮಲ್ಲಿಗೆಯ ಹೂವಿ-
ನಂಥ ಜೀವದ ಗೆಳತಿಯನ್ನೂ | ಒಪ್ಪಿಸಿದೆವಿನ್ನು ||
ಚಿಂತೆಯೊಗೆ ಮೈಮರೆದಲೆ
ಭ್ರಾಂತಳಾಗಿ ಕುಳಿತವಳ |ನ್ನೆಂತು ನೋಡಲೆಮ್ಮ ಇವಳ|
ಕಾಂತನು ಕರೆಕಳುಹಲಿಲ್ಲ ||೧||

---

೧. ಉದಾಹರಣೆಗಾಗಿ ಬಾಣ ಕಾದಂಬರಿಯಲ್ಲಿ ಮಹಾಶ್ವೇತೆಯು ವಿರಹದಿಂದ ಪುಂಡರೀಕ ಅದೆಷ್ಟು ಬಳಲುತ್ತಿರುವನೆಂಬುದನ್ನು ಅವನ ಮಿತ್ರ ಕಪಿಂಜಲನಿಂದ ಕೇಳಿದಾಗ ಮಹಾಶ್ವೇತೆ ಹಿರಿಯರಿಗೆ ತಿಳಿಸದೆ ರಾತ್ರಿ ಗೆಳತಿ ತರಳಿಕೆಯೊಂದಿಗೆ ಅವನಿರುವಲ್ಲಿಗೆ ಹೊರಡುವಳು. ಮೇಲೆ ಚಂದ್ರ ಪ್ರಕಾಶಿಸುತ್ತಿದ್ದಾನೆ. ಸರ್ವತ್ರ ಬೆಳದಿಂಗಳು ಹರಡಿದೆ. ತರಳಿಕೆಯನ್ನು ಕುರಿತು ಮಹಾಶ್ವೇತೆ: ಈ ಚಂದ್ರ ಈಗ ನನ್ನನ್ನು ಎಳೆದುಕೊಂಡು ಹೋಗುತ್ತಿರುವಂತೆ, ಪುಂಡರೀಕನನ್ನು ಕರೆದುಕೊಂಡು ಬಂದು ನಮ್ಮೆದುರು ನಿಲ್ಲಿಸುತ್ತಾನೆಯೆ? ಎನ್ನುವಳು. ತರಳಿಕೆ : ನಿನ್ನನ್ನು ಕಂಡು ಮೋಹಿತನಾದ ಆತ ನಿನ್ನ ಇನಿಯನನ್ನು ಕರೆತರುತ್ತಾನೆಯೋ? ನೋಡು. ಪ್ರತಿಬಿಂಬದ ನೆಪದಿಂದ ನಿನ್ನ ಕೆನ್ನೆಗಳಿಗೆ ಮುತ್ತು ಕೊಡುತ್ತಿದ್ದಾನೆ. ಸುಂದರವಾದ ತೋರ ಮೊಲೆಗಳನ್ನು ಮೇಲೆ ಬಂದು ಹಿಡಿಯುತ್ತಿದ್ದಾನೆ. ಸೊಂಟದ ಡಾಬಿನ ರತ್ನದೀಪ್ತಿಯನ್ನು ಮುಟ್ಟುತ್ತಿದ್ದಾನೆ. ಬಂದು ಮುಂದಾಗಿ [illegible] ಪಾದಗಳನ್ನಾದರೂ [illegible]. ಬಾಣನ ಬಣ್ಣನೆ ಚಂದ್ರನಿಗೆ ಅನ್ವಯಿಸಿ ಬಂದಿದ್ದರೆ ಚುರುಮುರಿಯದು ಸೂರ್ಯನಿಗೆ ಅನ್ವಯಿಸಿ ಬಂದಿದೆ. ಇಷ್ಟೇ ವ್ಯತ್ಯಾಸ

ಮನೆಯ ಕೆಲಸ ಮಾಡಲಾರೆನೆ | ಇವಳೊಳಗೆ ಪೊಕ್ಕು
ಮನಸಿಜನೀ ಕೃತಿಗೈದನೆ | ಇನ್ನಾರೆ ತಾನೆ ||
ಇನಿತು ಕೃತಕ ತನವಿಲ್ಲದೆ|
ತನುವು ನೀಡಿ ಕೂಡಿದವಳ|
ನೆನಹು ದೋರುವಂತೆ ಅವನು |
ಮನವಿ ಜಾಗ್ರತನಾಗಲೆಮ್ಮಾ ||೨||

... ಈಗಂತೂ ಕಣ್ವರು ಮರಳಿಬಂದಿದ್ದಾರೆ. ದುಷ್ಯಂತ - ಶಕುಂತಲೆಯರ ಗಾಂಧರ್ವ ವಿವಾಹವಾಯಿತು. ಅವಳೀಗ ಗರ್ಭಿಣಿ ಎಂಬುದನ್ನು ಅವರಿಗೆ ತಿಳಿಸಬೇಕೆ? ಅದಕ್ಕೆ ಧೈರ್ಯ ಸಾಲದು. ಎಂಥ ಮಾತಾಯಿತು! ಹೇಗೆ ಮಾಡಬೇಕು! - ಎಂದು ಪರಿತಪಿಸುವಳು. ಮೂಲ ಗದ್ಯದಲ್ಲಿದೆ. ಚುರಮುರಿ ಅದನ್ನು ಪಲ್ಲವಿ, ಅನುಪಲ್ಲವಿ ಮತ್ತು ಆರು ಪಾದಗಳ ಮೂರು ನುಡಿಗಳಲ್ಲಿ ಹರಡಿರುವರು. ಓರ್ವ ಸರಳ ಮನಸ್ಸಿನ ಸಾಧ್ವಿಯ ಮನದಳಲು ಅವರ ಅನುವಾದದಲ್ಲಿ ಅದೆಷ್ಟು ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಿಪಡಿಸಿದೆಂಬುದು ಮೆಚ್ಚಬೇಕಾದ ಮಾತು.

ಅಷ್ಟರಲ್ಲಿ ಪ್ರಿಯಂವದೆ ಲಗುಬಗೆಯಿಂದ ಬರುವಳು. ಹರ್ಷದಿಂದ ಅವಳ ಮುಖ ಹಿಗ್ಗಿದೆ. ಅನಸೂಯೆಗೆ : ನಡೆ, ನಡೆ, ಶಕುಂತಲೆ ಇಂದೇ ಗಂಡನ ಮನೆಗೆ ಹೊರಡುವಳು. ಕಣ್ವ ತಾತನಿಗೆ ಎಲ್ಲ ತಿಳಿದಿದೆ; ಆಕಾಶವಾಣಿಯಿಂದ. ಆತನಿಗೆ ಸ್ವಲ್ಪ ಸಹ ಸಿಟ್ಟಿಲ್ಲ. ಬದಲಾಗಿ ಸಂತೋಷವೇ ಆಗಿದೆ ಎನ್ನುವಳು. ಅನಸೂಯೆಗಾದ ಆನಂದ ಅಷ್ಟಿಷ್ಟಲ್ಲ. ಜೊತೆಗೆ ಕೂಡಿ ಆಡಿ ಬೆಳೆದ ಗೆಳತಿಯಿಂದ ಅಗಲಬೇಕಾಯಿತಲ್ಲ ಎಂಬ ದುಃಖವೂ ಸೇರಿದೆ. ಇಬ್ಬರೂ ಮುಂದಣ ಸಿದ್ಧತೆಗಾಗಿ ಹೊರಡುವರು. ಕಣ್ವರ ತಪಃ ಸಾಮರ್ಥ್ಯದಿಂದ ಆಶ್ರಮದ ತರುಲತೆಗಳು ಶಕುಂತಲೆಗಾಗಿ. ದೇವಾಂಗನೆಯರಿಗೊಪ್ಪುವಂಥ ವಸ್ತ್ರಾಲಂಕಾರಗಳನ್ನು ಕೊಡುವವು. ಹಿರಿಯ ಆಶ್ರಮವಾಸಿಗಳು ಆಶೀರ್ವದಿಸುವರು. ಶಕುಂತಲೆ ಪ್ರೀತಿಯಿಂದ ಸಾಕಿ ಬೆಳೆಸಿದ ತಬ್ಬಲಿ ಚಿಗರೆಮರಿಯನ್ನು; ಜೀವಕ್ಕಿಂತ ಹೆಚ್ಚು ಜತನದಿಂದ ಹಚ್ಚಿ ಬೆಳೆಸಿದ ವೃಕ್ಷ ಲತೆಗಳನ್ನು ಗುರುಹಿರಿಯರನ್ನು ಗೆಳತಿಯರನ್ನು ಬಿಟ್ಟು ಹೋಗಬೇಕಾಯಿತಲ್ಲಾ ಎಂದು ಕಣ್ಣೀರು ಸುರಿಸುವಳು. ಕಣ್ವರಂಥ ವೈರಾಗ್ಯಶೀಲ ತಪಸ್ವಿಯ ಹೃದಯ ಕೂಡ ಪಿತೃವಾತ್ಸಲ್ಯದಿಂದ ತುಂಬಿ, ಮಾತು ಬರದಂತಾಗಿ ತನ್ನಂಥವರಿಗೇನೆ ಹೀಗಾದಾಗ ಆವರೆಗೆ ಸಾಕಿ ಸಲಹಿದ ಹೊಟ್ಟೆ ಮಗಳನ್ನು ಅತ್ತೆ ಮನೆಗೆ ಕಳಿಸುವಾಗ ಸಾಮಾನ್ಯಸಂಸಾರಿಗರಿಗೆ ಅದೆಷ್ಟು ಕಷ್ಟವಾಗುತ್ತಿರಬೇಕೆಂಬ ಸಹಜೋದ್ಗಾರ:

ಬಿಗಿದುರ್ಬಿರ್ದುದು ಗಂಟಲಶ್ರು ತೆರೆಗಳ್ ನೇತ್ರಂಗಳೊಳ್ ತಪ್ಪದೀ
ಮಗಳೀಪೊತ್ತಿಗೆ ಪೋಪಳೆಂಬ ಕಡುಚಿಂತಾ ಕಷ್ಟದುದ್ಗಾರದಿಂ |
ಎನಗೆ ಬಾಯಾರಿತು ನೊಂದೆ ಬೆಂದೆ ಮನದೊಳ್ ಮುಂಗಾಣೆ ನಿನ್ನ ಪ್ರಪಂ-
ಚಿಗಳೆಷ್ಟಂತೆ ಮರುಂಗುತಿರ್ಪರಕಟಾ ಕನ್ಯಾವಿಯೋಗಕ್ಕೆಲೈ||

- ಅವರಿಂದ ಹೊರಹೊಮ್ಮುವದು. ಮೂಲದಲ್ಲಿಯ 'ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ, (೪.೬) ಶ್ಲೋಕ ಸರಳಾನುವಾದ. 'ಕಾವ್ಯೇಷು ನಾಟಕಂ ರಮ್ಯಂ ತತ್ರಾಪಿ ಚ ಶಕುಂತಲಾ' ಸುಪರಿಚಿತ ಶ್ಲೋಕದ 'ತತ್ರಾಪಿ ಚತುರ್ಥೋಽಂಕಃ ತತ್ರ ಶ್ಲೋಕ ಚತುಷ್ಟಯಮ್' ದ್ವಿತೀಯಾರ್ಧದಲ್ಲಿ ಉಕ್ತವಾದ ಶ್ಲೋಕಚತುಷ್ಟಯದಲ್ಲಿ ಒಂದೆಂದು ಗಣಿಸಲ್ಪಟ್ಟಿದೆ.

ಕಣ್ವರ ನೇತೃತ್ವದಲ್ಲಿ ಪ್ರಯಾಣ ಸಮಯದ ಧಾರ್ಮಿಕ ವಿಧಿಗಳನ್ನು ಸಾಂಗಗೊಳಿಸಿ, ಗುರು ಹಿರಿಯರನ್ನು ವಂದಿಸಿ ಶಕುಂತಲೆ ಹೊರಡಲು ಸಿದ್ಧಳಾಗುವಳು. ಕಳಿಸಲಿಕ್ಕೆಂದು ಅವಳೊಂದಿಗೆ ಆಶ್ರಮದ ಅಜ್ಜಿ ಗೌತಮಿ ಮತ್ತು ಈರ್ವರು ಕಣ್ವ ಶಿಷ್ಯರು (ಶಾರ್ಙ್ಗರವ, ಶಾರದ್ವತ) ಹೊರಟಿದ್ದಾರೆ. ಆ ಸಮಯದಲ್ಲಿ ಶಕುಂತಲೆ ಪ್ರಿಯಂವದೆಗೆ, ಎಲೆ ಸಖಿಯೆ, ಆರ್ಯಪುತ್ರರನ್ನು ನೋಡಲು ಇಷ್ಟು ಉತ್ಸುಕಳಾಗಿದ್ದರೂ ಆಶ್ರಮ ಬಿಟ್ಟು ಹೋಗಲು ಕಾಲುಗಳೇ ಮುಂದಕ್ಕೆ ಸಾಗಲೊಲ್ಲವು ಎನ್ನುವಳು..

ಪ್ರಿಯಂವದೆ - ಸಖಿಯೇ, ನಿನಗೊಬ್ಬಳಿಗೇ ದುಃಖವಾಗುತ್ತದೆಂದು ತಿಳಿಯಬೇಡ. ನಿನ್ನ ವಿಯೋಗವಾಗುವದೆಂದು ಎಲ್ಲಾ ಆಶ್ರಮಕ್ಕೆ ನಿನ್ನಂತೆ ದುಃಖವಾಗಿದೆ. ನೋಡಿದೆಯಾ!

ದುಃಖವಾಗಿಹುದಮ್ಮಯ್ಯಾ| ಆಶ್ರಮ ವೃಕ್ಷ| ಪಕ್ಷಿ ಪಶುಗಳಿಗೆಲ್ಲಾ ||ಪ||
ಚಿಕ್ಕಂದಿನಿಂದಿಹ | ಸಕ್ಕರೆಯೊಲ್ ಸ್ನೇಹ -|
ದಕ್ಕನೀ ಪತಿಯಾಲ | ಯಕ್ಕೆ ಪೋಗುವಿಯೆಂದು ||ಅ.ಪ.||
ಪಾರಿಜಾತಾದಿಗಳು | ಕುಸುಮವೆಂಕ -
ಣ್ಣೀರಾಗಿ ಸುರಿಸುವವು||
ತೀರ ತರುಗಳೆಲ್ಲ | ಸ್ತಬ್ಧವಾದವು ಕಳೆ-
ಯಾರಿ ಬಳ್ಳಿಗಳು ಬಳಲಿ ಬಡವಾದವು ||೧||
ಗಿಳಿಗಳು ಫಲಗಳನು | ಅರ್ಧವೆ ಕಚ್ಚಿ
ನೆಲಕೆ ಬಿಸುಟುತಿಹವೆ ||
ಕಳವಳಿಸುತಲಿ ನ | ವಿಲುಗಳು ವೃಕ್ಷಾಗ್ರ-
ದೊಳಗೆ ನಿಸ್ಸೂರೆಷ್ಟು ದೂರೆಂದು ನೋಳ್ಪವು ||೨||
ಎಳೆಯ ದರ್ಭೆಯೊಳು ನಿಂದು| ಮೇಯದೆ ಮೃಗ-
ಗಳು ನಿನ್ನ ನೋಡುವವೆ||
ಮೊಲೆಯನುಣ್ಣಲು ಬಂದ | ಎಳೆಯಗರುವ ನಾವು
ಗಳು ರೋಷದಿಂದ ಮುಂ | ದಲೆಯಿಡಲಿರಿವವು ||೩||

- ಮೂಲ ಪ್ರಾಕೃತದಲ್ಲಿರುವ ಒಂದು ಆರ್ಯೆ. ಜಿಂಕೆಗಳು ಹುಲ್ಲು(ದರ್ಭೆ) ಮೇಯುವುದನ್ನು ಬಿಟ್ಟು ನಿಂತಿವೆ. ನವಿಲುಗಳು ಕುಣಿಯುವುದನ್ನು ನಿಲ್ಲಿಸಿವೆ; ಬಳ್ಳಿಗಳಿಂದ ಒಂದೊಂದಾಗಿ ಬೀಳುತ್ತಿರುವ ಹಣ್ಣೆಲೆಗಳು ಅವುಗಳ ಕಣ್ಣೀರಿನಂತೆ ತೋರುತ್ತವೆ ಎಂಬುದು

ಅದರ ಭಾವ. ಚುರಮುರಿ ಅದನ್ನು ಪಲ್ಲವಿ ಮತ್ತು ನಾಲ್ಕು ಪಾದಗಳ ಮೂರು ನುಡಿಗಳಲ್ಲಿ ಮೇಲಿನಂತೆ ವಿಸ್ತರಿಸಿರುವರು. ಮೂಲದಲ್ಲಿಯ 'ಬಳ್ಳಿ-ಹಣ್ಣೆಲೆ' ಉಪಮೆಯ ಬದಲು ಬಂದಿರುವ 'ಪಾರಿಜಾತಾದಿಗಳು ಕುಸುಮವೆ ಕಣ್ಣೀರಾಗಿ ಸುರಿಸುವವು ಮತ್ತು ಗಿಳಿಗಳು ಫಲಗಳನು ಅರ್ಧವೆ ಕಚ್ಚಿ ನೆಲಕೆ ಬಿಸುಟುತಿಹವು; ಮೊಲೆಯುಣ್ಣಲು ಬಂದ ಎಳೆಗರುವನಾವುಗಳು ರೋಷದಿಂದ ಮುಂದಲೆಯಿಂದಲಿರಿವವು - ಈ ಅಲಂಕಾರಿಕ ಪ್ರತಿಮೆಗಳು ಮೆಚ್ಚುವಂಥವು.

ಶಕುಂತಲೆ ತಾನು ಪ್ರೀತಿಸುತ್ತಿದ್ದ ವೃಕ್ಷ ಲತೆಗಳ ಪೋಷಣೆಯ ಭಾರವನ್ನು ಸಖಿಯರಿಗೊಪ್ಪಿಸಿ, ಕಣ್ವರಿಗೆ ತನ್ನ ಇನ್ನೊಂದು ಬಿನ್ನಹವೆಂದು ದಿನತುಂಬಿದ ಆಶ್ರಮದ ಚಿಗರೆ ಪ್ರಸ್ತಿಪಿಸಿದ ಬಳಿಕ ಹೇಳಿ ಕಳಿಸೆಂದು ಕೇಳಿಕೊಳ್ಳುವಳು. ಮೂಲದಲ್ಲಾದರೂ ಇಷ್ಟೇ ಇದೆ - ಗದ್ಯದಲ್ಲಿ. ಚುರಮುರಿ ಅದನ್ನು ಪಲ್ಲವಿ ಮತ್ತು ಮೂರು ಮೂರು ಪಾದಗಳ ಮೂರು ನುಡಿಗಳಲ್ಲಿ ಹಬ್ಬಿಸಿರುವರು. ಹೀಗೆ -

ಹೇಳಿ ಕಳುಹಿಸಯ್ಯಾ, ತಾತಯ್ಯ ಸುದ್ದಿಯ |
ಮ್ಯಾಲೆ ಮ್ಯಾಲೆ ನಾನಲ್ಲೆ ಕೇಳಿ ಸುಖಿಸುವಂತೆ ||ಪ||

ತಂದೆ ಕೇಶಯ್ಯ ಗರ್ಭ|ದಿಂದಲೆ ಶ್ರಮಿಸುತ -
ಮಂದಮಂದವಾಗಿ ಮನೆ | ಹಿಂದೆ ತಿರುಗುತಿಹ
ದೊಂದರಳೆಯು ಕ್ಷೇಮ | ದಿಂದಲೀದ ವಾರ್ತೆಯ ||೧||...

ಶರೀರಕ್ಕೆ ಸಮರಾದ | ತರಳೆಯರೆನ್ನ ಸಖಿ|
ಯರು ಮದುವೆಗಾದರು | ವರರ ನೋಡು ಸತ್ವ|
ಕರೆಯ ಕಳುಹಿಸಯ್ಯಾ | ಕಾರ್ಯಕ್ಕೆ ಬರುವೆನು ||೩||

-ಕೊನೆಯ ನುಡಿ ಚುರಮುರಿಯವರ ಸ್ವಂತದ್ದು. ಅದರಲ್ಲಿನ ತರಳೆಯರೆನ್ನ ಸಖಿಯರು ಮದುವೆಗಾದರು, ವರರ ನೋಡು ಸತ್ವರ' ಎಂಬ ಶಕುಂತಲೆಯ ಮಾತು ಮುಗುಳುನಗೆ ತರಿಸುವಂಥದು. ಆಗ ತಾನೆ ಮದುವೆಯಾಗಿದ್ದರೂ ತಾನೀಗ ಪ್ರೌಢೆ; ಅದಷ್ಟು ಬೇಗನೆ ಬೆಳೆದು ನಿಂತ ಗೆಳತಿಯರ ಮದುವೆ ಮಾಡೆಂದು ತಂದೆಗೆ ಹೇಳುವಷ್ಟು ಸ್ವಾತಂತ್ರ್ಯ ಬಂದಿದೆಂಬ ಹೆಮ್ಮೆ ಅವಳಿಗೆ!

ಅಷ್ಟರಲ್ಲಿ ಸೆರಗು ಜಗ್ಗುತ್ತಿದ್ದ ಮಗುವಿನಂತೆ ಜೋಕೆ ಮಾಡಿದ ಮೃಗಶಿಶುವನ್ನು ಕಂಡು: 'ಕಂದಾ ಇನ್ನಾತ್ರಕೆ ಬರುವಿ ಬಳಿಯಲ್ಲಿ....ತಾತಯ್ಯನೆನ್ನೊಲು ಪಾಲಿಸುವ'-ಹಾಡಿನಿಂದ (ಮೂಲ ಗದ್ಯದಲ್ಲಿದೆ) ಅದರಿಂದ ಬೀಳ್ಕೊಳ್ಳುವಳು. ಹಾಡಿನಲ್ಲಿಯ ಮೃಗಶಿಶುವನ್ನುದ್ದೇಶಿಸಿ ಬಂದ 'ಬಿಡು ಎನ್ನ ಹಂಬಲವ, ನೀ ಪ್ರೀತಿಯ ಕಡೆಯ ಮುದ್ದಿಗೆ ನೀಡು ಮೊಗವ'- ಶಕುಂತಲೆಯ ಮಾತು (ಚುರಮುರಿ ಸ್ವಂತದ್ದು) ಅಂತಃಕರಣವನ್ನು ಮುಟ್ಟುವಂಥದು. ಮೃಗಶಿಶುವಿನಿಂದ ಬೀಳ್ಕೊಂಡು ಜಡ ಮನಸ್ಸಿನಿಂದ ಮುಂದೆ ಸಾಗುತ್ತಿರಲು ಚಕ್ರವಾಕ ಪಕ್ಷಿಗಳ ವಿರಹ ವೇದನೆಯ ಧ್ವನಿ ಕೇಳಿಸುವದು. ಚಕ್ರವಾಕ ದಂಪತಿಗಳು ಹಗಲು ಕ್ಷಣ ಮಾತ್ರವೂ ಅಗಲುವುದಿಲ್ಲ. ರಾತ್ರಿ

ಮತ್ತೆ ವಿಯೋಗ. ಇಲ್ಲಿ ಮಧ್ಯದಲ್ಲಿ ಬಂದ ಒಂದು ಕಮಲ ಪತ್ರ ಅವುಗಳನ್ನು ಬೇರ್ಪಡಿಸಿದೆ. ಅದನ್ನು ಕಂಡ ಶಕುಂತಲೆ ಕೇವಲ ಒಂದು ಕಮಲ ಪತ್ರದಿಂದ ಅಗಲಿಸಲ್ಪಟ್ಟ ಇವು ಇಷ್ಟೊಂದು ಅಲ್ಪರಿಯುತ್ತಿರುವಾಗ ಪತಿಯಿಂದಗಲಿ ತಾನಿಷ್ಟು ದೀರ್ಘಕಾಲ ಕಳೆದಿರುವುದು ಒಂದು ದಿವ್ಯವೇ ಸರಿ ಎಂದು ನೊಂದುಕೊಳ್ಳುವಳು. ಅನಸೂಯೆ: 'ಹಾಗೆನ್ನಬೇಡ; ವಿರಹದುಃಖ ಅದೆಷ್ಟೇ ದಾರುಣವಿದ್ದರೂ ಪುನರ್ಮಿಲನದ ಆಶೆ ಬಲವತ್ತರ ಬಂಧನ. ಅದರಿಂದಲೇ ರಾತ್ರಿಯನ್ನು ಕಳೆದು ಬೆಳಗಿನಲ್ಲಿ ಅವು ಮತ್ತೆ ಕೂಡುವವು,' ಎಂದು ಸಂತೈಸುವಳು. ಮೂಲದಲ್ಲಿ ಶಕುಂತಲೆಯ ಮಾತು ಗದ್ಯದಲ್ಲಿ, ಅನಸೂಯೆಯುದು ಪದ್ಯದಲ್ಲಿ ಇವೆ. ಚುರಮುರಿ ಎರಡನ್ನೂ ಒಂದೊಂದು ಹಾಡಿನಲ್ಲಿ ವಿಸ್ತೃತವಾಗಿ ಪರಿವರ್ತಿಸಿರುವರು. ಅವನ್ನಿಷ್ಟೇ ಬೇರ್ಪಡಿಸಿ ಉಚಿತ ತಲೆಬರಹಗಳೊಂದಿಗೆ ಪ್ರಕಟಿಸಿದರೆ ಇಂದು ಕೂಡ ಮನಸೆಳೆವ ಸುಂದರ ಭಾವಗೀತಗಳಾಗುವಂತಿವೆ. ಹೀಗೆ -

ಚಕ್ರವಾಕಿಯ ವಿಲಾಪ

ಕಮಲದಳ ಮರೆಯಾಗಲಿನಿಯನ ಕಾಣದಲೆ ಗಾಬರಿಸಿ ನೋಡುತೆ. ಶ್ರಮವ ಬಿಡುತಿಹ
ಚಕ್ರವಾಕಿಯ | ಅನುಮನೋಡಿ ನಾ ಸೈರಿಸಲಾರೆ ||ಪ||

ಒಮ್ಮೆ ಮೇಲಕೆ ಜಿಗಿದು ಆಗಸ | ವನ್ನೆ ಶೋಧಿಸಿ ಎಂಟು ದಿಕ್ಕಿನೊಳ್ |
ಸುಮ್ಮನೈದುತಲಲ್ಲಿಗಲ್ಲಿಗೆ |ಸಂಕಟದ ಸ್ವರದಿಂದೆ ಕರೆವುದು ||೧||
ಬಂದು ತರುಗಳ ನೆರೆಸಮೂಹದೊ | ಳಂದೆ ಸಮನಾಲ್ಪರಿಯುತಲಿ ಬೇ-
ರೊಂದು ಶಾಖೆಯೊಳೀಕ್ಷಿಸುತ ಮನ| ನೊಂದು ಸಂತಾಪದಲಿ ಚೀರ್ವುದು ||೨||
ಮತ್ತೆ ಧೈರ್ಯವ ತಾಳ್ದು ಸರವನು| ಸುತ್ತಿ ನೆಲಸಮನಾಗಿ ತಿರುಗುತ-
ಎತ್ತಲೆತ್ತಲು ಕಾಣದಲೆ ದೈನ್ಯ | ವೆತ್ತು ಬಿಡದಲೆ ತೊಳಲುತಿರುವದು ||೩||

ನಿರಾಶೆಯಲ್ಲಿ ಆಶೆ

ಕಾಂತನಗಲಿದ ಒಂದು ಕ್ಷಣವನು | ಇಂತು ಸೈರಸದಿರುವ ಪಕ್ಷಿಯು
ಚಿಂತೆಯೊಳು ಸಂತೋಷಿಸುತ ಯುಗ | ದಂಥ ರಾತ್ರಿಗಳನ್ನೆ ಕಳೆವದು|
ಹಿಂದೆ ಕೂಡಿದ ಸಮಯ ದೊಳಾಗಿನಾ | ಸುಂದತರ ಕ್ರೀಡೆಗಳ ಮನದೊಳು ತಂದು
ತನ್ಮಯವಾಗಿ ಮೂರೊಳು | ಬಂದು ಪಾಲಿರುಳನ್ನೆ ಕಳೆವುದು ||೧||
ಮುಂದೆ ಕೂಡಿದ ಮೇಲೆ ವಿರಹದಿಂ | ನೊಂದ ಸುದ್ದಿಯನೆಲ್ಲ ನಲ್ಲನ
ಮುಂದೆ ಹೇಳುತ - ಹೊಂದಿ ಸುಖಿಸುವ|ನೆಂದು ನಡುರಾತ್ರಿಯೊಳು ನೆನವುದು
ಬೆಳಗು ಬರುವದು ಬರುವದೆನುತಲಿ | ಕಳೆಯುತೇರುತ ಕಷ್ಟದೊಂದಿಕ -
ತ್ರಲೆಯ ನಡಗಿಸಿ ಉಳಿದ ನಿಶಿಯನು|ಕಳೆವುದಾಶಾನಂದ ವೃತಿಯೊಳು ||೨||

(ಡಿ.ವಿ.ಜಿ. ತಮ್ಮ ಗೀತ ಶಾಕುಂತಲದಲ್ಲಿ ಶಕುಂತಲೆಯ ಮಾತೊಂದನ್ನೇ ತೆಗೆದುಕೊಂಡು ಅದನ್ನು ಚಕ್ರವಾಕಿ, ಚಕ್ರವಾಕ ಮತ್ತು ಕಮಲ - ಮೂವರ ಸಂವಾದರೂಪಿ ಹಾಡಿನಲ್ಲಿ ಪರಿವರ್ತಿಸಿರುವರು. ಜೊತೆಗೆ ಅವುಗಳ ಚಿತ್ರವನ್ನು ಹಾಕಿರುವರು.)

ಬಳಿಕ ಕಣ್ವರು ಶಿಷ್ಯ ಶಾರ್ಙ್ಗರವನಿಗೆ: ದುಷ್ಯಂತನಿಗೆ ಇಷ್ಟು ಹೇಳು; 'ತಪಸ್ವಿಗಳಾದ ನಮಗೆ ಸಂಯಮವೇ ಸಂಪತ್ತು; ನೀನು ಉಚ್ಚಕುಲ ಸಂಭೂತ; ನಿಮ್ಮಿರ್ವರ ಪತಿ-ಪತ್ನಿ ಸಂಬಂಧ ಅನ್ಯ ಯಾರೊಬ್ಬರ ಮುಖಾಂತರ ಕೂಡಿಬಂದದ್ದಲ್ಲ. ಇದನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟುಕೊಂಡು ನಿನ್ನ ಇತರ ಪತ್ನಿಯರಂತೆ - ಇವಳನ್ನು ನಡೆಸಿಕೊಂಡು ಹೋಗಬೇಕು. ಉಳಿದದ್ದು ದೈವಾಧೀನ. ಅದನ್ನು ಹೆಣ್ಣಿನ ಆಪ್ತರು ಹೇಳಬಾರದು,' ಎಂದು ಸಂದೇಶವಿತ್ತು ಶಕುಂತಲೆಗೆ: 'ವತ್ಸೇ, ಪತಿಯ ಮಂದಿರಕ್ಕೆ ಹೋದ ಮೇಲೆ ಈ ಪ್ರಕಾರ ನಡೆದುಕೊಳ್ಳತಕ್ಕದ್ದು ಬಲ್ಲೆಯಾ:

ಪತಿಯ ಮಂದಿರಕೆ ನೀ ಪೋದ ಮೇಲಿನಿತು ಪ-
ದ್ಧತಿಯಿಂದೆ ನಡೆಯಬೇಕಮ್ಮ ಕೇಳು ||ಪ||
ಹಿತದಿಂದೆಲ್ಲರಿಗು ನಮ್ರತೆಯ ದೋರುತ ಪ್ರೌಢ
ಮತಗಳಾಗಿರಲಿಬೇಕು ಜನದೊಳು ||ಅ.ಪ.||

ಹಿರಿಯರ ಸೇವೆಯೊಳ್ ಪರಮ ತತ್ಪರಳಾಗು
ಕಿರಿಯರಿಗೆಲ್ಲ ಕರುಣವದೋರು |
ಸರಿಯ ಸವತಿಯರೊಳ್ ಸ್ನೇಹಗೂಡವರು ಮ-
ತ್ಸರವ ಮಾಡಲು ಮನದೊಳು ತಾಳು ||೧||

ನಿನ್ನೊಳು ರಮಣನು ಅನ್ಯಾಯ ಮಾಡಲು |
ಕನ್ಯೆ ಕೋಪಿಸಬ್ಯಾಡ ನಡತೆಯೊಳು ||
ಇನ್ನಿಷ್ಟು ಬಾಗಿ ಪ್ರಸನ್ನೀಕರಿಸು ಪತಿ-
ಯನ್ನೆ ಸೇವಕರೊಳು ದಯೆ ದೋರು ||೨||

ನಾನು ಸಾರುವದೆಲ್ಲ ಲಕ್ಷ್ಯದೊಳಿತು ಭಾಗ್ಯ-
ವಾನಳೆಂಬುವ ಗರುವಿಕೆ ದೂಡು||
ಈ ನಡತೆಯ ಯುವತಿಯರೆಲ್ಲ ಜನರೊಳ್ಕು -|
ಲೀನ ಸ್ತ್ರೀಯರೆಂದೆನಿಸುತಿಹರು ||೩||

ಕಣ್ವರು ದುಷ್ಯಂತನಿಗಿತ್ತ ಸಂದೇಶ ಮೂಲದಲ್ಲಿಯ 'ಅಸ್ಮಾನ್ ಸಾಧು ವಿಚಿಂತ್ಯ (೪. ೧೭) ಮತ್ತು ಶಕುಂತಲೆಗಿತ್ತ ಉಪದೇಶ 'ಶುಶ್ರೂಷಸ್ವ ಗುರೂನ್ - (೪. ೧೮) ಶ್ಲೋಕಗಳ ಸರಳಾನುವಾದಗಳಾಗಿವೆ. ಎರಡೂ ನಾಲ್ಕನೇ ಅಂಕಿನ ಶ್ಲೋಕ ಚತುಷ್ಟಯದಲ್ಲಿ ಗಣಿಸಲ್ಪಟ್ಟಿವೆ.

ಶಕುಂತಲೆಗೆ ಮತ್ತೆ ದುಃಖ ಮರುಕಳಿಸಿ ಕಣ್ವರಿಗೆ 'ತಾತಾ, ಮಲಯಗಿರಿಯ ಇಳುಕಲಿನಲ್ಲಿ ಹುಟ್ಟಿದ ಚಂದನದ ಸಸಿ ಬೇರು ಸಹಿತ ಕಿತ್ತಿ ಕೆಳಗುರುಳುವಂತೆ ತಮ್ಮ ತೊಡೆಯಿಂದ ಉರುಳಿ ದೇಶಾಂತರ ಹೊರಟ ನಾನು ಅಲ್ಲಿ ಅದೆಂತು ಬಾಳುವೆನೊ ಎಂದು ಮತ್ತೆ ಅವರನ್ನು ತಬ್ಬಿಕೊಳ್ಳುವಳು. ಕಣ್ವರು : ವತ್ಸೇ ಹಾಗೇನು ತಿಳಿಯಬೇಡ. ಪತಿಗೃಹಕ್ಕೆ ಹೋದ ಬಳಿಕ ನಮ್ಮನ್ನು ನೆನಪಿಸಿಕೊಳ್ಳಲು ಕೂಡ ನಿನಗೆ ಅವಕಾಶ ದೊರೆಯಲಿಕ್ಕಿಲ್ಲ:

ಅಗಲಿ ಪೋಗುವದಕ್ಕೆ ದುಃಖವ್ಯಾಕೆ|
ಮಗುವೆ ನಿನ್ನಯ ಪತಿಯು ಜಗದೊಡೆಯನಮ್ಮಾ ||ಪ||
ಅತಿ ಕುಲೀನನೆ ನಿನ್ನ ಪತಿಯವನ ಮನೆಯೊಳಗೆ
ಸತಿಯಾಗಿ ಬಾಳ್ವುದೆ ಶ್ಲಾಘ್ಯ ನಿನಗೆ ||
ಮತಿಯೆಲ್ಲ ಮುಳುಗಿ ಸಂ| ತತ ನಿನ್ನ ಮನೆಯ ಬಹು|

ಕೃತಿಗಳೊಳು ತವರ್ಮನೆಯ| ಸ್ಮೃತಿಯಾಗದಮ್ಮಾ ||೧||
ಇನನು ಪ್ರಾಚಿಯೊಳುದಯವನೆ ಗೈದ ತೆರನಂತೆ |
ತನಯ ನಿನ್ನೊಳು ಪುಟ್ಟಲಂಕದೊಳು ||
ಅನುದಿನದೊಳಿಟ್ಟು, ಮೋಹದಿ ಮುದ್ದಿಸಲು ಬಂಧು -|

ಜನವಿರಹದಿಂದಾದ ಕಷ್ಟವೆಲ್ಲಿಹುದು ||೨||
ಪರಿಪರಿಯ ವಿಭವದೊಳು | ಪತಿಯೊಡನೆ ಪರುಷದೊಳು |
ಸರಸ ಸವಿಮಾತುಗಳ ಸೌಖ್ಯ ಬಹಳ|
ಮರಸಿ ಬಿಡುವದು ಎಮ್ಮನರಗಳಿಗೆಯೊಳು ನೀ ತ-
ವರ ಮನೆಯ ನೆನಿಸುವದು ಬಹುದಿನದ ಕನಸು ||೩||

- ಮೂಲದಲ್ಲಿರುವ 'ಅಭಿಜನವತೋ ಭರ್ತುಃ ಶ್ಲಾಘ್ಯೇ ಸ್ಥಿತ್ವಾ ಗೃಹಿಣೀ ಪದೇ (೪. ೧೯) ಪದ್ಯದ ಭಾವವಿಸ್ತರಣ. ಇದಾದರೂ ಶ್ಲೋಕ ಚತುಷ್ಟಯದಲ್ಲಿ ಒಂದೆಂದು ಗಣಿಸಲ್ಪಟ್ಟಿದೆ.

ಶಕುಂತಲೆ ಮತ್ತೊಮ್ಮೆ ಕಣ್ವರಿಗೆ ನಮಸ್ಕರಿಸಿ, ಆಶೀರ್ವಾದ ಪಡೆದು, ಸಖಿಯರಿಂದ ಬೀಳ್ಕೊಳ್ಳುವಳು. ಅವರು ಅವಳನ್ನು ಆಲಿಂಗಿಸಿ, 'ಪತಿಗೃಹಕ್ಕೆ ಹೋದ ಬಳಿಕ ಒಂದೊಮ್ಮೆ ವಿಸ್ಮೃತಿಯಿಂದ ನಿನ್ನ ಗುರುತು ಹಿಡಿಯದಿದ್ದರೆ ಆತ ಕೊಟ್ಟ ಮುದ್ರೆ ಉಂಗುರವನ್ನು ತೋರಿಸು, ಮರೆಯಬೇಡ' ಎನ್ನುವರು. ಶಕುಂತಲೆಗೆ ಅವರ ಮಾತಿನಿಂದ ನಡಗು ಹುಟ್ಟುವದು. 'ಅವರು ಹಾಗೇನಿಲ್ಲ, ಅತಿ ಸ್ನೇಹದಿಂದ ಇಲ್ಲದ ಕಲ್ಪನೆಗಳು ಬರುವವು', ಎಂದು ಅವಳನ್ನು ಸಂತೈಸುವರು. ಹೊತ್ತಾಯಿತೆಂದು ಶಾರ್ಙ್ಗರವ ಅವಸರಿಸುವನು. ಶಕುಂತಲೆ ಪುನಃ ತಾನು ತಪೋವನವನ್ನು ಅದೆಂದು ಕಾಣಬಹುದೆಂದು ಕೇಳಿದಾಗ ಕಣ್ವರು:

ಚತುರ ಸಮುದ್ರ ಸೀಮೆ ಪೃಥಿವೆಮ್ಮನ ಕೂಡೆ ಸಪತಿಯಾಗಿ ದಂ-
ಪತಿಗಳು ದೀರ್ಘಕಾಲ ಪರಿಯಂತಕ ಸೌಖ್ಯವನುಂಡು ಪುತ್ರನ -|
ಪ್ರತಿಮ ಪರಾಕ್ರಮಂ ತಳೆವ ನಾತನಿಗೊಪ್ಪಿಸಿ ರಾಜ್ಯಭಾರಮಂ
ಪತಿಯನೆ ಕೂಡಿಕೊಂಡು ತಿರುಗೀ ಸ್ಥಳವಾಸಕೆ ಸಾಗಿ ಬಾಹುವೇ||

- ಮೂಲದಲ್ಲಿಯ 'ಭೂತ್ವಾಚಿರಾಯ ಚತುರಂತ - ಮಹೀ ಸಪತ್ನೀ (ಳ.೨೦) ಶ್ಲೋಕದ ಸರಳಾನುವಾದ. ಅಭಿಪ್ರಾಯ ಭೇದದಿಂದ ಕೆಲವರು ಇದನ್ನು ಶ್ಲೋಕ ಚತುಷ್ಟಯದಲ್ಲಿ ಒಂದೆಂದು ಗಣಿಸಿರುವರು.

ಶಕುಂತಲೆ ಮತ್ತೆ ಮತ್ತೆ ಹಿಂದಿರುಗಿ ನೋಡುತ್ತ ಕಳಿಸಲಿಕ್ಕೆಂದು ಹೊರಟ ಸಂಗಡಿಗರೊಂದಿಗೆ ಕೊನೆಗೊಮ್ಮೆ ಕಣ್ಮರೆಯಾಗುವಳು. ಉಳಿದವರು ಜಡಮನಸ್ಸಿನಿಂದ ಆಶ್ರಮಕ್ಕೆ ಹಿಂದಿರುಗುವರು. ಕಣ್ವರು ಶಕುಂತಲೆಯ ಸಖಿಯರಿಗೆ : ಶಕುಂತಲೆ ಹೋದದ್ದು ಒಂದು ದೃಷ್ಟಿಯಿಂದ ದುಃಖವಿದ್ದರೂ ಇನ್ನೊಂದು ದೃಷ್ಟಿಯಿಂದ ಋಣ ಮುಕ್ತತೆಯ ಸಮಾಧಾನ ತರುವಂಥದು. ಏಕೆಂದರೆ -

ತಿಣ್ಣಾಗಿಹ ತಲೆ ಹೊರೆಯಿದು
ಹಣ್ಣಾಗಿಹ ಬಾಳೆಗೊನೆಗಿಡವ ಬಾಗಿಸುವಾ|
ಅನ್ಯರ ಧರ್ಮವಿದು ಮನೆಯೊಳ್
ಹೆಣ್ಣಿರಬಾರದು ಬಹುದಿವಸ ತವರ ಮನೆಯೊಳ್||

'ಸುಪರಿಚಿತ' ಅರ್ಥೋಹಿಕನ್ಯಾ ಪರಕೀಯ ಏವ -(ಳ.೨೨) ಶ್ಲೋಕದ ಭಾವಾನುವಾದ. ಚುರಮುರಿ ಅನುವಾದದಲ್ಲಿ ಮೂಲದಲ್ಲಿಯ 'ಕನ್ಯೆ ಎಂದಿದ್ದರೂ ಅನ್ಯರ ಸೊತ್ತು' ಎಂಬ ಮುಖ್ಯಮಾತಿನೊಂದಿಗೆ ಬಂದಿರುವ: ಕನ್ಯಾ ಪಿತೃತ್ವ ಮತ್ತು ಹಣ್ಣಿನ ಗೊನೆಯ ಭಾರದಿಂದ ಬಾಗಿದ ಬಾಳೆಗಿಡ -ಎರಡರ ಪರಸ್ಪರ ಹೋಲಿಕೆ ಸಹೃದಯರ, ವಿಶೇಷವಾಗಿ ಮದುವೆಗಾಗಿ ಬೆಳೆದು ನಿಂತ ಕನ್ಯಾಪಿತೃಗಳ ಮನಮುಟ್ಟುವಂಥದು.

ಪರಿತ್ಯಾಗ

ಶಕುಂತಲೆ ಈಗ ದುಷ್ಯಂತನ ಆಸ್ಥಾನಕ್ಕೆ ಬಂದಿದ್ದಾಳೆ. ಜೊತೆಗೆ ಶಾರ್ಙ್ಗರವ, ಶಾರದ್ವತ, ಗೌತಮಿಯರಿದ್ದಾರೆ. ದುಷ್ಯಂತ ವಿದೂಷಕನೊಂದಿಗೆ ಕುಳಿತಿದ್ದಾನೆ. ಅಂತಃಪುರದಲ್ಲಿ ಪೂರ್ವ ಪ್ರೇಯಸಿ ಹಂಸಪದಿಕೆ ಹಾಡುತ್ತಿದ್ದಾಳೆ. ಅದೊಂದು ದುಷ್ಯಂತನ ಅಪ್ರತ್ಯಕ್ಷ ಮೂದಲಿಕೆಯ ಹಾಡು:

ಮರೆವರೇನೋ ನೀ ಚೂತ ಮಂಜರಿಯಾ ||ಪ||
ಕಮಲ ವಸತಿಯಿಂ | ಭ್ರಮ ನೀ ಮದವೇ- |
ರಿ ಮನೋಹರ ತರಿಯಾ ||೧||

ನವಮಧುವನೆ ಕಂ | ಡವಿನಯತರನೀ ಈ
ಸವಿದ ಸುದ್ದಿಯ ನರಿಯಾ ||೨||
ಕಾಡೊಳು ಕ್ಷುದೆಬಲ್ | ಪೀಡಿಸಸಮೃತವ
ನೀಡಿದವಳ ನೆನೆಯಾ ||೩||

- ಪಲ್ಲವಿ ಮತ್ತು ಮೊದಲಿನ ಎರಡು ನುಡಿಗಳು ಮೂಲ ಶ್ಲೋಕದ (ಅಭಿನವ ಮಧು ಲೋಲುಪ - ೫.೧) ಸರಳಾನುವಾದ, ಮೂರನೆಯ ನುಡಿ ಹೊಸದು. ಪರೋಕ್ಷದಲ್ಲಿ ಶಕುಂತಲೆಗೂ ಅನ್ವಯಿಸುವಂತಿದೆ. ದುಷ್ಯಂತ ಹಾಗೆಂದೂ ಮಾಡಿದವನಲ್ಲ. ಬಹುಶಃ ತನ್ನನ್ನು ಬಿಟ್ಟು ಮಹಾರಾಣಿ ವಸುಮತಿಯತ್ತ ಒಲಿದಿರುವುದನ್ನು ಕಂಡು ಹಂಸಪದಿಕೆ ಹಾಗೆ ಮೂದಲಿಸುತ್ತಿರಬೇಕೆಂದು ಬಗೆಯುತ್ತಾನೆ. ಆದರೂ ಮನಸ್ಸಿನಲ್ಲಿ ಒಂದು ಬಗೆಯ ಅನಿರ್ವಚನೀಯ ಹುರಹುರಿ. ಚೆನ್ನಾಗಿ ಮೂದಲಿಸಿದೆಯೆಂದು ಹಂಸಪದಿಕೆಗೆ ತಿಳಿಸಲು ವಿದೂಷಕನನ್ನು ಅವಳತ್ತ ಕಳಿಸುತ್ತಾನೆ,: 'ಎಂಥ ಸೋಜಿಗವಯ್ಯಾ | ಎನ್ನ ಮನಸು| ಇಂತು ಸೋಯುವದ್ಯಾತಕೆ|| ಎಂದು ತೊಡಗುವ ಪಲ್ಲವಿ, ಅನುಪಲ್ಲವಿ ಮತ್ತು ನಾಲ್ಕು ಪಾದಗಳ ಮೂರು ನುಡಿಗಳಲ್ಲಿ ಹರಡಿದ ಚುರಮರಿಯವರ ಈ ಹಾಡು ಮೂಲದ ಸುಪರಿಚಿತ 'ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್ (೫.೨) - ಶ್ಲೋಕದ ವಿಸ್ತೃತ ಭಾವ ವಿಕಾಸ. ಸುಂದರ ದೃಶ್ಯ ಕಣ್ಣಿಗೆ ಬಿದ್ದಾಗ, ಅಥವಾ ಮಧುರ ಗಾನ ಕಿವಿಗೆ ಬಿದ್ದಾಗ ಆ ವರೆಗೆ ಸುಖಿಯಾಗಿದ್ದವನು ಕೂಡ ಒಮ್ಮೊಮ್ಮೆ ಅದೇಕೊ ಅಸ್ವಸ್ಥಚಿತ್ತನಾಗುವನು. ಬಹುಶಃ ಜನ್ಮಾಂತರಗಳಲ್ಲಿ ಘಟಿಸಿದ ಯಾವುದೊಂದು ಸುಪ್ತ ಸ್ಮೃತಿಯಿಂದ ಅವನಿಗೆ ಹಾಗಾಗುತ್ತಿರಬೇಕೆಂಬುದು ಮೂಲದ ಮಥಿತಾರ್ಥ. ಚುರಮರಿ ಹಾಡಿನ ಕೊನೆಯ ನುಡಿಯಲ್ಲಿ-

ಅಲ್ಲ ಈಗಿನ ಮಾತಿದು |ಹಿಂದಿನ ಜನ್ಮ-
ದಲ್ಲಿ ಮಾಡಿದ ಸ್ನೇಹವು||
ಎಲ್ಲ ಮರೆದಿರುವರು ಸಹಜವೀವ್ಯಾಳ್ಯದೊಳು ಸ್ಮರನಂಗದೊಲು ಸ್ಮೃತಿ||
ಯಲ್ಲಿ ಬಂದಿರೆ ಮನಸು ಹಲುಬುವದಲ್ಲದಲೆ ಬ್ಯಾರಿಲ್ಲ ಆಳಿಯದು ||

- ಮಾತಿನಲ್ಲಿ ಮೂಡಿದ ಈ ಭಾವ ಅದರಲ್ಲೂ 'ಸ್ಮರನಂಗದೊಲು' ಉಪಮೆ ಅದೆಷ್ಟು ಸಲೀಸಾಗಿ ಬಂದಿದೆ ಎಂಬುದನ್ನು ಗಮನಿಸುವದು.

ದುಷ್ಯಂತ - ಈಗ ಶಕುಂತಲೆಯನ್ನು ಸಂಪೂರ್ಣ ಮರೆತಿದ್ದಾನೆ. ದುರ್ವಾಸ ಶಾಪ ಭರದಿಂದ ತನ್ನ ಪ್ರಭಾವವನ್ನು ಬೀರತೊಡಗಿದೆ. ಶಕುಂತಲೆಯೊಂದಿಗಿನ ಅವನ ಕ್ರೀಡಾ ವಿಲಾಸಗಳೆಲ್ಲ ಜನ್ಮಾಂತರಗಳಲ್ಲಿನ ಅವ್ಯಕ್ತ ಸ್ಮೃತಿಗಳಂತೆ -ಅವನನ್ನು ಅಸ್ವಸ್ಥ ಚಿತ್ತನನ್ನಾಗಿಸಿವೆ. ಕಂಚುಕಿ ವೈತಾಲಿಕರು ಅವನ ನ್ಯಾಯನಿಷ್ಠುರ ಆಡಳಿತ ಉಚ್ಚ ಚಾರಿತ್ರ್ಯಾದಿಗಳನ್ನು ಮನ ಮುಟ್ಟುವಂತೆ ಹೊಗಳುವರು. ಅವರ ಹೊಗಳಿಕೆ ಕೇವಲ ಸಂಪ್ರದಾಯಿಕ ಬಗೆಯುದಲ್ಲ.

ದುಷ್ಯಂತನಿಗೆ ಅಕ್ಷರಕ್ಷರ ಅನ್ವಯಿಸುವಂಥದು. ಹೊಂಚು ಹಾಕಿಕೊಂಡು ಕುಳಿತ ದುರಂತಕ್ಕೆ ದುಷ್ಯಂತ ಕಾರಣನಲ್ಲ. ಅದೆಲ್ಲ ದೈವದಾಸ, ಆತ ನಿಷ್ಪಾಪಿ, ಅಧರ್ಮ ಭೀರು, ಎಂಬುದರ ಪೂರ್ವ ಪೀಠಿಕೆಯಂತಿದೆ.

ಕಂಚುಕಿ ಕಣ್ವ ಪರಿವಾರ ಬಂದಿರುವದನ್ನು ಅರಿಕೆ ಮಾಡಿಕೊಳ್ಳುವನು. ದುಷ್ಯಂತ ಪುರೋಹಿತನಿಗೆ ಅವರನ್ನು ಹೋಮಶಾಲೆಗೆ ಕರೆದೊಯ್ದು ಸತ್ಕರಿಸಲು ಆದೇಶಿಸಿ ಸ್ವಲ್ಪ ಸಮಯಾನಂತರ ತಾನೂ ಅಲ್ಲಿಗೆ ಹೋಗುವನು. ಕಣ್ವರಿಂದ ಅದಾವ ಸಂದೇಶ ಬಂದಿರಬಹುದು, ಆಶ್ರಮವಾಸಿಗಳಿಗೆ ಏನಾದರೂ ವಿಘ್ನ ಒದಗಿರಬಹುದೇ ಮುಂತಾದ ಶಂಕೆಗಳು ಅವನನ್ನು ಬಾಧಿಸುವವೇ ಹೊರತು ತತ್ಪೂರ್ವದಲ್ಲಿ ಮೃಗಯಾ ನಿಮಿತ್ತ ತಾನೇ ಅಲ್ಲಿಗೆ ಹೋದದ್ದರ ಅರೆಮರೆ ನೆನಪು ಕೂಡ ಅವನನ್ನು ಸೋಂಕುವದಿಲ್ಲ. ಕುಶಲ ಪ್ರಶ್ನೆಗಳಾದ ಬಳಿಕ ಮುಖಕ್ಕೆ ಸೆರಗೆಳೆದುಕೊಂಡು ನಿಂತ ಶಕುಂತಲೆಯನ್ನು ಕಂಡು ಬೆರಗಾಗಿ:

ಯಾರಯ್ಯಾ! ಇಂಥವಳಿವಳ್ಯಾರಯ್ಯ ||ಪ||
ಮೋರೆ ನೋಡಿ ಮೋಹಬೀರಿ ನಗುವವಳಿವಳಾರಯ್ಯಾ ||ಅ.ಪ.||

ಜರದ ದುಕೂಲವನುಟ್ಟು || ಚಂದ್ರ-
ಕರದೊಳ್ ಶಲ್ಯದ ಮುಸುಕಿಟ್ಟು || ಆಹಾ -
ಕೊರಳ ಹಾರಗಳು ಬೊಗರೆ ಕುಚ ಮಧ್ಯದೊ-||
ಳ್ಮೆರೆಯೆ ಮುನಿಗಳೊಳ್ ತಾ| ಮರೆಯಾಗಿ ನಿಲ್ಲುವಳಾರಯ್ಯ ||೧||

ಇವಳ್ಯಾವಳೊ ಸ್ವರ್ಗದವಳು | ಇಟ್ಟ-
ಳವನಿಯಲ್ಲಿಲ್ಲದೊಸ್ತಗಳು | ಆಹಿ-
ಮವದಚುಲದಿ ಸಣ್ಣ ಧವಳ ಗಂಗೆಯು ಪರಿ-||
ಯುವ ತೆರನಿವರೊಳ್ ಪೊಳೆವ ಚಂದ್ರ ವದನೆಯಳಾರಯ್ಯ ||೨||

ಬಾಲೆ ನೋಡುವಳೆನ್ನ ಕದ್ದು| ಮೇಲೆ-
ಮೇಲೆ ಮುಗುಳುನಗೆ ಮುದ್ದು|| ಇವ-
ರೊಳು ಪಾಂಡುಪತ್ರ - ದೊಳಿಹ ಕಿಸಲಯ|
ದೋಲಿಹ ಬಗೆಯನಾ | ಕೇಳಿನೋಡುವೆನಿವಳಾರಯ್ಯ ||೩||

-'ಕಾಸ್ವಿದವ ಗುಂಠನವತೀ - (೫.೧೩) ಮೂಲದ ವಿಸ್ತೃತ ಅನುವಾದ. ಮೂರನೇ ನುಡಿಯಲ್ಲಿ ಅದರ ಭಾವ ಬಂದಿದ್ದು ಉಳಿದದ್ದೆಲ್ಲ ಚುರಮರಿ ಸ್ವಂತದ್ದು. ಶಕುಂತಲೆ ಪತಿ ಗೃಹಕ್ಕೆ ತೆರಳುವ ಮುನ್ನ ಅವಳಿಗಾಗಿ ಕಣ್ವರ ತಪೋಬಲದಿಂದ ಆಶ್ರಮದ ತರುಲತೆಗಳು ಸುರಯುವತಿಯರಿಗೆ ಒಪ್ಪುವಂಥ ಸುಂದರ ವಸ್ತ್ರಾಲಂಕಾರಗಳನ್ನು ಸಲ್ಲಿಸಿದವೆಂಬ ಮಾತು ಈ ಮೊದಲು ಬಂದು ಹೋಗಿದೆ. ಈಗ ಶಕುಂತಲೆ ಅವುಗಳಿಂದ ಅಲಂಕೃತಳಾಗಿ ಬಂದಿದ್ದಾಳೆ.

ಕೇವಲ ವಲ್ಕಲವನ್ನು ಧರಿಸಿದ್ದರೂ ಅದೆಷ್ಟು ಸುಂದರಳಾಗಿ ತೋರುತ್ತಿದ್ದಳೆಂಬುದನ್ನು ಕಾಳಿದಾಸ ಮನಸೆಳೆಯುವಂತೆ ಬಣ್ಣಿಸಿದ್ದರೂ ಅಮೌಲ್ಯ ವಸ್ತ್ರಾಲಂಕಾರಗಳಿಂದ ಭೂಷಿತಳಾದ ಶಕುಂತಲೆಯ ದ್ವಿಗುಣಿತ ಸೌಂದರ್ಯದ ಬಣ್ಣನೆ ಹೇಗೋ ಕೈಬಿಟ್ಟುಹೋಗಿದೆ. ಹಾಡಿನಲ್ಲಿ ಚುರಮರಿ ಆ ಲೋಪವನ್ನು ಸರಿಪಡಿಸಿದ್ದಾರೆನ್ನುವಂತಿದೆ. ಕಾಳಿದಾಸ ಇಲ್ಲಿ ಜಟೆ ಗಡ್ಡಮೀಸೆ ಬೆಳೆದ ಕಣ್ವ ಶಿಷ್ಯರನ್ನೂ ವೃದ್ಧ ಗೌತಮಿಯನ್ನೂ ಹಣ್ಣೆಗಳಿಗೂ ಶಕುಂತಲೆಯನ್ನು ಅವುಗಳ ಮಧ್ಯದಲ್ಲಿ ಸಿಲುಕಿದ ಚಿಗುರೆಲೆಗೂ ಹೋಲಿಸಿರುವನು. ಅದಕ್ಕೆ ಪೂರಕವಾಗಿ ಚುರಮರಿ ಕಣ್ವಪರಿವಾರವನ್ನು ಹಿಮಾಚಲವನ್ನು ಆವರಿಸಿದ ತರುಲತೆಗಳಿಗೂ ಶಕುಂತಲೆಯನ್ನು (ಅವಳೀಗ ವಸ್ತ್ರಾಲಂಕಾರ ಭೂಷಿತೆ) ಅವುಗಳ ಮಧ್ಯದಲ್ಲಿ ಆಗೊಮ್ಮೆ ಈಗೊಮ್ಮೆ ಕಣ್ಣಿಗೆ ಬೀಳುವ ಧವಳಗಂಗೆಯ ಥಳಥಳಿಸುವ ಶುಭ್ರ ಪ್ರವಾಹಕ್ಕೂ ಹೋಲಿಸಿರುವರು.

ಆದರೂ ದುಷ್ಯಂತನಿಗೆ ಅವಳ ಗುರುತು ಸಿಗಲೊಲ್ಲದು. ಪರಸ್ತ್ರೀಯರನ್ನು ನೋಡುವದು ಯೋಗ್ಯವಲ್ಲೆಂದು ಮೋರೆ ತಿರುಗಿಸುವನು. ಶಕುಂತಲೆಯ ಭಯ ಆಶಂಕೆಗಳಿಂದ ಅಧೀರಳಾಗುವಳು. ಶಾರ್ಙರವ: 'ರಾಜನ್, ನಮ್ಮೊಂದಿಗೆ ಬಂದವಳು ಕಣ್ವಪುತ್ರಿ ಶಕುಂತಲೆ, ಪುಣ್ಯಶೀಲೆ, ಸದ್ಗುಣಗಳ ಸಾಕಾರಮೂರ್ತಿ, ಗಾಂಧರ್ವ ವಿಧಿಯಿಂದಾದ ನಿಮ್ಮೀರ್ವರ ಮದುವೆಗೆ ಕಣ್ವರ ಸಂಪೂರ್ಣ ಒಪ್ಪಿಗೆ ಇದೆ. ಇವಳೀಗ ಗರ್ಭಿಣಿ, ಸ್ವೀಕರಿಸು, ಧರ್ಮನಿಷ್ಠನಾಗಿ ಬಾಳು, ಎಂದು ಕಣ್ವರ ಸಂದೇಶವನ್ನು ತಿಳಿಸುವನು. ದುಷ್ಯಂತನಿಗೆ ಅದಾವುದೂ ತಿಳಿಯದು. ಶಾರ್ಙರವನಿಗೆ ತಡೆಯಲಾಗದಷ್ಟು ಸಿಟ್ಟು. ದುಷ್ಯಂತನನ್ನು ಆತ: ಮದಾಂಧ, ಐಶ್ವರ್ಯ ಮತ್ತ, ಎಂದು ಮುಂತಾಗಿ ಆಕ್ಷೇಪಿಸುವನು. ಆದರೂ ದುಷ್ಯಂತ : ಎಲ್ಲೆ ಮೀರಿ ಮಾತಾಡುತ್ತಿರುವಿರಿ. ಎಂದು ಸಂಯಮದಿಂದ ಉತ್ತರಿಸುವನು. ಶಕುಂತಲೆ ಹೆಚ್ಚು ಅಧೀರಳಾಗುವಳು.

ವೃದ್ಧ ಗೌತಮಿಗೆ ಹೆಚ್ಚು ತಡೆಯಲಾಗದೆ ಶಕುಂತಲೆಗೆ :ಸೆರಗು ಸರಿಸಿ ಮುಖ ತೋರಿಸು; ಆಗಾದರೂ ಆತ ನಿನ್ನನ್ನು ಗುರುತಿಸಹುದು ಎನ್ನುವಳು. ದುಷ್ಯಂತ ಮತ್ತಷ್ಟು ಗೊಂದಲಕ್ಕೀಡಾಗುವನು. ಶಾರ್ಙರವ ಮೌನವೇಕೆಂದು ಕೇಳಿದಾಗ ದುಷ್ಯಂತ : ಹೇ, ತಪಸ್ವಿಗಳಿರಾ, ಬಹಳಷ್ಟು ನೆನಪು ಮಾಡಿಕೊಳ್ಳುತ್ತಿದ್ದೇನೆ. ಇವಳನ್ನು ಸ್ವೀಕರಿಸಿದ್ದು ನನ್ನ ಸ್ಮರಣೆಗೆ ಬರಲೊಲ್ಲದು. ಅಲ್ಲದೆ ಅವಳೀಗ ಗರ್ಭಿಣಿ ಎನ್ನುತ್ತೀರಿ. ಹೀಗಿರವಾಗಿ ಇವಳನ್ನೆಂತು ಸ್ವೀಕರಿಸಲಿ? - ಎನ್ನುವನು.

ಶಕುಂತಲೆಗೆ ಸಿಡಿಲು ಬಡಿದಂತಾಯಿತು. ಮಾತು ಬೆಳೆಸುವದರಲ್ಲಿ ಅರ್ಥವಿಲ್ಲೆಂದು ಶಾರದ್ವತ ಶಕುಂತಲೆಗೆ : ನಾವು ಹೇಳುವಷ್ಟು ಹೇಳಿದ್ದಾಯಿತು. ಇನ್ನು ಮೇಲೆ ಏನಾದರೂ ನಿನ್ನ ಅವರ ಗುರುತಿನ ಮಾತಿದ್ದರೆ ನೀನೇ ಹೇಳು, ಎನ್ನುವನು. ಶಕುಂತಲೆಗೆ ಉಂಗುರದ ನೆನಪಾಗಿ ನೋಡುತ್ತಾಳೆ, ಅದಿಲ್ಲ.

ಪೌಹಾರಿ ಗೌತಮಿಯತ್ತ ನೋಡಲು, ಆಕೆ : ದಾರಿಯಲ್ಲಿ ಶಕ್ರಾವತಾರ ಕ್ಷೇತ್ರದಲ್ಲಿ ಶಚೀ ತೀರ್ಥದಲ್ಲಿ ಸ್ನಾನಕ್ಕೆ ಹೋದಾಗ ಬಿದ್ದು ಹೋಗಿರಬೇಕು; ಇನ್ನೇನು ಗತಿ, ಎಂದು

ಗೋಳಾಡುವಳು. ದುಷ್ಯಂತ ತುಚ್ಛ ಹಾಸ್ಯದಿಂದ ಇದೊಂದು ಸ್ತ್ರೀ ವರ್ತನೆಗೆ ಪ್ರತ್ಯಕ್ಷ ನಿದರ್ಶನವೆಂದು ಗೌತಮಿಯ ಮಾತನ್ನು ಅಲ್ಲಗಳೆಯುವನು. ಶಕುಂತಲೆ ತನ್ನ ದೈವವನ್ನು ದೂಷಿಸುತ್ತ ದುಷ್ಯಂತನಿಗೆ ತಮ್ಮೀರ್ವರ ಗಾಂಧರ್ವ ವಿವಾಹ ಮತ್ತು ಆ ಸಮಯದಲ್ಲಿ ಏಕಮೇವ ಸಾಕ್ಷಿಯಂತಿದ್ದ ಆಕೆ ಸಾಕಿ ಬೆಳೆಸಿದ ದೀರ್ಘಾಪಾಂಗ ಹೆಸರಿನ ಚಿಗರೆ ಮರಿ ಸಂದರ್ಭದ ನೆನಪು ತಂದು ಕೊಡಲೆತ್ನಿಸುವಳು. ಈರ್ವರೂ ಏಕಾಂತದಲ್ಲಿ ಕುಳಿತಿದ್ದರು. ಕುಡಿಯಲೆಂದು ದುಷ್ಯಂತನ ಕೈಯಲ್ಲಿ ನೀರು ತುಂಬಿದ ಕಮಲದೆಲೆಯ ದೊನ್ನೆ ಇತ್ತು. ನೀರಡಿಸಿ ಬಂದ ಆ ಎರಳೆ ಮರಿಯನ್ನು ಕಂಡು ಕನಿಕರ ಹುಟ್ಟಿ ದುಷ್ಯಂತ ಅದೇ ಮೊದಲು ಕುಡಿಯಲೆಂದು ದೊನ್ನೆಯನ್ನು ಮುಂದೊಡ್ಡಿದನು. ಪರಿಚಯವಿಲ್ಲದ್ದರಿಂದ ಅದು ಕುಡಿಯಲಿಲ್ಲ. ಆಗ ಶಕುಂತಲೆ ಅದೇ ದೊನ್ನೆಯನ್ನು ತೆಗೆದುಕೊಂಡು ಮುಂದೊಡ್ಡಿದಾಗ ನಿರ್ಭಯದಿಂದ ಕುಡಿಯಿತು. ಅದನ್ನು ಕಂಡು ದುಷ್ಯಂತ ಶಕುಂತಲೆಗೆ : ಯಾವ ಪ್ರಾಣಿಯಾದರೂ ಸ್ವಜಾತಿಯವರಲ್ಲಿ ವಿಶ್ವಾಸವಿಡುತ್ತದೆ. ನೀವೀರ್ವರು ಒಂದೇ ಜಾತಿಯವರು - ಅರಣ್ಯವಾಸಿಗಳು, ಎಂದು ಹಾಸ್ಯ ಮಾಡಿದ್ದನು.

ಶಕುಂತಲೆಯ ಈ ಮಾತು ಕೇಳಿ ದುಷ್ಯಂತ : ಸ್ವಕಾರ್ಯ ಸಾಧಕರ ಸವಿಮಾತುಗಳಿಂದ ವಿಷಯ ಲಂಪಟರು ಮೋಸ ಹೋಗುವರು; ತಾನು ಅಂಥವನಲ್ಲ ಎನ್ನುವನು. ಗೌತಮಿ : ಅಪ್ಪಾ ದೊರೆಯೇ, ಅವಳಲ್ಲಿ ಕಪಟವೆಲ್ಲಿಯದು? ಜನ್ಮದಾರಭ್ಯ ತಪೋವನದಲ್ಲಿ ಬೆಳೆದ ಅವಳಿಗೆ ಕಪಟ ಶಬ್ದದ ಅರ್ಥ ಕೂಡ ಗೊತ್ತಿಲ್ಲ. ಪರದೇಶಿ ಕೂಸನ್ನು ಹೀಗೆ ಕಷ್ಟಪಡಿಸುವುದು ಯೋಗ್ಯವಲ್ಲೆಂದು ಅಲ್ವರಿಯುವಳು. ದುಷ್ಯಂತ ಕಟಕಿಯನ್ನು ಮುಂದರಿಸಿ : ಕಪಟವು ಸ್ತ್ರೀಯರ ಜಾತಿ ಸ್ವಭಾವ. ಮನುಷ್ಯರಲ್ಲಷ್ಟೇ ಏಕೆ ಇತರ ಪ್ರಾಣಿಗಳಲ್ಲೂ ಕಂಡು ಬರುವದು. ಕೋಗಿಲೆ ತನ್ನ ಮರಿಗಳನ್ನು ಪೋಷಣೆಗಾಗಿ ಅನ್ಯ ಪಕ್ಷಿಗಳ ಗೂಡಿನಲ್ಲಿಡುವುದಿಲ್ಲವೆ? ಎನ್ನುವನು.

ಶಕುಂತಲೆಗೆ ಸಿಟ್ಟು ತಲೆಗೇರಿತು. ವಿನಯ ಲಜ್ಜೆಗಳನ್ನು ತೊರೆದು ಗಾಯಗೊಂಡ ನಾಗಿಣಿಯಂತೆ ತಲೆಯೆತ್ತಿಸಿ : ನೀಚಾ, ನಿನ್ನ ನಡತೆಯಂತೆ ಅನ್ಯರ ನಡತೆಯೆಂದು ತಿಳಿಯಬೇಡ. ಹುಲ್ಲು ಮುಚ್ಚಿದ ಬಾವಿಯಂತೆ - ಮೇಲೆ ಮಾತ್ರ ಧಾರ್ಮಿಕತೆಯನ್ನು ತೋರಿ ನನ್ನನ್ನು ಮೋಸಗೊಳಿಸಿದೆಯಲ್ಲವೇ? ನಿನ್ನಂತೆ ಇನ್ನಾರೂ ಇರಲಾರರು ಎಂದು ಪ್ರತ್ಯುತ್ತರಿಸುವಳು.[೧]

---

೧. ಮೂಲದಲ್ಲಿ ಕೋಗಿಲೆಯ ದೃಷ್ಟಾಂತವಿರುವ ದುಷ್ಯಂತನ ಈ ಮಾತು ಪದ್ಯದಲ್ಲಿದೆ. ಇದು ಅದರ ಪೂರ್ತಿಪಾಠ -

ಸ್ತ್ರೀಣಾಮಶಿಕ್ಷಿತ ಯಾಃ ಪ್ರತಿಬೋಧವತ್ಯಃ|
ಪ್ರಾಗಂತರಿಕ್ಷ ಗಮನಾತ್ ಸ್ವಮಪತ್ಯಜಾತ -
ಮನ್ಯೈರ್ದ್ವಿಜೈಃ ಪರಭೃತಾಃ ಖಲು ಪೋಷಯಂತಿ ||೫.೨೨||

- ಇದೊಂದು ಧ್ವನಿಪೂರ್ಣ ಪದ್ಯ. ವಾಚ್ಯಾರ್ಥದಲ್ಲಿ ಸಾಕಷ್ಟು ಕಟಕಿ ಇದ್ದರೂ ಅದರ ತೀವ್ರತಮ ಸ್ವರೂಪದ ಕಿರಿವು ಮೂಲದಲ್ಲಿಯ ಶಬ್ದಗಳ ಯಥಾಸ್ಥಿತ ಬಳಕೆ ಒಂದರಿಂದಲೇ ಸಾಧ್ಯ. ಕೋಗಿಲೆ ಮರಿಯ ದೃಷ್ಟಾಂತ. ಶಕುಂತಲೆಗೆ ಸಂಪೂರ್ಣ ಅನ್ವಯಿಸುವದು. ಕಾಳಿದಾಸ ಅದಕ್ಕೆ 'ಪರಭೃತ'. ಶಬ್ದವನ್ನು ಪ್ರಯೋಗಿಸಿರುವನು. ಪರಭೃತಕ್ಕೆ 'ಎರಡನೆಯವರಿಂದ ಸಂರಕ್ಷಿಸಲ್ಪಟ್ಟ' ಎಂಬರ್ಥವೂ

ಕ್ರೋಧವಶಿದು ಶಕುಂತಲೆಯಲ್ಲಿ ಮರುಕ್ಷಣದಲ್ಲಿ ಅಷ್ಟೇ ಆಳವಿದ್ದ ಶೋಕ ಕರುಣಗಳು ಉಮ್ಮಳಿಸಿದವು. ಹಾಡು:

ರಾಯ ನಿನ್ನ ರೀತಿಯಲ್ಲೊ | ನ್ಯಾಯ ನೇತ್ರದಿಂದೆ ನೋಡೊ|
ಕಾಯವರ್ಪಿಸಿದ ಮ್ಯಾಲೆ | ಕೊರಳಗೊಯ್ಯುವರೇನೊ ||ಪ||

ಅಂದು ನೀನಾಶ್ರಮದೊಳು | ಬಂದು ಆಕಸ್ಮಿಕವೆನ್ನ
ಮುಂದೆ ಮಿಂಚಿನಂತೆ ಪೊಳೆದು | ಮಂದ ಹಾಸದೊಳು...
ಮಂದಮತಿಯೆನ್ನನು ಬಲು ಕಪಟ|ದಿಂದೆ ತಿರುಗಿಸಿ
ಮೋಸ ಮಾಡಿದೆ ||೧||

ಅಂದು ಮೊದಲು ನಿನ್ನಯ | ಕಂದರ್ಪ ರೂಪವೆನ್ನೊಳು|
ನಿಂದು ಜರ್ಜರಿತಳಾಗ|ಲೊಂದು ದಿನ ನದೀತಟ|
ಹೊರದಿರ್ಪ ಬಳ್ಳಿಮನೆಯೋಳ್ | ಚಂದನ ಶೀತೋಪಚಾರ|
ದಿಂದೆ ತಾಪಗಳೆಯಲು| ಬಂದೆಯೊ ಪಾಳತಿಯೊಳು|
ಬಂಧು ಜನರನು ಮತಿಯು ಕೇಳುವೇನೆಂದು ನಾನಲ್ಲರಿದೆನೊಲ್ಲೊ -
ಲ್ಲೆಂದೆ ನೀ ಬಿಡಲಿಲ್ಲ ಶಕ್ತಿಗಳಿಂದೆ ತನುಮನ ಗೊಂಡೆಯಲ್ಲದೊ ||೨||

ಮುನಿಗಳಾಶ್ರಮದೊಳು | ವನದೊಳ್ಬೆಳೆದು ನಾ ಹ-
ರಿಣ ಬಾಲಕರ ಗೂಡ| ಮನೆಯ ಮುಂದಾಡುತಿರ್ದೆ ||
ನಿನಗೆ ನಾನಪರಾಧ|ವನು ಮಾಡಿದ್ದೇನೊ ಬಡ-
ಕನ್ನಿಕೆಯ ಗೂಡನೀ ಭು| ವನನಾಥನಾಗಿ ಲಜ್ಜೆ|
ಇನಿತು ಇಲ್ಲದೆ ಭಾಷೆ ನೀಡುತ | ಮನಸು ಮರಳಿಸಲೀಗ ನಿನ್ನಯ
ಮನೆಗೆ ಬರೆ ನಾನೊಂದರಿಯೆನೆಂ| ಬಿನಿತು ಕೀರ್ತಿಯು ಮಾಡಿದೆಲ್ಲವೆ ||೩||

ಇದೆ. ಭ್ರಾಂತಿಯಿಂದ ತನ್ನದೇ ಎಂದು ಕೋಗಿಲೆ ಮರಿಯನ್ನು ಸಂರಕ್ಷಿಸಿದ ಇನ್ನೊಂದು ಪಕ್ಷಿಗೆ 'ದ್ವಿಜ' ಶಬ್ದವನ್ನು ಬಳಸಿರುವನು. ಅದಕ್ಕೆ 'ಬ್ರಾಹ್ಮಣ' ಎಂಬ ಅರ್ಥವೂ ಉಂಟು. ಅದು ಕಣ್ವರಿಗೂ ಅನ್ವಯಿಸುವುದು. 'ಅಮಾನುಕ್ಷೀಷ್ಟು' - ಎಂದರೆ 'ಮನುಷ್ಯೇತರರಲ್ಲಿ'. ಮನುಷ್ಯೇತರರಲ್ಲಿ ದೇವತೆಗಳೂ ಬರುವರು. 'ಅಂತರಿಕ್ಷ ಗಮನಾತ್' ಪದದಿಂದ 'ಗಗನಸಂಚಾರಿ' ಅರ್ಥ ಬರುವಂತಿದೆ. ಎರಡರ ಜೋಡಣೆ ಶಕುಂತಲೆಗೆ ಜನ್ಮ ಕೊಟ್ಟ ತಾಯಿ ಮೇನಕೆಗೆ ಸರಿಹೋಗುವುದು. ಜೊತೆಗೆ ಆಗ ಜನಿಸಿದ ಕೂಸನ್ನು ಅನ್ಯ ಯಾರಾದರೂ ಸಂರಕ್ಷಿಸಲೆಂದು ಬಿಸುಟಿ ಹೋದ ತಾಯಿ ಎಂಬ ಉಪರೋಧಾತ್ಮಕ ಅನುಮೇಯಾರ್ಥವೂ ಹೊರಡುವಂತಿದೆ. ಕಾಳಿದಾಸನ ಇಷ್ಟಾರ್ಥವಾದರೂ ಹೀಗೆಯೇ ಇದ್ದಿರಬೇಕೆಂಬುದು ದುಷ್ಯಂತನ ಮಾತಿಗೆ ಮರುಕ್ಷಣದಲ್ಲಿಯೇ ಸಿಟ್ಟು ನೆತ್ತಿಗೇರಿ ಶಕುಂತಲೆ ಆಡಿದ ಮಾತುಗಳಿಂದ ಸ್ಪಷ್ಟವಾಗುವುದು, ಎಂದಿರುವರು ಡಾ. ರಾಘವನ್ - Love in Panol of Kal, p. 34

- ಹಾಡಿನಲ್ಲಿ ಹೊಸದೇನೂ ಇಲ್ಲ. ಪೂರ್ವದಲ್ಲಿ ನಡೆದ ದುಷ್ಯಂತ -ಶಕುಂತಲೆಯರ ಪ್ರೇಮ ವ್ಯವಹಾರದ ಪುನರವಲೋಕನ. ಆದರೂ ಸಹೃದಯನ ಮನ ಕರಗಿಸುವಂಥದು. ಶಕುಂತಲೆಯ ಕ್ರೋಧ,ಅದರ ಬೆನ್ನಿಗೇನೆ ಬಂದ ಕರುಣಾವಿಲಾಸ ದುಷ್ಯಂತನ ಮನಸ್ಸನ್ನು ಕಲಕುವವು. ಅವಳೆನ್ನುವುದು ನಿಜವಿದ್ದರೂ ಇರಬಹುದೆಂಬ ಸಂದೇಹ ಇಣಕಿಕ್ಕುವುದು. ಆದರೂ ಆತ ಶಕುಂತಲೆಗೆ 'ಭದ್ರೇದುಷ್ಯಂತನ ಚಾರಿತ್ರ ಪ್ರಸಿದ್ಧವಿದೆ. ಅದರಲ್ಲಿ ನೀನಾಡುವ ಮಾತುಗಳಿಗೆ ಎಳ್ಳಷ್ಟು ಸಹ ಎಡೆ ಇಲ್ಲ' ಎನ್ನುವನು. ಶಕುಂತಲೆ : ನಿನ್ನಂತೆಯೆ ಆಗಲಿ. ನಾನು ಮಾತ್ರ ಈಗ ಜಾರಿಣಿಯಂತೆ ಸ್ವಚ್ಛಂದ ಜಾರಿಣಿಯಾದೆ.. ಪುರುವಂಶದವನೆಂದು ಸಂಪೂರ್ಣ ವಿಶ್ವಾಸವಿಟ್ಟಿದ್ದಕ್ಕೆ ಮುಖದಲ್ಲಿ ಅಮೃತವೂ ಹೃದಯದಲ್ಲಿ ವಿಷವೂ ತುಂಬಿಕೊಂಡ ಪುರುಷನ ಕೈಯಲ್ಲಿ ಸಿಕ್ಕಂತಾಯಿತು. ಹೆಚ್ಚು ಮಾತುಗಳಿಂದ ಏನು ಫಲವೆಂದು ಮೋರೆಗೆ ಸೆರಗಿಕ್ಕಿ ಬಿಕ್ಕಿ ಬಿಕ್ಕಿ ರೋದಿಸತೊಡಗುವಳು.

ಶಾರ್ಙರವ ಶಕುಂತಲೆಗೆ: ದುಡುಕಿ ಮಾಡಿದ ಗುಪ್ತ ಪ್ರೇಮ ನಿಷ್ಫಲವಾದಾಗ ಪರಿಣಾಮ ಹೀಗಾಗುವುದು, ಎನ್ನಲು ದುಷ್ಯಂತನಿಗೆ ಚುಚ್ಚಿದಂತಾಗಿ ವಾದ ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗುವಂತಾಗುವುದು. ಶಾರದ್ವತ ನಡುವೆ ಬಿದ್ದು : ಒಣ ಮಾತುಗಳಿಂದ ಫಲವಿಲ್ಲ. ಗುರುಗಳಾಜ್ಞೆ ಎಷ್ಟೋ ಅಷ್ಟು ಪಾಲಿಸಿದ್ದಾಯಿತು. ಇನ್ನು ಹೊರಡೋಣ ಎನ್ನುವನು. ಎಲ್ಲರೂ ಹೊರಡಲಣಿಯಾಗುವರು. ಶಕುಂತಲೆಯೂ ಹೊರಡಲೆತ್ನಿಸುವಳು. ಶಾರ್ಙರವ ಸಿಟ್ಟಿನಿಂದ ತಡೆದು ಬೇಡನ್ನೆವು. ಮರುಕ್ಷಣದಲ್ಲಿ ಸ್ತಿಮಿತಕ್ಕೆ ತಂದುಕೊಂಡು : ಅಮ್ಮ, ರಾಜನ ಮಾತು ನಿಜವಿದ್ದರೆ ನಿನ್ನಿಂದ ತಾತ ಕಣ್ವರಿಗೆ ಕಷ್ಟವೇ ಹೊರತು ಬೇರೊಂದಿಲ್ಲ. ನಿನ್ನ ಮಾತೇ ನಿಜವಿದ್ದರೆ "ಮತಿಯು ಶುದ್ಧಮಿರಲ್ ಮನೆಯಾಳಿನೊಳ್ ಪತಿಯ ಬಾಗಿಲೊಳಿಹುದುತ್ತಮ' ಎಂದು ಸಮಾಧಾನ ಹೇಳುವನು. ಎಲ್ಲರೂ ಮರಳಿ ಹೊರಡುವರು. ಏನು ಮಾಡಬೇಕೆಂಬುದು ತಿಳಿಯದೆ ದುಷ್ಯಂತ ಪುರೋಹಿತನತ್ತ ನೋಡಿದಾಗ ಆತ : ಇವಳೀಗ ಗರ್ಭಿಣಿ; ಪ್ರಸೂತಳಾಗುವವರೆಗೆ ತನ್ನಲ್ಲಿರಲಿ;ಹೇಗೂ ಚಕ್ರವರ್ತಿ ಪುತ್ರನಾಗುವನೆಂಬ ಹಿರಿಯರ ಆಶೀರ್ವಾದವಿದೆ; ಅಂಥ ಲಕ್ಷಣಗಳಿರುವ ಪುತ್ರನಾದರೆ ಪತ್ನಿಯೆಂದು ಸ್ವೀಕರಿಸಿ ಅಂತಃಪುರದಲ್ಲಿ ಸೇರಿಸಿಕೊಳ್ಳಬಹುದು; ಇಲ್ಲವಾದರೆ ಅವಳ ದಾರಿ ಅವಳಿಗೆ ಎನ್ನುವನು. ದುಷ್ಯಂತ ಒಪ್ಪುವನು. ಶಕುಂತಲೆಗೆ ಹಿಂಬಾಲಿಸಹೇಳಿ ಪುರೋಹಿತ ಅವಳೊಂದಿಗೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಮಿಂಚಿನಂತೆ ಹೊಳೆಯುತ್ತಿದ್ದ ದೇವಕನ್ಯೆಯೋರ್ವಳು ಶಕುಂತಲೆಯನ್ನೆತ್ತಿಕೊಂಡು ಅಪ್ಸರ ತೀರ್ಥದ ಬಳಿ ಕಾಣದಂತಾಗುವಳು. ಮರಳಿ ಬಂದು ಪುರೋಹಿತ ದುಷ್ಯಂತನಿಗೆ ನಡೆದ ಘಟನೆಯನ್ನು ಅರಿಕೆ ಮಾಡಿಕೊಳ್ಳುವನು. ದುಷ್ಯಂತ: ಮೊದಲೇ ಅವಳನ್ನು ತ್ಯಜಿಸಿದ್ದಾಗಿದೆ. ಹೆಚ್ಚಿನ ಊಹಾಪೋಹವೇಕೆ, ಎಂದು ಅಲ್ಲಿಂದ ಏಳುವನು. ಆದರೂ ಅವಳಾಡಿದ ಮಾತು ನಿಜವಿರಬೇಕೆಂಬ ಅವನ ಅಂತರಾತ್ಮದ ಹಳಹಳಿ ತಪ್ಪುವುದಿಲ್ಲ.

ಶಾಪವಿಮೋಚನ - ಪಶ್ಚಾತ್ತಾಪ

ಕೆಲವು ವರ್ಷಗಳು ಗತಿಸಿದವು. ಶಕ್ರಾವತಾರ ಕ್ಷೇತ್ರದಲ್ಲಿ ಶಚೀತೀರ್ಥದ ಬಳಿ ಒಬ್ಬ ಮೀನುಗಾರನಿದ್ದನು. ಒಂದು ದಿನ ಅವನಿಗೊಂದು ರೋಹಿತ ಜಾತಿಯ ಮೀನು ದೊರೆಯಿತು. ಆ ಜಾತಿಯ ಮೀನಗಳಲ್ಲಿ ಹೊಟ್ಟೆಯಲ್ಲಿ ಒಮ್ಮೊಮ್ಮೆ ಅವು ನುಂಗಿದ ಚಿಕ್ಕಪುಟ್ಟ ಸುವರ್ಣಾದಿ ವಸ್ತುಗಳು ದೊರೆಯುವವರೆಂಬ ನಂಬುಗೆ ಇದ್ದುದರಿಂದ ಮನೆಗೆ ಬಂದು ಹೆಚ್ಚಿ ನೋಡಿದಾಗ ಅದರ ಹೊಟ್ಟೆಯಲ್ಲಿ ಒಂದು ಉಂಗುರವಿದ್ದಿತು. ಅದಾದರೊ ದುಷ್ಯಂತನ ಹೆಸರಿದ್ದ ರಾಜಮುದ್ರಿಕೆ. ಮಾರಲೆಂದು ಪೇಟೆಗೆ ಹೋದ ಮೀನುಗಾರನನ್ನು ನಗರ ರಕ್ಷಕರು ಸಂಶಯದಿಂದ ಬಂಧಿಸಿ ಕೇಳಿದಾಗ ಆತ ನಡೆದ ವೃತ್ತಾಂತವನ್ನು ತಿಳಿಸಿದನು. ರಕ್ಷಕರ ಪ್ರಮುಖನು ಪ್ರಾಣಿಹಿಂಸೆಯಿಂದ ಜೀವಿಸುವ ನಿನ್ನದು ಒಳ್ಳೇ ಪವಿತ್ರ ವೃತ್ತಿ ಎಂದು ಮೂದಲಿಸಿದಾಗ ಅಭಿಮಾನ ಕೆರಳಿ ಮೀಂಗುಲಿ :' ದ್ಯಾವರು, ನನಗೆ ನಗಬಾರದರಿ ಬುದ್ಧೀ; ಅಜ್ಜ ಆರತೆಲಿ, ಮುತ್ಯಾ ಮೂರತೆಲಿ ಇದೇ ವ್ಯಾರೇವ ಮಾಡತ - ಬಂದೀವರಿ; ಅದ ಹ್ಯಾಂಗ ಬಿಡಾಕ ಬರತೈತಿ? ಜೀವಾ ಕೊಲ್ಲಾವಗೇನ ಅಂತಕಣ್ಣ ಇರಾಣೆಲ್ರೆ? ಕಣ್ಣಾಪಟ್ಟಿ ಹಾರೂರು ಯಗ್ನಾ ಮಾಡುವಾಗ ಕುರಿಕೊರ್ಲ್ಯಾಣೆಲ್ರೇ ಗುದ್ದಿ ಗುದ್ದಿ ಕ್ಯಾಸಿ? ಹಾಂಗ ನಮ್ಮ ವ್ಯಾರೇವತರಿ, ನನ್ನ ಒಪ್ಪಾ', ಎನ್ನುವನು. ಮೂಲ ಪದ್ಯದಲ್ಲಿದೆ. ಮೀರಾಗುಲಿಯದು ಕೆಳವರ್ಗೀಯ ಪಾತ್ರವಿರುವದರಿಂದ ಪ್ರಾಕೃತದಲ್ಲಿದೆ. ಚುರಮರಿ ಅದನ್ನು ಧಾರವಾಡ ಸೀಮೆಯ ಗ್ರಾಮ್ಯ ಗದ್ಯದಲ್ಲಿ ಪರಿವರ್ತಿಸಿರುವರು.

ರಾಜಮುದ್ರಿಕೆ ಇದ್ದುದರಿಂದ ದುಷ್ಯಂತನಿಗೆ ತೋರಿಸಿ ನಿರ್ಣಯ ಪಡೆಯಲೆಂದು ರಕ್ಷಕರ ಪ್ರಮುಖ ಅವನ ಸನ್ನಿಧಿಗೆ ಹೋಗುವನು. ಉಂಗುರ ಕಣ್ಣಿಗೆ ಬಿದ್ದಾಕ್ಷಣ ದುಷ್ಯಂತನಿಗಿದ್ದ ಶಾಪವಳಿಯಿತು. ಮೀಂಗುಲಿಗೆ ಅದರ ಬೆಲೆಯಷ್ಟು ದ್ರವ್ಯ ಕೊಡಿರೆಂದು ಆಜ್ಞಾಪಿಸಿ, ಹಿಂದಿನದೆಲ್ಲ ನೆನಪಾಗಿ ತನ್ನಿಂದ ಅದೆಂಥ ಪ್ರಮಾದವಾಯಿತು ಎಂದು ಪರಿತಪಿಸುವನು. ಯಾವುದಕ್ಕೂ ಉತ್ಸಾಹ ಉಳಿಯಲಿಲ್ಲ. ಅದೆಲ್ಲ ದುರ್ವಾಸ ಶಾಪದ ಪ್ರಭಾವವೆಂಬುದು ದುಷ್ಯಂತ ಶಕುಂತಲೆ ಈರ್ವರಿಗೂ ಗೊತ್ತಿಲ್ಲ. ಅನಸೂಯೆ ಪ್ರಿಯಂವದೆ ಈರ್ವರಿಗೆ ಮಾತ್ರ ಅದರ ಅರಿವಿದ್ದಿತು. ಪತಿಗೃಹಕ್ಕೆ ಹೊರಟಾಗ ಶಕುಂತಲೆಗೆ ಪ್ರಸಂಗ ಬಂದರೆ ಗುರುತು ಕೊಡಲು ಉಂಗುರವನ್ನು ತೋರಿಸೆಂದು ಹೇಳಿದಾಗ ಶಕುಂತಲೆ ಭಯ ವಿಹ್ವಲಳಾದರೂ ಅವರು ಏಕೆಂಬುದನ್ನು ಹೇಳಲಿಲ್ಲ. ಉಂಗುರ ಶಕುಂತಲೆಯ ಬಳಿಯಲ್ಲಿಯೇ ಇದ್ದುದರಿಂದ ಎಲ್ಲವೂ ಸರಿಹೋಗುವದೆಂದು ಅವರ ಬಗೆದಿದ್ದರು. ಆದರೆ ದೈವದೆಣಿಕೆ ಬೇರೆಯೇ ಇದ್ದಿತು. ದುಷ್ಯಂತನಿಂದ ಪರಿತ್ಯಕ್ತಳಾದ ಶಕುಂತಲೆಯನ್ನು ಎತ್ತಿಕೊಂಡು ಕಿಂಪುರುಷ ಖಂಡದಲ್ಲಿ ಹೇಮಕೂಟ ಪರ್ವತದಲ್ಲಿದ್ದ ಮಾರೀಚಾಶ್ರಮಕ್ಕೆ ಒಯ್ದು ಅಲ್ಲಿಯೇ ಅವಳ ಹೆರಿಗೆ ವ್ಯವಸ್ಥೆ ಮಾಡಿದ್ದಳು. ದುಷ್ಯಂತನ ಮನಸ್ಥಿತಿಯನ್ನು ಅರಿತುಕೊಳ್ಳಲು ಮೇನಕೆ ತನ್ನ ಸಖಿ ಸಾನುಮತಿ - ಎಂಬ ಅಪ್ಸರೆಯನ್ನು ಕಳಿಸಿದ್ದಳು. ಅದೃಶ್ಯ ರೂಪದಿಂದ ಆಕೆ ಅಲ್ಲಿ ನಡೆಯುತ್ತಿದ್ದ ಎಲ್ಲ ಆಗುಹೋಗುಗಳನ್ನು ನಿರೀಕ್ಷಿಸುತ್ತಿದ್ದಳು. ಶಾಪಮೋಚನದ ಬಳಿಕ ಪಶ್ಚಾತ್ತಾಪ ದಗ್ಧ ದುಷ್ಯಂತ ಹುಚ್ಚನಂತಾಗಿದ್ದನು.

ಸನ್ನಿಹಿತವಾದ ವಸಂತೋತ್ಸವದ ಆಚರಣೆಗೆ ತಡೆ ಹಾಕಿದ್ದನು. ಬೇರೆಡೆಯಿಂದ ಬಂದ ಉಪವನದ ಸೇವಿಕೆಯರೀರ್ವರಿಗೆ ಅದು ಗೊತ್ತಿದ್ದಿಲ್ಲ. ಅವರು ಮದನ ಪೂಜೆಯ ವ್ಯವಸ್ಥೆ ನಡೆಸಿದ್ದರು. ವಸಂತ - ಮನ್ಮಥರ ಆಗಮನ ಸೂಚಕ ಮಾವಿನ ಚಿಗುರೆಲೆ ಹೂಗಳನ್ನು ನೋಡಿ ಓರ್ವಳು - 'ಥಳಳಳಳಳಳಳ ಹೊಳೆವಾ | ಮಾವಿನ ಚೆಲುವ ಕೆಂದಳಿರೊಳ್' ಎಂಬ ಲಾವಣಿಪದವನ್ನು ಹೇಳುವಳು. ಅದೊಂದು ಚುರಮರಿಯವರ ಸ್ವರಚಿತ ಪದ. ಅದರಲ್ಲಿನ ಕೊನೆಯ -

ಸ್ಮರರಾಯಭೂಪನೀ ತೆರದೊಳ್ |
ಕರಕೊಂಡು ವಸಂತನ ಬಳಿಯೊಳ್ |
ಹರನೊಳು ಕಾದಲೀಸ್ಥಳದೊಳ್ | ಎಮ್ಮೋಲ್|
ಕಿರಿಪರೆಯದಬಲೆಯರು ಬರುವದು ಕೇಳ್ ದುಸ್ತರವ ||

ಈ ನುಡಿ ಮತ್ತು ಇದರ ಮೊದಲಿನ ನುಡಿಗಳು ಕುಮಾರಸಂಭವ ಕಾವ್ಯದಲ್ಲಿ ಶಿವನ ತಪಸ್ಸನ್ನು ಕೆಡಿಸಲು ಸಜ್ಜಾಗಿ ಪೊರಟ ಮದನ ವಸಂತರ ಬಣ್ಣನೆಯನ್ನು ನೆನಪಿಗೆ ತರುವವರೊಂದಿಗೆ ಉಪವನ ಸೇವಿಕೆಯರಲ್ಲಿ ಉದಿಸಿದ ಮದನ ಸಹವರ್ತಮಾನ ವಸಂತಾಗಮನದ ಪ್ರಭಾವ. ಜೊತೆಗೆ ಪರಾಧೀನರಿದ್ದ ತಮ್ಮಂಥ 'ಕಿರಿಪರೆಯದಬಲೆಯರು' ಉಪವನದ ಏಕಾಂತ ಸ್ಥಳಕ್ಕೆ ಬರುವದು ಅಯುಕ್ತವೆಂಬ ಅಪರಾಧಿ ಭಾವ ಗಮನಿಸುವಂತಿವೆ. ಆದರೂ ಮೋಹ ತಡೆಯಲಾಗದೆ ಅವರು ಮಾವಿನ ಹೂವುಗಳಿಂದ ಮನ್ಮಥನನ್ನು ಪೂಜಿಸಿ 'ಕಮಲ ಪುಷ್ಪವೆಂಬ ಸ್ತಬಕದಲ್ಲಿ ಸಂಪಿಗೆ ಹೂವಿನ ದೀಪಗಳನ್ನು' ಇಟ್ಟು -

ಅತಿಶಯಾತುರದಿ | ರತಿಯು ಬಂದು ಬಿಸ -
ಟುತಿರೆ ಮುಸುಕು ನೆರೆ | ಹಿತದಿ ತೋಳ್ಗಳಿಂ |
ಸತಿಯಕಪ್ಪಿ......................
ಥಳಿಸೆ ಚಂದ್ರಕರ | ಸೆಳೆಯಶಲ್ಯ ಹೊ -
ತ್ತಳಿಯ ಸಿಂಜಿನಿಯ | ನೆಳೆದು ಕುಸುಮಶರ -
ಗಳಲ್ಲಿ ತ್ರಿಲೋಕವ | ಗೆಲುವ ವಸಂತನ
ಗೆಳೆಯ ಗಾರುತಿಯ ಬೆಳಗಿರೆ ಸೋಬಾನೆ ||

- ಹಾಡಿನಿಂದ ಆರತಿ ಮಾಡಿದ ಸನ್ನಿವೇಶದ ಬಣ್ಣನೆ 'ವಾಃ' ಎಂಬ ಉದ್ಗಾರಕ್ಕೆ ತಕ್ಕುದಾಗಿದೆ. ಇದಾದರೂ ಚುರಮರಿ ರಚಿತ ಪದ.

ಅಷ್ಟರಲ್ಲಿ ವೃದ್ಧ ಕಂಚುಕಿ ಬಂದು : ಹುಚ್ಚೇರ್ಯಾ, ಹಳೇ ಹುಚ್ಚೇರ್ಯಾ, ತೋಟದಲ್ಲಿ ಯಾರೂ ಇಲ್ಲದ ವ್ಯಾಳ್ಯದಲ್ಲಿ ಬಂದು ಮನ್ಮಥನ ಪೂಜೆ ಮಾಡುತ್ತಾರೆ, ನಾಚಿಕೆ ಬರುವುದಿಲ್ಲವೆ? ದೊರೆಗಳು ವಸಂತೋತ್ಸವಕ್ಕೆ ತಡೆಹಾಕಿರುವದು ಗೊತ್ತಿಲ್ಲವೆ? ಎಂದು ಗದ್ದರಿಸುವನು. ಸೇವಿಕೆಯರು : ಅಪ್ಪಯ್ಯಾ, ಅರಸು ವಸಂತೋತ್ಸವ ನಿಲ್ಲಿಸಿದ್ದು ನಮಗೆ ಗೊತ್ತಿಲ್ಲವೊ, ಸಿಟ್ಟು

ಮಾಡಬೇಡ ಎಂದು ಬೇಡಿಕೊಳ್ಳುವರು. ಕಂಚುಕಿ : ವಸಂತೋತ್ಸವ ಬಂದೇ ಏಕೆ, ಎಲ್ಲಾ ಉತ್ಸವಗಳನ್ನು ನಿಲ್ಲಿಸಿರುವನು. ಉಂಗುರ ದೃಷ್ಟಿಗೆ ಬಿದ್ದದ್ದಿನಿಂದ ಹಿಂದಿನದೆಲ್ಲ ನೆನಪಾಗಿ ಶಕುಂತಲೆಯ ವಿಷಯದಲ್ಲಿ ಅವನಿಗುಂಟಾದ ಕೊರಗು ಪಶ್ಚಾತ್ತಾಪಗಳಿಗೆ ಎಲ್ಲೆ ಉಳಿದಿಲ್ಲ. ತನ್ನ ಕಾರ್ಯಕ್ಕಾಗಿ ತಾನೇ ಜುಗುಪ್ಸೆಗೊಂಡಿದ್ದಾನೆ. ಸದಾ ಅವಳದೇ ಚಿಂತೆ ಎಂದು ವಿವರಿಸುವನು. ಅಷ್ಟರಲ್ಲಿ ದುಷ್ಯಂತ ವಿದೂಷಕನೊಂದಿಗೆ ಅಲ್ಲಿ ಬರುವನು. ವಿಶ್ರಾಂತಿಗೆ ಯೋಗ್ಯ ಸ್ಥಳವೆಂದು ಅಲ್ಲಿಯೇ ಸ್ವಲ್ಪ ಸಮಯ ವಿಶ್ರಮಿಸಬಯಸಿ : ಓಲಗಕ್ಕೆ ಬರವಾಗುವುದಿಲ್ಲ. ಪ್ರಜಾಕಾರ್ಯವನ್ನು ತೀರಿಸಿ, ಸಾಯಂಕಾಲ ವರದಿ ಮಾಡಬೇಕೆಂದು ಮಂತ್ರಿಗೆ ಹೇಳಿ ಕಳಿಸುವನು. ಮತ್ತೆ ಶಕುಂತಲೆಯ ನೆನಪು. ವಿದೂಷಕನಿಗೆ ಇತ್ತ ತಾನು ಶಕುಂತಲೆಯನ್ನು ಅಪ್ರತಿಷ್ಠೆಗೊಳಿಸಿ ಪರಿತ್ಯಜಿಸಿದೆ. ಅತ್ತ ಕಣ್ವ ಶಿಷ್ಯರು ಸಿಟ್ಟಿನಿಂದ ತಮ್ಮೊಂದಿಗೆ ಬರಬೇಡೆಂದರು.

ಅವಳ ಮುಖ ಝುರ್ರೆಂದು ಇಳಿಯಿತು. ಆ ನೋಟ :

ಹರಹರಾ | ಆ ದರಿಸದಾದೆ ||ಪ||
ಖೇದಗೊಂಡಾ ಮುಖವನೆನೆಯಲು |

ಭೇದಿಸುವದೆನ್ನ ಹೃದಯವು ||ಅ. ಪ.||

ಮಂದಮತಿನಾ ಮನೆಯ ಸತಿಯನು |
ಮಂದಿಯೊಳು ಹೊರ ನೂಕಿದೆ||
ಚೆಂದವಲ್ಲೆಂದವಳು ಬೋಧಿಸೆ |
ಕುಂದು ನುಡಿಗಳನಾಡಿದೆ ||೧||

ಅಂದು ಮುನಿಶಿಷ್ಯರು ಸರೋಷದಿಂ |
ಮುಂದೆ ಸಾಗಿದರವರೊಳು ||
ಹಿಂದೆ ಸಖಿಯಳು ಪೋಗೆ ಕ್ರೋಧದಿಂ |
ಹಿಂದಿರುಗಿ ಬೆದರಿಸಿದರು ||೨||

ಅಂದು ಎನ್ನಯ ಪ್ರಿಯಳು ಶಿಷ್ಯರು|
ತಂದೆ ಸಮನೆಂದರಿದಳು ||
ಬಂದು ಮಾತಾಡದಲೆ ಥರಥರ -
ನೆಂದು ನಡುಗುತ ನಿಂದಳು ||೩||

'ಇತ್ತ ನಾ ಮನೆಯಲ್ಲಿ ಬರಗೊಡೆ -
ನೆತ್ತವರು ಕರಕೊಳ್ಳರು ||
ಕುತ್ತಿಗೆಯ ಬಿಗಿದವಳು ದೂರದಿಂ |
ಮತ್ತೆ ಎನ್ನನು ನೋಡ್ದಳು ||೪||

ತುಂಬಿ ತುಳುಕುವ ನೀರುಗಣ್ಣಿನ |
ಹಂಬು ಮೈಯಳ ನೋಟವು ||
ಅಂಬಿನಂತಿಗೆ ತೊಡೆದ ವಿಷ ಪಿಂ
ತೆಂಬುವೊಲು ವ್ಯಥೆಗೊಳಿಪುದು ||೫||

- ಮೂಲದ 'ಇತಃ ಪ್ರತ್ಯಾದೇಶಾತ್ - (೬.೯ ಪದ್ಯದ) ಭಾವವಿಸ್ತರಣವಿದ್ದರೂ ಕನ್ನಡದಲ್ಲಿ, ವಿಶೇಷವಾಗಿ ಕೊನೆಯ ಎರಡು ನುಡಿಗಳು, ಎಷ್ಟೊಂದು ಹೃದಯಸ್ಪರ್ಶಿಯಾಗಿ ಬಂದಿವೆಂಬುದನ್ನು ಮತ್ತೆ ಮತ್ತೆ ಓದಬೇಕೆನಿಸುವಂತಿವೆ. ದುಷ್ಯಂತನ ವಿಲಾಪ ಮುಂದುವರಿಯುವದು. ಆಶ್ರಮದಿಂದ ಹೊರಡುವ ಮುನ್ನ ಉಂಗುರವನ್ನು ಕೊಟ್ಟು ದಿನಕ್ಕೆ ಒಂದರಂತೆ ಅದರಲ್ಲಿಯ ತನ್ನ ನಾಮಾವಶೇಷಗಳನ್ನು ಓದಿ ಮುಗಿಸುವಷ್ಟರಲ್ಲಿ ಕರೆಸಿಕೊಳ್ಳುವೆನೆಂದು ವಚನಕೊಟ್ಟು ಮೋಸ ಮಾಡಿದೆ, ಎಂದು ಹಳಿದುಕೊಳ್ಳುವನು. ವಿದೂಷಕ: ಉಂಗುರ ದೊರೆತಂತೆ ಅಕಸ್ಮಾತ್ತಾಗಿ ಶಕುಂತಲೆ ಕೂಡ ಇಂದಿಲ್ಲ ನಾಳೆ ದೊರೆತಾಳು ಎಂದು ಸಂತೈಸುವನು. ಆದರೂ ದುಷ್ಯಂತನಿಗೆ ಸಮಾಧಾನವಿಲ್ಲ. ನೆಮ್ಮದಿಗಾಗಿ ತಾನೇ ಬರೆದ ಶಕುಂತಲೆಯ ಚಿತ್ರವನ್ನು ತರಿಸಿಕೊಳ್ಳುವನು. ಅದೃಶ್ಯ ರೂಪದಲ್ಲಿ ಬಳಿಯಲ್ಲಿ ನಿಂತು ನೋಡುತ್ತಿದ್ದ ಸಾನುಮತಿ ದುಷ್ಯಂತನ ಕಲಾಕೌಶಲ್ಯವನ್ನು ಮೆಚ್ಚಿಕೊಳ್ಳುವಳು. ವಿದೂಷಕನೂ ಹೊಗಳುವನು. ಚಿತ್ರವಿನ್ನೂ ಅಪೂರ್ಣ. ಅದರಲ್ಲಿ ಅನೇಕ ಕೊರತೆಗಳಿವೆ. ಕೇಳು:

ಇಳಿಯಲಿಲ್ಲವೋ ರೂಪ| ವಿಳಿಯಲಿಲ್ಲವೊ||
ಇಳಿಯಲಿಲ್ಲ ನಳಿನಮುಖಿಯ
ನಳಿನಳಿಸುವ ಕಳೆಯು ಕೆಲಸ
ದೊಳಗೆ ದಣಿಮು ಕಂದಿರೆ ಕಂ -1
ಗಳಲಿ ಮೆರೆವ ಸ್ನೇಹಭಾವ ವಿಳಿಯ ||ಪ||

ಮಿರುಪ ಫಣೆಗೆ ಜೋಲ್ದ ಸುರುಳು-
ಗುರುಳು ಬರೆದೆ ಮಿಸುನಿಬಣ್ಣ
ದೆರಡು ಗಲ್ಲದೊಳು ಕಾಣ-
ದಿರುವ ಸೂಕ್ಷ್ಮರೋಮಭಾವ ಉಳಿಯ ||೧||

ಸುಳಿವಳ್ಳಿಯ ಮೈಯೊಳು ನಾ
ನೆಳೆಹರೆಯದ ಹೊಳಪು ತೋರ್ವೆ
ತಿಳಿವಸನದೊಳಡಗಿದ ಮೊಲೆ-
ಗಳಲಿ ಕಿರಿ ಬೆವರಿನ ಭಾವ ವಿಳೆಯೆ ||೨||

ನೀತಿ ವಿನಯ ಭೀತಿ - ಲಜ್ಜೆ
ಪ್ರೀತಿ - ನೇಹವೀಗುಣಗಳ
ನಾತು ಶ್ರಮದೊಳಾಂತು ನಿಂದು
ಮಾತನಾಡುವಂತೆ - ಭಾವವಿಳಿಯ ||೩||

- ಚುರಮುರಿ ಸ್ವತಂತ್ರ ರಚನೆ. ಕಣ್ವಾಶ್ರಮದಲ್ಲಿ ದುಷ್ಯಂತ ಶಕುಂತಲೆಯ ಪ್ರತಿಯೊಂದು ಹಾವಭಾವವನ್ನು ರೂಪ ಲಾವಣ್ಯಗಳನ್ನು ಆದೆಷ್ಟು ಸೂಕ್ಷ್ಮವಾಗಿ ನಿರುಕಿಸಿದ್ದನು ಎಂಬುದರ ಸುಂದರ ಅಭಿವ್ಯಕ್ತಿ. ದುಃಖಾಶ್ರುವಿನಂತೆ ಕಣ್ಣಿನಿಂದ ಬಣ್ಣದ ನೀರಿಳಿದದ್ದನ್ನು ಕಂಡು ಅದನ್ನು ತಿದ್ದಲು ದಾಸಿಗೆ ಬಣ್ಣದ ಪೆಟ್ಟಿಗೆ ತರ ಹೇಳಿ, ವಿದೂಷಕನಿಗೆ:

ಚಿತ್ರದ ರೂಪಕ್ಕೆ | ನಾ ಮರುಳಾದೆನಯ್ಯಾ ||ಪ||

ಅಸಮರೂಪ ಸಂಪನ್ನೆ| ಎಸೆದಿದಿರೊಳೆನ್ನೋಳ್ ಪ್ರಾ-
ರ್ಥಿಸುತ ನಿಂದಿರೆ ಮೋರೆ ನೋಡದೆ ||೧||

ನದಿಯ ದಾಂಟಿ ಮುಂದಕ್ಕೆ | ಮದನನಟವಿಯೊಳ್ ಬಂದೆ|
ಮೃಗಜಲಕಾಶೆ ನೆರೆಮಾಡಿದೆ ||೨||

ಹೆಣ್ಣಿನ ಗೋಳಿಗ್ಹೇಸದೆ | ಕಣ್ಣೀರನೊರಿಸದೆ
ಬಣ್ಣದಶ್ರುಗಳಳಿಸಹೋದೆ ||೩||

- ಮೂಲದಲ್ಲಿಯ 'ಸಾಕ್ಷಾತ್ ಪ್ರಿಯಾಮುಪಗತಾಮಪಹಾಯಪೂರ್ವಂ - (೬.೧೬ ಪದ್ಯದ) ವಿಸ್ತೃತ ಭಾವಾನುವಾದ. ಕೊನೆಯ ನುಡಿ ಚುರಮುರಿ ಸ್ವಂತದ್ದು. ದುಃಖಾಶ್ರುವಿನಂತೆ ಕಾಣುತ್ತಿದ್ದ ಶಕುಂತಲೆಯ ಕಣ್ಣಿಂದಿಳಿದ ಬಣ್ಣದ ಬಿಂದುವನ್ನು ತಿದ್ದಲುದ್ಯುಕ್ತನಾದ ದುಷ್ಯಂತನ ಪಶ್ಚಾತ್ತಾಪದಗ್ಧ ಮನಸ್ಥಿತಿಯ ಬಣ್ಣನೆ, ಅವನ ಪರಿತಾಪ ಹೆಚ್ಚುವುದು. ಅದು ಚಿತ್ರವೆಂದು ವಿದೂಷಕ ಹೇಳಿದಾಗ : 'ಎಚ್ಚರವ್ಯಾಕೆ ಮಾಡಿದ್ಯೆ ಎನ್ನನು | ಚಿತ್ತರತಿ ಪ್ರತ್ಯಕ್ಷ ಸಖಿಯೆಂದು ಅತ್ಯಂತ ಹರ್ಷದಲಿದ್ದೆ' ಎಂದು ಪ್ರಲಾಪಿಸತೊಡಗುವನು.

ಕಂಜಾಕ್ಷಿಯಳೆಲ್ಲೊ | ಕಾಂಬುವದೆಂತೊ ||ಪ||

ಹಗಲು ರಾತ್ರಿಯಲಿ ನಾ | ನಗಲ್ದಿರುವ ದುಃಖ|
ಮಿಗಿಲ್ಹ್ಯಾಗೆಸ್ಯೆರಿಸಲೊ|| ಕಾಂಬುವಾ ||೧||

ಸುಂದರಾಂಗಿಯನು ನಾ | ಕನಸಿನಲ್ಲೀಕ್ಷಿಸುವೆ-
ನೆಂದರೆ ನಿದ್ರೆ ಬಾರದೊ || ಕಾಂಬುವ- ||೨||

ಚಿತ್ರದೊಳ್ ಚಲುವಿಕೆಯ ಚೆನ್ನಾಗಿ ನೋಡುವೆನೆ|
ನೇತ್ರದೊಳ್ ಬಾಷ್ಪಗಳೊ ಕಾಂಬುವದೆಂತೋ ||೩||

- ಎಂದು ಹಲಬುವನು. 'ಪ್ರಜಾಗರಾತ್ ಖಿಲೀಭೂತಸ್ತಸ್ಯಾಃ ಸ್ವಪ್ನೇ ಸಮಾಗಮಃ, ೬.೨೨' ಶ್ಲೋಕದ ಹಿಗ್ಗಿಸಿದ ಅನುವಾದ. ಸುಲಭವಾದ ಕನ್ನಡದ ಮೆರಗಿನೊಂದಿಗೆ ಎಷ್ಟು ಸಲೀಸಾಗಿ ಬಂದಿದೆಂಬುದನ್ನು ಓದಿ ಮನಗಾಣಬೇಕು.

ದುಷ್ಯಂತನ ಮನಸ್ಥಿತಿ - ಇಂತಿರುವಾಗ ಹೊಸದೊಂದು ವಾರ್ತೆ ಅದನ್ನು ಮತ್ತಿಷ್ಟು ಉಲ್ಬಣಗೊಳಿಸುವರು. ದಾಸಿಯೊರ್ವಳು ಮಂತ್ರಿಯಿಂದ ಬಂದ ಒಂದು ಕಾಗದವನ್ನು ಒಪ್ಪಿಸುವಳು. ವಿದೂಷಕನಿಗೆ ಹೋಗಹೇಳಿ ಓದಿ ನೋಡಿದಾಗ ಅದರಲ್ಲಿ : ಸಮುದ್ರ ವ್ಯಾಪಾರಿ ಧನಮಿತ್ರ ಶೆಟ್ಟಿ ಅಕಸ್ಮಾತ್ತಾಗಿ ಹಡಗ ಮುಳುಗಿ ಮರಣ ಹೊಂದಿದನು. ಅವನು ನಿಪುತ್ರಿಕ. ಕಾನೂನಿನನುಸಾರ ಅವನ ಆಸ್ತಿ ಸರಕಾರಕ್ಕೆ ಸೇರಬೇಕು. 'ರಿಕೆ ಇರಲಿ' ಎಂದಿದೆ. ಕ್ಷಣ ಹೊತ್ತು ವಿಚಾರಿಸಿ ದುಷ್ಯಂತ : ಧನಮಿತ್ರ ದೊಡ್ಡ ವ್ಯಾಪಾರಿ, ಅವನಿಗೆ ಒಬ್ಬಳಿಗಿಂತ ಹೆಚ್ಚು ಹೆಂಡಂದಿರಿರುವುದು ಶಕ್ಯ; ಅವರಲ್ಲಿ ಯಾರಾದರೂ ಗರ್ಭಿಣಿ ಇರಬಹುದು, ಶೋಧ ಮಾಡಿ ನೋಡಿ, ಎಂದು ಆದೇಶಿಸುವನು. ಪಕ್ಕದಲ್ಲಿದ್ದ ಪ್ರತೀಹಾರಿ: ಧನಮಿತ್ರ ಓರ್ವ ಹೆಂಡತಿ ಗರ್ಭಿಣಿ ಇದ್ದು ಕೆಲವು ದಿನ ಮೊದಲು ಅವಳ ಬಯಕೆ ಭೋಜನ ಸಮಾರಂಭವಾಯಿತೆಂಬ ಸುದ್ದಿ ಇರುವದನ್ನು ತಿಳಿಸುವನು. ಆಗ ದುಷ್ಯಂತನು ಶೆಟ್ಟಿಯ ಆಸ್ತಿ ಆ ಗರ್ಭಸ್ಥ ಶಿಶುವಿಗೆ ಹೋಗಬೇಕೆಂದು ಆಜ್ಞಾಪಿಸಿ ಸಂತತಿಹೀನನಿದ್ದ ತನ್ನ ಸ್ಥಿತಿಯಾದರೂ ಆ ಶೆಟ್ಟಿಯದರಿಂದ ಭಿನ್ನವಿಲ್ಲ ಎಂದು ಮತ್ತೆ ಶೋಕಿಸತೊಡಗುವನು. ಗರ್ಭಿಣಿಯಿದ್ದ ಶಕುಂತಲೆಯನ್ನು ನೆನೆಸಿಕೊಂಡು 'ಪುರುಕುಲಕೆ ಭೂಷಣೆಯಳೆನ್ನಂಕುರವ ಪಾಲಿಪ ಭೂಮಿಯನ್ನುದರಿಸಲಿಲ್ಲ' ಎಂದು ಗೋಳಿಡುವನು. ವಂಶನಿಂತು ಪಿತೃಗಳು ತರ್ಪಣಾದಿಗಳಿಲ್ಲದೆ ಕಷ್ಟಕ್ಕೀಡಾಗುವರಲ್ಲಾ, ಎಂಬ ಕೊರಗು ಬಲವತ್ತರಿಸಿ, ಮೂರ್ಛೆ ಹೋಗುವನು.

ಇತ್ತ ಮಾರೀಚಾಶ್ರಮದಲ್ಲಿ ಶಕುಂತಲೆ ಗಂಡು ಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಮಗು ಭರದಿಂದ ಬೆಳೆಯತೊಡಗಿದೆ. ಅದೃಶ್ಯ ರೂಪದಿಂದ ನೋಡುತ್ತಿದ್ದ ಸಾನುಮತಿಗೆ ಅದೆಲ್ಲ ಗೊತ್ತಿದೆ. ಪ್ರಕಟವಾಗಿ ದುಷ್ಯಂತನಿಗೆ ತಿಳಿಸಿ ಅವನನ್ನು ಶೋಕಮುಕ್ತನಾಗಿಸಬೇಕೆಂಬ ಮನಸ್ಸಾಗುತ್ತದೆ. ಆದರೆ ಹಿರಿಯರ ಸಂಕಲ್ಪ ಬೇರೆ ಇದ್ದುದರಿಂದ ಅವಸರ ಬೇಡವೆಂದುಕೊಳ್ಳುತ್ತಾಳೆ. ಶಕುಂತಲೆಯಲ್ಲಿದ್ದ ದುಷ್ಯಂತನ ಪ್ರೀತಿ ನಿಜವಿದ್ದು ಅವಳಿಗಾಗಿ ಆತ ಎಷ್ಟೊಂದು ಪರಿತಪಿಸುತ್ತಿರುವನೆಂಬುದನ್ನು ಮನಗಂಡು ಮೇನಕೆಗೆ ತಿಳಿಸಲು ಅಂತರಿಕ್ಷ ಮಾರ್ಗದಿಂದ ಹಾರಿ ಹೋಗುವಳು.

ಮೂರ್ಛೆಯಿಂದ ಎಚ್ಚತ್ತು ಅತ್ತಿತ್ತ ನೋಡುವಷ್ಟರಲ್ಲಿ ವಿದೂಷಕನ ಆರ್ತ ಸ್ವರ ಕೇಳಿ ಬರುತ್ತವೆ. ಯಾವುದೋ ಒಂದು ಅದೃಶ್ಯ ಶಕ್ತಿ ಅವನ ಕತ್ತು ಹಿಚಕುತ್ತಿದೆ. ಶಸ್ತ್ರಧಾರಿಯಾಗಿ

ದುಷ್ಯಂತ ಅವನನ್ನು ಬಿಡಿಸಿಕೊಳ್ಳಲು ಹೊರಡುವಷ್ಟರಲ್ಲಿ, ಇಂದ್ರಸಾರಥಿ ಮಾತಲಿ ಮುಂಬಂದು: ರಾಕ್ಷಸ ಬಾಧೆ ಹೆಚ್ಚಾಗಿದೆ. ಬಂದು ಸಹಾಯ ಮಾಡಬೇಕೆಂಬ ಇಂದ್ರನ ಸಂದೇಶವನ್ನು ತಿಳಿಸುವನು. 'ಶೋಕಾಕುಲನಾದ ನಿನ್ನಲ್ಲಿ ವೀರಶ್ರೀಯನ್ನು ಕೆರಳಿಸಲು ವಿದೂಷಕನನ್ನು ಕ್ಷಣ ಹೊತ್ತು ಪೀಡಿಸಬೇಕಾಯಿತು', ಎನ್ನುವನು. ವಿದೂಷಕನಿಗೆ ವೃತ್ತಾಂತವನ್ನು ಮಂತ್ರಿಗೆ ತಿಳಿಸಲು ಆದೇಶಿಸಿ ದುಷ್ಯಂತ ಮಾತಲಿಯೊಂದಿಗೆ ಇಂದ್ರಲೋಕಕ್ಕೆ ಹೊರಡುವನು.

ಪುನರ್ಮಿಲನ

ಇಂದ್ರನಿಗೊದಗಿದ ಆಪತ್ತನ್ನು ನಿವಾರಿಸಿದ್ದಕ್ಕಾಗಿ ದುಷ್ಯಂತನಿಗೆ ದೇವತೆಗಳಿಗೆ ಕೂಡ ದುರ್ಲಭವಿದ್ದ ಮಾನಸನ್ಮಾನಗಳು ಲಭಿಸಿದವು. ಅವನೀಗ ಇಂದ್ರನಿಂದ ಬೀಳ್ಕೊಂಡು ಮಾತಲಿಯೊಂದಿಗೆ ಇಂದ್ರನ ರಥದಲ್ಲಿ ಕುಳಿತು ಭೂಲೋಕಕ್ಕೆ ಮರಳಿ ಹೊರಟಿದ್ದಾನೆ. ಮಧ್ಯದಲ್ಲಿ ಕಿಂಪುರುಷ ಖಂಡದಲ್ಲಿ ಹೇಮಕೂಟ ಪರ್ವತದಲ್ಲಿದ್ದ ಮಾರೀಚ ಋಷಿಗಳ ದರ್ಶನಕ್ಕೆಂದು ಅವರ ಆಶ್ರಮದತ್ತ ರಥ ಭರದಿಂದ ಕೆಳಗಿಳಿಯತೊಡಗಿದೆ. ರಥದ ವೇಗದಿಂದ ಭೂಮಿ ಸ್ಥಿರವಿದ್ದರೂ ಮೇಲೇರಿ ಬಂದಂತೆ ಕಾಣುತ್ತದೆ. ಆ ದೃಶ್ಯದಿಂದ ಪುಲಕಿತನಾದ ದುಷ್ಯಂತ : ಮಾತಲಿಯೇ ನೋಡು: ಗಿರಿಶಿಖರಗಳು ಮೇಲೇರಿ ಬರುವಂತೆ ಕಾಣುತ್ತಿವೆ. ಸುತ್ತಣ ಭೂಮಿ ಕೆಳಗೆ ಸರಿದಂತೆ ತೋರುತ್ತಿದೆ. ಹಸಿರು ಹೊದಿಕೆಯಂತೆ ತೋರುತ್ತಿದ್ದ ಗಿಡ ಮರಗಳು ಬಿಡಿಬಿಡಿಯಾಗಿ ಕಾಣತೊಡಗಿವೆ. ರೇಖೆಗಳಂತೆ ಕಾಣುತ್ತಿದ್ದ ನದಿ ಪಾತ್ರಗಳು ವಿಸ್ತೃತವಾಗತೊಡಗಿವೆ. ಯಾರೋ ಒಬ್ಬರು ಪೃಥ್ವಿಯನ್ನೇ ನನ್ನತ್ತ ಎಸೆಯುತ್ತಿರುವಂತೆ ಕಾಣುತ್ತದೆ, ಎನ್ನುವನು. ವಿಮಾನಾವರೋಹಣದ ದುಷ್ಯಂತನ ಈ ಬಣ್ಣನೆ ಮೂಲದಲ್ಲಿ 'ಶೈಲಾನಾಮ ವರೋಹತೀವ ಶ್ಲೋಕದಲ್ಲಿ ಬಂದಿದೆ. ವಿಮಾನಸಂಚಾರಿಗಳಿಗೆ ಇದೊಂದು ಪರಿಚಿತ ಅನುಭವ. ವಿಮಾನಗಳಿಲ್ಲದ ಅಂದಿನ ದಿನಗಳಲ್ಲಿ ಅಭಿವ್ಯಕ್ತಿ ಪಡೆದ ವಾಸ್ತವ ಸ್ವರೂಪದ ಈ ಬಣ್ಣನೆ ಕಾಳಿದಾಸನ ಕಲ್ಪನಾ ಕೌಶಲ್ಯಕ್ಕೆ ಕನ್ನಡಿ ಹಿಡಿದಂತಿದೆ ಎಂದು ಹೊಗಳಿರುವರು. ವಿಮರ್ಶಕರು, ಚುರಮರಿಯದು ಮೂಲದ ಸರಳಾನುವಾದವಿದ್ದರೂ ಕೊನೆಯ ಪಾದದಲ್ಲಿ ಮಾಡಿದ ಬದಲಾವಣೆಯಿಂದ ಅದಕ್ಕೊಂದು ಕಾವ್ಯಮಯ ಸ್ವರೂಪ ಬಂದಂತಾಗಿದೆ. ಪೃಥ್ವಿ ಗುಂಡಗಿರುವ ವಸ್ತು. ಕಾಳಿದಾಸ 'ಭುವನಂ' ಎಂದಿರುವನು. ಅನುವಾದಗಳಲ್ಲಿ ಕೆಲವರು ಭೂಗೋಲ, ಇತರರು ಭೂಮಿ, ಧರೆ, ಉರ್ವಿ ಮೊದಲಾದ ಸಮಾನಾರ್ಥಕ ಪದಗಳನ್ನು ಪ್ರಯೋಗಿಸಿರುವರು. ಏನಿದ್ದರೂ ಎತ್ತಿ ದುಷ್ಯಂತನತ್ತ ಎಸೆಯುವದಾದರೆ ಅದು ಗುಂಡಗಿರಬೇಕಾದುದು ಕ್ರಮಪ್ರಾಪ್ತ. ಗುಂಡನ್ನೆತ್ತಿ ಎಸೆಯುವ ಮಾಡಿನಿಂದ ಇಂದಿನ ಪರಿಸರದಲ್ಲಿ ಪಂದ್ಯಾಟಗಳಲ್ಲಿ ಕಬ್ಬಿಣದ ಭಾರವಾದ ಗುಂಡೆಸೆಯುವ [Putting the shot or shotput] ಆಟಗಾರನ ಪ್ರತಿಮೆ ಕಣ್ಣೆದುರು ಬಂದಂತಾಗುತ್ತದೆ. ಚುರಮರಿ ದುಷ್ಯಂತ ಭೂಪತಿ ಎಂಬುದನ್ನು ಮನಗಂಡು ಮೂಲದ ಭುವನ ಶಬ್ದವನ್ನು 'ಭುವನೆ' ಎಂದು ಸ್ತ್ರೀರೂಪದಲ್ಲಿ ಮಾರ್ಪಡಿಸಿ, ಪದ್ಯದ ಕೊನೆಯ ಪಾದವನ್ನು

'ಎದುರಿಗೆ ಬರ್ಪಾಳ್ಕೆ ಭುವನೆಯೆನ್ನನು ಶೀಘ್ರದೊಳಪ್ಪಿಕೊಂಬುವೋಲ್' ಎಂದು ಪರಿವರ್ತಿಸಿರುವುದು ಅವರ ನೈಸರ್ಗಿಕ ಪ್ರತಿಭೆಗೆ, ರಸಜ್ಞತೆಗೆ ಸಾಕ್ಷಿ ನುಡಿಯುವಂತಿದೆ.

ಮಾರೀಚಾಶ್ರಮದ ಪ್ರಶಾಂತ: ವಾತಾವರಣದಿಂದ ದುಷ್ಯಂತನಿಗೆ ಅದೆಷ್ಟೋ ನೆಮ್ಮದಿ ಉಂಟಾಗಿದೆ. ಮಾರೀಚರು ಪತ್ನಿ ಅದಿತಿಯ (ದೇವಮಾತೆ) ಬಿನ್ನಹದ ಮೇರೆಗೆ ಆಶ್ರಮ ಸ್ತ್ರೀಯರುಗಳಿಗೆ ಪಾತಿವ್ರತ್ಯ ಮಹಾತ್ಮೆಯನ್ನು ಹೇಳುತ್ತಿದ್ದಾರೆ. ಅವರಲ್ಲಿ ಶಕುಂತಲೆಯೂ ಇರುವಳೆಂಬುದು ದುಷ್ಯಂತನಿಗೆ ಗೊತ್ತಿಲ್ಲ. ಋಷಿಗಳ ದರ್ಶನ ಸಮಯವನ್ನು ತಿಳಿದುಕೊಳ್ಳಲು ಮಾತಲಿ ಅತ್ತ ತೆರಳುವನು. ದುಷ್ಯಂತ ಸಮೀಪದ ಒಂದು ಅಶೋಕ ವೃಕ್ಷದ ನೆರಳಲ್ಲಿ ವಿಶ್ರಮಿಸುವನು. ಅವನ ಬಲಭುಜ ಸ್ಫುರಿಸುವುದು. ಶುಭಶಕುನವಿದ್ದರೂ ಅದು ವ್ಯರ್ಥ; 'ಮರಗು ಮಾತ್ರ ಮಿಕ್ಕಿಹುದು ಜನ್ಮದೊಳ್' ಎಂದು ಉಸುರ್ಗರೆಯುವನು. ಅಷ್ಟರಲ್ಲಿ 'ಏನೋ, ಅದೆಷ್ಟು ಕಿಡಿಗೇಡಿತನ; ಎಷ್ಟು ಹಿಡಿಯಬೇಕು ಇವನನ್ನ; ಮತ್ತೆ ತನ್ನ ಜಾತಿ ಸ್ವಭಾವಕ್ಕೇನೆ ಹೋಗುತ್ತಾನೆ - ಎಂಬ ಶಬ್ದಗಳು ಅವನ ಕಿವಿಗೆ ಬೀಳುವುವು. ದುಷ್ಯಂತನ ಕುತೂಹಲ ಕೆರಳುವದು. ಅಂಥ ಪ್ರಶಾಂತ ಸ್ಥಳದಲ್ಲಿ ಅದೇನು ಗದ್ದಲವೆಂದು ಹೊರಳಿ ನೋಡುವನು. ಆರೇಳು ವರ್ಷದ ಮುದ್ದು ಬಾಲಕನೊಬ್ಬನು ಆಟದ ವಸ್ತುವಿನಂತೆ. ಒಂದು ಸಿಂಹದ ಮರಿಯನ್ನು ತನ್ನತ್ತ ಎಳೆಯುತ್ತಿದ್ದಾನೆ. ದುಷ್ಯಂತನಿಗೆ ಅಚ್ಚರಿ; ಆಕರ್ಷಣೆ; ಹೊಟ್ಟೆಯ ಮಗನನ್ನು ಕಂಡಷ್ಟು ಪ್ರೀತಿ. ವಾತ್ಸಲ್ಯ ಉಕ್ಕಿ ಬಂದು ದುಷ್ಯಂತ:

> ತೋರಲೆಳೆಯಳೆ ದಂತಪಂಕ್ತಿಯು
> ಕಾರಣೆಲ್ಲದೆ ನಗುವ ನುಡಿಗಳು
> ಬಾರದಲೆ ತೊದಲಾಡಿ ಸವಿಯುಣಿಸುವ ಕಿವಿಗೆ ಮುದ್ದು|
> ಮೋರೆ ಮೇಲ್ಮಾಡುತಲಿ ಕರಕೊಂ-
> ಡೇರು ಮಾಳಿಗೆಯೆಂದು ಕಣ್ಣೀರ್
> ತಾರದಳು ವರ್ಭಕನ ಮೈಮಣ್ಣಾಳ್ವರೇಂ ಕೃತರೋ||

- ತಥ್ಯದಲ್ಲಿ ಮೂಲದ 'ಅಲಕ್ಷ್ಯದಂತ ಮುಕುಲಾನನಿಮಿತ್ತ ಹಾಸ್ಯೈಃ, (೭. ೧೭) ಪದ್ಯದ ಸರಳಾನುವಾದ ಇದ್ದರೂ ಈತ ಕಾಳಿದಾಸನ ಬಾಲಕನಿಗಿಂತ ದೊಡ್ಡವ. ಆಟದಲ್ಲಿ ಮೈಗೆ ಮಣ್ಣು ಹತ್ತಿದ ಕಾಳಿದಾಸನ ಬಾಲಕ ತಂದೆಯ ತೊಡೆಯನ್ನೇರಲು ಆತುರನಾಗಿದ್ದರೆ, ಚುರಮರಿ ಬಾಲಕ ಎತ್ತಿಕೊಂಡು ಮಾಳಿಗೆ ಏರು ಎಂದು ಹಟ ಹಿಡಿದಿದ್ದಾನೆ. ಕಣ್ಣುಗಳಲ್ಲಿ ನೀರಿಲ್ಲದೆ ಅಳುವ ಅರ್ಭಕನೆಂಬ ಅವರ ಬಣ್ಣನೆ ಚಿಕ್ಕ ಅಂದರೆ ಅಂಬೆಗಾಲು ಅಥವಾ ದಟ್ಟಡಿ ಇಡುವ ಬಾಲಕನಿಗೆ ಸಲೀಸಾಗಿ ಅನ್ವಯಿಸುವಂಥದು. ಇಲ್ಲಿಯಾದರೋ ಆತ ಆರೇಳು ವರ್ಷದವ (ಕಾಳಿದಾಸನಿಗೆ ಆಕರವಿದ್ದ ಮಹಾಭಾರತದ ಶಕುಂತಲೆ ಮಗು ಜನ್ಮಿಸಿ ಆರು ವರ್ಷಗಳ ನಂತರ ದುಷ್ಯಂತನ ಬಳಿಗೆ ಹೋದಳೆಂಬ ಮಾತಿದೆ) ಸಿಂಹದ ಮರಿಯನ್ನು ಅಂಜಿಕೆಯಿಲ್ಲದೆ ಎಳೆಯುತ್ತಿರುವನು. ಬಹುಶಃ ಈ ಅಂಶವನ್ನು ನೆನೆದು ಚುರಮರಿ ತಮ್ಮ ಸರ್ವದಮನನನ್ನು ಹೀಗೆ

ಬಣ್ಣಿಸಿರಬೇಕೆನಿಸುವದು. ಆದರೂ ಕೃತಕತೆ ಎದ್ದು ಕಾಣುವಂತಿದೆ. ಬಾಲಕ ಜೊತೆಗಿದ್ದ ತಾಪಸಿಯರ ಮಾತು ಕೇಳಲೊಲ್ಲನು. ಎಲ್ಲಾದರೂ ತಾಯಿಸಿಂಹ ಗಾಯಗೊಳಿಸೀತೆಂಬ ಭಯ ಅವರಿಗೆ. ಓರ್ವಳು : ಬಿಡು ಅದನ್ನು; ಬೇರೊಂದು ಆಟಿಗೆ ತಂದು ಕೊಡುತ್ತೇನೆ, ಎನ್ನುವಳು. 'ಕೊಲುಹಂಗಲ' ಎಂದು ತೊದಲು ನುಡಿಯಿಂದ ಮಗು ಕೈ ಒಡ್ಡಿದಾಗ ಅದರಲ್ಲಿ ಚಕ್ರವರ್ತಿ ಲಕ್ಷಣಗಳನ್ನು ಕಂಡು

೧. ಚುರಮುರಿ ಬಣ್ಣನೆ ಅಖಿಲ ಭಾರತ ಖ್ಯಾತಿಯ ಚಿತ್ರ ಶಿಲ್ಪಿ ರಾಜಾ ರವಿವರ್ಮ (೧೮೪೮-೧೯೦೬) ಬರೆದ : ಎಡಬದಿಯ ಕಂಕುಳದಲ್ಲಿ ಸಿಂಹದ ಮರಿಯನ್ನಿಟ್ಟುಕೊಂಡು ಬಲಗೈಯಲ್ಲಿಯ ಚಿಕ್ಕ ಕೈಗೋಲಿನಿಂದ ತಾಯಿ ಸಿಂಹವನ್ನು ಬೆದರಿಸುತ್ತಿರುವ ಸರ್ವದಮನನ ಚಿತ್ರವನ್ನು ನೆನಪಿಗೆ ತರುವಂತಿದೆ. ರೈನಾಪುರ ಶಾಕುಂತಲದ ತಮ್ಮ ಅನುವಾದದಲ್ಲಿ ರವಿವರ್ಮರ ಈ ಚಿತ್ರದ ಪ್ರತಿಕೃತಿಯನ್ನು ಹಾಕಿರುವರು. ದುಷ್ಯಂತನಿಗೆ ಮತ್ತಿಷ್ಟು ವಿಸ್ಮಯ. ತಾಪಸಿ ದುಷ್ಯಂತನಿಗೆ ಸಿಂಹದ ಮರಿಯನ್ನು ಗಟ್ಟಿಯಾಗಿ ಹಿಡಿದಿದ್ದಾನೆ, ಬಿಡಿಸಪ್ಪಯ್ಯ, ಎಂದು ಕೇಳಿಕೊಳ್ಳುವಳು. ದುಷ್ಯಂತ ಮಗುವಿಗೆ: 'ಮಹರ್ಷಿ ಪುತ್ರ, ಆಶ್ರಮವಾಸಿಗಳಿಗೆ ಇದು ಯೋಗ್ಯವಲ್ಲ, ಬಿಡು ಅದನ್ನು' ಎನ್ನುವನು. ತಾಪಸಿ: ಅಯ್ಯ, ಈತ ಋಷಿ ಕುಮಾರನಲ್ಲ; ಪುರುವಂಶದಲ್ಲಿ ಜನಿಸಿದ ರಾಜಕುಮಾರ; ಹೆಸರು ಸರ್ವದಮನ ಎಂದು ತಿಳಿಸುವಳು. ಸಿಂಹದ ಮರಿಯನ್ನು ಬಿಟ್ಟು, ಮಗು ತಾನಾಗಿಯೇ ದುಷ್ಯಂತನತ್ತ ಹೋಗುವದು. ಈರ್ವರ ಮುಖಚರ್ಯೆಯಲ್ಲಿದ ಹೋಲಿಕೆಯನ್ನು ಕಂಡು ತಾಪಸಿಯರಿಗೆ ಅಚ್ಚರಿ. ಮಾನವನಿದ್ದ ಕುಮಾರ ಅಲ್ಲಿಂತು ಬಂದನೆಂಬುದು ದುಷ್ಯಂತನಿಗೆ ಪ್ರಶ್ನೆ. ಅಪ್ಸರೆಯೋರ್ವಳ ಸಂಬಂಧಿಕನೆಂಬುದನ್ನು ಕೇಳಿ ಮಗು ತನ್ನದೇ ಇರಬಹುದೆಂಬ ಆಶೆ ಅಂಕುರಿಸುವದು. ತಂದೆ ಯಾರೆಂದು ಕೇಳಿದಾಗ ತಾಪಸಿ : ಧರ್ಮಪತ್ನಿಯನ್ನು ತ್ಯಜಿಸಿದ ಅವನ ಹೆಸರನ್ನು ಕೂಡ ಉಚ್ಚರಿಸಲಾಗದು ಎನ್ನುವಳು. ಆದಾದರೂ ಅವನಿಗೇನೆ ಅನ್ವಯಿಸುವ ಮಾತು. ಹೋಗಲಿ, ತಾಯಿಯ ವಿಷಯವೇನೆಂದು ಕೇಳುವಷ್ಟರಲ್ಲಿ ಆಟಿಗೆ ತರಪೋದ ತಾಪಸಿ : ಮಣ್ಣಿನ ನವಿಲನ್ನು ತೋರಿಸಿ, 'ಮಗು ಸರ್ವದಮನಾ ಇಲ್ಲಿ ನೋಡು 'ಶಕುಂತ ಲಾವಣ್ಯ' ಎಷ್ಟು ಚೆಂದಾಗಿದೆ, ಎನ್ನುವಳು. 'ಶಕುಂತ' ಶಬ್ದದಿಂದ ತಾಯಿ ಬಂದಳೆಂದು ಮಗು ಅವಳತ್ತ ನೋಡುವದು. ದುಷ್ಯಂತನಿಗೆ, ಮಗುವಿನ ತಾಯಿಯ ಹೆಸರು ಶಕುಂತಲೆ ಇರಬೇಕೆನ್ನಿಸಿದರೂ ಅದೇ ಹೆಸರಿನ ಇನ್ನೊಬ್ಬಳು ಏಕಿರಬಾರದೆಂಬ ಸಂಶಯ.

ಅಷ್ಟರಲ್ಲಿ ಮಗುವಿನ ಕೈಗೆ ಕಟ್ಟಿದ 'ರಕ್ಷಾ' ತಾಯಿತ ಬಿಲ್ಲದ್ದನ್ನು ಕಂಡು ತಾಪಸಿಯರು ಗಾಬರಿಯಾಗುವರು. ದುಷ್ಯಂತ : 'ಗಾಬರಿಗೆ ಕಾರಣವಿಲ್ಲ, ಇದೋ ಇಲ್ಲಿ ಬಿದ್ದಿದೆ ಎಂದು ಎತ್ತಿಕೊಡಲು ಕೈಯಲ್ಲಿ ತೆಗೆದುಕೊಳ್ಳುವನು. ತಾಪಸಿಯರು 'ಬೇಡ, ಬೇಡ' ಎಂದು ತಡೆಯುವರು. ಏಕೆಂದು ಕೇಳಿದಾಗ ಅವರು : ಇದು 'ಅಪರಾಜಿತಾ' ಎಂಬ ರಕ್ಷಾಯಂತ್ರ. ಈತನ ಜಾತಕರ್ಮ ಸಮಯದಲ್ಲಿ ಮಾರೀಚರು ಕಟ್ಟಿದ್ದಾರೆ. ಒಂದೊಮ್ಮೆ ಜಾರಿ ಕೆಳಗೆ ಬಿದ್ದರೆ, ಈತನಾಗಲಿ ಈತನ ತಾಯಿತಂದೆಗಳಾಗಲಿ ಎತ್ತಿ ಕಟ್ಟಬಹುದು. ಅನ್ಯ ಯಾರಾದರೂ ಎತ್ತಿದರೆ ತಕ್ಷಣ ಸರ್ಪವಾಗಿ

ಕಚ್ಚುವದು; ಹೀಗಾದದ್ದನ್ನು ಎಷ್ಟೋ ಸಾರೆ ಕಂಡಿದ್ದೇವೆ, ಎನ್ನುವರು. ಹಾಗೇನೂ ಆಗದ್ದರಿಂದ ದುಷ್ಯಂತನಿಗೆ ಮಗು ತನ್ನದೇ ಎಂಬುದು ಖಚಿತವಾಗಿ ಮಗುವನ್ನು ಅಪ್ಪಿ ಮುದ್ದಿಸುವನು. ವರ್ತಮಾನವನ್ನು ತಿಳಿಸಲು ತಾಪಸಿಯರು ಶಕುಂತಲೆಯತ್ತ ಓಡುವರು. ಶಕುಂತಲೆಗಿನ್ನೂ ದುಗುಡ. ಅವಳ ಬಾಡಿದ ಮುಖ, ಮಾಸಿದ ಬಟ್ಟೆ, ಜಡೆಗಟ್ಟಿದ ಕೂದಲುಗಳನ್ನು ಕಂಡು ದುಷ್ಯಂತ. ಮರ ಮರ ಮರಗುವನು. ಅರಿಯದೆ ಘಟಿಸಿದ ತಪ್ಪಿಗಾಗಿ ಕ್ಷಮೆ ಬೇಡುವನು. 'ಅಂಧನ ಕೊರಳೊಳು ಮಾಲೆಯನು ತಂದು ಹಾಗಲಹಿಯೆಂದಂಜುತಲೊಗೆ ದಂಡದಿಂದ ನಿನ್ನನು ಜರಿದು' ಪೊರದೂಡಿದೆ. ಎಂದು ಅವಳ ಪಾದಗಳಿಗೆ ಎರಗುವನು. ಶಕುಂತಲೆ, 'ಹೇ ಪ್ರಾಣಪತೇ, ಇದು ಯೋಗ್ಯವಲ್ಲ ಇದರಿಂದ ನಾನು ಪಾಪಿಷ್ಟಳಾಗುವೆನು, ಏಳು, ಏಳು ಎಂದು ಅವನನ್ನು ತಡೆದು ಎಬ್ಬಿಸುವಳು.

ನಿನ್ನೊಳೇನುಂಟು ದೋಷವು ನಾಥಾ
ಖಿನ್ನನಾಗದಿರು ಪ್ರಾಣೇಶಾ ||ದ||

ಮುನ್ನಿನ ಜನುಮದೊಳ್ಮಾಡಿದ ದುಷ್ಕೃತಿ -
ಯನ್ನೆ ಭೋಗಿಸಿದೆ ದಿನೇಶಾ ||ಅ.ಪ.||

ಧನ್ಯವಾಯಿತೀ ಜನ್ಮರಾಯನೆ|
ನಿನ್ನನು ಕೂಡಿ ನಾ ಬಳಲಿದರೂ |
ನಿನ್ನ ಕೀರ್ತಿಯೊಳ್ ಲಾಂಛನವಾಯಿತು|
ಎನ್ನ ಪೂರ್ವಪಾಪವು ಕಾಂತಾ ||೨||

- ಮೂಲ ಗದ್ಯದಲ್ಲಿದೆ: ಅದೊಂದು ವಿಷಗಳಿಗೆ. ನನ್ನ ಪುರಾಕೃತ ಪಾಪವು ಫಲಿಸಿ ನಿನ್ನಿಂದ ಹಾಗೆ ಮಾಡಿಸಿತು. ಎಂದಿಷ್ಟೇ ಇದೆ. ಚುರಮರಿ ಅದನ್ನು ಮೂರು ನುಡಿಗಳಲ್ಲಿ ವಿಸ್ತರಿಸುವರು. ಎರಡನೇ ನುಡಿಯಲ್ಲಿ ಬಂದಿರುವ : (ಸಮುದ್ರ ಮಂಥನ ಸಮಯದಲ್ಲಿ ಲೋಕಕಲ್ಯಾಣಕ್ಕಾಗಿ ಶಂಕರನು ಕುಡಿದ ಹಾಲಾಹಲವು ಅವನ ಕೊರಳಲ್ಲಿ ನಿಂತು ಲಾಂಛನವಾಗಿ ಶೋಭಿಸುತ್ತಿರುವಂತೆ) ನನ್ನ ಪೂರ್ವ ಪಾಪವಳಿದು ನಿನ್ನ ಕೀರ್ತಿಗೊಂದು ಲಾಂಛನವಾಗಿ ಶೋಭಿಸುವದೆಂಬ ಶಕುಂತಲೆಯ ಮಾತಿನಲ್ಲಿ ವ್ಯಕ್ತವಾದ ಅವಳ ಕ್ಷಮಾಗುಣ ಅದೆಷ್ಟು ಉನ್ನತ ಮಟ್ಟದ್ದು ಎಂಬುದನ್ನು ಪ್ರತ್ಯೇಕವಾಗಿ ಎತ್ತಿ ತೋರಿಸಬೇಕಿಲ್ಲ. ದುಷ್ಯಂತ ತನ್ನನ್ನು ತ್ಯಜಿಸಿದ್ದು ಕೇವಲ ದುರ್ವಾಸಶಾಪದ ಮೂಲಕ, ಆತ ಸಂಪೂರ್ಣ ನಿರ್ದೋಷಿ ಎಂಬುದು ಮುಂದೆ ಸ್ವಯಂ ಮಾರೀಚ ಋಷಿಗಳಿಂದ ತಿಳಿಯುವದು. ದುಷ್ಯಂತನಿಗೂ ಅದರಿಂದ ಸಮಾಧಾನವಾಗುವದು. ತಾಯಿ, ತಂದೆ, ಮಗು - ಮೂವರ ಪುನರ್ಮಿಲನವಾಗುವದು. ಮಾರೀಚ ಋಷಿ: ಶಕುಂತಳೆಯನ್ನು ಶ್ರದ್ಧೆಗೆ, ಮಗು ಸರ್ವದಮನನನ್ನು ಐಹಿಕ ಭೋಗ ಭಾಗ್ಯಗಳಿಗೆ, ದುಷ್ಯಂತನನ್ನು ಪೂರ್ವಿಕರು ಹಾಕಿಕೊಟ್ಟ ಸತ್ಕರ್ಮಗಳ ಆಚರಣೆಗೆ ಹೋಲಿಸಿ ಆಶೀರ್ವದಿಸುವರು. ಈಗ ದುಷ್ಯಂತ

ಶಕುಂತಲೆಯರ ಕಾಮ (ದೈಹಿಕ) ಪ್ರಧಾನ ಪ್ರೇಮದಲ್ಲಿ ಕಾವಳಿದು ಮಗು ಸರ್ವದಮನನಲ್ಲಿ ಕೇಂದ್ರಿತವಾದ ಶುದ್ಧ ಸಾತ್ವಿಕ ಪ್ರೇಮ ತಾನೇ ತಾನಾಗಿ ಮೆರೆಯುತ್ತಿದೆ. ಮಾರೀಚ ಋಷಿಗಳು ಹೆಚ್ಚಿಗೆ ಇನ್ನೇನು ಬೇಕೆಂದು ಕೇಳಿದಾಗ : ಭಗವಂತ ಪುನರ್ಜನ್ಮವಿಲ್ಲದಂತೆ ಮೋಕ್ಷವನ್ನು ಕರುಣಿಸಲೆಂದು ಆಶೀರ್ವದಿಸಿ, ಎಂಬ ದುಷ್ಯಂತನ ಬಿನ್ನಹದೊಂದಿಗೆ ನಾಟಕ ಕೊನೆಗೊಳ್ಳುವದು.

●

ರಸಾಭಿವ್ಯಂಜನ

ಶಾಕುಂತಲದ ಪ್ರಧಾನ ರಸ ಶೃಂಗಾರ. ಅದರ ಬೆನ್ನಿಗೇನೆ ಕರುಣವಿದೆ. ಚುರಮರಿ ಅನುವಾದದಲ್ಲಿ ಅವೆಂತು ಅಭಿವ್ಯಕ್ತಿ ಪಡೆದಿವೆಂಬುದನ್ನು ಮೂಲದ ಸರಳಾನುವಾದ, ವಿಸ್ತರಣ ಮತ್ತು ಸ್ವತಂತ್ರವಿರುವ ಹಲವು ಉದಾಹರಣೆಗಳೊಂದಿಗೆ ಕಥಾ ಸಂದರ್ಭಾನುಸಾರ ಯಥಾಮತಿ ವಿವರಿಸಿದ್ದಾಯಿತು. ಎರಡನೇ ಅಂಕಿನಲ್ಲಿ ರಾಕ್ಷಸಬಾಧೆಯನ್ನು ನಿವಾರಿಸಲು ಕೇಳಿಕೊಳ್ಳ ಬಂದಾಗ ಋಷಿ ಕುಮಾರರು ವರ್ಣಿಸಿದ ದುಷ್ಯಂತನ ಶೌರ್ಯ ನಿವಾರಿಸಿ ಕೇಳಿಕೊಳ್ಳಲು ಬಂದಾಗ ಋಷಿ ಕುಮಾರರು ವರ್ಣಿಸಿದ ದುಷ್ಯಂತನ ಶೌರ್ಯ ಔದರ್ಯಾದಿ ಗುಣಗಳಲ್ಲಿ ವೀರವೂ ಬಂದಿದೆ. ವಿದೂಷಕ ಮೀನುಗಾರ ಹಾಸ್ಯವನ್ನು ಪ್ರತಿನಿಧಿಸಿರುವರು. ಐದನೇ ಅಂಕಿನಲ್ಲಿ ಶಾರ್ಙರವ ಶಕುಂತಲೆ ಮತ್ತು ದುಷ್ಯಂತರಿಗಾಡಿದ ಬಿರುನುಡಿಗಳಲ್ಲಿ ಕ್ರೋಧ, ಎರಡನೇ ಅಂಕಿನ ಪ್ರಾರಂಭದಲ್ಲಿ ವಿದೂಷಕ ತನ್ನ ಗೋಳನ್ನು ತೋಡಿಕೊಳ್ಳುವಾಗ: 'ಹೊತ್ತಲ್ಲ ದ್ಹೊತ್ತಿನಾಗ ಹಸೇಖಿಂಡಾ ತಿನ್ನಾಣಾ, ತೊಪ್ಪಲ ಬಿದ್ದಕೊಳತ ಹಳದಾನ ನೀರ ಕುಡ್ಯಾಣಾ, ಇತ್ಯಾದಿ ಮಾತುಗಳಲ್ಲಿ ಬೀಭತ್ಸ. ಇಣಕಿಕ್ಕಿದ್ದರೂ ಇಲ್ಲವೆಂದೇ ಹೇಳಬೇಕು. ಮೊದಲನೇ ಅಂಕದ ಕೊನೆಗೆ ದುಷ್ಯಂತನ ಸೈನ್ಯವನ್ನು ಕಂಡು ಆಶ್ರಮ ಪರಿಸರದಲ್ಲೆದ್ದ ಗೊಂದಲ. ಬೆದರಿ ಎದುರಿಗೆ ಬಂದದ್ದನ್ನೆಲ್ಲ ಮುರಿದು ಹಾಕುತ್ತ ಮುನ್ನುಗ್ಗುತ್ತಿದ್ದ ಕಾಡಾನೆಯ ಬಣ್ಣನೆ, ಆರನೇ ಅಂಕಿತ ಕೊನೆಗೆ ಅದೃಶ್ಯ ಮಾತಲಿ ವಿದೂಷಕನನ್ನು ಪೀಡಿಸಿದ ಬಗೆ ಭಯಕ್ಕೆ ಉದಾಹರಣೆಗಳಾಗಿವೆ. ಕಣ್ವರ ತಪಃ ಪ್ರಭಾವದಿಂದ ಆಶ್ರಮದ ತರುಲತೆಗಳು ಶಕುಂತಲೆಗಾಗಿ ಅರ್ಪಿಸಿದ ದೇವಸ್ತ್ರೀಯರಿಗೊಪ್ಪುವಂಥ ವಸ್ತ್ರಾಲಂಕಾರಗಳ ವಿವರ, ಮಗು ಸರ್ವದಮನನ ಕೈಗೆ ಮಾರೀಚ ಋಷಿಗಳು ಕಟ್ಟಿದ ರಕ್ಷಾಯಂತ್ರದ ಪ್ರಭಾವ ಅದ್ಭುತಕ್ಕೆ ಬೆರಳಿಟ್ಟು ತೋರಿಸುವಂತಿವೆ. ಶಾಂತಕ್ಕೆ ಕಣ್ವರ, ಅದಕ್ಕೂ ಹೆಚ್ಚಾಗಿ ಏಳನೇ ಅಂಕಿನಲ್ಲಿ ಬರುವ ಮಾರೀಚಾಶ್ರಮ ಬಣ್ಣನೆಗಳು ಉತ್ಕೃಷ್ಟ ಉದಾಹರಣೆಗಳಾಗಿವೆ. ಅದರೂ ಪರಿಪುಷ್ಟ ಭಾವಗಳೇ ರಸಗಳೆಂಬ ಲಾಕ್ಷಣಿಕರ ಮಾತನ್ನು ನೆನೆದಾಗ ಶೃಂಗಾರ ಕರುಣ ಎರಡನ್ನು ಬಿಟ್ಟು ಉಳಿದವೆಲ್ಲ ಭಾವಗಳು ಬಂದಿವೆ ಎನ್ನುವಂತಿದೆ.

ಹಾಸ್ಯ : ಚುರಮರಿ ವಿದೂಷಕ

ಲಾಕ್ಷಣಿಕ ಸಮ್ಮತ ವಿದೂಷಕನು ನಾಯಕನ ನರ್ಮಸಚಿವ. ಅವನ ಪ್ರೇಮ ವ್ಯವಹಾರಗಳಲ್ಲಿ ಪರಮ ಮಿತ್ರ. ಪ್ರೇಕ್ಷಕರಲ್ಲಿ ಹಾಸ್ಯೋತ್ಪಾದನ ಅವನ ಪಾತ್ರದ ಪ್ರಧಾನ ಉದ್ದೇಶ. ಜಾತಿಯಿಂದ ಬ್ರಾಹ್ಮಣನಿದ್ದರೂ ಅದು ಹೆಸರಿಗೆ ಮಾತ್ರ (ಬ್ರಹ್ಮಬಂಧು ವಿಕ್ರಮೋರ್ವಶೀಯ ಅಂ. ೨) ಬ್ರಾಹ್ಮಣನಹೆಂದು ಹೇಳಿದ ಲಕ್ಷಣಗಳ ಸದ್ಭಾವಕ್ಕಿಂತ ಆ ಭಾವವೇ ಹೆಚ್ಚು. ಅಂತೆಯೇ ಲಾಕ್ಷಣಿಕರು ಅವನ ಭಾಷೆ, ಪ್ರಾಕೃತ ಎಂದು ವಿಧಿಸಿದಂತಿದೆ. ಸಾಮಾನ್ಯವಾಗಿ ಇಳಿ ವಯಸ್ಸಿನವ. ವಿಕೃತ ವೇಷಭೂಷಣಗಳು ನಿರುಪದ್ರವಿ ಪ್ರಿಯ. ಅಂತಃಪುರದಲ್ಲಿ ಅವನಿಗೆ ಅನಿರ್ಬಂಧ ಪ್ರವೇಶವಿದೆ. ಒಮ್ಮೊಮ್ಮೆ ಒಂದು ಮಾಡಹೋಗಿ ಇನ್ನೊಂದಾಗಿ ನಾಯಕನ ಗುಟ್ಟು ಹೊರಬಿದ್ದು ಇಬ್ಬರೂ ಗೊಂದಲದಲ್ಲಿ ಬೀಳುವರು. ರಾಜ ಸ್ತ್ರೀಯರ ಸವತಿ - ಮತ್ಸರ ಸಿಡುಕು - ಮಿಡಕುಗಳಿಗೆ ಗುರಿಯಾಗುವರು. ಇಂಥ ಸನ್ನಿವೇಶ ಪ್ರೇಕ್ಷಕರಲ್ಲಿ ನಗೆ ಹುಟ್ಟಿಸುವದು. ವಿದ್ಯೆಯಲ್ಲಿ 'ಶುಂಠ' ನಿದ್ದರೂ ಸಾಕಷ್ಟು ಲೋಕಾನುಭವ ಉಳ್ಳವ. ಪ್ರೇಯಸಿಗಾಗಿ ನಾಯಕ ತಳಮಳಿಸುತ್ತಿರುವಾಗ ಲೋಕದ ರೀತಿ ನೀತಿಗಳಿಗೆ, ಮಾನವ ಸ್ವಭಾವಕ್ಕೆ ಹೊಂದಿಕೊಂಡಿರುವ ಮಾತುಗಳಿಂದ ಅವನನ್ನು ಸ್ತಿಮಿತಕ್ಕೆ ತರಲೆತ್ನಿಸುವನು. ಕಾಳಿದಾಸನ ಮಾಲವಿಕಾಗ್ನಿ ಮಿತ್ರದಲ್ಲಿನ ವಿದೂಷಕನದು ವಸ್ತುವಿಕಾಸ ದೃಷ್ಟಿಯಿಂದ ಸಮಗ್ರ ನಾಟಕಕ್ಕೆ ಪ್ರಧಾನ ಪಾತ್ರವಿರುವಂತೆ. ಶಾಕುಂತಲದಲ್ಲಿಲ್ಲ, ಎಂದಿರುವರು ಶ್ರೀರಂಗರು (Dr. inSk. Lit. pp. 93, 96). ಎರಡನೇ ಮತ್ತು ಆರನೇ ಅಂಕಗಳಲ್ಲಿ ಮಾತ್ರ ಕಾಣಿಸಿಕೊಂಡ ಆತ ದುಷ್ಯಂತನ ಪ್ರೇಮಾಲಾಪ ಪಶ್ಚಾತ್ತಾಪಜನ್ಯ ವಿರಹಾತಾಪಗಳನ್ನು ಕೇಳಿಕೊಳ್ಳುವ ಮಟ್ಟಿಗೆ ಸೃಷ್ಟಿಸಲ್ಪಟ್ಟಂತೆ. ತೋರುತ್ತಾನೆ. ಅಲ್ಲಲ್ಲಿ ಒಂದೆರಡು ಮೂದಲಿಕೆಯ ಮತ್ತು ಲೋಕಾನುಭವ ನುಡಿಗಳಿದ್ದರೂ ಅಪೇಕ್ಷಿಸಿದಷ್ಟು ಹಾಸ್ಯ ಅವನಿಂದ ಒದಗಿ ಬಿಂದಿಲ್ಲ. ಚುರಮರಿಯವರದು ಅನುವಾದ. ಮೂಲದ ಚೌಕಟ್ಟನ್ನು ಬಿಟ್ಟು ಅವರು ಹೆಚ್ಚು ದೂರ ಹೋಗುವಂತಿಲ್ಲ. ಬಹುಶಃ ಹಾಸ್ಯದ ಕೊರತೆಯನ್ನು ತುಂಬಲೆಂದು ಮೂಲದ ವಿದೂಷಕನನ್ನು ಅವರು ಕನ್ನಡ ವಿಶಿಷ್ಟ ಯಕ್ಷಗಾನ/ದೊಡ್ಡಾಟ/ ಗೊಂಬೆ ಆಟಗಳಲ್ಲಿ ಕಾಣಿಸಿಕೊಳ್ಳುವ 'ಹನುಮನಾಯಕ' ನಲ್ಲಿ ಪರಿವರ್ತಿಸಿದಂತಿದೆ. ಸ್ವಭಾವ ಚಿತ್ರಣದಲ್ಲಿ ಅಭಿಜಾತ ನಾಟಕಗಳಲ್ಲಿನ ವಿದೂಷಕನಿಗೂ - ಹನುಮನಾಯಕನಿಗೂ ಅಂಥದೇನು ವ್ಯತ್ಯಾಸವಿಲ್ಲದಿದ್ದರೂ ಹನುಮನಾಯಕ ಭೃತ್ಯ, ಅಬ್ರಾಹ್ಮಣ, ಭಾಷೆ - ಗ್ರಾಮ್ಯ, ಒರಟು, ಅಧಿಕಾಂಶದಲ್ಲಿ ಮೂಲದಲ್ಲಿರುವ ವಿದೂಷಕನ ಮಾತುಗಳೇ ಹನುಮನಾಯಕನ ಮಾತುಗಳಾಗಿ ಬಂದಿದ್ದರೂ ಅವುಗಳಿಗಿದ್ದ ಗ್ರಾಮೀಣ ತಿರುವಿನಿಂದ ಹೆಚ್ಚು ಕಳೆಕಟ್ಟಿದಂತಾಗಿವೆ. ಅಲ್ಲಲ್ಲಿ ಮೂಲಕ್ಕೆ ಹೊಂದಿಕೊಂಡು ಹೆಚ್ಚಿನ ಮಾತುಗಳಾದರೂ ಬಂದಿರುವದುಂಟು.

ಇದೊಂದು ಉದಾಹರಣೆ, ಎರಡನೇ ಅಂಕಿನ ಪ್ರಾರಂಭದಲ್ಲಿದೆ. ಬೇಟೆಯಲ್ಲಿ ದುಷ್ಯಂತನೊಂದಿಗೆ ಅರಣ್ಯದಲ್ಲಿ ಅಲೆದಾಡಿ ಅಲೆದಾಡಿ ಹನುಮನಾಯಕನ ಕಾಲುಗಳು ಬಿಳದಂತಾಗಿವೆ. ಕಣ್ವಾಶ್ರಮದಲ್ಲಿ ದುಷ್ಯಂತನು ಶಕುಂತಲೆಯನ್ನು ಕಂಡು ಮನಸೋತಿದ್ದಾನೆಂಬ

ವರ್ತಮಾನ ಅವನಿಗೆ ತಿಳಿದಿದೆ. ದುಷ್ಯಂತ ಮರಳಿ ರಾಜಧಾನಿಗೆ ಬರುವನೊ ಇಲ್ಲವೊ ಎಂಬ ಸಂದೇಹ ಉಂಟಾಗಿದೆ. ಆಗ 'ಇನ್ನೇನ ಬರತಾನಿವ ಊರಿಗೆ! ಯಾ ಶಿವನ! ನಮ್ಮ ಕಾಡೊ ಕಾಲವಽತಿ, ನೀ ಏನ ಮಾಡೀ! ಇಲ್ಲೇ ನಮ್ಮ ದಾಕ್ಯಽತಿ. ಅವಗಂತೀ ನಿನ್ನ ರಾತರಿನ್ಯಾಗ ನಿದ್ದೀನ ಇಲ್ಲ. ಮನಸೆಲ್ಲಾ ಆ ಹುಡಗಿ ಹಂತ್ಯಾಕ! ಎವ್ವಾ ಎತ್ತ ಮೋರ್‍ಯಾಗಿ ಕುಂತಿದ್ದಿ!' ಎಂದು ಗೋಳಿಡುವನು. ಮೂಲದಲ್ಲಿ ಇಂತಿಲ್ಲ. ಆದರೂ ಇವೆಲ್ಲ ಮಾತುಗಳು ಹಿಂದಿನ ಮಾತುಗಳಿಗೆ ಸರಾಗವಾಗಿ ಹೊಂದಿಕೊಂಡು ಬಂದಿವೆ. 'ಇಲ್ಲೇ ನಮ್ಮ ದಾಕ್ಯಽತಿ', 'ಎವ್ವಾ ಎತ್ತ ದೂರ್‍ಯಾಗಿ ಕುಂತಿದ್ದಿ' ಮಾತುಗಳು ಉತ್ತರ ಕರ್ನಾಟಕ ಗ್ರಾಮ್ಯದ ಪರಿಚಯು ಇದ್ದವರಲ್ಲಿ ಹಾಸ್ಯ ಹುಟ್ಟಿಸುವಂಥವು.

ಇದೇನೊ ಸರಿ. ಆದರೆ ಲಕ್ಷಣಾನುಸಾರ ವಿದೂಷಕ ಬ್ರಾಹ್ಮಣ. ಹನುಮನಾಯಕನ ಜಾತಿ. ಗೊತ್ತಿಲ್ಲವಾದರೂ ಅವನ ಮಾತುಗಳಿಂದ ಆತ ಬ್ರಾಹ್ಮಣನಲ್ಲವೆಂಬುದು ಸ್ಪಷ್ಟ. ಬಂದು ಪಕ್ಷ, ಚುರಮುರಿ ಭರತನ ನಾಟ್ಯಶಾಸ್ತ್ರ ಮೊದಲಾದ ಲಕ್ಷಣ ಗ್ರಂಥಗಳನ್ನು ನೋಡಿರದಿದ್ದರೂ ಕಾಳಿದಾಸಾದಿಗಳ ನಾಟಕಗಳನ್ನು ಚೆನ್ನಾಗಿ ಓದಿಕೊಂಡವರು. ಅವೆಲ್ಲ ಲಾಕ್ಷಣಿಕ ಸಮ್ಮತ ರೀತಿಯಲ್ಲಿ ರಚಿಸಲ್ಪಟ್ಟ ಕೃತಿಗಳೆಂಬ ಅರಿವು ಅವರಿಗಿರಲಿಕ್ಕೆ ಸಾಕು. ಪಾಶ್ಚಿಮಾತ್ಯ ಸಂಪರ್ಕದಿಂದ ನಾಟಕ ರಚನೆಗಿದ್ದ ಭಾಷಾ ನಿರ್ಬಂಧವು ಕಳಚಿ ದೇಶೀ ಭಾಷೆಗಳಲ್ಲಿ ಅವುಗಳ ಅನುವಾದಗಳು ಬರತೊಡಗಿದ್ದರೂ ಅವುಗಳಲ್ಲಿ ವಿದೂಷಕ ಬ್ರಾಹ್ಮಣನೆಂದೇ ಕಾಣಿಸಿಕೊಂಡಿರುವನು. ಚುರಮುರಿ ಬಗೆಯ ಬದಲಾವಣೆಯನ್ನು ಇತರಾರೂ ಮಾಡಿಲ್ಲ. ಪುತ್ರ ಪಿಂಡಪಾಲನ ವ್ರತದ ಪಾರಣೆಗಾಗಿ ಉಪಸ್ಥಿತನಿರಬೇಕೆಂದು ರಾಜಮಾತೆಯಿಂದ ಕರೆಬಂದಾಗ ದುಷ್ಯಂತ ತನ್ನನ್ನು ಪ್ರತಿನಿಧಿಸಲು ವಿದೂಷಕನನ್ನು ಕಳಿಸಿರುವದು ತತ್ಕಾಲೀನದ ಸಂಪ್ರದಾಯಗಳಿಗೆ ಸರಿಹೋಗಬಹುದಿದ್ದರೂ ಹನುಮನಾಯಕನ ವಿಷಯ ಅಂತಿಲ್ಲ. ಆತ ಭೃತ್ಯ ಅಬ್ರಾಹ್ಮಣ. ಪುತ್ರಪಿಂಡ ಪಾಲನ ವ್ರತದಂಥ ಧಾರ್ಮಿಕ ಕೃತ್ಯದಲ್ಲಿ ಆತ ತನ್ನ ಒಡೆಯನನ್ನು ಪ್ರತಿನಿಧಿಸುವನು ವಿಸಂಗತವೆನಿಸುವಂತಿದೆ.

ಕೇವಲ ಹಾಸ್ಯೋತ್ಪಾದನೆಯ ಹೆಚ್ಚಳಕ್ಕಾಗಿ ಚುರಮುರಿ ಹೀಗೆ ಮಾಡಿರಲಿಕ್ಕಿಲ್ಲೆಂದು ಇಟ್ಟುಕೊಂಡು ಊಹಾಲೋಕದಲ್ಲಿ ಕಾಲಿರಿಸಿದಾಗ, ಬಹುಶಃ ಯಕ್ಷಗಾನ ಮತ್ತು ಸಣ್ಣಾಟ ಲೋಕ ನಾಟ್ಯಗಳಲ್ಲಿ ಕಾಣಿಸಿಕೊಳ್ಳುವ ಹನುಮ ನಾಯಕನ ಪಾತ್ರಕ್ಕೆ ಇದ್ದಿರಬಹುದಾದ ಹಿನ್ನೆಲೆ ಅವರು ಮಾಡಿದ ಈ ಮಾರ್ಪಾಟಿಗೂ ಹಿನ್ನೆಲೆ ಇರಬೇಕೆನಿಸುವದು. ಹನುಮನಾಯಕನ ಪಾತ್ರಕ್ಕೆ ಇದ್ದಿರಬಹುದಾದ ಹಿನ್ನೆಲೆಯನ್ನು ರಾಮಾಯಣದ ಹನುಮಂತನವರೆಗೆ ಕೊಂಡೊಯ್ಯ ಬಹುದಾಗಿದೆ. ರಾಮಾಯಣದ ಹನುಮಂತ ವಾಯುಪುತ್ರ. ವಾಯುವಿಗಿರುವಂತೆ ಅವನಿಗೆ ಎಲ್ಲೆಡೆಗಳಲ್ಲಿ ಪ್ರವೇಶವಿದೆ. ಜಾತಿ-ವಾನರ (ಮಾನವರ ಮಟ್ಟಿಗೆ ಜಾತ್ಯತೀತ). ವಾನರ ಹಾಸ್ಯದ ಪ್ರತೀಕ. ಸೀತೆಗಾಗಿ ರಾವಣನ ಅಂತಃಪುರವನ್ನು ಅರಸುತ್ತಿದ್ದಾಗ ಮಂಡೋದರಿಯನ್ನು ಕಂಡಾಗ ಸೀತೆಯೆಂದು ಭ್ರಮಿಸಿ ಹನುಮಂತ ಆನಂದಾತಿರೇಕದಿಂದ ಕುಣಿದಾಡಿದನಂತೆ. ಆ ಸಂದರ್ಭವನ್ನು ಆದಿಕವಿ ವಾಲ್ಮೀಕಿ -

ಆಸ್ಫೋಟಯಾ ಮಾಸ ಚಚುಂಬ ಪ್ರಚ್ಛಂ ನನಂದ ಚಿಕ್ರೀಡ ಜಗೌಜಗಾಮ|
ಸ್ತಂಭಾನರೋಹನ್ನಿಪಪಾತ ಭೂಮೌನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಮ್ ||
ಸುಂ. ಕಾಂ. ೧೦. ೫೪||

ಬಾಲವನ್ನು ನೆಲಕ್ಕಪ್ಪಳಿಸಿದನು, ಚುಂಬಿಸಿದನು, ಆನಂದದಿಂದ ಅತ್ತಿತ್ತ ಜಿಗಿದಾಡಿದನು, ಸರ್ರನೆ ಕಂಬವನ್ನೇರಿದನು, ಮತ್ತೆ ಕೆಳಗೆ ಧುಮುಕಿದನು, ಎಂದು ಮುಂತಾಗಿ ಬಂದಿರುವ ಆದಿಕವಿಯ ಬಣ್ಣನೆ ಕೇವಲ ಆಧ್ಯಾತ್ಮನಿರತ ಮಾರೀಚ ಋಷಿಗಳಲ್ಲಿ ಕೂಡ ಹಾಸ್ಯವನ್ನು ಕುದುರಿಸುವಂಥದು. ಸೀತೆಯನ್ನು ಕಂಡು ಬಂದಾಗ ಭೃತ್ಯನಿದ್ದರೂ ಶ್ರೀರಾಮನು ಸಂತೋಷದಿಂದ ಅವನನ್ನು ಅಪ್ಪಿಕೊಂಡಿರುವನು. ಲಂಕೆಗೆ ಕೊಳ್ಳಿ ಇಟ್ಟಾಗ ಅಶೋಕ ವನದಲ್ಲಿದ್ದ ಸೀತೆ ಪುತ್ರ ವಾತ್ಸಲ್ಯನಿಂದ ಹನುಮಂತನಿಗೆ ಬಾಧೆ ತಟ್ಟದಿರಲೆಂದು 'ಶೀತೋಭವ ಹನೂಮತಃ' ಎಂದು ಪದೇ ಪದೇ ಅಗ್ನಿಯನ್ನು ಪ್ರಾರ್ಥಿಸಿಕೊಂಡಿರುವಳು. ಮುಂದೆ ಪಟ್ಟಾಭಿಷೇಕವಾದ ಬಳಿಕ ಶ್ರೀರಾಮ ತನ್ನ ಕೊರಳಲ್ಲಿಯ ರತ್ನಹಾರವನ್ನು ಸೀತೆಗೆ ಕೊಡುವನು. ಆಕೆ ಅದನ್ನು ಕೈಯಲ್ಲಿ ತೆಗೆದುಕೊಂಡು ಶ್ರೀ ರಾಮನತ್ತ ನೋಡಿದಾಗ ಅವಳ ಮನೀಷೆಯನ್ನು ಗುರುತಿಸಿ ಶ್ರೀರಾಮನು: 'ನಿನ್ನ ಮನಸ್ಸಿಗೆ ಬಂದವಂಗೆ ಕೊಡು' ಎಂದಾಗ ಸೀತೆ ಎದುರಿನಲ್ಲಿದ್ದ ಹನುಮಂತನನ್ನು ಕರೆದು ಅವನ ಕೊರಳಿಗೆ ಹಾಕುವಳು. ದುಷ್ಯಂತ, ರಾಜಮಾತೆ ಹನುಮನಾಯಕರ ಸಂಬಂಧ ಈ ಬಗೆಯದು. 'ಹನುಮನ್ನಾಟಕ', ಅಥವಾ 'ಮಹಾನಾಟಕ' ದಲ್ಲಿ (ಕಾಲ ಸು. ೧೧ ಶ.)

ವಾಲ್ಮೀಕೀರುಪದೇಶತಃ ಸ್ವಯಮಹೋ ವಕ್ತಾ ಹನೂಮಾನ್ ಕಪಿಃ|
ಶ್ರೀ ರಾಮಸ್ಯರ ಘೂದ್ವಹಸ್ಯ ಚರಿತಂ ಸೌಮ್ಯಾವಯಂ ನರ್ತಕಃ||

- ಎಂದು ಹನುಮಂತನೇ ಸೂತ್ರಧಾರನಾಗಿ (ವಕ್ತಾ) ಮೇಳವನ್ನು ಕಟ್ಟಿಕೊಂಡು ಸಮಗ್ರ ರಾಮಾಯಣವನ್ನು ಆಡಿ ತೋರಿಸಿರುವನು. ಭಾರತದಾದ್ಯಂತ ಲೋಕಪ್ರಿಯವಿದ್ದ ಈ ಪದ್ಯ ನಾಟಕವು ಸ್ವರೂಪದಲ್ಲಿ ಯಕ್ಷಗಾನ ದೊಡ್ಡಾಟಗಳಿಗೆ ಸಮೀಪವಿದ್ದು ಔತ್ತರೇಯ ಮತ್ತು ದಾಕ್ಷಿಣಾತ್ಯ ಎಂಬ ಬಹಳಷ್ಟು ವ್ಯತ್ಯಾಸಗಳಿರುವ ಇದರ ಎರಡು ಸಂಸ್ಕರಣಗಳಿವೆ. ಎರಡೂ ಅಚ್ಚಾಗಿವೆ. ಅವುಗಳಲ್ಲಿ ವಿದೂಷಕನದೆಂದು ಪ್ರತ್ಯೇಕ ಪಾತ್ರವಿಲ್ಲ. ತನ್ನ ಕಪಿಚೇಷ್ಟೆಗಳಿಂದ ಆ ಕೊರತೆಯನ್ನು ಬಹುಶಃ ಅವನೇ ತುಂಬುತ್ತಿರಬೇಕು ಮತ್ತು ಮುಂದೆ ಆ ಹೆಸರಿನಿಂದ ಅಂದರೆ ಹನುಮ ನಾಯಕ ಹೆಸರಿನಿಂದ ಕರ್ನಾಟಕದ ಯಕ್ಷಗಾನ ಮತ್ತು ಸದೃಶ ಲೋಕನಾಟ್ಯಗಳಲ್ಲಿ ಅಭಿಜಾತ - ನಾಟಕಗಳಲ್ಲಿ ವಿದೂಷಕನಿಗಿದ್ದ ಸ್ಥಾನವನ್ನು ಗಳಿಸಿರಬೇಕು."

೧. ಯಕ್ಷಗಾನ ಮತ್ತು ಸದೃಶ ಆಟಗಳ ಪೂರ್ವರಂಗದಲ್ಲಿ ಶುದ್ಧ, ಗೊಂಡಲಿ ಮತ್ತು ಪ್ರೇರಣೆ ಎಂಬ ಮೂರು ಪದ್ಧತಿಗಳಿದ್ದವು. ಪ್ರೇರಣೆಯೆಂದರೆ ಹಾಸ್ಯಗಾರ. ಶುದ್ಧ ಪದ್ಧತಿ - ಸ್ತ್ರೀ ನರ್ತಕಿಯರ ಪುಷ್ಪಾಂಜಲಿಯಿಂದ ತೊಡಗುತ್ತಿತ್ತು. ಗೊಂಡಲಿ ಪದ್ಧತಿ ಶೃಂಗಾರದತ್ತ ಒಲಿದ ಮೂಲದಲ್ಲಿರುವ ಹಾಸ್ಯದ ಕೊರತೆಯನ್ನು ತುಂಬಿಕೊಳ್ಳಲು ಒಂದೊಮ್ಮೆ ಚುರಮರಿ ಹನುಮನಾಯಕನ ಪಾತ್ರಕ್ಕೆ ಇದ್ದಿರಬಹುದಾದ ಉಪರೋಕ್ತ ಅಥವಾ ಸದೃಶ ಹಿನ್ನೆಲೆಯನ್ನು

ಮನಗಂಡು ಶಾಕುಂತಲದಂಥ ಅಭಿಜಾತ ನಾಟಕದ ವಿದೂಷಕನನ್ನು ಕನ್ನಡ ಲೋಕನಾಟ್ಯ ವಿಶಿಷ್ಟ ಹನುಮ ನಾಯಕನಲ್ಲಿ ಪರಿವರ್ತಿಸದಿದ್ದರೆ, ಪ್ರಾಮುಖ್ಯವಾಗಿ ಕನ್ನಡ ಪ್ರೇಕ್ಷಕರಿಗಾಗಿ ಮೈದಾಳಿದ ಅವರ ಅನುವಾದದ ಮಟ್ಟಿಗೆ, ಅದೇನು ಅಂಥ ಅನುಚಿತ ಮಾರ್ಪಾಟು ಎನ್ನುವಂತಿಲ್ಲ. ಅಲ್ಲದೆ ಪುತ್ರ -ಪಿಂಡ -ಪಾಲನವೊಂದು ಮಗನ ಆಯುರಭಿವೃದ್ಧಿಗಾಗಿ ಕೈಗೊಳ್ಳುವ ಚಿಲ್ಲರೆ ಸ್ವರೂಪದ ಕಾಮ್ಯವ್ರತ. ತಾಯಿಯಿಂದ ಉಡುಗೊರೆ ಆಶೀರ್ವಾದ ಪಡೆಯುವ ಮಟ್ಟಿಗೆ ಮಗನ ಉಪಸ್ಥಿತಿ ಇಷ್ಟವಿದ್ದಿತು (ಶಾಂ. ಮೊ. ನಿಲಿಯಮ್ಮ, ಪು. ೯೧), ಅಪದ್ಧರ್ಮವೆಂದು ತಾಯಿಯ ಪ್ರೀತಿಯ ಪಾತ್ರನಿದ್ದ ಯಾರಾದರೂ ಅವನನ್ನು ಪ್ರತಿನಿಧಿಸಬಹುದಿತ್ತು.

●

ಛಂದೋ ವೈವಿಧ್ಯ ಮತ್ತು ಹಾಡುಗಳು

ಶಾಕುಂತಲದಲ್ಲಿ ಕಾಳಿದಾಸನು ಪ್ರಯೋಗಿಸಿದ ನಾನಾ ವಿಧ ಛಂದೋರೂಪಗಳ ಉಚಿತ ಬಳಕೆಯನ್ನು ಡಾ. ಕೀಥ್ ಮತ್ತು ಕನ್ನಡದಲ್ಲಿ ಎ.ಆರ್.ಕೃ. ವಿಶೇಷವಾಗಿ ಪ್ರಶಂಸಿರುವರು. ಆರ್ಯೆ ಶ್ಲೋಕಗಳ ಹೊರ್ತಾಗಿ ಆತ ಶಾರ್ದೂಲವಿಕ್ರೀಡಿತ, ಸ್ರಗ್ಧರಾ, ವಸಂತ-ತಿಲಕ, ಮಾಲಿನಿ, ಶಿಖರಿಣಿ ಮೊದಲಾದ ಹಲವು ಬಗೆಯ ಅಕ್ಷರ ವೃತ್ತಗಳನ್ನು ಬಳಸಿರುವನು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಾದರೊ ಪ್ರಥಮಾವಸ್ಥೆಯಲ್ಲಿ ಅಂದರೆ ಚಂಪೂ ಯುಗದಲ್ಲಿ ಕಂಡ, ವೃತ್ತ ಅವರಲ್ಲೂ ಉತ್ಪಲಮಾಲಾದ ಖ್ಯಾತ ಕರ್ಣಾಟಕಗಳ ಸುರಿಮಳೆ ಇದ್ದರೆ, ನಂತರದ ಯುಗದಲ್ಲಿ ಷಟ್ಪದಿ ಸಾಂಗತ್ಯಗಳು ಅವುಗಳ ಸ್ಥಾನವನ್ನು ಆಕ್ರಮಿಸಿದವು. ಮಧ್ಯಂತರದಲ್ಲಿ ಓರ್ವ ಇಲ್ಲವೆ ಈರ್ವರು ನರ್ತಕಿಯರಿಂದ ತೊಡಗುತ್ತಿತ್ತು. ಎರಡೂ ಪದ್ಧತಿಗಳಲ್ಲಿ ನಾಟ್ಯಾಚಾರ್ಯನಿಗೆ (ಇಂದು ಭಾಗವತ -ಯಕ್ಷಗಾನ ಆಟಗಳಲ್ಲಿ) ಪ್ರಾಧಾನ್ಯವಿದ್ದಿತು. ಪ್ರೇರಣೆ ಪದ್ಧತಿಯಲ್ಲಿ (ಇಂದು ಸಾರಥಿ - ಮೂಡಲಪಾಯ ಆಟಗಳಲ್ಲೂ ಅವನಿಗೇನೆ ಪ್ರಾಧಾನ್ಯ. ನಾಟ್ಯಾಚಾರ್ಯನು ಹಿಮ್ಮೇಳದಲ್ಲಿ ನಿಂತು ಕೆಲಸ ಮಾಡುತ್ತಿದ್ದನು. ಇದರರ್ಥ ಶುದ್ಧ ಮತ್ತು ಗೋಂದಲಿ ಪದ್ಧತಿಗಳಲ್ಲಿ ಪ್ರೇರಣೆಗೆ ಸ್ಥಾನವಿದ್ದಿಲ್ಲೆಂದಲ್ಲ. ಇದ್ದಿತು - ನಾಟ್ಯಾಚಾರ್ಯನಿಗಿಂತ ಕೆಳಗಿನ ದರ್ಜೆಯದು. ಕಾಲಾಂತರದಲ್ಲಿ ಪ್ರೇರಣೆಯ ಸ್ಥಳದಲ್ಲಿ ಹನುಮನ್ನಾಟಕದ ಹನುಮಂತ. ಹನುಮನಾಯಕನಾಗಿ ಕಾಣಿಸಿಕೊಂಡಂತಿದೆ. ಇಂದು ಗೋಂಡಲಿ ಪದ್ಧತಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ಶುದ್ಧ ಪದ್ಧತಿಯೊಂದಿಗೆ ಅದು ಯಕ್ಷಗಾನ ಪೂರ್ವರಂಗದಲ್ಲಿ ಸೇರಿಕೊಂಡಂತಿದೆ. ಶಿಥಿಲಾರ್ಥದಲ್ಲಿ ಪದ್ಧತಿ ಯಾವುದಿದ್ದರೂ ಅದರಲ್ಲಿನ ವಿದೂಷಕನಂಥ ಹಾಸ್ಯೋತ್ಪಾದಕ ಪಾತ್ರಕ್ಕೆ ಇಂದು ಹನುಮನಾಯಕ, ಸಾರಥಿ, ವಿದೂಷಕ, ಗೊಡ್ಡಿ, ಕೋಡಂಗಿ ಎಂದು ಕರೆಯುವುದುಂಟು. ನಡುಗಡ್ಡೆಗಳಂತೆ ಬಂದ ಗದ್ಯದಲ್ಲಿದ್ದರೂ ಲಯಯುಕ್ತ ವಚನ, ರಗಳೆ, ತ್ರಿಪದಿ, ವಿಶೇಷವಾಗಿ ಸರ್ವಜ್ಞನ ತ್ರಿಪದಿ, ದಾಸ ವಾಙ್ಮಯದಲ್ಲಿನ ಹಾಡುಗಳಿಲ್ಲದಿದ್ದರೆ ಕನ್ನಡ ಪದ್ಯ ಸಾಹಿತ್ಯವೆಂದು ಕಂದ, ವೃತ್ತ, ಷಟ್ಪದಿ, ಸಾಂಗತ್ಯಗಳ ಮಹಾರ್ಣವವಾಗುತ್ತಿತ್ತೆಂದರೆ ಅತಿಶಯೋಕ್ತಿಯಾಗದು.

ಆಧುನಿಕರಿದ್ದರೂ ಶಾಕುಂತಲವನ್ನು ಕನ್ನಡದಲ್ಲಿ ಅನುವಾದಿಸಿ 'ಅಭಿನವ ಕಾಳಿದಾಸ' ಎಂಬ ಬಿರುದು ಗಳಿಸಿದ ಬಸವಪ್ಪ ಶಾಸ್ತ್ರಿಗಳಿಗೂ ಕಂದ-ವೃತ್ತಗಳ ವ್ಯಾಮೋಹ ಬಿಟ್ಟಿಲ್ಲ. ಅವರ ಅನುವಾದದಲ್ಲಿರುವ ಸುಮಾರು ೨೦೦ ಪದ್ಯಗಳಲ್ಲಿ ೧೪೦ ಕಂದಗಳು; ಮಿಕ್ಕವು ಉತ್ಪಲಮಾಲಾದಿ ಖ್ಯಾತ ಕರ್ಣಾಟಕಗಳಿವೆ. ಪ್ರಯೋಗ ಸಂದರ್ಭದಲ್ಲಿ ಇಷ್ಟಾನುಸಾರ ಬಳಸಲೆಂದು ಅಡಿ ಟಿಪ್ಪಣಿಗಳಲ್ಲಿ ಕೆಲವೆಡೆ ಅವುಗಳ ಬದಲು ಹಾಡುಗಳನ್ನು ಕೊಟ್ಟಿದೆ. ಅವುಗಳ ಸಂಖ್ಯೆ ಸುಮಾರು ೪೦ ಹಾಡುಗಳು ದಕ್ಷಿಣಾದಿ ಪದ್ಧತಿಯಲ್ಲಿ ಪ್ರಚಾರದಲ್ಲಿದ್ದ ಬೇರೆ ಬೇರೆ ರಾಗ ತಾಳಗಳಲ್ಲಿವೆ.

ಚುರಮುರಿ ಅನುವಾದದಲ್ಲಿ ಪ್ರಯುಕ್ತವಾದ ಛಂದೋರೂಪ ಮತ್ತು ಹಾಡುಗಳ ವೈವಿಧ್ಯ ತ್ರಿವಿಧ (ಕನ್ನಡ, ಮರಾಠಿ, ಹಿಂದುಸ್ತಾನಿ)ಸ್ವರೂಪದ್ದಾಗಿದೆ. ಕಂದವೃತ್ತ, ಷಟ್ಪದಿ, ಮರಾಠಿಯಲ್ಲಿ ಪ್ರಚುರವಿದ್ದ ಸಾಕಿ, ಲಾವಣಿ, ಹಾಡುಗಳು (ದಕ್ಷಿಣಾದಿ ಹಿಂದುಸ್ತಾನಿ) ಸೇರಿ ಸುಮಾರು ೨೦೦ ಪದಪದ್ಯಗಳಿವೆ. ವೃತ್ತಗಳಲ್ಲಿ ಚುರಮುರಿ ಖ್ಯಾತ ಕರ್ಣಾಟಕಗಳ ಜೊತೆಗಾಗಿ ಕನ್ನಡದಲ್ಲಿ ಕ್ವಚಿತ್ತಾಗಿ ಕಾಣಸಿಗುವ ಎಂಕ್ಕಿಂತ ಹೆಚ್ಚು ಬಗೆಯ (ವಸಂತ ತಿಲಕ, ಹರಿಣೀ, ಪ್ರಹರ್ಷಿಣೀ, ಪೃಥ್ವಿ, ಪ್ರಹರಣ ಕಲಿಕಾ, ಇತ್ಯಾದಿ) ಅಕ್ಷರ ವೃತ್ತಗಳಿವೆ. ಪುಷ್ಪಿತಾಗ್ರವೆಂಬ ಅರ್ಧಸಮ ಅಕ್ಷರ ವೃತ್ತವೂ ಇದೆ. ಸಾಕಿ ಮರಾಠಿಯದಿದ್ದರೂ ಧೋಂಡೊ ನರಸಿಂಹ ಮುಳಬಾಗಲರ ಛಂದಸ್ಸಾರದಲ್ಲಿ ಲಕ್ಷಣಿಸಲ್ಪಟ್ಟಿದ್ದರಿಂದ ಚುರಮುರಿ ಕಾಲದಲ್ಲಿ ಅದು ಉತ್ತರ ಕರ್ಣಾಟಕದಲ್ಲಿ ಸಾಕಷ್ಟು ಪ್ರಚಾರದಲ್ಲಿ ದ್ದಿತೆಂದು ತೋರುವದು (ಲಕ್ಷಣ - ಚತುರ್ಮಾತ್ರಾಗಳು, ಎರಡು ಗುರು). ಅಕ್ಷರ ವೃತ್ತಗಳಲ್ಲಿ ಎರಡು ಬಗೆಯ (ಅಶ್ವಧಾಟಿ, ಮಿಶ್ರ ವೃತ್ತಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕು. ಬೇರೆ ಒಂದೆರಡು ವೃತ್ತಗಳು ಪ್ರಸಿದ್ಧ ಛಂದೋಗ್ರಂಥಗಳಲ್ಲಿ ದೊರೆಯದ್ದರಿಂದ ಅನುಕ್ತವೆಂದು ಅವನ್ನು ಕೈಬಿಡಬೇಕಾಗಿದೆ. ಅಶ್ವಧಾಟಿ ಅಕ್ಷರ ವೃತ್ತ. ಅದರಲ್ಲಿ ಒಂದಕ್ಕಿಂತ ಹೆಚ್ಚುಬಗೆಗಳಿದ್ದವೆಂದು ತೋರುತ್ತದೆ. ಚುರಮುರಿ ಅವುಗಳಲ್ಲಿ ಎರಡು ಬಗೆಗಳನ್ನು ಪ್ರಯೋಗಿಸಿರುವರು. ಮೊದಲನೇದು ಮತ್ತೇಭ (ತ-ಭ- ಯ -ಜ -ಸ -ರ - ನ-ಗ) ದಿಂದ ರೂಪಗೊಂಡಿದೆ. ಖ್ಯಾತ ಕರ್ಣಾಟಕಗಳಲ್ಲಿನ ಮತ್ತೇಭಕ್ಕೂ ಇದಕ್ಕೂ ವ್ಯತ್ಯಾಸವಿದೆ. ಅದು ಮತ್ತೇಭವಿಕ್ರೀಡಿತ. ಈ ಮತ್ತೇಭಲಿ ಮಧ್ವ ಶಿಷ್ಯ ಕೃಷ್ಣಕವಿಯ ಮಂದಾರಕಂದ ಚಂಪೂ ಲಕ್ಷಣಗ್ರಂಥದಲ್ಲಿ ಮಾತ್ರ ಉಕ್ತವಾಗಿದೆ. ಮತ್ತೇಭಕ್ಕೆ ಆದಿ ಮತ್ತು ಅನುಪ್ರಾಸಗಳನ್ನಿಟ್ಟರೆ ಅಶ್ವಧಾಟಿಯಾಗುವದು. ಇದಕ್ಕೆ ಅಮೃತಧ್ವನಿ ಎಂಬ ಇನ್ನೊಂದು ಹೆಸರಿದೆ. ಕುದುರೆಯ ಲಯಬದ್ಧ ಹೆಜ್ಜೆಗಳಂತೆ ಗತಿ ಸಾಗುತ್ತದೆ. ಅಶ್ವಧಾಟಿಯ ಪ್ರಾಚೀನ ಉದಾಹರಣೆ ರಾಮಾನುಜೀಯ ವೇದಾಂತ ದೇಶಿಕರ (ಕ್ರಿ.ಶು. ೧೨೬೮) ಯಾದ ವಾಭ್ಯುದಯ ಕಾವ್ಯದಲ್ಲಿದೆ. ಉಡುಪಿ ಅಷ್ಟಮಠಗಳಲ್ಲಿ ಒಂದಿದ್ದ ಸೋದೆ ಮಠದ ಸುವಿಖ್ಯಾತ ವಾದಿರಾಜರ(ಕ್ರಿ.ಶ. ೧೬) ದಶಾವತಾರ ಸ್ತೋತ್ರವು ಸಂಪೂರ್ಣ ಈ ಧಾಟಿಯಲ್ಲಿ ರಚಿತವಾಗಿದೆ. ಸಂಸ್ಕೃತದಲ್ಲಿ ರಚಿತವಾದ ಮಾಧ್ವ ವೈಷ್ಣವ ಕೃತ ಇತರ ಕೆಲವು ಸ್ತುತಿ ಸ್ತೋತ್ರಗಳಲ್ಲೂ ಕಾಣಸಿಗುತ್ತದೆ. ಚುರಮುರಿ

'ಕ'ದ್ವಿತೀಯಾಕ್ಷರ ಮತ್ತು ಅನುಪ್ರಾಸವನ್ನಿಟ್ಟು ತಮ್ಮ ಪದ್ಯವನ್ನು ರಚಿಸಿರುವರು. ಕಣ್ವಾಶ್ರಮದ ಋಷಿ ಕುಮಾರರು ಕಣ್ವರ ಅನುಪಸ್ಥಿತಿಯಲ್ಲಿ ರಾಕ್ಷಸಬಾಧೆ ಹೆಚ್ಚತೊಡಗಿದ್ದರಿಂದ ಇನ್ನಿಷ್ಟು ಕಾಲ ಅಲ್ಲಿಯೇ ಇದ್ದು ರಕ್ಷಿಸಬೇಕೆಂದು ಬಿನ್ನವಿಸಿಕೊಳ್ಳ ಬಂದಾಗ ಅವನಿಂದ ಅಭಯ ಪಡೆದು ಮರಳುವಾಗ ಹೇಳಿದ ಆಶೀರ್ವಾದ ರೂಪಿ ಪದ್ಯ ಮೂಲದಲ್ಲಿರುವ ' ಅನುಕಾರಿಣಿ ಪೂರ್ವೇಷಾಂ' ಅನುಷ್ಟುಪ್ ಶ್ಲೋಕದ ವಿಸ್ತೃತ ರೂಪ -

ಚಿಕ್ಕಯ್ಯ ಕೇಳ್ ನಿನಗೆ ತಕ್ಕುದ್ದೆ ಕಾರ್ಯವು ಇದಕ್ಕಾಗಿ ನಿಮ್ಮಿರಿಯರು
ಸೊಕ್ಕಿರ್ದ ರಕ್ಕಸರ ಕಕ್ಕಾಂಟಿಕೊಂದು ನೆಲಕಿಕ್ಕುತ್ತೆ ಬಂದರವರು|
ಕುಕ್ಕಿಂಗೆ ಜಕ್ಕುಡು ತಲಕ್ಕರ್ತೆಯಿಂ ಬಡವರಂ ಕಾಯ್ವುದೆಜ್ಞವಿದಕೆ
ದಿಕ್ಕೇಯ ಪೌರವ ಕುಲಕ್ಕಿನ್ನದೇಂ ಬಹುದು ಮಿಕ್ಕಾದ ಭೂಪಜನಕೆ ||

ಈ ಅಶ್ವಧಾಟಿಯ ಲಯ ನಡಿಗೆ ಕುದುರೆಯದು, ಅದರ ದಾಪುಗಾಲಿನ ನಾಗಾಲೋಟದ ಲಯವೇ ಬೇರೆ. ಅದರ ಪ್ರಸ್ತಾರ - ೭ ತಗಣಗಳು ಮತ್ತು ಒಂದು ಗುರು. ಅಶ್ವಧಾಟಿಯ ಇನ್ನೊಂದು ಬಗೆ. ಚುರಮುರಿ ಮಾಧ್ವ ವೈಷ್ಣವರು. ಮಾಧ್ವ ಸಂಸ್ಕೃತ ಕವಿಗಳಿಂದ ಪುರಸ್ಕರಿಸಲ್ಪಟ್ಟ ಈ ವೃತ್ತದ ಎರಡೂ ಬಗೆಗಳಲ್ಲಿ ಕನ್ನಡ ಪದ್ಯಗಳನ್ನು ರಚಿಸಿ ಕನ್ನಡ ಛಂದೋ ವೈವಿಧ್ಯವನ್ನು ಹೆಚ್ಚಿಸಿರುವರು. ಎರಡನೇ ಬಗೆಯ ಅಶ್ವಧಾಟಿ ಪದ್ಯ ಕಣ್ವಾಶ್ರಮದಲ್ಲಿ ಶಕುಂತಲೆಯನ್ನು ಕಾಣುವ ಮೊದಲು ರಥಾರೂಢ ದುಷ್ಯಂತ ಜಿಗರೆಯನ್ನು ಬೆನ್ನಟ್ಟಿ ಸಾಗಿದ ಸನ್ನಿವೇಶಕ್ಕೆ ಸಂಬಂಧಿಸಿದೆ. ದುಷ್ಯಂತನಾಜ್ಞೆಯ ಮೇರೆಗೆ ಸಾರಥಿ ರಶ್ಮಿಗಳನ್ನು ಸಡಿಲು ಬಿಟ್ಟು ರಥಕ್ಕೆ ವೇಗ ಕೊಟ್ಟು ಹೇಳುತ್ತಾನೆ-

ಸಡಿಲ್ಬಿಟ್ಟಿರಲ್ ರಶ್ಮಿಗಳ್ ಕರ್ಣಗಳ್ ನಿಚ್ಚಳಂಗೈದು ಪುಚ್ಛನಿಗರ್ಚುತ್ತೆ ಮೇಣ್
ಜೋಲ್ವಿದ್ದಗೋಣಾಗ್ರದಲಂಗಾಳಿಗೇಳುತ್ತೆ. ಚೀಳ್ಕಂತಿಕಲ್ ಮಾರು ಪೇರ್ಜಾಪಿನಂ |
ಕಾಲ್ಬಿಟ್ಟ ಹಗ್ಗರಂಗಳ್ ಬಿಸವಾ ಪಟ್ಟಿಸಿಂದೇಳ್ವ ಧೂಳ್ ತಮ್ಮನಂ ಮುಟ್ಟದಂ -
ತೋಲ್ವಿದಿರಲ್ ಸಾಗರಂ ಸಾಕ್ಷ ನೇರ್ಪೀರ್ವ ಸಾರಂಗದೋಳ್ಗೀತರುಂಗಗಳು||

- ಮೂರನೇ ಪಾದದಲ್ಲಿಯ ಎರಡನೇ ಗಣ 'ತ' ಬದಲು 'ರ' ಆಗಿದೆ. ಮೂಲದಲ್ಲಿ ವಸಂತತಿಲಕದಲ್ಲಿರುವ 'ಮುಕ್ತೇಷು ರಶ್ಮಿಷು - (೧.೮) ಪದ್ಯದ ಸರಳಾನುವಾದ.

ಚುರಮುರಿಯವರ ಮಿಶ್ರ ವೃತ್ತಗಳು ಸುಪ್ರಸಿದ್ಧ ಛಂದಶ್ಶಾಸ್ತ್ರಜ್ಞ ಹ. ದಾ. ಪೇಲಾಕರ ಸಂಶೋಧನ ಫಲಿತಾಂಶಗಳಿಗೆ ಲಕ್ಷ್ಯಗಳಂತಿವೆ. ಛಂದಶ್ಶಾಸ್ತ್ರದಲ್ಲಿ ಭಿನ್ನಾಭಿಪ್ರಾಯಗಳು ಅಳಿದು ಶ್ರಾಷ್ಯ ವಿರಾಮ ಅರ್ಥದಲ್ಲಿ ಯತಿಗೆ ಸ್ಥಿರಾಸ್ಥಾನದೊರೆತ ಬಳಿಕ ಬೇರೆ ಬೇರೆ ವೃತ್ತ ಪಾದಗಳನ್ನು ನೇರವಾಗಿ ಅಥವಾ ಅಲ್ಪವ್ಯತ್ಯಾಸದಿಂದ ಒಂದಕ್ಕೊಂದು ಜೋಡಿಸಿದಾಗ ಗತಿ-ಲಯಗಳಿಗೆ ಸರಾಗ ಸಾಂಗತ್ಯ ಒದಗುವಂತಿದ್ದರೆ ಆ ರೀತಿ ಜೋಡಿಸಿ ಅನೇಕ ಹೊಸ ವೃತ್ತಗಳ ನಿರ್ಮಿತಿ ಆಗಿರಬೇಕೆಂಬುದು ಅವರ ಸಂಶೋಧನೆಯ ತಳಹದಿ. ಹೀಗೆ ಸಿದ್ಧವಾದ ಹೊಸ ವೃತ್ತ ಪಾದ ಭಾಗಗಳಿಗೆ ಅವರು ಥಳಿಕ (fossil) ಎಂದಿರುವರು. (ಜಯದಾಮ್. ಪು. ೨೦) ಚುರಮುರಿಯ ಅನುವಾದದಲ್ಲಿ ಇಂಥ ಎರಡು ವೃತ್ತಗಳಿವೆ -

(೧) ಸನ್ನಿವೇಶ : ಉಪರೋಕ್ತ 'ಸೈಲ್ಪಿಟ್ಟಿಕಲ್ ರಶ್ಮಿಗಳ್' ಸಾರಥಿಯ ಪದ್ಯದ ಬೆನ್ನಿಗೇನೆ ರಥದ ವೇಗವನ್ನು ಅನುಲಕ್ಷಿಸಿ ದುಷ್ಯಂತ ಆಗಿನ ದೃಶ್ಯ ಚಮತ್ಕಾರವನ್ನು ಬಣ್ಣಿಸಿರುವನು -

ಚಕ್ಷುಗಳೀಕ್ಷಿಸದಿರ್ಪತಿಸೂಕ್ಷ್ಮತೆ -ಬಿಟ್ಟು, ತೊಟ್ಟುರೆ ವಿಶಾಲತೆಯನ್ನೊಂ-
ದೇಕ್ಷಣದೊಳ್ ತ್ವರದಿಂ ಭರದಿಂದೆ ದಿರ್ಬರ್ಪುತಿರ್ಪಗಿಡಗಂಟೆಯ ನೋಡೆ
ಲ್ಲಾ ಕ್ಷಿತಿಯುಂ ಪರಿಯಲ್ ಕೆಲಮೋಳಿಹ ವಕ್ರಚಕ್ರಗತಿಯಿಂ ಸರಳಾರ್ಗಲ್
ಪಕ್ಷಿಗೆ ಸಾಕ್ಷಿಯ ತೇರಿಗೆ ದೂರವದೇನು ಕಾಣಿಸದು ಸಾರಥಿ ಕೇಳ್||

- ಪ್ರಸ್ತಾರ ನಾಲ್ಕು ಭ(-UU) + ರನಭಗಗ(-U-, UUU, -UU,--). ಇದಕ್ಕೆ 'ಮದಿರಾ' ಎಂದಿದ್ದರೂ ಪ್ರಸಿದ್ಧ ಮದಿರಾವೃತ್ತದ ಲಕ್ಷಣಕ್ಕೂ (೭ ಬ+ಗ) ಇದಕ್ಕೂ ಹೊಂದಾಣಿಕೆ ಇಲ್ಲ. ಪ್ರಯೋಗ ಪ್ರಿಯರಾದ ಚುರಮರಿ ಬಹುಶಃ ಮದಿರಾದ ಪ್ರಾರಂಭದ ನಾಲ್ಕು ಭ-ಗಣಗಳನ್ನಿಟ್ಟು ಅವಕ್ಕೆ 'ಸ್ವಾಗತಾ' ವೃತ್ತವನ್ನು (ರನಭಗಗ) ಪೂರ್ಣರೂಪದಲ್ಲಿ ಜೋಡಿಸಿ ಈ ಸಂಯುಕ್ತ ವೃತ್ತವನ್ನು ನಿರ್ಮಿಸಿದಂತಿದೆ. ಪ್ರಾರಂಭದ ನಾಲ್ಕು ಭ-ಗಣಗಳ ಮೂಲಕ ನಡೆ ಪ್ರಸಿದ್ಧ ಮದಿರಾ ವೃತ್ತದಂತೆ ತೊಡಗುವದರಿಂದ ಇದಕ್ಕೂ ಅದೇ ಹೆಸರನ್ನು ಮಂದರಸಿದಂತಿದೆ. ಮೂಲದಲ್ಲಿರುವ 'ಯದಾಲೋಕೇ ಸೂಕ್ಷ್ಮಂ ವ್ರಜತಿಸಹಸಾ ತದ್ವಿಪುಲತಾ - ೧.೯.' ಪದ್ಯದ ಭಾವವಿಸ್ತರಣ ಅದರ ಛಂದಸ್ಸು -ಶಿಖರಿಣಿ (ಯ- ಮ-ನ-ಸ-ಭ-ಲಗ). ಮಂದಗತಿಯ ವೃತ್ತ ಬಣ್ಣನೆ ರಥದ ವೇಗಕ್ಕೆ ಸಂಬಂಧಿಸಿರುವದರಿಂದ ಔಚಿತ್ಯದ ದೃಷ್ಟಿಯಿಂದ ಹೊಂದಾಣಿಕೆ ಕೂಡಿಬಂದಿಲ್ಲ.

ಎರಡನೇ ಪದ್ಯದಲ್ಲಿ ದುಷ್ಯಂತನ ಸೈನ್ಯಕ್ಕೆ ಬೈದರಿ ಕಣ್ವಾಶ್ರಮದ ಪರಿಸರದಲ್ಲಿ ದಿಕ್ಕೆಟ್ಟು ಓಡುತ್ತಿರುವ ಮೃಗಪಶುಗಳ ಮತ್ತು ಎದುರಿಗೆ ಬಂದದ್ದೆನ್ನೆಲ್ಲ ಧ್ವಂಸ ಮಾಡುತ್ತಿದ್ದ ಕಾಡಾನೆಯ ಬಣ್ಣನೆ ಇದೆ -

ದಂಡು ಕಂಡು ಬೆದರ್ದಾಶ್ರಮ ದೊಳ್ನೆರೆ ಪುಂಡಗಂಡು ಗಜ ಬಂತಿದೊ ವಿಘ್ನಂ -
ಸೊಂಡೆಯುಂಡೆಗೊಳೆ ಕೋರೆಗೆ ವೃಕ್ಷದ ಟೊಂಗೆ ಭಂಗಿಸಿ ತೊಡಂಗಿರೆ ಹಾಯ್|
ಕಂಡ ಕಂಡ ಕಡೆ ಪಾಶವೆ ಸಲ್ಕುರೆ ನಾಲ್ಕು ಕಾಲ್ಗಲಿಯಿಬಳ್ಳಿಗಳಿತ್ತಲ್|
ಹಿಂಡು ಹಿಂಡು ಚಿಗರಿಂಗಳು ಬಲ್ಬಯಗೊಂಡು ಚಂಡಿನ ತೆರಂಜಿಗಿದೋಡಲ್||

- ಇದಾದರೂ ಮೂಲದಲ್ಲಿರುವ 'ತೀವ್ರಾಘಾತ ಪ್ರತಿ ಹತ-ತರುಸ್ಕಂಧ ಲಗ್ನೈತ-ದಂತಃ - ೧.೩೩' ಪದ್ಯದ ಭಾವವಿಸ್ತರಣ. ಛಂದಸ್ಸು ಮಂದಾಕ್ರಾಂತಾ (ಮ-ಭ- ನ-ತ-ತ- ಗಗ). ಬಲು ಮಂದಗತಿಯ ವೃತ್ತ. ಔಚಿತ್ಯದ ದೃಷ್ಟಿಯಿಂದ ಪದ್ಯದ ಸನ್ನಿವೇಶಕ್ಕೂ ಛಂದಸ್ಸಿನ ಗತಿಗೂ ಹೊಂದಾಣಿಕೆ ಇಲ್ಲ. ಚುರಮರಿ ಅನುವಾದಿತ ಪದ್ಯ 'ರಮಣೀಯ(ರ-ನ-ಭ-ಭ-ಕ), ಮತ್ತು 'ಗಜಗತಿ(ನ-ಭ-ರಿಗೆ) ವೃತ್ತ ಪಾದಗಳ ಕೂಡಿಕೆಯಿಂದ (ಗಜಗತಿಯಲ್ಲಿನ 'ಲ' ನ್ನು 'ಗ'ಕ್ಕೆ ಮಾರ್ಪಡಿಸಿ ಸಿದ್ಧವಾದಂತಿದೆ.

ಇವಲ್ಲದೆ ಎರಡನೇ ಅಂಕಿನಲ್ಲಿ ದ್ರುತ ವಿಲಂಬಿತ (ನ-ಭ-ಭ-ರ) ದಲ್ಲಿರುವ 'ಮುನಿ' ಮತ್ತು ವಸಂತ ತಿಲಕ(ತ-ಭ- ಜ-ಜ-ಗ ಗ)-ದಲ್ಲಿರುವ 'ರಾಜ' ಆದಿಯುಮಕಗಳಿರುವ ಎರಡು ಪದ್ಯಗಳಿವೆ.

ಹಾಡುಗಳು

ಸುಮಾರು ೮೦ ಹಾಡುಗಳಲ್ಲಿ ೭೦ ದಕ್ಷಿಣಾದಿ ಪದ್ಧತಿಯಲ್ಲಿ ಆ ಕಾಲದಲ್ಲಿ ಲೋಕಪ್ರಿಯವಿದ್ದ ದಾಸಸಾಹಿತ್ಯ ಮತ್ತು ಶೃಂಗಾರಿಕ ಪದಗಳ ಧಾಟಿಯನ್ನಾಧರಿಸಿ ರಚಿತವಾಗಿದೆ. ಕೆಲವು ಸುಪರಿಚಿತವಿರುವ ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ, ಗೋಕಾವಿ ಅನಂತಾಚಾರ್ಯ ಶ್ರೀ ವೆಂಕಟೇಶ ಪಾರಿಜಾತಗಳಲ್ಲಿನ ಹಾಡುಗಳ ಮಟ್ಟುಗಳನ್ನು ಅನುಸರಿಸಿವೆ. ಇತರ ಹಿಂದುಸ್ತಾನಿ ಪದ್ಧತಿಯವಿವೆ. ಅವಾದರೂ ಆ ಸಮಯದಲ್ಲಿ ಹೆಚ್ಚು ಪರಿಚಿತವಿದ್ದ ಹಾಡುಗಳ ಮಟ್ಟುಗಳನ್ನು ಆಧರಿಸಿವೆ. ಪ್ರತಿಯೊಂದು ಹಾಡಿಗೆ ಅದರ ಮಟ್ಟನ್ನು ಸೂಚಿಸಲು ಕೆಲವೆಡೆ ರಾಗ, ಕೆಲವೆಡೆ ಅದಕ್ಕೆ ಆಧಾರವಿದ್ದ ಹಾಡಿನ ಪಲ್ಲವಿ ಅನುಪಲ್ಲವಿ, ಕೆಲವೆಡೆ ಕೇವಲ ಸ್ವರಪ್ರಸ್ತಾರ ಕೊಟ್ಟಿದೆ - ಮಟ್ಟುಗಳ ಸೂಚಕವೆಂದು ಕೊಟ್ಟ ಶೃಂಗಾರಿಕ ಹಾಡುಗಳಲ್ಲಿ ಪಲ್ಲವಿ ಅನುಪಲ್ಲವಿಗಳು ತತ್ಕಾಲೀನ ರಸಿಕ ಮನೋಜ್ಞತೆಯ ಒಲವು ಅಭಿರುಚಿಗಳ ಪಡಿನೆಳಲಿನಂತಿವೆ. ಅವುಗಳಲ್ಲಿ ಕೆಲವನ್ನು ಆಯ್ದುಕೊಂಡು ಅವುಗಳಿಗಿದ್ದಿರಬಹುದಾದ ಹಿನ್ನೆಲೆಯನ್ನು ಊಹಿಸಿ ಒಂದು ಸುಂದರ ಶಬ್ದಚಿತ್ರವನ್ನು ಹೆಣೆದಿರುವರು ಡಾ. ಹಾವನೂರ ತಮ್ಮ 'ಹೊಸಗನ್ನಡದ ಅರುಣೋದಯ'ದಲ್ಲಿ (ಪು. ೩೬೯-೭೦)

ದೋಷಗಳು

ಚುರಮರಿ ಕೃತಿಯನ್ನು ವಿಮರ್ಶಿಸಿದವರು ದೋಷಗಳ ವಿಚಾರದಲ್ಲಿ ಹೆಚ್ಚಾಗಿ ಅದರಲ್ಲಿ ಕಂಡುಬರುವ ವ್ಯಾಕರಣ ದೋಷ ಛಂದೋದೋಷಗಳನ್ನು ಎತ್ತಿ ತೋರಿಸಿರುವರು. ನಾಟಕವೊಂದು ಮಾನವ ಜೀವನದ ಪ್ರತಿಬಿಂಬ (ಲೋಕ ಧರ್ಮಿ) ಇರುವದರಿಂದ ವ್ಯಾಕರಣ ಶುದ್ಧ ಗ್ರಾಂಥಿಕ ಭಾಷೆಗಿಂತ ದಿನಬಳಕೆಯ ಮಾತು ಹೆಚ್ಚು ಒಪ್ಪುವಂಥದೆಂಬುದು ವಾದಾತೀತ. ಲಿಖಿತ ರೂಪ ತಕ್ಕ ಮಟ್ಟಿಗೆ ವ್ಯಾಕರಣಾನುಸಾರಿ ಇದ್ದರೂ ಪ್ರತ್ಯಕ್ಷ ಪ್ರದರ್ಶನದಲ್ಲಿ ಮಾತುಗಳು ಇರುತ್ತವೆ.

೧. ಇದೊಂದು ಬೇರೆ ಉದಾಹರಣೆ - ಒಂದು ಗಂಡು ತನ್ನ ಹೆಣ್ಣನ್ನು ಉದ್ದೇಶಿಸಿ -

ಮುದ್ದು ಬಾಲೆ ಬಾರೆ ಬಾರೆ ಬಾ
ನಿನ್ನ ಮುಖದ ಲಾವಣ್ಯವನು ನೋಡಿ

ಹುಣ್ಣಿವೆ ದೊರೆಯು ಸಣ್ಣವಾಗಿ ಶಿವನ್ನು ಸೇರಿದಾ|

ಬಾಲೆಯೇನೋ ಹತ್ತಿರ ಬರುತ್ತಾಳೆ. ಆದರೆ ಅನ್ಯ ಸ್ತ್ರೀಯರ ಮಧ್ಯದಲ್ಲಿ ಅವನನ್ನು ಕಂಡು ಹೋಗಿ ಬಿಡುತ್ತಾಳೆ:

ಹರ ಹರಾ ಆದರಿಸದಾದೆ
ಸ್ತ್ರೀ ಸಮೂಹದೊಳೆನ್ನ ಕಾಣುತ್ತ
ಸರಿದಳೆತ್ತಲೊ ರೋಷದಿ|

ಆದರೆ ಅದು ಕ್ಷಣಿಕ. ಮತ್ತೊಮ್ಮೆ ಆಕೆ ಸುಳಿದಾಗ -

ತಿರುಗಲಿಲ್ಲವೆನ್ನ ಮನ ವನಿತೆಯ ಬಳಿಗ್ಹೋಗೀ
ಮರುಗಿ ಮರುಗಿ ಮರುಗೀ ದಣಿದೆ ನಾನಿದಕಾಗೀ |

ಎಂದುಕೊಳ್ಳುತ್ತಾನೆ. ಕೊನೆಗೊಮ್ಮೆ ಆಕೆಯು ಹತ್ತಿರ ಬಂದು ತೋರಿದ ಮಮತೆಯ ಕುರುಹು ಮರೆಯತಂಹುದು -

ಮರೆಯಲಾರೆನೆ ಮಮತೆ - ಮರೆಯಲಾರೆನೆ
ಮರೆಯಲಾರೆ ಮದುವೆಯೊಳಗೆ
ನೆರದವರೊಳು ಸರಿದು ಬಂದು ತನ್ನ
ಬೆರಳುಂಗುರದಲಿರಿದು ಮುಸುಕು
ಮರೆಯಲಿ ಮುಖದಿರುಹಿದವಳ |

ಇನ್ನೆರಡು ಉದಾಹರಣೆಗಳಿವೆ. ಒಂದರಲ್ಲಿ ಒಲಿದು ಬಂದ ಹೆಣ್ಣಿನ ಭಾವ ಚಿತ್ರಣವಿದ್ದರೆ ಇನ್ನೊಂದರಲ್ಲಿ ವೇಶ್ಯಾವಾಟದ ಒಬ್ಬಳ ಅಳಲಿನ ಚಿತ್ರಣವಿದೆ. ದಿನಬಳಕೆಯ ಶೈಲಿಗೆ ಹೊಂದಿಕೊಂಡು ಬರುತ್ತಿರುವುದು ಸರ್ವೇಸಾಮಾನ್ಯ. ಆದರೂ ಚುರಮರಿ ಕೃತಿಯನ್ನು ಸುದೀರ್ಘವಾಗಿ ವಿಮರ್ಶಿಸಿದ ಮುದವೀಡು ಈ ಮಾತನ್ನು ಅಂದರೆ ಅವರಲ್ಲಿ ವ್ಯಾಕರಣ ದೋಷ ಛಂದೋದೋಷಗಳು ಇರುವುದನ್ನು ಒಪ್ಪಿಕೊಂಡು, ಚುರಮರಿ ಬರೆದ ಕಾಲ, ಅವರು ಸಂಪಾದಿಸಿದ ಶಿಕ್ಷಣ ಮೊದಲಾದ ಆನುಷಂಗಿಕ ವಿಷಯಗಳನ್ನು ಮನಗಂಡು ಅವನ್ನು 'ಆರ್ಷ ಪ್ರಯೋಗ' (archaic) ಎಂಬ ಕಾವ್ಯಲಕ್ಷಣದಲ್ಲಿ ಸೇರಿಸುವುದು ಸೂಕ್ತವೆಂದಿವರು. ಅವರ ಈ ಅಭಿಪ್ರಾಯಕ್ಕೆ ತಮ್ಮ ಗೀತ ಶಾಕುಂತಲದಲ್ಲಿ ವ್ಯಕ್ತಪಡಿಸಿದ ಡಿ.ವಿ.ಜಿ, ಅವರ ದೋಷಾನ್ವೇಷಣಾ ಕಟುಪಟುತ್ವಕ್ಕೆ ಉಪಯುಕ್ತವಾಗಬಹುದಾದರೂ ಸೌಂದರ್ಯಾಭಿಮಾನದ ದೃಷ್ಟಿಯಿಂದ ಅದು ಅನುಪಯುಕ್ತವೆಂಬ ಅಭಿಪ್ರಾಯವನ್ನು ಸೇರಿಸಿ ವಿಷಯವನ್ನು ಅಷ್ಟಕ್ಕೇ ಬಿಡುವದು ಯುಕ್ತವೆನಿಸುವದು.

ಆದರೂ ಚುರಮರಿ ಕೃತಿಯಲ್ಲಿ ಅಸ್ಪಷ್ಟ, ಅರ್ಥವ್ಯಕ್ತಿ ಮತ್ತು ಅನೌಚಿತ್ಯದ ಒಂದೆರಡು ಉದಾಹರಣೆಗಳಿವೆ. ದುಷ್ಯಂತ ಮೊದಲ ಸಲ ಹೆಗಲಿಗೆ ಗಂಟು ಹಾಕಿ ವಲ್ಕಲ ಉಟ್ಟುಕೊಂಡ ಶಕುಂತಲೆಯನ್ನು ಕಂಡಾಗ ಅರೆಮರೆ ಮೈ ಮುಚ್ಚಿದ ವಲ್ಕಲ ಅವಳಿಗೆ ಸುತರಾಂ ಒಪ್ಪುವುದಿಲ್ಲ; ಆದರೂ ಜನ್ಮಜಾತ ಸೌಂದರ್ಯವತಿಗೆ ಯಾವುದೇನು; ಎಂದು ತನ್ನೊಳಗೆ ಹೇಳಿಕೊಂಡಿರುವನು.

ಕಾಳಿದಾಸನು ದುಷ್ಯಂತನ ಈ ಮಾತನ್ನು : "ಇದಮುಪಹಿತ ಸೂಕ್ಷ್ಮಗ್ರಂಥಿನಾ ಸ್ಕಂಧದೇಶೇ, ಸ್ತನಯುಗ ಪರಿಣಾಹಾಚ್ಛಾದಿನಾ ವಲ್ಕಲೇನ - (೧.೧೯) ಮತ್ತು 'ಸರಸಿಜ ಮನುವಿದ್ಧಂ ಶೈವಲೇನಾಪಿರಮ್ಯಂ.... ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಮ್" (೧. ೨೦) - ಎರಡು ಶ್ಲೋಕಗಳಲ್ಲಿ ಬಣ್ಣಿಸಿರುವನು. ಎರಡನೇದು ಒಳ್ಳೇ ರಸವತ್ತಾದ ಶ್ಲೋಕವೆಂದು ಗಣಿಸಲ್ಪಟ್ಟಿದೆ. ಚುರಮುರಿ ಎರಡೂ ಶ್ಲೋಕಗಳನ್ನು ಸೇರಿಸಿ 'ಮೋಹದ ವಸ್ತು ತಾ ಮಾಜಲರಿಯದು [ಮೋಹವೇ ಬಡಿಸುವದು' ಎಂಬ ಹಾಡಿನಲ್ಲಿ ಪರಿವರ್ತಿಸಿರುವರು. ತಮ್ಮವೇ ಆದ ಒಂದೆರಡು ಮಾತುಗಳನ್ನು ಸೇರಿಸಿರುವರು. ಆದರೆ ಬಣ್ಣನೆ ಸುಗಮವಾಗಿ ಸ್ಪಷ್ಟವಾಗಿ ಬಂದಿಲ್ಲ.

ಅನೌಚಿತ್ಯ : ಶಕುಂತಲೆ ಪತಿಗೃಹಕ್ಕೆ ಹೊರಡುವ ಮುನ್ನ ರಾತ್ರಿ ಇನ್ನೂ ಎಷ್ಟು ಉಳಿದಿದೆಂಬುದನ್ನು ನೋಡಲು ಹೊರಬಂದ ಕಣ್ವ ಶಿಷ್ಯನೊಬ್ಬನು ಬೆಳಗು ಮೂಡಿದ್ದನ್ನು ಕಂಡು ಈ ಮೊದಲು ಉಲ್ಲೇಖಿಸಿದ 'ಉದಯಕಾಲವಾಯಿತು ಜಗವೆಲ್ಲ ಸಮುದವಾಗಲು' ಪದವನ್ನು ಹಾಡುವನು. ಸ್ವತಂತ್ರ ದೃಷ್ಟಿಯಿಂದ ಅದನ್ನಿಷ್ಟೇ ನೋಡಿದಾಗ ಒಳ್ಳೇ ಶೃಂಗಾರಪೂರ್ಣ ಪದವೆಂದು ಮೆಚ್ಚುವಂಥದು. ಆದರೂ ಹೆಣ್ಣು ಗಂಡುಗಳ ಸೋಂಕು ಕೂಡ ಇಲ್ಲದ ಋಷಿ ಕುಮಾರನಿಂದ ಇಂಥ ಪದವನ್ನು ಹಾಡಿಸಿರುವದು ಉಚಿತವೆನಿಸದು. ತತ್ಪೂರ್ವದಲ್ಲಿ ದುಷ್ಯಂತನನ್ನು ಕಂಡು ಕಾಮಪೀಡಿತ ಶಕುಂತಲೆಯನ್ನು ಉಪಚರಿಸುತ್ತಿದ್ದ ಸಖಿಯರು ಶಕುಂತಲೆಗೆ: ಮದನ ಪ್ರಕರಣದಲ್ಲಿ ನಮಗೆ ವಿಶೇಷ ಜ್ಞಾನವಿಲ್ಲದಿದ್ದರೂ ಕಥೆ ಪುರಾಣಗಳಲ್ಲಿ ಕೇಳಿದ ಕಾಮಿಜನರ ಅವಸ್ಥೆಯಂತೆ ನಿನ್ನ ಅವಸ್ಥೆಯಾಗಿದೆ ಎಂಬ ಮಾತನ್ನು ದುಷ್ಯಂತನಿಂದ ಆಕರ್ಷಿತಳಾದ ಶಕುಂತಲೆ ತನ್ನಲ್ಲಿ ತಪೋವನಕ್ಕೆ ಅಯೋಗ್ಯವಾದ ವಿಕಾರಗಳೇನು ಕಾರಣ ಆಗುತ್ತಿದ್ದಾವು, ಎಂದುಕೊಂಡಿರುವುದನ್ನೂ ಈ ಸಂದರ್ಭದಲ್ಲಿ ನೆನೆಯಬೇಕು. ಆದರೂ ಕ್ಷೇಮೇಂದ್ರನಂಥ ಚತುರಸ್ರಕವಿ; ಲಾಕ್ಷಣಿಕ, ತನ್ನ ಔಚಿತ್ಯ ವಿಚಾರ ಚರ್ಚೆಯಲ್ಲಿ ಕುಮಾರಸಂಭವ ಕಾವ್ಯದಲ್ಲಿ ಜಗಜ್ಜನನೀ ಜನಕರಿದ್ದ ಶಿವಪಾರ್ವತಿಯರ ಸಂಭೋಗ ಶೃಂಗಾರವನ್ನು ವರ್ಣಿಸಿರುವದು ಅನುಚಿತವೆಂದು ಸ್ವಯಂ ಕಾಳಿದಾಸನನ್ನೇ ಆಕ್ಷೇಪಿಸಿರುವಾಗ ಚುರಮರಿಯಂಥವರು ಅದಾವ ಗಿಡದ ತೊಪ್ಪಲು?

ದೋಷಗಳೊಂದಿಗೆ ಒಂದು ವಿಕಲ್ಪವೂ ಇದೆ. ಅದೆಂದರೆ ಅವರ ಮಂಗಲಾಚರಣ ಪದ್ಯ. ಶೈವಸಿದ್ಧ ಕಾಳಿದಾಸನ ಪರಮಾತ್ಮನ ವಿಶ್ವವ್ಯಾಪಿತ್ವವನ್ನು 'ಯಾಸೃಷ್ಟಿಃ ಸ್ರಷ್ಟುರಾದ್ಯಾ' -ಸುವಿಖ್ಯಾತ ಪದ್ಯದಲ್ಲಿ ಶಿವಪಾರಮ್ಯವಾಗಿ ಸ್ತುತಿಸಿ ವಂದಿಸಿದ್ದರೆ, ಚುರಮುರಿ ಪರ್ಯಾಯದಿಂದ ಅದೇ ಅರ್ಥವನ್ನು ಕೊಡುವ 'ತಳೆದಿಹ ಪರಾತ್ಪರನು ಪರಿಪಾಟ್ಯಕೂಪಂ' ವಿಷ್ಣು ಪಾರಮ್ಯ ಹಾಡನ್ನು ಅದರ ಸ್ಥಳದಲ್ಲಿ ಸೇರಿಸಿರುವರು. ಅದೇಕೋ ತಿಳಿಯದು. ಸ್ವಮತ - ನಿಷ್ಠೆ ಕಾರಣವಾಗಬಹುದಾದರೂ ಅಷ್ಟು ಸಾಲದು. ಗ್ರಂಥೋಕ್ತ ಆಧಾರಗಳಿಲ್ಲವಾಗ ಇಂಥ ಸಂದರ್ಭಗಳಲ್ಲಿ ಪ್ರಾಚೀನರು ಶಿಷ್ಟಾನುಸರಣ. ಶಿಷ್ಟ ಪ್ರಯೋಗ ಎಂಬ ಮಾತುಗಳಿಂದ ವಿಷಯವನ್ನು ಅಷ್ಟಕ್ಕೇ ಬಿಟ್ಟು

ಮುಂದರಿದಿದ್ದುಂಟು. ಪ್ರಕೃತ ಮಾರ್ಪಾಟಿಗೆ ಚುರಮರಿ ಕಣ್ಣೆದುರು ಅದಾವ ಶಿಷ್ಯರಿದ್ದರೋ ತಿಳಿಯದು. ಕನ್ನಡದ ಮಟ್ಟಿಗೆ ನಾಗವರ್ಮನ (ಇಮ್ಮಡಿ?) ಕರ್ಣಾಟಕ ಕಾದಂಬರಿಯಲ್ಲಿ ಮಾತ್ರ ಹೀಗಾಗಿದೆ. ಅದಾದರೂ ಅನುವಾದ ಗ್ರಂಥ. ಮೂಲದ ಕರ್ತೃ ಬಾಣ ಗ್ರಂಥಾವತಾರದಲ್ಲಿ ಪ್ರಾರಂಭದ ಮೂರು ಶ್ಲೋಕಗಳಲ್ಲಿ ತ್ರಿಗುಣಾತ್ಮಕ (ಸೃಷ್ಟಿ, ಸ್ಥಿತಿ, ಲಯ) ತ್ರಿಮೂರ್ತಿಯೆದು ಪರಬ್ರಹ್ಮ, ಶಿವ, ವಿಷ್ಣು - ದೇವತೆಗಳನ್ನು ಸ್ತುತಿಸಿರುವನು. ಅನಂತರ ಆಶ್ರಯದಾತನಿಗೆ ಸಂಬಂಧಿಸಿ ಮತ್ತು ಇತರ ಸಂದರ್ಭೋಚಿತ ೧೭ ಶ್ಲೋಕಗಳಿವೆ. ನಾಗವರ್ಮನು ಅಗತ್ಯವೆಂದು ಅವನ್ನು ಬಿಟ್ಟಿರುವನು. ಪ್ರಾರಂಭದ ಮೂರು ದೇವತಾಸ್ತುತಿ ಶ್ಲೋಕಗಳ ಬದಲು ಈಶ್ವರನ ಶಿರೋಭೂಷಣವಿದ್ದ ಚಂದ್ರನನ್ನು (ಪರ್ಯಾಯದಿಂದ ಆಶ್ರಯದಾತ -ಅರಸು ನರೇಂದ್ರ ಚಂದ್ರನನ್ನು), ಸರಸ್ವತಿ, ಮೂಲಕೃತಿಯ ಕರ್ತೃ ಬಾಣನನ್ನು ಅಭಿವಂದಿಸಿ ಕಥೆಗೆ ತೊಡಗಿರುವನು. ಶಿಷ್ಟ ಪ್ರಯೋಗಗಳ ವಿಚಾರದಲ್ಲಿ, ಪೂರ್ವಕವಿ ಪ್ರಯುಕ್ತವೆಂದು ಅರಿ ಸಮಾಸಗಳ ಸಂದರ್ಭದಲ್ಲಿ ಕೇಶಿರಾಜನು (ಶಬ್ದಮಣಿ ದರ್ಪಣ) ಅಪವಾದಾತ್ಮಕವಾಗಿ ಸ್ವೀಕರಿಸಿದ ಕಡುರಾಗಂ, ರಾಯಕೋಳಾಹಳಂ, ಮೊದಲಾದ ಶಬ್ದಗಳನ್ನು ಉದಾಹರಿಸಬಹುದು. ಚುರಮರಿ ಮಂಗಲಾಚರಣ ಪದ್ಯದ ವಿಷಯವಾದರೂ ಈ ಬಗೆಯದು ಎನ್ನಬಹುದು. ಇಷ್ಟೇ.

ಛಂದಸ್ಸಿನ ನಿಯಮಗಳಿಗೆ ಅಥವಾ ಪ್ರಾಸ ಮೋಹಕ್ಕೆ ಕಟ್ಟುಬಿದ್ದು ಚುರಮರಿ ಸೌಷ್ಟವ ಶಬ್ದಗಳೊಂದಿಗೆ ಅವುಗಳ ಗ್ರಾಮ್ಯ ರೂಪಗಳನ್ನು ಬಳಸಿದ್ದಾದರೂ ಉಂಟು. ಉದಾ: ಕುಂತು(ಕುಳಿತು) ಮಳ್ಳಿ (ಮರುಳಿ). ಚುರಮರಿ ಸಮಕಾಲಿಕನಿದ್ದಿರಬಹುದಾದ ಹಿರಣ್ಯಗರ್ಭನೆಂಬ ಜೈನಕವಿ 'ವಿಸ್ವಕೃತಿ ಪರೀಕ್ಷಣ' ಎಂಬ ಗ್ರಂಥದಲ್ಲಿ ಕವಿಗಳನ್ನು (೧) ಸುರ, ೨) ವರ, ೩) ನರ, ೪) ತಸ್ಕರ, ೫) ಕರ್ದಮ ಎಂದು ಐದು ಬಗೆಯಲ್ಲಿ ವಿಂಗಡಿಸಿರುವನು. ಸುರಕವಿಗಳಲ್ಲಿ ವೇದ ಮಂತ್ರಗಳ ದೃಷ್ಟಾರರನ್ನು, ವರಕವಿಗಳಲ್ಲಿ ಶ್ರುತಿ - ಸ್ಮೃತಿಕಾರರನ್ನು ನರಕವಿಗಳಲ್ಲಿ ಉತ್ಕೃಷ್ಟ ಪುರಾಣ, ಕಾವ್ಯ, ನಾಟಕ ಪ್ರಬಂಧಗಳನ್ನು ಬರೆದವರು, ತಸ್ಕರ ಕವಿಗಳಲ್ಲಿ ಅನ್ಯರಿಂದ ಭಾವಗಳ್ನೂ ವಾಕ್ಯಗಳನ್ನೂ ಕದ್ದು ಬರೆದವರು, ಕರ್ದಮ ಕವಿಗಲ್ಲಿ ಯಾವ ವಿದ್ಯೆಯೂ ಇಲ್ಲದೆ, ವ್ಯಾಕರಣ ಜ್ಞಾನವಿಲ್ಲದೆ ಪದ್ಯಗಳನ್ನು ಹೊಸೆದವರು - ಒಳಗೊಳ್ಳುವರು ಎಂದಿರುವನು. ಇತರ ಕೆಲವರೊಂದಿಗೆ ಆತ ಚುರಮರಿಯವರನ್ನು ಕರ್ದಮ ಕವಿಗಳಲ್ಲಿ ಸೇರಿಸಿರುವನು(ಹಾವನೂರ, ಹೊ. ಅ. ಪು. ೩೬೩-೬೪). ಚುರಮರಿ ಕೃತಿಯಲ್ಲಿ ಆತ ಬೇರೆ ಯಾವ ದೋಷಗಳನ್ನು ಕಂಡಿರುವನೊ ತಿಳಿಯದು. ಸದ್ಯ ಇಷ್ಟು ಸಾಕು.

●

ಪ್ರಕರಣ ೬

ಚುರಮರಿ : ಕಿರ್ಲೋಸ್ಕರ

ಪಾಶ್ಚಿಮಾತ್ಯ ಸಂಪರ್ಕದಿಂದ ಸಡಲಿಸಿದ ಸಂಪ್ರದಾಯನಿಷ್ಠೆ ಮತ್ತು ಆ ಜಾತಿಯಲ್ಲಿ ಹುಟ್ಟಿಕೊಂಡ ಪಾರ್ಸಿ ನಾಟಕಗಳು ಆಧುನಿಕ ಭಾರತೀಯ ರಂಗಭೂಮಿಯಲ್ಲುಂಟಾದ ತೀವ್ರ ಬದಲಾವಣೆಗಳಿಗೆ ಅವೆಂತು ಕಾರಣವಾದವೆಂಬ ಮಾತು ಈ ಮೊದಲು ಬಂದು ಹೋಗಿದೆ. ಚುರಮರಿ ಕಿರ್ಲೋಸ್ಕರ ಆಗಲಿ, ಅವರ ಹೆಜ್ಜೆಯಲ್ಲಿ ಸಾಗಿದ ನಂತರದ ಇತರರಾಗಲಿ ಅಪವಾದವಾಗಲಿಲ್ಲ. ಆದರೆ ಅವರದು ಅಂಧಾನುಕರಣವಲ್ಲ. ಸಂಗೀತ ಮತ್ತು ಬಳಿಕೆ ಸ್ವರೂಪದ ಗದ್ಯ - ಎರಡನ್ನು ಪ್ರಮುಖ ಸಾಧನಗಳನ್ನಾಗಿಸಿಕೊಂಡು ಎಂದಿನಿಂದಲೂ ಲೋಕಪ್ರಿಯವಿದ್ದ ಕಾಳಿದಾಸ ಮೊದಲಾದವರ ನಾಟಕಗಳನ್ನು ಶೇಕ್ಸಪಿಯರ ಮೊದಲಾದ ಪಾಶ್ಚಿಮಾತ್ಯರ ಕೃತಿಗಳನ್ನೂ ತಮ್ಮ ತಮ್ಮ ಭಾಷೆಗಳಲ್ಲಿ ಪರಿವರ್ತಿಸಿದರು. ಅವುಗಳಲ್ಲಿ ಕೆಲವು ರಂಗಭೂಮಿಯನ್ನು ಕಂಡವು. ಕಿರ್ಲೋಸ್ಕರರ ಗೈಮೆ ಹೆಚ್ಚಿನದು. ಪೌರಾಣಿಕವಿದ್ದರೂ ಶಾಕುಂತಲದ ನಂತರ ೧೮೮೨ರಲ್ಲಿ ರಂಗಕ್ಕೆ ಬಂದ ಅವರ ಸೌಭದ್ರ ಸಂಪೂರ್ಣ ಸ್ವತಂತ್ರ ನಾಟಕ. ಲೋಕಪ್ರಿಯ ನಾಟಕ.

ಕಿರ್ಲೋಸ್ಕರರ (೧೮೪೩-೧೮೮೫) ಹುಟ್ಟೂರು ಕರ್ನಾಟಕದಲ್ಲಿ ಧಾರವಾಡ-ಬೆಳಗಾವಿಗೆ ಮಧ್ಯವರ್ತಿಯಂತಿದ್ದ ಸವದತ್ತಿ ಬಳಿ ಮಲಪ್ರಭಾ ತೀರದಲ್ಲಿದ್ದ ಗುರ್ಲ ಹೊಸೂರು(ಕಾಗ ಅದಿಲ್ಲ. ಮಲಪ್ರಭಾ ಆಣೆಕಟ್ಟಿನಿಂದ ಉಂಟಾದ ಸರೋವರದಲ್ಲಿ ಮುಳುಗಿ ಹೋಗಿದೆ.) ಕೊನೆಗೆ

---

೧. 'ರಾಧಾವಿಲಾಸ' ಎಂಬ ಅವರ ಬಹುಭಾಷಿಕ ಆಖ್ಯಾನದಲ್ಲಿ 'ನಂದಸುಂದರೀಕೇಶ ಮಾತ' ಎಂಬುದೊಂದು ಮರಾಠಿ ವಿಶಿಷ್ಟ 'ಗೌಳಣ' ಮಟ್ಟದಲ್ಲಿರುವ ಕನ್ನಡ ಪದ್ಯವಿದೆ. ಇದು ಮರಾಠಿ ವಿಶಿಷ್ಟ ಮಟ್ಟದಲ್ಲಿರುವ ಕನ್ನಡ ಪದ್ಯವಾದರೆ, ಅವರ ಶಾಕುಂತಲ, ಸೌಭದ್ರ, ರಾಮರಾಜ್ಯ ವಿಯೋಗ (ಅಪೂರ್ಣ) ನಾಟಕಗಳಲ್ಲಿ ಕನ್ನಡ ವಿಶಿಷ್ಟ ಮಟ್ಟುಗಳಲ್ಲಿನ ಮರಾಠಿ ಹಾಡುಗಳಿವೆ (ಅವುಗಳಲ್ಲಿ ಕೆಲವು ಇಂದಿಗೂ ಲೋಕಪ್ರಿಯವಿವೆ). 'ಹರಿಶ್ಚಂದ್ರ' ಆಖ್ಯಾನದಲ್ಲಿರುವ ಒಂದು ಮಿಶ್ರಭಾಷಾ ಹಾಡಿನಲ್ಲೂ ಕನ್ನಡದಲ್ಲಿರುವ ಒಂದು ನುಡಿ (ಏನೋ ಭಟ್ಟಾ, ಇತ್ಯಾದಿ) ಇದೆ. ಸಮಗ್ರ ಕಿರ್ಲೋಸ್ಕರ

ದೇಹವಿಟ್ಟಿದ್ದಾದರೂ ಅಲ್ಲಿಯೇ. ಶಿಕ್ಷಣ ಪ್ರಾರಂಭದ ೧೨ ವರ್ಷಗಳವರೆಗೆ ಮನೆಯಲ್ಲಿ. ಸಂಸ್ಕೃತ, ಮರಾಠಿ, ಕನ್ನಡ ಭಾಷೆಗಳಲ್ಲಿ ತಕ್ಕಮಟ್ಟಿಗೆ ಪರಿಣತಿ. ಕನ್ನಡದಲ್ಲಿ ಪದ್ಯಗಳನ್ನು ಕೂಡ ರಚಿಸಿದ್ದುಂಟು. ಜನ್ಮಜಾತ ರಸಿಕ, ಪ್ರತಿಭಾವಂತ ಕವಿ, ನಾಟ್ಯಕಲಾ ವಿಲಾಸಿ. ಶಿಕ್ಷಣಕ್ಕಾಗಿ ಧಾರವಾಡ (೧೮೫೬-೬೦, ೬೬-೬೮), ಕೊಲ್ಹಾಪುರ, ಪುಣೆ ವಾಸ. ವಿದ್ಯಾಪ್ರಗತಿ ಅಷ್ಟಕ್ಕಷ್ಟೆ. ಬೆಳಗಾವಿಯಲ್ಲಿ ೧೮೬೮ - ಓಂದೆ ಮುಂದೆ ಎಂಟು ವರ್ಷ ಶಿಕ್ಷಣ ಖಾತೆಯಲ್ಲಿ ಶಿಕ್ಷಕ, ಬಳಿಕ ಸ್ವಲ್ಪ ಸಮಯ ಪೋಲೀಸ ಖಾತೆಯಲ್ಲಿ, ನಂತರ ರೆವೆನ್ಯೂ ಖಾತೆಯಲ್ಲಿ (ಸು. ೧೮೮೨-ವರೆಗೆ) ನೌಕರಿ. ಅಭಿಜಾತ -ಸಂಸ್ಕೃತ ನಾಟಕಗಳ ಪಡಿಯಚ್ಚಿನಲ್ಲಿ ಸಂಗೀತಾತ್ಮಕ ಶಾಕುಂತಲ, ಸೌಭದ್ರ, ರಾಮರಾಜ್ಯ ವಿಯೋಗ (ಅಪೂರ್ಣ) - ಹೀಗೆ ಎರಡೂವರೆ ನಾಟಕಗಳನ್ನು ಬರೆದ ಅವರು ಕೊನೆಗೆ ನೌಕರಿಬಿಟ್ಟು 'ಕಿರ್ಲೋಸ್ಕರ ಸಂಗೀತ ನಾಟಕ ಮಂಡಳಿ' ಎಂಬ ವ್ಯವಸಾಯಿ ಮೇಳವನ್ನು ಕಟ್ಟಿ ಮಹಾರಾಷ್ಟ್ರದಲ್ಲಿ ಸಂಗೀತ ನಾಟಕಗಳ ಯುಗಕ್ಕೆ ಕಾರಣಪುರುಷರಾದರು. ಇಷ್ಟೆಲ್ಲ ಆದದ್ದು ಅವರ ಆಯುಷ್ಯದ ಕೊನೆಯ ಐದು ವರ್ಷಗಳಲ್ಲಿ. ಬಾಲ್ಯದಿಂದಲೇ ನಾಟ್ಯಕಲೆಗೆ ತಮ್ಮ ಜೀವನ ಅರ್ಪಿಸಿದ ಅವರು ಆ ಮೊದಲು ಮಹಾರಾಷ್ಟ್ರದಲ್ಲಿ ಲೋಕಪ್ರಿಯವಿದ್ದ ಪೌರಾಣಿಕ ನಾಟಕ ಮಂಡಳಿಗಳಲ್ಲಿ ಪಾತ್ರವಹಿಸಿ ಅನುಭವ ಪಡೆದಿದ್ದರು. ಕೀರ್ತನಕಾರರಿಗೆ ಪದಗಳನ್ನು ರಚಿಸಿ ಕೊಡುತ್ತಿದ್ದರು. ಬೆಳಗಾವಿಯಲ್ಲಿ 'ಭರತ ಶಾಸ್ತ್ರೋತ್ತೇಜಕ ಮಂಡಳಿ' ಎಂಬ ಹವ್ಯಾಸಿ ಮೇಳವನ್ನು ಕಟ್ಟಿ ನಾಟಕಗಳನ್ನು ಪ್ರದರ್ಶಿಸಿದರು. ಸ್ವಯಂ ನಾಟಕಗಳನ್ನು ರಚಿಸಿದ್ದರು. ಅವುಗಳಲ್ಲಿ ಆದ್ಯ ಶ್ರೀಶಂಕರಾಚಾರ್ಯರ ಚರಿತ್ರವನ್ನು ಒಳಗೊಂಡ ಗದ್ಯ ನಾಟಕ ಸಾಕಷ್ಟು ಪ್ರಸಿದ್ಧಿ ಪಡೆದಿತ್ತು.

ಚುರಮುರಿ ಕಿರ್ಲೋಸ್ಕರ - ಈರ್ವರ ವಿಷಯದಲ್ಲಿ ತಕ್ಕ ಮಟ್ಟಿಗೆ ಅಧಿಕೃತ ವಿವರಗಳು ದೊರೆಯುವದು ಚುರಮುರಿ ಶಾಕುಂತಲದ ನಾಲ್ಕನೇ ಆವೃತ್ತಿಗೆ (೧೯೩೪) ಬರೆದ ಮುದುವೀಡರ ಮುನ್ನುಡಿಯಲ್ಲಿ ಮತ್ತು ಶಂಕರ ಬಾಪೂ ಮುಜುಮುದಾರರ ಕಿರ್ಲೋಸ್ಕರರ ಜೀವನ ಚರಿತ್ರೆಯಲ್ಲಿ. ಮುಜಮುದಾರ ಕಿರ್ಲೋಸ್ಕರ ಶಾಕುಂತಲದ ಪ್ರಪ್ರಥಮ ಪ್ರಯೋಗದಲ್ಲಿ

(೧೮೮೦) ಶಕುಂತಲೆಯ ಪಾತ್ರ ವಹಿಸಿದ್ದರು. ಆ ಮೊದಲು ಮತ್ತು ಮುಂದಾದರೂ ಕಿರ್ಲೋಸ್ಕರರೊಂದಿಗೆ ಅವರದು ನಿಕಟ ಸಂಪರ್ಕವಿದ್ದಿತು. ಚರಿತ್ರೆ ಬರೆದು ಪ್ರಕಟಿಸಿದ್ದು ೧೯೦೪ರಲ್ಲಿ. ಉಳಿದವರಿಗೆ ಇವೇ ಮೂಲಾಧಾರ. ಪುಣೆಯಲ್ಲಿ ಪಾರ್ಸಿ ನಾಟಕಗಳನ್ನು ನೋಡಿದ ಕಿರ್ಲೋಸ್ಕರರಿಗೆ ಮರಾಠಿಯಲ್ಲೂ ಆ ಬಗೆಯ (ಸಂಗೀತಾತ್ಮಕ) ನಾಟಕಗಳನ್ನು ರಚಿಸಬೇಕೆಂಬ ಕಲ್ಪನೆ ಮೂಡಿ ಅದೇ ಶಾಕುಂತಲದ ರಚನೆಗೆ ನಿಮಿತ್ತವಾಯಿತೆಂದು ಉಲ್ಲೇಖಿಸಿರುವರು, ಮುಜುಮದಾರ (ಪು. ೬೭). ಕಿರ್ಲೋಸ್ಕರ ಶಾಕುಂತಲದ ಪ್ರಪ್ರಥಮ ಪ್ರಯೋಗವನ್ನು ನೋಡಿ ಮಹಾರಾಷ್ಟ್ರದ ವಿಖ್ಯಾತ ನಿಬಂಧಕಾರ ವಿಷ್ಣುಶಾಸ್ತ್ರಿ ಚಿಪಳೋಣಕರ 'ಕೇಸರಿ' ಪತ್ರಿಕೆಯಲ್ಲಿ ಬರೆದ (೧೮೮೧) ವಿಮರ್ಶಾತ್ಮಕ ಲೇಖದಲ್ಲಿರುವ ಅದೊಂದು ಹೊಸ ತಿರುವಿನ (ನವೀನ ಟೂಮ್) ನಾಟಕ. ಅದರಲ್ಲಿನ ಸಂಗೀತದ ಬಗೆ ಅವರೆಗೆ ಪಾರ್ಸಿ ನಾಟಕಗಳಲ್ಲಿ ಮಾತ್ರ ಕೇಳಿಬರುತ್ತಿತ್ತು, ಎಂಬ ಮಾತಾದರೂ ಮುಜಮುದಾರರ ಉಲ್ಲೇಖವನ್ನೇ ಸಮರ್ಥಿಸುವುದು (ಸ.ಕಿ.ಪು. ೪೬-ಉಧೃತ)

ಮುದವೀಡು ಚುರಮರಿಯಿಂದ ಎರಡನೇ ತಲೆಮಾರಿನವರು. ಚುರಮರಿ ಸಮಕಾಲಿಕರಿದ್ದ ಶಾಂತಕವಿ, ಕಾವ್ಯಾನಂದ (ಪುಣೇಕರ) ಮೊದಲಾದ ಹಿರಿಯರಿಂದ ಮತ್ತು ಸ್ವಯಂ ನಾಟಕಕಾರರಿದ್ದ ಚುರಮರಿಯವರ ಕಕ್ಕನ ಮಗ ಗುಂಡೇರಾಯರಿಂದ ಸಂಗ್ರಹಿಸಿದ ಮಾಹಿತಿಯನ್ನು ಒಟ್ಟುಗೂಡಿಸಿ ತಮ್ಮ ಮುನ್ನುಡಿಯನ್ನು ಬರೆದಿರುವರು. ಮುಜುಮುದಾರ ಕೃತಿಯಲ್ಲಿ ಚುರಮರಿ ನಾಮನಿರ್ದೇಶನವಿಲ್ಲ. ಮುದವೀಡು ಚುರಮರಿ ಕೃತಿಯಿಂದ ಪ್ರಭಾವಿತರಾದ ಕಿರ್ಲೋಸ್ಕರ ತಮ್ಮ ಶಾಕುಂತಲವನ್ನು ರಚಿಸಿರುವರೆಂದು ಸ್ಪಷ್ಟವಾಗಿ ಉಲ್ಲೇಖಿಸಿರುವರು (ಪು. ೧೨, ೨೯). ಇನ್ನೊಂದೆಡೆ ಇಬ್ಬರೂ ಮಿತ್ರರಿದ್ದರು ಎಂದಿರುವರು (ರಂಗನಾಥ, ಕ.ಥಿ. ಪು. ೮೭). ಮುದುವೀಡರ ಮುನ್ನುಡಿಯಲ್ಲಿ ಚುರಮರಿ ಕೃತಿಗೆ ಇದ್ದಿರಬಹುದಾದ ಪ್ರಚೋದನೆಯ ಮಾತಿಲ್ಲ. ಅದನ್ನು ಅವರ ಜೀವನದ ಇತಿವೃತ್ತಗಳಿಂದ ಊಹಿಸಿಕೊಳ್ಳಬೇಕು.

ಇತ್ತೀಚೆಗೆ (೧೯೬೯) ಕೃ. ಬಾ. ಮರಾಠೆ ಎಂಬ ಬೆಳಗಾವಿಯ ಸದ್ಗೃಹಸ್ಥರೊಬ್ಬರು ಕಿರ್ಲೋಸ್ಕರ ಕಟ್ಟಿದ ಭರತ ಶಾಸ್ತ್ರೋತ್ತೇಜಕ ಮಂಡಳಿಯವರು ೧೮೭೫ರಲ್ಲಿ ಶಾಕುಂತಲವನ್ನು ಪ್ರದರ್ಶಿಸಿದರೆಂಬ ಸ್ಥಳಿಕ ಪತ್ರಿಕೆ ಬೆಳಗಾಂವ ಸಮಾಚಾರ'ದ ತತ್ಕಾಲೀನ ಸಂಚಿಕೆಯಲ್ಲಿನ ವರದಿಯನ್ನು ಆಧಾರವಾಗಿಟ್ಟುಕೊಂಡು ಶಾಕುಂತಲದ ಪ್ರಪ್ರಥಮ ಪ್ರಯೋಗವಾದದ್ದು ಬೆಳಗಾವಿಯಲ್ಲಿ, ೧೮೭೫ರಲ್ಲಿ, ಎಂದು ಸಾಧಿಸಿರುವರು. ಜೊತೆಗೆ ಚುರಮರಿ ಅನುವಾದ ತನ್ನಂತರದ್ದು ಎಂದು ಪ್ರಸ್ತಾಪಿಸಲೆತ್ನಿಸಿರುವರು (ಮರಾಠಿ ರಂ. ಭೂ. ಪೂರ್ವರಂಗ, ಪು. ೧೮೨, ೧೯೯೧). ಪುಣೆಯಲ್ಲಿ ೧೮೮೦ರಲ್ಲಿ, ಮೊದಲು ಸಲ ರಂಗಭೂಮಿಗೆ ಬಂದ ಕಿರ್ಲೋಸ್ಕರರ ಶಾಕುಂತಲ ಮಹಾರಾಷ್ಟ್ರದಲ್ಲಿ ಪ್ರಾರಂಭವಾದ ಸಾಗ್ರಸಂಗೀತ ಅಭಿಜಾತ ನಾಟಕಗಳಿಗೆ ನಾಂದಿ, ಮುಂದೆ ಎರಡು ವರ್ಷಗಳ ನಂತರ ರಂಗಕ್ಕೆ ಬಂದ ಸೌಭದ್ರ ಆ ಬಗೆಯ ನಾಟಕಗಳ ಕಾರಣಪುರುಷರೆಂಬ ಅವರ ಕೀರ್ತಿಗೆ ಭದ್ರ ತಳಹದಿ ಆಯಿತೆಂಬ ಮಾತು ಪ್ರಾರಂಭದಿಂದ ಜನಜನಿತವಿದ್ದರೂ ಮರಾಠೆ ಆಧಾರವಾಗಿಟ್ಟುಕೊಂಡ ಬೆಳಗಾಂವ ಸಮಾಚಾರ ವರದಿ ವಿಮರ್ಶೆಗಳಲ್ಲಿ ಸಂಗೀತ ಶಬ್ದದ ಉಲ್ಲೇಖ ಕೂಡ ಇಲ್ಲ. (ಅದೇ, ಪು. ೧೮೭).ಕಿರ್ಲೋಸ್ಕರರ ಪ್ರಸಿದ್ಧ ಶಾಕುಂತಲದ ಪ್ರಪ್ರಥಮ ಪ್ರಯೋಗದ ವರ್ಷವನ್ನು (೧೮೮೦) ತಳಹದಿಯಾಗಿ ಇಟ್ಟುಕೊಂಡು ೧೯೮೧ರಲ್ಲಿ ಜರುಗಿದ ಅದರ ಶತಮಾನೋತ್ಸವದಿಂದ ಮಹಾರಾಷ್ಟ್ರದಲ್ಲಿಯೇ ಮರಾಠೆ ಪ್ರತಿಪಾದನೆಗೆ ಮನ್ನಣೆ ಇಲ್ಲವೆಂಬುದು ಸ್ಪಷ್ಟವಿರುವಾಗ ವಿಷಯವನ್ನು ಹೆಚ್ಚು ಬೆಳೆಸಬೇಕಿಲ್ಲ. ಅಗತ್ಯವೂ ಇಲ್ಲ. ಚುರಮರಿಯವರೇ ಕಿರ್ಲೋಸ್ಕರರಿಂದ ಪ್ರಭಾವಿತರಾದವರೆಂಬ ಅವರ ಪ್ರತಿಪಾದನೆ ಹಾಸ್ಯಾಸ್ಪದ. ಆದರೂ ಪ್ರಕೃತ ಸಂಬಂಧದ ಸಹಬಂಧು ಲೇಖಕ ಪ್ರಹ್ಲಾದ ಮುದಗಲ್ ಲಂಡನ್‌ನಲ್ಲಿಯ ಇಂಡಿಯ ಆಫೀಸ ಗ್ರಂಥಭಂಡಾರದಿಂದ ಚುರಮರಿ ಕೃತಿಯ ಪ್ರಥಮ ಮುದ್ರಣದ 'ಝೆರೊಕ್ಸ' ಪ್ರತಿಯನ್ನು ತರಿಸಿ ಪ್ರಕಟನ ವರ್ಷವಿರುವ ಅದರ ಮುಖಪೃಷ್ಠದ ಪಡಿಯಚ್ಚಿನೊಂದಿಗೆ ಪ್ರಸಿದ್ಧಿಸಿ ಮರಾಠೆ ಪ್ರತಿಪಾದನೆಯನ್ನು ಖಂಡಿಸಿರುವುದರಿಂದ (ಮಹಾರಾಷ್ಟ್ರ ಟೈಮ್ಸ್, ಮುಂಬಯಿ ೮-೭-೧೯೮೦) ತದ್ವಿಷಯಕ ಚರ್ಚೆಯಾದರೂ ಅನಗತ್ಯ.

ಆದರೂ ವಾದ ನಿಂತಿಲ್ಲ. ಆಗಾಗ ತಲೆ ಎತ್ತುತ್ತಲೇ ಇದೆ. ಮರಾಠಿಯಲ್ಲಿಯೇ ಕಿರ್ಲೋಸ್ಕರರಿಗಿಂತ ಮೊದಲು ಶಾಕುಂತಲದ ಅನುವಾದಗಳು ಪ್ರಕಟವಾಗಿದ್ದವು. ಇಷ್ಟವೆನಿಸಿದ್ದರೆ ಕಿರ್ಲೋಸ್ಕರ ಸುಲಭದಲ್ಲಿ ಅವುಗಳ ಪ್ರಯೋಜನ ಪಡೆಯಬಹುದಿತ್ತು; ಬದಲಾಗಿ ಕನ್ನಡದಲ್ಲಿರುವ ಚುರಮರಿ ಅನುವಾದವನ್ನು ಬಳಸಿಕೊಳ್ಳುವ ದ್ರಾವಿಡ ಪ್ರಾಣಾಯಾಮದ ಅಗತ್ಯವೇನಿದ್ದಿತು ಅವರಿಗೆ?- ಎಂಬ ಮಾತಾದರೂ ಇದೆ (ಲೋಕಸತ್ತಾ, ಮುಂಬಯಿ, ೩೧-೧೦-೧೯೭೨,ಡಾ. ಮಧುಕರ ಆಷ್ಟೀಕರ). ಈರ್ವರ ಕೃತಿಗಳನ್ನು ಮುಂದಿಟ್ಟುಕೊಂಡು ನೋಡಿದಾಗ ಮುದವೀಡರ ಮಾತುಗಳು ಕಿಂಚಿತ್ ಅತಿರಂಜಿತವಿದ್ದರೂ ತಥ್ಯವಿಲ್ಲದವು ಎನ್ನುವಂತಿಲ್ಲ. ಆದರೂ ಒಂದು ಮಾತು ನಿಶ್ಚಿತ. ಅದೆಂದರೆ ತಮ್ಮ ಶಾಕುಂತಲವನ್ನು ರಚಿಸುವಾಗ ಕನ್ನಡ ಬಲ್ಲ ಕಿರ್ಲೋಸ್ಕರ ಚುರಮರಿ ಕೃತಿಯನ್ನು ಅವಲೋಕಿಸಿದ್ದರೆಂಬುದು ಮತ್ತು ಅದರಿಂದ ಅಲ್ಪಸ್ವಲ್ಪ ಪ್ರಯೋಜನ ಪಡೆದಿರುವರೆಂಬುದು.

ಚುರಮರಿ ಅನುವಾದಕ್ಕಿಂತ ಒಂಬತ್ತು ವರ್ಷ ಮೊದಲೇ (೧೮೬೧) ಮರಾಠಿಯಲ್ಲಿ ಪರಶುರಾಮ ಗೋಡ್ಬೋಲೆ ಎನ್ನುವವರು ಕಾಳಿದಾಸನ ಶಾಕುಂತಲವನ್ನು ಅನುವಾದಿಸಿದ್ದರು. ಚುರಮರಿ ಅದರಲ್ಲಿಯ ಒಂದೆರಡು ಹಾಡುಗಳ ಪಲ್ಲವಿ ಮತ್ತು ಗದ್ಯಭಾಗಗಳನ್ನು ತಮ್ಮ ಅನುವಾದದಲ್ಲಿ ಅಳವಡಿಸಿಕೊಂಡಿದ್ದುಂಟು. ಗೋಡಬೋಲೆ ನಂತರ ೧೮೬೯-ರಲ್ಲಿ ಮುದ್ರಿತ ರೂಪದಲ್ಲಿ ಹೊರಬಂದ ಕೃಷ್ಣಶಾಸ್ತ್ರೀ ರಾಜವಾಡೆ ಅವರ ಅನುವಾದ ಎರಡನೇದು. ಅದು ೧೮೬೦ - ರಲ್ಲಿಯೇ ದಕ್ಷಿಣಾ ಪ್ರೈಜ್ ಕಮಿಟಿಯಿಂದ ಪುರಸ್ಕರಿಸಲ್ಪಟ್ಟಿತ್ತು. ಚುರಮರಿ ಅದನ್ನು ನೋಡಿದ್ದರೆಂಬುದಕ್ಕೆ ಅವರ ಅನುವಾದದಲ್ಲಿ ಆಂತರಿಕ ಆಧಾರಗಳಿಲ್ಲ. ಮಧ್ಯಂತರದಲ್ಲಿ ಗಣಪತ ಕೃಷ್ಣ ಗುಂಜೀಕರ(?)

೧. ಇದು ಸ್ವತಂತ್ರ ಪುಸ್ತಕ ರೂಪದಲ್ಲಿ ಬಂದಂತಿಲ್ಲ. ವಿನಾಯಕರಾವ ಗೋಪಾಳರಾವ ಘೋಸಾಳಕರ ಎನ್ನುವವರು ಇಂಗ್ಲಿಷ್ ಮುನ್ನುಡಿಯೊಂದಿಗೆ ಸಂಸ್ಕೃತದಲ್ಲಿರುವ ಮೂಲ ಶಾಕುಂತಲವನ್ನು ಹೊರತಂದಿರುವರು. ಭಾಷಾಂತರವೆಂದು ರಾಜವಾಡೆ ಅನುವಾದವನ್ನು ಅದರಲ್ಲಿ ಅಳವಡಿಸಿಕೊಂಡಿದೆ. ರಾಜವಾಡೆ ಅವರ ಪ್ರತ್ಯೇಕ ಮುನ್ನುಡಿಯೂ ಇದೆ - ಮರಾಠಿಯಲ್ಲಿ ಇನ್ನೊಂದು ಶಾಕುಂತಲದ ಮರಾಠಿ ಅನುವಾದವೊಂದು 'ವಿವಿಧ ಜ್ಞಾನ ವಿಸ್ತಾರ' ಮಾಸಪತ್ರಿಕೆಯಲ್ಲಿ ೧೮೬೭ರಿಂದ ೧೮೭೦ರವರೆಗೆ ಕ್ರಮಶಃ ಪ್ರಕಟವಾಯಿತು. ಮುಂದೆ ಪ್ರತ್ಯೇಕ ಪುಸ್ತಕರೂಪದಲ್ಲಿ ಪ್ರಕಟವಾದಂತಿದೆ. ಆ ಸಮಯದಲ್ಲಿ ಚುರಮರಿ ಮುಂಬಯಿಯಲ್ಲಿದ್ದರು. 'ವಿವಿಧ ಜ್ಞಾನ ವಿಸ್ತಾರ'ದ ವರ್ಗಣೀದಾರರೂ ಇದ್ದರು. ಅವರು ಒಂದೆರಡು ಲೇಖಗಳು ಪ್ರಕಟವಾಗಿವೆ ಅದರಲ್ಲಿ. ಗುಂಜೀಕರರದು ಸಂಗ್ರಹರೂಪಿ ಅನುವಾದ. ಅಲ್ಲಲ್ಲಿ ಶ್ಲೋಕ ಪದ್ಯಗಳಿದ್ದರೂ ಅವುಗಳ ಸಂಖ್ಯೆ ಇಲ್ಲವೇ ಇಲ್ಲೆನ್ನುವಷ್ಟು ಅಲ್ಪ. ಅದರಲ್ಲಿಯ ಒಂದೆರಡು ಮಾತುಗಳಿಗೆ ಸರಿಹೋಗುವ ಮಾತುಗಳು ಚುರಮರಿ ಅನುವಾದದಲ್ಲಿ ಬಂದಿವೆ. ಕಿರ್ಲೋಸ್ಕರ ಮೂರನ್ನೂ ನೋಡಿರುವದು ಶಕ್ಯ. ಬೇರೆ ಕೆಲವರ ಅನುವಾದಗಳಾದರೂ ಹೊರ ಬಂದಿವೆ. ಅವೆಲ್ಲ ಕಿರ್ಲೋಸ್ಕರರ ನಂತರದಲ್ಲಿ. ಪ್ರಕೃತದಲ್ಲಿ ಅನುಪಯುಕ್ತ.

ಕಿರ್ಲೋಸ್ಕರ ತಮ್ಮ ಕೃತಿಗಾಗಿ ಚುರಮುರಿಯವನ್ನು ಅವಲೋಕಿಸಿದ್ದರೆನ್ನಲು ಈರ್ವರ ಕೃತಿಗಳಲ್ಲಿ ಕಾಣಸಿಗುವ ಸಾಮ್ಯಾಂಶಗಳನ್ನು ಗಮನಿಸಲಾಗಿದೆ. ಮೂಲ ಅಂದರೆ ಸಂಸ್ಕೃತ ಮತ್ತು ಗೋಡಬೋಲೆ ರಾಜವಾಡೆ ಅನುವಾದಗಳಲ್ಲಿ ಅವುಗಳಿಗೆ ಸರಿಹೋಗುವ ಅಂಶಗಳೊಂದಿಗೆ ಮತ್ತು ಹಿಂದು - ಮುಂದಣ ಸಂದರ್ಭಗಳೊಂದಿಗೆ ಒರೆಹಚ್ಚಿ ನೋಡಿ ಕಿರ್ಲೋಸ್ಕರ ಚುರಮುರಿ ಈರ್ವರಿಗೇನೆ ಅನ್ವಯಿಸುವಂಥವನ್ನು ಮಾತ್ರ ಆಯ್ದುಕೊಂಡಿದೆ. ಸಂಗ್ರಹಾತ್ಮಕ ಸ್ವರೂಪದ್ದಿರುವದರಿಂದ ಗುಂಜೀಕರ ಅನುವಾದವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಆದರೂ ಅದರಲ್ಲಿ ಚುರಮುರಿ ಕಿರ್ಲೋಸ್ಕರ ಈರ್ವರ ಅನುವಾದಗಳಲ್ಲಿ ಕಾಣಸಿಗುವ ಒಂದು ಸಾಮ್ಯಾಂಶವಿದೆ. ಸಾಮ್ಯಾಂಶ ಮೂಲದಲ್ಲಿರುವ 'ಅಸ್ಮಾತ್ ಪರಂ ಬತ ಯಥಾಶ್ರುತಿ. ಸಂಭೃತಾನಿ (೬.೨೫), - ಪಿತೃತರ್ಪಣ ಪದ್ಯದ ಅರ್ಥಗಾರಿಕೆಗೆ ಸಂಬಂಧಿಸಿದೆ. ನಿಪುತ್ರಿಕನಿದ್ದ ದುಷ್ಯಂತ ದುಃಖದಿಂದ ಕಣ್ಣೀರು ಸುರಿಸುತ್ತ ಕೊಡುವ ತರ್ಪಣೋದಕದಿಂದ ಅಷ್ಟೇ ದುಃಖಿತರಿದ್ದ ಅವನ ಪಿತೃಗಳು ತಮ್ಮ ಕಣ್ಣುಗಳನ್ನು ಒರಸಿಕೊಂಡು ಉಳಿದಷ್ಟನ್ನು ಕುಡಿದು ಅಷ್ಟರಿಂದಲೇ ತೃಪ್ತರಾಗಬೇಕಾಯಿತೆಂಬುದು ಸರಿಯಾದ ಅರ್ಥ. (ತಾಶ್ರು ಶೇಷ ಮುದಕಂ ಪಿತರಃ ಪಿಬಂತು) ಗೋಡಬೋಲೆ ರಾಜವಾಡೆ ಮತ್ತು ಇತರರು ಹೀಗೆಯೆ ಅರ್ಥವಿಸಿರುವರು. ಗುಂಜೀಕರ, ಚುರಮುರಿ, ಕಿರ್ಲೋಸ್ಕರ ಮೇರೆಗೆ ದುಷ್ಯಂತನ ಕಣ್ಣೀರನ್ನೇ ಅವನ ಪಿತೃಗಳು ತರ್ಪಣೋದಕವೆಂದು ಕುಡಿಯಬೇಕಾಯಿತೆಂಬ ಅರ್ಥ ಬರುವಂತಿದೆ. ಇವರಿಗಿಂತ ಎಷ್ಟೋ ಪೂರ್ವಿಕರಿದ್ದ ಮೈಸೂರರಸು ಮುಮ್ಮಡಿ ಕೃಷ್ಣರಾಜರ (೧೭೯೪-೧೮೬೮) ಹೆಸರಿನ ಕಥಾರೂಪಿ ಶಾಕುಂತಲ ಟೀಕೆಯಲ್ಲಿ ಹೀಗೆಯೇ ಅರ್ಥವಿಸಿರುವರು (ಪು. ೧೫೧) ೧

ಸಾಮಾನ್ಯವಾಗಿ ಇಂಥ ಪರಿಸ್ಥಿತಿಯಲ್ಲಿ ಈ ಬಗೆಯ ವ್ಯತ್ಯಾಸಕ್ಕೆ ಅನುವಾದಕ್ಕಾಗಿ ಇಟ್ಟುಕೊಂಡ ಮೂಲಪ್ರತಿಯಲ್ಲಿ ಇದ್ದಿರಬಹುದಾದ ಪಾಠಭೇದ ಮುಖ್ಯ ಕಾರಣವಾಗಬಲ್ಲದು. ಏನಿದ್ದರೂ ಪ್ರಕೃತದಲ್ಲಿ ಹೆಚ್ಚು ಚಿಕಿತ್ಸೆ ಅನಗತ್ಯವೆಂದು ಬಗೆದು ಇಷ್ಟಕ್ಕೇನೆ ಕೈ ಬಿಟ್ಟಿದೆ. ಇವು ಕಿರ್ಲೋಸ್ಕರ ಚುರಮುರಿ ಅನುವಾದಗಳಲ್ಲಿ ಕಾಣಸಿಗುವ ಸಾಮ್ಯಾಂಶಗಳು -

೧. ಬೇಟೆಯಲ್ಲಿ ಮೃಗವನ್ನಟ್ಟಿ ಸಾಗಿದ ಕಥಾರೂಢ ದುಷ್ಯಂತ. ಬಾಣದಿಂದ ಅಳವಿನಲ್ಲಿ ಬಂದ ಮೃಗವನ್ನು ಹೊಡೆಯಬೇಕೆನ್ನುವಷ್ಟರಲ್ಲಿ ಕಣ್ವ ಶಿಷ್ಯರು ಅಡ್ಡಬಂದು :ರಾಜನ್, ಬೇಡ ಬೇಡ. ಅದು ಆಶ್ರಮ ಮೃಗ; ವಜ್ರದಂತಿರುವ ನಿನ್ನ ಬಾಣಗಳು ದುಷ್ಟದಂಡನೆಗಾಗಿ. ಮೃಗಗಳಂಥ ಕೋಮಲ ನಿರುಪದ್ರವಿ ಜೀವಿಗಳ ಸಂಹಾರಕ್ಕಾಗಿ ಅಲ್ಲ, ಎನ್ನುವರು ಕಾಳಿದಾಸ ಈ ಮಾತುಗಳನ್ನು ಸ್ವಪರಿಚಿತನಿರುವ 'ನ ಖಲು ನ ಖಲು ಬಾಣಃ ಸನ್ನಿಪಾತ್ಯೋಽಯ ಮಸ್ಮಿನ್, (೧.೧೦) ಮತ್ತು '...ಆರ್ತ ತ್ರಾಣಾಯ ವಃ ಶಸ್ತ್ರಂ ನ ಪ್ರಹರ್ತುಮನಾಗಸಿ. (೧.೧೧) ಮತ್ತು '.... ಆರ್ತ ತ್ರಾಣಾಯ ವಃ ಶಸ್ತ್ರಂ ನ ಪ್ರಹರ್ತುಮ ನಾಗಸಿ. (೧.೧೧) ಪದ್ಯಗಳಲ್ಲಿ ನಿರೂಪಿಸಿರುವನು. ಎರಡನ್ನೂ ಸೇರಿಸಿ ಚುರಮುರಿ ಮಾಲಿನೀ ವೃತ್ತದಲ್ಲಿರುವ 'ಅರಳುಗಳಲಿ ಕಿಚ್ಚಂ ಚುಚ್ಚಿದೋರ್ ಪಜ್ರನೋಲ್ಪ....' ಪದ್ಯದಲ್ಲಿ ಅನುವಾದಿಸಿದ್ದರೆ ಕಿರ್ಲೋಸ್ಕರ 'ಶಶಿಕಲ ಭೂಷಣ ಗುಣವಂತಾ'

ಎಂಬ ಹಾಡಿನಲ್ಲಿ ಪರಿವರ್ತಿಸಿರುವರು. ಗೋಡಬೋಲೆ ರಾಜವಾಡೆ ಮೂಲದಲ್ಲಿರುವಂತೆ ಎರಡು ಪ್ರತ್ಯೇಕ ಪದ್ಯಗಳಲ್ಲಿ ಅನುವಾದಿಸಿರುವರು.

೧. .... ಪಿತ್ಯ ತರ್ಪಣೇಂ ಉದಕ ವಾಹಿಲೇ, ತ್ಯಾನೇಂ ಅಶ್ರು ಧುವ್ರೋನಿ ಉರಲೇ, ತೇಂಚ ಪಿತೀ ಮತ್ಪಿತರ - ಗೋಡಬೋಲೆ?

...ಜಳ ತ್ಯಾಣೇ ತೇ ಅಶ್ರುಧುವ್ರೋ ನೀ ಪೀತೀ ಶೇಷ ಜಳಾಲಾ -ರಾಜವಾಡೆ
... ಮಾಝ್ಯಾ ನೇತ್ರಾಂತೂನ ಜೇ ಅಶ್ರೂಂಚೇ ಲೋಟ ವಾಹತಾಹೇ ತ,
ತ್ಯಾಂಚೇ ಸಾಂಚಲೇಲೇ ಉದಕ ಪೀತ ಅಸಂತೀಲ ಯಾತ ಸಂಶಯನಾಹೀ ಗುಂಜೀಕರ
...ಸಂತತಿಗಳಿಲ್ಲೆಂಬ ಕಷ್ಟದಿ ಸಂತತದೊಳಶ್ರುಗಳಸುರಿಸಲಿವನ್ನೋ
ಗುಟುಕಿಪರು, -ಚುರಮರಿ
...ಸಂತತಿ - ವಿರಹಿತ ಜೋ ಮೀ ತ್ಯಾಚ್ಯಾ, ಅಶ್ರುಜಲಾಚೇಂ ಕರೋತಕಿಂಪಾನೇಂ -ಕಿರ್ಲೋಸ್ಕರ
..ಪುತ್ರಾಭಾವದಿಂ ದುಃಖಿವಂ ಪೊಂದುತ್ತಿರುವ ಎನ್ನ ನಿರ್ಮಲವಾದ
ಕಣ್ಣೀರು ಪಾನಮಂ ಗೆಯ್ಯುವರೋ ತಿಳಿಯದು - ಮುಮ್ಮಡಿ ಕೃಷ್ಣರಾಜ
(ಚುರಮರಿ ಕಿರ್ಲೋಸ್ಕರ ಅನುವಾದ ಸಾಮ್ಯವನ್ನು ಗಮನಿಸುವಂತಿದೆ)

೨) ದುಷ್ಯಂತ ವಿದೂಷಕನೆದುರು ಶಕುಂತಲೆಯ ಸೌಂದರ್ಯವನ್ನು ಬಣ್ಣಿಸುತ್ತ : ಅವಳದು ಸಾಮಾನ್ಯ ಸೌಂದರ್ಯವಲ್ಲ. ಬ್ರಹ್ಮ ಮೊದಲು ಮನಸ್ಸಿನಲ್ಲಿ ವಿಶ್ವದ ಎಲ್ಲ ವಸ್ತುಗಳ ಸೌಂದರ್ಯಾಂಶಗಳನ್ನು ಸಂಗ್ರಹಿಸಿ ಒಂದು ಚಿತ್ರವನ್ನು ಕಲ್ಪಿಸಿಕೊಂಡು ನಂತರ ಅವಳನ್ನು ಸೃಷ್ಟಿಸಿದಂತಿದೆ (ಚಿತ್ತೇ ನಿವೇಶ್ಯ ಪರಿಕಲ್ಪಿತ ಸತ್ವಯೋಗಾ - ೨.೯) ಎಂದು ಬಣ್ಣಿಸಿರುವನು. ಕಾಳಿದಾಸನ ಈ ಪದ್ಯವನ್ನು ಚುರಮರಿ 'ಬಣ್ಣಿಸಲ್ಯಾಂಗಿನ್ನು ನುಡಿಯಲಿ ಲಾವಣ್ಯದ ಖಣಿಯನ್ನು' ಎಂದು ತೊಡಗುವ ಹಾಡಿನಲ್ಲಿ ಪರಿವರ್ತಿಸಿದ್ದರೆ ಕಿರ್ಲೋಸ್ಕರರದು 'ಕಾಮಿಯ ಪರಮ ರಮಣೀಯ ಸಖೀ ಚೇ ರೂಪ ಕಥೂತುಜಲಾ' ಎಂದು ತೊಡಗುತ್ತದೆ. ಎರಡರ ಈ ಪಲ್ಲವಿಗಳಲ್ಲಿನ ಅಭಿವ್ಯಕ್ತಿ ಸಾಮ್ರಾಜ್ಯವನ್ನು ಗಮನಿಸುವದು. ಗೋಡಬೋಲೆ ರಾಜವಾಡೆ ಅವರದು ಮೂಡಿದ ಸರಳಾನುವಾದ. ಗೋಡಬೋಲೆ ಅನುವಾದ 'ಚಿತ್ರಾಪರೀತನು ತಿಚೀರಚಲೀ ವಿಧೀನೇಂ' ಎಂದು ತೊಡಗುತ್ತಿದ್ದರೆ ರಾಜವಾಡೆ ಅವರದು 'ಚಿತ್ರೀ ಭಾಮಿನಿ ಜೀವಲೇ ರಚಯಿಲೀ ಕಿಂ ವಾ ಮನೇ ಕಲ್ಪಿಲೀ' ಎಂದು ತೊಡಗುತ್ತದೆ.

೩. ಶಕುಂತಲೆಗಾಗಿ ಮನಸೋತ ದುಷ್ಯಂತ ಆಶ್ರಮದಲ್ಲಿ ಇನ್ನೂ ಕೆಲವು ಸಮಯ ಇರಬಯಸುವನು. ಅದಕ್ಕಾಗಿ ಯೋಗ್ಯಕಾರಣವನ್ನು ಚಿಂತಿಸುತ್ತಿರುವಾಗ ಕಣ್ವ ಶಿಷ್ಯರು ಬಂದು ಹೆಚ್ಚುತ್ತಿದ್ದ ರಾಕ್ಷಸ ಬಾಧೆಯಿಂದ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುವರು. ದುಷ್ಯಂತನಿಗೂ ಅದೇ ಬೇಕಿತ್ತು. ಒಪ್ಪಿಕೊಳ್ಳುವನು. ಅಷ್ಟರಲ್ಲಿ ಕೂಡಲೆ ಬರಬೇಕೆಂದು ರಾಜಮಾತೆಯ ಆದೇಶ ಬರುತ್ತದೆ. ಆದೇಶವನ್ನು ತಂದ ದೂತನಿಗೆ ಕಾಳಿದಾಸ 'ಕರಭಕ' ಎಂದಿರುವನು. ಕರಭಕ ಎಂದರೆ ಒಂಟೆ, ಅಥವಾ ಒಂಟೆ ಸವಾರ. ಚುರಮರಿ ಒಂಟೆಸವಾರ ಎಂದೇ ಅನುವಾದಸಿರುವರು.

ಅವರೊಬ್ಬರನ್ನು ಬಿಟ್ಟು ಉಳಿದವರೆಲ್ಲರು (ಅರ್ವಾಚೀನರು ಸಹ) ಕರಭಿಕ ಎಂಬುದು ಅವನ ನಿಜನಾಮವೆಂದು ಬಗೆದು ಆ ರೀತಿ - ಮುಂದರಿದಿರುವರು. ಕಿರ್ಲೋಸ್ಕರ ಕರಭಕ ಅವನ ನಿಜನಾಮ, ವೃತ್ತಿಯಿಂದ ಒಂಟೆಸವಾರ ಎಂಬ ಅರ್ಥ ಬರುವಂತೆ 'ಕರಭಕ ಸಾಂಡಣೀಸ್ವಾರ' ಎಂದು ಅನುವಾದಿಸಿರುವರು. ಚುರಮುರಿ ಅನುವಾದವನ್ನು ಅವಲೋಕಿಸಿದ್ದರೆನ್ನಲು ಇದೊಂದು ನಿಶ್ಚಿತ ಸ್ವರೂಪದ ಉದಾಹರಣೆ ಎನ್ನುವಂತಿದೆ. ಗೋಡಬೋಲೆ 'ಕರಭಕ ಜಾಸೂದ' ಎಂದಿದ್ದರೆ ರಾಜವಾಡೆ ಅದು ಅವನ ನಿಜನಾಮವೆಂದು 'ಕರಭಕ' ಎಂದಷ್ಟೇ ಉಲ್ಲೇಖಿಸಿದ್ದಾರೆ.

೪. ಶಕುಂತಲೆ ಅತೀವ ಕಾಮ ವಿಹ್ವಲಳಾಗಿದ್ದಾಳೆ. ಸಖಿಯರು ನಿಜಸ್ಥಿತಿಯನ್ನು ತಿಳಿಸಲು ಆಗ್ರಹಪಡಿಸುತ್ತಿದ್ದಾರೆ. ಮರೆಯಲ್ಲಿ ನಿಂತು ಕೇಳುತ್ತಿದ್ದ ದುಷ್ಯಂತನಿಗೆ ಅವಳೇನು ಹೇಳುವಳೋ, ಯಾರ ಹೆಸರನ್ನು ತೆಗೆದುಕೊಳ್ಳುವಳೋ ಎಂಬ ಕಾತರ. ಕಾಳಿದಾಸ ಅವನ ಮನಸ್ಥಿತಿಯನ್ನು 'ಸ್ಪಷ್ಟಾಜನೇನ ಸಮದುಃಖ ಸುಖೇನ ಬಾಲಾ - (3.6) ಪದ್ಯದಲ್ಲಿ ಬಣ್ಣಿಸಿರುವನು. ಚುರಮುರಿ ಅದನ್ನು 'ಏನೆಂದು ದೇವಿ ನುಡಿವಳಯ್ಯಾ| ಕೇಳುವಾನಂದವಲ್ಲದಂಜುವೆನಯ್ಯಾ' ಪಲ್ಲವಿಯಿಂದ ತೊಡಗುವ ಹಾಡಿನಲ್ಲಿ ಅನುವಾದಿಸಿದ್ದರೆ ಕಿರ್ಲೋಸ್ಕರ ಸಮ 'ಆತಾ ಶಶಿಮುಖೀಚಾ ವಿಕಥನಿ ಮಜ ಭಯ ವಾಟತೇ' ಪಲ್ಲವಿಯಿಂದ ತೊಡಗುವದು. ಮುಂದರಿದು ಚುರಮುರಿ' ಬಾಲುವರಿವರು ಬಳಿಯು ನಿಂತು ಜೀವದೋಲು ತಿಳಿವ ಗೆಳತಿಯರಿಂತು | ಪೇಳದಿರಳು ಮನಸಿನ ಮಾತು.... ಕಣ್ಣಿನಿಂದಲೆ ಮಮತೆಯು ತೋರಿ | ಭಾವವನ್ನೆ ಕಾಣುತಿಹಳೋ ಒಯ್ಯಾರಿ' ಎಂದಿದ್ದರೆ ಕಿರ್ಲೋಸ್ಕರ 'ಪ್ರಶ್ನ ಕರೀತ ಸಖ್ಯಾ ಇಸಪರಿಹೀನ ಪದತಿ. ಹೃದ್ಗತ ಚಿಂತಾ| ನೇತ್ರಾಗರಗರ ಫಿರವುನಿಲೋಭೇಂ ಪಾಹಸತೇ ಗುಣವಂತಾ ||' ಎಂದು ಹಾಡನ್ನು ಮುಗಿಸಿರುವರು. ಮಾತುಗಳು ಕಾಳಿದಾಸನವೇ ಇದ್ದರೂ ಈರ್ವರ ಅನುವಾದಗಳಲ್ಲಿ ಅವು ಅಭಿವ್ಯಕ್ತಿ ಪಡೆದ ಬಗೆಯನ್ನು ಗಮನಿಸುವದು. ಚುರಮುರಿ ತಮ್ಮದೇ ಆದ ಹೆಚ್ಚಿಗೆ ಒಂದು ನುಡಿಯನ್ನು ಸೇರಿಸಿರುವರು. ಅದರ ವೈಶಿಷ್ಟ್ಯವನ್ನು ಈ ಮೊದಲು ಬಂದಿರುವ ಅವರ ಕೃತಿಯ ಮೌಲ್ಯಾಂಕನ ಆಸಕ್ತಿಯಲ್ಲಿ ವಿವರಿಸಿದೆ. ಗೋಡಬೋಲೆ ರಾಜವಾಡೆ ಅನುವಾದಗಳು ಹೆಚ್ಚಾಗಿ ಮೂಲವನ್ನು ಅನುಸರಿಸಿವೆ.

೫. ಪ್ರಿಯಂವದೆ, ದುಷ್ಯಂತನಿಗೊಂದು ಶಕುಂತಲೆ ಪ್ರೇಮ ಪತ್ರ ಬರೆದರೆ ದೇವಪ್ರಸಾದವೆಂಬ ನಿಮಿತ್ತದಿಂದ (ಮೂಲ :ದೇವಪ್ರಸಾದ ವ್ಯಪದೇಶೇನ) ಹೂವುಗಳಲ್ಲಿ ಮುಚ್ಚಿ ಅದನ್ನು ದುಷ್ಯಂತನಿಗೆ ತಲ್ಪಿಸುವೆನೆಂದು ಹೇಳುವಳು. ಭಗವದರ್ಪಿತ ಪುಷ್ಪ, ತುಲಸಿ ಇತ್ಯಾದಿಗಳಿಗೆ 'ನಿರ್ಮಾಲ್ಯ' ಎಂಬ ವಿಶಿಷ್ಟ ಶಬ್ದವಿದೆ. ಅನುವಾದದಲ್ಲಿ ಚುರಮುರಿ ಅದನ್ನು ಬಳಸಿರುವರು. ಕಿರ್ಲೋಸ್ಕರರೂ ಬಳಸಿರುವರು. ಗೋಡಬೋಲೆ ರಾಜವಾಡೆ 'ದೇವಪ್ರಸಾದ', 'ದೇವಾಚ್ಯಾ ಪ್ರಸಾದ' ಎಂದಿರುವರು.

೬. ಶಕುಂತಲೆಯ ಪತ್ರ : 'ತವ ಣ ಜಾಣೇ ಹೃದಯಂ ಮಮ ಪುಣ ಕಾಮೋ ದಿವಾಪಿ ರತ್ತಿಂ ಪಿ.... ತವತಿ. (೩-೧೪) - ನಿನ್ನ ಮನಸ್ಸೇಂತೋ ನಾನರಿಯೆ; ನಿನ್ನನಿಷ್ಟಾದರೂ ಮನ್ಮಥ ಹಗಲು ರಾತ್ರಿ ಪೀಡಿಸುತ್ತಾನೆ, ಇತ್ಯಾದಿ. ಚುರಮುರಿ ಇದನ್ನು 'ನಾ ಬಿಡಿಸೊ ಮೋಹನ್ನ| ಅಂಗಜ

ತಾಪದಿಂದೆನ್ನಾ' ಪಲ್ಲವಿ ಇರುವ ಹಾಡಿನಲ್ಲಿ ಪರಿವರ್ತಿಸಿರುವರು. ಗೋಡಬೋಲೆ ರಾಜವಾಡೆ ಯಥಾಮೂಲ ಅನುವಾದಿಸಿರುವರು. ಕಿರ್ಲೋಸ್ಕರರದು ಹಾಡು. ಮೂಲದ ಅನುವಾದವಿದ್ದರೂ ಕೊನೆಯ ಪಾದವನ್ನು 'ಭೇಟ ದೇಉನಿಯಾಂ ಕರೋ ತಾಪಶಾಂತೀ' ಮಾತಿನಿಂದ ಮುಗಿಸಿರುವರು. ಇದಕ್ಕೂ ಚುರಮರಿ ಪಲ್ಲವಿಗೂ ಇರುವ ಸಾಮೀಪ್ಯವನ್ನು ಪರಾಂಬರಿಸಬೇಕು. ಈರ್ವರೂ ಬಳಸಿದ ಈ ಮಾತು ಹೆಚ್ಚಿನದು. ಮೂಲದಲ್ಲಿ ಇಲ್ಲ.

೭. ಶಕುಂತಲೆ ದುಷ್ಯಂತರಿಗೆ ಏಕಾಂತ ಕಲ್ಪಿಸಿಕೊಡಲು ಸಖಿಯರು ಚಿಗರೆ ಮರಿಯನ್ನು ಅದರ ತಾಯಿಯ ಬಳಿಗೆ ಕಳಿಸುವ ನೆಪದಿಂದ ಅಲ್ಲಿಂದ ಜಾರಿಕೊಳ್ಳುವರು. ಶಕುಂತಲೆಗೆ ಗಾಬರಿ. ದುಷ್ಯಂತ : ಗಾಬರಿಗೆ ಕಾರಣವಿಲ್ಲ; ಸೇವೆಗಾಗಿ ನಾನಿದ್ದೇನೆ ಎಂಬ ಮಾತಿನೊಂದಿಗೆ 'ಕಿಂ ಶೀತಲೈಃ ಕ್ಲಮವಿನೋದಿ ಭಿರಾರ್ದ್ರವಾತಾನ್ - (೩.೧೯) - ತೊಡೆಯ ಮೇಲೆ ಒರಗಿಸಿಕೊಂಡು ಗಾಳಿ ಹಾಕುತ್ತೇನೆ, ಕೋಮಲ ಪಾದಗಳನ್ನು ಒತ್ತುತ್ತೇನೆ, ಇತ್ಯಾದಿ ಮಾತುಗಳಿರುವ ಪದ್ಯ ಹೇಳುವನು. ಚುರಮರಿ ಕಿರ್ಲೋಸ್ಕರ ಈರ್ವರೂ ಇದನ್ನು ಹಾಡಿನಲ್ಲಿ ಪರಿವರ್ತಿಸುವರು. ಚುರಮರಿ ಹಾಡು 'ಬೆದರಬ್ಯಾಡೆ ಮದಿರ ಲೋಚನೇ ನಾ ಬಳಿಯಲಿರಲು' ಪಲ್ಲವಿಯಿಂದ ತೊಡಗುತ್ತಿದ್ದರೆ ಕಿರ್ಲೋಸ್ಕರರದು 'ಭಿಉಂ ನಕೋ ಜಿವಲಗ ಸುಂದರಿ ಕಾಂಹೀಂ ದಾಸಜವಳ ಅಸೇ ಹಾ' - ಪಲ್ಲವಿಯಿಂದ ತೊಡಗುವದು. ಈರ್ವರ ಪಲ್ಲವಿಗಳಲ್ಲಿ ನಿಕಟ ಸಾಮೀಪ್ಯವನ್ನು ಗಮನಿಸುವದು. ಗೋಡಬೋಲೆ ರಾಜವಾಡೆ ಅನುವಾದಗಳು ಹೀಗಿಲ್ಲ.

೮. ಸ್ವಲ್ಪ ಸಮಯಾನಂತರ ದುಷ್ಯಂತ ಶಕುಂತಲೆಯನ್ನು ಚುಂಬಿಸಲೆತ್ನಿಸುವನು. ಲಜ್ಜೆಯಿಂದ ಆಕೆ ಮುಖದ ಮೇಲೆ ಬೆರಳಿಟ್ಟು ಬೇಡ ಬೇಡನ್ನುತ್ತ ತಪ್ಪಿಸಿಕೊಳ್ಳುವಳು. ಅಷ್ಟರಲ್ಲಿ ಗೌತಮಿ ಬರುವ ಶಬ್ದವಾಗುವದು. ಗೌತಮಿ ಶಕುಂತಲೆ - ಈರ್ವರೂ ನಿಷ್ಕ್ರಮಿಸಿದ ಬಳಿಕ ಮರೆಯಲ್ಲಿದ್ದ ದುಷ್ಯಂತ ಹೊರಬಂದು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲೆಂದು ಪರಿತಪಿಸುತ್ತ, 'ಮುಹುರಂಗುಲಿ ಸಂವೃತಾಧರೋಷ್ಠಂ....., (೩.೨೩) ಪದ್ಯ ಹೇಳುವನು. ಗೋಡಬೋಲೆ ರಾಜವಾಡೆ ಅವರದು ಪದ್ಯದ ಸರಳಾನುವಾದ. ಚುರಮರಿ ಕಿರ್ಲೋಸ್ಕರ ಹಾಡಿನಲ್ಲಿ ಪರಿವರ್ತಿಸಿರುವರು. ಚುರಮರಿಯ 'ಚುಂಬಿಸಲಿಲ್ಲ ಇಂಥ ವ್ಯಾಳ್ಯದೊಳು', 'ಕೈಯೊಳು ನಾ ಚೆಲುವ ಮುಖ ಹಿಡಿದಿರಲು| ಅರೆಗೆಲಸ ಮಾಡಿದೆ ಪೂರಾ ನಾ ಮರುಳು', 'ತಿಳಿಯೆ ನೀ ವ್ಯಾಳ್ಯ ದೊಳೆಲ್ಲಿ ಪೋದಿತೊ ಮತಿ' ಮಾತುಗಳ ಯೋಜನೆಯನ್ನೂ ಕಿರ್ಲೋಸ್ಕರರ 'ತೇಂ ಮುಖವರ ಕೇಲೇಂ ಪರೀ ನಾಹಿಂ ಚುಂಬಿಲೇಂ', 'ಐಸರಂಗಿಂ ವ್ಯಂಗ ಜಾಹಲೇಂ', 'ಕಾಯಮಲಾಭೂಲ ಪಡಲಿ, ಭಾನ ಹರಪಲೇಂ' ಮಾತುಗಳನ್ನು ಪರಾಂಬರಿಸಬೇಕು. ಮೂಲದಲ್ಲಿ ಇವಿಲ್ಲ.

೯. ಕಂಚುಕಿ ಪಶ್ಚಾತ್ತಾಪದಗ್ಧ ದುಷ್ಯಂತನನ್ನು : ಉತ್ಸಾಹಜನಕ ವಿಷಯಗಳಲ್ಲಿ ಅವನಿಗೆ ಜುಗುಪ್ಸೆ ಹುಟ್ಟಿದೆ; ರಾತ್ರಿ ಕಣ್ಣಿಗೆ ಕಣ್ಣು ಹತ್ತುವದಿಲ್ಲ; ಅಂತಃಪುರದಲ್ಲಿ ಒಬ್ಬರನ್ನು ಮತ್ತೊಬ್ಬಳ ಹೆಸರಿನಿಂದ ಕರೆಯುವನು; ಪ್ರಮಾದವಾಯಿತೆಂದು ನಾಚಿಕೊಂಡು ಗೊಂದಲಕ್ಕೀಡಾಗುವನು, ಎಂದು ಬಣ್ಣಿಸುವನು (ಕಮ್ಯಂದ್ವೇಷ್ಟಿ, ಇತ್ಯಾದಿ - ೬.೫).ರಾಜಸ್ತ್ರೀಯರನ್ನು ಹೆಸರಿಸುವಾಗ

ದುಷ್ಯಂತನಿಂದ ಆಗುತ್ತಿದ್ದ ಪ್ರಮಾದಕ್ಕೆ ಕಾಳಿದಾಸ 'ಗೋತ್ರಸ್ಖಲನ (ಗೋತ್ರೇಷು ಸ್ಖಲಿತ)' ಶಬ್ದವನ್ನು ಪ್ರಯೋಗಿಸಿರುವನು. ಇದಕ್ಕೆ ದೇಶೀ ಭಾಷೆಗಳಲ್ಲಿ ಸರಿಯಾದ ಪ್ರತಿಶಬ್ದವಿದ್ದಂತಿಲ್ಲ. ಚುರಮುರಿ ಕಿರ್ಲೋಸ್ಕರ ಈರ್ವರೂ ಕಾಳಿದಾಸನ ಈ ಪದ್ಯವನ್ನು ಹಾಡಿನಲ್ಲಿ ಪರಿವರ್ತಿಸಿರುವರು. 'ಗೋತ್ರಸ್ಖಲನ' - ಸಂದರ್ಭದಲ್ಲಿ ತಪ್ಪಿ ಉಚ್ಚರಿಸುತ್ತಿದ್ದ ಹೆಸರನ್ನು ಶಕುಂತಲೆಗೆ ಅನ್ವಯಿಸಿ ಚುರಮುರಿ' ಲಲನೆಯರನ್ನು ಶಕುಂತಲೆಯೆಂದು ಕರೆವ, ಮೊಗಮುಚ್ಚಿ ಅಳುವ' ಎಂದು ಮುಂತಾಗಿ ಬಣ್ಣಿಸಿದ್ದರೆ, ಕಿರ್ಲೋಸ್ಕರ 'ಮುನಿಕನ್ಯಾ (ಶಕುಂತಲೆ) ರಾಣಿಸಮ್ಮುಣತೀ... ನಚ ಖಿಳಲೇ ಅಸ್ರೂತ್ಯಾಚೇ' ಎಂದು ಬಣ್ಣಿಸಿರುವರು. ಗೋಡಬೋಲೆ ರಾಜವಾಡೆ ಅನುವಾದಗಳು ಇಂತಿಲ್ಲ. ಗೋತ್ರ ಸ್ಖಲನ ಶಬ್ದವನ್ನು ಈರ್ವರೂ ಆದಕ್ಕಿರುವ 'ನಾಮೋಚ್ಚಾರಣೆಯಲ್ಲಿ ಪ್ರಮಾದ' - ಸಾಮಾನ್ಯ ಅರ್ಥದಲ್ಲಿ ಬಳಸಿರುವರು. 'ಮೊಗಮುಚ್ಚಿ ಅಳುವ'(ಚುರಮುರಿ), 'ನ ಚ ಖಿಶಲೆ ಅಶ್ರೂ ತ್ಯಾಚೇ' (ಕಿರ್ಲೋಸ್ಕರ) - ಮಾತುಗಳು ಮೂಲದಲ್ಲಿಯೂ ಇಲ್ಲ; ಗೋಡಬೋಲೆ ರಾಜವಾಡೆ ಅನುವಾದಗಳಲ್ಲೂ ಇಲ್ಲ.

೧೦. ದೈತ್ಯ ಸಂಹಾರದಲ್ಲಿ ಇಂದ್ರನಿಗೆ ಸಹಾಯ ಸಲ್ಲಿಸಿ ದುಷ್ಯಂತ ಈಗ ಮಾರೀಚಾಶ್ರಮಕ್ಕೆ ಬಂದಿದ್ದಾನೆ. ಅಲ್ಲಿ ಅವನ ಬಲಭುಜ ಹಾರಿ ಶುಭಶಕುನವಾಗುವದು. ಶಕುಂತಲೆಯ ವಿಷಯದಲ್ಲಿ ಪೂರ್ಣ ನಿರಾಶನಾಗಿದ್ದ ಆತ : ನನ್ನ ಮನೋರಥ ಪೂರ್ಣವಾದೀತೆಂಬ ಆಶೆ ಎಳ್ಳಷ್ಟು ಕೂಡ ಉಳಿದಿಲ್ಲ. ಆದ್ದರಿಂದ ಎಲೈ, ಬಾಹುವೇ ವಿನಾಕಾರಣ ಅದೇಕೆ ಸ್ಫುರಿಸುತ್ತಿರುವಿ? ಭಾಗ್ಯ ಬಂದಾಗ ಅದರ ಅವಹೇಲನ ಮಾಡಿದರೆ ಕ್ವಚಿತ್ತಾಗಿ ಅದು ಮತ್ತೆ ಬರುವದು, ಎಂದುಕೊಳ್ಳುವನು (ಮನೋರಥಾಯ ನಾಶಂಸೇ, ಕಿಂ ಬಾಹೋ ಸ್ಪಂದಸೇ ವೃಥಾ.... ೭. ೧೩). ಚುರಮುರಿ ಇದನ್ನು :ಸ್ಫುರಣ ವ್ಯರ್ಥಕೇಳ್ ಭುಜವೇ ನಿನ್ನಯ|...... ಮರಗು ಮಾತ್ರ. ಮಿಕ್ಕಿಹುದು ಜನ್ಮದೊಳ್, ಎಂದು ಅನುವಾದಿಸಿರುವರು. ಎರಡನೆಯದು ಹೊಸ ಮಾತು. ಮೂಲದಲ್ಲಿಲ್ಲ. ಇದು ಕಿರ್ಲೋಸ್ಕರರ ಅನುವಾದ.... ಮಗ ಕಾ ಸ್ಫುರತೋ ಬಾಹು|... ಉರಲೀಯ ಚಿಟಿ ಸಾಹೂ. ಈರ್ವರ ಅನುವಾದಗಳ ಹೊಂದಾಣಿಕೆಯನ್ನು ಗಮನಿಸುವದು. ಕಾಳಿದಾಸ 'ಸ್ಪಂದಸೇ' ಶಬ್ದವನ್ನು ಪ್ರಯೋಗಿಸಿದ್ದರೆ ಈರ್ವರೂ 'ಸ್ಫುರಣ' ಶಬ್ದವನ್ನು ಬಳಸಿರುವರು. ರಾಜವಾಡೆ ಅವರದು ಯಥಾಮೂಲ ಅನುವಾದ. ಪರಿಶೀಲನೆಗೆ ದೊರೆತ ಗೋಡಬೋಲೆ ಪ್ರತಿಯಲ್ಲಿ ಆರೇ ಅಂಕಗಳಿದ್ದುದರಿಂದ ಅವರ ಅನುವಾದದ ಸ್ವರೂಪ ತಿಳಿಯದು.

ಉಪರೋಕ್ತ ಉದಾಹರಣೆಗಳಿಂದ ಕಿರ್ಲೋಸ್ಕರ ಚುರಮುರಿಯವರ ಅನುವಾದವನ್ನು ಚೆನ್ನಾಗಿ ಪರಿಶೀಲಿಸಿದ್ದರಿಷ್ಟೇ ಅಲ್ಲ; ಅದರಿಂದ ಅವರು ಅಲ್ಪ ಸ್ವಲ್ಪ ಪ್ರಯೋಜನ ಕೂಡ ಪಡೆದಿರುವದು ಕಂಡುಬರದಿರದು. ಜೊತೆಗೆ ಕಿಂಚಿತ್ ಅತಿಶಯೋಕ್ತಿ ರಂಜಿತವಿದ್ದರೂ ಮಡುವೀಡರ ಮಾತು ತಪ್ಪವಿಲ್ಲದಿಲ್ಲೆಂಬುದು ವ್ಯಕ್ತವಾಗದಿರದು.

ಹಾಗೆಂದು ಈರ್ವರ ನೈಸರ್ಗಿಕ ಪ್ರತಿಭೆಗಳಾಗಲಿ, ತಮ್ಮ ತಮ್ಮ ಭಾಷಾಬಾಂಧವರಿಗೆ ಹಿಡಿಸುವಂಥ ರೀತಿಯಲ್ಲಿ ಅನಾದಿ ಕಾಲದಿಂದ ಬೆಳೆದು ಬಂದ ತಮ್ಮ ಅಂದರೆ ಭಾರತೀಯ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕ್ಷೇತ್ರದಲ್ಲಿ ಮೆರೆಯುತ್ತಿರುವ ಅಂತಃಸ್ಫೂರ್ತಿಯು ವ್ಯಾಪಿಸಿದ

ಕಾಳಿದಾಸನ ಶಾಕುಂತಲದ ಪರಿಚಯ ಮಾಡಿಕೊಡುವಲ್ಲಿ ಅವರು ತೋರ್ಪಡಿಸಿದ ಸಾಹಸ ಕೌಶಲ್ಯಗಳಿಗಾಗಲಿ ಎಳ್ಳಷ್ಟು ಕೂಡ ಕುಂದೊದಗದು. ಚುರಮರಿ ಅನುವಾದದಿಂದ ಕಿರ್ಲೋಸ್ಕರ ಅಲ್ಪಸ್ವಲ್ಪ ಪ್ರಯೋಜನ ಪಡೆದಿದ್ದರೆ ಚುರಮರಿ ಪರಶುರಾಮಪಂತ ಗೋಡಬೋಲೆ ಗುಂಜೀಕರ ಅವರಿಂದ ಆ ಬಗೆಯ ಪ್ರಯೋಜನ ಪಡೆದಿರುವರು. ಸ್ವರೂಪದಲ್ಲಿ ಅವರು ಪಡೆದ ಪ್ರಯೋಜನ ವಾಙ್ಮಯ ಚೌರ್ಯದ ಅಳವಿನಲ್ಲಿ ಬರಲಾರದು. ಕಾಳಿದಾಸನ ರಘುವಂಶದಲ್ಲಿಯ ಇಂದುಮತಿ ಸ್ವಯಂವರದ ಕೆಲವು ಪದ್ಯಗಳು ಸಾಮ್ಯಾಂಶಗಳು ಮಾಘನ ಶಿಶುಪಾಲವಧೆಯಲ್ಲಿ ದೊರೆಯುತ್ತವೆಂದು ಅದನ್ನೇ ದೊಡ್ಡದಾಗಿಸಿ ಮಾಘನನ್ನು, ಕನ್ನಡದಲ್ಲಿ ಪೊನ್ನನನ್ನು, ಲಘುವಾಗಿ ಗಣಿಸುವದು ತಪ್ಪಾದೀತು. ಸರ್ವಶ್ರೇಷ್ಠನೆಂದು ಗಣಿಸಲ್ಪಟ್ಟ ಕಾಳಿದಾಸ ಕೂಡ ಈ ಬಗೆಯ ಹರಣ - ಸ್ವೀಕರಣ ಪ್ರವೃತ್ತಿಯಿಂದ ಮುಕ್ತನಿಲ್ಲ. ಅವನಲ್ಲಿ ಸಹ ಅವನ ಪೂರ್ವಿಕನಿದ್ದ ಅಶ್ವಘೋಷನ ಪ್ರಭಾವವನ್ನು ಗುರುತಿಸಿದ್ದಾರೆ ವಿದ್ವಾಂಸರು. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ವಾಙ್ಮಯ ಚೌರ್ಯದ ವಿಷಯವು ಆನಂದ ವರ್ಧನನ (ಕ್ರಿ.ಶ. ೯ ಶ.) ಸಮಯದಿಂದ ಚರ್ಚಿಸಲ್ಪಟ್ಟಿದೆ. ಅದನ್ನೂ ಪಾಶ್ಚಿಮಾತ್ಯರಲ್ಲಿ ನಡೆದು ಬಂದ ತತ್ಸಮ ಚರ್ಚೆಯನ್ನೂ ಅಭ್ಯಸಿಸಿ ಯಾವುದೊಂದು ನಿರ್ಣಯಕ್ಕೆ ಬರಬಹುದಲ್ಲದೆ ಕೇವಲ ಕೆಲವು ಯಥಾವತ್ ಅಥವಾ ಸಾಮ್ಯಾಂಶಗಳಿಗೆ ಗುರುತು ಹಾಕಿ ವಾಙ್ಮಯ ಚೌರ್ಯದ ಮುದ್ರೆ ಹಾಕುವದು ಸರ್ವಸ್ವೀ ಅನ್ಯಾಯವಾಗುವದು. ಚುರಮರಿ ಗೋಡಬೋಲೆ ಗುಂಜೀಕರ, ಕಿರ್ಲೋಸ್ಕರ ಚುರಮರಿ ವಿಷಯವಾದರೂ ಇದರಿಂದ ಹೊರತಾಗಿಲ್ಲ. ಕಿರ್ಲೋಸ್ಕರ ಗೋಡಬೋಲೆ, ಗುಂಜೀಕರ, ರಾಜವಾಡೆ ಅನುವಾದಗಳಲ್ಲಿ ಸಾಮ್ಯಾಂಶಗಳ ಪರಿಶೀಲನ ಪ್ರಕೃತದಲ್ಲಿ ಅನಗತ್ಯವಿದ್ದುದರಿಂದ ಆ ದೃಷ್ಟಿಯಿಂದ ಅವನ್ನು ನೋಡಿಲ್ಲ.

ಸ್ವತಂತ್ರವೇ ಇರಲಿ ಅನುಕೃತಿಯೇ ಇರಲಿ ಯಾವುದೊಂದು ಕೃತಿ ರಚನೆಗೆ ತೊಡಗುವ ಮುನ್ನ ತತ್ಸಮ ಕೃತಿ ಇದ್ದರೆ ಅದನ್ನು ನೋಡಬೇಕೆಂಬ ಕುತೂಹಲ ಮಾನವ ಸಹಜ ಪ್ರವೃತ್ತಿ. ಕನ್ನಡ ಬಲ್ಲ ಕಿರ್ಲೋಸ್ಕರರಿಗೆ ನೆರೆಯ ಧಾರವಾಡದವರೇ ಇದ್ದ (ಮತ್ತು ಹತ್ತು ವರ್ಷ ಮೊದಲೇ ಪ್ರಕಟವಾಗಿದ್ದ) ಚುರಮರಿ ಕೃತಿ ಅಂಥದೊಂದು ಮಾದರಿಯಾಗಿ ಪರಿಣಮಿಸಿದ್ದರೆ ಅದರಲ್ಲಿ ತಪ್ಪೇನಿದೆ? ಮರಾಠಿಯಲ್ಲಂತೂ ಶಾಕುಂತಲದ ಆ ಬಗೆಯ ಅನುವಾದಗಳಿದ್ದಿಲ್ಲ. ಚುರಮರಿ ಕಿರ್ಲೋಸ್ಕರ ಕೃತಿಗಳ ವಿಷಯದಲ್ಲಿ: ಚುರಮರಿ ಅನುವಾದ 'ನೂತನ' ಬಗೆಯದು, ಎಂದಿರುವರು ಶ್ರೀರಂಗ (ಆದ್ಯ) - ಭಾ. ರಂ. ಭೂ. ಪೃ. ೧೩೮. ಮುಂದರಿದು ಅವರ : ಕಿರ್ಲೋಸ್ಕರ ಈ ಸುಧಾರಣೆಯನ್ನು ಗಮನಿಸಿದರು. ತಮ್ಮ ಶಾಕುಂತಲದಲ್ಲಿ ಸೂಕ್ತವಾದ ಸ್ಥಳಗಳಲ್ಲಿ ಸರಳವಾದ ಮರಾಠಿಯಲ್ಲಿ ಆ ಬಗೆಯ (ಚುರಮರಿ ಬಗೆಯ) ಹಾಡುಗಳನ್ನು ಸೇರಿಸಿದರು. ಕೊನೆಗೆ ಬಂದದ್ದು ಗದ್ಯ ಮತ್ತು ಸಂಗೀತಗಳ ಮಧುರ ಮಿಶ್ರಣ. ನಾಟಕೀಯ ನಿರೂಪಣೆಯ ಬಿಗುವನ್ನು ಗದ್ಯ ಉಳಿಸಿತು. ಪ್ರೇಕ್ಷಕರಿಗೆ ಹಾಡುಗಳು ಸಂತೋಷ ರಂಜನೆಗಳನ್ನು ಒದಗಿಸಿದವು. ಈ ಮಾದರಿಯ ಒಂದು ಸಂಪ್ರದಾಯವೇ ಪ್ರಾರಂಭವಾಯಿತು. ಎಂದಿರುವರು. ಇದು ನ್ಯಾಯಸಮ್ಮತ ಅಭಿಪ್ರಾಯ ಎನ್ನಬೇಕು.

ಚುರಮುರಿ ಕೃತಿ ಈ ಬಗೆಯ ನಾಟಕಗಳಿಗೆ, ಕನಿಷ್ಠ ಕರ್ನಾಟಕ ಮಹಾರಾಷ್ಟ್ರಗಳ ಮಟ್ಟಿಗೆ, ಮಾತೃಸ್ಥಾನದಲ್ಲಿದ್ದರೂ ಅದು ರಂಗಭೂಮಿಗೆ ಬರಲು ಮುಂದೆ ೨೯ ವರ್ಷಗಳು ಗತಿಸಬೇಕಾಯಿತು. ಅದಕ್ಕೆ ಬೇರೆ ಕಾರಣಗಳಿವೆ (ನೋಡಿ : ಮುದ್ರಣ ಪ್ರಕರಣ). ಮಧ್ಯಂತರದಲ್ಲಿ ರಂಗಭೂಮಿಯನ್ನು ಕಂಡ ಕಿರ್ಲೋಸ್ಕರ ಕೃತಿ ಒಂದು ಸಂಪ್ರದಾಯವನ್ನೇ ಪ್ರಾರಂಭಿಸಿತು. ಅದು ಅವರ ಭಾಗ್ಯ.

೧. ಮರಾಠಿ ಸಂಗೀತ ನಾಟಕಗಳ ಆದ್ಯತನ ವಿಷಯದಲ್ಲಿ ವಾದವಿದೆ. ಕೆಲವರು ಕಿರ್ಲೋಸ್ಕರರಿಗೆ ಆ ಮಾನವನ್ನು ಕೊಟ್ಟಿದ್ದರೆ, ಬೇರೆ ಕೆಲವರು ಮುಂಬಯಿಯ ಸೋಕರ ಬಾಪೂಜಿ ತ್ರಿಲೋಕೆಕರ (೧೮೩೬-೧೯೦೮) ಎನ್ನುವವರಿಗೆ ಕೊಟ್ಟಿರುವರು. ತ್ರಿಲೋಕಕರ ಮುಂಬಯಿ ಹೈಕೋರ್ಟಿನಲ್ಲಿ ಮರಾಠಿ-ಗುಜರಾತಿ - ಭಾಷಾಂತರಕಾರರೆಂದು ಕೆಲಸ ಮಾಡುತ್ತಿದ್ದರು. ಮರಾಠಿ ಗುಜರಾತಿ ಭಾಷೆಗಳಲ್ಲಿ ಒಟ್ಟು ೧೧ ನಾಟಕಗಳನ್ನು ಬರೆದಿರುವರು. ಮರಾಠಿ ಪೌರಾಣಿಕ ನಾಟಕಗಳಲ್ಲಿ ಆ ವರೆಗೆ ಸೂತ್ರಧಾರನಿಗೆ ಅಗ್ರಸ್ಥಾನವಿದ್ದಿತು. ತ್ರಿಲೋಕೆಕರರಿಗೆ : ಅದನ್ನು ತ್ಯಜಿಸಿ ಪಾತ್ರಧಾರಿಗಳೇ ಅವರವರ ಹಾಡು ಸಂಭಾಷಣಗಳನ್ನು ನಿರ್ವಹಿಸುವಂತೆ ವ್ಯವಸ್ಥಿಸಿದರೆಂಬ ಕೀರ್ತಿ ಇದೆ; - ಮಹಾರಾಷ್ಟ್ರದಲ್ಲಿ ಕೆಲವರ ಅಭಿಪ್ರಾಯದಲ್ಲಿ ೧೮೭೯ರಲ್ಲಿ ರಂಗಕ್ಕೆ ಬಂದ ಅವರ 'ನಳದಮಯಂತಿ' ಮರಾಠಿಯಲ್ಲಿರುವ ಆದ್ಯ ಸಂಗೀತ ನಾಟಕ ಎಂದಿದೆ. ಚುರಮುರಿ ಕೃತಿ. ಅದಕ್ಕಿಂತ ಒಂಬತ್ತು ವರ್ಷ ಮೊದಲು ಪ್ರಕಟವಾಗಿತ್ತು ಎಂಬುದನ್ನು ಗಮನಿಸುವದು.

ಚುರಮುರಿ ಕಿರ್ಲೋಸ್ಕರ ಮಿತ್ರತ್ವದ ವಿಷಯದಲ್ಲಿ ಲಿಖಿತ ಆಧಾರಗಳಿಲ್ಲ. ಸಂಭಾವ್ಯತೆ ಮಾತ್ರ ಸಾಕಷ್ಟಿದೆ. ಮುದವೀಡು ಈ ಮಾತನ್ನು ಈರ್ವರ ಸಮಕಾಲಿಕರಿದ್ದ ಶಾಂತಕವಿ ಮೊದಲಾದ ಹಿರಿಯರಿಂದ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಬರೆದಿರುವರು. ಕ್ಷಣಕಾಲ ಅವರ ಮಾತನ್ನು ಬದಿಗಿರಿಸಿ ತತ್ಕಾಲೀನ ಪರಿಸ್ಥಿತಿಯನ್ನು ಮತ್ತು 'ಸಮಾನಶೀಲ ವ್ಯಸನೇಷು ಸಖ್ಯಂ' ಸುಭಾಷಿತವನ್ನು ಕಣ್ಮುಂದಿಟ್ಟುಕೊಂಡು ನೋಡಿದಾಗ ಮಿತ್ರತ್ವವಿಲ್ಲದಿದ್ದರೂ ಕನಿಷ್ಟ ಈರ್ವರ ಪರಸ್ಪರ ಪರಿಚಯವಿದ್ದಿತೆಂದು ಬಗೆಯಲು ಅಡ್ಡಿ ಇಲ್ಲ.

ಚುರಮುರಿ ಕಿರ್ಲೋಸ್ಕರ ಈರ್ವರಿಗೂ ಧಾರವಾಡ ಬೆಳಗಾವಿ ಪಟ್ಟಣಗಳ ಸಾಕಷ್ಟು ನಿಕಟ ಸಂಪರ್ಕವಿದ್ದಿತು. ಈರ್ವರೂ ಬ್ರಾಹ್ಮಣರು, ರಸಿಕರು, ಕವಿಗಳು, ತಕ್ಕಮಟ್ಟಿಗೆ ಓದಿಕೊಂಡವರು. ಕನ್ನಡ ಮರಾಠಿ ಎರಡೂ ಭಾಷೆಗಳನ್ನು ಬಲ್ಲವರು. ಊರು ಯಾವುದಿದ್ದರೂ ಬ್ರಾಹ್ಮಣರಿರಲಿ ಅನ್ಯ ಯಾರೇ ಇರಲಿ ತಮ್ಮ ತಮ್ಮ ಜಾತಿ, ಮತ ಪಂಥದವರೊಡನೆ ನೆಲೆಸ ಬಯಸುವವರನ್ನು ಅಥವಾ ನೆಲೆಸಿರುವವರನ್ನು ಇಂದಿಗೂ ಕಾಣುತ್ತೇವೆ. ಚುರಮುರಿ ಕಿರ್ಲೋಸ್ಕರ ಕಾಲದಲ್ಲಿ (೧೮೮೧) ಧಾರವಾಡ ಜಿಲ್ಹೆಯಲ್ಲಿ ಸುಶಿಕ್ಷಿತ ವರ್ಗದವರ ಅಂದರೆ ಸರಕಾರಿ ನೌಕರ, ವಕೀಲ, ಲೇವಿನ ಕಾರ್ಕೂನ (ಗುಮಾಸ್ತ ಇತ್ಯಾದಿ), ಶಿಕ್ಷಕ ಮೊದಲಾದ ವೃತ್ತಿಗಳಲ್ಲಿ ತೊಡಗಿದವರ ಪ್ರಮಾಣ ನೂರಕ್ಕೆ ೧.೫೯ ಇದ್ದರೆ ಬೆಳಗಾವಿ ಜಿಲ್ಹೆಯಲ್ಲಿ ೧.೯೭ ಇದ್ದಿತು. ಅವರೆಲ್ಲ ಹೆಚ್ಚಾಗಿ ಪಟ್ಟಣವಾಸಿಗಳು. ಆಗಿನಿಂದ್ಲೂ ಇಂದು ಮುಂಬಯಿಯಂಥ ನಗರಗಳಲ್ಲಿ ಕಂಡುಬರುವ ಮತ್ತು

ಇತರತ್ರ ಭರದಿಂದ ಪಸರಿಸುತ್ತಿರುವ 'ಫ್ಲ್ಯಾಟ್ ಸಂಸ್ಕೃತಿ' ಅಂದರೆ ವರ್ಷಾನುವರ್ಷ ಅಕ್ಕಪಕ್ಕದಲ್ಲಿದ್ದರೂ ಪರಸ್ಪರ ಸಂಪರ್ಕವಿಲ್ಲದಿರುವ ಸಂಸ್ಕೃತಿ, ತಲೆ ಎತ್ತಿದ್ದಿಲ್ಲ. ಒಂದಿಲ್ಲೊಂದು ರೀತಿ ಯಾವುದೊಂದು ಸಮಾಜ ಇಲ್ಲವೆ ವೃತ್ತಿಗೆ ಒಳಪಟ್ಟವರ ಪರಸ್ಪರ ಪರಿಚಯವಿದ್ದ ಸಂದರ್ಭಗಳೇ ಹೆಚ್ಚಾಗಿದ್ದವು.

ಅಲ್ಲದೆ ಕಿರ್ಲೋಸ್ಕರ ಶಿಕ್ಷಕರೆಂದು ಬೆಳಗಾವಿಯಲ್ಲಿ ವಿಭಾಗೀಯ ಶಿಕ್ಷಣಾಧಿಕಾರಿ ರಸೆಲ್‌ರ ಕೆಳಗೆ ಎಂಟು ವರ್ಷ ಸೇವೆ ಸಲ್ಲಿಸಿದ ಸಮಯದಲ್ಲಿ, ಗುರುಗಳೆಂದು ಚುರಮರಿ ತಮ್ಮ ಕೃತಿಯಲ್ಲಿ 'ಬಡವರ ವಿದ್ಯೆಕಾಗಿ ತನುವಿಂ ಮನದಿಂ ಧನದಿಂದೆ ಸಾಹಸಂ ಬಿಡುತಿಹ ಧೀರ ಚೆನ್ನ ಬಸವೇಶ್ವರ' ಎಂದು ಅಭಿವಂದಿಸಿದ ಚೆನ್ನಬಸಪ್ಪ ರಸೆಲ್‌ರ 'ಡಿಪ್ಟಿ' ಆಗಿದ್ದರು. ಅವರಾದರೂ ರಸಿಕರು, ಸಾಹಿತಿಗಳು, ಕನ್ನಡ ಮರಾಠಿ ಎರಡರಲ್ಲೂ ಗ್ರಂಥ ರಚಿಸಿದವರು. ಪ್ರತಿಭಾವಂತರನ್ನು ಗುರುತಿಸಿ ಯಾರೇ ಇದ್ದರೂ ತಾವಾಗಿಯೇ ಕರೆದು ಉತ್ತೇಜನ ನೀಡುವ, ಅಗತ್ಯವಿದ್ದರೆ ತಮ್ಮಿಂದಾದಷ್ಟು ಸಹಾಯ ಸಲ್ಲಿಸುವ ಪ್ರವೃತ್ತಿ ಅವರದು. ಒಂದೊಮ್ಮೆ ಧಾರವಾಡದಲ್ಲಿ ಚುರಮರಿ ಕಿರ್ಲೋಸ್ಕರರ ಪರಿಚಯವಾಗದಿದ್ದರೂ ಬೆಳಗಾವಿಯಲ್ಲಿ ಅವರು ಈರ್ವರ ಪರಿಚಯಕ್ಕೆ ಅನುವು ಮಾಡಿಕೊಟ್ಟಿರಬಹುದು ಕೂಡ. ಅಲ್ಲದೆ ಚುರಮರಿ ನೌಕರಿ ಮಾಡುತ್ತಿದ್ದ ಪಿ. ಡಬ್ಲ್ಯೂ. ಖಾತೆಯ ವಿಭಾಗೀಯ ಮುಖ್ಯಸ್ಥಳ ಬೆಳಗಾವಿ ಇದ್ದಿತು. ಕೆಲಸ ಮಾಡುತ್ತಿದ್ದ ಸ್ಥಳ ಎಲ್ಲಿದ್ದರೂ ಕಾರ್ಯ ನಿಮಿತ್ತ ಬೆಳಗಾವಿಗೆ ಆಗಾಗ ಹೋಗಿ ಬರುವದು ಕ್ರಮಪ್ರಾಪ್ತವಿದ್ದಿತು. ಇತ್ತ ಗುರ್ಲಹೊಸೂರು ಕಿರ್ಲೋಸ್ಕರರ ಜನ್ಮಸ್ಥಳ, ಕ್ಷೇತ್ರಸ್ಥಳ. ಅವರ ಸಮೀಪದ ಆಪ್ತೇಷ್ಟರೆಲ್ಲ ಅಲ್ಲಿಯೇ ಇದ್ದರು. ಅದಕ್ಕೂ ಸವದತ್ತಿಗೂ ಬಹಳ ಅಂತರವಿಲ್ಲ. ಸವದತ್ತಿಯಲ್ಲಿ ವಕೀಲರೆಂದು ಚುರಮರಿ ಕಕ್ಕ ಕೃಷ್ಣರಾಯರು ಅವರ ತಂದೆಯ ಕಾಲದಿಂದ ನೆಲೆಸಿದ್ದರು. ಚುರಮರಿ ಪತ್ನಿ ತೀರಿಕೊಂಡ ಬಳಿಕ ಅವರ ಮಕ್ಕಳ ರಕ್ಷಣೆಯ ಭಾರವನ್ನು ಅವರೇ ಹೊತ್ತಿದ್ದರು. ಚುರಮರಿ ಅಲ್ಲಿ ಕೂಡ ಆಗಾಗ ಹೋಗಿ ಬರುವದು ಕ್ರಮಪ್ರಾಪ್ತವಿದ್ದಿತು. ಇವಾದರೂ ಚುರಮರಿ ಕಿರ್ಲೋಸ್ಕರರ ಪರಸ್ಪರ ಪರಿಚಯ ಮಿತ್ರತ್ವಗಳಿಗೆ ಪಥ್ಯಕರ ಅಂಶಗಳೆಂಬುದನ್ನು ಅಲ್ಲಗಳೆಯುವಂತಿಲ್ಲ.

ಏನಿದ್ದರೂ ಪ್ರಕೃತದಲ್ಲಿ ಪರಿಚಯ, ಮೈತ್ರಿ ಅಮುಖ್ಯ. ಮುಖ್ಯವಿರುವದು ಅವರ ಕೃತಿಗಳು ಪ್ರಕಟವಾದ ಕಾಲ, ಅವುಗಳ ಸ್ವರೂಪ ಮತ್ತು ಅವುಗಳಲ್ಲಿನ ಸಾಮ್ಯಾಂಶಗಳು. ಕೂಲಂಕಷ ಪರಿಶೀಲನೆಗಾಗಿ ಎರಡೂ ಲಭ್ಯವಿರುವಾಗ ಈರ್ವರ ಮೈತ್ರಿ ಇದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ. ಇದ್ದರೆ ಸಂತೋಷ. ಬೆಳಗಾವಿಯಂಥ ಗಡಿನಾಡಿನಲ್ಲಿ ಅತ್ಯಗತ್ಯವಿದ್ದ ಭಾಷಾ ಬಾಂಧವ್ಯಕ್ಕೊಂದು ಉತ್ಕೃಷ್ಟ ಉದಾಹರಣೆ.

ಪ್ರಕರಣ ೭

ಕೊನೆಯ ಮಾತು

ಚುರಮುರಿ ಪ್ರತಿಭಾವಂತ ಕವಿ, ನಾಟಕಕಾರ ಇದ್ದರೂ ಆ ಪ್ರತಿಭೆ ಒತ್ತಟ್ಟಿಗೆ ಕೇಂದ್ರಿತವಾಗಿದ್ದಿಲ್ಲ. ಅವರ ಬುದ್ಧಿ ಕುತೂಹಲಗಳು ಹಲವು ದಿಶೆಗಳಲ್ಲಿ ಪರಿದಾಡುತ್ತಿದ್ದವೆಂಬುದು ಅವರ ಜೀವನ ಚರಿತ್ರೆಯಲ್ಲಿ ಕಂಡಿದ್ದಾಗಿದೆ. ಕಿರ್ಲೋಸ್ಕರರ ಪ್ರವೃತ್ತಿ ತದ್ಭಿನ್ನ. ಅವರು ನಾಟ್ಯಕಲೆಗೆ ತಮ್ಮ ಜೀವನವನ್ನೇ ಅರ್ಪಿಸಿದ್ದರು. ಅದಕ್ಕೂ ಹೆಚ್ಚಾಗಿ ಅನುಕೂಲದೈವ ಅವರನ್ನು ಉತ್ತರೋತ್ತರ ಅಭಿವೃದ್ಧಿಯತ್ತ ಕೊಂಡೊಯ್ದು ಕೀರ್ತಿ ಶಿಖರಕ್ಕೆ ಮುಟ್ಟಿಸಿತು. ನಾಟ್ಯಕಲೆಯೊಂದು ವ್ಯಾಪಕ ಕ್ಷೇತ್ರ. ನಾಟಕಕಾರ ಅದರ ಪ್ರಮುಖ ಘಟಕವಿದ್ದರೂ ರಂಗಭೂಮಿಯ ಮೇಲೆ ಅವನ ಕೃತಿಯು ಯಶಸ್ವಿಗೆ ಅಗತ್ಯವಿರುವ ಅನ್ಯ ಅನೇಕರ ಬುದ್ಧಿಕೌಶಲ್ಯಗಳ, ಅವರ ಸಕ್ರಿಯ ಸಹಾಯ ಸಹಕಾರಗಳ ನೆರವು ಅಷ್ಟಿಷ್ಟಲ್ಲ. ಈಗಂತೂ ನಾಟಕಕಾರನ ಜೊತೆಗಾಗಿ ದಿಗ್ದರ್ಶಕ, ನಿರ್ಮಾತ, ತಾಲೀಮು ಮಾಸ್ತರ, ಸಂಗೀತ ನಿಯೋಜಕ, ನೃತ್ಯ ದಿಗ್ದರ್ಶಕ, ಮೇಕಪ್ ಮಾಸ್ತರ, ವೇಷಭೂಷಣ, ಪ್ರಕಾಶ ವ್ಯವಸ್ಥೆ, ರಂಗಸಜ್ಜಿಕೆ - ಹೀಗೆ ಹತ್ತಾರು ಬಗೆಯ 'ಸ್ಪೆಶಲಿಸ್ಟ್' ಕಲಾಕಾರರಿರುತ್ತಾರೆ. ಕುಶಲ ನಟರಂತೂ ಸೈಯೇ ಸೈ. ಪ್ರಾರಂಭದಲ್ಲಿ ಇಷ್ಟೊಂದು ಜೋಂಜಾಟವಿಲ್ಲದಿದ್ದರೂ ಮೇಳ ಪ್ರಮುಖರು ಇವೆಲ್ಲವನ್ನು ಜೊತೆಗೂಡಿ ತಮಗೆ ಸರಿದೋರಿದಂತೆ ಹೊಂದಿಸಿಕೊಂಡು ಹೋಗುತ್ತಿದ್ದರು. ಕಿರ್ಲೋಸ್ಕರ ಸ್ವಯಂ ನಾಟಕಕಾರ ನಟ ಇದ್ದರಲ್ಲದೆ ನಾಟಕ ಪ್ರದರ್ಶನದ ಇತರ ಅಂಗಗಳಲ್ಲಿ ಸಾಕಷ್ಟು ಅನುಭವ ಪಡೆದವರಿದ್ದರು. ಕುಶಲ ನಟರನ್ನು, ಗಾಯಕರನ್ನು, ತರಬೇತಿ ಕೊಡುವವರನ್ನು ಕಂಡುಹಿಡಿದು ಅವರನ್ನು ತಮ್ಮ ಬಲೆಯಲ್ಲಿ ಹಾಕಿಕೊಳ್ಳುವ ಕಲೆಯಲ್ಲಿ ಅವರದು ಎತ್ತಿದ ಕೈ ಎಂದಿದ್ದಾರೆ ಅವರ ಚರಿತ್ರಕಾರರು. ತಮ್ಮ ಶಾಕುಂತಲದಂಥ ಹೊಸ ಬಗೆಯ (ಆ ಕಾಲದಲ್ಲಿ) ನಾಟಕದ ಪ್ರಥಮ ಪ್ರಯೋಗಕ್ಕೆ ಮರಾಠಿ ಭಾಷೆ ಸಂಸ್ಕೃತಿಗಳಿಗೆ ಗುಣಗ್ರಾಹಕತ್ವಕ್ಕೆ ಪ್ರಥಮ ದರ್ಜೆಯ ಕೇಂದ್ರದಂತಿದ್ದ ಪುಣೆಯನ್ನು ಆಯ್ದುಕೊಂಡದ್ದು ಅವರ ವ್ಯವಹಾರದೃಷ್ಟಿ ಮತ್ತು ಮುಂದೋರಣೆಗಳಿಗೆ ಒಂದು ಉತ್ತಮ ಉದಾಹರಣೆ ಆಗಿದೆ. ಪ್ರತಿಭೆ ವ್ಯುತ್ಪತ್ತಿ ಎಷ್ಟೇ ಶ್ರೇಷ್ಠ ಮಟ್ಟದವಿದ್ದರೂ ಅವುಗಳ ವಿಸ್ತೃತ ಪುರಸ್ಕಾರಕ್ಕೆ ವ್ಯವಹಾರ ಅಗತ್ಯವೆಂಬುದು ಪ್ರಮಾಣಿತ ನಿಜ.

ಚುರಮರಿ ಇಂಥವರಲ್ಲ. ಸಾಲದ್ದಕ್ಕೆ ಪತ್ನೀವಿಯೋಗ ಅವರನ್ನು ಹೆಚ್ಚೆಚ್ಚು ಅಂತರ್ಮುಖಿಯಾಗಿಸಿತ್ತು. ಒಂದೊಮ್ಮೆ ಇದ್ದರೂ ಉತ್ತರ ಕರ್ನಾಟಕದ ತತ್ಕಾಲೀನ ಪರಿಸ್ಥಿತಿ ಅತ್ಯಂತ ಶೋಚನೀಯವಿದ್ದಿತು. ದ.ರಾ. ಬೇಂದ್ರೆಯವರ ಮಾತುಗಳಲ್ಲಿ ಹೇಳುವದಾದರೆ - "ಎಷ್ಟೋ ದಿವಸಗಳಿಂದ ರಾಜಾಶ್ರಯವನ್ನು ಕಳೆದುಕೊಂಡು ತೊಳಲುತ್ತಿದ್ದ ಕರ್ಣಾಟಕವು ಇಂಗ್ಲೀಷರ ಆಳ್ವಿಕೆಯಲ್ಲಿ ಹರಿದು ಹಂಚಿಹೋಗಿತ್ತು. ಪೇಶ್ವೆಯರ ಆಳಿಕೆ ತೀರಿದ ಮೇಲೆ ಆಡಳಿತದಲ್ಲಿ ಆರೇ (ಮರಾಠಿ) ಅಮುಲದಾರರ ಕೈಮೇಲಾಗಿದ್ದಿತು. ದೇಹದಿಂದ ಇಲ್ಲದಿದ್ದರೂ ಛಾಯೆಯಿಂದ ಅವರಿನ್ನೂ ಕನ್ನಡ (ಉತ್ತರ) ದೇಶವನ್ನು ಆಳಿಯೇ ಆಳುತ್ತಿದ್ದರು. 'ಆರೇ ಅರಸು, ಕನ್ನಡ ಬಿರಸು, ಹಿಂದೀ ಆಡಲಿಕ್ಕೆ ಬಲು ಸರಸು' ಎಂಬ ಗಾದೆ ಮಾತಾದರೂ ಇದೇ ಕಾಲದಲ್ಲಿ ಜನಿಸಿತು. ರಾಜಾಶ್ರಯವಿದ್ದರೂ ಮೈಸೂರು ಕರ್ಣಾಟಕವು ಅದೇಕೊ ಉತ್ತರ ಕರ್ನಾಟಕದೊದಿಗೆ ಅಷ್ಟೊಂದು ಬಳಕೆ ಮಾಡುತ್ತಿದ್ದಿಲ್ಲ. ಮೊದಲನೇ ತರಗತಿಯ ಕರ್ತೃತ್ವಶಾಲಿಗಳಾಗಲಿ ಬುದ್ಧಿಜೀವಿಗಳಾಗಲಿ ಇನ್ನೂ ಹುಟ್ಟಿಬರಬೇಕಿತ್ತು.

"ಹಳ್ಳಿಗಳಲ್ಲಾದರೊ ಜನ ಮಗನ ಮೇಲೆ ಭಾರ ಹಾಕಿ ಮುದುಕರಂತೆ ನಿರಂಬಳ ಕಾಲ ಕಳೆಯುತ್ತಿದ್ದರು. ಹೊಲ ಮನೆಗಳನ್ನಷ್ಟು ನೋಡಿಕೊಂಡು, ಯಕ್ಷಗಾನಗಳನ್ನು ಮಾಡಿಸುವದು ಹರಿದಾಸಿ ನಾಗೇಶಿಯವರ ಹಾಡು ಕೇಳುವದು ಲಾವಣಿಗಳನ್ನು ಹೇಳಿಸುವದು - ಇದೇ ಮೊದಲಾದ ಕಾರ್ಯಗಳಲ್ಲಿ ತೊಡಗಿದ್ದರು. ಇತ್ತ ಪಟ್ಟಣಗಳು ಶೃಂಗಾರಕ್ಕೆ ಅರಸು ಪಟ್ಟವನ್ನು, ಭೀಭತ್ಸಕ್ಕೆ ಪ್ರಧಾನಿ ಪಟ್ಟವನ್ನು ಕಟ್ಟಿದ್ದರು. ಕಾಲವೇ ರೌದ್ರಾವತಾರವನ್ನು ತಾಳಿದ್ದರಿಂದ ರಸಗಳು ಕವಿಗಳನ್ನೂ ಕಾವ್ಯಗಳನ್ನೂ ಭೀತಿಯಿಂದ ಬಿಟ್ಟು, ದಿಕ್ಕಾಪಾಲಾಗಿ ರಸಗಳು ಕವಿಗಳನ್ನೂ ಕಾವ್ಯಗಳನ್ನೂ ಭೀತಿಯಿಂದ ಬಿಟ್ಟು, ದಿಕ್ಕುಪಾಲಾಗಿ ಸಿಕ್ಕಲ್ಲಿ ಸೇರಿಕೊಂಡಿದ್ದವು. ಶೃಂಗಾರವು ವಕೀಲರ ರಂಗಮಂದಿರವನ್ನು ಸೇರಿತ್ತು. ಭೀಭತ್ಸವು ಗ್ರಾಮ್ಯ ನಾಗರಿಕರ ಪಾಲಿಗೆ ಬಂದಿತ್ತು. ಕರುಣವು ಸೆರೆಬಡರ ಹೆಂಡಿರು ಮಕ್ಕಳ ಕಣ್ಣಿನೊಳಗಡಗಿಕೊಂಡಿತ್ತು. ವೀರರಸವು ಗತಪ್ರಾಣವಾಗಿ ಬಿದ್ದುಕೊಂಡಿತ್ತು. [೧]

ಇಂಥ ಪ್ರತಿಕೂಲ ಕಾಲದಲ್ಲಿ ಕೂಡ 'ತಿರುಳ್ಗನ್ನಡ ನಾಡಿನ ನಡುಮನೆ' ಎಂದು ಹೆಸರು ಪಡೆದ ಧಾರವಾಡ ಸೀಮೆಯಲ್ಲಿ ಈ ಸ್ಥಿತಿ ಅಸಹ್ಯವಾಗಿತ್ತು. ಅಂಥವರಲ್ಲಿ 'ಡಿಪ್ಟಿ' ಚೆನ್ನಬಸಪ್ಪ, ಅವರ ತ್ರಿಕರಣ ಪೂರ್ವಕ ಶಿಷ್ಯರಿದ್ದ ಚುರಮರಿ ಮತ್ತು ಚೆನ್ನಬಸಪ್ಪನವರ ಸಹಬಂಧು ಶಿಕ್ಷಕರಲ್ಲಿ ಕೆಲವರು ಕನ್ನಡದ ಏಳ್ಗೆಗಾಗಿ ಮನಮುಟ್ಟಿ ಪರಿಶ್ರಮಿಸಲು ಮುಂದಾದರು. ತಮ್ಮ ಶಾಕುಂತಲದಲ್ಲಿ ಚುರಮರಿ ' ಮುದಿವಂದಟ್ಟುವದಲ್ಲದೆನ್ನ ಮರಣಂ ಯಾವಾಗಲೋ ಎಂದು ಸಿಕ್ಕಿದ ಶಬ್ದಗಳನ್ನಿಟ್ಟು, ಶೀಘ್ರ ತರದಿಂದೀ ಕೃತ್ಯಮಂ ಗೈದೆನಾಂ' ಎಂದು ಹೇಳಿಕೊಂಡಿದ್ದರೂ ಅದು ಅವರ ವಿನಯವೆನ್ನಬೇಕು. ನಿಜವಾಗಿ ಕನ್ನಡ ಸಾಹಿತ್ಯ ಸಂಪದಕ್ಕೆ ಅದೊಂದು ಮೌಲಿಕ ಕಾಣಿಕೆ.

---

೧. ಶಾಂತಕವಿ - ಸಾಹಿತ್ಯದ ವಿರಾಟ್ ಸ್ವರೂಪ, ಪು. ೬೩೩, ೬೩೬

ಅಭಿಜಾತ ಸಂಸ್ಕೃತ ನಾಟಕಗಳು ಪಡಿಯಚ್ಚಿನಿಂದ ಹೊರಬಂದ ನೂತನ ಮಾದರಿಯ ಸಾಗ್ರ ಸಂಗೀತ ಮತ್ತು ಸ್ವಭಾಷೆಯ ಮಿಂಚು ಮೆರಗುಗಳಿಂದ ಕೂಡಿದ ಪ್ರಪ್ರಥಮ ಕೃತಿ. ಅನ್ಯ ಭಾಷೆಗಳ ವಿಷಯ ಏನಿದ್ದರೂ ಮುಂದೆ ತುಸು ಹೆಚ್ಚು ಕಡಿಮೆ ಅರ್ಧ ಶತಮಾನ ಕನ್ನಡ ಮರಾಠಿ ರಂಗಭೂಮಿಗಳನ್ನಾಳಿದ ಅಂಥ ಕೃತಿಗಳಿಗೆ ಮಾತೃಸ್ಥಾನದಲ್ಲಿದ್ದ ಸುಸಂಪನ್ನ ಕೃತಿ ಎನ್ನುವಂತಿದೆ.

●

ಗ್ರಂಥ ಋಣ

ಮೂಲ (ಸಂಸ್ಕೃತ)

೧. ಅಭಿಜ್ಞಾನ ಶಾಕುಂತಲ, ಕಾಲಿದಾಸ - ಸಂ. ಮೊನೀರ ವಿಲಿಯಮ್ಸ್, ಆಕ್ಸಫೋರ್ಡ , ೧೮೭೬, ದ್ವಿ. ಆ. (ಪ್ರ. ಆ. ೧೮೫೩)

೨. ಅದೇ - ಸಂ. ರಿಚರ್ಡ್ ಪಿಶೆಲ್, ಹಾರ್ವರ್ಡ ವಿ.ವಿ. (ದ್ವಿ. ಆ. ೧೯೨೨)

೩. ಅದೇ - (ಮೈಥಿಲೀ ಪಾಠ) -ಸಂ. ರಾಮನಾಥ ಝಾ, ಮಿಥಿಲಾ ವಿದ್ಯಾಪೀಠ, ದರಭಂಗಾ, ೧೯೫೭

೪. ಅದೇ - ಸಂ. ವಿ. ಗೋ. ಪ್ರೋಸಾಳಕರ (ಕೃಷ್ಣಶಾಸ್ತ್ರಿ ರಾಜವಾಡೆ ಕೃತ ಮರಾಠಿ ಅನುವಾದ ಸಹ), ಮುಂಬಯಿ, ೧೮೬೯

೫. ಅದೇ - ಸಂ. ಎಂ. ಆರ್. ಕಾಳೆ, ೧೯೬೧ (ರಾಘವ ಭಟ್ ಟೀಕೆ)

೬. ಅದೇ - ಸಂ. ಎಸ್. ಕೆ. ಬೆಳವಲಕರ, ಸಾಹಿತ್ಯ ಆಕಾಡೆಮಿ, ಹೊಸದಿಲ್ಲಿ, ೧೯೬೫

೭. ಅದೇ - ಸಂ. ರಾ. ಶಂ. ವಾಳಿಂಬೆ, ಪುಣೆ, ೧೯೫೬ (ಮರಾಠಿ)

೮. ಅದೇ - ಸಂ. ಶಾರದಾರಂಜನ ರೇ (೮ನೇ ಮುದ್ರಣ)

ಅನುವಾದ

೯. Sakuntala and other works of Kalidasa, Tr. Arthur Ryder, California Uni., 1928, Everyman's Library, London, 3rd Edition.

೧೦. ಶಾಕುಂತಲ ನಾಟಕ - ಮರಾಠಿ - ಪರಶುರಾಮ ಪಂತ ಗೋಡಬೋಲೆ, ಪುಣೆ, ೧೮೬೧ (ಕಲ್ಲಚ್ಚು)

೧೧. ಅದೇ - ಮರಾಠಿ - ಗ. ಕೃ.(?) ಗುಂಜೀಕರ, ' ವಿವಿಧ ಜ್ಞಾನ ವಿಸ್ತಾರ', ಸ. ೧೮೬೭-೭೦

೧೨. ಅದೇ - ಮರಾಠಿ - ಬ. ಪಾಂ. (ಅಣ್ಣಾಸಾಹೇಬ) ಕಿರ್ಲೋಸ್ಕರ, ೧೮೬೧ (ಪುನರ್ಮುದ್ರಣ-ಸಮಗ್ರ ಕಿರ್ಲೋಸ್ಕರ, ಸಂ. ಲೇಲೆ - ಘಾರಪುರೆ, ಪುಣೆ, ೧೯೩೫)

೧೩. ಅದೇ - (ಮಹಾರಾಷ್ಟ್ರ) - ಕೆ. ವಿ. ಗೋಡಬೋಲೆ, ಪೊಪ್ಯುಲರ ಪ್ರಕಾಶನ, ಮುಂಬಯಿ, ೧೯೬೫(ದ್ವಿ.ಆ.)

೧೪. ಶಾಕುಂತಲ ನಾಟಕ ನವೀನ ಟೀಕೆ (ಕನ್ನಡ) - ಮುಮ್ಮಡಿ ಕೃಷ್ಣ -ರಾಯರ ಮುನ್ನುಡಿ), ಶ್ರೀ ವಿದ್ಯಾರಣ್ಯ, ಗ್ರಂಥಮಾಲೆ, ಬೆಳಗಾವಿ (೪ ನೇ ಮುದ್ರಣ), ೧೯೩೪

೧೫. ಶಾಕುಂತಲ - (ಕನ್ನಡ) - ಶೇ. ರಾ. ಚುರಮುರಿ (ಮುದವೀಡು ಕೃಷ್ಣ -ರಾಯರ ಮುನ್ನುಡಿ), ಶ್ರೀ ವಿದ್ಯಾರಣ್ಯ ಗ್ರಂಥಮಾಲೆ, ಬೆಳಗಾವಿ (೪ನೇ ಮುದ್ರಣ), ೧೯೩೪

೧೬. ಶಾಕುಂತಲ (ಕರ್ಣಾಟಕ) - ಬಸವಪ್ಪ ಶಾಸ್ತ್ರಿ, ಮೈಸೂರು, ೧೯೨೨, (೪ನೇ ಆವೃತ್ತಿ)

೧೭. ಅದೇ - ಮಲ್ಲಿಕಾರ್ಜುನ ಶಿ. ರೈನಾಪುರ, ಬೆಳಗಾವಿ, ೧೯೩೩

೧೮. ಗೀತ ಶಾಕುಂತಲ - ಡಿ.ವಿ.ಜಿ., ಕಾವ್ಯಾಲಯ, ಮೈಸೂರು, ೧೯೬೯ (೨ನೇ ಆವೃತ್ತಿ)

ಆಧಾರ ಸಾಹಿತ್ಯ (ಸಂಸ್ಕೃತ)

೧೯. ಶ್ರೀ ಮದ್ವಾಲ್ಮೀಕಿ ರಾಮಾಯಣ - ನಿರ್ಣಯಸಾಗರ ಮುದ್ರಣ, ಮುಂಬಯಿ

೨೦. ಕಾದಂಬರಿ (ಪೂ. ಭಾ.) - ಬಾಣಭಟ್ಟ -ಸಂ. ಎಂ. ಆರ್. ಕಾಳೆ, ಮೋತಿಲಾಲ ಬನಾರಸಿದಾಸ, ೧೯೬೮ (೪ನೇ ಮುದ್ರಣ)

೨೧. ಕಾವ್ಯಾಲಂಕಾರ - ಭಾಮಹ, ಸಂ. ದೇವೇಂದ್ರನಾಥ ಶರ್ಮಾ, ಬಿಹಾರ ರಾಷ್ಟ್ರಭಾಷಾ ಪರಿಷತ್, ಪಟಣಾ, ೧೯೬೨

೨೨. ಕಾವ್ಯಾದರ್ಶ - ದಂಡಿ, ಸಂ. ಆಚಾರ್ಯ ರಾಮಚಂದ್ರ ಮಿಶ್ರ, ಚೌಖಾಂಬಾ ವಿದ್ಯಾಭವನ, ವಾರಣಾಸಿ, ೧೯೫೮

೨೩. ಕಾವ್ಯಾಲಂಕಾರ ಸೂತ್ರ - ವಾಮನ -ಸಂ. ಡಾ. ನಾಗೇಂದ್ರ, ಹಿಂದೀ ಅನುಸಂಧಾನ ಪರಿಷತ್, ದಿಲ್ಲಿ ವಿ.ವಿ.

೨೪. ಕಾವ್ಯಾನುಶಾಸನ - ಹೇಮಚಂದ್ರ, ಸಂ. ರಸಿಕಲಾಲ ಪಾರೀಖ ಮತ್ತು ಎಸ್. ಎಂ. ಕುಲಕರ್ಣಿ, ಶ್ರೀ ಮಹಾವೀರ ಜೈನ ವಿದ್ಯಾಲಯ, ಮುಂಬಯಿ, ೧೯೩೮

೨೫. ಚಂದ್ರಲೇಖಾ ಸಟ್ಟಕ(ಪ್ರಾಕೃತ) - ರುದ್ರದಾಸ, ಸಂ. ೩. ನೇ ಉಪಾಧ್ಯಾಯ, ಭಾರತೀಯ ವಿದ್ಯಾಭವನ, ಮುಂಬಯಿ

೨೬. ಛಂದೋನುಶಾಸನ - ಜಯಕೀರ್ತಿ (ಜಯದಾಮನ್ ಗ್ರಂಥದಲ್ಲಿ), ಹರಿತೋಷ ಗ್ರಂಥಮಾಲಾ, ಮುಂಬಯಿ

೨೭. ದೂತವಾಕ್ಯ - ಭಾಸ (ಭಾಸ ನಾಟಕ ಚಕ್ರ)

೨೮. ಭಾವಪ್ರಕಾಶನ - ಶಾರದಾತನಯ, - ಸಂ. ಮೇಲುಕೋಟೆ ಯದುಗಿರಿ ಯತಿರಾಜ ಸ್ವಾಮಿ ಮತ್ತು ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ, ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬಡೋದೆ, ೧೯೩೦

೨೯. ಮಹಾನಾಟಕ - ಹನೂಮಾನ್‌ಕೃತ -ಸಂ. ರಾಮತರಣ ಶಿರೋಮಣಿ, ಕಲಕತ್ತ, ೧೮೭೦

೩೦. ಮಾನಸೋಲ್ಲಾಸ -ಚಾಲುಕ್ಯ ಸೋಮೇಶ್ವರ -ಗಾಯಕವಾಡ ಓರಿಯಂಟಲ್ ಸೀರೀಜ, ಬಡೋದೆ, ೧೯೩೯

೩೧. ರತ್ನಾವಲಿ - ಶ್ರೀಹರ್ಷ

ಹಿಂದಿ

೩೨. ಪಾರ್ಸಿ - ಹಿಂದಿ ರಂಗಮಂಚ - ಡಾ. ಲಕ್ಷ್ಮೀನಾರಾಯಣಲಾಲ, ಕೇಂದ್ರೀಯ ಹಿಂದಿ ನಿರ್ದೇಶನಾಲಯ, ಭಾರತ ಸರಕಾರ, ೧೯೭೩

೩೩. ಹಮಾರಿ ನಾಟ್ಯ ಪರಂಪರಾ - ಶ್ರೀ ಕೃಷ್ಣದಾಸ, ಸಾಹಿತ್ಯ ಸಂಸದ್, ಪ್ರಯಾಗ, ೧೯೫೬.

ಮರಾಠಿ

೩೪. ಅಣ್ಣಾಸಾಹೇಬ ಕಿರ್ಲೋಸ್ಕರ ಯಾಂಚೇ ಚರಿತ್ರ - ಶಂಕರ ಬಾಪೂಜಿ ಮುಜುಮದಾರ, ಪುಣೆ, ೧೯೫೪.

೩೫. ಮರಾಠಿ ರಂಗಭೂಮೀಚಾ ಪೂರ್ವರಂಗ - ಕೃ. ಬಾ. ಮರಾಠೆ, ಶ್ರೀ ವಿದ್ಯಾ ಪ್ರಕಾಶನ, ಪುಣೆ, ೧೯೭೯.

೩೬. ಮರಾಠಿ ರಂಗಭೂಮೀಚಾ ಇತಿಹಾಸ - ಶ್ರೀ ನಾ. ಬನಹಟ್ಟಿ, ಭಾಗ ೧. ವೀನಸ್ ಪ್ರಕಾಶನ, ಪುಣೆ, ೧೯೫೭.

೩೭. ಲೋಕನಾಟ್ಯಾಚೀ ಪರಂಪರೆ - ವಿ.ಕೆ. ಜೋಶೀ

ಕನ್ನಡ

೩೮. ಅಪ್ರತಿಮ ವೀರ ಚರಿತ - ತಿರುಮಲಾರ್ಯ, ಕಾವ್ಯಮಂಜರಿ - ಕಾವ್ಯಕಲಾನಿಧಿ, ಮೈಸೂರು, ೧೯೩೧

೩೯. ಉದಯಾದಿತ್ಯಾಲಂಕಾರ - ಕಾವ್ಯಮಂಜರಿ, ೧೮೯೮

೪೦. ಕನ್ನಡ ನಾಟಕ - ತ. ಸು.ಶಾಮರಾಯ, ಗೀತಾಬುಕ್ ಹೌಸ್, ಮೈಸೂರು, ೧೯೬೨.

೪೧. ಕರ್ಣಾಟಕ ಕಾದಂಬರಿ - ನಾಗವರ್ಮ, ಗದ್ಯಾನುವಾದ ಸಹ, ಸಂ. ಹ.ವೆ. ನಾರಾಯಣಶಾಸ್ತ್ರಿ, ಕ.ಸಾ. ಪ., ಬೆಂಗಳೂರು ೧೯೭೭.

೪೨. ಕವಿರಾಜ ಮಾರ್ಗ - ಸಂ. ಎಮ್. ವಿ. ಸೀತಾರಾಮಯ್ಯ, ಬೆಂಗಳೂರು, ೧೯೬೮

೪೩. ಕಾವ್ಯಾವಲೋಕನ - ನಾಗವರ್ಮ (ಇಮ್ಮಡಿ), ಸಂ. ಶಿ. ಶಿ. ಬಸವನಾಳ ಮತ್ತು ಕೇಪು ಶಂಕರನಾರಾಯಣ, ೧೯೩೯.

೪೪. ಛಂದಸ್ಸಾರ - ಧೋಂಡೋ ನರಸಿಂಹ ಮುಳಬಾಗಿಲ, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು, ೧೯೨೭.

೪೫. ನಡೆದು ಬಂದ ದಾರಿ, ಸಂ. ೧ - ಮನೋಹರ ಗ್ರಂಥಮಾಲೆ, ಧಾರವಾಡ, ೧೯೫೦

೪೬. ಬಣ್ಣ-ಬೆಳಕು - ಎಚ್.ಕೆ. ರಂಗನಾಥ, ಬೆಂಗಳೂರು, ವಿ.ವಿ. ೧೯೭೪.

೪೭. ಭಾರತೀಯ ರಂಗಭೂಮಿ - ಆದ್ಯ ರಂಗಾಚಾರ್ಯ (ಶ್ರೀರಂಗ), ನೆಶನಲ್ ಬುಕ್ ಟ್ರಸ್ಟ್, ದೆಹಲಿ, ೧೯೭೧.

೪೮. ಮಿತ್ರವಿಂದಾ ಗೋವಿಂದ -ಸಿಂಗಾರಾರ್ಯ, ಕಾವ್ಯಮಂಜರಿ, ೧೮೯೩

೪೯. ವಡ್ಡಾರಾಧನ - ಶಿವಕೋಟ್ಯಾಚಾರ್ಯ, ಸಂ. ಡಿ. ಎಲ್. ನರಸಿಂಹಾಚಾರ್ಯ, ಶಾರದಾಮಂದಿರ, ಮೈಸೂರು, ೧೯೫೫.

೫೦. ಸಾಹಿತ್ಯದ ವಿರಾಟ್ ಸ್ವರೂಪ, ದ.ರಾ. ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪

೫೧. ಹೊಸಗನ್ನಡದ ಅರುಣೋದಯ - ಶ್ರೀನಿವಾಸ ಹಾವನೂರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೧೯೭೪, ಸುಧಾರಿತ ಆವೃತ್ತಿ, ೨೦೦೦.

ಇಂಗ್ಲಿಷ್

52. Alexander Pope - Leslie Stephen,English Men of Letters, Macmillan &* Co. 1902 (2nd Edn.)

53. Drama in Sanskrit Literature - R.V. Jagirdar (Shri Ranga), Popular Book Dept., Bombay, 1947.

54. Eiements of Drama - G.L. Stayan,Cambridge Uni Pres, 1960

55. English Literature in 16th Century (Including Drama), C.S. Lewis, Oxford Uni. Press, 1954.

56. European Theories of Drama - Bennet H.Clark, Crown Publishers Inc., New York, 1959. (3rd Edn.)
57. Fielding - Austin Dobson, Macmillan & Co., London, 1909.
58. History of classical sanskrit Literature, M. Krishnamachariar, Madras, 1937.
59. Indian Theatre - R.K. Yajnik, Ullen & Unwin, London, 1933
60. Karnatak Theatre - H.K. Ranganath, Karnatak University, Dharwar, 1960.
61. Love in the Poems and Plays of Kalidasa, Dr.V. Raghavan, Indian Institute of culture, Bangalore - 1955.
62. Poems of John Dryden - Ed. gohn Sargeant, Oxford Uni. Pres, 1956 (8th Edn.)
63. Sanskrit Drama, A. B. Keith,Oxford, 1924
64. Stndies in Kanfily as Arthasastra - R.P. Kangle
65. Theatre of Inoid - Sylvian Levi, Fr. from French - Narayan Mukherjii, vols. I & II, writers workshop, Calcutta.
66. Works of George Chapman - Homer's Illiod Odessa - Chato & Winons, 1924.

ಪತ್ರಿಕೆಗಳು

1. ಮಹಾರಾಷ್ಟ್ರ ಟೈಮ್ಸ್ (ಮರಾಠಿ), ಮುಂಬಯಿ
2. ಲೋಕಸತ್ತಾ (ಮರಾಠಿ), ಮುಂಬಯಿ
3. ವಿವಿಧ ಜ್ಞಾನ ವಿಸ್ತಾರ (ಮರಾಠಿ), ಮುಂಬಯಿ (ಸಂ. ೧೮೬೭-೭೦)

ಅನುಬಂಧಗಳು

- ಚುರಮರಿ, ಬಸವಪ್ಪ ಶಾಸ್ತ್ರಿಗಳ ಶಾಕುಂತಲಾನುವಾದದ ತುಲನೆ - ಶ್ರೀ. ಹಾ.
- ಚುರಮರಿ ಶೇಷಗಿರಿರಾಯರ ಲೇಖ 'ಕನ್ನಡ ಭಾಷೆ'
  ಮರಾಠಿಯಿಂದ ಅನುವಾದ : ಡಾ. ಪ್ರಹ್ಲಾದ ಮುದಗಲ್ಲ

ಅನುಬಂಧ ೧

ಉಪಲಬ್ಧವಿರುವ ಕನ್ನಡ ನಾಟಕಗಳಲ್ಲಿ ಹದಿನೇಳನೆಯ ಶತಮಾನದಲ್ಲಿದ್ದ ಸಿಂಗರಾರ್ಯನ 'ಮಿತ್ರವಿಂದಾಗೋವಿಂದ'ವೇ ಮೊದಲಿನದಷ್ಟೇ. ಅದಕ್ಕೂ ಹಿಂದೆ ಕೆಲವು ನಾಟಕಗಳು ರಚಿತವಾಗಿದ್ದರೂ ಅವು ಕಾಲಗರ್ಭದಲ್ಲಿ ಅಡಗಿರಬೇಕು ಎನ್ನುವ ಆದರೆ ಆ ಮುಂದೆಯಾದರೂ ನಾಟಕ ರಚನೆಯ ಪರಂಪರೆಯು ಕಂಡು ಬರಬಾರದೆ! ಸಿಂಗರಾರ್ಯನ ಅನಂತರ ನಮಗೆ ನಾಟಕಕಾರರು ದೊರೆಯುವುದು ೧೫೦ ವರ್ಷಗಳು ಕಳೆದ ಮೇಲೆಯೇ! ಕಾರಣವೇನೇ ಇರಲಿ, ಪ್ರಾಚೀನ ಕನ್ನಡ ಕವಿಗಳು ನಾಟಕ ರಚನೆಗೆ ಮನಸ್ಸುಗೊಡಲಿಲ್ಲವೆನ್ನುವುದು ಸ್ಪಷ್ಟವಿದೆ.

41 ಶಾಕುಂತಲದ ಅನುವಾದಗಳು

ಕನ್ನಡದಲ್ಲಿ ನಿಯಮಿತವಾದ ನಾಟಕ ರಚನೆಯು ೧೮೬೯ರಿಂದ, ಕಂಡು ಬರುತ್ತದೆ. ಅದೂ ಚುರಮುರಿಯವರ 'ಅಭಿಜ್ಞಾನ ಶಾಕುಂತಲ'ದ ಅನುವಾದದಿಂದ. ಆಮೇಲೆ ೧೮೮೭ರ ಸುಮಾರಿಗೆ ಸಿದ್ಧವಾದ ಬಸವಪ್ಪಶಾಸ್ತ್ರಿಗಳ ಅನುವಾದದ ಮೇಲ್ಮೆಯನ್ನು ಮನ್ನಿಸಿ ಹಲವು ಲೇಖಗಳು ಪ್ರಕಟವಾಗಿವೆ. ಅದನ್ನು ಚುರಮುರಿ ಶೇಷಗಿರಿರಾಯರ ಅನುವಾದಕ್ಕೆ ಹೋಲಿಸಿ, ಯಾವುದು ಹೆಚ್ಚು ಉತ್ತಮ ಎನ್ನುವ ಬಗ್ಗೆ ಅಭಿಪ್ರಾಯಗಳು ವ್ಯಕ್ತವಾಗಿವೆ......................* 'ಅದೆಲ್ಲಿ... ಇದೆಲ್ಲಿ?' ಎಂಬ ಮಾತೂ ಪ್ರಾಂತಾಭಿಮಾನದ ಆರೋಪವೂ ಕೇಳಬಂದಿವೆ. ೧ ಅದೇನೇ ಇದ್ದರೂ ಈ ಆದ್ಯ ಕೃತಿಗಳು ೧೯ನೆಯ ಶತಮಾನದ ನಾಟಕ ಪರಂಪರೆಯನ್ನು ಪ್ರತಿನಿಧಿಸುವುದರಿಂದ ಅವನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

ಇಬ್ಬರ ಅನುವಾದ ಶೈಲಿಯನ್ನು ನಿದರ್ಶಿಸುವಂತಹ ಕೆಲವು ಪದ್ಯಗಳನ್ನು ಆಯ್ದು ಇಲ್ಲಿ ಕೊಡುವೆವು :

ಚಿತ್ತೂರಗಢದ ಮಹಾರಾಣಾ ಕುಂಭನು (೧೪೩೩ -೧೪೬೮). 'ಸಂಗೀತ ರಾಜ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಅವನು ಸ್ವತಃ ಕವಿ ನಾಟಕಕಾರ ಸಂಗೀತ ಶಾಸ್ತ್ರಜ್ಞನಿದ್ದನೆಂದು ಅವನು ನಡೆಸಿದ ಕೀರ್ತಿಸ್ತಂಭದಲ್ಲಿ ಉಲ್ಲೇಖವಿದೆ. ಅವನು ಸಂಸ್ಕೃತ, ಮರಾಠೀ, ಕನ್ನಡ ತೆಲುಗು ಭಾಷೆಗಳಲ್ಲಿ ನಾಟಕ ರಚಿಸಿರುವುದಾಗಿ ಎರಡೂ ಕಡೆ ಪ್ರಸಕ್ತಿ ಇದೆ. ಅವು ಯಾವುವೂ ಈಗ ಲಭ್ಯವಿಲ್ಲ.

"ಶ್ರೀ ಕರ್ನಾಟಕ ಮೇದಪಾಟ ಸುಮಹಾರಾಷ್ಟ್ರಾದಿಕೇಯೋದಯ | ಭಾಷಾ ಗುಂಫಮಯಂ ಚತುಷ್ಟಯಮಯಂ ಸನ್ನಾಟಕಾನಾಂ ವ್ಯಧಾತ್ ||" - ಕೀರ್ತಿಸ್ತಂಭ

"ಸಂಸ್ಕೃತ ಬಾಷಾ ಮಹಾರಾಷ್ಟ್ರ ತ್ರೈಲಿಂಗ್ ಕರ್ನಾಟಕ ಭಾಷಾ ಚತುಷ್ಟಯ ರಚಿತ ನಾಟಕರಾಜ ಚತುಷ್ಟಯ" - ಸಂಗೀತರಾಜ ಸಂ. ರಾ. (ಪ್ರಕಟಣೆ : ವಾರಾಣಸಿ, ೧೯೬೩)

೧. ಮೂಲ :

ಆಪರಿತೋಷಾದ್ವಿದುಷಾಂನ ಸಾಧುಮನ್ಯೇ ಪ್ರಯೋಗ ವಿಜ್ಞಾನಂ
ಬಲವದಪಿ ಶಿಕ್ಷಿತಾನಾಂ ಆತ್ಮನ್ಯ ಪ್ರತ್ಯಯಂ ಚೇತಃ || (ನಾಂದೀ)

ಶೇಷಗಿರಿರಾಯ :

ಕಾಂತೆ ಕೇಳೊರೆಯಂತೆ ಗಂತಿನ ಗಂತದಂತನಾಂತವರ್
ಕುಂತು ಕೇಳುತಲಂತರಂಗದಿ ಸಂತಸಂ ತಳೆದಿಂದು ಪ್ರ-
ತ್ಯಂತರಂ ಬರುವಂತಿನಂ ತಲೆದೂಗುವಾ ಪರಿಯಂತರಂ
ನಾ ತಳೆರ್ದಿಪೆ ಶಂಕೆ ಸದ್ಗುಣವಂತನಾಂ ತದನಂತರಂ ||

ಬಸವಪ್ಪ ಶಾಸ್ತ್ರಿ :

ರಸಿಕರ್ಕಳೊಪ್ಪುವನ್ನಂ
ರಸಾಭಿನಯ ಕೌಶಲಂಗಳೊಳ್ಪಿದು ವೆನುತಾ -
ನುಸಿರೆಂ ವಲಮೋದಿದ ಮಾ
ನಿಸರ್ಗಂ ತಮ್ಮೊಳಗೆ ತಮಗೆ ನಂಬುಗೆಯಿಲ್ಲಂ ||

ಶೇಷಗಿರಿರಾಯರ ಅನುವಾದವು ಮೂಲದಕಿಂತ ವಿಸ್ತಾರವಾಗಿದೆ. ಅತಿಯಾದ ಗಮಕಪ್ರಾಸವು ಅರ್ಥ ಸುಭಗತೆಗೆ ಅಡ್ಡಿಯಾಗಿದೆ. 'ಕುಂತು' ಎಂಬ ಗ್ರಾಮ್ಯ ಪದವು ಇತರ ಪದಸರಣಿಯಲ್ಲಿ ಹೊಂದುವುದಿಲ್ಲ. ಬಸವಪ್ಪ ಶಾಸ್ತ್ರಿಗಳ ಅನುವಾದದಲ್ಲಿ ಅರ್ಥಸ್ಪಷ್ಟತೆ, ಪ್ರೌಢಿಮೆ ಮತ್ತು ಸಂಕ್ಷೇಪ - ಇವು ಎದ್ದು ಕಾಣುವಂತಿವೆ.

೨. ಮೂಲ :

ಆಲಕ್ಷ್ಯದಂತಮಕುಲಾನನಿಮಿತ್ತ ಹಾಸ್ಯೆ -
ರವ್ಯಕ್ತವರ್ಣ ರಮಣೀಯ ವಚಃ ಪ್ರವೃತ್ತೀನ್
ಅಂಕಾಶ್ರಯ ಪ್ರಣಯಿನಸ್ತನಯಾನ್ ವಹಂತೌ
ಧನ್ಯಾಸ್ತದಂಗ ರಜಸಾ ಮಲಿನೀ ಭವಂತಿ || (ಅಂಕ ೭)

ಬಸವಪ್ಪ ಶಾಸ್ತ್ರಿ

ಮೊಳೆವಲ್ ಶೋಭಿಸೆ ನಿರ್ನಿಮಿತ್ತ ಹಸಿತಂ ಚೆಲ್ವಾಗೆ ಲಾಲಾಜಲಂ
ತುಳುಕಲ್ ಬರ್ಪ ತೊದಲ್ ಮನಗೊಳಿಸಲಂಕಾರೋಹಕ್ಕಿಚ್ಛಿಪ ಮ-
ಕ್ಕಳನಿರ್ಕೈಗಳಿನೆತ್ತಿಕೊಂಡು ನಲವಿಂ ತದ್ದೇಹ ಚಂಚದ್ರಜೋ
ಮಳಿನಾಂಗರ್ಕಳೆನಿಪ್ಪ ಮಾನವರೆ ತಾಂ ಧನ್ಯರ್ ವಲಂ ಧಾತ್ರಿಯೊಳ್.

ಶೇಷಗಿರಿರಾಯ :

ತೋರಲೆಳೆಯಳೆ ದಂತಪಂಕ್ತಿಯು
ಕಾರಣಿಲ್ಲದೆ ನಗುವ ನುಡಿಗಳು
ಬಾರವಲೆ ತೊದಲಾಡಿ ಸವಿಯುಣಿಸುವ ಕಿವಿಗೆ ಮುದ್ದು
ಮೋರೆ ಮೇಲ್ಮಾಡುತಲಿ ಕರಕೊಂ-
ಡೇರು ಮಾಳಿಗೆಯೆಂದು ಕಣ್ಣೀರ್
ತಾರದಳುವರ್ಭಕನ ಮೈಮಣ್ ತಾಳ್ವರೇಂ ಕೃತರೊ.

ಬಸವಪ್ಪ ಶಾಸ್ತ್ರಿಗಳ ಪದ್ಯವು ಹಳಗನ್ನಡ / ವೃತ್ತದಲ್ಲಿದ್ದರೆ ಶೇಷಗಿರಿರಾಯರದು ನಡುಗನ್ನಡ / ಷಟ್ಪದಿಯಲ್ಲಿದೆ. 'ಕಾರಣಿಲ್ಲದೆ ನಗುವ' ನುಡಿಗಳು ಬಾರವಲೆ ತೊದಲಾಡಿ ಕಿವಿಗೆ ಸವಿಯುಣಿಸುವ' ಎಂಬ ಉಕ್ತಿಗಳು ಬಾಲಭಾವಕ್ಕೆ ಉಚಿತವಾದವುಗಳು. ಅಲ್ಲದೆ ಮೂಲದಲ್ಲಿಲ್ಲದ ಒಂದು ಹೊಸ ವಿಚಾರವನ್ನು ಸೇರಿಸಲಾಗಿದೆ: ತನ್ನ ಮುದ್ದು ಮೋರೆಯನ್ನು ಮೇಲೆ ಮಾಡಿ ಮಾಳಿಗೆಯನ್ನು ಏರೋಣವೆಂದು ಕಣ್ಣೀರು ತಾರದೆ ಅಳುತ್ತ ಹಟ ಮಾಡುತ್ತಾನೆ. ಈ ಅರ್ಭಕನು ಕಾಳಿದಾಸನು ಚಿತ್ರಿಸಿದ ಕುಮಾರನಿಗಿಂತ ಜೋರಿನವನಿದ್ದಾನೆ! ಇತ್ತ ಬಸವಪ್ಪ ಶಾಸ್ತ್ರಿಗಳ ಅನುವಾದದಲ್ಲಿ ಯಥಾಪ್ರಕಾರ ಬಿಗುವು ಕಂಡುಬರುತ್ತದೆ. ಲಾಲಾಜಲಂ ತುಳುಕುವ ಹಾಗೂ ಇರ್ಕೈಗಳಿನೆತ್ತಿಕೊಳ್ಳುವ ಹೊಸ ಅಂಶಗಳು ಸಂದರ್ಭಕ್ಕೆ ಅನುಸಾರವಾಗಿವೆ. ಆದರೆ 'ತದಂಗರಜಸಾ ಮಲಿನೀಭವಂತಿ' - ಇದರ ಕನ್ನಡ ರೂಪವಾದ ತದ್ದೇಹ ಜಂಚ ದ್ರಜೋಮಳಿನಾಂಗರ್ಕಳ್ - ಎಂಬುದು ಮಾತ್ರ ಮೂಲಕ್ಕಿಂತಲೂ ದುರ್ಭರವಾಗಿದೆ.

೩. ಮೂಲ :

ಉನ್ನಮಿತ್ಯೆಕ ಭ್ರೂಲತಾಮಾನನಮಸ್ಯಾಃ ಪದಾನಿ ರಚಯಿಂತ್ಯಾಃ
ಕಂಟಕಿತೇನ ಪ್ರಥಯತಿಮಯ್ಯನುರಾಗಂ ಕಪೋಲೇನ || (ಅಂಕ ೩)

ಬಸವಪ್ಪಶಾಸ್ತ್ರಿ :

ಮೃದುಪದ ಬಂಧವನೆಸಗುವ
ಸುದತಿಯ ನಿಮಿರ್ದೆತ್ತಿದೊಂದು ಪುರ್ವಿ ಮೆರೆವೀ
ವದನಂ ಪುಲಂಕಗೂಡಿದ
ಕದಪಿಂ ಕನ್ನಡಿಪುದೆನ್ನೊಳಿರ್ಪಭಿರತಿಯಂ

ಶೇಷಗಿರಿರಾಯ:

ಪದವ ರಚಿಸುತಿಹಳು ಚಂದಿರವದನೆ ಮನದೊಳು
ಹೃದಯದಾಸೆದೋರಲು ಬಲು ಹರು ಬೆದರಿ ಚದುರೆ ಮಧುರ ||

ಕರದಿ ಗಲ್ಲವಿರಿಸಿ ಒಂದೇ ಕಡೆಗೆ ನೋಡುತಾ
ಬೆರಳಿನಿಂದ ಮೆಲ್ಲನೆ ಮೃದು ತಾಳ ಮೆಟ್ಟುತಾ ||
ಸಿರಿವನೊಲಿಯೆ ಪಣೆಯೊಳು ಕರಿ
ಸುರುಳುಗುರುಳು ಉರುಳುತಿರಲು
ತವಕದಿಂದಲುಚಿತ ಸೂಚಿಸಿರಲು ಹಿಗ್ಗುತಾ
ಕವನ ರಸದಿ ಕೆನ್ನೆಯೊಳು ಮುಳ್ಳು ನಾಂಟುತಾ||
ಕವಿಯೆ ಬಾಷ್ಪ ಕಣ್ಣೊಳುಕ್ಕು -
ತಿವೆ ತನುಮತಿ ನವಯುವತಿ
....
ಒಂದೆ ಭ್ರೂಲತೆಯ ಬಾಲೆ ಮ್ಯಾಲಕೆತ್ತುತಾ
ಹೊಂದಿ ಬರಲು ರಚನೆ, ಸ್ವರದಿ ನುಡಿಯುತಾ
ಬಂಧನ ಸೌಂದರಿಯದಾ-
ನಂದದಿಂದೆ ಮಿಂದು ಬಂದು.

ಇಲ್ಲಿ, ಬಸವಪ್ಪಶಾಸ್ತ್ರಿಗಳು ಕಾಳಿದಾಸನ ಮೂಲದ ಚೌಕಟ್ಟಿನಲ್ಲಿಯೆ ಅನುವಾದಿಸಿದ್ದಾರೆ, ಶೇಷಗಿರಿರಾಯರು ಕಾಳಿದಾಸನ ಕಲ್ಪನೆಯನ್ನಷ್ಟೆ ತೆಗೆದುಕೊಂಡು ಹಾಡಿನ ರೂಪದಲ್ಲಿ ವಿಸ್ತರಿಸಿದ್ದಾರೆ. 'ಕರದಿ ಗಲ್ಲವಿರಿಸಿ, ಬೆರಳಿನಿಂದ ಮೆಲ್ಲನೆ ತಾಳ ತಟ್ಟುತ್ತ ಒಂದು ಹುಬ್ಬನ್ನು ಮೇಲೆತ್ತಿ ರಚನೆಯು ಹೊಂದಿದ ಕನ್ಯೆಗೂ, ಸ್ವರದಿ ನುಡಿಯುತ್ತ ಪ್ರೇಮ ಕವನವನ್ನು ಬರೆಯ ಹೊರಟ ಆಧುನಿಕ ಕನ್ಯೆಗೂ ಇದು ಸಮಾನವಾಗಿ ಅನ್ವಯಿಸುವಂತಹದು.

ಇನ್ನೀಗ ಕೆಲವು ಗದ್ಯ ಭಾಗಗಳನ್ನು ನೋಡೋಣ. ಎರಡನೆಯ ಅಂಕದ ಆರಂಭಕ್ಕೆ ಬರುವ ವಿದೂಷಕನ ಸ್ವಗತದ ಮಾತಿದು:

ಶೇಷಗಿರಿರಾಯ :

ಛೇ ನನ್ನ ಕರ್ಮಪ್ಪಾ! ಈ ಅರಸಿನ ಬ್ಯಾಟೀ ಕಾಲಾಗ ನಾನನಕಾ ದಣದ ಹೋದ್ನಿ. ಕಪವ ಚಿಗರಿ! ಕವವ ಕಾಡಂದಿ! ಕವವ ಹುಲಿ! ಅಂತ ವದರಾಡಿಕೊಂತ ಚೀರಾಡಿಕೊಂತ ಈ ಅಡವ್ಯಾಗಿಂದಾ ಆ ಅಡವಿ, ಆ ಅಡವ್ಯಾಗಿಂದೀ ಅಡವಿ ಓಡಿ ಓಡಿ ಸಾಕಾತ್ಯೋ ನಮ್ಮಪ್ಪಾ! ಬಿಸಿಲಂತಿ ಆಸಾಡಮಾಸ ಕೇಳೋದ್ಯೆನತಿ, ರಣರಣ ಕುಟ್ಟೇ ಕುಟ್ಟೆತತಿ; ಮದ್ಯಾಣದ್ಹೊತ್ತಿನ್ಯಾಗ ವಂದ ಜರಾ ಗಿಡದ ಬುಡಕ ಕುಂತೇನಂದರ ನೆಳ್ಳಾರ ಆತತೆ? ಅದೂ ಇಲ್ಲ. ನೀರಡಸಾನಾ ತೊಪ್ಪಲ ಬಿದ್ದ ಕೊಳತ ಹಳದಾನಾ ನೀರ ಕುಡ್ಯಾಣಾ, ಹಸುವಾಗಾಣಾ ಹೊತ್ತಲ್ಲದ್ಹೊತ್ತಿನ್ಯಾಗ ಹಸೆ ಖಂಡಾ ತಿನ್ನಾಣಾ ! ಇವನ ಕುದರೀ ಹಿಂದ ಓಡಿ ಓಡಿ ಕೈಕಾಲೆಲ್ಲಾ ಸಂದದಪ್ಪಿ ಹೋದವು. ರಾತರಿನ್ಯಾಗ ಕಣ್ಣ ತುಂಬಾ ನಿದ್ದ್ಯಾರ ಆಕ್ಕೈತೆ? ಅದೂ ಇಲ್ಲ. ಒಂದ ಜರಾ ಜಂಪ ಹತ್ತಿತ್ಯೊ ಇಲ್ಲೊ ಆಟರಾ ಬ್ಯಾಟೇ ಆಡೊ ಮಮ್ಮಕ್ಕಳು ವದರಾಡಿಕೊಂತ ಬಂಡಕ್ಯಾಸ ಎಬ್ಬಿಸಿದರ!

ಬಸವಪ್ಪ ಶಾಸ್ತ್ರಿ :

ಅಯ್ಯೋ ದೈವವೇ! ಬೇಟೆಯಲ್ಲೇ ಆಸಕ್ತನಾದ ಈ ರಾಯನ ಸ್ನೇಹದಿಂದ ಕೆಟ್ಟೆನಲ್ಲಾ! ಇದೋ ಹುಲ್ಲೆ! ಇದೋ ಹಂದಿ! ಇದೋ ಹುಲಿ! ಎನ್ನುತ್ತಾ ಮಧ್ಯಾಹ್ನದಲ್ಲಿಯೂ ಬೇಸಗೆಯಿಂದ ದಟ್ಟವಾಗಿ ಮರದ ನೆರಳಿಲ್ಲದ ಅಡವಿಗಳಲ್ಲಿ ಸುತ್ತಿ ಸಾಕಾಯಿತು. ಉದುರಿದೆಲೆಗಳಿಂದ ಒಗರಾಗಿ ಬೆಚ್ಚಗಿರುವ ಬೆಟ್ಟದ ಜೋಗಿನ ನೀರುಗಳನ್ನೆಲ್ಲಾ ಕುಡಿದುದಾಯಿತು. ಇದು ಹೊರತಾಗಿ ಹೊತ್ತುಗೊತ್ತಿಲ್ಲದೆ ಸುಟ್ಟ ಮಾಂಸವೇ ಹೆಚ್ಚಾಗಿರುವ ಆಹಾರವು ಭುಂಜಿಸಲ್ಪಟ್ಟಿತು. ಕುದುರೆಯ ಓಂದೋಡಿ ಶರೀರದ ಕೀಲುಗಳೆಲ್ಲಾ ಸಡಲಿ ನೋವಿನಿಂದ ರಾತ್ರಿಯಲ್ಲಿಯೂ ನಾನು ಚೆನ್ನಾಗಿ ಮಲಗಲಿಲ್ಲ. ಆಮೇಲೆ ಬೆಳಕು ಹರಿಯುವುದಕ್ಕಿಂತ ಮುಂಚೆಯೇ ಅರಣ್ಯವನ್ನು ಆಕ್ರಮಿಸುವ ತೊತ್ತಿನ ಮಕ್ಕಳಾದ ಹಕ್ಕಿಯ ಬೇಟೆಗಾರರ ಕಲಕಲ ಧ್ವನಿಯಿಂದ ಎಚ್ಚರವಾಯಿತು.

ಇವುಗಳಲ್ಲಿ ಒಂದು ಬಳಕೆವಾತಿನ ಗ್ರಾಮ್ಯ ಭಾಷೆಯಾಗಿದೆ. ಮೂಲದಲ್ಲಿ ವಿದೂಷಕನು ಕೆಳದರ್ಜೆಯ ಪಾತ್ರವಾಗಿ ಪ್ರಾಕೃತದಲ್ಲಿ ಮಾತಾಡುವನಾದ್ದರಿಂದ ಅಂಥ ಸಂದರ್ಭಗಳಲ್ಲಿ ಬಳಕೆಯ ನುಡಿಯಿಂದಲೇ ಸಂಭಾಷಣೆಯ ಸೊಗಸು ಹೆಚ್ಚುವುದೆಂದು ಶೇಷಗಿರಿರಾಯರು ಭಾವಿಸಿದ್ದರು. ಇತ್ತ, ಬಸವಪ್ಪ ಶಾಸ್ತ್ರಿಗಳದು ಶುದ್ಧ ಗ್ರಾಂಥಿಕ ಭಾಷೆ. ಆ ದೃಷ್ಟಿಯಿಂದ ಅವರ ಇನ್ನು ಕೆಲವು ಗದ್ಯ ಸಂಭಾಷೆಗಳನ್ನು ಪರಿಶೀಲಿಸತಕ್ಕದ್ದು.

ಶಕುಂತಲೆ : ಅತನುತಾಪಹರವಾದ ಲತಾಲಯುವೆ, ಪುನಶ್ಚ ಉಪಭೋಗಕ್ಕೋಸ್ಕರ ಪ್ರಸಂಗಿಸುವೆನು. (೩ನೇ ಅಂಕ)

ಶಕುಂತಲೆ : ಮುಖದಲ್ಲಿ ಮಧುವನ್ನೂ ಹೃದಯದಲ್ಲಿ ವಿಷವನ್ನೂ ಧರಿಸಿರುವ ಈತನ ಕೈ ಸೇರಿದುದಕ್ಕೆ ನಾನು ಸ್ವಚ್ಛಂದ ಚಾರಿಣಿಯಾದೆನು. (೪ನೇ ಅಂಕ)

ದುಷ್ಯಂತ : ಸುಲಭವಲ್ಲದ ಸ್ಥಾನವನ್ನು ಹಂದಿ ಜಾರಿದುದರಿಂದ ಈ ಉಂಗುರವು ದುಃಖಪಡಿಸತಕ್ಕುದಾಗಿದೆ. (೬ನೇ ಅಂಕ)

ಮಾತಲಿ : ಎಲೈ ಆಯುಷ್ಮಂತನೇ, ದೇವತೆಗಳಿಗೆ ತಾಯಿ ತಂದೆಗಳಾದ ಇವರು ಪುತ್ರವಾತ್ಸಲ್ಯವನ್ನು ಸೂಚಿಸುವ ಲೋಚನಗಳಿಂದ ನಿನ್ನನ್ನು ನೋಡುತ್ತಿರುವರು. ಆದುದರಿಂದ ಇವರ ಸಮೀಪವನ್ನು ಸೇರು. (೭ನೇ ಅಂಕ)

ಬಸವಪ್ಪ ಶಾಸ್ತ್ರಿಗಳು ರಂಗಭೂಮಿಗೆಂದೇ ಈ ನಾಟಕವನ್ನು ಸಿದ್ಧಗೊಳಿಸಿದ್ದರೂ ಅವರ ಯಶಸ್ವೀ ಪ್ರಯೋಗದ ದೃಷ್ಟಿಯಿಂದ ಅವರು ಗದ್ಯ ಸಂಭಾಷಣೆಗಳ ಕಡೆಗೆ ಗಮನ ಕೊಟ್ಟಿಲ್ಲ. ಆಧುನಿಕ ನಾಟಕ ಸಂಭಾಷಣೆಗಳ ಯಶಸ್ವಿತೆಯನ್ನು ನಿದರ್ಶಿಸುವಂತಹ ಬೇರೆ ನಾಟಕ ಪ್ರಯೋಗಗಳು ಅವರ ಕಣ್ಣಿಗೆ ಬಿದ್ದಿರಲಿಲ್ಲ. ಮೈಸೂರ ಸಂಸ್ಥಾನದಲ್ಲಿ ಅವರೇ ಈ ದಿಶೆಯಲ್ಲಿ ಮೊದಲಿಗರಷ್ಟೆ.

ಅನುವಾದಕರಿಬ್ಬರೂ ಸಂಸ್ಕೃತದಲ್ಲಿ ನಿಷ್ಣಾತರಿದ್ದು, ಶಾಕುಂತಲದ ಸ್ವಾರಸ್ಯವನ್ನು ಪೂರ್ಣವಾಗಿ ಗ್ರಹಿಸಿದ್ದುದರಲ್ಲಿ ಸಂದೇಹವಿಲ್ಲ. ಬಸವಪ್ಪ ಶಾಸ್ತ್ರಿಗಳು ಮೂಲವನ್ನು ಅನುಸರಿಸುವುದರ ಕಡೆಗೆ ಹೆಚ್ಚು ಗಮನವಿತ್ತು ತಮ್ಮ ಪ್ರೌಢ ಕವಿತ್ವ ರಚನೆಯಿಂದ ಕನ್ನಡಕ್ಕೆ ಶ್ರೇಷ್ಠವಾದ ಅಭಿಜಾತ ಸಾಹಿತ್ಯ ಕೃತಿಯೊಂದನ್ನು ನೀಡಿದ್ದಾರೆ ; ಶೇಷಗಿರಿರಾಯರ ಅನುವಾದದಲ್ಲಿ ಮೂಲ ಭಾವದ ವಿಸ್ತರಣೆ, ಪ್ರೇಕ್ಷಕರನ್ನು ಮೆಚ್ಚಿಸುವ ದೃಷ್ಟಿ ಮತ್ತು ಸಂಗೀತ ಪ್ರಿಯತೆ - ಇವು ಮುಖ್ಯ ಲಕ್ಷಣಗಳಾಗಿವೆ. ಪುಣೆ, ಮುಂಬಯಿಗಳಲ್ಲಿದ್ದುಕೊಂಡು ಮರಾಠೀ ನಾಟಕಗಳನ್ನು ನೋಡಿದ್ದವರಾಗಿ, ಜೊತೆಗೆ ನಮ್ಮ ಜಾನಪದ ರಂಗಭೂಮಿಯನ್ನೂ ಅರಿತವರಾಗಿ ಅವರು ರಂಗ ಪ್ರಯೋಗದ ಯಶಸ್ವಿತೆಯನ್ನು ತಮ್ಮ ಗಮನದಲ್ಲಿರಿಸಿಕೊಂಡಿದ್ದಾರೆ. ಸ್ವತಃ ಸಂಗೀತಲೋಲರಿದ್ದು ನಾಟಕದಲ್ಲಿ ಸಂಗೀತವು ಯಾವ ರೀತಿಯಲ್ಲಿ ಪ್ರೇಕ್ಷಕರನ್ನು ರಂಜಿಸಬಲ್ಲುದೆಂಬುದನ್ನು ಅವರು ಅರಿತಿದ್ದರು.

ಮೂಲವನ್ನು ಚಾಚೂ ತಪ್ಪದೆ ಅನುಸರಿಸಬೇಕೆಂಬ ಕಟ್ಟುನಿಟ್ಟನ್ನು ಶೇಷಗಿರಿರಾಯರು ಹಾಕಿಕೊಂಡಿರಲಿಲ್ಲ. ಸುಲಭವಾಗಿ ಕನ್ನಡದಲ್ಲಿ ತರಲಾಗದ ಅಂಶಗಳಿದ್ದರೆ ಅವನ್ನು ಬಿಟ್ಟದ್ದೂ ಇದೆ. ಉದಾಹರಣೆಗೆ ಮೊದಲನೆಯ ಅಂಕದಲ್ಲಿ ಶಕುಂತಲೆಯ ವರ್ಣನೆ ಮಾಡುವಾಗಿನ 'ಕಿಮಿವಹಿ ಮಧುರಾಣಾಂ ಮಂಡನಾಂ ಆಕೃತೀನಾಂ' ಎಂಬ ಸುಪ್ರಸಿದ್ಧ ಉಕ್ತಿಯನ್ನು ಅವರು ಅನುವಾದಿಸಿಲ್ಲ. (ಇಂಥ ಕೈಬಿಟ್ಟ ಸಂದರ್ಭಗಳು ಕಡಿಮೆಯೆಂಬುದನ್ನು ಗಮನಿಸುವುದು). ಜೊತೆಗೆ ಮೂಲದ ಭಾವವನ್ನು ವಿಸ್ತರಿಸುವುದರ ಕಡೆಗೆ ಹೆಚ್ಚು ಒಲವನ್ನು ತೋರಿದ್ದಾರೆ. ' ಪದವ ರಚಿಸುತಿಹಳು' ಎಂಬ ಪದ್ಯದಲ್ಲಿ ಇದನ್ನು ನಾವು ನೋಡಿದ್ದೇವೆ. ಆದರೆ ಹೀಗೆ ಮಾಡುವಾಗ ಎಲ್ಲ ಕಡೆಗೂ ಸಮಾನವಾಗಿ ಮೂಲದ ಉನ್ನತಿಕೆಯನ್ನು ಕಾಯ್ದುಕೊಳ್ಳುವುದಾಗಿಲ್ಲ.

ಅಲ್ಲಲ್ಲಿ ಉತ್ತರ ಕರ್ನಾಟಕದ ಆಡುಮಾತನ್ನೂ ಅವರು ಬಳಸಿದ್ದುದರಿಂದ ಅವರ ಗದ್ಯ ಸಂಭಾಷಣೆಗಳು ಸತ್ವಯುತವಾಗಿವೆ. ೫-೬ನೆಯ ಅಂಕಗಳ ನಡುವಿನ ಪ್ರವೇಶಕವನ್ನು ಹಿಗ್ಗಿಸಿ ಆಧುನಿಕ ನಾಟಕಗಳಲ್ಲಿಯಂತೆ ಸಹಜ ಸಂಭಾಷಣೆಯನ್ನು ತಂದಿದ್ದಾರೆ. ಮೀಂಗುಲಿಗನು ತನ್ನ ಮೀನದ ಉದ್ಯೋಗವನ್ನು ವರ್ಣಿಸುತ್ತಿದ್ದಾಗ ಕೊತವಾಲನು 'ಏನು ಮಹಾ ಪುಣ್ಯದ ಕೆಲಸ ನೀನು ಮಾಡೋದು' ಎಂದು ಹಂಗಿಸುತ್ತಾನೆ. ಆಗ ಮೀಂಗುಲಿಗನು 'ದೇವರೂ, ಅಜ್ಜ ಅರತೆಲಿ, ಮುತ್ಯ ಮುರತೆಲಿ ಇದೇ ವ್ಯಾರನೇ ಮಾಡತ ಬಂದೀವರಿ' ಎಂಬ ಮಾತಿನಲ್ಲಿ ದೇಸಿಯ ಸೊಗಸಿದೆ. ಎರಡನೆಯ ಅಂಕದಲ್ಲಿ ಅರಸನು ವಿದೂಷಕನಿಗೆ ಒಂದು ಸುಲಭವಾದ ಕಾರ್ಯದಲ್ಲಿ ತನಗೆ ಸಹಾಯಕನಾಗಬೇಕೆಂದು ವಿನಂತಿಸಿದಾಗ "ಏನು? ಮೋದಕವನ್ನು ತಿನ್ನುವುದರಲ್ಲೇ?" ಎಂದು ವಿದೂಷಕರು ಕೇಳುತ್ತಾನೆ. ಅದನ್ನು ಶೇಷಗಿರಿರಾಯನು ಭಾಷಾಂತರ ಮಾಡಿದ್ದು ಹೀಗೆ-

ವಿದೂ : ಏನಪಾ ಅದು? ಶಾವಿಗಿ ಉಣ್ಣೋದೇನು?

ರಾಜ : ಅಡವಿಯೊಳಗೆಲ್ಲಿ ಶಾವಿಗೆಯೊ? ನಿಲ್ಲು ಹೇಳತೇನಿ.

ಮೋದಕಕ್ಕಿಂತ ಶಾವಿಗೆಯನ್ನು ಉಣ್ಣುವುದು ಹಳ್ಳಿಗರಲ್ಲಿ ಹೆಚ್ಚು ರೂಢವಾದುದು. 'ಅಡವಿಯೊಳಗೆಲ್ಲಿ ಶಾವಿಗೆಯೊ?' ಎಂಬ ಸಹಜ ಮಾತು ಮೂಲದಲ್ಲಿ ಇಲ್ಲ. ಹೀಗೆ ಸಂಭಾಷಣೆಯ ರೀತಿಯನ್ನು ಆದಷ್ಟು ಜನಾಭಿಮುಖವನ್ನಾಗಿ ಮಾಡಬೇಕೆನ್ನುವ ವಾಸ್ತವ ದೃಷ್ಟಿಕೋನವನ್ನು ಶೇಷಗಿರಿರಾಯರಲ್ಲಿ ಪ್ರಥಮತಃ ಕಾಣುತ್ತೇವೆ. ಮುಂಬಯಿ ಕರ್ನಾಟಕದವರು ರಚಿಸಿದ ಅನಂತರದ ಪೌರಾಣಿಕ / ಐತಿಹಾಸಿಕ ನಾಟಕಗಳಲ್ಲಿ ಸಹ ಈ ಪ್ರವೃತ್ತಿಯನ್ನು ಅಲ್ಲಲ್ಲಿ ಗುರುತಿಸಬಹುದಾಗಿದೆ.

ಶಾಕುಂತಲದ ಇವೆರಡು ಅನುವಾದಗಳ ಬಗ್ಗೆ ಸಾರಾಂಶವಾಗಿ ಹೀಗೆ ಹೇಳಬಹುದು: ಮೂಲವನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಅತಿಯಾದಾಗ ಬಸವಪ್ಪ ಶಾಸ್ತ್ರಿಗಳ ಅನುವಾದವೂ, ಪ್ರೇಕ್ಷಕರ ದೃಷ್ಟಿಯಿಂದ ಭಾವವನ್ನು ವಿಸ್ತರಿಸಹೋದಾಗ ಶೇಷಗಿರಿರಾಯರ ಅನುವಾದವೂ ಅಲ್ಲಲ್ಲಿ ಅಸಮರ್ಪಕವಾಗಿವೆ. ಸಾಹಿತ್ಯಿಕ ದೃಷ್ಟಿಯಿಂದ ಬಸವಪ್ಪ ಶಾಸ್ತ್ರಿಗಳು ಪದ್ಯಗಳನ್ನು ಉತ್ಕೃಷ್ಟ ರೀತಿಯಲ್ಲಿ ಅನುವಾದಿಸಿದರು. ಆ ಪದ್ಯಗಳಲ್ಲಿ ಕಾಲಾಂಶದಷ್ಟನ್ನು ಹಾಡಿನ ರೂಪಕ್ಕೂ ತಿರುಗಿಸಿ ಟಿಪ್ಪಣಿಯೆಂದು ಕೊಟ್ಟು, ರಂಗಪ್ರಯೋಗದ ದೃಷ್ಟಿಯನ್ನು ವ್ಯಕ್ತಪಡಿಸಿದ್ದರೂ ಗದ್ಯ ಸಂಭಾಷಣೆಗಳತ್ತ ಆ ರೀತಿ ಗಮನವನ್ನು ಕೊಡಲಿಲ್ಲ. ಸಹಜ, ಸಜೀವ ಸಂಭಾಷಣೆಗಳನ್ನು ನಾವು ಶೇಷಗಿರಿರಾಯರಲ್ಲಿ ಯಥೇಚ್ಛವಾಗಿ ಕಾಣುತ್ತೇವೆ. ಹೀಗೆ ಒಬ್ಬರ ದೃಷ್ಟಿಯು ಮೂಲದ ಸಾಹಿತ್ಯ ಗುಣದ ಕಡೆಗಿದ್ದರೆ, ಇನ್ನೊಬ್ಬರದು ಅದರ ರಂಗಪ್ರಯೋಗದ ಕಡೆಗೆ ಹೆಚ್ಚಾಗಿ ವಾಲಿದ್ದಿತು. ಅವರಿಬ್ಬರ ದೃಷ್ಟಿಕೋನವೇ ಬೇರೆಯಾದುದರಿಂದ ಯೋಗ್ಯತೆಯಲ್ಲಿ ಒಂದು ಹೆಚ್ಚು, ಇನ್ನೊಂದು ಕಡಿಮೆ ಎಂದು ತೀರ್ಮಾನಿಸಹೋಗುವುದೆಂದರೆ ಮಲ್ಲಿಗೆ ಮತ್ತು ಸಂಪಿಗೆಗಳಲ್ಲಿ ಯಾವುದು ಹೆಚ್ಚು ಚಂದ ಎಂದು ಕೇಳಿದಂತೆಯೇ ಸೈ.

ಶೇಷಗಿರಿರಾಯರ ಕೃತಿಯಲ್ಲಿಯ ಪದ್ಯಗಳ ಬಗ್ಗೆ ಹೇಳಬೇಕಾದ ಇನ್ನೊಂದು ಮಾತಿದೆ. ಕಾಳಿದಾಸನ ೧೯೦ ಶ್ಲೋಕಗಳಲ್ಲಿ ೧೨೦ರಷ್ಟು ಪದ್ಯಗಳನ್ನು ಕಂದ, ಷಟ್ಪದಿ ಹಾಗೂ ವಿವಿಧ ಅಕ್ಷರ ವೃತ್ತಗಳಲ್ಲಿ ಅನುವಾದಿಸಿದ್ದು, ಅವುಗಳೊಳಗೆ ಕೆಲವು ಹಳಗನ್ನಡ ಕಾವ್ಯಗಳಲ್ಲಿ ಕಂಡು ಬರದ ಅಪೂರ್ವ ವೃತ್ತಗಳಾಗಿವೆ. (ಅಮೃತ ಧ್ವನಿ, ಮದಿರಾ, ವಿಭಾವರಿ, ಪ್ರಹರ್ಷಿಣಿ, ಕಾಮದೆ, ಯೂಥಿಕಾ ಇತ್ಯಾದಿ). ಯೂಥಿಕಾ ವೃತ್ತದ ಈ ಪದ್ಯವನ್ನು ಗಮನಿಸುವುದು:

ದೀರ್ಘ ಮಾದಗಸೆ ಬಾಗಿಲ ಹಿಂದಿಹ
ಅರ್ಗಳಾ, ಎನೆ ಕರಂಗಳ ತಾಳ್ದಿಹ
ಭರ್ಗನಂತಿವನ ಕೀರ್ತಿಯು ಪೃಥ್ವಿಗೆ
ಸ್ವರ್ಗದೋಳಿವನ ಧೀರತೆ ವಜ್ರಿಗೆ

ಇಲ್ಲಿ ಅಕ್ಷರ ಗಣಗಳ ಜೊತೆಗೆ ಮಾತ್ರಾಗಣವೂ ಬಿಟ್ಟಿನಲ್ಲಿ ಹೊಂದಿಕೊಂಡು ಆ ಮೂಲಕ ಗೇಯತೆಯ ಗುಣವನ್ನು ಕಾಯ್ದುಕೊಂಡದ್ದಿದೆ. ಅಮೃತಧ್ವನಿ ವೃತ್ತದಲ್ಲಿರುವ ಈ ಪದ್ಯವು ಹೃದ್ಯವಾಗಿದೆ:

ಚಿಕ್ಕಯ್ಯ ಕೇಳ್ ನಿನಗೆ ತಕ್ಕದ್ದೆ ಕಾರ್ಯವು ಇದಕ್ಕಾಗಿ ನಿಮ್ಮಿರಿಯರು
ಸೊರ್ಕಿರ್ದ ರಕ್ಕಸರ ಕಕ್ಕೌಂಚಿ ಕೊಂದು ನೆಲಕಿಕ್ಕುತ್ತ ಬಂದರವರು
ಕುಕ್ಕಿಂಗೆ ಬಚ್ಚಿಡುತಲಕ್ಕರ್ತೆಯಿಂ ಬಡವರಂ ಕಾಯ್ವುದೆಜ್ಞವಿದಕೆ
ದಿಕ್ಕೀಯೆ ಪೌರುವ ಕುಲಕ್ಕಿನ್ನದೇಂ ಬಹುದು ಮಿಕ್ಕಾದ ಭೂಪಜನಕೆ . (೨ನೇ ಅಂಕ)

ಆಶ್ರಮದ ತಾಪಸರು ದುಷ್ಯಂತನನ್ನು ಆಶೀರ್ವದಿಸುವ ಬಗೆಯಿದು. ಗಂಭೀರವಾದ ಸಂಸ್ಕೃತ ವೃತ್ತವನ್ನು ಸಾಮಾನ್ಯ ಪದಸರಣಿಯ ಕವಿತ್ವಕ್ಕೊ ಒಲಿಸಿಕೊಂಡುದಿದೆ. ಶ್ರೀ ವಾದಿರಾಜ ಕೃತ 'ಪ್ರೋಷ್ಟೀಶ ವಿಗ್ರಹಸು' ಎಂಬ ದಶಾವತಾರ ಸ್ತೋತ್ರದಂತೆಯೇ ಅಶ್ವಧಾಟಿಯಲ್ಲಿ ಇವನ್ನು ನುಡಿಸಬಹುದು. ಒಂದೆರಡು ಕಡೆಯಲ್ಲಿ ಬಂಧವು ಸಡಿಲವೆನಿಸಿದರೂ ಸಂಸ್ಕೃತ ವೃತ್ತಗಳನ್ನು ಕನ್ನಡ ಹಾಡುಗಾರಿಕೆಗೆ ಒಗ್ಗಿಸಿಕೊಳ್ಳಲು ಶೇಷಗಿರಿರಾಯರು ಮಾಡಿದ ಪ್ರಯತ್ನವು ಸ್ತುತ್ಯವಾದುದು.

ಮಿಕ್ಕುಳಿದ ೮೦ ಪದ/ಹಾಡುಗಳಲ್ಲಿಯಂತೂ ಗೇಯತೆ ಮೈವೆತ್ತು ನಿಂತಿದೆ. ಮುದವೀಡು ಕೃಷ್ಣರಾಯರು ಈ ನಾಟಕದ ೩ನೇ ಆವೃತ್ತಿಯ ಪೀಠಿಕೆಯಲ್ಲಿ ಹೇಳಿದಂತೆ, ಅನೇಕ ವರ್ಷಗಳ ವರೆಗೆ ಉತ್ತರ ಕರ್ನಾಟಕದ ಮನೆಮನೆಗಳಲ್ಲಿ, ಸಾರ್ವಜನಿಕ ಉತ್ಸವ-ಜಾತ್ರೆಗಳಲ್ಲಿ ಕೇಳಿ ಬರುವಷ್ಟು, ಈ ಹಾಡುಗಳು ಜನಜನಿತವಾಗಿದ್ದುವು.

ನಾಟಕದಲ್ಲಿ ಬರುವ ಹಾಡುಗಾರಿಕೆಗೆ ಇದಕ್ಕಿಂತ ಹೆಚ್ಚಿನ ಪ್ರಶಸ್ತಿ ಇನ್ನಾವುದಿದೆ? ಈ ಪದಗಳ ರಾಗ, ಲಯಗಳ ವೈವಿಧ್ಯವು ಬೆರಗುಗೊಳಿಸುವಂತಿದೆ. ಅವು ಜನತೆಯ ಬಾಯಿಯಲ್ಲಿ ನೂರಾರು ವರ್ಷಗಳಿಂದ ಉಳಿದುಕೊಂಡು ಬಂದವುಗಳು. ಶೇಷಗಿರಿರಾಯರ ಸಂಗೀತ ಪರಿಣತಿಗೆ ನಿದರ್ಶನವಾದ ಈ ಹಾಡುಗಳಿಂದ ಅವರ ನಾಟಕದ ಸತ್ವವು ಹಿರಿದೆನಿಸಿದೆ.

ಅನುಬಂಧ ೨

ಕನ್ನಡ ಭಾಷೆ
ಮೂಲ ಮರಾಠಿ ಲೇಖಕರು: ಶೇಷೋ ರಾಮಚಂದ್ರ ಚುರಮುರಿ
ಪ್ರಕಾಶಕರು : ವಿವಿಧ ಜ್ಞಾನ ವಿಸ್ತಾರ ಮಾಸಪತ್ರಿಕೆ
ಅಂಕು - ೬, ಪುಸ್ತಕ - ೧
ಡಿಸೆಂಬರ - ೧೮೬೭
ಪುಟ ನಂಬರ - ೮೫ ರಿಂದ ೮೯
ಕನ್ನಡ ಅನುವಾದಕರು: ಪ್ರಲ್ಹಾದ ಮುದಗಲ್ಲ

ನಮ್ಮ ದೇಶದಲ್ಲಿ ಬ್ರಿಟಿಷ್ ಸರಕಾರದ ರಾಜ್ಯ ಸ್ಥಾಪನೆಯಾದಂದಿನಿಂದ ವಿದ್ಯಾ ಸಂಪಾದನೆಯಲ್ಲಿ ಸುಧಾರಣೆ ಉಂಟಾಗಿದೆ. ಹೊಸ ಹೊಸ ಶೋಧಗಳೂ ಸಾಗಿವೆ. ಆಂಗ್ಲರು ಕೈಕೊಳ್ಳುವ ಶೋಧಗಳು ಪ್ರಶಂಸನೀಯವಾಗಿರುತ್ತವೆ. ಅವರಿಗೆ ಈ ಕಾರ್ಯದಲ್ಲಿ ರಾಜ್ಯಾಧಿಕಾರಿಗಳ ಬೆಂಬಲವಿದ್ದು, ಅವರು ಕೈಕೊಂಡ ಶೋಧಗಳು ಆಧಾರಯುಕ್ತವಾಗಿರುತ್ತವೆ. ಈ ಬಗ್ಗೆ ಸಂಶಯವಿಲ್ಲ. ಹೀಗಿದ್ದರೂ ಪಾಶ್ಚಿಮಾತ್ಯರು ಕೈಕೊಂಡ ಎಲ್ಲ ಶೋಧಗಳು ಸಮಂಜಸವಾಗಿರುತ್ತವೆ ಎಂದು ತಿಳಿಯುವುದೂ ಮತ್ತು ಆ ಶೋಧಗಳ ಬಗ್ಗೆ ಮತ್ತಷ್ಟು ಸಂಶೋಧನೆ ಕೈಕೊಳ್ಳುವುದು ಅವಶ್ಯವಿಲ್ಲ ಎಂದು ಕಲ್ಪಿಸುವುದೂ ಹುಚ್ಚುತನವಾಗಿದೆ. ಭರತಖಂಡದ ಬಗ್ಗೆ ಆಂಗ್ಲರು ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ, ಮಾತ್ರವಲ್ಲ ಅವೆಲ್ಲವೂ ನಮ್ಮ ದೇಶದ ಪಂಡಿತರ ವಿಚಾರಗಳಿಗೆ ಸರಿಸಮಾನವಾಗಿರುತ್ತವೆ. ಓರ್ವ ಯೂರೋಪ್ ಖಂಡದ ವಿದ್ವಾಂಸ, ಹಿಂದುಸ್ಥಾನದ ವಾಸ್ತವ್ಯ ಕಾಲದಲ್ಲಿ ತನಗೆ ಅರಿವಾದ ಸತ್ಯಾಸತ್ಯದ ವಿಚಾರಗಳನ್ನು ತನ್ನ ಮಾತೃಭೂಮಿಗೆ ಮರಳಿದ ಬಳಿಕ ವ್ಯಕ್ತಪಡಿಸುತ್ತಾನೆ. ಅದನ್ನೇ ಆಧಾರವಾಗಿ, ಆತನ ದೇಶದ ಪಂಡಿತರು ತಮ್ಮ ಕಲ್ಪನೆಯ ಹಿನ್ನೆಲೆಯಲ್ಲಿ ಬೇರೊಂದು ಗ್ರಂಥವನ್ನು ರಚಿಸುತ್ತಾರೆ. ಒಂದು ವೇಳೆ, ಮೂಲ ಲೇಖಕನು, ಪ್ರಸಿದ್ಧ ಪುರುಷನಾಗಿದ್ದಲ್ಲಿ, ಆತನು ಹೇಳಿದುದೆಲ್ಲ ಬೇರೂರಿಬಿಡುವುದು. ಪರಿಣಾಮ, ಕಲ್ಪನೆಯ ಮೇಲೆ ಕಲ್ಪನೆ ರಚಿಸಲಾಗುವುದು. ಯಾವುದರ ಬಗ್ಗೆ ಹಿಂದುಸ್ಥಾನದಲ್ಲಿ ವಾಸ್ತವಿಕವಾಗಿ ಮಾನ್ಯವಿದೆಯೋ, ಸಿದ್ಧಗೊಳಿಸಲು ಯಾವ ತೊಂದರೆ ಇರುವದಿಲ್ಲವೋ, ಅದು ಹಾಗಿಲ್ಲ, ತಪ್ಪಿರುದ್ಧವಾಗಿದೆ ಎಂಬ ವಿಚಾರಗಳು ಅವರ ಪಾಂಡಿತ್ಯದ ಪ್ರಭಾವದಿಂದ ಜನುಮ ಪಡೆಯುವದು. ತಪ್ಪಿರುದ್ಧ ವಿಚಾರಗಳು ಮಾನ್ಯವಾದ ಬಳಿಕ ಹಿಂದುಸ್ಥಾನದಲ್ಲಿ, ಮೂಲದಲ್ಲಿದ್ದ ವಿಚಾರಗಳೆಲ್ಲವೂ ಅಸತ್ಯವಾಗಿ ತೋರುವುವು. ಆಂಗ್ಲರು ತಾವು ನಿಶ್ಚಯಿಸಿದುದೇ ಸತ್ಯ ಎಂಬುದನ್ನು ಹಿಂದುಸ್ಥಾನದ ಜನರಿಗೆ ಉಪದೇಶಿಸಲು ಪ್ರಾರಂಭಿಸುತ್ತಾರೆ. ಉದಾಹರಣೆಗಾಗಿ, ಸದಾಕಾಲ ಬಳಕೆಯಲ್ಲಿದ್ದ 'ಹಿಮಾಲಯ' ಈ ಶಬ್ದದ ಉಚ್ಚರಣೆ 'ಹಿಮಲೇಯಾ' ಎಂದು ಮಾಡಬೇಕು ಎಂದು ಉಪದೇಶ ಮಾಡುವ ಈ ಪರದೇಶದ

ಪಂಡಿತರು ಅನೇಕರಿದ್ದಾರೆ. ಜರ್ಮನ್ ಪಂಡಿತ ಬೇನ್ಫೀ ಈತನಿಗೆ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿರುವೆನೆಂಬ ಗರ್ವವಿದೆ. "ಟ, ಠ, ಡ, ಢ ಣ ಇವುಗಳ ಉಚ್ಚರಣೆ ಹಲ್ಲುಗಳ ಮೇಲಿನ ತಾಲವ್ಯದ ಭಾಗವಾಗಿದೆ. ನಾಲಗೆಯನ್ನು ಮೇಲ್ಭಾಗಕ್ಕೆ ದತ್ತಿ ಹಿಂದೂ ಜನರು ಉಚ್ಚರಿಸುವರು" ಎಂದು ಬೇನ್ಫೀ ವ್ಯಕ್ತಪಡಿಸಿದ್ದಾನೆ. ಸಂಸ್ಕೃತ ಭಾಷೆಯಲ್ಲಿಯ ತಧದಧನ ಇವುಗಳಿಗೆ ಅನುಕ್ರಮವಾಗಿ ರಕಾರವನ್ನು ಜೋಡಿಸಿದರೆ ತ್ರ ಧ್ರ ದ್ರ ಧ್ರ ನ್ರ ಹೀಗೆ ಉಚ್ಚಾರವಾಗುವದು; ಎಂದು ಬೇನ್ಫೀಯ ವಿಚಾರವಾಗಿರಬಹುದು. ಆದರೆ ಇವು ಪ್ರಾಥಮಿಕ ಉಚ್ಚರಣೆಗಳಾಗಿರುವದಿಲ್ಲ. ಜೋಡಾಕ್ಷರಗಳಂತೆ ಸಂಯುಕ್ತವಾಗಿರಲೂಬಹುದು. ಬೇನ್ಫಿಯ ಸಮಕಾಲೀನ ಮ್ಯಾಕ್ಸಮುಲ್ಲರ "ಸಂಸ್ಕೃತ ಭಾಷೆಯ ದೇವನಾಗರಿ ಲಿಪಿ ಭರತಖಂಡದಲ್ಲಿ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಬಂದಿದೆ ಎಂಬುದು ಅಸಂಭವನೀಯ" ಎಂದು ಹೇಳುತ್ತಾನೆ. ಅವನು ಪ್ರಾಚೀನ ಕಾಲದಲ್ಲಿ ದೊರೆತ ಕೆಲವು ತಾಮ್ರಪಟಗಳನ್ನು ಇದೆಲ್ಲಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದಾನೆ. ದೊರೆತ ಕೆಲವು ತಾಮ್ರಪಟಗಳಲ್ಲಿ ಒಂದೆರಡು ಸಂಸ್ಕೃತ ಭಾಷೆಯಲ್ಲಿವೆ. ಬೇರೆ ತಾಮ್ರಪಟಗಳಲ್ಲಿ ಯವನರ ಲಿಪಿಯಂತೆ ಇರುವದಲ್ಲದೆ, ಆ ಲಿಪಿ ಬಲದಿಂದ ಪ್ರಾರಂಭವಾಗಿ ಎಡಗಡೆಗೆ ಮುಕ್ತಾಯವಾಗುತ್ತದೆ. ಆದುದರಿಂದ ದೇವನಾಗರಿ ಲಿಪಿಯೂ ಸಹ ಇದೇ ಲಿಪಿಯಿಂದ ಜನುಮ ಪಡೆದಿರಬಹುದು. ಇದೆಲ್ಲಕ್ಕೆ ವಿಶೇಷ ಆಧಾರವಾಗಿ, ದೇವನಾಗರಿ ಲಿಪಿಯಲ್ಲಿ ಊಕಾರ, ಡಕಾರ ಇತ್ಯಾದಿ ಕೆಲವು ಅಕ್ಷರಗಳ ವಲವು ಎಡಭಾಗಕ್ಕೆ ಇರುವದು. ಮೂಲ ಲಿಪಿಯಿಂದ ಬೇರೊಂದು ಲಿಪಿಯು ಹೊರಬರುವಾಗ್ಗೆ ಅದರ ರೂಪವು ಯಾವ ಯಾವ ರೀತಿಯಿಂದ ಕ್ರಮಶಃ ಪರಿವರ್ತನೆ ಹೊಂದುತ್ತ ಸಾಗಿತು ಎಂಬುದರ ಬಗ್ಗೆ ಇನ್ನೂವರೆಗೆ ಸಂಶೋಧನೆ ಉಂಟಾಗಿಲ್ಲ ಎಂಬ ಸಂಗತಿಯನ್ನು ಮ್ಯಾಕ್ಸಮುಲ್ಲರ ವಪ್ಪಿಕೊಳ್ಳುತ್ತಾನೆ. ಮ್ಯಾಕ್ಸಮುಲ್ಲರ ತನ್ನ ವಿಚಾರಗಳಿಗೆ ನೀಡಿದ ಆಧಾರಗಳ ಮೇಲಿಂದ, ಆತ ನಿಶ್ಚಯಿಸಿದುದನ್ನು ನೋಡಿ ನಗೆ ಬರುವದು. ಆಶ್ಚರ್ಯದ ಸಂಗತಿಯೆಂದರೆ ಮ್ಯಾಕ್ಸಮುಲ್ಲರನ ವಿಚಾರಗಳನ್ನು ಆತನ ಸಮಕಾಲೀನ ಅನುಯಾಯಿ ಪಂಡಿತರು ತಮ್ಮಯ ಅಭಿಪ್ರಾಯವನ್ನೂ ಅದೇ ತಳಹದಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ " ಜಗತ್ತಿನಲ್ಲಿಯ ಓರ್ವ ಪಂಡಿತನಿಗೆ ಒಂದು ವಿಷಯದಲ್ಲಿ ವಿಶೇಷ ಪ್ರಾವಿಣ್ಯ ಪ್ರಾಪ್ತಿಯಾಗಿಲ್ಲ ಎಂದು ಕಲ್ಪಿಸೋಣ. ಅಂತಹನು ಆ ವಿಷಯದ ಮಟ್ಟಿಗೆ ಅಜ್ಞಾನಿಯೇ ಸರಿ" ಎಂದು ಹೇಳುವುದರಲ್ಲಿ ಆ ಪಂಡಿತನ ಅಪಮಾನ ಕೈ ಕೊಂಡಂತೆ ಆಗುವುದಿಲ್ಲ ಎಂಬ ವಿಚಾರವೂ ಬರುತ್ತದೆ.

ಮೇಲೆ ಉಲ್ಲೇಖಿಸಿದ ಪ್ರಮೇಯಕ್ಕೆ ಕಾರಣಗಳೂ ಇವೆ. ಯುರೋಪ ಖಂಡದ ಭಾಷಾಪಂಡಿತರು ದಕ್ಷಿಣ ದೇಶದ ಕನ್ನಡ, ತಮಿಲ, ತೆಲಗು ಇತ್ಯಾದಿ ಭಾಷೆಗಳ ಮೂಲ ಸಂಬಂಧ, ಸಂಸ್ಕೃತ ಮತ್ತು ಆರ್ಯಭಾಷೆಗಳೊಡನೆ ಇರದೇ ಬೇರೊಂದು ಬೀಜದಿಂದ ಉತ್ಪನ್ನವಾಗಿದೆ. ಅವುಗಳ ನಿಕಟ ಸಂಬಂಧ ಚೀನಿ (ಮಂಗೋಲಿಯನ್) ಭಾಷೆಯೊಡನೆ ಇರುವದು, ಎಂದು

ಅಭಿಪ್ರಾಯ ಪಟ್ಟಿದ್ದಾರೆ. ಸದ್ಯ ತಮಿಲ, ತೆಲುಗು ಭಾಷೆಗಳ ಬಗ್ಗೆ ವಿಚಾರ ಮಾಡದೇ, ಕೇವಲ ಕನ್ನಡ ಭಾಷೆಯ ಬಗ್ಗೆ ವಿಚಾರ ಕೈಕೊಳ್ಳಲಾಗಿದೆ. ಈ ವಿಚಾರದಲ್ಲಿ ಕನ್ನಡ ಭಾಷೆಯ ಸಂಬಂಧ ಆರ್ಯಭಾಷೆಯೊಡನೆ ಸಾಕಷ್ಟು ಇದೆ ಎಂಬುದು ಕಂಡು ಬರುವದು.

ಯುರೋಪ ಖಂಡದ ಭಾಷಾ ಪಂಡಿತರು, ಕನ್ನಡ ಭಾಷೆಯಲ್ಲಿ ಬಳಸಲಾದ ಸಂಸ್ಕೃತ ಶಬ್ದಗಳು ಹಿಂದುಗಡೆ ಸೇರಿಕೊಂಡಿವೆ. ಅದಕ್ಕೂ ಮೊದಲು ಕನ್ನಡ ಭಾಷೆಯ ಸ್ವರೂಪ ಬೇರೆಯಾಗಿತ್ತು ಎಂಬ ವಿಚಾರದವರಾಗಿದ್ದಾರೆ. ಹಾಗಾದರೆ ಅವರ ಈ ವಿಚಾರ ಉತ್ತರದ ಮರಾಠೀ, ಹಿಂದೀ, ಬಂಗಾಲೀ ಇತ್ಯಾದಿ ಭಾಷೆಗಳಿಗೂ ಅನ್ವಯಿಸುವುದು; ಇದರಲ್ಲಿ ಸಂಶಯವಿಲ್ಲ. ಸಂಸ್ಕೃತ ಭಾಷೆಯಿಂದ ಅಪಭ್ರಂಶವಾಗಿ ಬಾಲಭಾಷೆ ಹೊರ ಬಂದಿತು. ಈ ಸಮಯ ಇತ್ತೀಚಿನ ಮರಾಠೀ ಮತ್ತು ಬೇರೆ ಭಾಷೆಗಳಲ್ಲಿ ಸಾಕಷ್ಟು ಸಂಸ್ಕೃತ ಶಬ್ದಗಳು ಪ್ರಚಾರದಲ್ಲಿದ್ದವು. ಆದರೆ ಕನ್ನಡ ಭಾಷೆಯ ಪರಿಸ್ಥಿತಿ ಈ ರೀತಿಯದಾಗಿದ್ದಿಲ್ಲ. ಬಾಲ ಭಾಷೆಯಲ್ಲಿಯ ಎಲ್ಲ ಶಬ್ದಗಳು ಸಂಸ್ಕೃತ ಭಾಷೆಯ ದೃಷ್ಟಿಕೋನದಲ್ಲಿ ಅಶುದ್ಧ ಮತ್ತು ತೊದಲು ಆಗಿರುತ್ತವೆ. ಕಾಲಾಂತರದಿಂದ ಬಾಲ ಭಾಷೆಯಲ್ಲಿಯ ಶಬ್ದಗಳು ಶುದ್ಧ ಸಂಸ್ಕೃತ ರೂಪಗಳೊಡನೆ ಬೆರೆತುಕೊಂಡು ಇಂದಿನ ಮರಾಠೀ ಭಾಷೆ ನಿರ್ಮಾಣವಾಗಿದೆ. ಇದೇ ಸಂಗತಿ ಕನ್ನಡ ಭಾಷೆಗೂ ಅನ್ವಯಿಸಬಹುದು. ಕೆಲವು ಸಮಯದವರೆಗೆ ಕನ್ನಡ ಭಾಷೆಯಲ್ಲಿ ಬೆರೆತುಕೊಂಡ ಸಂಸ್ಕೃತ ಶಬ್ದಗಳನ್ನು ಬದಿಗಿಟ್ಟರೆ, ಇನ್ನುಳಿದ ಶಬ್ದಗಳು ಬಾಲ ಭಾಷೆಯ ಮಾದರಿಯವೇ ಆಗಿರುತ್ತವೆ ಎಂಬುದು ಕಂಡುಬರುತ್ತದೆ. ನಮಗೆ ಬಾಲಭಾಷೆಯ ಶಬ್ದಗಳಂತೆ, ಇಲ್ಲಿ ಸಹ ದ್ವಿತ್ವ ಅಕ್ಷರಗಳು ಸೇರಿಕೊಂಡುದುದು ಕಾಣುವುದು, ಮಾತ್ರವಲ್ಲ ಸಾಕಷ್ಟು ಶಬ್ದ ಮತ್ತು ಪ್ರತ್ಯಯಗಳು ಬಾಲ ಭಾಷೆಯಲ್ಲಿಯ ಶಬ್ದ ಮತ್ತು ಪ್ರತ್ಯಯಗಳೊಡನೆ ಒಂದುಗೂಡುತ್ತವೆ. ಉದಾ:

ಕನ್ನಡ	ಬಾಲಭಾಷೆ	ಮರಾಠಿ
ಬಣ್ಣ	ಬಣ್ಣೊ	ವರ್ಣ (ರಂಗ)
ಅಯ್ಯ, ಅಜ್ಜ	ಅಜ್ಜೋ	ಆರ್ಯ, ಅಜಾ
ಬಳ್ಳಿ	ಬಲ್ಲೀ	ಬೇಲ
ಬಮ್ಹ	ಬಹ್ಮ	ಬ್ರಹ್ಮಾ
ಬಗ್ಗ	ವಾಗ್ಗೊ	ವಾಘ
ಆಶ್ಚರ್ಯ	ಆಶ್ಚಿರ್ಯ	ಆಶ್ಚರ್ಯ
ಮೊಗ	-	ಮುಖ
ಶೆಟ್ಟಿ	-	ಬೀಥಿ (ಬೀದಿ - ಮಾರ್ಗ) ಮಾರ್ಗ
ಓಣಿ	-	ಆಳಿ
ತೆಂಕಣ	-	ದಕ್ಷಿಣ
ಅಗ್ಗ	ಅಗ್ಗೊ	ಅರ್ಘ (ಸ್ವಸ್ತಿಕಿಮ್ಮತ್)

ಬಸವ	ಬಸಹೊ	ವೃಷಭ
ಬೇಸಿಗೆ	-	ವೈಶಾಖ
ಪರುಶ	-	ಸ್ಪರ್ಶ (ಪರೀಸ)
ಹೊಳಿಗಿ	-	ಪೋಲಿಕಾ (ಪೋಳೀ)
ಹಕ್ಕಿ	-	ಪಕ್ಷಿ
ಹಣ	-	ಪಣ (ದ್ರವ್ಯ)
ಉಂಗೂರ	ಅಂಗುಳಿ	ಅಂಗರೀ
ಬಗ್ಗು	-	ಬಾಗ (ವಾಂಕ)
ಅಚ್ಚು	-	ಅಕ್ಷ (ಅಂಸ)
ಹಾವು	ಸಪ್ಪೊ	ಸರ್ಪ

ಇತ್ಯಾದಿ - ಇತ್ಯಾದಿ

ಈ ವಿವೇಚನೆಯ ಮೇಲಿಂದ ಕನ್ನಡ ಲಿಪಿ ದೇವನಾಗರಿ ಲಿಪಿಯಿಂದ ಅಸ್ತಿತ್ವದಲ್ಲಿ ಬಂದಿದೆ ಎಂಬುದು ನಿಶ್ಚಿತವಾಗುತ್ತದೆ.

ಜಾಲ ಭಾಷೆಯಲ್ಲಿಯ ಶಬ್ದಗಳು ಇತ್ತೀಚೆಗೆ ಕನ್ನಡ ಭಾಷೆಯಲ್ಲಿ ಸೇರಿ ಕೊಂಡಿರಬಹುದು, ಎಂದು ಯಾರಾದರೂ ಆಕ್ಷೇಪ ವ್ಯಕ್ತಪಡಿಸಬಹುದು. ಅವರ ಈ ವಿಚಾರಕ್ಕೆ ಬೇರೊಂದು ಸಮರ್ಥನೆಯೂ ಇದೆ. ಕನ್ನಡ ಭಾಷೆಯಲ್ಲಿ ಸಾಕಷ್ಟು ಪುರಾತನ ಶಬ್ದಗಳಿವೆ. ಅವು ಸದ್ಯ ಹೆಚ್ಚಾಗಿ ಬಳಕೆಯಲ್ಲಿ ಇರುವುದಿಲ್ಲ. ಅವುಗಳಿಗೆ ಹಳೆಗನ್ನಡವೆಂದೂ ಕರೆಯುತ್ತಾರೆ. ಆ ಶಬ್ದಗಳು, ಲ್ಯಾಟಿನ್ ಭಾಷೆಯಲ್ಲಿಯ ಶಬ್ದಗಳ ಉಚ್ಚಾರಕ್ಕೂ, ಅರ್ಥಕ್ಕೂ ಒಳಪಟ್ಟಿರುತ್ತವೆ. ಲ್ಯಾಟಿನ್ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವಂತೂ ಅರಿತ ವಿಷಯ. ಕನ್ನಡ ಭಾಷೆ ಆರ್ಯ ಕುಟುಂಬದ್ದಾಗಿದೆ. ಅಥವಾ ಇಲ್ಲವೆಂಬ ವಿಚಾರ ಇವರ ಮೇಲಿಂದ ನಿಶ್ಚಯಿಸಬಹುದು.

ಕನ್ನಡ	ಮರಾಠೀ ಅರ್ಥ	ಲ್ಯಾಟಿನ್ ಶಬ್ದ	ಅರ್ಥ
ಬೇಲೀ	ಕಿಮ್ಮತ್	ಅಬೇಲಿನೋ	ವಿಕಣೆ
ಓರಟೀ	ಹಟ್ಟೀ (ಮುಲಗಾ)	ಆಬೋಟ್ರೋ	ಭಲತೀಕಡೆ ಜಾಣೆ
ಬಿರಿ	ಆವೋಆಪ ಫೊರಣೆ ಆವೊ ಆಸ ಫುಲಣೆ	ಅಬ್ರೀರೀ	ಫುಟಣೆ
ಕರಿ	ಬೋಲಾವಣೆ	ಆಕ್ಸೀರೀ	ಬೋಲಾವಣೆ
ಕಿಸಿ	ಬಾಸಣೆ	ಆಕ್ಸೈಸಸ್	ಛಾಟಲೇಲಾ
ಕೆಡವು	ಪಾಡಣೆ	ಅಕ್ಸೈಡೊ	ಪಾಡಣೆ
ಆಟ	ಖೇಳ	ಆ್ಯಮ್	ನಾಟಕಾಚಾ ಅಂಕ
ಆಮಾ (ತಮಿಲ)	ಹೋಯ	ಐಮೋ	ಹೋಯ

ಆದರ	ಆದರ	ಆದೋರೋ	ಮಾನದೇಣೆ
ಆಂ	ಘೊಟಣೆ	ಆಪ್ರಿಯೋ	ಪೂಡಕರಣೆ
ಅಗ್ಗ	ಸವಂಗ	ಅಗ್ಗೀರೋ	ರಾಸಕರಣೆ
ಅಲ್ಲಿ	ತೇಥೇ	ಅಲಿಯೊ	ಅನ್ಯತ್ರ
ಕೊಂಚ (ತೆಲುಗು)	ಥೋಡೆ	ಅಲಿಕಾಂಟೊ	ಥೋಡೆಸೆ
ಗಂಟು	ಗಾಠ	ಅಲಿಗೇಟೂರಾ	ಗಾಂಠ
ಅಳತಿ	ಮಾಪ	ಅಲ್‌ಟಿ	ಉಂಚ
ಇಡು	ಠೇವಣಿ	ಅಲ್ಟೈಡೊ	ಆಪಟಣೆ
ಹೊಳ್ಳು	ಪೋಕಳ	ಹ್ಯಾಲೋ(ಇಂಗ್ಲೀಷು)	ಪೋಕಳ
ಬಯಿಸು	ಇಚ್ಚಿಣೆ	ಅಂಬಿಶಿಯೋ	ಮೋಠಾಲೋಭ
ಸೂಳೀ	ಶಿನಳ	ಅನ್ಸಿಲಾ	ದಾಸೀ
ಎಲ್ಲ	ಸರ್ವ	ಆಲ (ಇಂಗ್ಲೀಷು)	ಸರ್ವ
ಏನೋ	ಕೋಣ ಜಾಣೆ	ಆನ	ಕೋಣಜಾಣೆ
ನೋಟ	ದೃಷ್ಟಿ	ಆನೋಟೋ	ಪಾಹಣೆ
ಹಿರಿ, ಹಿರಿ	ಓಢಣೆ ಜೋರಾನೆ ಬಾಹೇರ ಕಾಢಣೆ	ಆಪಿರಿಯೊ	ಉಗಡೀಸ ಆಣನೇ
ಅಂಡಿಗಿ	ಮಾಪ (ಸೊಳಾ ಪೌಯಲೀಚೆ)	ಅಡ್ಯಾಗಿರಿ	ರಾಸಕರಣೆ
ಪೇಳು	ಸಾಂಗ	ಅಪೇಲೋ	ಮ್ಹಣನೆ, ಸಾಂಗಣೆ
ರೆಂಟಿ	ನಾಂಗರ	ಅರೆಟಿಓ	ನಾಂಗರಣೆ
ಅಡ್ರಾಸು	ಘಾರಚ ಆಶಾ ಕರೂನರಾಹಣೆ	ಅಡ್ರಾರ್ಸಮ್ ಉತ್ಸಕ ದೋಸೆ	ಆಶೀಸಯೇಣೆ
ಆರಹಾಕು	ವಾಳತಟಾಕಣೆ	ಅರಿಪಶ್ಯಾರ್ಕೊ	ವಾಳವಿಣೆ
ಅರಸು	ರಾಜಾ	ಆರ್ಕಸ್	ರಾಜಾ - ಮುಖ್ಯ ಅಧಿಕಾರಿ
ಆರು	ವಾಳೆಣೆ	ಆರಿಓ	ವಾಳಣೆ
ಇರಿ	ಟಕ್ಕರ ಮಾರಣೆ	ಆರೆವ್ಹೋ	ಪಾಡಾವಕರಣೆ
ತಾಳು	ಧಾರಣಕರಣೆ ಸಹನಕರಣೆ	ಅತೋಲೆ	ಉಚಲಣೆ
ಅವ್ವ	ಆಯೀ	ಅವ್ವಾಯಾ	ಆಜೀ
ಹೀರು	ಆಕರ್ಷಣಕರಣೆ	ಘೀರೋ	ಘೇವೂನ ಜಾಣೆ

ಮೇಲಿನ ವಿವೇಚನೆಯಿಂದ ಲ್ಯಾಟಿನ್ ಭಾಷೆ ಮತ್ತು ಸಂಸ್ಕೃತ ಭಾಷೆಗಳಲ್ಲಿಯ ಪರಸ್ಪರ ಸಂಬಂಧ ಸಾವಿರಾರು ವರುಷಗಳ ಹಿಂದಿನ ಕಾಲದ್ದಾಗಿದೆ ಎಂಬುದು ಕಂಡು ಬರುವದು. ಕನ್ನಡದಲ್ಲಿಯ ವಿಭಕ್ತಿಗಳ ರೂಪ ಸಂಸ್ಕೃತದ ಆಧಾರದ ಮೇಲಿಂದ. ಬಾಲಭಾಷೆಯ ಮುಖಾಂತರ ರೂಪಗೊಂಡಿದೆ ಎಂಬುದೂ ಸ್ಪಷ್ಟವಾಗುತ್ತದೆ. ನಮಗೆ ಮರಾಠೀ ಭಾಷೆಯು, ಕನ್ನಡ ಭಾಷೆಗಿಂತ, ಸಂಸ್ಕೃತ, ಭಾಷೆಯ ತೀರ ಸಮೀಪ ಇದೆ ಎಂಬುದೂ ಕಂಡುಬರುವದು. ಕನ್ನಡ ಭಾಷೆಯ ಪರಿಸ್ಥಿತಿ ಈ ಸಂದರ್ಭದಲ್ಲಿ ಮರಾಠೀ ಭಾಷೆಗಿಂತ ಕನಿಷ್ಠವಾಗಿದೆ. ಮರಾಠೀ ಭಾಷೆ ಬಾಲ, ಭಾಷೆಯಿಂದ ಹೊರಬಂದು, ಪುನರಪಿ ಸಮಾಗಮದಿಂದ ಬಾಲಭಾಷೆಗಿಂತಲೂ ಮೇಲ್ ತರಗತಿಎ ಹೋಗಿದೆ. ಕನ್ನಡ ಭಾಷೆಯ ಬಗ್ಗೆ ಹೇಳುವುದಾದಲ್ಲಿ ಅದು ಬಾಲಭಾಷೆಗಿಂತ ಕೊನೆಯ ಸ್ತರಕ್ಕೆ ತಲುಪಿ ಅದರಲ್ಲಿಯ ಒತ್ತ ಅಕ್ಷರಗಳ ಉಚ್ಚಾರ ಸಾಕಷ್ಟು ಉಂಟಾಗಿ, ಸಂಸ್ಕೃತದ ಸಂಬಂಧ ದಿನದಿನಕ್ಕೆ ಕಡಿಮೆಯಾಗತೊಡಗಿತು. ಇಂತಹ ಒಂದು ಸ್ಥಿತಿಯಲ್ಲಿ ಸಾಕಷ್ಟು ಕಾಲದವರೆಗೆ ಅದು ಉಳಿದ ಬಳಿಕ, ಪುನರಪಿ ಶುದ್ಧ ಸಂಸ್ಕೃತ ಶಬ್ದಗಳು ಸೇರಿಕೊಳ್ಳಲಾಗಿ, ಪುರಾತನ ಶಬ್ದಗಳು ಬೇರೆಯಾಗಿ ಕಾಣತೊಡಗಿದವು. ಇಂದಿನವರೆಗೆ, ಸಾವಿರಾರು ಕನ್ನಡ ಶಬ್ದಗಳು ಬೇರೊಂದು ಭಾಷೆಯಿಂದ ಉಗಮವಾಗಿವೆ ಎಂಬ ಕಲ್ಪನೆ ಅಸ್ತಿತ್ವದಲ್ಲಿ ಇತ್ತು. ಅದರಲ್ಲೂ ಹೆಚ್ಚಾಗಿ ಆರ್ಯ ಕುಟುಂಬದಲ್ಲಿಯ ಭಾಷೆಯೊಡನೆ ಇರುವದು ಎಂಬುದು ಸ್ಪಷ್ಟವಾಗುತ್ತದೆ. ಇದಲ್ಲದೆ ಸಾಕಷ್ಟು ಕನ್ನಡ ಶಬ್ದಗಳ ಉಗಮ ಸಂಸ್ಕೃತದಿಂದಲೇ ಉಂಟಾಗಿರಬಹುದು. ಈ ಸಂಗತಿ ವಾದವಿವಾದದ್ದಾಗಿದೆ. ನಮ್ಮ ದೇಶದ ಭಾಷಾ ಪಂಡಿತರು ಈ ವಿಷಯದಲ್ಲಿ ಆಸ್ಥೆ ವಹಿಸಿದರೆ, ಕಾಲಾಂತರದಿಂದ ಭಾಷೆಯಲ್ಲಿ ಅಡಗಿದ ತತ್ವಗಳು ಹೊರಬರಬಹುದು.

◆◆◆

ಈ ಕೃತಿ ೧೯೮೯ರಲ್ಲಿ 'ಚುರಮರಿ ಶೇಷಗಿರಿರಾಯರ ಶಾಕುಂತಲ' ಎಂಬ ಹೆಸರಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಗಿತ್ತು ಇದರ ಹೊಸ ಆವೃತ್ತಿಯನ್ನು ಸಿದ್ಧಪಡಿಸುವ ಅನಿರೀಕ್ಷಿತ ಅವಕಾಶಕ್ಕೆ ಡಾ. ಶ್ರೀನಿವಾಸ ಹಾವನೂರ ಅವರ ಒತ್ತಾಸೆಯೇ ಕಾರಣ. ಚುರಮರಿಯವರ ಶಾಕುಂತಲ ಪ್ರಥಮ ಕನ್ನಡ ನಾಟಕವೆಂಬುದು ಅವರ ಅಭಿಮತ. ಹಾಗಾಗಿ ಈ ಕೃತಿ 'ಪ್ರಥಮ ಕನ್ನಡ ನಾಟಕ ಶಾಕುಂತಲ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಪುಸ್ತಕದ ಕರಡು ಪ್ರತಿಯನ್ನು ಸಿದ್ಧಪಡಿಸಿಕೊಟ್ಟ ಡಾ. ನಾ. ದಾಮೋದರ ಶೆಟ್ಟಿಯವರಿಗೆ ಅಕಾಡೆಮಿ ಆಭಾರಿ.

ಡಾ. ಭೀಮರಾವ ಚಿಟಗುಪ್ಪಿ ಅವರ ಈ ಕೃತಿಯ ಸಮಗ್ರ ಸಮೀಕ್ಷೆಯೊಂದನ್ನು ಗಮನಿಸಿದ ಡಾ। ಹಾವನೂರರು ಹೊಸ ಆವೃತ್ತಿ ಪ್ರಕಟಗೊಳ್ಳುವಾಗ ಅದನ್ನೂ ಒಟ್ಟಿಗೆ ಪ್ರಕಟಿಸಬೇಕೆಂದರು. ಇದೀಗ ಚಿಟಗುಪ್ಪಿ ಅವರ ಸಮೀಕ್ಷೆಯೊಂದಿಗೆ 'ಶಾಕುಂತಲ'ವನ್ನು ಮತ್ತೆ ಭಾಗ್ಯಲಕ್ಷ್ಮೀ ಪ್ರಕಾಶನದ ಶ್ರೀ ಬಿ.ಕೆ. ನಂಜುಂಡಪ್ಪನವರು ಪ್ರಕಟಿಸಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿಯ ಸಹಕಾರದೊಂದಿಗೆ ಈ ಕೃತಿ ಪ್ರಕಟವಾಗಿದೆ.

–ಶ್ರೀನಿವಾಸ ಜಿ. ಕಪ್ಪಣ್ಣ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ,
ಬೆಂಗಳೂರು

